42

42

ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ
ನಾಗಭೂಷಣ

ಮಾರ್ಗದರ್ಶಕರು
ಡಾ. ಸ. ಚಿ. ರಮೇಶ್
ಪ್ರವಾಚಕರು, ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ.

ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೪

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ನಾಗಭೂಷಣ. ಇವರು **ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ** ಎಂಬ ಶೀರ್ಷಿಕೆಯ ಈ ಪಿಎಚ್.ಡಿ., ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 31. 1. 2004
ಸ್ಥಳ : ವಿದ್ಯಾರಣ್ಯ

(ಡಾ. ಸ. ಚಿ. ರಮೇಶ್)
ಮಾರ್ಗದರ್ಶಕರು

ಪ್ರಮಾಣ ಪತ್ರ

ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ರಮೇಶ್ ಸ.ಚಿ. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 31. 1. 2004.
ಸ್ಥಳ : ವಿದ್ಯಾರಣ್ಯ, ಹಂಪಿ

ನಾಗಭೂಷಣ
ಸಂಶೋಧನಾ ವಿದ್ಯಾರ್ಥಿ

ಸೋ.... ಎನ್ನುವ ಮುನ್ನ ಯಾರಾರ ನೆನೆದೇನು.

ಹೌದು! ಅಕ್ಷರ ಸೂರ್ಯ ನನ್ನ ಬದುಕಿನಲ್ಲಿ ಬೆಳಗದೇ ಹೋಗಿದ್ದರೆ, ಪಕ್ಕದ ಊರಿನ ಲಿಂಗಾಯತರ ತೋಟಗಳಲ್ಲಿ ಕೂಲಿ ಮಾಡಿಕೊಂಡೇ ಬದುಕುತ್ತಿದ್ದವ. ಈ ಪದ್ಮಜಾಂಡವನ್ನು ಭೇದಿಸಿದ ನನ್ನಮ್ಮನ ಕಾಡು ಪ್ರತಿಭೆಯೇ ನನ್ನ ಅಕ್ಷರ ಬದುಕಿನ ಮುಂಗೋಳಿ. ನೆಲೆ ಇಲ್ಲದವರಿಗೆ ನೆಲೆ ನೀಡಿದ ದಿ|| ನಂಜಪ್ಪನವರಿಗೆ ಮತ್ತು ಸರೋಜಮ್ಮ, ನನ್ನ ಅಪ್ಪ ಮತ್ತು ಚಿಕ್ಕಮ್ಮನವರಿಗೆ ಮೊದಲ ನಮನಗಳು.

ನನ್ನ ಬರಹದ ಎಲ್ಲಾ ದೌರ್ಬಲ್ಯಗಳನ್ನು ಮೌನದಿಂದ ಸಹಿಸಿಕೊಂಡು, ಆಸಕ್ತಿಯಿಂದ ಸಮಯ ಸಂದರ್ಭಕ್ಕೆ ತಕ್ಕಂತೆ ಸಲಹೆ ಸೂಚನೆಗಳನ್ನು ನೀಡಿದ ನನ್ನ ಮಾರ್ಗದರ್ಶಕರಾದ ಡಾ. ಸ. ಚಿ. ರಮೇಶ್ ಅವರಿಗೆ ಗೌರವ ಪೂರಕ ವಂದನೆಗಳು.

ನನ್ನ ಮುಗ್ಧ ಚಿಂತೆಗಳಿಗೆ ಚಿಂತನೆಯನ್ನು ಎರೆದ ನಾಡಿನ ಚಿಂತಕರಾದ ಪ್ರೊ. ಬರಗೂರು ರಾಮಚಂದ್ರಪ್ಪನವರಿಗೆ ಪ್ರೀತಿಯ ನಮನಗಳು.

ಕನ್ನಡ ವಿಶ್ವವಿದ್ಯಾಲಯಕ್ಕೆ ರಹದಾರಿಯನ್ನು ಪರಿಚಯಿಸಿದ ಕೇಶವನ್ ಪ್ರಸಾದ್ ಕೆ. ಮರಟ್ಟಿ ಮತ್ತು ವಿಷಯದ ಆಯ್ಕೆಗೆ ಮಾರ್ಗ ತೋರಿಸಿದ ಹಿ.ಚಿ. ಬೋರಲಿಂಗಯ್ಯ ಮತ್ತು ಪ್ರವಾಚಕರಾದ ಮಂಜುನಾಥ ಬೇವಿನಕಟ್ಟಿ, ಗುರುಪ್ರಸಾದ್ ರವರನ್ನು ನೆನೆಯಬೇಕಾದುದು ನನ್ನ ಕರ್ತವ್ಯ.

ಸಂಶೋಧನೆಯ ಕಾರ್ಯವನ್ನು ಸ್ಥಗಿತಗೊಳಿಸಿದ್ದ ಸಮಯದಲ್ಲಿ ಬರಹಕ್ಕೆ ಮರು ಜೀವ ತುಂಬಿದ ರಾಜಪ್ಪ ದಳವಾಯಿ, ನನ್ನ ಯಶಸ್ಸಿಯಲ್ಲಿ ಸಂತೋಷವನ್ನುಣ್ಣುವ ಕೃಷ್ಣನಾಯಕ ಮತ್ತು ಶೈಲ ನಾಯಕ, ಅಧ್ಯಾಪಕರಾದ ಸಿ. ಬಿ. ಹೊನ್ನಯ್ಯ, ವೆಂಕಟರೆಡ್ಡಿ ರಾಮರೆಡ್ಡಿ, ಎಲ್. ಪಿ. ರಾಜು, ತುಮಕೂರು ಸ್ನಾತಕೋತ್ತರ ಕೇಂದ್ರ ಗ್ರಂಥಾಲಯ ವರ್ಗಕ್ಕೆ ಪ್ರೀತಿಯ ನೆನೆಕೆಗಳು.

ಆತ್ಮೀಯ ಗೆಳೆಯರಾದ ಶಿವಪ್ರಕಾಶ್ ಡಿ. ಆರ್, ರವಿಕುಮಾರ್ ನೀಹ, ಡಾ|| ಕೆ. ನಾಗಭೂಷಣ, ಮುದ್ದವೀರಪ್ಪ, ತಿಪ್ಪೇಸ್ವಾಮಿ ಹೊಸೂರು, ರಂಗನಾಥ ನೇಜಂತಿ, ಶಂಭುಲಿಂಗ, ನಿತ್ಯಾನಂದ, ಚಂದ್ರಕಲಾ, ಜ್ಯೋತಿ, ಸಾವಿತ್ರಮ್ಮ, ಜಯಮಾಲ ಮುಂತಾದ ಮಿತ್ರತಂಡವನ್ನು ನೆನೆಯಬೇಕಾದುದು ನನ್ನ ನೆನದಷ್ಟೇ ಸಂತೋಷ.

ಈ ಪ್ರಬಂಧವನ್ನು ಪ್ರೀತಿ ವಿಶ್ವಾಸದಿಂದ ಲಿಪಿ ಜೋಡಣೆ ಮಾಡಿ ವಿನ್ಯಾಸಗೊಳಿಸಿ ಪುಸ್ತಕ ರೂಪ ಮಾಡಿಕೊಟ್ಟ ಮಿತ್ರರಾದ ರವಿ ದಳವಾಯಿ ಹಾಗೂ ಶ್ರೀಮತಿ ಗಾಯಿತ್ರಿ ದಳವಾಯಿ ಇವರಿಗೆ ನನ್ನ ಪ್ರೀತಿ ಪೂರ್ವಕ ವಂದನೆಗಳು.

ನಾಗಭೂಷಣ
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಗತ್ತಿನ ಸಮುದಾಯಗಳು ಇಂದು ಬದಲಾವಣೆಯ ಪ್ರಕ್ರಿಯೆಯಲ್ಲಿವೆ. ಜಾಗತೀಕರಣ ಎಂಬ ಗುಮ್ಮ-ನಮ್ಮ ಆಚಾರ-ವಿಚಾರಗಳನ್ನು, ಆಚರಣೆ - ಸಂಪ್ರದಾಯಗಳನ್ನು ಸಂಸ್ಕೃತಿಗಳನ್ನು, ಪರಿವರ್ತನೆಯ ತುದಿಯಲ್ಲಿ ತಂದು ನಿಲ್ಲಿಸಿದೆ. ತೃತೀಯ ಜಗತ್ತಿನ ಸಮುದಾಯಗಳ ಸಂಸ್ಕೃತಿಗಳು ಈ ಜಾಗತೀಕರಣಕ್ಕೆ ಒಳಪಡುತ್ತಲೇ ತನ್ನತನವನ್ನು ಸಂರಕ್ಷಿಸಿಕೊಳ್ಳಲು ಸಜ್ಜಾಗುತ್ತಿವೆ. ಇಂತಹ ಜಾಗತಿಕ ಸವಾಲುಗಳು ನಮ್ಮ ತಳಸಮುದಾಯಗಳ ಮೇಲೆ ಆಗಾಧವಾದ ಪರಿಣಾಮವನ್ನು ಬೀರುವೆ; ಬೀರುತ್ತಿವೆ. ಈ ಜಾಗತಿಕ ಪ್ರಕ್ರಿಯೆ ಒಮ್ಮೆ ಪಡೆದುಕೊಂಡಂತೆಯೂ, ಮತ್ತೊಮ್ಮೆ ಕಳದುಕೊಂಡತೆಯೂ ನೆಲದ ಮರೆಯ ನಿದಾನದಂತೆ ಅಗೋಚರವಾಗಿಯೇ ಉಳಿಯುತ್ತಿದೆ.

ಬಹು ಸಮುದಾಯಗಳ ಉಪ ಉತ್ಪನ್ನವಾಗಿ ಬಂದಂತಹ ಜಾನಪದ ಇಂದು ಬದಲಾವಣೆಗೆ ಒಳಪಡುತ್ತಿದೆ. ಜನಾಂಗದ ಅನುಭವ ಸಂವೇದನೆಯನ್ನು ಪಡೆದಿರುವ ಜಾನಪದಕ್ಕೆ, ಆಧುನೀಕರಣದ ಎಲ್ಲಾ ಧಾತುಗಳನ್ನು ನಿಭಾಯಿಸಬಲ್ಲಂತಹ ಶಕ್ತಿಯಿದೆ. ಅದ್ದರಿಂದಲೇ ಹಿಂದೆ ಇದ್ದ ಜನಪದ ಬಗೆಗಿನ ಎಷ್ಟೋ ಆಲೋಚನಾಕ್ರಮಗಳು ಬಹು ಬೇಗ ಬದಲಾಗುತ್ತಿವೆ. ಈ ಬದಲಾವಣೆಯು ಅನಿವಾರ್ಯವೂ ಆಗಿದೆ. ಹಳೆಯುಗದ ಜಾನಪದಕ್ಕೆ ಹೊಸಯುಗದ ಜಾನಪದವನ್ನು ತಾಳೆಹಾಕಿ ನೋಡಿದಂತೆಲ್ಲಾ ವೈರುದ್ಧ್ಯಗಳು ಹೆಚ್ಚಾಗುತ್ತಿರುತ್ತವೆ. ಅಲ್ಲದೆ ಹಳೆಯುಗದ ಜಾನಪದದ ಮಾನದಂಡಗಳಿಂದ ಹೊಸಯುಗದ ಜಾನಪದವನ್ನು ತೂಗಿ ನೋಡಲು ಸಾಧ್ಯವಿಲ್ಲ. ಪ್ರಾಚೀನರಲ್ಲಿ ಅನುಭವದ ಪ್ರತಿಫಲವಾಗಿ ಬಂದ ಜಾನಪದವು ಆಧುನಿಕತೆಯ ಅಕ್ಷರತೆಗೆ ತೆರೆದುಕೊಂಡಾಗ ಬದಲಾವಣೆಗಳು ಅಗುವುದು ಸಹಜವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಾನಪದ ಕಾಲ ಕ್ರಮೇಣ ಆಧುನಿಕತೆಯನ್ನು ನುಂಗಿಕೊಂಡು ಸಾಗುತ್ತಿರುತ್ತದೆ.

ಈ ಆಧುನಿಕತೆಯ ಫಲಿತಗಳು ಯಾವುದೇ ಒಂದು ಸಂಸ್ಕೃತಿಯ ಪ್ರಭಾವದಿಂದ ಆದುದಲ್ಲ. ಇದರಲ್ಲಿ ಬಹು ಬಗೆಯ ಸಂಸ್ಕೃತಿಗಳು ನಿಧಾನಗತಿಯಲ್ಲಿ ಪ್ರಭಾವ ಬೀರುತ್ತಾ ಬರುತ್ತವೆ. ಹಳೆಯುಗಗಳ ಜಾನಪದ ಮಟ್ಟುಗಳು ಹುಟ್ಟುವ ಕ್ರಿಯೆ ಸ್ಥಗಿತಗೊಂಡಿದೆ ಎಂದರೆ ಅದು ಮರುಹುಟ್ಟಿಗೆ ಅವಕಾಶ ಮಾಡಿಕೊಡುತ್ತಿದೆ ಎಂದೇ ಅರ್ಥ. ಜಾನಪದವು ಜನಪದರ ದೈನಂದಿನ ಬದುಕಿನ ಜೊತೆಜೊತೆಯಲ್ಲಿ ಹೆಜ್ಜೆಹಾಕುವುದರಿಂದ ಬದಲಾವಣೆಯು ಪ್ರಕೃತಿಯಷ್ಟೇ ಸಹಜ. ಆಧುನಿಕ ವೈಚಾರಿಕತೆಯ ಬಹುವೇಷಗಳು ಬಳಕೆಗೊಂಡಂತೆಲ್ಲಾ ಹಳೆಯ ಜಾನಪದ ಸ್ವರೂಪವು ಬದಲಾವಣೆಯಾಗುತ್ತಿರುತ್ತದೆ. ಅವುಗಳನ್ನು ಸಗುಣವಾಗಿ ಸ್ವೀಕರಿಸುವ ಮನಸ್ಸುಗಳಿರಬೇಕು.

೧.೧ ಜಾನಪದದ ಬಹುಚರ್ಚಿತ ಹೊಸ ಚಿಂತನಾಕ್ರಮಗಳು

ಜಾನಪದ ಅಧ್ಯಯನ ಜಗತ್ತಿಗೆ ಎರಡು ಶತಮಾನಗಳಷ್ಟು ಹಳೆಯದು. ಆದರೂ ಅಧಿಕೃತವಾಗಿ ಇಂಗ್ಲೆಂಡಿನ ಡಬ್ಲ್ಯು.ಜೆ. ಥಾಮ್ಸ್‌ನಿಂದ ಹೆಚ್ಚು ಅಧ್ಯಯನಶೀಲ ವಸ್ತುವಾಗತೊಡಗಿತು."೧೮೪೬ರಲ್ಲಿ popular Antiquities ಎಂಬ ಲ್ಯಾಟಿನ್ ಮೂಲದ ಪದದ ಬದಲಿಗೆ ಆಂಗ್ಲೋಸ್ಯಾಕ್ಸನ್ ಮೂಲದ Folklore ಎಂಬ ಸಂಯಕ್ತ ಪದದನ್ನು ಚಲಾವಣೆಗೆ ತಂದಿದ್ದರಿಂದ ಜಾನಪದಕ್ಕೆ ಸಂಬಂಧಿಸಿದ ಎಲ್ಲಾ ಸಾಮಗ್ರಿಯನ್ನು ಅದು ಒಂದು ಪ್ರತ್ಯೇಕ ಅಧ್ಯಯನ ಕ್ಷೇತ್ರ ಎಂಬ ಪ್ರಜ್ಞೆಯಿಂದ ಸಂಗ್ರಹಿಸಲು ಹಾಗೂ ಅಧ್ಯಯನ ಮಾಡಲು ಪ್ರೇರಣೆ ದೊರಕಿತು"[೧] ನಂತರ ಈ ಕ್ಷೇತ್ರದಲ್ಲಿ ನಡೆದ ಕ್ರಾಂತಿ ಜಗತ್ತಿನಾದ್ಯಂತ ಕಣ್ಣುತೆರೆಯುವಂತಾಯಿತು, ಜರ್ಮನಿ, ಥೈಲ್ಯಾಂಡ್, ಫ್ರಾನ್ಸ್, ಇಂಗ್ಲೆಂಡ್, ಯುರೋಪ್ ಫಿನ್‌ಲ್ಯಾಂಡ್ ಅಮೇರಿಕ, ಚೈನ, ಜಪಾನ್, ಭಾರತ ಮುಂತಾದ ದೇಶಗಳಲ್ಲಿ ಗಂಭೀರ ಸ್ವರೂಪದಲ್ಲಿ ಜಾನಪದ ಅಧ್ಯಯನ ರೂಪಗೊಳ್ಳತೊಡಗಿತು.

ಜಾನಪದವೆಂದರೆ ಕೇವಲ ಗ್ರಾಮೀಣ-ಅನಕ್ಷರರಿಂದ ಮೂಡಿದ್ದು ಎನ್ನುವ ಅಭಿಪ್ರಾಯವು ಕ್ರಮೇಣ ಬದಲಾಯಿತು. ಜಾನಪದ ಕುರಿತು ವೈಜ್ಞಾನಿಕ ಚಿಂತನೆ ನಡೆಸಿದ ವಿದ್ಯಾಂಸರಲ್ಲಿ ಪ್ರಖ್ಯಾತರಾದ ಅಲನ್ ಡೆಂಡಸ್‌ರವರು ಗುರುತಿಸುವಂತೆ 'ಜನಪದ ಎಂದರೆ ಅದು ಯಾವುದೇ ಗುಂಪಾಗಬಹುದು, ಭಾಷೆ, ವೃತ್ತಿ, ಧರ್ಮ, ವಯಸ್ಸು, ಸಾಂಸ್ಕೃತಿಕ ವರ್ಗ ಇವುಗಳಲ್ಲಿ ಯಾವುದಾದರೂ ಒಂದು ಜಾನಪದವಾಗುತ್ತದೆ. ಇದರಿಂದಾಗಿ ಗ್ರಾಮೀಣ ಜನರು ಮಾತ್ರ ಜನಪದರು ಎಂಬ ಕಲ್ಪನೆಗೆ ಬದಲಾಗಿ ಆದಿವಾಸಿಗಳು, ನಗರ ವಾಸಿಗಳು, ಗ್ರಾಮವಾಸಿಗಳು, ಎಲ್ಲರೂ ಜನಪದರು ಎಂಬ ವಿಚಾರ ರೂಪುಗೊಂಡಿತು.' ಈ ಹೊಸ ಚಿಂತನಾಕ್ರಮದಿಂದ ಜಾನಪದನ್ನು ನೋಡುವ ದೃಷ್ಟಿಕೋನವೇ ಬದಲಾಯಿತು. ಹೊಸ ಸಿದ್ದಾಂತಗಳ ಹಿನ್ನೆಲೆಯಲ್ಲಿ ಜಾನಪದದ ವಿವಿಧ ಮಗ್ಗುಲುಗಳನ್ನು ವಿದ್ವಾಂಸರು ನೋಡತೊಡಗಿದರು, ಡಾರ್ವಿನ್‌ನ ವಿಕಾಸವಾದ, ರಮ್ಯ ರಾಷ್ಟ್ರೀಯವಾದ, ಮಾನವಶಾಸ್ತ್ರೀಯವಾದ, ಪುರಾಣಮೂಲವಾದ, ಸೌರಪುರಾಣಮೂಲವಾದ, ಚಾರಿತ್ರಿಕ ಭೌಗೋಳಿಕ ಅಧ್ಯಯನ ವಿಧಾನ, ರಾಚನಿಕ ಸಿದ್ಧಾಂತಗಳು, ಸಮೂಹ ಸಾಂಸ್ಕೃತಿಕ ಸಿದ್ಧಾಂತ, ಸಾಂದರ್ಭಿಕ ಸಿದ್ಧಾಂತ ಮುಂತಾದ ಸಿದ್ಧಾಂತಗಳು ಜಾನಪದವನ್ನು ಕೂಲಂಕಶವಾಗಿ ಅಧ್ಯಯನ ಮಾಡಲು ಪ್ರಮುಖ ಅಸ್ತ್ರಗಳಾದವು. ಜಾನಪದ ಪ್ರಕಾರಗಳ ಹುಟ್ಟು ಬೆಳವಣಿಗೆ, ಪ್ರಕಾರ, ಮರುಹುಟ್ಟು ಮುಂತಾದ ಸಂಗತಿಗಳನ್ನು ಹಲವು ದೃಷ್ಟಿಕೋನಗಳಿಂದ ಪರಿಶೀಲಿಸಲು ಸಹಾಯಕವಾದವು.

ಜಾನಪದವು ಇಂದು ಅಂತರಾಷ್ಟ್ರೀಯ ವಿಷಯವಾಗಿದ್ದು ಯುನೆಸ್ಕೊ ಸದಸ್ಯ ರಾಷ್ಟ್ರಗಳು ಅಂಗೀಕರಿಸಿವೆ. ಈ ಸಂಸ್ಥೆಯು ಜಾನಪದದ ಬಗ್ಗೆ ಕೈಗೊಳ್ಳಬಹುದಾದ ಯೋಜನೆ ಮತ್ತು ಸಂಶೋಧನೆಗಳಿಗೆ ಆರ್ಥಿಕ ನೆರವನ್ನು ಕೊಡುತ್ತಿದೆ. ಬದಲಾದ ಸಂದರ್ಭದಲ್ಲಿ ಜಾನಪದವು ಹೊಸತಿರುವು ಪಡೆಯುತ್ತಿರುವುದನ್ನು ಜಾನಪದ ವಿದ್ವಾಂಸರಾದ ತೀ.ನಂ.ಶಂಕರನಾರಾಯಣ ಅವರು ಈ ರೀತಿ

ಗುರುತಿಸುತ್ತಾರೆ. "ಜಗತ್ತಿನ ರಾಜಕೀಯ ಮತ್ತು ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಶೀಘ್ರ ಬೆಳವಣಿಗೆಗಳು ಜಾನಪದ ಅಧ್ಯಯನದ ಮೇಲೆ ಗಾಢ ಪ್ರಭಾವವನ್ನು ಬೀರಿ ಅದರ ಅಧ್ಯಯನದ ರೀತಿನೀತಿಗಳು ಬದಲಾಗುತ್ತಿವೆ. ಜಾಗತೀಕರಣ, ಮುಕ್ತಮಾರುಕಟ್ಟೆ, ಗ್ಯಾಟ್, ಒಪ್ಪಂದ ಪರಿಸರದ ಸಮಸ್ಯೆಗಳು ಮೊದಲಾದ ಪ್ರಚಲಿತ ವಿಧ್ಯಮಾನಗಳು ಇಂದು ಜಾನಪದ ಅಧ್ಯಯನದ ಮೇಲೆ ಪರಿಣಾಮವನ್ನು ಬೀರುತ್ತಿವೆ. ಇಂದು ಪ್ರಾದೇಶಿಕತೆ, ರಾಷ್ಟ್ರೀಯತೆ ಹಾಗೂ ಅಂತರಾಷ್ಟ್ರೀಯತೆ ಈ ಮೂರು ಹಂತಗಳಲ್ಲಿ ನಡೆಯುವ ಅಧ್ಯಯನವಾಗಿದೆ. ಇದು ಸಾಂಸ್ಕೃತಿಕವಾದ ವಿದ್ಯಮಾನವಾಗಿರುವಂತೆಯೇ ರಾಜಕೀಯ, ಆರ್ಥಿಕ ವಿದ್ಯಮಾನವು ಆಗಿದೆ. ಈ ನಡುವೆ ಇತರ ಸಮಾಜ ವಿಜ್ಞಾನಗಳಂತೆ ಜಾನಪದ ವಿಜ್ಞಾನವನ್ನು ರೂಪಿಸುವ ಹಾಗೂ ಕ್ರಿ.ಶ. ೨೦೦೦ ದ ನಂತರವೂ ವಿಶ್ವವಿದ್ಯಾಲಯಗಳಲ್ಲಿ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಉಳಿದು ಬೆಳೆಯುವ ಹಾಗೆ ಮಾಡಲು ಏನೆಲ್ಲಾ ಪ್ರಯತ್ನಗಳನ್ನು ಮಾಡಬೇಕು ಎಂಬ ವೃತ್ತಿಪರವಾದ ಸಮಸ್ಯೆಯು ಜಾನಪದ ವಿದ್ವಾಂಸರನ್ನು ಕಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಒಂದು ವಿಷಯವಾಗಿ (Marginal subject) ಉಳಿಯಬೇಕೆ ಈ ಎರಡು ಶತಮಾನ ಕಾಲ ಇದ್ದಂತೆ ಪರಂಪರಾಗತ ಜ್ಞಾನ ಕ್ಷೇತ್ರವಾಗಿ ಉಳಿಸಬೇಕೆ? ಅಥವಾ ಸಮಕಾಲೀನ ಮತ್ತು ಭವಿಷ್ಯತ್‌ಕಾಲಿನ ಮಹತ್ವವುಳ್ಳ ವಿಷಯವಾಗಿ ಬೆಳಸಬೇಕೆ ಹೇಗೆ? ಎಂಬುದು ಇಂದಿನ ಜಾನಪದ ವಿದ್ವಾಂಸರ ಸವಾಲಾಗಿದೆ. ಈ ನಿಟ್ಟಿನಲ್ಲಿ ಜಾನಪದ ವಿಜ್ಞಾನವನ್ನು ಅಂತರ್ ಶಿಸ್ತಿನ (Inter deciplinary) ಮತ್ತು ಬಹುಶಿಸ್ತಿನ (Multi deciplinary) ಅಧ್ಯಯನದ ವಿಷಯವಾಗಿ ಬೆಳೆಸುವ ಪ್ರಯತ್ನಗಳು ಸಾಗಿವೆ. ಹಾಗೆಯೇ ಜಾನಪದವನ್ನು ಶುದ್ಧ ವಿಜ್ಞಾನವಾಗಿ (Applied seience) ಬೆಳೆಸುವುದರ ಕಡೆಗ ಜಾನಪದ ವಿದ್ವಾಂಸರು ಹೆಚ್ಚು ಗಮನ ನೀಡಿದ್ದಾರೆ. ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ ಅನೇಕ ದೇಶಗಳಿಗೆ ಇರುವ ಏಕೈಕ ಸಾಂಸ್ಕೃತಿಕ ಆಸ್ತಿ ಜಾನಪದವೇ ಆಗಿರುವುದರಿಂದ ಜಾನಪದ ಅಧ್ಯಯನಕ್ಕೆ ಒಳ್ಳೆಯ ಭವಿಷ್ಯವಿದೆಯೆಂದು ಊಹಿಸಬಹುದಾಗಿದೆ[೧]" ಹೀಗೆ ಜಾನಪದವು ಹೊಸ ಹೊಸ ಚಿಂತನೆಗಳಿಗೆ ವಿದ್ಯಮಾನಗಳೊಂದಿಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡುಬರುತ್ತಿದೆ. ಇದೊಂದು ಸಂಯುಕ್ತ ಅನುಭವ ಸಂವೇದನೆ ಆಗಿರುವುದರಿಂದ ಎಲ್ಲಾ ಕಾಲದಲ್ಲೂ ಎಲ್ಲಾ ದೇಶಗಳಲ್ಲೂ ಎಲ್ಲಾ ಜನಾಂಗಗಳಲ್ಲೂ ಇರುತ್ತದೆ.

ಜಾನಪದ ಅಧ್ಯಯನವನ್ನು ಇಂದು ಎಥ್ನೊಲಾಜಿ ಎಥ್ನೊಗ್ರಫಿಯಂತಹ ಹೊಸ ಅಧ್ಯಯನ ಚಿಂತನೆಗಳು ಆವರಿಸಿಕೊಂಡಿರುವುದರಿಂದ ಅಧುನಿಕ ಜಾನಪದ ಪರಿಕಲ್ಪನೆಯೇ ಬದಲಾಗತೊಡಗಿದೆ. ಇತ್ತೀಚೆಗೆ ಜಾನಪದ ಅಧ್ಯಯನದಲ್ಲಿ 'ಅನ್ವಯಿಕ' ಎಂಬ ಮಾತು ಬಹುವಾಗಿ ಚರ್ಚಿತವಾಗುತ್ತಿದ್ದು ಈಗಾಗಲೇ ಅದು ಬಳಕೆಯಾಗುತ್ತಿದೆ. ಸಮೂಹಮಾಧ್ಯಮಗಳಲ್ಲಿ ಜನಪದ ವೈದ್ಯ ಸಸ್ಯಸಂಬಂಧಿ ಔಷಧಿಗಳಲ್ಲಿ, ಗಾದೆಗಳು ಮತ್ತು ಜನಪದ ಕಥೆಗಳನ್ನು ಆಧುನಿಕ ರಂಗಭೂಮಿಗೆ ಅಳವಡಿಸುವುದರಲ್ಲಿ ಜನಪದ ಕತೆಗಳನ್ನು ವಸ್ತುಗಳ ಪ್ರಚಾರಕ್ಕಾಗಿ ಜಾಹೀರಾತುಗಳಲ್ಲಿ ಬಳಕೆಯಾಗುತ್ತಿರುವುದು ವಿಶ್ವವಿದ್ಯಾಲಯಗಳ ಪಠ್ಯಗಳಲ್ಲಿ ಪ್ರಯೋಗಾತ್ಮಕವಾಗಿ ಬಳಸಿಕೊಳ್ಳುತ್ತಿರುವುದನ್ನು ನೋಡಬಹುದು. ಈ ಎಲ್ಲವುಗಳ ಬಹು ಚರ್ಚಿತ ವಿಷಯವೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

೧.೨ ಕನ್ನಡದಲ್ಲಿ ಜಾನಪದ ಅಧ್ಯಯನ ಚಿಂತನೆಗಳು ಬೆಳೆದು ಬಂದ ಬಗೆ

ಕನ್ನಡದಲ್ಲಿ ಜನಪದ ಸಾಹಿತ್ಯ ಪ್ರಕಾರವನ್ನು ಅದರಲ್ಲೂ ಗೀತ ಪ್ರಕಾರವನ್ನು ಸಂಪಾದಿಸುವುದರ ಮೂಲಕ ಜಾನಪದದ ಬಗ್ಗೆ ಒಲವು ಮೂಡಿತು. ೨೦ನೇ ಶತಮಾನದ ಆದಿಭಾಗದಲ್ಲಿ ಪಾಶ್ಚಾತ್ಯ ವಿದ್ವಾಂಸರು ಇಲ್ಲಿರುವ ಜಾನಪದ ಸಾಹಿತ್ಯ ರೂಪಗಳನ್ನು ಸಂಗ್ರಹ ಮಾಡತೊಡಗಿದರು. ಮೊಗ್ಲಿಂಗ್, ಜೆ. ಎಫ್. ಪ್ಲೀಟ್, ಕಿಟಲ್ ಮುಂತಾದವರು ಕರ್ನಾಟಕ ಜಾನಪದದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದರು. ಮೊದಲ ಬಾರಿಗೆ ಕರ್ನಾಟಕ ಜಾನಪದವನ್ನು ಕನ್ನಡೇತರರಿಗೆ ಪರಿಚಯಿಸಿದ ಕೀರ್ತಿ ಪಾಶ್ಚಾತ್ಯರಿಗೆ ಸಲ್ಲುತ್ತದೆ. "ನಮ್ಮವರಿಂದ ಜನಪದ ಸಾಹಿತ್ಯ ಸಂಗ್ರಹ ಕಾರ್ಯ ೧೮೬೪ ರಿಂದ ಆರಂಭವಾಯಿತು. ಬೆಳಗಾವಿಯ ಶ್ರೀಹಣಮಂತ ಗೋವಿಂದ ಜೋಶಿ ಅವರು 'ಸಾಮತಿ ಸಂಗ್ರಹ"[೧] ಎಂಬ ಗಾದೆಗಳ ಸಂಕಲನ ಪ್ರಕಟಿಸುವುದರ ಮೂಲಕ ಜಾನಪದ ಸಂಗ್ರಹ ಕಾರ್ಯದ ರಥ ಹರಿಯತೊಡಗಿತು. ಆನಂತರ ಸಿ. ಪಿ. ಲಿಂಗಣ್ಣ, ಕಾಪಸೇ ರೇವಪ್ಪ, ದ. ರಾ. ಬೇಂದ್ರೆ, ಡಾ|| ಬೆಟಗೇರಿ ಕೃಷ್ಣಶರ್ಮ, ಕಾ.ರಾ.ಕೃ. ಮಾಸ್ತಿ, ಹಲಸಂಗಿ ಗೆಳೆಯರು ಮುಂತಾದ ನವೋದಯದಲ್ಲಿ ಬಂದಂತಹ ಸಾಹಿತಿಗಳು ಜಾನಪದ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಜೀವನ ಸಂಗೀತ, ಗರತಿಯ ಹಾಡು. ಮಲ್ಲಿಗೆ ದಂಡೆ ಹುಟ್ಟಿದಹಳ್ಳಿ ಹಳ್ಳಿಯ ಹಾಡು, ಮುಂತಾದ ಜಾನಪದ ಮೌಲಿಕ ಸಾಹಿತ್ಯ ಕೃತಿಗಳು ಈ ಸಂದರ್ಭದಲ್ಲಿ ಅಕ್ಷರ ರೂಪವನ್ನು ಪಡೆದವು.

ಈ ಕಾಲಘಟ್ಟದಲ್ಲಿ ಜಾನಪದ ಸಾಹಿತ್ಯದ ಗುಣ ಮತ್ತು ಅದರ ಹಿರಿಮೆ ಹೇಳುವುದೇ ಅವರ ಗುರಿಯಾಗಿತ್ತು. ಇದನ್ನು ನಿಂದಿಸುವವರಿಗೆ ಉತ್ತರ ಹೇಳಿ, ಇದರಲ್ಲಿಯೂ ಉತ್ತಮಾಂಶಗಳಿವೆ ಎಂಬುದನ್ನು ಪ್ರತಿಪಾದನೆ ಮಾಡಬೇಕಿತ್ತು. ಅಷ್ಟೇ ಅಲ್ಲ ಇದೊಂದು ಅಮೂಲ್ಯವಾದ ನಿಧಿ ಬರಿದಾಗುವುದಕ್ಕಿಂತ ಮುಂಚೆ ಸಂರಕ್ಷಿಸಬೇಕು ಎಂದು ಭಾವಾವೇಶಕ್ಕೆ ಒಳಗಾಗಿ ಹೇಳಿದ್ದೂ ಉಂಟು. ಈ ಸಂದರ್ಭದಲ್ಲಿ ಜಾನಪದ ಸಾಹಿತ್ಯ ಪ್ರಕಾರಗಳನ್ನು ಸಂಪಾದಿಸುವುದೇ ಪ್ರಮುಖ ಗುರಿಯಾಗಿತ್ತು. ಇದರ ವಿಶ್ಲೇಷಣೆಗೆ, ವೈಜ್ಞಾನಿಕ ಅಧ್ಯಯನಕ್ಕೆ ಕೈ ಹಾಕಲಿಲ್ಲ.

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪ ಬಂದಿದ್ದು ೧೯೬೬ ರಿಂದ ಈಚೆಗೆ ಮೈಸೂರು ವಿಶ್ವವಿದ್ಯಾಲಯ ಏರ್ಪಡಿಸಿದ್ದ ಜನಪದ ಸಾಹಿತ್ಯ ಗೋಷ್ಠಿಯಲ್ಲಿ ಡಾ|| ಹಾ.ಮಾ.ನಾಯಕ್ ಅವರು ಮಂಡಿಸಿದ ಐತಿಹಾಸಿಕ ಮಹತ್ವದ 'ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ' ಎಂಬ ಲೇಖನವು ಜಾನಪದ ಅಧ್ಯಯನಕ್ಕೆ ಹೊಸ ತಿರುವು ಕೊಟ್ಟಿತು. ಹಾ. ಮಾ. ನಾಯಕರು ಇಂಗ್ಲೀಷಿನ 'Folklore' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಜಾನಪದ' ಎಂಬ ಶಬ್ದವನ್ನು ಪ್ರಯೋಗಿಸಿದರು. ಆನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾನಪದ ಎಂ.ಎ. ಮತ್ತು ಡಿಪ್ಲೊಮೊ ತರಗತಿಗಳನ್ನು ತೆರೆದು, ಜಾನಪದ ಅಧ್ಯಯನಕ್ಕೆ ಕರ್ನಾಟಕದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಗೌರವ ತಂದುಕೊಟ್ಟರು. ಕರ್ನಾಟಕದ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಎಂ.ಎ. ತರಗತಿಯ

ಪಠ್ಯಕ್ರಮದೊಂದಿಗೆ 'ಜಾನಪದ'ವನ್ನು ಒಂದು ಪತ್ರಿಕೆಯನ್ನಾಗಿ ಪರಿಚಯಿಸಿದರು. ಇದರ ಅಗಾಧತೆ ಮನವರಿಕೆಯಾದಂತೆಲ್ಲಾ ಜಾನಪದ ಅಧ್ಯಯನಕ್ಕೆ ಪ್ರತ್ಯೇಕ ವಿಭಾಗವನ್ನು ತೆರೆದು 'ಜಾನಪದ ವಿಭಾಗ' ಎಂದು ಹೆಸರಿಟ್ಟರು. ಇಂದು ಕರ್ನಾಟಕ, ಗುಲ್ಬರ್ಗ, ಹಂಪಿ ವಿಶ್ವವಿದ್ಯಾಲಯಗಳು ಜಾನಪದ ಅಧ್ಯಯನಕ್ಕೆ ಪ್ರತ್ಯೇಕ ವಿಭಾಗಗಳನ್ನು ತೆರೆದು, ಜಾನಪದದಲ್ಲಿ ಎಂ.ಎ. ಮತ್ತು ಸಂಶೋಧನೆಗಳಿಗೆ ಅವಕಾಶಕೊಟ್ಟಿವೆ. ಕನ್ನಡ ವಿಶ್ವವಿದ್ಯಾಲಯ ಜಾನಪದ ವಿಭಾಗವು 'ಕರ್ನಾಟಕ ಜಾನಪದ' ಎನ್ನುವ ಅರ್ಧವಾರ್ಷಿಕ ಪತ್ರಿಕೆಯನ್ನು ಆರಂಭಿಸಿದೆ. ಈ ಎಲ್ಲವುಗಳ ಜೊತೆಗೆ ಕರ್ನಾಟಕ ಜಾನಪದ ಪರಿಷತ್, ಕನ್ನಡ ಸಾಹಿತ್ಯ ಪರಿಷತ್ ಹಾಗೂ ಇತರೆ ಸಂಘ ಸಂಸ್ಥೆಗಳು ಆರಂಭಿಸಿದ ಜಾನಪದ ಚಟುವಟಿಕೆಗಳು ತುಂಬ ಮೌಲಿಕವಾದಂತವು. ಈ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದ ಕಲಾಕಾರರಿಗೂ ಮತ್ತು ವಿದ್ವಾಂಸರಿಗೂ ರಾಜ್ಯ ಮಟ್ಟದ ಪ್ರಶಸ್ತಿಗಳು ಬರುವುದರಿಂದ ಜಾನಪದ ಅಧ್ಯಯನ ಮತ್ತು ಸಂವರ್ಧನೆಗೆ ಹೆಚ್ಚು ಪ್ರಾಶಸ್ತ್ಯ ಬಂದಿದೆ.

ಜಾನಪದವನ್ನು ಪರಕೀಯ ಚಿಂತನೆಗಳ ಹಿನ್ನೆಲೆಯಲ್ಲಿ ನಿರ್ವಚಿಸಿಕೊಳ್ಳುವಾಗ ಜಾಗತೀಕರಣವನ್ನು ಕಡೆಗಣಿಸಲು ಸಾಧ್ಯವಾಗದು. ಇದರ ಪ್ರಭಾವದಿಂದಾಗಿ ಜಾನಪದವು ಜನಪ್ರಿಯತೆಯನ್ನು ಪಡೆಯುತ್ತ ಆ ಮೂಲಕ ಸೊಗಡು - ಸ್ವರೂಪವನ್ನು ಕಳೆದುಕೊಳ್ಳುತ್ತಿದೆ ಎಂಬ ಆತಂಕ ಕೆಲವು ವಿದ್ವಾಂಸರಲ್ಲಿದೆ. ಈ ವಿಷಯದಲ್ಲಿ ಹಲವು ವರ್ಷಗಳಿಂದ ಚರ್ಚೆಗಳು ನಡೆಯುತ್ತಲೇ ಬಂದಿವೆ. ಮಾಧ್ಯಮಗಳು ಹುಟ್ಟು ಹಾಕುವ ಸಮೂಹ ಸಂಸ್ಕೃತಿ (Mass Culture) ಸಮಾಜದ ಮೇಲೆ ಮೂಡಿಸುವ ಪರಿಣಾಮದ ಬಗ್ಗೆ ಈಗಾಗಲೇ ನಮಗೆ ಅರಿವುಂಟಾಗಿದೆ. ಸಮೂಹ ಸಂಸ್ಕೃತಿಯ ಚರ್ಚೆಯಲ್ಲಿ ಭಾಗವಹಿಸುವವರು ದೇಶಿಯ ಸಂಸ್ಕೃತಿಗಳ ಕಲೆ, ವಿಚಾರ - ಆಚಾರಗಳು ಅಷ್ಟು ಸುಲಭಕ್ಕೆ ಹೋಗುವುದಿಲ್ಲ. ನೂರಾರು ವರ್ಷಗಳ ಕಾಲದಿಂದ ಈ ನೆಲದಲ್ಲಿ ಬೇರುಬಿಟ್ಟ ಅವುಗಳನ್ನು ಅಲುಗಿಸುವುದು ಸುಲಭವಲ್ಲ ಎನ್ನುವವರು ಇದ್ದಾರೆ. ಮತ್ತೆ ಕೆಲ ವಿದ್ವಾಂಸರು ಗುರುತಿಸುವಂತೆ 'ಸಂಕರ ಸಂಸ್ಕೃತಿ' (hybrid culture) ಸಿದ್ಧಾಂತವನ್ನು ಮುಂದು ಮಾಡುತ್ತಾರೆ. ಅವರ ಚಿಂತನೆಗಳ ಫಲಿತಗಳೆಂದರೆ ಜಾಗತಿಕ ಸಂಸ್ಕೃತಿಗಳು ಮತ್ತು ದೇಶಿಯ ಸಂಸ್ಕೃತಿಗಳ ಮಿಲನಗಳಿಂದ ಹೊಸದೊಂದು ಸಂಸ್ಕೃತಿಯು ಹುಟ್ಟಿಗೆ ಕಾರಣವಾಗುತ್ತಿದೆ. ಅದೇ 'ಸಂಕರಸಂಸ್ಕೃತಿ'ಯಾಗಿ ಉಳಿಯುತ್ತಿದೆ ಎನ್ನುವುದು ಇನ್ನೊಂದು ವಾದ.

ಒಟ್ಟಿನಲ್ಲಿ ಜಾನಪದ ಮೇಲೆ ಆಗುತ್ತಿರುವ ಜಾಗತಿಕ ದಾಳಿಯನ್ನು ಸಂಪೂರ್ಣವಾಗಿ ಕಡೆಗಣಿಸಲು ಸಾಧ್ಯವಿಲ್ಲ. ಸ್ವತಃ ಜಾನಪದವೇ ಇಂತಹ ಜಾಗತಿಕ ದಾಳಿಯನ್ನು ತನ್ನ ಒಡಲಲ್ಲಿಟ್ಟುಕೊಂಡು ನಿಭಾಯಿಸಬಲ್ಲದು. ಇದನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಇಲ್ಲವೇ ಬಿಡುವ ವಿಚಾರ ವಿದ್ವಾಂಸರಿಗೆ ಬಿಟ್ಟಿದ್ದು. ಈ ಎಲ್ಲಾ ಚರ್ಚೆ ಮತ್ತು ಚಿಂತನೆಗಳು ನಮ್ಮ ಜಾನಪದ ಅಧ್ಯಯನದ ಮೇಲೆ ಗಾಢ ಪ್ರಭಾವ ಬೀರಿವೆ. ಈ ಎಲ್ಲವುಗಳ ಹಿನ್ನೆಲೆಯಲ್ಲಿ ಜಾನಪದವು ಪಡೆದುಕೊಳ್ಳುತ್ತಿರುವ ಸ್ವರೂಪ ಮತ್ತು ಚರ್ಚೆಗಳನ್ನು ಗಮನಿಸಿ, ಇದು ಜಾಗತೀಕರಣಕ್ಕೆ ಹೇಗೆ ಮುಖಮಾಡಿದೆ ಎನ್ನುವುದನ್ನು ಅಧ್ಯಯನದ ಮಿತಿಯಲ್ಲಿ ನೋಡಲಾಗಿದೆ.

೧.೩ ಆಧುನಿಕತೆಯಲ್ಲಿ ಜಾನಪದ ಪಡೆದುಕೊಳ್ಳುತ್ತಿರುವ ಸ್ವರೂಪ

ಜಾನಪದ ಅಧ್ಯಯನವು ಅಂತರಾಷ್ಟ್ರೀಯ ಮಟ್ಟದ ಚಿಂತನೆಗಳಿಗೆ, ಸಿದ್ಧಾಂತಗಳಿಗೆ ತೆರೆದುಕೊಂಡಿದೆ. ಇವುಗಳ ಸಹಾಯದಿಂದ ಜಾನಪದ ಹೊಸಹೊಸ ರೂಪಗಳನ್ನು ಗುರುತಿಸುವ ಕೆಲಸ ಈಗಾಗಲೇ ನಡೆಯುತ್ತಿದೆ. ನಗರ ಜನಪದರ ಸಂಸ್ಕೃತಿ, ಅವರ ಆಚಾರ-ವಿಚಾರ, ಹವ್ಯಾಸ, ನಂಬಿಕೆ, ನಡಾವಳಿಕೆ, ಊಟೋಪಚಾರಗಳು, ಇವೆಲ್ಲವುಗಳೂ ಸಮಗ್ರ ಅಧ್ಯಯನಕ್ಕೆ ಒಳಗಾಗುತ್ತಿವೆ. ಪ್ರಸ್ತುತದಲ್ಲಿ ಸಮೂಹ ಮಾಧ್ಯಮಗಳಲ್ಲಿ ಜಾನಪದವು ಹೇಗೆ ಮರುಹುಟ್ಟು ಪಡೆಯುತ್ತಿದೆ ಎನ್ನುವುದನ್ನು ಕಾಣಬಹುದು. ಜಾನಪದ ಕಲಾವಿದರನ್ನು ಪ್ರೋತ್ಸಾಹಿಸಿ ಅವರನ್ನು ಪರಿಚಯಾತ್ಮಕ ದೃಷ್ಟಿಯಿಂದ ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸ ಆಗುತ್ತಿದೆ.

ಬಾನುಲಿ, ಪತ್ರಿಕೆ, ದೂರದರ್ಶನ ಜಾಹೀರಾತು ಮುಂತಾದ ಮಾಧ್ಯಮಗಳಲ್ಲಿ ಅನ್ವಯಿಕವಾಗಿ ಜಾನಪದ ಬಳಕೆಯಾಗುತ್ತಿದೆ. ಮನುಷ್ಯನ ಬದುಕಿನಲ್ಲಿ ಪ್ರಾಮುಖ್ಯ ಪಡೆಯುತ್ತಿರುವ ಸಸ್ಯ ಸಂಬಂಧಿ ಔಷಧಿಯು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹುಚರ್ಚಿತವಾಗುತ್ತಿದೆ. ಆಯುರ್ವೇದ ಮತ್ತು ಇದರ ಆರ್ಥಿಕ ಫಲಿತಗಳು ಜಾನಪದವನ್ನು ಹೆಚ್ಚು ಜಾಗತಿಕ ನೆಲೆಯಲ್ಲಿ ಇಡಲು ಅನುಕೂಲಕರವಾಗಿದೆ. ಅನಕ್ಷರರ ಕಕ್ಷೆಯಿಂದ ಹಾರಿ ಲಿಖಿತರೂಪವನ್ನು ಪಡೆಯುತ್ತಿರುವ ಜಾನಪದವು ತನ್ನ ಚಾಪನ್ನು ಕಾಲೇಜ್‌ಕ್ಯಾಂಪಸ್‌ಗಳಲ್ಲಿ, ಉದ್ಯಾನವನಗಳಲ್ಲಿ, ದೇವಾಲಯಗಳಲ್ಲಿ, ಗೋಡೆ ಬರಹಗಳಲ್ಲಿ ಒಡಮೂಡುತ್ತಿದೆ. ವಾಹನಕ್ಕೆ ಸಂಬಂಧಪಟ್ಟ ನೀತಿ ನಿಯಮ, ಚಿಹ್ನೆ, ಅಲಂಕಾರ, ಹಾಸ್ಯಗಳು ವಿಷಯನಿಷ್ಠ ಜಾನಪದದೊಳಗೆ ಪಡೆಯುತ್ತಿರುವ ರೂಪಗಳನ್ನು ಚರ್ಚಿಸುವುದೇ ಈ ಪ್ರಬಂಧದ ಸ್ವರೂಪವಾಗಿದೆ.

ಕೊನೆ ಟಿಪ್ಪಣಿ

೧. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ. ೧೧೯.

೨. ಅದೇ ಪು. ೧೧೯.

೩. ಅದೇ ಪು. ೧೨೩.

೪. ಶ್ರೀ. ಐ. ಮಾ. ಮುತ್ತಣ್ಣ, ೧೯ನೇ ಶತಮಾನದಲ್ಲಿ ಪಾಶ್ಚಿಮಾತ್ಯ ವಿದ್ವಾಂಸರ ಕನ್ನಡ ಸೇವೆ, ಪುಟ. ೩೮೪.

ಅಧ್ಯಾಯ - ೨

ನಗರ ಜಾನಪದ

ನಗರ ಜಾನಪದ

ಜಾನಪದ ಇಂದು ನಿನ್ನೆಯದಲ್ಲ. ಇದು ಅನೇಕ ವರ್ಷಗಳನ್ನು, ಅನೇಕ ಶತಮಾನಗಳನ್ನು ತನ್ನ ಗರ್ಭದಲ್ಲಿ ಗರ್ಭೀಕರಿಸಿಕೊಂಡಿದೆ. ಆದಿಮಾನವರ ಬುದ್ಧಿ ಬೆಳವಣಿಗೆಯೊಂದಿಗೆ ಜಾನಪದ ಉಗಮವಾಯಿತೆನ್ನಬಹುದು. ಹಲವು ಜನರು ಬಿಡುವಿನ ವೇಳೆಯಲ್ಲಿ, ಬೇಟೆಸಿಕ್ಕ ಸಮಯದಲ್ಲಿ, ಏನಾದರೂ ಆವಿಷ್ಕಾರ ಕಂಡುಕೊಂಡಲ್ಲಿ ಮನುಷ್ಯರು ಆಶ್ಚರ್ಯಚಕಿತನಾಗಿರಬಹುದು. ದಿನನಿತ್ಯದ ಆಗು ಹೋಗುಗಳೆಲ್ಲ, ಆಚರಣೆ ಸಂಪ್ರದಾಯಗಳೆಲ್ಲ ಅವರ ಜೀವನಾಭಿಮುಖದ ಮೂಲ ಆಕಾರಗಳಾದವು, ಸೃಷ್ಟಿಯ ಬದಲಾವಣೆಯು ಇವರ ಮನಸ್ಸನ್ನು ಕೆರಳಿಸಿರಬೇಕು. ಗಿಡಮರ ಕಾಡುಗಳ ಮಧ್ಯೆ ಬದುಕುತ್ತಿದ್ದ ಇವರಿಗೆ ಸುತ್ತಮುತ್ತಲಿನದು ಅದ್ಭುತ ಎನಿಸಿರಬೇಕು. ಸೃಷ್ಟಿಯಲ್ಲಿರುವುದನ್ನು ತಮ್ಮ ಉಪಯೋಗಕ್ಕೆ ತಕ್ಕಂತೆ ಆರಿಸಿ ಅವನ್ನು ಪರಿಷ್ಕರಿಸುತ್ತಾ ಬಂದಿದ್ದಾರೆ. ತಮ್ಮಲ್ಲಿ ಸ್ಫೋಟಗೊಳ್ಳುತ್ತಿದ್ದ ಸಂವೇದನೆಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಮಾತನ್ನು ಕಲಿತರು. ಹೀಗೆ ಆದಿಮಾನವರಿಂದ ಒಡಿದು ಆಧುನಿಕ ಮಾನವರವರೆಗೆ ಒಂದಲ್ಲಾ ಒಂದು ಬಗೆಯಲ್ಲಿ ಬದಲಾವಣೆಗೆ ಒಳಪಡುತ್ತಾ ತಮ್ಮಲ್ಲಿರುವ ಸಂಸ್ಕೃತಿ ಮತ್ತು ನಾಗರಿಕತೆಗಳ ಹೊಸ ಬಗೆಯ ಬದಲಾವಣೆ ಆವಿಷ್ಕಾರವನ್ನು ಕಾಣುತ್ತಾ ಬಂದಿದ್ದಾರೆ.

ಮಾನವರನ ಈ ಬಗೆಯ ಬದಲಾವಣೆಗೆ ಮುಖ್ಯ ಕಾರಣ ತಮ್ಮಲ್ಲಿರುವ ಸಂಶೋಧನಾ ದೃಷ್ಟಿ. ಈ ಶೋಧನಾದೃಷ್ಟಿ ಮಾನವರ ಉಳಿವಿನೊಂದಿಗೆ ಅಭಿವೃದ್ಧಿಗೊಳ್ಳುತ್ತದೆ. ಅಳಿವಿನೊಂದಿಗೆ ನಾಶವಾಗುತ್ತದೆ. ಮಾನವ ಇಂದು ಯಂತ್ರಗಳ ನಡುವೆ, ಕಾರ್ಖಾನೆಗಳ ನಡುವೆ, ನಗರೀಕರಣ, ಜಾಗತೀಕರಣಗಳ ಮಧ್ಯೆ ಯಾಂತ್ರೀಕೃತವಾಗುತ್ತಿರುವುದು ಸಹಜ. ಆದರೆ ಮಾನವರ ಇತರ ಸಾಂಸ್ಕೃತಿಕ ಚಟುವಟಿಕೆಗಳು ನಿಂತಿವೆಯೇ? ಇದಕ್ಕೆ ಸಮರ್ಪಕವಾದ ಉತ್ತರವನ್ನು ಕಂಡುಕೊಳ್ಳಲು ಸಾಕಷ್ಟು ಅಧ್ಯಯನಶೀಲತೆಯನ್ನು ರೂಢಿಸಿಕೊಳ್ಳಬೇಕು.

ಮಾನವರು ಹಿಂದೆ ಕಾಡುಗಳ ಮಧ್ಯೆ ಭಿನ್ನ ಬಗೆಯ ಸಾಂಸ್ಕೃತಿಕ ವಾತಾವರಣದಲ್ಲಿ ಜೀವನ ಸಾಗಿಸಿದ್ದರೆ, ಇಂದು ನಗರೀಕರಣ, ಕೈಗಾರೀಕರಣ, ಜಾಗತೀಕರಣದ ನಡುವೆ ಇನ್ನೊಂದು ಬಗೆಯ ಸಾಂಸ್ಕೃತಿಕ ವಾತಾವರಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಂದರೆ ಮಾನವರು ಬದಲಾವಣೆಯ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿದ್ದಾರೆ. ಈ ಪ್ರಕ್ರಿಯೆ ಹಗಲು ರಾತ್ರಿಗಳಷ್ಟೇ ಸಹಜ. ಮಾನವರು ಹಿಂದೆ ತಮ್ಮ ಸುಖ, ದುಃಖ, ದುಮ್ಮಾನಗಳನ್ನು ಜನಸಮೂಹದ ಮಧ್ಯೆ ಈಡೇರಿಸಿಕೊಳ್ಳುತ್ತಿದ್ದರು.

ಆದರೆ ಇಂದು ಸಮೂಹ ಮಾಧ್ಯಮಗಳೊಂದಿಗೆ, ಕ್ಲಬ್‌ಗಳಲ್ಲಿ, ಪಬ್, ಬಾರ್ ಅಂಡ್ ರೆಸ್ಟೋರೆಂಟ್ ಮುಂತಾದ ಆಧುನಿಕ ಮನರಂಜನಾ ಸಮೂಹಗಳಲ್ಲಿ ತಮ್ಮ ಸುಖ ಸಂತೋಷಗಳನ್ನು ಪಡೆಯುತ್ತಿದ್ದಾರೆ.

ಈ ಬಗೆಯ ಬದಲಾವಣೆಯು ಮಾನವರ ಜೀವನ ಶೈಲಿಯು ಸಾಂಸ್ಕೃತಿಕ ಮಟ್ಟದಲ್ಲಿ ಯಾವ ಹಂತ ತಲುಪುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ಬಗೆಯ ಬದಲಾವಣೆ ಸೃಷ್ಟಿಯಷ್ಟೆ ಸಹಜ. ಬದಲಾವಣೆ ಎಂಬುದು ಹಿಂದೆಯೂ ಇತ್ತು. ಈಗಲೂ ಇದೆ, ಮುಂದೆಯೂ ಇರುತ್ತದೆ. ಇದಕ್ಕೆ ಒಳಗಾಗದ ವಸ್ತು ಸೃಷ್ಟಿಯಲ್ಲಿರುವುದು ಅಸಾಧ್ಯ. ಜೀವಂತಿಕೆ ಎಂದರೆ ಅದು ಬದಲಾವಣೆಗೆ ಒಳಪಡುತ್ತಿದೆ ಎಂದೇ ಅರ್ಥ. ಈ ಬದಲಾವಣೆಯು ಮಾನವರ ಪರಿಮಿತಿಯಲ್ಲಿ ಎರಡು ರೀತಿ ಕಾಣಿಸಿಕೊಳ್ಳುತ್ತಿರುತ್ತದೆ. ಅವುಗಳೆಂದರೆ.

೧. ಭೌತಿಕ

೨. ಬೌದ್ಧಿಕ

ಭೌತಿಕ ಬದಲಾವಣೆ ಮಾನವರ ಸುಲಭ ಜೀವನದ ಪ್ರತೀಕ. ಇದು ಮಾನವರ ಸುಖಮಯ ಜೀವನಕ್ಕೆ ಸಂಬಂಧಿಸಿದ್ದು. (ಹೊಸ ಯಂತ್ರಗಳ ಆವಿಷ್ಕಾರ, ಮಾರುಕಟ್ಟೆ, ಕಂಪ್ಯೂಟರ್ ಇತ್ಯಾದಿ) ಕೆಲವು ವಿಚಾರಗಳು, ತತ್ವಗಳು, ನಿಯಮಗಳು, ಪ್ರತಿಪಾದನೆಗಳು, ಬೌದ್ಧಿಕ ಬದಲಾವಣೆಯವು. ಇದರಲ್ಲಿ ಜಾನಪದ ಆಧ್ಯಯನ ವಿಷಯವು ಒಂದು. ಆಧುನಿಕತೆಯ ಸಂದರ್ಭದಲ್ಲಿ ಜಾನಪದವು ಹೇಗ ಜೀವಂತಿಕೆ ಪಡೆದಿದೆ ಎಂಬುದನ್ನು ಪ್ರೊ. ಡಿ. ಲಿಂಗಯ್ಯನವರು ಹೀಗೆ ಗುರುತಿಸುತ್ತಾರೆ.

“ಜಾನಪದ ಎಂಬುದು ಕಾಯಕ ಪ್ರಧಾನವಾದ ಕೃಷಿಸಂಸ್ಕೃತಿಯ ಉತ್ಪನ್ನ ; ಸಮೃದ್ಧಿ ಹಾಗೂ ಸಮಾಧಾನ ಜೀವನ ವಿಧಾನದ ಫಲ. ಕಾರ್ಖಾನೆ, ಸಮೂಹ ಮಾಧ್ಯಮಗಳ ಹಾವಳಿ, ಮಿತಿಮೀರಿದ ಜನಸಂದಣೆಗಳಿಂದ ಗುಜುಗುಡುವ ನಗರಗಳಲ್ಲಿ ಜಾನಪದ ಉಳಿಯಲಾರದು. ಈ ಪರಿಸರ ಜಾನಪದ ಸೃಷ್ಟಿಗೆ ಪೂರಕವಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಕೈಗಾರೀಕರಣದಿಂದಾಗಿ ಜಾನಪದ ಅಳಿಯುತ್ತದೆ ಎಂಬುದು ಜಾನಪದ ಅಧ್ಯಯನದ ಆರಂಭಕಾಲದಲ್ಲಿ ಇದ್ದ ಅಭಿಪ್ರಾಯವಾಗಿತ್ತು. ಜಾನಪದವನ್ನು ಕುರಿತ ಈ ಪರಿಕಲ್ಪನೆ ಅತ್ಯಂತ ಸೀಮಿತವಾದದ್ದು ಎಂಬುದನ್ನು ಅನಂತರದ ವಿದ್ವಾಂಸರು ಕಂಡುಕೊಂಡರು. ‘ಜಾನಪದ ಯಾವುದೇ ಒಂದು ಕಾಲಘಟ್ಟದ ಸಂಸ್ಕೃತಿಯ ಉಳಿಕೆ ಅಥವಾ ಅವಶೇಷದಲ್ಲಿ ಅದೊಂದು ಜೀವಂತ ಚಟುವಟಿಕೆ, ಭಾಷೆ, ಧರ್ಮ, ಪ್ರಾದೇಶಿಕತೆ. ಉದ್ಯೋಗ ಇತ್ಯಾದಿಯಾಗಿ ಯಾವುದೇ ಒಂದು ಅಂಶಕ್ಕೆ ಸಂಬಂಧಿಸಿದಂತೆ ಸಮಾನತೆಯನ್ನು ಹೊಂದಿರುವ ಗುಂಪುಗಳೇ ಜನಪದ (Folk) ಇಂಥ ಗುಂಪುಗಳಿರುವಷ್ಟು ಕಾಲದವರೆಗೂ ಅವರದೇ ಆದ ಜಾನಪದ ಸೃಷ್ಟಿಯಾಗುತ್ತಿರುತ್ತದೆ ಎಂಬುದು ಇವರ ನಿಲುವಾಗಿದೆ. ಹಳ್ಳಿಗಳಲ್ಲಿ ಜಾನಪದವಿರುವಂತೆ ನಗರಗಳಲ್ಲಿಯೂ ಜಾನಪದವಿದೆ. ಕೈಗಾರಿಕೀಕರಣದಿಂದ ಜಾನಪದದ ಸ್ವರೂಪ ಬದಲಾಯಿತೇ ಹೊರತು ನಾಶವಾಗಲಿಲ್ಲ.[೧]

ಜಾನಪದದ ಪರಿಕಲ್ಪನೆ ಹಳ್ಳಿಗರ, ಅನಕ್ಷರ ಕುಕ್ಷಿಗಳ ನಕ್ಷೆ ಹಾರಿದೆ. ಹಳ್ಳಿಯಿಂದ ದಿಲ್ಲಿಯೆಂಬಂತೆ ಈ ದಿನ ಪ್ರತಿಯೊಂದು ಹಳ್ಳಿಯು ನಗರದ ಕಡೆ ಮುಖಮಾಡಿದೆ. ನಗರದಲ್ಲಿರುವ ಆಧುನಿಕ ಸೌಲಭ್ಯಗಳನ್ನು ಹಳ್ಳಿಗಳು ಪಡೆಯುತ್ತಿವೆ. ಅಲ್ಲದೆ ಪ್ರತಿಯೊಂದು ನಗರದ ಒಳಗಡೆ ಹಳ್ಳಿಯಿದೆ. ಹಳ್ಳಿಯ ಆಚಾರವಿದೆ, ಸಂಸ್ಕಾರಗಳಿವೆ. ಸಂಪ್ರದಾಯಗಳಿವೆ. "ಭಾರತದ ನಗರಗಳು ಆಧುನಿಕ ನಾಗರಿಕತೆಯ ಸತ್ವವನ್ನು ಮೊರನೋಟಕ್ಕೆ ಮೈಗೂಡಿಸಿಕೊಂಡಿವೆಯೇ ಹೊರತು. ಅಲ್ಲಿನ ಜನಪದ ಸಮಷ್ಟಿ ಮನಸ್ಸಿನಲ್ಲಿ ಗ್ರಾಮೀಣ ಜಾನಪದದ ಸ್ಪಂದನವೇ ಇರುತ್ತದೆ. ಅಲ್ಲಿ ರೂಪುಗೊಳ್ಳುವ ಜಾನಪದ ಭಾಷಿಕ ಅಭಿವ್ಯಕ್ತಿಯಲ್ಲಿ ಹಾಗೂ ಹೊರಮೈಯಲ್ಲಿ ನಾಗರಿಕತೆಯ ಚಹರೆ ಕಾಣಿಸಿಕೊಳ್ಳುತ್ತದೆ. ನಗರಗಳಲ್ಲಿ ಹುಟ್ಟಿಕೊಳ್ಳುವ ಜಾನಪದವು ಪರಂಪರೆಯಿಂದಲೇ ಸ್ಫೂರ್ತಿ ಪಡೆದುಕೊಳ್ಳುತ್ತದೆ. ಹೀಗಾಗಿ ಬದಲಾಗುತ್ತಿರುವ ಆಧುನಿಕ ಕಾಲದ ನಗರ ಸಂಸ್ಕೃತಿಯಿಂದ ಸಂಪನ್ನಗೊಳ್ಳುವ ಜಾನಪದವನ್ನು ನಗರ ಜಾನಪದವೆಂದು ಪುನರ್ ನಿರ್ವಚಿಸಿಕೊಳ್ಳಬಹುದು" [೨] ಹೀಗಾಗಿ ನಗರಗಳನ್ನು ಅಂತರ್‌ಶಿಸ್ತೀಯ ಅಧ್ಯಯನ ನೆಲೆಯಲ್ಲಿ ಬಹು ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ. "ಜಾನಪದವನ್ನು ಚಕ್ರಾಕಾರದ ಕಾಲದ ಪರಿಕಲ್ಪನೆ (cyclical concept time) ಯಿಂದ ರೂಪುಗೊಂಡಿದ್ದೆಂದೂ, ನಗರ ಸಂಸ್ಕೃತಿಯನ್ನು ಸರಳರೇಖಾತ್ಮಕ ಕಾಲದ ಪರಿಕಲ್ಪನೆ (linear concept of time) ಯಿಂದ ರೂಪುಗೊಂಡಿದುದೆಂದೂ ವಿವರಿಸುವುದರ ಮೂಲಕ ನಗರ ಮತ್ತು ಜಾನಪದವನ್ನು ತಾರ್ಕಿಕ ವೈರುಧ್ಯಗಳ ಮೂಲಕ ನಿರ್ವಚಿಸಿ ಅವುಗಳ ನಡುವೆ ಇರುವ ಗೊಂದಲಗಳನ್ನು ನಿವಾರಿಸಬಹುದು. ಮೂಲತಃ ಸೂರ್ಯ, ಚಂದ್ರ, ಋತುಗಳ ಆವೃತ್ತಗಳಿಗೆ ಬದ್ಧವಾದ ಕೃಷಿ ಮತ್ತು ಅದರ ಜೀವನ ವಿಧಾನ ಸಂಸ್ಕೃತಿಯಲ್ಲಿ ಚಕ್ರಾಕಾರದ ಪರಿಕಲ್ಪನೆಯನ್ನು ಮೂಡಿಸಿತು. ಕಾಲಕ್ಕೆ ನೇರವಾದ ಚಲನೆ ಇಲ್ಲವೆಂದು ಅದು ಮರುಕಳಿಸುತ್ತಾ ಹೋಗುವುದೆಂದು ಭಾವಿಸಲಾಯಿತು. ಪ್ರತಿಯೊಂದು ಕ್ರಿಯೆಯು ಯಾವುದೇ ಪುರಾಣ ಪ್ರತೀಕವೊಂದರ ಮರು ಅಭಿನಯ; ಪುನರ್ ಸೃಷ್ಟಿ ಎಂದು ಪರಿಗಣಿತವಾಗುತ್ತಿತ್ತು. ಈ ಕಾರಣದಿಂದಲೇ ಜಾನಪದ ಯಾವುದೇ ಕಾಲಕ್ಕೆ ಯಾರಿಗಾದರೂ ಅನ್ವಯವಾಗಬಲ್ಲ ಯಾವ ಭೌಗೋಳಿಕ ಪರಿಸರಕ್ಕೂ ಹೊಂದಬಲ್ಲ ಕಥಾನಕಗಳನ್ನು ಸೃಷ್ಟಿಸಿದೆ" [೩]

ನಗರಗಳು ಎಂದರೆ ವಲಸಿಗರ, ಸ್ಥಳ ಹಲವು ಹಳ್ಳಿಗಳ ಸಮೂಹ. ಈ ಸಮೂಹದಲ್ಲಿ ಎಲ್ಲಾ ಸಂಸ್ಕೃತಿಗಳ ಮುಖಾಮುಖಿ ಇದೆ. ಈ ಮುಖಾಮುಖಿಯಲ್ಲಿ ಆಧುನಿಕವಾದದ್ದು ಚಲನಶೀಲತೆಯನ್ನುಳ್ಳಂತದ್ದು ಉಳಿಯುತ್ತದೆ. ಬದಲಾವಣೆಗೆ ಒಳಪಡದೆ ಇರುವುದು ಸ್ಥಗಿತಗೊಳ್ಳುತ್ತದೆ. ಹೀಗೆ ಹಲವು ಸಂಸ್ಕೃತಿಗಳ ಕೂಡುವಿಕೆ ಮತ್ತು ಮಥನದಿಂದ ನಗರವು ನವ ನಾಗರಿಕತೆಯೆಡೆಗೆ ನಡೆಯುತ್ತದೆ. ಈ ನವ ನಾಗರಿಕತೆಯ ನಡುವಿನಲ್ಲಿ ಹಳ್ಳಿಯ ಮನಸ್ಸು ಯಾವುದನ್ನು ಸ್ವೀಕರಿಸಲಿ, ಆಯ್ಕೆ ಮಾಡಿಕೊಳ್ಳಲಿ ಎಂಬ ಪ್ರಕ್ರಿಯೆಯಲ್ಲಿ ತೊಳಲಾಡುತ್ತಿರುತ್ತದೆ.

ಹಳ್ಳಿಗಳ ಸುತ್ತ ನಗರಗಳು ಆವರಿಸುವುದರಿಂದ ಹಳ್ಳಿಯ ಸಂಪ್ರದಾಯ ಆಚರಣೆಗಳು ಒಂದೇ ಬಾರಿ ನಶಿಸುತ್ತವೆಯೇ? ಈ ಸಂಪ್ರದಾಯಗಳು, ಆಚರಣೆಗಳು ಹಲವು ಬದಲಾವಣೆಗಳೊಂದಿಗೆ ಸಂಸ್ಕೃತೀಕರಣಗೊಂಡು ಮರುಹುಟ್ಟು ಪಡೆಯುತ್ತಿರುತ್ತವೆ. ನಗರ ಜೀವನ ವಿಧಾನವು ಹಳೆಯದನ್ನು

ಮರೆಯಲಾಗದ, ಹೊಸದನ್ನು ಕಟ್ಟಿಕೊಳ್ಳಲಾಗದ ಒಂದು ರೀತಿಯ ಸಂಕ್ರಮಣ ಸ್ಥಿತಿಯ ಸಂಕಷ್ಟದಲ್ಲಿ ಇರುತ್ತವೆ. ಇವುಗಳನ್ನು ಒಂದು ಅಧ್ಯಯನದ ಶಿಸ್ತಿಗೆ ಒಳಪಡಿಸುವುದೇ ನಗರ ಜಾನಪದದ ಉದ್ದೇಶ.

ಆಧುನಿಕತೆಯ ಪರಿಣಾಮದಿಂದಾಗಿ ಮಾನವರು ಇಂದು ನಿಂತಲ್ಲೇ ವಿವಿಧ ಮಾನವ ಸಮುದಾಯಗಳನ್ನು, ಅವುಗಳ ಅಭಿವೃದ್ಧಿ ಸಂಚಲನೆಯನ್ನು, ಸಂಚಲನೆಯ ಕಾರಣ ಪರಿಣಾಮಗಳನ್ನು ಕಂಡುಕೊಳ್ಳುತ್ತಿದ್ದಾನೆ. ಯಾವುದೋ ದೇಶದಲ್ಲಿ ಬೆಳೆದ ತರಕಾರಿ ಇಂದು ನಮ್ಮ ಹಳ್ಳಿಯಲ್ಲಿ ತಿನ್ನಬಹುದು. ಪ್ರಪಂಚದ ಯಾವುದೋ ಮೂಲೆಯೊಂದರಲ್ಲಿ ಸಿದ್ಧಗೊಂಡ ಉಡುಪನ್ನು ನಾವಿಲ್ಲಿ ತೊಡಬಹುದಾಗಿದೆ. ಇವೆಲ್ಲ ಆಧನಿಕತೆಯ ಸಹಜ ಬದಲಾವಣೆಗಳಾಗಿವೆ. ಈ ಬದಲಾವಣೆಗಳೇನೋ ಮಾನವರನ್ನು ಅತಿಮಾನುಷಕ್ಕೆ ಕೊಂಡೊಯ್ದಿಲ್ಲ. ಅಥವಾ ಮಾನವನು ತನ್ನ ಬುಡವನ್ನು ಕತ್ತರಿಸಿಕೊಂಡು ಹೋಗಲು ಸಾಧ್ಯವಿಲ್ಲ. ಭೂತ ಮತ್ತು ಭವಿಷ್ಯಗಳ ಕೊಂಡಿಯಾಗಿ ವರ್ತಮಾನ ಕೆಲಸಮಾಡುತ್ತಿರುತ್ತದೆ. ಈ ಭವಿಷ್ಯತ್ತಿನಲ್ಲಿ ಭೂತದ ಚೇಷ್ಟೆ ಅಡಗಿರುತ್ತದೆ. ಇಲ್ಲವೇ ಭೂತದ ಗರ್ಭದಲ್ಲಿ ಭವಿಷ್ಯತ್ ಅಡಗಿರುತ್ತದೆ. ಒಟ್ಟಿನಲ್ಲಿ ಈ ಮೂರರಲ್ಲೂ ಆಂತರಿಕ ಸಂಬಂಧವೇರ್ಪಟ್ಟಿರುತ್ತದೆ.

ಇದೇ ಸಿದ್ಧಾಂತವನ್ನು ಜಾನಪದ ವಿಷಯದಲ್ಲಿ ಕಂಡುಕೊಳ್ಳಬಹುದು. ಹಿಂದೆ ಜಾನಪದವೆಂದರೆ ಹಳ್ಳಿಗರ, ಅನಕ್ಷರರಿಗೆ ಮಾತ್ರ ಸಂಬಂಧಿಸಿದ್ದು ಎಂದು ತಿಳಿಯಲಾಗಿತ್ತು. ಆದರೆ ಇಂದು ಜಾನಪದವನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಹೊಸ ಹೊಸ ದೇಶಿಯ ಮತ್ತು ಪಾಶ್ಚಿಮಾತ್ಯ ಸಿದ್ಧಾಂತಗಳಡಿಯಲ್ಲಿ ಹೆಚ್ಚು ಚರ್ಚೆಗೆ ಗ್ರಹಿತವಾಗಿದೆ. ಪಾಶ್ಚಾತ್ಯ ವಿದ್ವಾಂಸರಲ್ಲಿ ಇದರ ಬಗ್ಗೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿರುವುದರಿಂದ ಅದರ ಫಲಿತಗಳೇ ಹೊಸ ಹೊಸ ಸಿದ್ಧಾಂತಗಳ ಹುಟ್ಟಿಗೆ ಕಾರಣವಾಗಿವೆ. ನಮ್ಮಲ್ಲಿ ಜಾನಪದದ ಅಧ್ಯಯನದ ವೈಜ್ಞಾನಿಕ ದೃಷ್ಟಿಕೋನ ಪ್ರಾರಂಭವಾದದ್ದು ೧೯೬೦-೭೦ರ ದಶಕದಿಂದ. ಆಧುನಿಕ ಜಾನಪದದ ವಿಷಯದಲ್ಲಿ ಅಮೆರಿಕಾ ವಿದ್ವಾಂಸರ ಕೊಡುಗೆ ಅಪಾರವಾದುದು. ಅವರಲ್ಲಿ

ರಿಚರ್ಡ್ ಎಂ.ಡಾರ್ಸನ್‌ರ American Folklore

ಪಿ. ಟ್ರಸ್ಟಿನ್ ಕಾಫಿನ್‌ರವರ American Folklore

ಅಲೆನ್‌ಡೆಂಡಸ್ ಮತ್ತು ಕಾರ್ಲ್‌ಪಾಗ್‌ಲರ್ ಸಂಪಾದಕತ್ವದಲ್ಲಿ ಹೊರಬಂದ "Urban Folklore from the poper work empier" ಗ್ರಂಥಗಳು ನಗರ ಜಾನಪದ ಅಧ್ಯಯನದ ನೆಲೆಯನ್ನು ವಿಸ್ತರಿಸಿವೆ. ಆಧುನಿಕ ಜಾನಪದಕ್ಕೆ ಸಂಬಂಧಪಟ್ಟಂತೆ ನಮ್ಮಲ್ಲಿ ಅಧ್ಯಯನಗಳು ಹೆಚ್ಚು ನಡೆದಿಲ್ಲ. ಕನ್ನಡದಲ್ಲಿ ಕೆಲವೇ ವಿದ್ವಾಂಸರು ಮಾತ್ರ ಗಮನವನ್ನು ಕೊಟ್ಟಿದ್ದಾರೆ. ಆಲೋಚನಾ ಕ್ರಮವನ್ನು ವಿರೋಧಿಸುವವರೂ ಇದ್ದಾರೆ. ನಗರ ಜಾನಪದದ ಅಧ್ಯಯನವನ್ನು ಮಾಡುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಸ್ಥೂಲವಾದ ವಿಭಾಗ ಕ್ರಮವನ್ನು ಅನುಸರಿಸಲಾಗಿದೆ.

೨.೧. ನಗರ ಜನಪದ ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳು

೨.೨. ನಗರ ಜನಪದರ ಕಲೆಗಳು

೨.೩. ನಗರ ಜಾನಪದ ಐತಿಹ್ಯಗಳು

೨.೪. ನಗರದ ಹಬ್ಬ ಮತ್ತು ಜಾತ್ರೆಗಳು

೨.೫. ನಗರ ದೇವತೆಗಳು.

೨.೧. ನಗರ ಜಾನಪದ ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳು

ಆರ್. ಎಸ್. ಬಾಗ್ಸ್ ಹೇಳಿರುವಂತೆ "ನಂಬಿಕೆಗಳು ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮೂಡುವ ಕಾರ್ಯಕಾರಣ ಸಂಬಂಧವುಳ್ಳದಾಗಿರುವ ಸಂಪ್ರದಾಯಿಕ ಭಾವನೆ", "ನಂಬಿಕೆ ಮಾನಸಿಕ ಸ್ಥಿತಿಯ ಒಂದು ಪದರಾದರೆ, ಸಂಪ್ರದಾಯ ಜನಾಂಗದ ಜೀವನ ಕ್ರಮ. ನಂಬಿಕೆ ಕಾಲಕ್ರಮೇಣ ಸಾಂಸ್ಕೃತಿಕ ಆವರಣಕ್ಕೆ ಬಿದ್ದು ಸಾಮಾಜಿಕ ಚೌಕಟ್ಟು ಪಡೆದು ಕ್ರಿಯಾಶೀಲವಾಗಿ ಆಚರಣೆಗಳಿಗೆ ಹಿಗ್ಗುತ್ತದೆ" ಎನ್ನುತ್ತಾರೆ ಡಾ. ಶ್ರೀರಾಮ ಇಟ್ಟಣ್ಣವರ.[೪]

"ಜನಪದ ನಂಬಿಕೆಯು ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷೆಗಳು ಮುಖ್ಯವಾಗುತ್ತವೆ. ನಂಬಿಕೆಯು ಜನಪದರ ಜೀವನಾನುಭವದ ಉತ್ಪನ್ನ. ಹೀಗಾಗಿ ಮಾನವ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ. ಅದು ಸೂಚನೆ, ನಿಯಮ, ವಿಧಿ-ನಿಷೇಧ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿದೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವುಗಳು. ನಂಬಿಕೆಯೊಂದು ಸಂಪ್ರದಾಯ ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿದ್ದು; ಆ ಮೂಲಕ ಕ್ರಿಯಾರೂಪವನ್ನು ತಾಳುತ್ತದೆ.[೫] ನಂಬಿಕೆ, ಆಚರಣೆಗಳು ಆದಿಮಾನವನಿಂದಲೂ ನಡೆದು ಬಂದಂತಹುಗಳೇ. ನಂಬಿಕೆ ಎನ್ನುವುದು ಮಾನಸಿಕ ಸ್ಥಿತಿಯಾದರೆ, ಆಚರಣೆಯು ಕ್ರಿಯಾವಿಧಾನದಲ್ಲಿ ಇರುತ್ತದೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಂಬಿಕೆಯು ಆಚರಣೆಯನ್ನು ಗಟ್ಟಿಗೊಳಿಸುವ ಶಕ್ತಿಯಾಗಿ ಕೆಲಸ ಮಾಡುತ್ತದೆ.

ಒಟ್ಟಿನಲ್ಲಿ ನಂಬಿಕೆ ಮತ್ತು ಆಚರಣೆ ಎನ್ನುವುದು ಒಂದು ಇನ್ನೊಂದನ್ನು ಪೋಷಿಸುತ್ತಾ ಬಂದಿದೆ. ನಂಬಿಕೆ ಎನ್ನುವುದು ಮೂಢ ನಂಬಿಕೆಯನ್ನು ಒಳಗೊಂಡಿದೆ, ವೈಜ್ಞಾನಿಕತೆಯನ್ನು ಒಳಗೊಂಡಿದೆ. ಇದು ಆದಿಮಾನವನಿಂದ ಬಂದ ಭಾವನಾತ್ಮಕ ಕ್ರಿಯೆ. ಇದರಲ್ಲಿ ಸಾಕಷ್ಟು ಅರ್ಥಗಳೇ ಸ್ಫುರಿಸುವವು. ಆದರೆ ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ 'ನಂಬಿಕೆ' ಎನ್ನುವುದು ಜನಪದರಲ್ಲಿ ಅಡಗಿರಬಹುದಾದ ಭಾವನಾತ್ಮಕ ಕ್ರಿಯೆ ಅಥವಾ ಯಾವುದೇ ವಸ್ತುವಿನ ಬಗೆಗೆ ಇರುವ ಸಂವೇದನೆ. ಈ ಸಂವೇದನೆ ಎನ್ನುವುದು ವೈಜ್ಞಾನಿಕವಾದರೂ ಆಗಬಹುದು; ಅವೈಜ್ಞಾನಿಕವಾದರೂ ಆಗಬಹುದು. 'ನಂಬಿಕೆಯೊಂದು

ದೇಶ, ಕಾಲ, ವ್ಯಕ್ತಿಯೊಂದಿಗೆ ಸಾಪೇಕ್ಷ ಸಂಬಂಧ ಹೊಂದಿರುವಂತಹದು. ಒಂದು ನಂಬಿಕೆ ಒಬ್ಬನಿಗೆ ನಂಬಿಕೆಯಾಗಿದ್ದರೆ; ಇನ್ನೊಬ್ಬನಿಗೆ ಅದು ಮೂಢನಂಬಿಕೆಯಾಗಬಹುದು ಅಥವಾ ಆ ವ್ಯಕ್ತಿಗೆ ಕೆಲವು ಕಾಲದ ನಂತರ ಮೂಢನಂಬಿಕೆ ಎನಿಸಬಹುದು''[೬] ಒಟ್ಟಿನಲ್ಲಿ ಅದು ನಂಬುವವರ ಮೇಲೆ ನಿರ್ಧಾರವಾಗಿರುತ್ತದೆ. ಉದಾಹರಣೆಗೆ ಹುತ್ತವನ್ನು ಸುತ್ತಿ ಬಳಸಿ ಹೋಗಬಾರದು ಎನ್ನುವುದು ಹಿಂದಿನಿಂದ ನಡೆದು ಬಂದ ನಂಬಿಕೆ. ಇದನ್ನು ಕೆಲವರು ಮೂಢನಂಬಿಕೆ ಎಂದರೆ, ಮತ್ತೆ ಕೆಲವರು ವೈಜ್ಞಾನಿಕವಾದುದು ಎನ್ನುವವರೂ ಇದ್ದಾರೆ.

ಒಟ್ಟಿನಲ್ಲಿ ನಂಬಿಕೆ ಎನ್ನುವುದು ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೂ ಹರಿದುಬರುತ್ತಿರುವ ಭಾವನಾತ್ಮಕ ಕ್ರಿಯೆ. ಸಾಮಾನ್ಯವಾಗಿ ಹಳ್ಳಿ ಜೀವನ ಬಹಳಷ್ಟು ನಂಬಿಕೆಗಳ ಮೇಲೆ ನಿರ್ಧಾರವಾಗುತ್ತಿರುತ್ತದೆ. ಮುಂಜಾನೆ ಏಳುವ ಸಮಯದಿಂದಲೇ ಪ್ರಾರಂಭಗೊಳ್ಳುವ ನಂಬಿಕೆಗಳು ಮಲಗುವ ವೇಳೆಯಲ್ಲಿ ಮುಗಿಯುತ್ತವೆ.

ಬೆಳಿಗ್ಗೆ ಏಳುವಾಗ ಬಲಗಡೆ ಎದ್ದೇಳು

ದೇವರ ಚಿತ್ರಪಟ (Photo) ನೋಡು

ಹೊರಗಡೆ ಹೊರಟಾಗ ವಿಧವೆ ಎದುರು ಬಂದರೆ ಹೋಗುವ ಕೆಲಸ ಆಗುವುದಿಲ್ಲ

ಗಂಡಸಿಗೆ ಎಡಹುಬ್ಬು, ಹೆಂಗಸಿಗೆ ಬಲಹುಬ್ಬು ಹಾರಿದರೆ ಅಪಶಕುನ

ಮನೆಯ ಮುಂದೆ ಕಾಗೆ ಕೂಗಿದರೆ ದರಿದ್ರ, ಅದ್ದರಿಂದ ಅಂಗಳದಲ್ಲಿ ಅಗಳು (ಅನ್ನ) ಚೆಲ್ಲಬಾರದು

ಊಟವನ್ನು ಓಡಾಡುವ ಜಾಗದಲ್ಲಿ ತಿನ್ನಬಾರದು, ಹೊಟ್ಟೆನೋವು ಬರುತ್ತದೆ

ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು, ಇಲ್ಲವಾದರೆ ಶನಿ ಒಳಗಡೆ ಬರುತ್ತಾನೆ.

ಈ ಮುಂತಾದ ನಂಬಿಕೆಗಳಲ್ಲಿ ಸಾಮಾನ್ಯವಾಗಿ ಅರ್ಥಕಳೆದುಕೊಂಡು ಅವುಗಳ ಜಾಗದಲ್ಲಿ ಹೊಸ ಬಗೆಯ ನಂಬಿಕೆಗಳು ದಿನಕ್ಕೊಂದರಂತೆ ಹುಟ್ಟುತ್ತಿರುತ್ತವೆ. ಅಂದರೆ ನಂಬಿಕೆಗಳಲ್ಲಿ ಹುಟ್ಟಿಕೊಂಡ ವಿಭಿನ್ನ ಬದಲಾವಣೆಗಳು ಬಹಳವಿದ್ದರೂ ನಂಬಿಕೆ ಎನ್ನುವುದು ನಶಿಸುತ್ತಿಲ್ಲ, ಅಷ್ಟೆ ಅಲ್ಲ ಮಹತ್ವವನ್ನು ಕಳೆದುಕೊಂಡಿಲ್ಲ. ಅದು ಹಳ್ಳಿಯಾಗಲೀ, ನಗರವಾಗಲೀ, ಮಹಾನಗರವಾಗಲೀ ಒಂದೆಲ್ಲಾ ಒಂದು ಬಗೆಯಲ್ಲಿ ಫೀನಿಕ್ಸ್ ಪಕ್ಷಿಯಂತೆ ಸಾವಿನಿಂದ ಮೇಲೆ ಬರುವ ಸಜೀವ ಪಳೆಯುಳಿಕೆ.

ನಗರಗಳಲ್ಲಿ ಕಂಡುಬರುವ ನಂಬಿಕೆಗಳನ್ನು ಕೆಳಗಿನಂತೆ ಮೂರು ರೀತಿಯಲ್ಲಿ ವಿಭಾಗಿಸಿಳ್ಳಲಾಗಿದೆ.

೨.೧.೧. ವೈಯಕ್ತಿಕ ನಂಬಿಕೆಗಳು

೨.೧.೨. ಸಾಂಸ್ಕೃತಿಕ ನಂಬಿಕೆಗಳು

೨.೧.೩. ಧಾರ್ಮಿಕ (ಅತಿಮಾನುಷ) ನಂಬಿಕೆಗಳು

೨.೧.೪. ಧಾರ್ಮಿಕ ಆಚರಣೆಗಳು ಮತ್ತು ಸಂಪ್ರದಾಯಗಳು

೨.೧.೧. ವೈಯಕ್ತಿಕ ನಂಬಿಕಗೆಳು

ಬದುಕಿನಲ್ಲಿ ಆಕಸ್ಮಿಕವಾದ ಒಂದು ಘಟನೆ ಅಥವಾ ವಸ್ತುಸಂಗತಿ ಮತ್ತೆ ಮತ್ತೆ ಪುನರಾವರ್ತನೆಗೊಂಡಾಗ ಅದು ನಂಬಿಕೆಯಾಗಿ ಘನೀಭವಿಸುತ್ತದೆ. ಉದಾಹರಣೆಗೆ ಯಾವುದೇ ಒಂದು ಅಂಕೆ ವಾರ ಅಥವಾ ಬಣ್ಣದ ಹರಳು ಅದೃಷ್ಟದ ಸಂಕೇತವಾಗಬಹುದು. ಬೆಕ್ಕು, ಹೆಣ, ಒಂಟಿಬ್ರಾಹ್ಮಣ, ವಿಧವೆ ಎದುರು ಬಂದರೆ ಅಪಶಕುನ ಎನ್ನುವ ನಂಬಿಕೆಗಳನ್ನು ಗಮನಿಸಬಹುದು. "ಮಾನವ ಬದುಕಿಗೂ ಪ್ರಕೃತಿ ವ್ಯಾಪಾರಕ್ಕೂ ನಡುವೆ ಇರುವ ಕಾರ್ಯಕಾರಣ ಸಂಬಂಧವೂ ನಂಬಿಕೆಯೊಂದರ ಹಿಂದೆ ಕೆಲಸ ಮಾಡುತ್ತಿರುತ್ತದೆ. ಮೂಲತಃ ಕಾಲ್ಪನಿಕ ಆಲೋಚನೆಯೊಂದು ವೈಯಕ್ತಿಕ ನೆಲೆಯಲ್ಲಿ ಹುಟ್ಟಿಕೊಂಡು ಸಮೂಹದಲ್ಲಿ ಸಾಮೂಹಿಕ ಮಾನ್ಯತೆಯನ್ನು ಪಡೆದುಕೊಂಡಾಗ ಅದು ನಂಬಿಕೆಯಾಗುತ್ತದೆ". [೭] ನಂಬಿಕೆ ಎನ್ನುವುದು ಮನುಷ್ಯನೊಬ್ಬನ ವೈಯಕ್ತಿಕವಾಗಿರುತ್ತದೆ. ಇದರ ಬಗ್ಗೆ ದೃಢವಾದ ನಂತರ ಸಾರ್ವತ್ರಿಕಗೊಳ್ಳುತ್ತವೆ ಉದಾ: ನಗರಗಳಲ್ಲಿ ಬೆಳಿಗ್ಗೇನೆ ಕೆಲಸಕ್ಕೆ ಹೋಗುವಾಗ ಬಿಕ್ಷುಕನೊಬ್ಬನ ಮುಖದರ್ಶನದಿಂದ ಆ ದಿನವೆಲ್ಲ ಚಿಕ್ಕಪುಟ್ಟ ತೊಂದರೆ ಆಗುತ್ತದೆ. ಇದೇ ರೀತಿ ಮೂರ್‍ನಾಲ್ಕುದಿನ ಪದೇ ಪದೇ ನೋಡಿದಾಗ ಕೆಲಸಗಾರನೊಬ್ಬನಿಗೆ ಆ ಭಿಕ್ಷುಕನ ಬಗ್ಗೆ ಹುಟ್ಟಿಕೊಂಡ ಅಭಿಪ್ರಾಯ ದೃಢವಾದ ನಂತರ ಆತ ಸಹಕಾರ್ಮಿಕನೊಬ್ಬನಿಗೆ ತಿಳಿಸಿ, ಹೀಗೆ ಇಡೀ ಬಡಾವಣೆಯಲ್ಲಿರುವವರಿಗೆಲ್ಲ ಆ ಭಿಕ್ಷುಕನನ್ನು ನೋಡಿದರೆ ಹೋಗುವ ಕೆಲಸದಲ್ಲಿ ತೊಂದರೆ ಆಗುತ್ತದೆ ಎಂಬ ನಂಬಿಕೆಗೆ ಒಳಗಾಗುತ್ತದೆ.

ಬೆಂಗಳೂರಿನ ಕೃಷ್ಣರಾಜಪುರದ ಬಸ್ ನಿಲ್ದಾಣದಲ್ಲಿ ಗಣೇಶನ ಗುಡಿ ಇದೆ. ಹೊಸಕೋಟೆ, ದೇವಸಂದ್ರ ಅಯ್ಯಪ್ಪನಗರಗಳಲ್ಲಿ ವಾಸಿಸುವರೆಲ್ಲ ಎಲ್ಲಿಗಾದರೂ ಪ್ರಯಾಣ ಮಾಡುವಾಗ ಗಣೇಶನನ್ನು ನೆನೆಸಿಕೊಂಡರೆ ಹೋಗುವ ಕೆಲಸ ಸುಗಮವಾಗುತ್ತದೆ. ಅದೇ ರೀತಿ ಬೆಂಗಳೂರಿನ ಜಯನಗರದಲ್ಲಿ ಇರುವ ಪಟಾಲಮ್ಮನಿಗೆ ಜಾತ್ರೆ ಸಮಯದಲ್ಲಿ ಕುಂಕುಮ, ಹೂ, ಹಣ್ಣು ಕೊಟ್ಟುಬಂದರೆ ದೀರ್ಘ ಸುಮಂಗಲಿಯಾಗುತ್ತಾರೆ ಎಂಬ ನಂಬಿಕೆ. ಹಲಸೂರು ಮದ್ರಾಸ್ ರಸ್ತೆಯಲ್ಲಿ ಪ್ಲೇಗ್ ಮಾರಿಕಾಂಬ ದೇವಸ್ಥಾನವಿದೆ. ಇಲ್ಲಿ ಅಂಗದಾರವನ್ನು ಕಟ್ಟಿಕೊಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. "ಕಾಲರ ಮುಂತಾದ ಅಂಟುಜಾಡ್ಯಗಳು ಬಂದಾಗ ಆಸ್ಪತ್ರೆ, ವೈದ್ಯರುಗಳ ಅಪಾರ ನೆರವು ಸಾಧ್ಯವಾಗುವಂತ ಸ್ಥಳದಲ್ಲಿ ದೇವರ ದಾಳಗಳನ್ನು ಹಾಕಿ; ಈ ರೋಗದ ಮಾರಿಯನ್ನು ಬೀಳ್ಕೊಡುವ ಬಗೆಗಳು ಕಂಡುಬರುತ್ತವೆ. ಎಲ್ಲೋ ದೂರದ ಒಳನಾಡಿನಲ್ಲಿ ದೇವರು ಮೈತುಂಬಿ ಭಕ್ತರ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ; ಅವರ ಕಷ್ಟಗಳನ್ನು ಪರಿಹರಿಸುವ ಸ್ವಾರಸ್ಯಕರ ವಿಷಯಗಳನ್ನು ಕೇಳಿದ್ದೇವೆ. ಆದರೆ ಮೈಸೂರು ನಗರದಲ್ಲಿಯೂ ಇಂತಹ ಪವಾಡಗಳು, ದೇವರ ಮಹಿಮೆಗಳು ಕಾಣಬರುತ್ತವೆ ಎಂದರೆ ಯಾರೂ

ಆಶ್ಚರ್ಯಪಡಬೇಕಾಗಿಲ್ಲ." [೮] ನಗರಗಳಲ್ಲಿ ಹುಟ್ಟುವಂತಹ ನಂಬಿಕೆಗಳು ವಿಭಿನ್ನವಾಗಿದ್ದು ವೈಯಕ್ತಿಕವಾಗಿ ಹುಟ್ಟಿ ಸಾರ್ವತ್ರಿಕತೆಯನ್ನು ಪಡೆದಿರುತ್ತವೆ. ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹೋಗುವ ಕಾರ್ಮಿಕರೆಲ್ಲ ಸಾಮಾನ್ಯವಾಗಿ ಯಾವುದಾದರೂ ಒಂದು ಗುರುತು ಮಾಡಿಕೊಂಡಿರುತ್ತಾರೆ. ಅದನ್ನು ದಿನಾಲು ನೋಡಿಕೊಂಡು ಹೋಗುವಾಗ ಆ ದಿನವೆಲ್ಲ ಏನೂ ತೊಂದರೆಯಾಗದಿದ್ದಾಗ ಅದು ನಂಬಿಕೆಯಾಗಿ ಆ ಪ್ರದೇಶದಲ್ಲಿ ಉಳಿದು ಬರುತ್ತದೆ. ನಗರದ ಮಹಿಳೆಯರ ವಲಯದಲ್ಲಿ ಈ ಬಗೆಯ ನಂಬಿಕೆಗಳು ಇರುವುದನ್ನು ಕಾಣಬಹುದು. ಗಾಯಿತ್ರಿ ವ್ರತಮಾಡಿ ಐದು ಜನ ಇಲ್ಲವೇ ಒಂಬತ್ತು ಜನ ಮುತ್ತೈದೆಯರಿಗೆ ಮಡಿಲಕ್ಕಿ ಕೊಟ್ಟರೆ ಇಷ್ಟಾರ್ಥಗಳು ಲಭಿಸುತ್ತವೆ ಎಂಬ ನಂಬಿಕೆ ಶ್ರೀಮಂತ ಮಹಿಳೆಯರಲ್ಲಿ ಇರುವುದನ್ನು ಕಾಣಬಹುದು. ಇಂತಹ ನಂಬಿಕೆಗಳು ಹೆಚ್ಚು ಕಡಿಮೆ ಎಲ್ಲಾ ನಗರ ಪ್ರದೇಶಗಳಲ್ಲೂ ಕಾಣಬಹುದು. ಈ ರೀತಿಯಲ್ಲಿ ವೈಯಕ್ತಿಕ ನಂಬಿಕೆಗಳು ಹುಟ್ಟಿ ಸಾರ್ವತ್ರಿಕ ಮುದ್ರೆಯನ್ನು ಪಡೆದು ನಗರ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುತ್ತವೆ.

೨.೧.೨. ಸಾಂಸ್ಕೃತಿಕ ನಂಬಿಕೆಗಳು

"ಹುಟ್ಟಿನ ಬಗೆಗಿನ ಕುತೂಹಲ, ಸಾವಿನ ಕುರಿತ ಭಯ ತನ್ನ ಬದುಕನ್ನು ರೂಪಿಸಿದ ಋತುಮಾನಗಳ ಚಲನೆಗಳ ಅನೇಕ ಜೀವನಾವರ್ತನ ಹಾಗೂ ವಾರ್ಷಿಕಾವರ್ತನಗಳು ನಂಬಿಕೆಗಳನ್ನು ರೂಪಿಸಿವೆ." [೯] ಅಂದರೆ ಸಾಂಸ್ಕೃತಿಕ ನಂಬಿಕೆ ಎನ್ನುವುದು ಮನುಷ್ಯನ ಸಾಂಸ್ಕೃತಿಕ ಜೀವನಕ್ಕೆ ಸಂಬಂಧಪಟ್ಟದ್ದು. ಅದು ನಗರಗಳಲ್ಲಿ ಬೇರೆಯದಾದ ರೂಪ ಪಡೆದಿದೆ. ಉದಾಹರಣೆಗೆ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮನೆಯವರೆಲ್ಲ ತೀರ್ಥಯಾತ್ರೆ ಹೋಗುತ್ತಾರೆ. ಸತ್ತ ಮನೆಯಲ್ಲಿ ಪುಣ್ಯಯೋಜನೆ ಮಾಡಿಸುತ್ತಾರೆ. ಇದನ್ನು ಮಾಡದಿದ್ದಾಗ ಸತ್ತ ವ್ಯಕ್ತಿಗೆ ಸ್ವರ್ಗಪ್ರಾಪ್ತಿಯಾಗುವದಿಲ್ಲ ಎನ್ನುವ ನಂಬಿಕೆ. ಚುನಾವಣೆಯಲ್ಲಿ ವ್ಯಕ್ತಿಯೊಬ್ಬರು ಗೆದ್ದಾಗ ತನ್ನ ಇಷ್ಟ ದೇವರ ಹೆಸರಿನಲ್ಲಿ ಇಲ್ಲವೇ ಹರಕೆ ಮಾಡಿಕೊಂಡ ದೇವರ ಹೆಸರಿನಲ್ಲಿ ಕೋಳಿ, ಕುರಿಗಳನ್ನು ಕಡಿದು ಮಾಂಸದ ಊಟವನ್ನು ಹಾಕಿಸುತ್ತಾರೆ. ಈ ಕ್ರಿಯೆ ರೂಢಿಗತವಾಗಿ ಇತ್ತೀಚೆಗೆ ಬೆಳೆಯುತ್ತಾ ಬಂದಿದೆ. ಮನೆತನದಲ್ಲಿ ಚೆನ್ನಾಗಿ ಬಾಳಿ ಬದುಕಿದಂಥ ವ್ಯಕ್ತಿಗಳು ಸತ್ತಾಗ ಪುಣ್ಯತಿಥಿಯ ದಿನವನ್ನು ಮತ್ತು ಶ್ರದ್ಧಾಂಜಲಿಯನ್ನು ದಿನ ಪತ್ರಿಕೆಯಲ್ಲಿ ಹಾಕಿಸುತ್ತಾರೆ. ಇದು ಪ್ರತಿಷ್ಠೆಯ ವಿಷಯವಾಗಿಯೂ ರೂಪುಗೊಳ್ಳುತ್ತಿದೆ. ಆದರೆ ಹಳ್ಳಿಗಳಲ್ಲಿ ಸಾವಿನ ಸುದ್ದಿಯನ್ನು ಮುಟ್ಟಿಸಲು ಸಮಾಜದ ಒಂದು ವರ್ಗವನ್ನು ಅವರವರ ಸಂಬಂಧಿಗಳ ಊರುಗಳಿಗೆ ಕಳುಹಿಸುವುದು, ನೇರವಾಗಿ ಮನೆಯವರು ಹೋಗಬಾರದು ಎಂಬ ನಂಬಿಕೆ ಇದೆ.

ನಮ್ಮ ಭಾರತೀಯ ಸಂಸ್ಕೃತಿಗಳಲ್ಲಿ ಶುಕ್ರವಾರ, ಶನಿವಾರ ಮತ್ತು ಸೋಮವಾರ ಎಂದರೆ 'ದೇವರ ದಿನ' ಎಂದು ತಿಳಿದು ಆ ದಿನ ಮನೆಯನೆಲ್ಲ ಸಾರಿಸಿ, ಗುಡಿಸಿ ಮನೆಯಲ್ಲಿರುವ ಪಾತ್ರೆ ಸಾಮಾನುಗಳನೆಲ್ಲ ಬೆಳಗಿ ಮನೆಯನ್ನು ಎಂಜಲು ಆಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು. ದೇವರ ಪೂಜೆ ಅದ ನಂತರವೇ ಊಟದ ವ್ಯವಸ್ಥೆ ಆಗುತ್ತಿತ್ತು. ಆದರೆ ನಗರ ಜನಪದರಲ್ಲಿ ನಂಬಿಕೆ ಕಾರ್ಯ

ಕ್ರಮೇಣ ತೆಳುವಾಗುತ್ತಾ ಬರುತ್ತಿದೆ. ಈ ವಾರಗಳ ಬದಲಾಗಿ ಭಾನುವಾರವನ್ನು ವಿಶೇಷ ದಿನವಾಗಿ ಕಾಣುತ್ತಾರೆ. ನಮ್ಮನ್ನು ನಾಲ್ಕು ಶತಮಾನಗಳ ಕಾಲ ಆಳಿದ ಬ್ರಿಟಿಷರು ಕ್ರೈಸ್ತ ಸಮುದಾಯಕ್ಕೆ ಸೇರಿದವರು. ಅವರಿಗೆ ಭಾನುವಾರವು ಪ್ರಾರ್ಥನಾ ದಿನವಾಗಿತ್ತು. ಆ ದಿನವನ್ನು ಸರ್ಕಾರಿ ರಜಾ ದಿನವಾಗಿ ಘೋಷಿಸಿತು ಈ ಒಂದು ಕ್ರಮ ಸ್ವಾತಂತ್ರ್ಯ ನಂತರವೂ ಭಾರತದಲ್ಲಿ ಮುಂದುವರೆದಿದೆ. ಆದ್ದರಿಂದ ವಾರದ ಆರು ದಿನ ದುಡಿದು ಸಾಕಾದ ಜನ ಈ ದಿನ ಸ್ವಲ್ಪ ವಿರಾಮವನ್ನು ಪಡೆಯಲು ಬಯಸುತ್ತಾರೆ. ಭಾನುವಾರ ಬಂತೆಂದರೆ ಮಕ್ಕಳಾದಿಯಾಗಿ ದೊಡ್ಡವರೂ ಖುಷಿಯಾಗಿರುತ್ತಾರೆ. ಹೆಂಡತಿ ಮಕ್ಕಳೊಂದಿಗೆ ಎಲ್ಲಾದರೂ ಪಿಕ್‌ನಿಕ್ ಹೋಗುತ್ತಾರೆ. ಪ್ರೇಮಿಗಳು ಪಾರ್ಕ್ ಸುತ್ತುತ್ತಾರೆ. ಸ್ನೇಹಿತರು ಸಿನಿಮಾಗಳಿಗೆ ಹೋಗುತ್ತಾರೆ. ಬಾರ್ ಅಂಡ್ ರೆಸ್ಟೋರೆಂಟ್, ಕ್ಲಬ್, ಸಂಡೇ ಬಜಾರ್ ಮತ್ತು ಅವರ ಮನರಂಜನ ಸ್ಥಳಗಳನ್ನು ಅರಸಿಕೊಂಡು ಹೋಗುತ್ತಾರೆ.

ಹೀಗೆ ಭಾನುವಾರ ನಗರ ಸಮುದಾಯದಲ್ಲಿ ಅವರ ಬದುಕಿನ ಮಹತ್ವದ ಪಾತ್ರವನ್ನು ವಹಿಸುತ್ತದೆ. ನಮ್ಮ ಸಾಂಸ್ಕೃತಿಕ ಜೀವನಕ್ರಮದ ಬೇರೆಲ್ಲೂ ಈ ಭಾನುವಾರ, ನಗರ ಪ್ರದೇಶಗಳಲ್ಲಿ ಹೆಚ್ಚು ಪ್ರಿಯವಾದ ದಿನವಾಗುತ್ತಿರುವುದನ್ನು ನೋಡಿದರೆ, ಬದಲಾದ ಜೀವನ ಕ್ರಮವು ನಗರ ಜಾನಪದದಲ್ಲಿ ಹೇಗೆ ಸಂಪ್ರದಾಯವನ್ನು ಪಲ್ಲಟಗೊಳಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

೨.೧.೩. ಧಾರ್ಮಿಕ (ಅತಿಮಾನುಷ) ನಂಬಿಕೆಗಳು

ಆದಿಮಾನವ ಪ್ರಕೃತಿಯೊಳಗಿನ ನಿಗೂಢ ರಹಸ್ಯದ ಬಗ್ಗೆ ಇಟ್ಟುಕೊಂಡ ಭಾವನೆಗಳು ಧಾರ್ಮಿಕ ಅಥವಾ ಅತಿಮಾನುಷ ನಂಬಿಕೆಗಳಾಗಿ ಹೊರಬೀಳುತ್ತವೆ. ಮನುಷ್ಯನಲ್ಲಿರುವ ಭಯವೇ ಇದಕ್ಕೆ ಮೂಲ ಪ್ರೇರಣೆ. ಇವುಗಳು ನಗರಗಳಲ್ಲೂ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ತಮ್ಮ ಅಸ್ಥಿತ್ವ ಸ್ಥಾಪಿಸಿರುವುದನ್ನು ಕಾಣಬಹುದು. ಜನ ಕೆಲವು ಕಾಯಿಲೆಗಳಿಗೆ ಅದೇ ಹೆಸರಿನಲ್ಲಿ ಅಮ್ಮನನ್ನು ಸೃಷ್ಟಿಸಿಕೊಂಡಿದ್ದಾರೆ. ದಡಾರ, ಸಿತಾಳ ಚಿಕ್ಕಮ್ಮನೆಂದೂ ಸಿಡುಬು ರೋಗವನ್ನು ದೊಡ್ಡಮ್ಮನೆಂದೂ, ಅಮ್ಮ ಕೋಪಿಸಿಕೊಂಡಾಗ, ಈ ರೀತಿ ಕಾಣಿಸಿಕೊಳ್ಳುತ್ತಾರೆ ಎಂಬುದು ಹಳ್ಳಿಗಳಲ್ಲಿ ಜನಪದರು ತಿಳಿದುಕೊಂಡಿರುವ ಸಾಮಾನ್ಯವಾದ ನಂಬಿಕೆ. ಈ ದೇವತೆಗಳ ಪ್ರತಿರೂಪ ಮಾರಮ್ಮನೆಂದು ನಂಬಿ ಮಾರಮ್ಮನನ್ನು ತಮ್ಮ ಪೂಜಾವಿಧಿಗಳಿಂದ ಸಂತೋಷಪಡಿಸಲು ಯತ್ನಿಸುತ್ತಾರೆ. ಈ ನಂಬಿಕೆ ಎಷ್ಟರ ಮಟ್ಟಿಗೆ ಬೇರುಬಿಟ್ಟಿದೆಯೆಂದರೆ ಅಧಿಕಾರ ಮತ್ತು ವರ್ಗ ತಾರತಮ್ಯವಿಲ್ಲದಂತೆ ಎಲ್ಲಾ ಸಮುದಾಯದವರೂ ಬಲವಾಗಿ ನಂಬುತ್ತಾರೆ. ಬೆಂಗಳೂರು ನಗರದ ವಲಯದಲ್ಲಿ ಸುಮಾರು ಇನ್ನೂರು ಗ್ರಾಮ ದೇವತೆಗಳಿವೆ. ಗಾಂಧಿನಗರದಲ್ಲಿರುವ ಅಣ್ಣಮ್ಮ, ಜಯನಗರದಲ್ಲಿರುವ ಪಟಾಲಮ್ಮ, ಹೆಬ್ಬಾಳದ ಕೆರೆಬಳಿ ಇರುವ ಜಲಗೇರಮ್ಮ, ಹಲಸೂರಿನಲ್ಲಿರುವ ಕೆಂಪಮ್ಮ, ಬಾಗಲುಗುಂಟೆಯಲ್ಲಿರುವ ಮಾರಮ್ಮ, ಮದ್ರಾಸ್ ರಸ್ತೆಯಲ್ಲಿರುವ ಪ್ಲೇಗ್ ಮಾರಿಕಾಂಬ ಮುಂತಾದ ಗ್ರಾಮದೇವತೆಗಳ ದೇವಸ್ಥಾನದಲ್ಲಿ ಈಗಲೂ ಸಿಡುಬು ರೋಗಕ್ಕೆ ತುತ್ತಾದವರನ್ನು ಕರೆದುಕೊಂಡು ಬಂದು ಮೊಸರು

ಮತ್ತು ಉಪ್ಪನ್ನು ಹೊರಗಿನ ದೇವತೆಯ ಶಿಲ್ಪದ ಮೇಲೆ ಸುರಿದು ಅಮ್ಮನಿಗೆ ಶಾಂತಿ ಮಾಡಿಸುತ್ತಾರೆ. ಇಷ್ಟೆ ಅಲ್ಲದೆ ಕೆಲವರು ಕೋಳಿಯನ್ನು ಬಲಿ ಕೊಡುವುದೂ ಉಂಟು.

ಬೆಂಗಳೂರಿನಲ್ಲಿ ನಡೆಯುವ ಕರಗ ಬಹಳ ವಿಜೃಂಭಣೆಯಿಂದ ನಡೆಯುವ ವಾರ್ಷಿಕ ಜಾತ್ರೆ. ಎಲ್ಲಕ್ಕಿಂತ ವಿಶಿಷ್ಟವಾದದ್ದು ಕರಗ ಉತ್ಸವ ಮತ್ತು ಕಡಲೆಕಾಯಿ ಪರಿಸೆ. ಇಡೀ ಕರ್ನಾಟಕದಲ್ಲೇ ಪ್ರಸಿದ್ದವಾದ ಕರಗದ ಉತ್ಸವ ಬೆಂಗಳೂರಿನಲ್ಲಿ ನಡೆಯುತ್ತದೆ. ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಕರಗದ ಉತ್ಸವ ನಡೆಯುತ್ತಿದೆಯಾದರೂ ಬೆಂಗಳೂರು ನಗರದ ಈ ಉತ್ಸವಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಇದೊಂದು ವಿಶೇಷಾಧ್ಯಯನದ ವಸ್ತುವಾಗಬಲ್ಲದು. ನಗರ ಗರ್ಭದಲ್ಲಿ ಇರುವ ಹಳ್ಳಿಗೆ 'ಕರಗ' ಒಂದು ಉತ್ತಮ ಉದಾಹರಣೆಯೆಂದು ಹೇಳಬಹುದು. ಕಡಲೆಕಾಯಿ ಪರಿಸೆಯೂ ಅಷ್ಟೆ. ಬೆಂಗಳೂರು ನಗರದಲ್ಲಿ ಉಳಿದುಕೊಂಡಿರುವ ಒಂದು ವಿಶಿಷ್ಟ ರೂಪವಿದು. ಮೂಲತಃ ವ್ಯವಸಾಯ ಪ್ರಧಾನ ಗ್ರಾಮೀಣ ಸಂಸ್ಕೃತಿಯ ಭಾಗವಾದ 'ಪರಿಸೆ' (ಜಾತ್ರೆ) ನಗರದಲ್ಲಿ ಆಚರಿಸಲ್ಪಡುವುದೇ ವಿಶೇಷ. ಅದರಲ್ಲೂ ಕಡಲೆಕಾಯಿ ನೇರವಾಗಿ ವ್ಯವಸಾಯೋತ್ಪಾದನೆಯ ಫಲ. ನಗರದಲ್ಲಿ ಆಧುನಿಕ ಉತ್ಪಾದನಾ ವಿಧಾನದ ಫಲಗಳಾದ ವಿವಿಧ "ವಸ್ತುಗಳ ಪ್ರದರ್ಶನ ಪರಿಸೆಗಳು" ನಡೆಯುತ್ತಿರುವಾಗ ಕಡಲೆಕಾಯಿ ಪರಿಸೆ ನಗರದ ಒಂದು ಗ್ರಾಮೀಣ ನೆನಪಾಗಿ ಕಾಣಿಸಿಕೊಳ್ಳುತ್ತದೆ. ಅಂದರೆ ಬೆಂಗಳೂರು ನಗರದ ಅಂತರಂಗದಲ್ಲಿ ಇನ್ನೂ ಹಳ್ಳಿ ಉಳಿದುಕೊಂಡಿದೆ." [೧೦]

ಬೆಂಗಳೂರಿನಲ್ಲಿ ನಡೆಯುತ್ತಿರುವ ಗ್ರಾಮದೇವತೆಗಳು ಉತ್ಸವಗಳು ಅಧ್ಯಯನಕ್ಕೆ ಯೋಗ್ಯವಾದವುಗಳು. ಸಾಮಾನ್ಯವಾಗಿ ಒಂದೊಂದು ಬಡಾವಣೆಗಳಿಗೂ ಒಂದೊಂದು ಗ್ರಾಮದೇವತೆಗಳು ಇರುವುದನ್ನು ಕಾಣಬಹುದು. ಯಾವುದೇ ಬಡಾವಣೆಯ ಗ್ರಾಮದೇವತೆಯ ಉತ್ಸವ ನಡೆಯುವಾಗಲು ಅಲ್ಲಿಗೆ ಅಣ್ಣಮ್ಮ ದೇವತೆಯ ಉತ್ಸವಮೂರ್ತಿಯನ್ನು ಕೊಂಡೊಯುತ್ತಾರೆ. ಆ ಬಡಾವಣೆಯ ಗ್ರಾಮ ದೇವತೆ ಮತ್ತು ಅಣ್ಣಮ್ಮ ದೇವತೆಯ ಉತ್ಸವಮೂರ್ತಿಯನ್ನು ಜೊತೆಯಲ್ಲೇ ಪೂಜೆ, ಬಲಿಕೊಡುವುದಾದರೆ ಬಲಿ, ಮೆರವಣಿಗೆ ಮಾಡುತ್ತಾರೆ. ಒಂದು ವೇಳೆ (ಹೊಸ) ಬಡಾವಣೆಯಲ್ಲಿ ಗ್ರಾಮದೇವತೆ ಇಲ್ಲಾ ಎಂದರೆ ಅಣ್ಣಮ್ಮನ ಉತ್ಸವಮೂರ್ತಿಯನ್ನು ತೆಗೆದುಕೊಂಡು ಹೋಗಿ ಮೂರು ದಿನ ಪೂಜೆ, ಬಲಿ, ಅಂಬಲಿ ಪೂಜೆ ಮುಂತಾದ ಆಚರಣೆಗಳನ್ನು ಮಾಡಿ ಮುತ್ತೈದೆಯರು ಮಡಿಲಕ್ಕಿ ಕಟ್ಟಿದ ನಂತರ ಮೆರವಣಿಗೆ ಮಾಡಿ ಮೂಲ ಸ್ಥಳಕ್ಕೆ ಸೇರಿಸುತ್ತಾರೆ. ಈ ಬಗೆಯ ನಂಬಿಕೆಗಳು ಸಂಶೋಧನಾ ವಿಷಯ ಸಾಮಗ್ರಿಗಳು ಬೆಂಗಳೂರು ನಗರವೊಂದರಲ್ಲೆ ದೊರೆಯುತ್ತವೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ.

ನಗರದಲ್ಲಿ ವೈದ್ಯರ ಬಗ್ಗೆಯೂ ನಂಬಿಕೆಗಳು ಇರುತ್ತವೆ. ಇವರ ಬಗೆಗೆ ಮಾತಾನಾಡುವಾಗ ಜನರಲ್ಲಿ ಆ ವೈದ್ಯರ ಹಸ್ತಗುಣ ಸರಿ, ಸರಿಯಿಲ್ಲವೆಂಬ ಅಭಿಪ್ರಾಯ ಸರ್ವಸಾಮಾನ್ಯವಾಗಿದೆ.

'ಕೈ ಗುಣ' ಎಂಬುದು ಬಹಳ ವರ್ಷಗಳಿಂದ ಬೆಳೆದು ಬಂದಿದ್ದು, ಇಂತಹ ನವನಾಗರಿಕತೆ ಇರುವ ನಗರಗಳಲ್ಲೂ ಮುಂದುವರೆದಿದೆ. ಈ ಬಗೆಗೆ ನಂಬಿಕೆ ಎಷ್ಟಿದೆ ಎಂದರೆ ವೈದ್ಯರು ಬರದುಕೊಟ್ಟ ಔಷಧಗಳನ್ನು ಅಂಗಡಿಯಿಂದ ತಂದು ವೈದ್ಯರಿಗೆ ತೋರಿಸಿ ಅವರಿಂದ ಮುಟ್ಟಿಸಿ ನಂತರ ಉಪಯೋಗಿಸುವ ಜನರೂ ಉಂಟು. ಆದರೆ ವೈಜ್ಞಾನಿಕವಾಗಿ ಸಂಶೋಧನೆ ಮಾಡಿದಾಗ ಇದೊಂದು ಮೂಢನಂಬಿಕೆಯಾಗಿದೆ.

ಹೀಗೆ ನಗರ ಜನಪದರೂ ನಂಬಿಕೊಂಡು ಬಂದಿರುವ ನಂಬಿಕೆಗಳೆಂಬ ಮೂಲದ್ರವ್ಯ ಹಲವು ತಿರುವುಗಳೊಂದಿಗೆ ಪ್ರವಾಹ ರೀತಿಯಲ್ಲಿ ಹರಿಯುತ್ತಲೆ ಇರುತ್ತದೆ. ಹಿಂದೆ ಜನಪದರಲ್ಲಿ 'ನರಿಯ ಮುಖ ನೋಡಿದರೆ ಒಳ್ಳೆಯದಾಗುತ್ತೆ' ಎಂಬುದು ಸಾಮಾನ್ಯ ನಂಬಿಕೆಯಾಗಿತ್ತು. ಆದರೆ ನರಿಮುಖ ನೋಡಲು ಯಾರೂ ಕಾಡಿಗೆ ಹೋಗುತ್ತಿರಲಿಲ್ಲ. ಆದರೆ ಬೆಂಗಳೂರು, ಮೈಸೂರು, ತುಮಕೂರು ಮುಂತಾದ ನಗರಗಳಲ್ಲಿ, ಈ ಪರಿಯ ನಂಬಿಕೆ ಬಲವಾಗಿ ಬೇರೂರಿದೆ. ಮನೆಗಳಲ್ಲಿ, ವ್ಯಾಪಾರ ವಹಿವಾಟು ಸ್ಥಳಗಳಲ್ಲಿ ಹೇರ್ ಕಟ್ಟಿಂಗ್ ಶಾಪ್‌ಗಳಲ್ಲಿ, ದೇವಸ್ಥಾನಗಳಲ್ಲಿ, ಆಟೋಗಳಲ್ಲಿ, ಮುಂತಾದ ಸ್ಥಳಗಳಲ್ಲಿ ಎರಡು ನರಿಗಳು ಇರುವ ಚಿತ್ರಪಟ, ಹಸುಗಳು ಇರುವ ಚಿತ್ರಪಟ, ನವಿಲುಗಳು, ಕತ್ತೆಗಳು ಇರುವ ಚಿತ್ರ ಪಟಗಳನ್ನು ನೇತುಹಾಕಿಕೊಂಡಿರುತ್ತಾರೆ. ಈ ಪಟಗಳ ಮೇಲೆ

'ನನ್ನನ್ನು ನೋಡು ಯೋಗ ಬರುತ್ತದೆ'
'ನಾನು ನೆಲಸಿದ ಜಾಗದಲ್ಲಿ ಸಂಪತ್ತು ವೃದ್ಧಿಸುತ್ತದೆ'
'ಯೋಗದ ರಾಣಿಗಳು'

ಮುಂತಾದ ಬರಹವನ್ನುಳ್ಳ ಮುಖ ಪುಟಗಳನ್ನು ಕಾಣಬಹುದು.

ಈ ರೀತಿಯ ನಂಬಿಕೆಗಳಲ್ಲಿ ನಗರಗಳಲ್ಲಿ ಇತ್ತೀಚೆಗೆ ಹೆಚ್ಚು ಪ್ರಚಲಿತವಾಗುತ್ತವೆ.

೨.೧.೪. ಧಾರ್ಮಿಕ ಆಚರಣೆಗಳು ಮತ್ತು ಸಂಪ್ರದಾಯಗಳು

ಜನಸಮುದಾಯದ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಕಟ್ಟುವಲ್ಲಿ ಸಂಪ್ರದಾಯಗಳು ಮಹತ್ವದವುಗಳಾಗಿವೆ. ಸಂಪ್ರದಾಯವೊಂದರ ಹಿಂದೆ ನಂಬಿಕೆ ಬಲವಾಗಿರುತ್ತದೆ. ಅಂದರೆ ನಂಬಿಕೆ ಸಂಪ್ರದಾಯವನ್ನು ಚಾಲನೆಗೊಳಿಸುತ್ತದೆ ಮತ್ತು ಸಂಪ್ರದಾಯ ನಂಬಿಕೆಯನ್ನು ಜೀವಂತವಾಗಿಡುತ್ತದೆ. ನಂಬಿಕೆ, ಸಂಪ್ರದಾಯ, ಆಚರಣೆಗಳ ಅಂತರ್ ಸಂಬಂಧವನ್ನು ಒಂದು ಸೂತ್ರದಲ್ಲಿ ಹಿಡಿದಿಡುವುದಾದರೆ ಇವು ಕ್ರಮವಾಗಿ ಯಾವುದು? ಏನು? ಹೇಗೆ? ಎನ್ನುವ ನೆಲೆಯಲ್ಲಿಟ್ಟು ವಿಶ್ಲೇಷಿಸಬಹುದು." [೧೧] ಆಚರಣೆ ಮತ್ತು ಸಂಪ್ರದಾಯಗಳು ಮಾನವನು ಇರುವೆಡೆಯಲೆಲ್ಲ ಇರುತ್ತವೆ. ಕೆಲವೊಮ್ಮೆ ಅನ್ಯಸಂಸ್ಕೃತಿಗಳ ಪ್ರಭಾವದಿಂದ ಮತ್ತು ವೈಚಾರಿಕತೆಯಿಂದ ಸ್ವಲ್ಪ ಮಟ್ಟಿನ ಬದಲಾವಣೆ ಕಂಡುಬಂದರೂ ಅವುಗಳ 'ಹುಟ್ಟ'ನ್ನು ಕುರಿತು ನಿರಾಕರಿಸುವಂತಿಲ್ಲ. "ಸಂಪ್ರದಾಯಗಳು ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಹೊಂದಬಹುದು. ಅವಶ್ಯಕತೆಗೆ ಅನುಗಣವಾಗಿ ಹೊಸ ಹೊಸ ಸಂಪ್ರದಾಯಗಳು ತಲೆಯೆತ್ತಬಹುದು.

ಉದಾಹರಣೆಗೆ ಪರಿಚಿತರು ಎದುರಿಗೆ ಸಿಕ್ಕಾಗ ನಮಸ್ಕಾರ ಹೇಳುವುದು, ಮೊದಲು ವ್ಯಾಪಕವಾಗಿ ಕಂಡು ಬರುತ್ತಿದ್ದ ಸಂಪ್ರದಾಯವಾಗಿತ್ತು. ಈಗ ಅದಕ್ಕೆ ಬದಲಾಗಿ ಹಾಯ್, ಹಲೋ ಅಥವಾ ಕೈ ಕುಲುಕುವ ಸಂಪ್ರದಾಯ ಹೆಚ್ಚಾಗಿ ರೂಢಿಯಲ್ಲಿದೆ. ಕೆಲವೊಂದು ಸಂಪ್ರದಾಯಗಳು ಕಾಲಕ್ಕೆ ಅನುಗುಣವಾಗಿ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಉಳಿದು ಬರುತ್ತವೆ. ಪ್ಲಾಸ್ಟಿಕ್ ಮಾವಿನ ಎಲೆಗಳ ತೋರಣ ಕಟ್ಟುವುದು, ಸಿಮೆಂಟಿನ ಅಂಗಳದಲ್ಲಿ ಪೇಂಟ್‌ನಿಂದ ರಂಗೋಲಿ ಬಿಡುವುದು ಮುಂತಾದುವುಗಳನ್ನು ಗಮನಿಸಬಹುದು. ಹೀಗೆ ಬದಲಾವಣೆಗಳನ್ನು ಮೈಗೂಡಿಸಿಕೊಂಡು ನಮ್ಮಲ್ಲಿ ಇನ್ನೂ ಅನೇಕ ಸಂಪ್ರದಾಯಗಳು ಜೀವಂತವಾಗಿ ಉಳಿದಿದೆ. [೧೨]

ನಗರ ಜೀವನಕ್ಕೆ ಸಂಬಂಧಪಟ್ಟಂತೆ ಆಚರಣೆ ಮತ್ತು ಸಂಪ್ರದಾಯಗಳು ಹೆಚ್ಚು ವೈವಿಧ್ಯತೆಯನ್ನು ಪಡೆದಿವೆ. ಇವುಗಳ ಉದ್ದೇಶ ಕೇವಲ ದೈವಿ, ಸಂಸ್ಪರ್ಶವಲ್ಲದೆ ಮೋಜಿನ ಅಥವಾ ಅಂತಸ್ತಿನ (Statas) ಪ್ರತಿಷ್ಠೆಯಾಗಿ ಆಚರಿಸಲ್ಪಡುತ್ತವೆ. ಆದ್ದರಿಂದಲೇ ಇಲ್ಲಿ ನಡೆಯುವ ಕರಗಗಳಾಗಲಿ, ಜಾತ್ರೆಗಳಾಗಲಿ ಉತ್ಸವ ಹಬ್ಬಗಳಾಗಲಿ ಹಳ್ಳಿಯವರಿಗಿಂತ ಹೆಚ್ಚು ವೈಭವಯುತವಾಗಿ, ಶ್ರೀಮಂತವಾಗಿ ಆಚರಿಸಲ್ಪಡುತ್ತವೆ. ಇಂತಹ ವೈಭವಯುತ ಆಚರಣೆಗಳ ಹಿಂದೆ ದೈವಭಕ್ತಿಗಿಂತ ಹೆಚ್ಚಾಗಿ ಮೋಜು ಪ್ರಖರವಾಗಿರುತ್ತದೆ. ಇದರಿಂದ ಬರೀ ಸಂಪ್ರದಾಯಿಕ ಧಾರ್ಮಿಕತೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಹಬ್ಬಗಳ ಆಚರಣೆಗಳ ಹಿಂದಿನ ಉದ್ದೇಶಗಳೇ ಬೇರೆ ತೆರನಾಗಿರುತ್ತವೆ. ಅದೇ ರೀತಿ ನಗರಗಳಲ್ಲಿ ಆಚರಿಸುವ ಹಬ್ಬಗಳ ಆಚರಣೆಗಳು, ಪದ್ಧತಿಗಳು ಬದಲಾವಣೆಗೆ ಒಳಪಟ್ಟಿರುತ್ತದೆ. ಇಲ್ಲಿ ಎಲ್ಲರೂ ಅವರದೇ ಆದ ಕೆಲಸ ಕಾರ್ಯಗಳಲ್ಲಿ ಹೆಚ್ಚು ಸಮಯ ಮಗ್ನರಾಗಿರುತ್ತಾರೆ. ನಗರಗಳಲ್ಲಿ ಪ್ರಾಥಮಿಕ ಸಂಬಂಧಗಳು ಹತ್ತಿರವಾಗಿರುವುದಿಲ್ಲ. ನೆರೆಹೊರೆಯವರೊಂದಿಗೆ ಅಷ್ಟೊಂದು ಗಾಢ ಸಂಬಂಧ ಇರುವುದಿಲ್ಲ. ಯಾವುದಾದರೂ ಒಂದು ಸಾಂಸ್ಕೃತಿಕ ಒಗ್ಗೂಡುವಿಕೆ ಬಂದಾಗ ಅವರಲ್ಲಿ ಎಲ್ಲಿಲ್ಲದ ಅದಮ್ಯ ಚೈತನ್ಯ ತನ್ನಲ್ಲಿ ಅಷ್ಟು ದಿನ ಇರುವ ಒಂಟಿತನವನ್ನು ಒಮ್ಮೆಲೆ ನೀಗಿಸಿಕೊಳ್ಳುವ, ಶ್ರೀಮಂತಿಕೆಯನ್ನು ತೋರಿಸುವ ಪ್ರಯತ್ನವನ್ನು ಸ್ಥಾಪಿಸುವ - ಈ ಎಲ್ಲಾ ಸ್ಥಿತಿಗಳಿಗೆ ಸಾಂಸ್ಕೃತಿಕ ಆಚರಣೆಗಳು ವೇದಿಕೆಯಾಗಿ ನಿರೂಪಿತಗೊಳ್ಳುತ್ತವೆ. ಅಲ್ಲದೆ ಆರ್ಥಿಕ ಸ್ಥಿತಿಯು ಸುಭದ್ರವಾಗಿರುವುದರಿಂದ ಈ ಪರಿಯ ವಿನೋದ ಸಹಿತವಾದ ಆಚರಣೆಗಳಿಗೆ ಹೆಚ್ಚು ಒತ್ತು ಇರುತ್ತದೆ.

ಹಳ್ಳಿಗಳಲ್ಲಿ ವ್ಯವಸಾಯ ಪ್ರಮುಖ ಕಸುಬಾಗಿದ್ದು ಸಂಪ್ರದಾಯ ಮತ್ತು ಆಚರಣೆಗಳು ಕೃಷಿ ಸಂಸ್ಕೃತಿಯಿಂದ ನಿರ್ಧರಿಸಲ್ಪಟ್ಟಿರುತ್ತವೆ. ಅಲ್ಲಿ ನಡೆಯುವ ಸುಗ್ಗಿ ಹಬ್ಬ, ಕೊಂತಮ್ಮನ ಪೂಜೆ, ಮಳೆ ಬಾರದಿದ್ದಾಗ ಮಳೆರಾಯನ ಆಗಮಕ್ಕೋಸ್ಕರ ಕಪ್ಪೆ ಮೆರವಣಿಗೆ, ಕತ್ತೆಗಳಿಗೆ ಮದುವೆ ಮಾಡಿಸುವುದು. ಇವೆಲ್ಲ ಆಚರಣೆಗಳನ್ನು ಹಳ್ಳಿಗಳಲ್ಲಿ ಕಾಣಬಹುದು. ಆದರೆ ನಗರ ಜೀವನದಲ್ಲಿ ಆಚರಣೆಗಳನ್ನು ಕಾಣಲು ಸಾಧ್ಯವಿಲ್ಲ. ಇಲ್ಲಿ ಕಾರ್ಖಾನೆ ಉದ್ಘಾಟನೆಗಳು, ಗೃಹಪ್ರವೇಶಗಳು, ಯಂತ್ರೋಪಕರಣಗಳ ಪೂಜೆ, ಅಂಗಡಿ ಮುಗ್ಗಟ್ಟುಗಳ ತೆರೆಯುವಿಕೆ ಮುಂತಾದ ಸಂದರ್ಭಗಳಲ್ಲಿ ಶಾಸ್ತ್ರೋಕ್ತ ಆಚರಣೆಗಳನ್ನು ಹೆಚ್ಚು ಕಾಣಬಹುದು. ಇಂತಹ ಸಮಯದಲ್ಲಿ ಪುರೋಹಿತರನ್ನು ಕರೆಯಿಸಿ ಅವರಿಂದ

ಮಂತ್ರಘೋಷಗಳನ್ನು, ಯಜ್ಞಯಾಗಾದಿಗಳನ್ನು ಮಾಡಿದ ನಂತರವೇ ಅವುಗಳ ಬಳಕೆ. ಇತ್ತೀಚೆಗಷ್ಟೆ ಬರಗಾಲದಿಂದ ತತ್ತರಿಸುತ್ತಿದ್ದ ಕರ್ನಾಟಕದಲ್ಲಿ ಮಳೆಗಾಗಿ ದೇವಸ್ಥಾನಗಳಲ್ಲಿ ಹೋಮ, ಯಜ್ಞ, ಪೂಜೆ ಪುನಸ್ಕಾರವನ್ನು ಮಾಡಿದ್ದನ್ನು ಕಂಡಿದ್ದೇವೆ. ಹೈಟೆಕ್ ಎನ್ನುವಂತಹ ರಾಜಕಾರಣದ ಮುಖಂಡರೇ ಇಂತಹ ಸಂಪ್ರದಾಯಕ್ಕೆ ಶರಣಾಗಿ ಮೌಢ್ಯ ಧಾರ್ಮಿಕ ಆಚರಣೆಗಳನ್ನು ಕ್ರಿಯಾಶೀಲವನ್ನಾಗಿಸುತ್ತಾ ನಗರ ಜನಪದರಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರ ಬಳಿಯಲ್ಲೂ ಪ್ಯಾಕೆಟ್ ಕ್ಯಾಲೆಂಡರ್‌ಗಳಿರುತ್ತವೆ. ಹೆಣ್ಣು ಮಕ್ಕಳ ಬ್ಯಾಗಿನಲ್ಲಿ ಗಾಯಿತ್ರಿ, ಗೌರಿಪೂಜೆಗಳ ಮಂತ್ರ, ವಿಘ್ನ ಆರಾಧಕನ ಸ್ತೋತ್ರಗಳು ಮುಂತಾದವು ದೊರೆಯುತ್ತವೆ. ಕ್ಯಾಲೆಂಡರ್‌ಗಳಲ್ಲಿ ಗುಳಿಕ ಕಾಲ, ರಾಹುಕಾಲ, ಯಮಗಂಡಕಾಲ ಇವುಗಳನ್ನು ನೋಡಿಯೇ ಮನೆ ಬಿಡುವುದು. (ಇದಕ್ಕೆ ಅಪವಾದಗಳು ಉಂಟು) ಅಂಗಡಿಗಳನ್ನು ತೆರೆಯುವುದು, ದೂರ ಪ್ರಯಾಣ ಬೆಳೆಸುವುದು ಹೆಂಗಸರು ಮಾತ್ರ ದಿನಾಲು ಗಾಯಿತ್ರಿ ಮಂತ್ರ ಅಥವಾ ಗಣೇಶ ಅಥವಾ ಓಂ ಶಕ್ತಿಯ ಮಂತ್ರ ಮುಂತಾದ ಸ್ತೋಗಳನ್ನು ಜಪಿಸಿದರೆ ಒಳ್ಳೆಯದಾಗುತ್ತೆ, ಸಂಪತ್ತು ಲಭಿಸುತ್ತೆ, ದಾಂಪತ್ಯ ಜೀವನ ಸುಖಮಯವಾಗಿರುತ್ತೆ ಎಂಬ ನಂಬಿಕೆ. ನಗರಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ದುಡಿಯುವುದಕ್ಕೆ ಹೋಗುವುದರಿಂದ ಈ ಪರಿಯ ಸ್ತೋತ್ರಗಳು ಇರುವ ಪ್ಯಾಕೆಟ್ ಪುಸ್ತಕಗಳನ್ನು ಹಿಡಿದು ಬಸ್ಸಿನಲ್ಲೇ ಕೂತು ಜಪಿಸುವುದನ್ನು ಕಾಣಬಹುದು.

"ಭೌಗೋಳಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಆಯಾಯ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಜನಿಸುತ್ತವೆ. ಜನರ ವಲಸೆ ಹಾಗೂ ಪರಸ್ಪರ ಸಂಪರ್ಕಗಳಿಂದಾಗಿ ಅವು ಹರಡುತ್ತವಾದರೂ ಅವುಗಳ ಉಗಮದ ಮಹತ್ವವನ್ನು ನಿರಾಕರಿಸುವಂತಿಲ್ಲ ಮೌಲ್ಯಗಳು ಬದಲಾದಂತೆಲ್ಲ ಸಂಪ್ರದಾಯ ಆಚರಣೆಗಳು ಬದಲಾಗುತ್ತವೆ. ವೈಚಾರಿಕತೆ ಬೆಳೆದಂತೆ ಅನೇಕ ಮೌಢ್ಯ ಮೂಲವಾದ ಸಂಪ್ರದಾಯಗಳು ವಿಸ್ಮೃತಿಗೆ ಸೇರುತ್ತವೆ. ಹಾಗೆಂದು ಗ್ರಾಮೀಣ ಜನರಲ್ಲಿ ಸಂಪ್ರದಾಯಗಳು ಗಾಢವಾಗಿರುತ್ತವೆ. ನಗರ ಪ್ರದೇಶದಲ್ಲಿ ಅವು ತೆಳುವಾಗಿರುತ್ತವೆ ಅಥವಾ ಆ ಪ್ರಮಾಣದಲ್ಲಿರುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ. ನಮ್ಮ ಅನೇಕ ವಿದ್ಯಾವಂತ ನಗರವಾಸಿಗಳು ಗೊಡ್ಡು ಸಂಪ್ರದಾಯವಾದಿಗಳಾಗಿರುವುದನ್ನು ಕಾಣುತ್ತೇವೆ."[೧೩] ನಗರ ಜೀವನದಲ್ಲಿಯೂ ಸಹ ನಂಬಿಕೆ, ಆಚರಣೆ, ಸಂಪ್ರದಾಯಗಳು ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ರೂಢಿಯಲ್ಲಿರುವುದನ್ನು ಕಾಣಬಹುದು.

೨.೨. ನಗರ ಜನಪದರ ಕಲೆಗಳು

ನಿಶ್ಚಿತವಾದ ಭೂ ಪ್ರದೇಶದಲ್ಲಿ ವಾಸಿಸುವ ಜನರ ಆಚಾರ, ವಿಚಾರ, ಉಡಿಗೆ, ತೊಡಿಗೆ, ಕಲೆ, ಸಾಹಿತ್ಯ, ವಿಜ್ಞಾನ ಇವೆಲ್ಲವುಗಳ ಒಟ್ಟು ಮೊತ್ತವೇ ಸಂಸ್ಕೃತಿ. ಈ ವ್ಯಾಖ್ಯಾನದಂತೆ ಯಾವುದೇ ಜನಾಂಗ (Race)ದ ಸಂಸ್ಕೃತಿಯಲ್ಲಿ ಕಲೆಯೆನ್ನುವುದು ಒಂದು ಭಾಗ. "ಮನುಷ್ಯನ ಕ್ರಿಯಾಶೀಲ ಮನಸ್ಸು ಜಡತ್ವದಿಂದ ಚೈತನ್ಯಕ್ಕೆ ಸಾಗಲು ಸದಾ ಪ್ರಯತ್ನಿಸುವುದರಿಂದ ತಮ್ಮ ಪರಿಸರ ಪ್ರಕೃತಿಯಲ್ಲಿನ

ಅವರು ಅನ್ವೇಷಣೆಗೆ ಆತ ಪಟ್ಟ ಪರಿಶ್ರಮವೇ ಕಲೆಯ ಹುಟ್ಟಿಗೆ ಕಾರಣವಾಗಿದೆ. ಬದುಕನ್ನು ಸುಂದರವಾಗಿಸುತ್ತಾ, ಸಾರ್ಥಕವಾಗಿಸುತ್ತಾ ಸಾಗುವ ಹಂತದಲ್ಲಿ ಉಂಟಾದ ಆಯಾಸ, ಆನಂದ, ಭಯ, ಉಲ್ಲಾಸ ಇವುಗಳ ಪ್ರತೀಕವಾಗಿ ಕಾಣಿಸಿಕೊಂಡ ನೂರಾರು ಚಟುವಟಿಕೆಗಳನ್ನು 'ಕಲೆ' ಎಂಬ ಪದದ ವ್ಯಾಪ್ತಿಯಲ್ಲಿ ವಿದ್ವಾಂಸರು ಗುರುತಿಸುತ್ತಾರೆ. ಉಲ್ಲಾಸಭರಿತವಾದ ಮನಸ್ಸು ಏನಾದರೂ ಮಾಡಬೇಕು ಎನ್ನುವಲ್ಲಿ ನಿಯಮಿತಿವಾದ ಒಂದು ಪರಧಿಗೊಳಪಡುವ ಕ್ರಿಯೆಯಲ್ಲಿ ತೊಡಗಿ ಅದಕ್ಕೊಂದು ರೂಪುಕೊಡುವುದರಲ್ಲಿ ಸಮರ್ಥವಾದಾಗ ಅದು ಕಲೆಯಾಗಿ ರೂಪುಗೊಂಡು ಹರಿದು ಬರುವುದನ್ನು ಕಾಣಬಹುದು. ಜನಪದ ಕಲೆಯೆಂದರೆ ನಿಸರ್ಗಜನ್ಯ ಕಲೆಯಾಗಿದೆ. ಜನಪದರಲ್ಲಿ ಧಾರ್ಮಿಕ ಹಾಗೂ ಪ್ರಾಕೃತಿಕ ಪ್ರಜ್ಞೆಯು ದಟ್ಟವಾಗಿ ನೆಲೆ ನಿಂತಿರುವುದರಿಂದಲೇ ಆಯಾ ಪ್ರದೇಶದ ಜನಾಂಗವು ತಮ್ಮ ಮತ, ಧರ್ಮ, ಸಂಪ್ರದಾಯಗಳನ್ನು ಆಧರಿಸಿ, ಭೌಗೋಳಿಕ ಪರಿಸರವನ್ನು ಅವಲಂಬಿಸಿ ಕಲೆಗಳನ್ನು ಸೃಷ್ಟಿಸಿಕೊಂಡಿರುವುದು ಅವರ ನಾಡಿ - ಮಿಡಿತಗಳನ್ನು ಅರ್ಥೈಸಿಕೊಳ್ಳಲು ಇರುವ ಪ್ರಮಾಣವಾಗಿದೆ."[೧೪]

ಕಲೆ ಮಾನವನ ಅವಶ್ಯಕತೆಗೆ ಅನುಗುಣವಾಗಿ ಹುಟ್ಟಿಕೊಂಡ ಒಂದು ಸೃಜನಶೀಲ ಪ್ರಕ್ರಿಯೆ. ಮನುಷ್ಯರು ಏನನ್ನಾದರೂ ಹೆದರಿಸಬಲ್ಲರು ಒಂಟಿತನವನ್ನು ಬಿಟ್ಟು. ಈ ಒಂಟಿತನ ಹೋಗಲಾಡಿಸಲು ಸಮೂಹ ಅವಶ್ಯಕ. ಈ ಸಮೂಹದಲ್ಲಿ ಎಲ್ಲಾ ತರಹದ ಜನರು ಭಾಗವಹಿಸುವುದರಿಂದ 'ಕಲೆ'ಯ ಹುಟ್ಟು ಪ್ರಾರಂಭವಾಗುತ್ತದೆ. ಈ ತೆರನಾದ ಕಲೆಯು ವಿವಿಧ ಆಯಾಮಗಳಲ್ಲಿ ಬೆಳೆದು ಬಂದಿದೆ. ಅದೇ ಜನಪದ ಕಲೆ, ಶಿಷ್ಟ ಕಲೆ, ಶಿಲ್ಪಕಲೆ ಇತ್ಯಾದಿ. ಜನಪದ ಕಲೆ ಎನ್ನುವುದು ಒಂದೇ ಪ್ರದೇಶಕ್ಕೆ ಸೀಮಿತವಾದುದಲ್ಲ. ಭೌಗೋಳಿಕವಾಗಿ ಭಿನ್ನತೆಯನ್ನು ಪಡೆದಿರುತ್ತದೆ. ತೀರ ಹಿಂದಿನಿಂದ ಬಂದದ್ದು ಮಾತ್ರ ಜನಪದ ಕಲೆ, ಇತ್ತೀಚಿನದು ಶಿಷ್ಟಕಲೆ ಎಂದು ವಿಭಾಗ ಮಾಡುವುದೇ ಅಸಮಂಜಸ. ಯಾಕೆಂದರೆ ಒಂದು ವಸ್ತು ಆವಿಷ್ಕಾರವಾದಾಗ ಅದನ್ನು ತಾಂತ್ರಿಕ ಎನ್ನುತ್ತೇವೆ. ಕಾರಣ ಆ ಯುಗಕ್ಕೆ ಅದು ಹೊಸ ತಂತ್ರವಾಗಿರುತ್ತದೆ. ಆದಿಮಾನವನಿಂದ ಆವಿಷ್ಕಾರಗೊಂಡ ಬೆಂಕಿ ಆ ಯುಗಕ್ಕೆ ಹೊಸ ತಂತ್ರವಾಯಿತು. ರಾಗಿ ಕಲ್ಲು ಆವಿಷ್ಕಾರಗೊಂಡಾಗ ಇದು ಸಹ ಆ ಕಾಲದ ತಂತ್ರಜ್ಞಾನದ ಫಲವೇ ಆಗಿತ್ತು. ಇದರ ಅವಶ್ಯಕತೆಯ ಒಡನಾಟ ಜನಪದರಲ್ಲಿ ಹೆಚ್ಚಾದಾಗ ಅದರ ಸುತ್ತ ಅವಿನಾಭಾವ ಸಂಬಂಧ ಬೆಳೆದು, ಅದರ ಸುತ್ತ ಜಾನಪದ ಸಾಹಿತ್ಯ ಪ್ರಕಾರಗಳೇ ಹುಟ್ಟಿಕೊಂಡವು. ಈ ರಾಗಿ ಕಲ್ಲಿನ ಮುಂದಿನ ಭಾಗವೇ 'ಹಿಟ್ಟಿನ ಗಿರಣಿ' (ಪ್ಲೋರ್ ಮಿಲ್) ಇದೇ ರೀತಿ ಎತ್ತಿನಗಾಡಿಯಿಂದ ಕಾರು, ರೈಲು, ವಿಮಾನ ಹೀಗೆ ಜಾನಪದಕ್ಕೂ ಎಂಥದನ್ನೂ ಸಗುಣವಾಗಿ ನುಂಗುವ ಶಕ್ತಿಯಿದೆ ಎನ್ನುವುದನ್ನು ಮರೆಯಬಾರದು. ಇಂತಹ ತಿಳಿವಳಿಕೆಯ ಅಡಿಯಲ್ಲಿ ಜಾನಪದ ಕಲೆಯನ್ನು ನೋಡಿದಾಗ ಇದು ಶಿಷ್ಟ ಇದು ಪರಿಶಿಷ್ಟ ಎಂದು ಹಣೆಪಟ್ಟಿ ಕಟ್ಟುವುದು ತರವಲ್ಲ ಎನಿಸುತ್ತದೆ. 'ಭರತನಾಟ್ಯ' ಇದೊಂದು ಜನಪದ ಕಲೆ ಎಂದು ಜಾನಪದ ಕೆಲ ವಿದ್ವಾಂಸರು ಒಪ್ಪಿದ್ದಾರೆ.

[illegible]

[illegible]

ಜಾನಪದ ಕಲೆಗಳು ವಾಹಕವಾಗುವುದೇ ಮೌಖಿಕ ರೂಪದಲ್ಲಿ. ಒಬ್ಬನಿಂದ ಮತ್ತೊಬ್ಬರು ಕಲಿಯುತ್ತಿದ್ದರು. ಈ ಜನಪದ ಕಲೆಗಳನ್ನು ನಗರಗಳಲ್ಲೂ ಕಾಣಬಹುದು. ನಗರದ ಬೀದಿ ಬಯಲುಗಳಲ್ಲಿ ಹಳ್ಳಿ ಕಾಣಿಸುತ್ತದೆ. ದೊಂಬರಾಟ, ಹಾವಾಡಿಗರ ಆಟ, ಕೊರವಂಜಿ, ಕೊಂಡ ಮಾಮ, ಕರಡಿಕುಣಿತ, ಕೋತಿಯಾಟ - ಮುಂತಾದ ಅನೇಕ ಜನಪದ ವೃತ್ತಿ ಕಲೆಗಳು ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕಾಣಿಸುತ್ತವೆ. ಮೂಲತಃ ಇವು ಹಳ್ಳಿಗಳಿಗೆ ಸೇರಿದ ವೃತ್ತಿಗಳು ಅಲೆಮಾರಿ ಜೀವನ ಶೈಲಿಯ ಭಾಗಗಳು. ಇಂದು ಹಳ್ಳಿಗಳನ್ನು ಹಾದು ಅನಿವಾರ್ಯವಾಗಿ ನಗರದ ಬೀದಿ-ಬಯಲುಗಳಿಗೆ ಕಾಲಿಟ್ಟಿವೆ. ಆಧುನಿಕ ಮನರಂಜನೆಯ ರೂಪಗಳು ನಗರದಲ್ಲಿ ದಟ್ಟವಾಗಿರುವಾಗ ದೊಂಬರಾಟ, ಕೋತಿಯಾಟ, ಕರಡಿ ಕುಣಿತ, ಹಾವಿನಾಟಗಳೂ ಜೀವನೋಪಾಯದ ಸಲುವಾಗಿ 'ಮನರಂಜನೆ ಕೊಡುತ್ತಿವೆ' ಯಂತ್ರ ನಾಗರಿಕತೆ, ವೈಜ್ಞಾನಿಕತೆಗಳು ಹೊರಗೆ ಅಬ್ಬರಿಸುತ್ತಿರುವಾಗ ಕೊರವಂಜಿ, ಕೊಂಡಮಾಮಗಳು ಸಣ್ಣನೆ ದನಿ ಮಾಡುತ್ತ ಮನಸ್ಸು ಮೀಟುತ್ತವೆ."[೧೫]

ನಗರ ಜಾನಪದ ಕಲೆಗಳನ್ನು ಮುಖ್ಯವಾಗಿ ಕೆಳಕಂಡಂತೆ ವಿಭಾಗ ಮಾಡಿಕೊಳ್ಳಲಾಗಿದೆ.

೨.೨.೧. ನಗರ ಜಾನಪದ ಚಿತ್ರಕಲೆಗಳು ಮತ್ತು ಕರಕುಶಲ ಕಲೆಗಳು

೨.೨.೨. ನಗರ ಜಾನಪದ ಆಟಗಳು

೨.೨.೧. ನಗರ ಜಾನಪದ ಚಿತ್ರಕಲೆಗಳು ಮತ್ತು ಕುಶಲಕಲೆಗಳು

ಈ ಕಲೆಯು ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ. ನಮ್ಮ ಮನೆಗಳಲ್ಲಿ ನಿತ್ಯ ಬಳಸುವ ಸಾಮಗ್ರಿಗಳು ಹಬ್ಬಹುಣ್ಣಿಮೆಗಳಲ್ಲಿ, ಸಡಗರದ ದಿನಗಳಲ್ಲಿ ಉತ್ಸವ ಹಾಗೂ ವಿಧಿವಿಧಾನಗಳಲ್ಲಿ ಬಳಸುವ ವಿಶೇಷ ವಸ್ತುಗಳು. "ನಮ್ಮ ಜನರ ಕರಕುಶಲ ಕಲೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ನೂರಾರು ಸಾವಿರಾರು ವರ್ಷಗಳಿಂದ ಸಂಸ್ಕೃತಿ, ಸಂಪ್ರದಾಯ ಬೆಳವಣಿಗೆಯ ಜೊತೆಗೆ ಬೆಳೆದು ಬಂದದ್ದನ್ನು ನಾವು ಗಮನಿಸಬಹುದಾಗಿದೆ. ನಿತ್ಯ ಬಳಕೆಯ ವಾಟಿಲೋಟ ತಂಬಿಗೆ (ಚರಗಿ) ತಟ್ಟೆ (ಗಂಗಾಳ) ಮುಂತಾದವುಗಳು ಅನೇಕ ಆಕಾರಗಳನ್ನು ಕಂಡಿದ್ದರೂ ಅವು ಪ್ರಯೋಜಕ ಸುಂದರ ರೂಪಗಳನ್ನು ಪಡೆದಿವೆ. ಮಣ್ಣಿನಿಂದ ಲೋಹದ ಬಳಕೆಯವರೆಗೂ ಆಗಿರುವ ಬೆಳವಣಿಗೆಯಲ್ಲಿ ಕಲಾತ್ಮಕತೆಯನ್ನು ನಾವು ಕಾಣುತ್ತೇವೆ. ನಿತ್ಯ ಬಳಸುವ ಬಟ್ಟೆಗಳು, ಮೈಮೇಲೆ ಧರಿಸುವ ಉಡುಪುಗಳಾಗಿರಬಹುದು, ಹಾಸುವ, ಹೊದಿಯುವ ಹಾಗೂ ಗೃಹಾಲಂಕಾರಿಕ ಬಟ್ಟೆಗಳಾಗಿರಬಹುದು ನೇಯ್ಗೆಯಲ್ಲಿ ಹಾಗೂ ಬಣ್ಣದ ಅಚ್ಚುಗಳಲ್ಲಿ ಬೆರಗುಗೊಳಿಸುವ ಕಲಾಕೌಶಲ್ಯವನ್ನು ನಾವು ನೋಡುತ್ತೇವೆ. ಈ ಕಲಾತ್ಮಕ ಜಾನಪದ ವಸ್ತುಗಳು ಬೇರೆ ಬೇರೆ ಭಾಗಗಳಲ್ಲಿ ಅವರವರ ಭೌಗೋಳಿಕ ಹಾಗೂ ಸಾಂಸ್ಕೃತಿಕ, ಸಾಮಾಜಿಕ ಪರಿಸರಗಳಲ್ಲಿ ಶೈಲಿಗಳ ವೈವಿಧ್ಯತೆಯನ್ನು ಪಡೆದಿವೆ. ಜಾನಪದ ಕಲೆಯು ಕಾಲವನ್ನು ಮೀರಿದ ಸತ್ಯವನ್ನು ಹೊಂದಿರುವುದರಿಂದ ನೂರಾರು, ಸಾವಿರಾರು ವರ್ಷಗಳ ನಂತರವೂ

[illegible]

[illegible]

[illegible]

ಇಂದು ಜನ ಆತ್ಮೀಯತೆಯಿಂದ, ಮಾನಸಿಕ ಸಮಾಧಾನದಿಂದ, ನಂಬಿಕೆಯಿಂದ, ಅದೇ ಭಾವನಾತ್ಮಕತೆಯಿಂದ ಬೆಳೆಸಿಕೊಂಡು ಬಂದಿದ್ದಾರೆ. ಅದು ಜನಜೀವನದ ಒಂದು ಅಗತ್ಯತೆ, ಅವಶ್ಯಕತೆ ಹಾಗೂ ಮಾನಸಿಕ ಅನಿವಾರ್ಯ ಕೂಡ ಹೌದು."[೧೬]

ಜನಪದ ಚಿತ್ರಕಲೆ ಆದಿಮಾನವನಷ್ಟು ಹಳೆಯದು. ಎದೆಯಲ್ಲಿ ಹುದಗಿದ ಕಲೆಯನ್ನು ಅದು ಬಿಟ್ಟುಕೊಳ್ಳಲಾರದ ಮನುಷ್ಯ ತನ್ನ ಪರಿಸರದಲ್ಲೆಲ್ಲಾ ಚಿತ್ರಕಲೆಯನ್ನು ಅಭಿವ್ಯಕ್ತಿಸಿದ. ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದ ಅವನು ತನಗೆ ಅವಕಾಶ ಸಿಕ್ಕಾಗಲೆಲ್ಲಾ ಚಿತ್ರಗಳನ್ನು ಬಿಡಿಸುತ್ತಿದ್ದನೆಂಬುದಕ್ಕೆ ಅನೇಕ ಸಾಕ್ಷಿಗಳು ದೊರೆಯುತ್ತವೆ. "ಮನುಷ್ಯ ಮೊದಮೊದಲು ಕಲ್ಪನೆಯ ಚಿತ್ರಗಳಿಗಿಂತ, ತಾನು ದಿನವೂ ನೋಡುವ ಚಿತ್ರಗಳನ್ನು ಬಿಡಿಸಿದ. ಇಂದಿಗೂ ಅಷ್ಟೆ ಜನಪದರು ತಾವು ತಮ್ಮ ಪರಿಸರದಲ್ಲಿ, ಪ್ರಕೃತಿಯಲ್ಲಿ ನೋಡುವ ವಸ್ತು, ಪ್ರಾಣಿಗಳನ್ನು ತನ್ನ ಮನೆ-ಬಟ್ಟೆಗಳ ಮೇಲೆ ಚಿತ್ರಗಳನ್ನು ತೆಗೆಯುವುದರ ಮೂಲಕ ಅನುಕರಿಸುತ್ತಾರೆ."[೧೭] ಗ್ರಾಮೀಣ ಸಂಸ್ಕೃತಿ ಮೂಲದಿಂದ ಬಂದ ಚಿತ್ರಕಲೆ ನಗರಗಳ ಬೃಹತ್ ನಿರ್ಮಾಣದೊಂದಿಗೆ ತನ್ನ ಅಸ್ತಿತ್ವವನ್ನು ನಿರೂಪಿಸಿಕೊಳ್ಳತೊಡಗಿತು. ಭಿನ್ನ ಸಂಸ್ಕೃತಿಗಳ ಏಕೀಕರಣ ಪರದೆಯಲ್ಲೇ ಅವರ (ನಗರ ಜನಪದರು) ಅಭಿರುಚಿಗಳಿಗೆ ತಕ್ಕಂತೆ ಪರಂಪರೆಯೊಳಗಿಂದಲೇ ಹೆಚ್ಚು ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಇಂದು ಭಾರತೀಯ ಚಿತ್ರಕಲೆ ಮತ್ತು ಕುಶಲ ಕಲೆಗಳು ಜಾಗತೀಕರಣದ ಮಾರುಕಟ್ಟೆಯಲ್ಲಿ ತನ್ನದೇ ಆದ ಮಹತ್ವ ಸ್ಥಾನವನ್ನು ಗಳಿಸಿಕೊಳ್ಳತೊಡಗಿದೆ. ಆದರೆ ಜಾಗತೀಕರಣಕ್ಕೆ ಅಣಿಗೊಳಿಸುವ 'ಮನಸ್ಸು'ಗಳಿಗೆ ಕೊರತೆ ಇರುವುದರಿಂದ ಇದಕ್ಕೆ ಹೇಳಿಕೊಳ್ಳುವಂತಹ ಯಶಸ್ಸು ದಕ್ಕಿಲ್ಲವೆಂದೇ ಹೇಳಬೇಕು.

ಜನಪದ ಚಿತ್ರಕಲೆಗೂ ನಗರ ಸಂಸ್ಕೃತಿ ಜನಪದರಿಗೂ ಒಂದು ರೀತಿಯ ಅಂತರ್ ಸಂಬಂಧ ಏರ್ಪಟ್ಟಿರುತ್ತದೆ. ನಗರ ಸಂಸ್ಕೃತಿಯ ಬಹುಮುಖಿ ಒಳಪದರುಗಳನ್ನು, ಸೂಕ್ಷ್ಮವಾದ, ಒಳನೋಟಗಳನ್ನು ಅರ್ಥೈಸಿಕೊಳ್ಳಲು ಇದು ಸಹಾಯಕವಾಗುತ್ತದೆ. ನಗರ ಜನದರನ್ನು ಅಧ್ಯಯನ ಮಾಡುವಾಗ ಅವರ ಚಿತ್ರಕಲೆಯು ಸಹಾಯಕವಾಗಿ ಕೆಲಸ ಮಾಡುತ್ತದೆ. ಅಲ್ಲದೆ ಇವು ಬದುಕಿನ ವಿವಿಧ ಘಟ್ಟಗಳಲ್ಲಿ ಹೆಚ್ಚು ಅಭಿವ್ಯಕ್ತಿಗೊಳ್ಳುತ್ತವೆ. ಹುಟ್ಟು, ಸಾವು, ಮದುವೆ, ಹಬ್ಬ ಹರಿದಿನ ಮುಂತಾದ ಸಂದರ್ಭಗಳಲ್ಲಿ ಹೆಚ್ಚು ಪ್ರಕಟಗೊಳ್ಳುತ್ತಿರುತ್ತವೆ. ಇಲ್ಲಿ ಇವು ಸಾಂಪ್ರದಾಯಿಕ ತಳುಕಿನೊಂದಿಗೆ ಮನರಂಜನಾ ಕೂಟಗಳಾಗಿ ಏರ್ಪಟ್ಟಿರುತ್ತವೆ.

ನಗರಗಳಲ್ಲಿ ಮದುವೆಯ ಸಂದರ್ಭದಲ್ಲಿ ಮನೆಗಳು ವಿವಿಧ ರೀತಿಯಲ್ಲಿ ಅಲಂಕೃತಗೊಂಡಿರುತ್ತವೆ. ಪ್ಲಾಸ್ಟಿಕ್ ಅಥವಾ ಕಪ್ಪೆಚಿಪ್ಪಿನಿಂದ ಮಾಡಿದ ಇಲ್ಲವೇ ಭಿನ್ನ ಬಣ್ಣದ ದಾರದಿಂದ ಕೈಕೂಡಿಗೊಳಿಸಿದ ಬಾಗಿಲಿನ ತೋಳಪಟ್ಟಿಯ ಮೇಲೆ ಅಲಂಕೃತಗೊಂಡಿರುವ ಅಲಂಕೃತ ವಸ್ತುಗಳು, ಬಾಗಿಲಲ್ಲಿ ಅಡ್ಡಲಾಗಿ ಹಾಕಿರುವ ನಿಲುವುಗಳು, ಗೋಡೆಯ ಮೇಲೆ ವಿವಿಧ ಚಿತ್ತಾರಗಳಿಂದ ಬಣ್ಣ ಬಣ್ಣ ದಾರದಲ್ಲಿ ಕಸೂತಿಗೊಳಿಸದ ಪರಿಕರಗಳು, ಗೋಡೆಗಳ ಮೇಲೆ ಗೃಹಲಂಕಾರದ ಚಿತ್ರ ವಿನ್ಯಾಸಗಳನ್ನು ಬಿಡಿಸುವುದು.

[illegible]

[illegible]

[illegible]

[illegible]

ಬಾಗಿಲುಗಳಲ್ಲಿ ಸ್ವಾಗತ ಬಯಸುವ ರಮಣೀಯವಾದ ಚಿತ್ರಗಳು. ನೆಲದ ಮೇಲೆ ವಿವಿಧ ರೀತಿಯ ಚಿತ್ತಾರಗಳಿಂದ ಗೃಹಲಂಕಾರ ವಸ್ತುಗಳು - ಮರದ ಬೇರಿನಿಂದ ಹಾಗೂ ಟೊಂಗೆಗಳ ಆಕೃತಿಗಳ ತಕ್ಕಂತೆ ರೂಪಕೊಟ್ಟು ಅವುಗಳನ್ನು ಮನೆಯಲ್ಲಿ ಶೋಗಾಗಿ ಇಟ್ಟಿರುವುದು. ಒಬ್ಬೊಬ್ಬರ ಮನೆಗಳಲ್ಲೂ ಅವರವರ ವಯೋ ಅಭಿರುಚಿ ಸಂಸ್ಕೃತಿಗಳಿಗೆ ತಕ್ಕಂತೆ ವಿವಿಧ ರೀತಿಯ ಚಿತ್ರಪಟ್ಟಿಗಳನ್ನು, ಚಿತ್ರಕೃತಿಗಳನ್ನು ಹಾಕಿರುತ್ತಾರೆ. ಹಾಲ್‌ನಲ್ಲಿ ಸಾಮಾನ್ಯವಾಗಿ ಹಿರಿಯರ, ರಾಷ್ಟ್ರ ನಾಯಕರ, ಧೀಮಂತ ವ್ಯಕ್ತಿಗಳ ಚಿತ್ರಪಟಗಳಿದ್ದರೆ, ಗಂಡ ಹೆಂಡಿರ ರೂಂಗಳಲ್ಲಿ ಮಕ್ಕಳ ಇಲ್ಲವೆ ಕೌಟಂಬಿಕ ಚಿತ್ರಪಟಗಳನ್ನು ಕಾಣಬಹುದು. ಹುಡಗ ಅಥವಾ ಹುಡುಗಿಯರ ರೂಂಗಳಲ್ಲಿ ತಾವು ಇಷ್ಟಪಡುವ ಸಿನಿಮಾ ಅಥವಾ ಕ್ರೀಡೆಗಳ ನಾಯಕ ನಾಯಕಿಯರ ವಿವಿಧ ಭಂಗಿಗಳ ಚಿತ್ರಪಟಗಳನ್ನು ಕಾಣಬಹುದು.

ಮದುವೆಯ ಸಂದರ್ಭದಲ್ಲಿ ಕಳಸದ ಮೇಲೆ ಹಾಕುವ ಬಣ್ಣಬಣ್ಣದ ಮಣಿಗಳಿಂದ ಇಲ್ಲವೆ, ಬಣ್ಣ ಬಣ್ಣದ ದಾರದಿಂದ ಕಸೂತಿಯಿಂದ ಮಾಡಲ್ಪಟ್ಟ ಪರಿಕರ ಪಿಂಗಾಣಿ ಪ್ಲೇಟ್‌ಗಳು, ಗ್ಲಾಸ್‌ಗಳ ಮೇಲೆ ಬಿಡಿಸಿದ ಚಿತ್ತಾರಗಳು, ವಿವಿಧ ಆಕೃತಿಯ ಕುರ್ಚಿಗಳು, ಹೊಸ ಮನೆ ಕಟ್ಟುವಾಗ ರಾಕ್ಷಸ ಮುಖವುಳ್ಳ ಇಲ್ಲವೇ ಬೆದರು ಬೊಂಬೆಯನ್ನು ನೇತು ಹಾಕಿರುತ್ತಾರೆ. ಹಾಸಿಗೆ, ಹೊದಿಕೆಗಳ ಮೇಲೆ ಚಿತ್ರಕಲೆಯ ಚಿತ್ತಾರವಿರುವುದನ್ನು ಕಾಣಬಹುದು. ಬಿದಿರಿನಿಂದ ಮಾಡಿದ ಕುರ್ಚಿಗಳು, ನಾನಾ ಸಲಕರಣೆಗಳು, ಫೋಟೋಗಳ ಮುಂದೆ ಹಾಕುವ ಹಾರಗಳು ಇವೆಲ್ಲ ನಗರಗಳ ಪ್ರದೇಶದಲ್ಲಿ ಹೆಚ್ಚಾಗಿ ಕಾಣಬಹುದು.

ಈಗಲೂ ಸಹ ಕೆಲವು ಜಾನಪದ ವಿದ್ವಾಂಸರು ನಮ್ಮ ಜನಪದ ಕಲೆ ನಶಿಸಿ ಹೋಗುತ್ತದೆ ಎಂಬ ಆತಂಕದ ಸ್ಥಿತಿಯಲ್ಲಿ ಇದ್ದಾರೆ. ಆದರೆ ವಾಸ್ತವಿಕವಾಗಿ ನಗರ ಪ್ರದೇಶಗಳಲ್ಲಿ ಅಧ್ಯಯನ ಮಾಡಿದಾಗ, ಜನಪದ ಚಿತ್ರಕಲೆಯನ್ನು ನಗರ ಸಂಸ್ಕೃತಿಗೆ ತಕ್ಕಂತೆ ಅದರ ಸ್ವರೂಪದಲ್ಲಿ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ನಗರ ಜನಪದರ ಅಭಿರುಚಿಗೆ ತಕ್ಕಂತೆ ಮಾರ್ಪಾಡು ಆಗುತ್ತಿರುವುದು ಗಮನಿಸಿದರೆ ಇದು ಮರುಸೃಷ್ಟಿಗೊಳ್ಳುತ್ತಿದೆ ಎನಿಸದೆ ಇರದು. ಬೆಂಗಳೂರಿನಲ್ಲಿರುವ ಕೇಂಬ್ರಿಡ್ಜ್ ಬಡಾವಣೆಯಲ್ಲಿರುವ 'ಜೂಟ್ ಕಾಟೇಜ್'. ಇದೊಂದು ವಿಶೇಷ ಕರಕುಶಲ ವಸ್ತು ಮಳಿಗೆ. ಇಲ್ಲಿ ಸಂಪೂರ್ಣವಾಗಿ ಜಾನಪದ ಕಸೂತಿ ಕಲೆಗಳಿಂದ ತಂತ್ರಜ್ಞಾನಗಳನ್ನು ಬಳಸಿಕೊಂಡು ನಗರ ಮನಸ್ಸುಗಳಿಗೆ ತಕ್ಕಂತೆ ವೈವಿಧ್ಯ ಗೃಹಾಲಂಕಾರ ವಸ್ತುಗಳು ತಯಾರಾಗುತ್ತಿವೆ. ಇಲ್ಲಿ ತಯಾರಾಗುತ್ತಿರುವ ಪ್ರತಿಯೊಂದು ವಸ್ತುವಿನಲ್ಲೂ ಜನಪದೀಯ ಶೈಲಿಯನ್ನು ಕಾಣಬಹುದು. ಇದರ ವೈಶಿಷ್ಟ್ಯವೆಂದರೆ ಪ್ರತಿಯೊಂದು ವಸ್ತುವನ್ನು ಜೂಟ್ (ನಾರು) ನಿಂದಲೇ ತಯಾರಿಸುತ್ತಾರೆ. ನಗರೀಕರಣದಿಂದ ಜಾನಪದ ಕಲೆಗಳು ನಾಶವಾಗುತ್ತದೆ ಎಂಬುದಕ್ಕೆ ಇದು ಅಪವಾದದಂತಿದೆ. ಇದನ್ನು ನಡೆಸುತ್ತಿರುವ ಮುಖ್ಯಸ್ಥೆ ನಸರೀನ್ ಖಾನ್ ಅವರು ಹೇಳುವುದು ಏನೆಂದರೆ ವಿದೇಶಿ ಕರಕುಶಲ ವಸ್ತುಗಳಿಗಿಂತ ಸ್ವದೇಶಿ ಜನಪದೀಯ ವಸ್ತುಗಳಿಗೆ ಬೇಡಿಕೆ ಜಾಸ್ತಿ. ಇಲ್ಲಿ ತಯಾರಾಗುವ ನೀಳ ಮೂಗಿನ ಮಾನವ ಭಾವ ಬಿಂಬಿತ ಯಕ್ಷಗಾನದ ಮುಖವಾಡಗಳು ತುಂಬಾ ಕೌಶಲ್ಯತೆಯಿಂದ ಕೂಡಿದ ವಸ್ತುಗಳಾಗಿವೆ. ಜೂಟ್ ಕಾಟೇಜ್‌ನಲ್ಲಿ ಮನೆಯನ್ನು

[illegible]

ಸೌಂದರ್ಯವಾಗಿ ಇಡಲು ಬಗೆಬಗೆಯ ವಿನ್ಯಾಸ, ಮೋಹಕ ಬಣ್ಣ, ಕಣ್ಣಿಗೆ ಸೆಳೆಯುವ ಕರಕುಶಲ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಇಲ್ಲಿ ಕಳೆದ ಹಲವಾರು ವರ್ಷದಿಂದಲೂ ಇದೇ ವ್ಯಾಪಾರವನ್ನು ಮಾಡಿಕೊಂಡಿರುವ ಇವರು ಋತುಮಾನಗಳಿಗೆ ತಕ್ಕಂತೆ ವಿವಿಧ ಕರಕುಶಲ ವಸ್ತುಗಳನ್ನು ವಿನ್ಯಾಸಗೊಳಿಸುತ್ತಿರುತ್ತಾರೆ. ಇವುಗಳ ಮೂಲ ತಯಾರಿಕೆ ಹಳ್ಳಿಯ ಹೆಂಗಸರದ್ದು. ಇವರಿಗೆ ಒಂದೊಂದು ವಸ್ತುವಿನ ಬಗ್ಗೆಯೂ ಒಂದೊಂದರಲ್ಲಿ ತರಬೇತಿಗೊಳಿಸಿ ನಂತರ ಅವರಿಂದ ಮಾರುಕಟ್ಟೆಯಲ್ಲಿ ಬೇಡಿಕೆಯುಳ್ಳ ವಸ್ತುಗಳನ್ನು ತಯಾರು ಮಾಡಲು ಅನುಮತಿ ಕೊಡುತ್ತಾರೆ.

"ಜೂಟ್ ಕಾಟೇಜ್‌ನಲ್ಲಿ ಬಗೆಬಗೆಯ ಆಕರ್ಷಣೀಯ ಕರಕುಶಲ ವಸ್ತುಗಳು ಮತ್ತು ಜನಪದೀಯ ಸೊಗಡುಳ್ಳ ಚಿತ್ರಕಲೆಗಳ ವಸ್ತುಗಳು ತಯಾರಾಗುತ್ತವೆ. ಕುಸರಿಕಲೆಯಿಂದ ಗಮನ ಸೆಳೆಯುವ ನಾರಿನಿಂದಲೇ ತಯಾರಾದ ಚಾಪೆ, ಕೈಚೀಲ, ದಿಂಬಿನ ಹೊದಿಕೆ, ಲೋಲಾಕು, ವ್ಯಾನಿಟಿ ಬ್ಯಾಗ್, ಚಪ್ಪಲಿ ಮುಂತಾದ ವಸ್ತುಗಳ ಮಕ್ಕಳನ್ನು ಹಿರಿಯರನ್ನು ಆಕರ್ಷಿಸುವ ವಿವಿಧ ರೀತಿಯ ಮುಖವಾಡಗಳು ಬಣ್ಣ ಬಣ್ಣದ ಕುಶನ್‌ಕವರ್‌ಗಳು, ಬ್ರಿಫ್‌ಕೇಸುಗಳು ಇವೆಲ್ಲ ಅಪ್ಪಟ ಜನಪದೀಯ ರೀತಿಯಲ್ಲಿ ತಯಾರಾಗುತ್ತಿರುವುದು ಜನಪದ ಕುಶಲಕಲೆಗಳಿಗೆ ಮರುಜೀವ ಬಂದಂತೆಯೇ ಸರಿ. ನಗರಗಳಲ್ಲಿ ವಾಸಿಸುವರು ನಗರೀಕರಣಕ್ಕೆ ಬೇಸತ್ತು ಪರಿಸರ ನಿರ್ಮಿತ ಪರಿಕರಗಳ ಕಡೆ ಹೆಚ್ಚು ಆಕರ್ಷಿತರಾಗುತ್ತಾರೆ. ಆತ್ಮೀಯ ಹುಟ್ಟು ಹಬ್ಬಕ್ಕೆ ಉಡುಗೊರೆ ಕೊಡುವ ಸಲುವಾಗಿ ಕರಕುಶಲ ವಸ್ತುಗಳನ್ನು ಹುಡುಕುತ್ತ ಹೋದೆ. ಭಾರತೀಯ ಆಯುರ್ವೇದ ಔಷದೀಯ ಸಸ್ಯ 'ಲಾವಂಚದ' ಬೇರುಗಳು ದೊರೆತವು. ಅಂದರೆ ಬರಿಯ ಬೇರುಗಳಲ್ಲಿ ಬೇರಿನಿಂದ ಮಾಡಿದ ವೈವಿಧ್ಯಮಯ ವಸ್ತುಗಳು ಸಿಕ್ಕವು. ಅವುಗಳ ವಿಶೇಷತೆ ತಿಳಿದಾಗ ಖುಷಿಯಾಯಿತು. ಕಾರವಾರದ ಸುತ್ತಮುತ್ತಲಿನ ಗ್ರಾಮೀಣ ಮಹಿಳೆಯರು ಲಾಂವಚದ ಬೇರಿನಿಂದ ಹಲವಾರು ಉತ್ಪನ್ನಗಳನ್ನು ತಯಾರಿಸುತ್ತಾರೆ. ಸ್ವಸಹಾಯ ಸಂಘಗಳ ಮೂಲಕ ಈ ಉತ್ಪನ್ನಗಳು ಮಾರುಕಟ್ಟೆ ತಲುಪುತ್ತವೆ. ಉತ್ಪನ್ನಗಳಿಗಾಗಿ 'ಲಾವಂಚ' ಬೇರು ಮುಖ್ಯವಾಗಿ ಬೇಕಾಗಿರುವುದರಿಂದ ರೈತರಿಗೆ ಮುಂಚಿತವಾಗಿ ಬೆಳೆಯುವಂತೆ ತಿಳಿಸುತ್ತಾರೆ. ಲಾವಂಚದ ಬೇರನ್ನು ವಿಧವಿಧವಾಗಿ ಸಂಸ್ಕರಿಸಲಾಗುತ್ತದೆ. ಬೇರನ್ನು ಭಟ್ಟಿ ಇಳಿಸುವ ಮುಖಾಂತರ ಲಾವಂಚದ ಎಣ್ಣೆ ತೆಗೆಯುತ್ತಾರೆ. ಈ ಎಣ್ಣೆ ವಿದೇಶಗಳಿಗೂ ರಫ್ತಾಗುತ್ತದೆ. ಹೊರಬರುವ ಒಣಗಿದ ಬೇರಿನಿಂದ ಹಲವಾರು ದಿನ ಬಳಕೆಯ ಮತ್ತು ಕರಕುಶಲ ವಸ್ತುಗಳನ್ನು ತಯಾರಿಸುತ್ತಾರೆ. ನೂರಕ್ಕೂ ಮೀರಿದ ಸಂಸಾರಗಳು ಲಾವಂಚದ ಉತ್ಪನ್ನಗಳ ತಯಾರಿಕೆ ಅಡಿಯಲ್ಲಿ ಬದುಕುತ್ತವೆ. ಲಾವಂಚದ ಬೇರಿನ ಉತ್ಪನ್ನಗಳಾಗಿ ಮೂಳೆ ನೋವು ಗುಣವಾಗಲು ಉತ್ತಮ ಚಾಪೆಗಳು, ಕಾರಿನ ಸೀಟಿನ ಮೇಲೆ ಹಾಕುವ ಹೊದಿಕೆ, ತಲೆಹೊಟ್ಟು ಮತ್ತು ನೆತ್ತಿ ತಂಪಾಗಿಸಲು, ಟೋಪಿಗಳು ಕುರ್ಚಿಗಳ ಮೇಲಿನ ಹಾಸುಗಳು ಕಾಲು ಒಡೆಯುವುದನ್ನು ನಿವಾರಿಸಲು ವೈವಿಧ್ಯಮಯ ಹಾಗೂ ಕಲಾತ್ಮಕ ಚಪ್ಪಲಿಗಳು, ಬೀಸಣಿಕೆಗಳು, ಪತ್ರಗಳಿಡುವ ಪೆಟ್ಟಿಗೆ, ಹೆಣ್ಣು ಮಕ್ಕಳ ಪರ್ಸ್‌ಗಳು, ಕೂದಲಿಗೆ ಹಾಕುವ ಕ್ಲಿಪ್‌ಗಳು, ಗೃಹ ಅಲಂಕಾರಿಕ ವಸ್ತುಗಳು ಮತ್ತು ಒಡವೆಗಳನ್ನಿಡುವ ಪೆಟ್ಟಿಗೆಗಳು ಸಿಗುತ್ತವೆ. ಇದರೊಂದಿಗೆ ಗಣಪತಿಯ ವಿಗ್ರಹವೂ ದೊರೆಯುತ್ತದೆ."[೧೮] ಹೀಗೆ ಹಳ್ಳಿ ಮೂಲದ ಜಾನಪದ

ಸೊಗಡನ್ನು ಪಡೆದ ಲಾವಂಚದ ಬೇರುಗಳನ್ನು ಪಟ್ಟಣಿಗರು ಪರಂಪರೆಯ ಜ್ಞಾನದೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ನಗರ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯ ವಸ್ತುವನ್ನಾಗಿ ಮಾಡುವುದು ಅದ್ಭುತವೆನಿಸುತ್ತದೆ. ಇಂದು ನಮ್ಮ ಜನಪದ ಕುಶಲಕಲೆಗಳನ್ನು ಜಾಗತೀಕರಣಕ್ಕೆ ಅಣಿಗೊಳಿಸುವ ತಂತ್ರಜ್ಞಾನ ನಮಗೆ ಬೇಕಾಗಿದೆ. ಆಗ ಮಾತ್ರ ಯಾವುದೇ ಜನಪದರಿಂದ ಬಂದಂತಹ ಕಲೆಗಳು ಹೆಚ್ಚು ಪ್ರಸ್ತುತವಾಗುತ್ತವೆ.

ಮಲೆನಾಡಿನಲ್ಲಿ ಸಿಗುವ ಹಳೆಯದಾದ ಮರದ ಬೇರು - ತೊಗಟೆಗಳನ್ನು ತಂದು ಅವುಗಳಲ್ಲಿ ಯಾವುದಾದರೂ 'ಆಕಾರ'ವೊಂದನ್ನು ಹುಡುಕಿ ಇಲ್ಲವೇ ವಕ್ರಾಕೃತಿಯಾದರೂ ಸರಿ ಅದಕ್ಕೆ ಅಂತಿಮ ರೂಪಕೊಟ್ಟು ಪಾಲಿಶ್ ಎಣ್ಣೆಯನ್ನು ಹಾಕಿ, ಅಲಂಕೃತಗೊಳಿಸಿ, ಅವುಗಳನ್ನು ಜನರ ಕಣ್ಣಿಗೆ ಆಕರ್ಷಿಸುವ ಚೈತನ್ಯ ತುಂಬಿ ಮಾರುಕಟ್ಟೆಯಲ್ಲಿ, ಫುಟ್‌ಬಾತ್‌ಗಳಲ್ಲಿ ಮಾರುವುದನ್ನು ನಗರಗಳಲ್ಲಿ ಕಾಣಬಹುದು. ಈ ಅಂಶಗಳನ್ನು ಗಮನಿಸಿದಾಗ ಜಾನಪದ ಕಲೆ ಎಂಬುದು ನಗರ ಪ್ರದೇಶಗಳಲ್ಲಿ ವೈವಿಧ್ಯಮಯ ಬದಲಾವಣೆಯೊಂದಿಗೆ ಇನ್ನು ಹೆಚ್ಚು ಜೀವಂತವಾಗಿರುವುದನ್ನು ಕಾಣಬಹುದು.

ಜಾನಪದ ಚಿತ್ರಕಲೆಯಾದ ಕರಕುಶಲ ವಸ್ತುಗಳಿಗೆ ನಮ್ಮ ಭಾರತ ಸರ್ಕಾರವು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ. ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ 'ಅಖಿಲ ಭಾರತ ಕರಕುಶಲ ವಸ್ತುಗಳ ಸಪ್ತಾಹ' ಆಚರಿಸುತ್ತಿದೆ. ಕರಕುಶಲ ನಿಗಮಗಳು, ಕೇಂದ್ರ ಕರಕುಶಲ ನಿಗಮಗಳು, ಸಹಕಾರಿ, ಅಫೆಕ್ಸ್, ಸೊಸೈಟಿಗಳು, ಎನ್.ಜಿ.ಓ.ಗಳು ಇವಲ್ಲದೆ ಸ್ವತಂತ್ರವಾಗಿ ವ್ಯಾಪಾರದ ದೃಷ್ಟಿಯಿಂದ ಹಲವಾರು ಸಂಘ ಸಂಸ್ಥೆಗಳು ಈ ಕಲೆಯನ್ನು ಜೀವಂತವಾಗಿ ಇಡುವುದಲ್ಲದೆ ಅಭಿವೃದ್ಧಿ ಪಥಕ್ಕೆ ಕೊಂಡೊಯ್ಯಲು ಸಹಕಾರಿಯಾಗಿವೆ. ಮಂಗಳೂರು, ಮೈಸೂರು, ತಿರುಪತಿ, ವಿಜಯವಾಡ ಸೇರಿದಂತೆ ದಕ್ಷಿಣ ಭಾರತದಲ್ಲಿ ಒಟ್ಟು ೮ ಕರಕುಶಲ ಕೈಗಾರಿಕೆಯನ್ನು ಸ್ಥಾಪಿಸಲಾಗಿದೆ. ಕರಕುಶಲ ವಸ್ತುಗಳ ಅಭಿವೃದ್ಧಿ ಆಯುಕ್ತರ ಘಟಕ, ತರಬೇತಿ, ವಿನ್ಯಾಸ ಮೇಲ್ದರ್ಜೆ, ಆಧುನಿಕ ಉಪಕರಣಗಳ ತಂತ್ರಜ್ಞಾನ, ಮಾರಾಟ ವ್ಯವಸ್ಥೆ, ಪ್ರದರ್ಶನ ರಫ್ತು ಪ್ರೋತ್ಸಾಹ ಮುಂತಾದ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ರಾಜ್ಯದಲ್ಲಿ ಸುಮಾರು ೧.೫ ಲಕ್ಷ ಮಂದಿ ಕರಕುಶಲ ಕೈಗಾರಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ತ್ರೀ ಸ್ವಶಕ್ತಿ ಗುಂಪು, ಕರಕುಶಲಗಾರರ ಗುಂಪುಗಳು, ಮಹಿಳಾ ಉದ್ಯಮಿಗಳನ್ನು ಜನಪದೀಯ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಹೆಚ್ಚು ತೊಡಗಿಸುತ್ತಿದ್ದಾರೆ. ಕರಕುಶಲ ವಸ್ತುಗಳ ರಫ್ತು ಕಳೆದ ಎರಡು ವರ್ಷಗಳಲ್ಲಿ ೭೦೭೫ ಕೋಟಿ ರೂಪಾಯಿಗಳಿಂದ ೮೦೬೦ ಕೋಟಿ ರೂಪಾಯಿಗೆ ಏರಿದೆ. ದಿನೇದಿನೇ ಬೇಡಿಕೆ ಹೆಚ್ಚುತ್ತಿದ್ದು ಅದನ್ನು ಪೂರೈಸುವ ಬಗ್ಗೆ ಅಭಿವೃದ್ಧಿ ಆಯುಕ್ತರು ಯೋಚಿಸಿದ್ದಾರೆ. ಇವುಗಳ ಬಹುಬೇಡಿಕೆಯು ನಗರಗಳಲ್ಲಿ ಇರುವುದರಿಂದ ಅವರ ಮನಸ್ಥಿತಿಗಳಿಗೆ ಆಕರ್ಷಣೀಯವಾಗಿ ವಸ್ತುಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ.

ಹೀಗೆ ಜನಪದ ಚಿತ್ರಕಲೆಗಳು ಮತ್ತು ಕರಕುಶಲ ವಸ್ತುಗಳು ನಗರಗಳಲ್ಲಿ ವಿವಿಧ ರೀತಿಯಲ್ಲಿ ರಚನೆಗೊಳ್ಳುತ್ತಿರುತ್ತವೆ. ಈ ರೀತಿಯ ಕರಕುಶಲ ವಸ್ತುಗಳಿಗೂ ಜನಪದೀಯ ಕಲೆಗಳಿಗೂ ಪರಂಪರೆಯ

ಪಳಿಯುಳಿಕೆ ಸಂಬಂಧ ಇದೆ. ಇದನ್ನು ಕಾಣುವ ಹಾಗೆ ಸ್ವೀಕರಿಸುವ ಮನಸ್ಸು ಬೇಕು. ಸಾಮಾನ್ಯವಾಗಿ ನಗರಗಳಲ್ಲಿ ಜನಪದರು ಇಂತಹ ಕಲೆಗಳನ್ನು ಸಾಂಪ್ರದಾಯಿಕ ಜ್ಞಾನವಾಗಿ ಸ್ವೀಕರಿಸಿದ್ದಾರೆ. ಸೌಂದರ್ಯ ಪ್ರಜ್ಞೆ ಮತ್ತು ಮನಮೋಹಕ ವಸ್ತುವಾಗಿ ಇವುಗಳನ್ನು ಬಳಸುವುದು ಹೆಚ್ಚು.

ಹಚ್ಚೆ

"ಮಾನವರ ಎಲ್ಲಾ ಕಲಾಪ್ರಕಾರಗಳಿಗೂ ಜಾನಪದ ಪ್ರವೃತ್ತಿಗಳೇ ಮುಖ್ಯವೆನಿಸಿದೆ. ಅಲಂಕರಣ ಪ್ರಿಯನಾದ ಮಾನವನು ಪ್ರಕೃತಿಯ ಚೆಲುವನ್ನು ಕಂಡು ಹಿಗ್ಗಿದ್ದಾರೆ. ತಾವೂ ಅಲಂಕರಿಸಿಕೊಂಡು ಸುತ್ತ - ಮುತ್ತಲನ್ನು ಸುಂದರವಾಗಿ ಕಾಣುವಂತೆ ಮಾಡುವುದು ಆವರ ಸಹಜ ಸ್ವಭಾವವೆನಿಸಿದೆ. ಹಚ್ಚೆ ಹಾಕಿಸಿಕೊಳ್ಳುವುದು ಅಂಗಳವನ್ನು ರಂಗೋಲಿಯಿಂದ ಶೃಂಗರಿಸುವುದು. ತಮ್ಮ ಉಡುಪನ್ನು ಹೆಚ್ಚು ಹೆಚ್ಚು ಆಕರ್ಷಕಗೊಳ್ಳುವಂತೆ ಕಸೂತಿ ಕಲೆಯಿಂದ ಅಂದಗೊಳಿಸುವುದು. ಇವೆಲ್ಲಾ ಅಲಂಕಾರಕ್ಕೂ ಕಲೆಗೂ ಮನುಷ್ಯರಿಗೂ ತೀರಾ ನಂಟು ಎಂಬುದನ್ನು ಸಿದ್ದಪಡಿಸುತ್ತದೆ."[೧೯]

ಪರಂಪರಾಗತವಾದ ಈ ಕಲೆ ಇಂದಿಗೂ ನಮ್ಮ ಜನಪದರಲ್ಲಿ ಜೀವಂತವಾಗಿದೆ. ಈ ಕಲೆ ಎಲ್ಲರ ಮನವನ್ನು ಸೆಳೆಯುತ್ತದೆ. "ಬಹುಶಃ ಆದಿಮಾನವ ತಾನೂ. ಇನ್ನಷ್ಟು ಸುಂದರವಾಗಿ ಕಾಣಿಸಿಕೊಳ್ಳಬೇಕೆಂದು ಹಂಬಲದಿಂದ ತನ್ನ ಮೈ ಮೇಲೆ ಸುಂದರವಾದ ಚಿತ್ತಾರಗಳನ್ನು ಬರೆಯಿಸಿಕೊಂಡಿರಬೇಕೆಂದು ತೋರುತ್ತದೆ. ಈ ಕಲೆ ತುಂಬಾ ಪ್ರಾಚೀನ ಕಾಲದಿಂದಲೂ ನಮ್ಮ ಜನಪದರಲ್ಲಿ ತುಂಬಾ ಆಕರ್ಷಕ ಹಾಗೂ ವ್ಯಾಪಕವಾಗಿ ಬೆಳೆದುಕೊಂಡು ಬಂದಿದೆ."[೨೦] ಹಚ್ಚೆಯು ಮನುಷ್ಯರ ಸೌಂದರ್ಯ ಪ್ರಜ್ಞೆಯಿಂದಲೇ ಮೂಡಿರುವಂಥದು. ಇದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದು ಮೌಖಿ ಕರೆಯಲ್ಪಡುತ್ತದೆ. ಇದರ ಹುಟ್ಟನ್ನು ಸಮಾಜದಿಂದಲೂ ಗುರುತಿಸಬಹುದು. ಹಚ್ಚೆ ಮೂಲತಃ ಸೌಂದರ್ಯ ಪ್ರತೀಕವಾಗಿದೆ. ನಂತರ ಧಾರ್ಮಿಕ ಸಂಕೇತವೂ; ಲೈಂಗಿಕ ಕರೆಯೂ ಆಗಿದೆ ಎಂದು ವಿದ್ವಾಂಸರು ಗುರುತಿಸುತ್ತಾರೆ.

ಹಚ್ಚೆ ಎಲ್ಲ ಧರ್ಮಗಳಲ್ಲೂ, ಎಲ್ಲಾ ಸಮಾಜಗಳಲ್ಲೂ ಕಂಡುಬರುವ ಸಾಮಾನ್ಯ ಕಲೆ. ಆದರೆ ಅದರ ಸಂಕೇತ ಮತ್ತು ಅರ್ಥ ಬೇರೆ ಬೇರೆ ತೆರನಾಗಿರುತ್ತದೆ. ನಗರ ಜನಪದರಲ್ಲಿ ಈ ಕಲೆಯ ಅರ್ಥ ಮತ್ತು ಸಂಪ್ರದಾಯ ತಿಳಿಯದೇ ಇರಬಹುದು. ಆದರೆ ಅದು ವಿಶೇಷವಾಗಿ ಹಲವಾರು ಬದಲಾವಣೆಯೊಂದಿಗೆ ನಗರ ಜನಪದರಲ್ಲಿ ಚಾಲ್ತಿಯಲ್ಲಿದೆ. ಹಿಂದೂ ಸಂಪ್ರದಾಯಕ್ಕೆ ಸೇರಿದ ಪ್ರತಿಯೊಬ್ಬ ಹೆಣ್ಣುಮಗಳ ಹಣೆಯಲ್ಲಿ ದೃಷ್ಟಿ ಬೊಟ್ಟು ಇರುವುದನ್ನು ಕಾಣಬಹುದು.

ಕ್ರಿಶ್ಚಿಯನ್ನರು ಸಾಮಾನ್ಯವಾಗಿ ಕೈಗಳ ಮೇಲೆ ಶಿಲುಬೆಯ ಗುರುತನ್ನು ಹಚ್ಚೆ ಹಾಕಿಸಿಕೊಂಡಿರುತ್ತಾರೆ. ಬಾಡಿಬಿಲ್ಡರ್‌ಗಳು ತಮ್ಮ ಅಜಾನುಬಾಹುಗಳ ಮೇಲೆ ವಿವಿಧ ರೀತಿಯ ಸಾಹಸಗಾಥೆಯ ಸಂಕೇತಗಳನ್ನು ಹಾವು, ಕೋಬ್ರ ಮುಂತಾದ ಚಿತ್ರಗಳನ್ನು ಹಾಕಿಸಿಕೊಂಡಿರುತ್ತಾರೆ. ಇತ್ತೀಚೆಗೆ ಬೂಮರ್‌ನಲ್ಲಿ ವಿವಿಧ ರೀತಿ ಚಿತ್ರಗಳನ್ನೊಳಗೊಂಡ ಅಂಟು ಚಿತ್ರ ಬರುತ್ತದೆ. ಅದನ್ನು ತೆಗೆದುಕೊಂಡು ಕೈ, ಮೈ ಮೇಲೆ

ಹಚ್ಚಿಕೊಳ್ಳುತ್ತಾರೆ. ಈ ಪ್ರಕ್ರಿಯೆ ಎಲ್.ಕೆ.ಜಿ, ಯು.ಕೆ.ಜಿ ಮಕ್ಕಳಿಂದ ಹಿಡಿದು ಕಾಲೇಜು ಹುಡುಗ ಹುಡುಗಿಯರೂ ಸಹ ಮೋಹಿತರಾಗಿರುತ್ತಾರೆ. ಇದೊಂದು ಹಚ್ಚೆಯ ಮುಂದುವರಿದ ಭಾಗವೆನ್ನಬಹುದು. ದೂರದರ್ಶನದಲ್ಲಿ ಬರುವ ಡಬ್ಲ್ಯೂಡಬ್ಲ್ಯೂಎಫ್‌ನಲ್ಲಿ ದಡೂತಿಯಾದ ಮನುಷ್ಯರು ತಮ್ಮ ದೇಹ ಎದೆ. ಹಣೆ, ಕೈಗಳು, ಭುಜಗಳ ಮೇಲೆ ಹಚ್ಚೆ ಹೊತ್ತಿಸಿಕೊಂಡಿರುತ್ತಾರೆ. ಕ್ರಿಕೆಟಿಗರು ಆಟವಾಡುವಾಗ ಮುಖದ ಮೇಲೆ ಲೇಪಿಸಿಕೊಳ್ಳುವ ಬಣ್ಣ ಸಹ ಹಚ್ಚೆ ಕಲೆಯ ಪ್ರತಿರೂಪವೇ. ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿ ಬುಜಗಳ ಮೇಲೆ, ಕೈಮೇಲೆ, ಬೆನ್ನಿನ ಮೇಲೆ ಹೊಲಿಸಿಕೊಳ್ಳುವ ರಾಷ್ಟ್ರಧ್ವಜದ ಗುರುತು ಹಚ್ಚೆಯ ಮುಂದಿನ ಹೆಜ್ಜೆಗಳೇ.

ಭಾರತದಲ್ಲಿ 'ಹಚ್ಚೆ'ಯು ಧರ್ಮ, ಅಲಂಕಾರ, ಜಾತಿ, ಸೌಭಾಗ್ಯ, ಸಂತಾನಪೇಕ್ಷೆ, ದೈವ ಮನೋಭಾವವಲ್ಲದೆ, ಇದು ಸೌಂದರ್ಯದ ಸಂಕೇತವು, ಲೈಂಗಿಕ ಪ್ರಚೋದನೆಯ ಕರೆಯೂ ಆಗಿರುತ್ತದೆ. ಇತ್ತೀಚೆಗೆ ಸಿನಿಮಾ ನಟನಟಿಯರು ತಮ್ಮ ಎದೆಯ ಮೇಲೆ, ಕೆನ್ನೆಯ ಮೇಲೆ, ಕೈತೋಳಿನ - ರಟ್ಟೆಯ ಮೇಲೆ, ಬೆನ್ನಿನ ಮೇಲೆ ಹಚ್ಚೆಯನ್ನು ಹಾಕಿಸಿಕೊಂಡಿರುತ್ತಾರೆ. ಈಗೀಗ ಕ್ಯಾಂಪಸ್‌ಗಳಲ್ಲಿ ಹುಡಗಿಯರು ಎದೆಯ ಮೇಲೆ ಲವ್ ಸಿಂಬಲ್ ಇಲ್ಲವೇ ಸುಳಿಸುತ್ತಿದ ಸರ್ಪ ಮುಂತಾದ ತಾತ್ಕಾಲಿಕ ಹಚ್ಚೆಯನ್ನು ಹಾಕಿಸಿಕೊಂಡಿರುತ್ತಾರೆ.

೨.೨.೨. ನಗರ ಜನಪದ ಆಟಗಳು

'ಬಾಲ್ಯಾವಸ್ಥೆ ಕ್ರೀಡಾಸಕ್ತಿ' ಎಂಬ ಮಾತು ನಿಜ. ಮಕ್ಕಳಲ್ಲಿ ಊಟಕ್ಕಿಂತಲೂ ಆಟದಲ್ಲಿನ ಆಸಕ್ತಿ ಹೆಚ್ಚಾಗಿರುತ್ತದೆ. ಕ್ರೀಡೆಗಳು ಮನಸ್ಸಿಗೆ ಮನರಂಜನೆ ನೀಡುವುದಲ್ಲದೆ, ದೇಹ ಮತ್ತು ಮನಸ್ಪೂರ್ವಕವಾಗಿ ಆರೋಗ್ಯಕಾರಿಯಾದವು. ಪಾಶ್ಚಿಮಾತ್ಯ ದೇಶಗಳಲ್ಲಿ ಜನಪದ ಆಟಗಳ ಅಧ್ಯಯನ ಗಂಭೀರವಾಗಿ ನಡೆಯುತ್ತಾ ಬಂದಿದೆ. ನಮ್ಮಲ್ಲಿ ಕೆಲವು ವಿದ್ವಾಂಸರು ಇತ್ತೀಚೆಗೆ ಜನಪದ ಆಟಗಳ ಬಗ್ಗೆ ಅಧ್ಯಯನ ನಡೆಸಿ ವಿಶ್ವವಿದ್ಯಾಲಯಗಳಿಗೆ ಮಹಾಪ್ರಬಂಧಗಳನ್ನು ಸಲ್ಲಿಸಿದ್ದಾರೆ. ಜನಪದ ಆಟಗಳನ್ನು ವಿವರಿಸುವಾಗ ಕೆಲವೊಂದನ್ನು ಜನಪದ ಆಟಗಳಿಂದ ಬೇರೆಯೇ ಆದ ನೆಲೆಯಲ್ಲಿ ನೋಡುತ್ತಾರೆ. ಇವುಗಳನ್ನು ಸಾಂಸ್ಥೀಕರಿಸಿದ (Institutionalized) ಆಟಗಳು ಎಂದು ವರ್ಗೀಕರಿಸುತ್ತಾರೆ. ಇವುಗಳನ್ನೇ ನಿಯಮಬದ್ಧ ಆಟಗಳು ಎಂದು ಕರೆಯುತ್ತಾರೆ. "ನಿಯಮಾನುಸಾರ ಆಟಗಳಿಗೂ ಜನಪದ ಆಟಗಳಿಗೂ ವ್ಯತ್ಯಾಸವಿದೆ. ವ್ಯವಸ್ಥಿತ ನಿಯಮಸಾರ ಆಟಗಳಿಗೆ ಲಕ್ಷಣಗಳಿರುವಂತೆ ಜನಪದ ಆಟಗಳಿಗೂ ತನ್ನದೇ ಆದ ಲಕ್ಷಣಗಳಿವೆ. ಪರಸ್ಪರ ಒಂದಕ್ಕೊಂದು ಲಕ್ಷಣ ಕೆಲವು ಹೋಲಿಕೆಗಳಿದ್ದು. ಕೆಲವೊಂದು ಅಂಶಗಳು ಭಿನ್ನವಾಗಿವೆ. (ಅರವಿಂದ ಮಾಲಗತ್ತಿ ೧೯೮೯) ಆದರೂ ಎಲ್ಲಾ ಆಟಗಳಿಗೂ ಮೂಲ ನೆಲೆ ಆಯಾ ಪ್ರಾದೇಶಿಕ ಜಾನಪದ ಆಟಗಳೆನ್ನಬಹುದು. 'ಜಾನಪದ ಆಟಗಳಿಗೆ ಅವುಗಳದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳಿವೆ. ಆಯಾ ಪ್ರದೇಶದ ಸಾಮಾಜಿಕ ರಚನೆ, ನಂಬಿಕೆ ಮತ್ತು ಆಚರಣೆಗಳೊಂದಿಗೆ ಈ ಆಟಗಳು ಅನ್ಯೋನ್ಯ ಸಂಬಂಧಗಳನ್ನು ಹೊಂದಿವೆ. ಆ ಪ್ರದೇಶದ ಜನರೊಂದಿಗೆ ಆ ಆಟಗಳು ಹೊಂದಿರುವ ಭಾವನಾತ್ಮಕ

ಸಂಬಂಧಗಳು, ಅವುಗಳ ಕಾರಣಗಳು, ಜನಪದರ ಮನಸ್ಸಿನ ಮೇಲೆ ಬೀರಿರುವ ಪರಿಣಾಮಗಳನ್ನು ಅಧ್ಯಯನ ಮಾಡಬೇಕು. ಒಟ್ಟಿನಲ್ಲಿ ಜನಪದ ಆಟಗಳ ಮೂಲಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ, ವ್ಯಾಖ್ಯಾನಿಸುವ ಪ್ರಯತ್ನವೇ ಜನಪದ ಆಟಗಳ ಅಧ್ಯಯನದ ಉದ್ದೇಶ[೧].

ಗ್ರಾಮೀಣ ಪ್ರದೇಶಗಳಲ್ಲಿ ಮನೆಯ ಮುಂದಿನ ಅಂಗಳ, ಬೀಳು ಬಿದ್ದ ಹೊಲ, ಕೆರೆಯ ಅಂಗಳ, ಇವೇ ಮೊದಲಾದುವುಗಳು ಕ್ರೀಡಾಂಗಣಗಳಾಗಿರುತ್ತವೆ. ಗ್ರಾಮೀಣ ಕ್ರೀಡೆಗಳಾದ, ಚಿನ್ನಿದಂಡ, (ಚಿನ್ನಿದಾಂಡು) ಉಪ್ಪಾರಪಟ್ಟಿ, ತೂರುವ ಚಂಡು, ಗುಟಾರಿ, ಕುಂಟೋಬಿಲ್ಲೆ, ಟೋಪಿ ಆಟ, ಗೋಲಿ ಆಟ, ಕಪ್ಪೆ ಆಟ, ಬುಗುರಿಯ ಆಟ ಮುಂತಾದ ಎಲ್ಲಾ ಆಟಗಳಿಗೆ ಬೀದಿಯೇ ಆಟದ ಮೈದಾನ. ಮಕ್ಕಳ ಸ್ವಚ್ಛಂದವಾದ ಮನಸ್ಸು ಕ್ರೀಡೆಗಳಿಂದ ಮುದಗೊಳ್ಳುವುದಲ್ಲದೆ, ಅವರನ್ನು ಸದಾ ಜಾಗೃತ ಮನಷ್ಯರನ್ನಾಗಿಡುತ್ತದೆ, ಇಂತಹ ಆಟಗಳು ಎಳೆಯ ಮನಸ್ಸುಗಳನ್ನು ವಿಕಸನಗೊಳಿಸುವ ಕ್ರಿಯೆಯಾಗಿ ಪ್ರಭಾವ ಬೀರುತ್ತವೆ. ಅಲ್ಲದೆ ಉತ್ತಮ ವ್ಯಕ್ತಿತ್ವವನ್ನು, ಸಮೂಹ ಪ್ರಜ್ಞೆಯನ್ನು ರೂಪಿಸಿಕೊಳ್ಳುವಲ್ಲಿ ಬಹಳಷ್ಟು ಸಹಾಯಕಾರಿಯಾಗಿವೆ. ಅಲ್ಲದೆ ಜನಪದ ಕಲೆಗಳು ಸಂಸ್ಕೃತಿಯ ಘಟಕಗಳೇ ಆಗಿರುತ್ತವೆ.

ಜಾನಪದ ಆಟಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಕಂಡಷ್ಟು ನಗರ ಪ್ರದೇಶಗಳಲ್ಲಿ ಕಾಣಲು ಸಾಧ್ಯವಿಲ್ಲ. ಸ್ವಾತಂತ್ರ್ಯ ನಂತರ ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದ ದೇಶದ ಎಲ್ಲಾ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯ ಬಿರುಗಾಳಿ ಎದ್ದಿತು. ನಗರ ಮತ್ತು ಹಳ್ಳಿಗಳ ನಡುವಿನ ಆಚಾರ - ಸಂಪ್ರದಾಯಗಳ ಅಂತರ ಅಗಾಧವಾಯಿತು. ಆದರೆ ಮೇಲ್ನೋಟಕ್ಕೆ ನಗರ ಜನಪದರ ಕ್ರೀಡೆಗಳಿಗೂ, ಗ್ರಾಮೀಣ ಜನಪದರ ಕ್ರೀಡೆಗಳಿಗೂ ವ್ಯತ್ಯಾಸ ಇರುವಂತೆ ತೋರಿದರು, ನಗರ ಜನಪದ ಆಟಗಳ ಮೂಲ ಗ್ರಾಮೀಣ ಜನಪದ ಆಟಗಳೇ ಆಗಿವೆ.

ನಗರ ಸಮುದಾಯಗಳಲ್ಲಿ ಚೌಕಭಾರಕ್ಕೆ ಬದಲಾಗಿ ಚೆಸ್, ಚಿನ್ನಿದಂಡದ ಬದಲಾಗಿ ಕ್ರಿಕೆಟ್, ತೂರುವ ಚಂಡಿನ ಬದಲಾಗಿ ಫುಟ್‌ಬಾಲ್ ಹಾಗೆಯೆ ಮಕ್ಕಳಲ್ಲಿ W.W.F. ಬಿಲ್ಲೆಯಾಟ, ಕಣ್ಣ ಮುಚ್ಚಾಲೆ, ಕೊಕ್ಕೊ ಮುಂತಾದ ಆಟಗಳನ್ನು ಕಾಣಬಹುದು. ಜಟ್ಟಿ ಯುದ್ಧಕ್ಕೆ ಬದಲಾಗಿ ಕುಸ್ತಿಯುದ್ಧ, ಗರಡಿಮನೆಗಳಿಗೆ ಬದಲಾಗಿ ವ್ಯಾಯಾಮ, ಜಿಮ್ನಾಸಿಯಂ ಮುಂತಾದವುಗಳನ್ನು ಕಾಣಬಹುದು.

W.W.F ಆಟವನ್ನು ನಗರ ಪ್ರದೇಶದಲ್ಲಿ ಮಾತ್ರ ಕಾಣಬಹುದು. ಇದರಲ್ಲಿ ಇಬ್ಬರೂ ಮಾತ್ರ ಭಾಗವಹಿಸಬಹುದು. ಇದೊಂದು ಚಿಕ್ಕ ಮಕ್ಕಳ ಆಟವಾಗಿದ್ದು, ಅವರು ಸುಮಾರು ೧೦-೧೨ ವರ್ಷದೊಳಗಿನವರಾಗಿರುತ್ತಾರೆ. ಇದರಲ್ಲಿ ಕ್ರಿಕೆಟ್ ಆಟಗಾರರ ಭಾವಚಿತ್ರಗಳು (೩ ಇಂಚು ಸುತ್ತಳತೆ ಇರುವ) ಇಲ್ಲವೇ ಕುಸ್ತಿ ಪಟುಗಳ ಭಾವಚಿತ್ರಗಳಿರುವ (ಇವು ಅಂಗಡಿಯಲ್ಲಿ ಮಾರಾಟಕ್ಕೆ ಇರುತ್ತವೆ) ಬೋರಲಾಗಿ ಕೈಯಲ್ಲಿ ಹಿಡಿದುಕೊಂಡು ಇಬ್ಬರು ಸ್ಪರ್ಧಿಗಳು ಮುಖ ಚಿತ್ರಗಳು ಕಾಣುವಂತೆ ನೆಲದ ಮೇಲೆ ಒಂದರ ಮೇಲೊಂದು ಇಡುತ್ತಾ ಹೋಗುತ್ತಾರೆ. ಹೀಗೆ ಆಟ ಮುಂದುವರೆಯುತ್ತಾ ಹೋಗುತ್ತದೆ. ಒಟ್ಟು ಇಟ್ಟ ಭಾವಚಿತ್ರವನ್ನು ಅದರ ಮೇಲೆ ಅದೇ ರೀತಿ ಇರುವ ಮುಖ ಚಿತ್ರವನ್ನು ಇಟ್ಟಾಗ

ಎರಡನೇ ಸ್ಪರ್ಧಿ ಗೆದ್ದ ನಂತರ ಅದರ ಕೆಳಗಡೆ ಇರುವ ಮುಖಚಿತ್ರಗಳೆಲ್ಲ ಎರಡನೇ ಸ್ಪರ್ಧಿಯ ಪಾಲಾಗುತ್ತವೆ. ಉದಾ: ಆಟ ನಡೆಯುತ್ತಿರುವಾಗ ಸಚಿನ್ ಇರುವ ಚಿತ್ರವನ್ನು ಇಟ್ಟಾಗ ಎದುರಗಡೆ ಸ್ಪರ್ಧಿಯು ಅದನ್ನೇ ಅದರ ಮೇಲೆ ಇಟ್ಟಾಗ ಅವನು ಗೆದ್ದಂತೆ. ಆದರೆ ಹಾಗೆ ಭಾವಚಿತ್ರಗಳನ್ನು ಒಂದರ ಮೇಲೊಂದು ಇಡುವಾಗ ಇಬ್ಬರೂ ತಮ್ಮ ತಮ್ಮ ಕೈಗಳಲ್ಲಿರುವ ಭಾವಚಿತ್ರಗಳನ್ನು ನೋಡಿಕೊಂಡಿರದೇ ಗೌಪ್ಯವಾಗಿ ಇಟ್ಟುಕೊಂಡಿರಬೇಕು.

ಬಿಲ್ಲೆ ಆಟ : ತಂಪಾದ ಪಾನೀಯ ಬಾಟಲುಗಳ ಮುಚ್ಚುವ ಬಿಲ್ಲೆಗಳನ್ನು ಬಳಸಿಕೊಂಡು ಆಡುವ ಆಟ ಇದಾಗಿದೆ. ಇಲ್ಲಿಯೂ ಇಬ್ಬರು ಸ್ಪರ್ಧಿಗಳು ಇರುತ್ತಾರೆ. ಬಿಲ್ಲೆಯ ಒಳಮುಖವನ್ನು ಮೇಲೆ ಮಾಡಿ ಗೋಲಿಯಿಂದ ಬಿಲ್ಲೆಯ ತುದಿಗೆ ಹೊಡೆಯುತ್ತಾರೆ. ಆಗ ಅದು ತಿರುಗಿ ಬಿದ್ದಾಗ ಗೋಲಿಯಿಂದ ಹೊಡೆದವನಿಗೆ ಆ ಬಿಲ್ಲೆ ಸೇರುತ್ತದೆ. ಇದರಲ್ಲಿ ಒಬ್ಬನಿಗೆ ಒಮ್ಮೆ ಒಂದು ಸಾರಿ ಮಾತ್ರ ಅವಕಾಶವಿರುತ್ತದೆ.

ಹೀಗೆ ನಗರ ಸಮುದಾಯಗಳಲ್ಲಿ ಆಟಗಳು ಬದಲಾವಣೆಯನ್ನು ಪಡೆದುಕೊಳ್ಳುತ್ತವೆ. ಮೂಲ ಸೌಕರ್ಯದ ಕೊರತೆ, ಸಮಯದ ಅಭಾವ, ಬದಲಾದ ಮನಸ್ಥಿತಿಗಳು, ವಿವಿಧ ಸಂಸ್ಕೃತಿಗಳು ಮತ್ತು ಆಧುನೀಕರಣದ ಪ್ರಭಾವದಿಂದ ನಗರ ಸಮುದಾಯದಲ್ಲಿ ಆಟಗಳೂ ಸಹ ಹೊಸ ಹೊಸದಾಗಿ ಹುಟ್ಟಿಕೊಳ್ಳುತ್ತಿರುತ್ತವೆ. ನಾಗರಿಕತೆಯು ಬೆಳೆದಂತೆಲ್ಲಾ ಆಧುನಿಕ ಸಮುದಾಯಗಳ ಅಭಿರುಚಿಗೆ ತಕ್ಕಂತೆ ಇಂತಹ ಆಟಗಳು ಹೊಸ ಜಗತ್ತಿನ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. "ಜನಪದ ಆಟಗಳು ಕೂಡ ಸಂಸ್ಕೃತಿಯ ಘಟ್ಟಗಳೇ ಆಗಿರುತ್ತವೆ. ಸಂಸ್ಕೃತಿಯ ಸಂವಹನದ ಒಂದು ಮಾಧ್ಯಮವಾಗಿ ಆ ಆಟಗಳು ಚಲನಶೀಲವಾಗಿವೆ. ಮನುಷ್ಯನನ್ನು ಸಂಸ್ಕೃತಿಗೆ ಒಳಪಡಿಸುವ, ಸಂಸ್ಕೃತಿಯ ಅಂಶಗಳನ್ನು ಅವನಿಗೆ ಸಂವಹನ ಮಾಡುವ ಕ್ರಿಯೆಗಳನ್ನು ಈ ಆಟಗಳು ನಿರ್ವಹಿಸುತ್ತವೆ. ಇದರಿಂದ ಜಾನಪದ ಆಟಗಳ ಅಧ್ಯಯನವು ಸಾಂಸ್ಕೃತಿಕ ಘಟಕವೊಂದರ ಅಧ್ಯಯನವಾಗಿದೆ."[೨೧]

೩. ನಗರ ಜಾನಪದ ಐತಿಹ್ಯಗಳು

"ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳು, ಆ ಘಟನೆಗಳನ್ನು ಸಂಪೂರ್ಣವಾಗಿ ಮರೆಸಿ ದೈವಿಕಾಂಶಗಳು ಕೂಡಿಕೊಂಡು ಅದ್ಭುತವಾಗಿ ಬೆಳೆದು, ಅವೆಲ್ಲ ಎಂದೋ ಒಂದು ಕಾಲದಲ್ಲಿ ನಡೆದುವೆಂಬಂತೆ ಭ್ರಮೆಹುಟ್ಟಿಸುವ ಕಥೆಗಳೇ ಪುರಾಣಗಳು"[೨೨] ಐತಿಹ್ಯ ಮತ್ತು ಪುರಾಣಗಳನ್ನು ಪ್ರತಿಯೊಂದು ನಗರಗಳಲ್ಲೂ ಕಾಣಬಹುದು. ಅವು ವಾಸ್ತವಿಕತೆಯಿಂದ ಕೂಡಿದ್ದರೂ ರಂಜನೀಯತೆಯ ಅಂಶವೇ ಹೆಚ್ಚು. ಬೆಂಗಳೂರು ನಗರ ಹುಟ್ಟಿದ್ದರ ಬಗ್ಗೆಯೇ ಹಲವಾರು ಐತಿಹ್ಯಗಳಿವೆ. ಮೈಸೂರಿನ ಚಾಮುಂಡೇಶ್ವರಿ, ಶಿರಸಿಯ ಮಾರಿಕಾಂಬೆಯ ಬಗ್ಗೆ ಹಲವಾರು ಐತಿಹ್ಯಗಳಿವೆ. ಐತಿಹ್ಯಗಳನ್ನು ಕುರಿತಂತೆ ಅಧ್ಯಯನದ ಅನುಕೂಲಕ್ಕೋಸ್ಕರ ಕೆಳಕಂಡಂತೆ ವಿಭಾಗಮಾಡಿಕೊಳ್ಳಲಾಗಿದೆ.

೨.೩.೧. ನಗರಗಳಲ್ಲಿ ಈಗಾಗಲೇ ಇರುವ ಐತಿಹ್ಯಗಳು

೨.೩.೨. ಹೊಸದಾಗಿ ಹುಟ್ಟಿಕೊಳ್ಳುತ್ತಿರುವ ಐತಿಹ್ಯಗಳು

೨.೨.೧. ನಗರಗಳಲ್ಲಿ ಈಗಾಗಲೇ ಇರುವ ಐತಿಹ್ಯಗಳು

ನಗರಗಳನ್ನು ಸ್ಥಾಪಿಸಿದವರ ಬಗ್ಗೆ ಮತ್ತು ಬೆಳವಣಿಗೆಯ ಬಗ್ಗೆ ಆ ನಗರಗಳಲ್ಲಿರುವ ದೇವಾಲಯಗಳ ಬಗ್ಗೆ, ಸ್ಥಳನಾಮಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ, ಘಟನೆಗಳ ಬಗ್ಗೆ ಇರುವ ಐತಿಹ್ಯಗಳು ಸಾಮಾನ್ಯವಾಗಿ ಹಿಂದಿನಿಂದ ಪ್ರಚಲಿತದಲ್ಲಿವೆ. ಬೆಂಗಳೂರು ಹುಟ್ಟಿನ ಬಗ್ಗೆಯೇ ಒಂದು ಐತಿಹ್ಯವಿದೆ "ಶಿವನ ಸಮುದ್ರವೆಂಬ ಗ್ರಾಮಕ್ಕೆ ವಾಯುವ್ಯ ಮೂಲೆಯಲ್ಲಿ ಹೆಬ್ಬಾಳದ ಒಳಕೆರೆಗೆ ದಕ್ಷಿಣದಲ್ಲಿ, ಅಂದರೆ ಈಗ ಕೊಡಿಗೇನಹಳ್ಳಿ ಎಂಬ ಗ್ರಾಮವಿರುವ ಸ್ಥಳದಲ್ಲಿ ಕಾಡಿನ ಮಧ್ಯೆ ಬೆಂಗಳೂರೆಂಬ ಒಂದು ಸಣ್ಣ ಹಳ್ಳಿ ಇದ್ದಿತು. ಹೊಯ್ಸಳ ದೊರೆ ಬಲ್ಲಾಳ ಎಂಬುವನು ಬೇಟೆಗಾಗಿ ಈ ಕಾಡಿಗೆ ಬಂದಿದ್ದ. ದಾರಿತಪ್ಪಿ ಪರಿವಾರದವರು ಬೇರೆಯಾಗಿ ಒಬ್ಬನೇ ಅಶ್ವರೂಢನಾಗಿ ತಿರುತಿರುಗಿ ದಣಿದು ಹಸಿವು ಬಾಯಾರಿಕೆಗಳನ್ನು ತಾಳಲಾರದೆ ಒಂದು ಗುಡಿಸಲಿನ ಬಳಿಗೆ ಬಂದು ಅದರಲ್ಲಿ ವಾಸವಾಗಿದ್ದ ಮುದುಕಿಯನ್ನು ಕುರಿತು "ಏನಾದರೂ ತಿಂಡಿಯನ್ನೋ, ನೀರನ್ನೋ ಕೊಡುವಿರಾ? ಎಂದು ಕೇಳಿದನು. ಆಗ ಮುದಕಿಯು ತನ್ನಲ್ಲಿದ್ದ ಬೆಂದಕಾಳನ್ನೂ, ನೀರನ್ನೂ ಕೊಟ್ಟು ಉಪಚರಿಸಿದಳಂತೆ. ಅದಕ್ಕೆ ರಾಜನು ಸಂತುಷ್ಟನಾಗಿ ಆ ಮುದುಕಿಗೆ ವಿಶೇಷ ಬಹುಮಾನ ನೀಡಿ ಆ ಗುಡಿಸಲಿದ್ದ ಹಳ್ಳಿಗೆ ಬೆಂದಕಾಳೂರು (ಬೆಂದಕಾಳು + ಊರು) > ಬೆಂಗಳೂರು ಎಂದು ಹೆಸರಿಟ್ಟನಂತೆ"[೨೩] ಹೀಗೆ ಒಂದು ನಗರವು ಹುಟ್ಟಿ ಬೆಳೆದು ಬಂದ ಬಗ್ಗೆ ಐತಿಹ್ಯಗಳಿರುತ್ತವೆ.

ಬೆಂಗಳೂರು ನಗರದ 'ಬಸವನಗುಡಿ'ಯಲ್ಲಿರುವ ಬಸವಣ್ಣನ ಕಡ್ಲೆಕಾಯಿ ಪರಿಸೆಗೆ ಒಂದು ಐತಿಹ್ಯವಿದೆ. ಈ ಬಡಾವಣೆಯ ಹಿಂದಿನ ಹೆಸರು ಸಂಕೇನಹಳ್ಳಿ. ಈಗ ಬಸವಣ್ಣನಗುಡಿ ಇರುವ ಗುಡ್ಡದ ಸುತ್ತಾಮುತ್ತ; ಬಹಳಷ್ಟು ಕಡ್ಲೆಕಾಯಿ ಬೆಳೆಯುತ್ತಿದ್ದರಂತೆ. ಅಲ್ಲಿಗೊಂದು ಬಸವ (ಎತ್ತು) ದಿನಾಲು ಬಂದು ಕಡ್ಲೆಕಾಯಿಯನ್ನು ತಿಂದು ಹೋಗುತ್ತಿತ್ತಂತೆ. ಆಗ ಆ ಊರಿನ ಗ್ರಾಮಸ್ಥರು ಎಲ್ಲರೂ ಸೇರಿ ಒಂದು ದಿನ ಮೇಯುತ್ತಿದ್ದ ಆ ಬಸವನನ್ನು ಓಡಿಸಿಕೊಂಡು ಹೋಗಲು ಆ ಬಸವ; ಗುಡ್ಡವ ಸೇರಿ ಕಲ್ಲುಶಿಲೆ ಆಯಿತಂತೆ. ಅದನ್ನು ಕಂಡ ಗ್ರಾಮಸ್ಥರು ದಿಗಿಲುಗೊಂಡು ಕಲ್ಲಿನ ಬಸವನ ಮೇಲೆ ಗಡಾರಿ (ಹಾರೆ) ಹಾಕಿದರಂತೆ ಅಂದಿನಿಂದ ಬೆಳವಣಿಗೆ ನಿಂತಿತಂತೆ ಎಂಬ ಐತಿಹ್ಯವಿದೆ.

ಶಿವಾಜಿನಗರದಲ್ಲಿರುವ ದಂಡು ಮಾರಮ್ಮ, ಲೊಟ್ಟೆಗೊಲ್ಲಹಳ್ಳಿಯಲ್ಲಿರುವ ಜಲಗೇರಮ್ಮ, ಮಾರ್ಕೆಟ್ ಬಳಿ ಇರುವ ಮಾರಮ್ಮ, ಬನಶಂಕರಿ ಮುಂತಾದ ಗ್ರಾಮದೇವತೆಗಳ ಬಗ್ಗೆ ಐತಿಹ್ಯಗಳು ಇರುವುದನ್ನು ಕಾಣಬಹುದು. ರಾಮನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಬಂಡೆಗಳು ಗುಂಪುಗುಂಪಾಗಿ ಬಿದ್ದಿವೆ. ಇದರ ಬಗ್ಗೆಯೂ ಐತಿಹ್ಯವಿದೆ. ರಾಮರಾವಣರ ಯುದ್ದದಲ್ಲಿ ಲಕ್ಷ್ಮಣ

[illegible]

ಮೂರ್ಛೆ ಹೋದಾಗ ಆಂಜನೇಯ ಸಂಜೀವಿನಿ ಪರ್ವತವನ್ನು ಹೊತ್ತುಕೊಂಡು ಹೋಗುವ ಸಮಯದಲ್ಲಿ ಅವನ ವೇಗಕ್ಕೆ ಸಡಿಲಗೊಂಡ ಬಂಡೆಗಳು ಪರ್ವತದಿಂದ ಕೆಳಗುದುರಿ ಬೆಟ್ಟಗಳಾದವೆಂಬ ಐತಿಹ್ಯವಿದೆ.

ಗಾಂಧಿನಗರದಲ್ಲಿರುವ ಅಣ್ಣಮ್ಮ ದೇವಿಯ ಬಗ್ಗೆ ಐತಿಹ್ಯವಿದೆ. ಒಮ್ಮೆ ಎಣ್ಣೆ ವ್ಯಾಪಾರಿಯು ಹಳ್ಳಿಹಳ್ಳಿ ತಿರುಗಿ ಎಣ್ಣೆ ಮಾರಿ ಬಂದು ಸುಸ್ತಾಗಿ ಮರದ ನೆರಳಿನಲ್ಲಿ ಮಲಗಿರಲು; ಆಗ ಎಣ್ಣೆ ವ್ಯಾಪಾರಿಗೆ ದೇವತೆಯು ಕನಸಿನಲ್ಲಿ ಬಂದು 'ನಾನು ಇಲ್ಲಿ ನೆಲೆಸಿದ್ದೇನೆ ನನ್ನನ್ನು ಪ್ರತಿಷ್ಠಾಪಿಸು' ಎಂದಿತಂತೆ. ಆಗ ವ್ಯಾಪಾರಿಗೆ ಎಚ್ಚರವಾಗಿ ಕಣ್ಣು ಬಿಟ್ಟು ನೋಡಿದಾಗ ಏನು ಕಾಣಲಿಲ್ಲವಂತೆ. ನಂತರ ಅವನು ಅಲ್ಲೊಂದು ಸಣ್ಣದೊಂದು ಗುಡಿಯನ್ನು ಕಟ್ಟಿಸಿ; ದೇವತೆಯನ್ನು ಪ್ರತಿಷ್ಠಾಪಿಸಿ ಅಂದಿನಿಂದ ಪೂಜೆ ಮಾಡಿಕೊಂಡು ಬಂದನಂತೆ. ಈಗ ಅದೇ ತಲಮಾರಿನ ೭ನೇ ಸಂತತಿ ಪೂಜೆ ಮಾಡುತ್ತಿದ್ದಾರೆ.

ಮೈಸೂರು ರೋಡಿನ ಬ್ಯಾಟರಾಪುರದಲ್ಲಿ ಗಂಡ ಹೆಂಡತಿಯರು ಇಬ್ಬರು ಗುಡಿಸಿಲಿನಲ್ಲಿ ವಾಸವಾಗಿದ್ದರಂತೆ. ರಾತ್ರಿ ಹೊತ್ತಿನಲ್ಲಿ ಊಟಮಾಡಿ ಮಲಗುವಾಗ ಒಲೆಯನ್ನು ಸಾರಿಸಿ ಮಲಗಿಕೊಳ್ಳುತ್ತಿದ್ದರಂತೆ. ಬೆಳಿಗ್ಗೆ ಎದ್ದು ನೋಡಿದಾಗ ಒಲೆ ಇದ್ದ ಜಾಗದಲ್ಲಿ ಮೊಣಕಾಲು ಉದ್ದ ಹುತ್ತ ಬೆಳೆಯುತ್ತಿತಂತೆ. ಅದನ್ನು ಕೆಡವಿದರೂ ಮರುದಿನ ಅದೇ ರೀತಿ ಬೆಳೆಯುತ್ತಿತಂತೆ. ಒಂದು ದಿನ ಒಬ್ಬಾಕೆಯ ಮೈಮೇಲೆ ಬಂದು 'ನಾನು ಯಲ್ಲಮ್ಮ. ಇಲ್ಲಿ ನಾನು ನೆಲೆಸುತ್ತೇನೆ' ಎಂದಾಗ ಸಂಸಾರವನ್ನು ಖಾಲಿಮಾಡಿ ಗುಡಿಯನ್ನು ಕಟ್ಟಿದ್ದಾರೆ. ಇಂತಹ ಐತಿಹ್ಯ ಬೆಂಗಳೂರಿನಲ್ಲಿ ಬಹಳಷ್ಟು ದೊರೆಯುತ್ತವೆ.

ತುಮಕೂರು ಬಳಿ ನಾಮದ ಚಿಲುಮೆ ಇದೆ. ರಾಮ, ಲಕ್ಷಣ, ಸೀತೆ ವನವಾಸದಲ್ಲಿ ಇದ್ದಾಗ ಒಮ್ಮೆ ಆ ಮಾರ್ಗವಾಗಿ ಬರುವಾಗ ಸೀತೆಗೆ ನೀರಡಿಕೆಯಾಯಿತಂತೆ. ಆಗ ಸುತ್ತ ನೋಡಲು ನೀರು ಕಾಣದಿರಲು, ರಾಮ ಆ ಬಂಡೆಯ ಮೇಲೆ ಬಾಣಪ್ರಯೋಗ ಮಾಡಿದನಂತೆ; ಆಗ ನೀರು ಉಕ್ಕಿಬಂದವಂತೆ. ಇದೇ ಸ್ಥಳಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಐತಿಹ್ಯವಿದೆ. ರಾಮ -ಲಕ್ಷಣ - ಸೀತೆ ವನವಾಸದಲ್ಲಿ ಇದ್ದಾಗ ಒಂದು ರಾತ್ರಿ ಇಲ್ಲಿ ತಂಗಿರಲು; ಬೆಳಿಗ್ಗೆ ಎದ್ದು ನಾಮಬಳಿದುಕೊಳ್ಳಲು ನೀರಿಲ್ಲದ್ದರಿಂದ ಅಲ್ಲಿ ಬಾಣಬಿಟ್ಟು ನೀರನ್ನು ತೆಗೆದು ನಾಮವನ್ನು ಇಟ್ಟುಕೊಂಡರಂತೆ ಅಂದಿನಿಂದಲೂ ಇದನ್ನು ನಾಮಚಿಲುಮೆ ಎಂದು ಕರೆಯುತ್ತಾರೆ ಎಂಬ ಐತಿಹ್ಯವಿದೆ.

ತುಮಕೂರು ಜಿಲ್ಲೆ ಸಿರಾ ಪಟ್ಟಣದಲ್ಲಿ ಆಂಜನೇಯನ ಬಂಡೆಯಂತಿರುವ ಸ್ಥಳವಿದೆ. ಆ ಸ್ಥಳದಲ್ಲಿ ಬಂಡೆಯ ಮೇಲೆ ಎರಡು ಪಾದಗಳ ಹೆಜ್ಜೆಗಳಿವೆ. ಇದರ ಬಗ್ಗೆ ಐತಿಹ್ಯವಿದೆ. ಆಂಜನೇಯನು ರಾಮನ ಆಜ್ಞೆಯಂತೆ ಸೀತೆಯನ್ನು ಅನ್ವೇಷಣೆ ಮಾಡುವ ಸಮಯದಲ್ಲಿ ಸಮುದ್ರವನ್ನು ಹಾರುವಾಗ ತನ್ನೆರಡು ಪಾದಗಳನ್ನು ಈ ಬಂಡೆಯ ಮೇಲೆ ಒತ್ತಿ ಸೀಮೋಲ್ಲಂಘನ ಮಾಡಿದ ಎಂಬ ಐತಿಹ್ಯವಿದೆ.

"ನಂಜನಗೂಡಿನ ನಂಜುಂಡ ಹಾಗೂ ಚಾಮುಂಡೇಶ್ವರಿಗೆ ಸಂಬಂಧಪಟ್ಟ ಜನಪದ ಕಥೆಯೊಂದು ಪ್ರಚಲಿತವಾಗಿದೆ. ಚಾಮುಂಡಿ ಮೈಸೂರಿನ ಕಾರಂಜಿ ಕೆರೆಯಲ್ಲಿ ಮೀಯುತ್ತಿದ್ದಾಗ ಜಂಗಮವೇಷದಲ್ಲಿ

ಬಂದ ನಂಜುಂಡ ಅವಳ ಸೀರೆಯನ್ನು ಕದ್ದು ಬಚ್ಚಿಟ್ಟುಕೊಳ್ಳುತ್ತಾನೆ. ಸ್ನಾನ ಮಾಡಿ ಬಂದ ಚಾಮುಂಡಿ ತನ್ನ ವಸ್ತ್ರವನ್ನು ಧರಿಸಿಕೊಂಡು ತನ್ನ ಬೆಟ್ಟವನ್ನು ಸೇರಿಕೊಳ್ಳುತ್ತಾಳೆ. ನಂಜುಂಡ ಅಲ್ಲಿಗೂ ಸುಮ್ಮನಾಗದೆ ಚಾಮುಂಡಿ ಬೆಟ್ಟಕ್ಕೆ ಹೋಗುತ್ತಾನೆ. ಬೆಟ್ಟಕ್ಕೆ ಹೋಗಿ ಬಾಗಿಲು ತಟ್ಟಿ ಚಾಮುಂಡಿಯೊಡನೆ ಪ್ರಣಯವನ್ನು ಬೆಳೆಸುತ್ತಾನೆ. ಚಾಮುಂಡಿ ನಂಜುಂಡರ ಪ್ರಣಯ ಕಥೆ ಕೂಡ ಒಂದು ಸಂಚಾರಿ ಐತಿಹ್ಯದ ಹಿನ್ನೆಲೆಯಲ್ಲಿ ಬೆಳೆದುಕೊಂಡು ಬಂದಿದೆ."[೨೪]

ಮೈಸೂರಿನ ಹುಟ್ಟು ಬೆಳವಣಿಗೆಯ ಬಗ್ಗೆ ಐತಿಹ್ಯವೊಂದಿದೆ. "ಜನಪದ ಕಥೆಗಳ ಪ್ರಕಾರ ಮೊದಲಿಗೆ ಮೈಸೂರು ಒಂದು ಸಣ್ಣ ಹಳ್ಳಿ. ಕಾರುಗಹಳ್ಳಿ ಆಗ ಅದು ಪಾಳೆಪಟ್ಟು. ಅದು ಚಾಮುಂಡಿ ಬೆಟ್ಟದ ಆ ಕಡೆಯಲೆಲ್ಲೊ ಇದ್ದು, ಈಗ ಬೇಚರಕ್ ಗ್ರಾಮವಾಗಿದೆ ಎಂದು ಹೇಳುತ್ತಾರೆ. ಕಾರುಗಹಳ್ಳಿಯ ಹಂಪಣ್ಣನಾಯಕ ಅತ್ಯಂತ ಪ್ರಬಲನಾದ ವ್ಯಕ್ತಿಯಾಗಿದ್ದು; ಬಡವರಾಗಿದ್ದ ಮೈಸೂರು ಅರಸರ ಮಗಳನ್ನು ಮದುವೆಯಾಗಬೇಕೆಂದು ಅವನು ಬಯಸಿದ. ಆದರೆ ಮತೀಯ ಭಾವನೆ ಅಡ್ಡಬಂದಿತು. ಮೈಸೂರು ರಾಜರು ಹಂಪಣ್ಣ ನಾಯಕನಿಗೆ ತುಂಬ ಹೆದರಿದರು. ಅವನು ಅತ್ಯಂತ ಪ್ರಬಲನೂ, ಕ್ರೂರಿಯೂ ಆಗಿದ್ದ ಪಾಳೆಯಗಾರ. ಈ ಸಂದರ್ಭದಲ್ಲಿ ರಾಚ ಒಡೆಯರು ಎಂಬ ಶರಣರು ಈ ರಾಜರ ನೆರವಿಗೆ ಬಂದರು. ಇವರು ವೀರಶೈವ ಸಂಪ್ರದಾಯದ ಶರಣರಾಗಿರದೇ ಮಂಟೇಸ್ವಾಮಿ ಸಂಪ್ರದಾಯಕ್ಕೆ ಸೇರಿದ ಶರಣರು. ಮಂಟೇಸ್ವಾಮಿ ಜನಪದ ಧರ್ಮವೊಂದರ ಮೂಲ ಸಂಸ್ಥಾಪಕರು. ಅವರ ಶಿಷ್ಯ ಈ ರಾಚಪ್ಪಾಜಿಯವರು. ಮಳವಳ್ಳಿಯ ಸಮೀಪದ ಬೊಪ್ಪೇಗೌಡನಪುರದಲ್ಲಿ ಈ ಸಂಪ್ರದಾಯದ ಮಠವಿದೆ. ರಾಚಪ್ಪಾಜಿಯವರು ಮಂಟೇಸ್ವಾಮಿಗಳ ಮುಖ್ಯ ಶಿಷ್ಯರಲ್ಲಿ ಒಬ್ಬರು. ಅವರು ಬೊಪ್ಪೇಗೌಡನ ಪುರದಿಂದ ಮೈಸೂರು ದಿಕ್ಕಿನಲ್ಲಿ ಹೊರಟು ಉದ್ದಕ್ಕೂ ಭಕ್ತರನ್ನು ಪಡೆದುಕೊಂಡು ಬಂದರು. ಮೈಸೂರಿಗೆ ಬಂದಾಗ ಅಲ್ಲಿನ ಅರಸರ ಪರಿಸ್ಥಿತಿ ಅವರಿಗೆ ಅರಿವಾಯಿತು. ಅರಸರು ತಮ್ಮ ಬಡ ಅರಮನೆಗೆ ಅವರನ್ನು ಬರಮಾಡಿಕೊಂಡರು. ರಾಚ ಒಡೆಯರು ಒಂದು ದೊಡ್ಡ ಅನ್ನದ ರಾಶಿಯನ್ನು ಮಾಡಿಸಿ ದಿಕ್ಕು ದಿಕ್ಕಿಗೆ ಅದನ್ನು ಚೆಲ್ಲಿದಾಗ ಮೈಸೂರಿಗೆ ಸಂಪತ್ತು, ಸಮೃದ್ಧಿ ಬಂದಿತು. ಚೆಲ್ಲಿದ ಅನ್ನವೆಲ್ಲ ವಜ್ರ ವೈಡೂರ್ಯವಾಗಿ ಮತ್ತು ಮಾಣಿಕ್ಯವಾಗಿ ಪರಿವರ್ತನೆಗೊಂಡವು. ರಾಚ ಒಡೆಯರ ಸೂಚನೆಯಂತೆ ಅರಸರು ಒಂದು ಉಪಾಯವನ್ನು ಮಾಡಿದರು. ಮದುವೆಗಾಗಿ ಆಹ್ವಾನ ಕೊಟ್ಟಂತೆ ಹಂಪಣ್ಣನಾಯಕನಿಗೆ ಹೇಳಿ ಕಳುಹಿಸಿದರು. ಮದುವಣಿಗ ನಿರಾಯುಧನಾಗಿ ಆನೆಯ ಮೇಲೆ ಒಬ್ಬನೇ ಬರಬೇಕೆಂದೂ, ಸೂಚಿಸಿದ ಹಾಗೆ ಬಂದ ಹಂಪಣ್ಣ ನಾಯಕನನ್ನು ಮಟ್ಟಿನ ಬಾವಿಗೆ ಹಾಕಿಸಿ ಕೊಲ್ಲಿಸಿದರಂತೆ. ಇದು ಸಂಚಾರಿ ಐತಿಹ್ಯ - ಮೈಸೂರಿಗೆ ಸಂಬಂಧಪಟ್ಟಂತೆ ಈ ಐತಿಹ್ಯ ಬೆಳೆದುಕೊಂಡಿದೆ."[೨೫] ಹೀಗೆ ಐತಿಹ್ಯ ವಿಭಿನ್ನವಾಗಿದ್ದು ವಾಸ್ತವಿಕತೆಯಿಂದ ಸ್ವಲ್ಪಮಟ್ಟಿನ ದೂರವಿದ್ದರೂ ನಂಬಿಕೆಗೆ ಹತ್ತಿರವಾಗಿರುತ್ತವೆ.

೨.೩.೨. ಹೊಸದಾಗಿ ಹುಟ್ಟುತ್ತಿರುವ ಐತಿಹ್ಯಗಳು

ಭಾಷೆ, ಧರ್ಮ, ವೃತ್ತಿ, ವಯಸ್ಸು ಇವುಗಳಲ್ಲಿ ಯಾವುದಾದರೂ ಒಂದು ಸಮಾನವಾದ

ಅಂಶವುನ್ನುಳ್ಳ ಗುಂಪು ಜಾನಪದವನ್ನು ಸೃಷ್ಟಿಸುತ್ತದೆ ಎನ್ನುವ ಡೆಂಡಸ್‌ರವರ ಅಭಿಪ್ರಾಯವು ಜಾನಪದಕ್ಕೆ ಸಾವಿಲ್ಲ ಎನ್ನುವುದನ್ನು ಅರ್ಥೈಸುತ್ತದೆ. ಐತಿಹ್ಯ, ಲಾವಣಿ, ಕಥನಗೀತೆಗಳು - ವ್ಯಕ್ತಿಗಳನ್ನೋ, ಸ್ಥಳವನ್ನೋ, ಘಟನೆಯನ್ನೊ ಆಧರಿಸಿ ಹುಟ್ಟಿಕೊಳ್ಳುತ್ತವೆ. ಸಂಗೊಳ್ಳಿ ರಾಯಣ್ಣ, ಕಿತ್ತೂರ ಚೆನ್ನಮ್ಮ, ಕನ್ನೇಶ್ವರರಾಮ ಇವರುಗಳ ಬಗ್ಗೆ ಐತಿಹ್ಯ ಲಾವಣಿಗಳು ಹುಟ್ಟಿಕೊಂಡಂತೆ; ಇತ್ತೀಚೆಗೆ ನಡೆದ ಕಾರ್ಗಿಲ್ ಯುದ್ಧದ ಬಗ್ಗೆ ಪರಿಸರದ ರಕ್ಷಣೆಯ ಬಗ್ಗೆ, ಸಾಕ್ಷರತೆ ಮೊದಲಾದ ವಿಷಯಗಳ ಬಗ್ಗೆ ಹಲವಾರು ಲಾವಣಿಗಳು ಹುಟ್ಟಿಕೊಂಡಿವೆ. ಅದರಂತೆ ವೀರಪ್ಪನ್, ಸಾಂಗ್ಲಿಯಾನ, ಕೆಂಪಯ್ಯ - ಬಾಂಬೆಯಲ್ಲಿರುವ ದಯಾನಾಯಕ (ಇನ್ಸ್‌ಪೆಕ್ಟರ್) ಇಂದಿರಾಗಾಂಧಿ, ಸರದಾರ್ ವಲ್ಲಬಾಯ್ ಪಟೇಲ್, ಗಾಂಧೀಜಿ ಮುಂತಾದವರ ಬಗ್ಗೆ ಹಲವಾರು ಐತಿಹ್ಯಗಳು ಹುಟ್ಟಿಕೊಂಡಿವೆ. ಶಕ್ತಿಮಾನ್ ಧಾರವಾಹಿಯ ಬಗ್ಗೆ ಮಕ್ಕಳಲ್ಲಿ ಹಲವಾರು ನಂಬಿಕೆಗಳಿವೆ. ಕಾಡಿನಲ್ಲಿ ವೀರಪ್ಪನ್‌ನನ್ನು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ, ಯಾಕೆಂದರೆ ದಿನಕ್ಕೊಂದು ವೇಷ ಬದಲಾಯಿಸುತ್ತಾನೆ. ವೇಷ ಮರೆಸಿಕೊಂಡು ನಗರಗಳಲ್ಲಿ ಸಹ ಇರುತ್ತಾನೆ. ಪೊಲೀಸರ ಬಳಿಯಲ್ಲೇ ಇರುತ್ತಾನೆ ಎಂಬ ಕಪೋಲಕಲ್ಪಿತ ನಂಬಿಕೆಗಳು ಕಾಡಿನಲ್ಲಿರುವ ಆನೆಗಳು ಅವನ ಫೋಟವನ್ನು ನೋಡಿದಾಗ ಹೆದತ್ತಥವಂತೆ ಈ ರೀತಿಯ ಐತಿಹ್ಯಗಳು ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳೆನ್ನದೆ ಸೃಷ್ಟಿಗೊಂಡಿವೆ.

ಸಾಂಗ್ಲಿಯಾನ ಪ್ರಾಣಕ್ಕೆ ಹೆದುರುವುದಿಲ್ಲವಂತೆ; ಎಷ್ಟೇ ದೊಡ್ಡ ರೌಡಿಯಾಗಿದ್ದರೂ ಅವರನ್ನು ಹಿಡಿಯುತ್ತಾನಂತೆ. ಇಷ್ಟೇ ಅಲ್ಲದೇ ಯಾವ ರಾಜಕಾರಣಿಗಳಿಗೂ ಹೆದರುವುದಿಲ್ಲವಂತೆ ಎಂಬ ಐತಿಹ್ಯಗಳು, ಕೆಂಪಯ್ಯನವರ ಬಗೆಗಿನ ಐತಿಹ್ಯಗಳು ಇದೇ ಸಾಲಿಗೆ ಸೇರಿಸಬಹುದು. ಇತ್ತೀಚೆಗೆ ಬಾಂಬೆಯಲ್ಲಿರುವ ಇನ್ಸ್‌ಪೆಕ್ಟರ್ ದಯಾನಾಯಕ್‌ರವರು ಭೂಗತಲೋಕಕ್ಕೆ ಸಿಂಹಸ್ವಪ್ನ ಇದ್ದಹಾಗೆ. ಅವರು ಶೂಟ್ ಮಾಡಿದ ಗುಂಡು ಗುರಿ ತಪ್ಪುವುದಿಲ್ಲವಂತೆ. ಹಾಗೆ ಕರ್ನಾಟಕದಲ್ಲಿ ಲೋಕಾಯುಕ್ತರಾದ ವೆಂಕಟಾಚಲರ ಬಗ್ಗೆಯೂ ಈ ರೀತಿಯ ವದಂತಿಗಳು ಹಬ್ಬುತ್ತಿವೆ. ಇವು ಕ್ರಮೇಣ ಒಬ್ಬರಿಂದ ಇನ್ನೊಬ್ಬರಿಗೆ ಹರಡಿ ಇದರ ಜೊತೆಗೆ ರಂಜಕತೆ ಮತ್ತು ವೈಭವೀಕರಣಗಳು ಸೇರಿಕೊಂಡು ಐತಿಹ್ಯಗಳ ರೂಪದಲ್ಲಿ ಸಮಾಜದಲ್ಲಿ ಮೌಖಿಕವಾಗಿ ಹರಿಯುತ್ತಿರುತ್ತವೆ.

ಈ ರೀತಿಯಾಗಿ ಐತಿಹ್ಯ ಸಂಪೂರ್ಣವಾಗಿ ಇತಿಹಾಸವೂ ಅಲ್ಲ, ಪೂರ್ಣ ಕಟ್ಟು ಕತೆಯೂ ಅಲ್ಲ. ಅದರಲ್ಲಿ ಸ್ವಲ್ಪಮಟ್ಟಿನ ವಾಸ್ತವತೆ ತುಂಬಿರಬಹುದಾದರೂ ರಂಜಕತೆಯೇ ಬಹುಭಾಗವನ್ನು ಆಕ್ರಮಿಸಿಕೊಂಡಿರುತ್ತದೆ.

೨.೪. ಹಬ್ಬಗಳು ಮತ್ತು ಜಾತ್ರೆಗಳು

ಜನಪದರಲ್ಲಿ ಹಬ್ಬ ಮತ್ತು ಜಾತ್ರೆಗಳಿಗೆ ವಿಶೇಷ ಮಹತ್ವವಿದೆ. "ದುಡಿತದಿಂದ ಬೇಸತ್ತ ಮನಸ್ಸು ಮನಃಶಾಂತಿಯನ್ನು ಪಡೆಯಲು ದೈವಿ ಸ್ವರೂಪದಲ್ಲಿ ನಿರ್ಮಿಸಿಕೊಂಡ ಸಂತೋಷಕೂಟವೇ ಹಬ್ಬ"[೨೬] ಈ ಹಬ್ಬದ ಸಡಗರದಲ್ಲಿ ಮಾನವನ ಮನಸ್ಸು ಕಷ್ಟದಿಂದ ಸುಖಕ್ಕೆ, ನೋವಿನಿಂದ ನಲುವಿಗೆ,

ಸಮಸ್ಯೆಗಳಿಂದ ಪ್ರಶಾಂತತೆಗೆ ಹೊರಳುತ್ತದೆ. ಅವರವರ ಸಂಸ್ಕೃತಿಗಳಿಗೆ ಅನುಗುಣವಾಗಿ ಒಂದೊಂದು ಹಬ್ಬವು ಇರುವುದನ್ನು ಕಾಣಬಹುದು. ಜಾನಪದ ಸಾಹಿತ್ಯದಲ್ಲಿ ಹಬ್ಬದ ಬಗ್ಗೆ ಬಹಳಷ್ಟು ಗೀತೆಗಳಿವೆ.

ಕುರಿಹಬ್ಬ ಕುರುಬನಿಗೆ ನೂಲ್ಹಬ್ಬ ಜೇಡಾಗೆ
ಮಾರ್ನೊಮಿ ಹಬ್ಬ ಮಗನೀಗೆ ಮುಂದ್ವರ್ಸ
ದೀವಳಿಗೆ ಹಬ್ಬ ಅಳಿಯಾಗೆ.

ಮಾನವರ ಒಂದೊಂದು ಜಾತಿಗೂ ಜನಾಂಗಕ್ಕೂ ಅವರವರ ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿಗಳಿಗೆ ಅನುಗಣವಾಗಿ ಹಬ್ಬಗಳು ಆಚರಿಸಲ್ಪಡುತ್ತವೆ. 'ಪರ್ವ' ಪದವೇ ತದ್ಭವಗೊಂಡು 'ಹಬ್ಬ'ವಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. "ಜನಪದರಲ್ಲಿ ಉಳ್ಳವರಾಗಲಿ, ಬಡವರಾಗಲಿ ಹಬ್ಬಗಳನ್ನು ಸಂಭ್ರಮ ಸಂತೋಷಗಳಿಂದ ಸ್ವಾಗತಿಸುತ್ತಾರೆ. ಪ್ರತಿಯೊಂದು ಹಬ್ಬದ ಹಿಂದೆಯೂ ಒಂದೊಂದು ರೀತಿಯ ಉದ್ದೇಶ ಹಾಗೂ ಆಚರಣೆಗಳಿರುತ್ತವೆ. ಜನಪದರ ಹಬ್ಬಗಳು ಬಹಳಷ್ಟು ನೇರವಾಗಿ ಕೃಷಿ ವ್ಯವಸಾಯಕ್ಕೆ ಸಂಬಂಧಿಸಿದವುಗಳಾಗಿವೆ."[೨೭] ಆದರೆ ನಗರ ಸಮುದಾಯಗಳಲ್ಲಿ ಈ ಪರಂಪರೆಯು ತೆಳುವಾಗಿದೆ. ಹಳ್ಳಿಗಳಲ್ಲಿ ನಡೆಯುವ ಕೊಂತಮ್ಮನ ಪೂಜೆ, ಮೊದ್ಲ ಕಾಸಿ, ಸುಗ್ಗಿಹಬ್ಬ, ಕಾರದಹಬ್ಬ ಹೀಗೆ ವ್ಯವಸಾಯೋತ್ಪನ್ನ ಸಂಸ್ಕೃತಿಯುಳ್ಳ ಹಬ್ಬಗಳನ್ನು ಗ್ರಾಮೀಣ ಸಮುದಾಯದಲ್ಲಿ ಮಾತ್ರ ಕಾಣಲು ಸಾಧ್ಯ. ಇಲ್ಲಿ ವ್ಯವಸಾಯವೇ ಪ್ರಧಾನ ಕಸುಬಾಗಿರುವುದರಿಂದ ವ್ಯವಸಾಯಕ್ಕೆ ಸಂಬಂಧಪಟ್ಟ ಆಚರಣೆಗಳೇ ಹಬ್ಬಗಳಾಗಿವೆ. ಮುಂಗಾರಿನಲ್ಲಿ ನೇಗಿಲು ಹೂಡುವಾಗ ನೇಗಿಲ ಪೂಜೆ ಮಾಡಿದರೆ, ಹೊಲದಲ್ಲಿ ಫಸಲ ಇದ್ದಾಗ ದೀವಣಿಗೆ ಮಾಡುತ್ತಾರೆ, ಬೆಳೆ ಕೊಯ್ಲು ಮಾಡುವಾಗ ಸುಗ್ಗಿಹಬ್ಬ ಮಾಡುತ್ತಾರೆ. ಒಟ್ಟಿನಲ್ಲಿ ಹಬ್ಬಗಳು ಆಯಾ ಪ್ರಾದೇಶಿಕತೆಯ ಜನಪದ ಸಂಸ್ಕೃತಿಗೆ ತಕ್ಕಂತಿರುತ್ತವೆ. ಕೆಲವೊಂದು ಹಬ್ಬಗಳು ಹಳ್ಳಿ - ನಗರ ಭೇದವಿಲ್ಲದಂತೆ ಸರ್ವೇಸಾಮಾನ್ಯವಾಗಿರುತ್ತವೆ.

"ಮನುಷ್ಯನ ಬದುಕು ನಿಸರ್ಗದಿಂದ ಸಂಸ್ಕೃತಿಗೆ, ಸಂಸ್ಕೃತಿಯಿಂದ ನಾಗರಿಕತೆಗೆ, ನಾಗರಿಕತೆಯಿಂದ ಇವತ್ತಿನ ನವನಾಗರಿಕತೆಗೆ ಪ್ರವೇಶಿಸಿದ ಹಿನ್ನಲೆಯಲ್ಲಿ ಈ ದೇವತೆಗಳು, ಹಬ್ಬಗಳು ಮತ್ತು ಆರಾಧನೆಗಳನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಇಂದಿಗೂ ನಿಸರ್ಗದ ಹಂತದಲ್ಲಿ ಇರುವ ಹಾಗೂ ನಿಸರ್ಗ ಮತ್ತು ಸಂಸ್ಕೃತಿಯ ನಡುವೆ ಇರುವ ಗ್ರಾಮೀಣ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಮೀರಿ ಯಾವುದರ ತೆಕ್ಕೆಯಲ್ಲೂ ನಿಲ್ಲಲಾರದ ಆಧುನಿಕ ನಗರ ಸಂಸ್ಕೃತಿ - ಇವುಗಳ ನಡುವೆ ನಡೆಯುತ್ತಿರುವ ಸಂಘರ್ಷಗಳನ್ನು ಅರ್ಥಮಾಡಿಕೊಳ್ಳದೇ ಈ ಆಚರಣೆಗಳನ್ನು ವಿಶ್ಲೇಷಿಸಲು ಸಾಧ್ಯವಿಲ್ಲ. ಏಕೆಂದರೆ ಭೂಮಿ, ಭೂಮಿಯ ಒಡೆತನ, ಅನಂತರ ಬೆಳೆದ ಪ್ರಭುತ್ವ, ನಂತರ ಹಂತಗಳಲ್ಲಿ ಸೃಷ್ಟಿಗೊಂಡ ಶ್ರೇಣೀಕರಣ ವ್ಯವಸ್ಥೆ - ಇವೆಲ್ಲವೂ ನಮ್ಮ ಇವತ್ತಿನ ಹಬ್ಬ ಆಚರಣೆಗಳ ಹಿನ್ನಲೆಯಲ್ಲಿ ಇಣುಕಿ ಹಾಕುತ್ತಿದೆ. ಆದ್ದರಿಂದಲೇ ಗ್ರಾಮದೇವತೆಗಳ ಹಬ್ಬವೆಂದರೆ ಅದು ಕೇವಲ ಮನರಂಜನೆಯಲ್ಲ. ಬದಲಿಗೆ ಹೊಸ ಇತಿಹಾಸವನ್ನು

ತೆರೆದಿಡುವ ಸಾಂಸ್ಕೃತಿಕ ಸತ್ಯಗಳು. ಹಾಗೆಯೇ ಸಂಸ್ಕೃತಿ ಎಂಬುದು ಸರಳೀಕರಣ ವಸ್ತುವಲ್ಲ; ಬದಲಾಗಿ ಮಾನವಶಾಸ್ತ್ರದ ಅಗಣಿತ ಸತ್ಯಗಳನ್ನು ಒಳಗೊಂಡ ಒಂದು ಸಂಕೀರ್ಣ ಸಂಗತಿ. ಆದ್ದರಿಂದ ಇವತ್ತಿನ ನವನಾಗರಿಕತೆ ತಲುಪಿರಬಹುದಾದ ಸ್ಥಿತಿಯನ್ನು ಕಂಡಾಗ ಮನುಷ್ಯ ಕೂಡ ಪರಂಪರೆಯಲ್ಲಿನ ಯಾವುದೇ ಒಂದು ಮೂಲದ ಸತ್ಯದ ಏಳಿಗೆ ಅಂಟಿಕೊಂಡಿರುತ್ತಾನೆ ಎಂಬುದನ್ನು ಮನಗಾಣಬಹುದು."[೨೪]

ಹೀಗಾಗಿ ನಗರ ಪ್ರದೇಶಗಳಲ್ಲಿ ನಡೆಯುವ ಹಬ್ಬ ಮತ್ತು ಅದರ ಹಿಂದಿನ ಆಚರಣೆಗಳಿಗೂ ಗ್ರಾಮೀಣ ಸಮುದಾಯಗಳಲ್ಲಿ ನಡೆಯುವ ಹಬ್ಬ ಮತ್ತು ಅದರ ಹಿಂದಿನ ಆಚರಣೆಗಳಿಗೂ ಅಂತರಗಳಿವೆ. ಗ್ರಾಮೀಣ ಸಮುದಾಯದಲ್ಲಿ ನಡೆಯುವ ಹಬ್ಬಗಳು ಅವರವರ ಆಚಾರ ವಿಚಾರ, ಸಂಪ್ರದಾಯ, ಸಂಸ್ಕೃತಿಗಳಿಗೂ ಮತ್ತು ಹಬ್ಬಗಳ ಆಚರಣೆಗಳ ಮಧ್ಯೆ ಅವಿನಾಭಾವ ಸಂಬಂಧವಿರುತ್ತದೆ. ಅವರಿಗೆ ಈ ಸಂಗತಿಯೊಂದು ಜೀವನ ಕ್ರಮವಾಗಿರುತ್ತದೆ. ಆದರೆ ನಗರಗಳಲ್ಲಿ ನಡೆಯುವ ಕೆಲವೊಂದು ಹಬ್ಬಗಳಲ್ಲಿ ಪರಂಪರೆಯ ಸಂಬಂಧಗಳು ಹೆಚ್ಚು ಗಟ್ಟಿಗೊಂಡಂಥವು ಆಗಿರುವುದಿಲ್ಲ. ಇಲ್ಲಿ ಹಬ್ಬಗಳನ್ನು ಸಂಪ್ರದಾಯ ಮತ್ತು ಆಚರಣೆಗಳ ದೃಷ್ಟಿಯಿಂದ ನೋಡುವುದರ ಬದಲಾಗಿ ಮನರಂಜನೆಯ ದಿನವಾಗಿ ಕಾಣುವುದೇ ಹೆಚ್ಚು.

ನಗರ ಪ್ರದೇಶಗಳಲ್ಲಿ ಹೊಸವರ್ಷ, ಕ್ರಿಸ್‌ಮಸ್, ಹೋಳಿ, ರಾಖಿ ಹಬ್ಬ, ದಸರಾ, ದೀಪಾವಳಿ, ಪ್ರೇಮಿಗಳ ದಿನಾಚರಣೆ, ಸ್ನೇಹಿತ ದಿನಾಚರಣೆ, ಯಜಮಾನ ದಿನಾಚರಣೆ (Bossday) ಕ್ಷಮಾದಿನಾಚರಣೆ (Forgiviness day) ಹುಟ್ಟು ಹಬ್ಬ (Birthday) ಸಂತೋಷ ದಿನಾಚರಣೆ, ತಾಯಿಯ ದಿನಾಚರಣೆ (Mother day) ವೈದ್ಯರ ದಿನಾಚರಣೆ - ಹೀಗೆ ಆಯಾ ಪ್ರದೇಶದ ಜನಜೀವನ, ಆಚಾರ ವಿಚಾರ, ಪರಿಸರ, ಬದಲಾದ ಮೌಲ್ಯ, ಪಾಶ್ಚಾತೀಕರಣ, ಶಿಕ್ಷಣ ಪದ್ಧತಿಗಳ ಆದಾರದ ಮೇಲೆ ಹೊಸ ಆಚರಣೆಗಳು ಹುಟ್ಟಿಕೊಂಡು ಹಬ್ಬಗಳಾಗಿ ಆಚರಿಸಲ್ಪಡುತ್ತವೆ. ಇವುಗಳನ್ನು ನಗರ ಸಂಸ್ಕೃತಿಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಕಾರಣ ನಗರ ಪ್ರದೇಶಗಳಲ್ಲಿ ವೈವಿಧ್ಯಮಯ ಸಂಸ್ಕೃತಿಗಳು ಕೂಡುವಿಕೆಯಿಂದ ಹೊಸ ಮೌಲ್ಯಗಳು ಜಾರಿಗೆ ಬಂದು ಸಾಂಪ್ರದಾಯಿಕ ಮೌಲ್ಯಗಳು ಮೂಲೆಗೆ ಸೇರುತ್ತವೆ.

ನಗರ ಪ್ರದೇಶಗಳಲ್ಲಿ ನಡೆಯುವ ಹಬ್ಬಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಜಾಗತೀಕರಣವು, ತೃತೀಯ ಜಗತ್ತಿನ ರಾಷ್ಟ್ರಗಳ ಸಂಸ್ಕೃತಿ ಮೇಲೆ ಅಗಾಧ ಪರಿಣಾಮ ಬೀರುತ್ತದೆ. Bossday, Lowers day, Forgiviness day ಈ ಮುಂತಾದ ದಿನಾಚರಣೆಗಳಿಗೆ ಭಾರತೀಯ ಸಂಸ್ಕೃತಿಗಳಲ್ಲಿ ಬೇರಿಲ್ಲ. ಇವು ದೊಡ್ಡ ದೊಡ್ಡ ಯಂತ್ರ ಮತ್ತು ಕೈಗಾರಿಕೆಯೇ ಪ್ರಮುಖ ಕಸುಬಾಗಿ ಬೆಳೆದು ಬಂದಂತಹ ಶ್ರೀಮಂತ ಪಾಶ್ಚಿಮಾತ್ಯ ದೇಶಗಳ ಪ್ರಭಾವ ನಮ್ಮ ಮೇಲಾಗಿದೆ. ಇಂದು ಜಾಗತೀಕರಣದ ಪ್ರಕ್ರಿಯೆಯಿಂದ ವಿಶ್ವವೇ ಹಳ್ಳಿಯಾಗುತ್ತಿದೆ. ನಾವು ಉತ್ಪಾದಿಸುವಂಥ ಉತ್ಪನ್ನಗಳಿಗೆ ವಿದೇಶಿ ದೊರೆಗಳು ಹವಾನಿಯಂತ್ರಿತ ಮನೆಗಳಲ್ಲಿ ಕುಳಿತು ಬೆಲೆಗಳನ್ನು ನಿಗದಿ ಮಾಡುತ್ತಾರೆ. ಹಾಗೆಯೇ

ಇಲ್ಲಿನ ಆಚಾರ ವಿಚಾರ, ಪರಂಪರೆಗಳ ಮೇಲೆ ಬಿರುಗಾಳಿ ಬೀಸಿ ಪರಂಪರಾಗತವಾಗಿ ನಂಬಿಕೊಂಡು ಬಂದಂತಹ ಮೌಲ್ಯಗಳು ನುಚ್ಚು ನೂರಾಗತೊಡಗಿವೆ. ಆದರೆ ಇಂತಹ ವಾತಾವರಣ ಹಳ್ಳಿಯಲ್ಲಿ ಈಗಲೇ ಕಾಣಲು ಸಾಧ್ಯವಿಲ್ಲ. ಜನಪದರಲ್ಲಿ ಕಾಣದಂತಹ ಹೊಸ ಹೊಸ ಹಬ್ಬದಾಚರಣೆಗಳು ನಗರ ಸಮುದಾಯದಲ್ಲಿವೆ. ಬದಲಾವಣೆಯ ಬಿರುಗಾಳಿಯಿಂದ ನಗರಗಳು ಬಿಡಿಸಿಕೊಳ್ಳಲು ಸಾಧ್ಯವಿಲ್ಲ.

ಹೀಗೆ ಗ್ರಾಮೀಣ ಸಂಸ್ಕೃತಿಯಲ್ಲಿ ಕಾಣುವಂತಹ ಕೃಷಿಮುಖಿಯ ಹಬ್ಬಗಳು ನಗರ ಸಮುದಾಯಗಳಲ್ಲಿ ಕಾಣಲು ಸಾಧ್ಯವಿಲ್ಲ. ಇಲ್ಲಿ ಕೈಗಾರೀಕರಣವೇ ಮೂಲ ಕಸುಬಾಗುತ್ತಿರುವುದರಿಂದ ಇವುಗಳನ್ನು ನಿಯಂತ್ರಿಸುವ ರಾಷ್ಟ್ರಗಳ ಸಂಸ್ಕೃತಿಗಳ ಆಚರಣೆಗಳನ್ನು ಅಳವಡಿಸಿಕೊಳ್ಳುತ್ತಿರುವುದನ್ನು ಕಾಣಬಹುದು.

ಜಾತ್ರೆಗಳು

"ಜಾತ್ರೆ ಎಂಬುದು ಜಾನಪದ ರೂಢಿ, ಸಂಪ್ರದಾಯಗಳ ಒಂದು ಅಂಗ. ಜಾನಪದ ತಜ್ಞ ಶಂಕರ ಸೇನಾ ಗುಪ್ತಾ ಬಂಗಾಲದ ಜಾನಪದ ಬಗ್ಗೆ ಬರೆದ ಪ್ರಸ್ತಾವನೆಯಲ್ಲಿ ಜಾತ್ರೆಯನ್ನು ಜಾನಪದದ ವಿಷಯ ಪಟ್ಟಿಯಲ್ಲಿ ಸೇರಿಸಿದ್ದು ಸಹಜ. ಭಾರತದಲ್ಲಿ ಜಾತ್ರೆ ಬಹು ಪರಿಚಿತವಾದ ಬಹಳ ಆಕರ್ಷಕವಾದ ವಿಷಯ. ಅದು ಎಲ್ಲಾ ಕಡೆಗೂ ಕಂಡು ಬರುವ, ಎಲ್ಲರನ್ನೂ ರಂಜಿಸುವ ಸಂಪ್ರದಾಯ"[೨೯] ಜಾತ್ರೆಗಳೆಂದರೆ ತಕ್ಷಣ ನೆನಪು ಬರುವುದು ನಮ್ಮ ಹಳ್ಳಿಗಳ ಜಾತ್ರೆಗಳು. ಇವುಗಳನ್ನು ಪ್ರಾದೇಶಿಕತೆಯಲ್ಲಿ 'ಪರಸೆ' ಎಂತಲೂ ಕರೆಯುತ್ತಾರೆ. ಈ ಜಾತ್ರೆಗಳು ಸಾಮಾನ್ಯವಾಗಿ ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ನಡೆಯುತ್ತವೆ. ಹಳ್ಳಿಯ ರೈತರು ಹೊಲದಲ್ಲಿ ಕಟಾವು ಮಾಡಿ ಕಾಳುಕಡ್ಡಿ ಮನೆಗೆ ಸೇರಿಸಿಕೊಂಡಿರುತ್ತಾರೆ. ವರ್ಷವಿಡೀ ದುಡಿದಂಥ ರೈತ ಮಾನಸಿಕ ನೆಮ್ಮದಿಯನ್ನು ಪಡೆಯಲು ಮಾಡಿಕೊಂಡ ಉತ್ಸವವೇ ಜಾತ್ರೆ. ಈ ಜಾತ್ರೆಗಳು ಊರೊಟ್ಟಿನ ಸಾಂಸ್ಕೃತಿಕ ಸಂಬಂಧಗಳ ಒಗ್ಗೂಡುವಿಕೆಯೇ ಆಗಿರುತ್ತವೆ. ಇಲ್ಲಿ ಪ್ರಾಥಮಿಕ ಸಂಬಂಧಗಳು ಗಟ್ಟಿಗೊಳ್ಳುವುದಲ್ಲದೆ ಊರಿನ ಏಕತೆಗೆ ನಾಂದಿಯಾಗುತ್ತದೆ. ಇಂದು ಜಾತ್ರೆಗಳು ಕೇವಲ ಹಳ್ಳಿಗೆ ಮಾತ್ರ ಸೀಮಿತವಾಗಿಲ್ಲ. ಅವು ನಗರಗಳಲ್ಲೂ ನಡೆಯುತ್ತವೆ. ಆದರೆ ನಗರ ಜನಪದರ ಅಭಿರುಚಿಗೆ ತಕ್ಕಂತೆ ಹಲವಾರು ಬದಲಾವಣೆಗಳೊಂದಿಗೆ ಜಾತ್ರೆಗಳು ನಡೆಯುತ್ತವೆ. ಇವು ನಗರಗಳಲ್ಲೆ ನಡೆಯಲಿ ಹಳ್ಳಿಯಲ್ಲೇ ನಡೆಯಲಿ ಒಟ್ಟಿನಲ್ಲಿ ಅವು ಸಾಂಸ್ಕೃತಿಕ ಕಾರ್ಯಕ್ರಮಗಳ ವಿನಿಮಯ ಕೇಂದ್ರಗಳಾಗಿರುವಂತೆಯೇ ವಾಣೀಜ್ಯೀಕರಣದ ಕೇಂದ್ರ ಬಿಂದು ಕೂಡ ಆಗುತ್ತವೆ.

ಯಾವುದೇ ಮಹಾನಗರಗಳು ಒಂದೇ ಸಾರಿ ಮಹಾನಗರಗಳಾಗಿ ರೂಪುಗೊಂಡಿಲ್ಲ. 'ಹಳ್ಳಿಯಿಂದ ದಿಲ್ಲಿಯೆಂಬಂತೆ' ನಗರಗಳು ರೂಪಿತಗೊಂಡಿವೆ. ಕೆಲಸವನ್ನು ಅರಸುತ್ತಾ ಹಳ್ಳಿಯಿಂದ ವಲಸೆಬಂದ ಜನ ಒಂದೆಡೆ ಸೇರಿದ ಕಾರಣವಾದರೆ; ಆಯಾ ನಗರಗಳ ಹತ್ತಿರವಿರುವ ಹಳ್ಳಿಗಳು ಕೂಡುವುದರಿಂದ ನಗರ ಗಾತ್ರ ಹೆಚ್ಚುತ್ತಾ ಹೋಗುತ್ತವೆ. ಅಲ್ಲದೆ ನಗರಗಳಲ್ಲಿ ವೈಭವಯುತವಾದ ಜೀವನ ನಡೆಸಲು ಹೆಚ್ಚು ಅವಕಾಶ ಇರುವುದರಿಂದ ಸ್ಥಿತಿವಂತ ಜನರು ಬಹುಬೇಗ ಆಕರ್ಷಿತರಾಗುತ್ತಾರೆ. ಹೀಗೆ ವಿವಿಧ ಉದ್ದೇಶಗಳಿಂದ ಕೂಡಿದ ಜನಸಮೂಹವು ಆಯಾ ಸಂಸ್ಕೃತಿಗಳ ಪ್ರತಿನಿಧಿಗಳಾಗಿರುತ್ತಾರೆ. ವಿವಿಧ

[illegible]

ಬಗೆಯ ಸಂಸ್ಕೃತಿಯುಳ್ಳ ಈ ಪ್ರತಿನಿಧಿಗಳ ಬದುಕಿನಲ್ಲಿ ನಿಧಾನಗತಿಯಲ್ಲಿ 'ಸಂಸ್ಕೃತೀಕರಣ' ಏರ್ಪಡುತ್ತಿರುತ್ತದೆ. ಆಗ ಆಧುನಿಕ ಜೀವನಕ್ಕೆ 'ಅವಶ್ಯಕತೆಯುಳ್ಳ' ಆಚಾರ ವಿಚಾರ, ಸಂಪ್ರದಾಯ, ಜೀವನ ಶೈಲಿ, ರೂಢಿ, ನಂಬಿಕೆ, ನಡವಳಿಕೆ ಉಳಿಯುತ್ತವೆ. ಅಪ್ರಸ್ತುತವಾದಂಥವು ನಿಧಾನವಾಗಿ ತೆರೆಯ ಮರೆಗೆ ಸರಿಯುತ್ತವೆ.

ಹೀಗೆ ಜಾತ್ರೆಗಳು ಸಹ ಗ್ರಾಮೀಣ ಪ್ರದೇಶಗಳಲ್ಲಿ ಸಂಸ್ಕೃತಿ ಪ್ರತೀಕವಾಗಿ ನಡೆಯುವಂತೆ; ನಗರ ಸಮುದಾಯಗಳಲ್ಲಿ ನಡೆಯುವುದಿಲ್ಲ. ನಗರದ ಗರ್ಭದೊಳಗೆ 'ಹಳ್ಳಿ' ಇರುವುದರಿಂದ ಅವರು ನಂಬಿಕೊಂಡು ಬಂದಂತಹ ಆಚಾರ ವಿಚಾರ, ಹಬ್ಬ ಹರಿದಿನ, ಜಾತ್ರೆಗಳು ಈಗಲು ನಡೆಯುತ್ತವೆ. ಆದರೆ ಇವುಗಳ ಸಹಬಾಗಿತ್ವದಲ್ಲಿ ಬಂದಂತಹ ಕೆಲವೊಂದು ಮೌಢ್ಯ ಆಚರಣೆಗಳು ಮರೆಯಾಗುತ್ತವೆ. "ಆಧುನಿಕ ಜಗತ್ತಿನಲ್ಲಿ ಜಾತ್ರೆಗಳ ಸ್ವರೂಪ ಹಲವು ಬದಲಾವಣೆಗೆ ಒಳಗಾಗಿರುವಂತೆ ಕಂಡುಬಂದರೂ ಚಾತುರ್ವರ್ಣ ನೀತಿಯ ಕರ್ಮಸಿದ್ಧಾಂತದ ಚೌಕಟ್ಟಿನಲ್ಲಿ ಆದ ಚೌಕಾಶಿಯ ಹೊಂದಾಣಿಕೆಯೇ ಹೊರತು ಬದಲಾವಣೆಯಲ್ಲ. ಜಾತ್ರೆಯ ಮೂಲದ್ರವ್ಯವಾದ ಆಚರಣೆಯ ಸ್ವರೂಪವನ್ನೆಲ್ಲ ಪರಿಶೋಧಿಸಿದಾಗ, ಅದರ ಮೂಲ ಆಶಯ ಆಧುನಿಕತೆಯ ಪ್ರಭಾವದಲ್ಲಿ ತನ್ನ ಮೊದಲಿನ ತೀವ್ರತೆಯನ್ನು ಕಡಿಮೆ ಮಾಡಿಕೊಂಡು ಕೇವಲ ಸಂಕೇತದ ಮಟ್ಟಕ್ಕೆ ಇಳಿದಿರುವುದು ಕಂಡುಬರುತ್ತದೆ. ಇನ್ನೂ ಕೆಲವೆಡೆಯಲ್ಲಿ ಜಾತ್ರೆಗೆ ಹರಕೆ ಬಿಟ್ಟ ಕೋಣಗಳನ್ನು ಕಡಿಯುವುದಿಲ್ಲ. ಬದಲಾಗಿ ಪಶುವೈದ್ಯರನ್ನು ಕರೆಸಿ ಸಿರಂಜಿನಿಂದ ಆ ಕೋಣಗಳ ರಕ್ತ ತೆಗೆಸಿ ಕಡಿದಾಗ ರಕ್ತ ಛಿಲ್ಲೆನ್ನುವ ವಿಧಿಯನ್ನನುಕರಿಸಿ ಸಿರಂಜಿನಿಂದ ರಕ್ತವನ್ನು ಛಿಲ್ಲೆನಿಸಿ ದೇವಿಗೆ ಅರ್ಪಿಸುವ ವಿಧಾನ ಬೆಳಕಿಗೆ ಬಂದಿದೆ. ಸದರಿ ಹರಕೆ ಕೋಣಗಳನ್ನು ಜಾತ್ರೆಯಲ್ಲಿ ಹರಾಜು ಹಾಕಿ ಬಂದ ಹಣವನ್ನು ದೇವಿಯ ನಿಧಿಗೆ ಬಳಸಿಕೊಳ್ಳುತ್ತಾರೆ. ಆಧುನಿಕತೆಯ ಪರಿಣಾಮವಾಗಿ ವಾಣಿಜ್ಯೀಕರಣ (Commercialization) ಅಂಶವು ಸಾಂಸ್ಕೃತಿಕ ವಿಧಿಯೊಳಗೆ ನುಸುಳಿರುವುದಕ್ಕೆ ಇದೊಂದು ಉತ್ತಮ ಉದಾಹರಣೆ."

ಜಾತ್ರೆ ಸಮಯದಲ್ಲಿ ನಗರಗಳಲ್ಲಿ ಆಚರಣೆಯನ್ನು ಮೈಗೂಡಿಸಿಕೊಂಡು ವಾಣಿಜ್ಯೀಕರಣವನ್ನು ಹೆಚ್ಚು ಪ್ರತಿಬಿಂಬಿಸುತ್ತದೆ. ಇಲ್ಲಿ ಸೇರುವ ಜಾಹಿರಾತುದಾರರು, ಒಂದೊಂದು ಮಳಿಗೆ ತೆಗೆದು ತಮ್ಮ ತಮ್ಮ ವಸ್ತುಗಳಿಗೆ ಅಧಿಕ ಮಟ್ಟದಲ್ಲಿ ಪ್ರಚಾರ ಸಿಗುವ ತಾಣವನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಜಾತ್ರೆಗಳಲ್ಲಿ ಸುಂಕ ವಸೂಲಿ ಮಾಡುವುದು ಜಾತ್ರೆಯ ಒಂದು ಅಂಗ. ಅಂಗಡಿ ಮುಂಗಟ್ಟು, ಮಾರಾಟ ಮಳಿಗೆಗಳು, ಜಾಹಿರಾತುದಾರರು, ರಾಟೆ ತಿರುಗಿಸುವವರು, ಸರ್ಕಸ್, ಮಕ್ಕಳಿಗೆ ಮನರಂಜನೆ ನೀಡುವ ಸುಂಕವನ್ನು ವಿಧಿಸುತ್ತಾರೆ. ಸುಂಕದ ಮೊತ್ತವನ್ನು ಹರಾಜು ಮೂಲಕ ಕೂಗಲಾಗುತ್ತದೆ. ಆ ಸಂದರ್ಭದಲ್ಲಿ ಯಾರು ಹೆಚ್ಚು ಹಣಕ್ಕೆ ಕೂಗುತ್ತಾರೋ ಅವರಿಂದ ಟ್ರಸ್ಟ್‌ನವರು ಹಣಪಡೆದು ಸುಂಕವನ್ನು ವಸೂಲಿ ಮಾಡಲು ಅನುಮತಿ ನೀಡುತ್ತಾರೆ.

ನಗರಗಳಲ್ಲಿ ಇಂತಹ ಜಾತ್ರೆಗಳಲ್ಲಿ ಬಹಳಷ್ಟು ಜಮಾಯಿಸುವುದರಿಂದ ಜಾಹಿರಾತುದಾರರಿಗೆ ಕೇಂದ್ರಬಿಂದುವಾಗಿ ಜಾತ್ರೆಗಳು ಮಾರ್ಪಟ್ಟಿವೆ. "ರಾಜಕೀಯ ವೇದಿಕೆಗಳಲ್ಲಿ ವಿಜೃಂಭಿಸುವ ನಮ್ಮ ರಾಜಕೀಯ ಪುಢಾರಿಗಳು ಕೂಡ ತಮ್ಮ ಪ್ರಚಾರ ಪ್ರಾಬಲ್ಯಗಳಿಗೆ ಜಾತ್ರೆಗಳನ್ನು ಅನುಕೂಲಸಿಂಧುವಾಗಿಸಿ

ಕೊಂಡಿರುವುದು ಕ್ರೂರ ವಾಸ್ತವ. ತಮ್ಮ ಮನೆ ದೇವರು, ಜಾತಿ ದೇವರುಗಳ ಜಾತ್ರೆಗಳಲ್ಲಿ ಮತ್ತು ಮುಜರಾಯಿ ಇಲಾಖೆಯ ಆಶ್ರಯದಲ್ಲಿ ಜರುಗುವ ಜಾತ್ರೆಗಳಲ್ಲಿ ರಾಜಕಾರಣಿಗಳು ಸಂದರ್ಭಕ್ಕೆ ತಕ್ಕ ಮುಖವಾಡದೊಂದಿಗೆ ಮೆರೆಯುವ ರೀತಿ ಅಧ್ಯಯನ ಯೋಗ್ಯವಾಗಿದೆ. ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಿಗೆ ಅಧ್ಯಕ್ಷ, ಕನ್ವೀನರ್, ಕಾರ್ಯದರ್ಶಿ ಇತ್ಯಾದಿ ಅಧಿಕಾರಿಗಳ ನೇಮಕಾತಿಯಲ್ಲಿ ಈ ರಾಜಕಾರಣಿಗಳ ಕೈವಾಡವಿರುತ್ತದೆ. ಚುನಾವಣೆಯ ದೃಷ್ಟಿಯಿಂದ ಜನರ ಮನಸ್ಸನ್ನು ತಮ್ಮ ಕಡೆಗೆ ಮರಳುಮಾಡಿಕೊಳ್ಳುವ ಎಲ್ಲಾ ಪ್ರಚೋರೋಪಾಯಗಳು ಜಾತ್ರೆಯ ನೇತೃತ್ವ ವಹಿಸಿದ ಇವರಿಂದ ಪ್ರಯೋಗವಾಗುತ್ತಿರುತ್ತವೆ."[೩೦]

ಪ್ರಸ್ತುತ ಸಂದರ್ಭದಲ್ಲಿ ಜಾತ್ರೆಗಳ ಅಧ್ಯಯನ ಮಾಡುವುದು ಕುತೂಹಲಕಾರಿ ವಿಷಯವಾಗಿದೆ. ಇವುಗಳನ್ನು ಕೆಳಕಂಡಂತೆ ವಿಭಾಗ ಮಾಡಿಕೊಂಡು ಅಧ್ಯಯನಕ್ಕೆ ತೊಡಗಲಾಗಿದೆ.

೨.೪.೧. ಕೃಷಿಮುಖಿ ಜಾತ್ರೆಗಳು

೨.೪.೨. ಸಂಸ್ಕೃತಿಮುಖಿ ಜಾತ್ರೆಗಳು

೨.೪.೩. ಉದ್ಯಮಮುಖಿ ಜಾತ್ರೆಗಳು

೨.೪.೧. ಕೃಷಿಮುಖಿ ಜಾತ್ರೆಗಳು

ಇವು ಗ್ರಾಮೀಣ ಹಿನ್ನಲೆಯುಳ್ಳಂತಹ ಜಾತ್ರೆಗಳು ಕೃಷಿಯೇ ಮೂಲವಾಗಿರುವ ನಮ್ಮ ನಾಡಿನಲ್ಲಿ ಪಶುಗಳು ಕೃಷಿಗೆ ಮೂಲಾಧಾರವಾಗಿವೆ. ಇವುಗಳ ವ್ಯಾಪಾರ ಸಂಬಂಧ ಕೊಳ್ಳು - ಕೊಡುಗೆ - ಇವುಗಳಿಗೆ ಭೂಮಿಕೆಯಾಗಿ ಜಾತ್ರೆಗಳು ನಡೆಯುತ್ತವೆ. ಮಾರ್ಚ್ - ಏಪ್ರಿಲ್ ತಿಂಗಳಲ್ಲಿ ಬೇಸಾಯ ಕಸುಬುಗಳೆಲ್ಲ ಮುಗಿದಿರುವುದರಿಂದ ತಮ್ಮಲ್ಲಿರುವ ದನಕರುಗಳನ್ನು ಮಾರಾಟ ಮಾಡಲು ಮತ್ತು ಕೊಳ್ಳಲು ಸೂಕ್ತ ವಾತಾವರಣವಿರುತ್ತದೆ. "ಒಕ್ಕಲುತನವೇ ಪ್ರಧಾನವಾಗಿರುವ ನಮ್ಮ ನಾಡಿನಲ್ಲಿ ಜರಗುವ ಜಾತ್ರೆಗಳಲ್ಲಿ ಕೆಲವಂತೂ 'ದನದ ಜಾತ್ರೆ'ಗಳೆಂದೇ ಹೆಸರಾಗಿವೆ. ದೇವರಗುಡ್ಡದ ಮೈಲಾರ ಲಿಂಗ ಜಾತ್ರೆ, ಸಿಂಗಟಾಲೂರ ವೀರಭದ್ರ ಜಾತ್ರೆ."[೩೧] ವದನಕಲ್ಲು ತಿಪ್ಪೇಸ್ವಾಮಿ ಜಾತ್ರೆ, ತುಮಕೂರಿನ ಸಿದ್ದಗಂಗಾ ಜಾತ್ರೆ, ಚಳ್ಳಕೆರೆ ಜಾತ್ರೆ ಹಾಗೂ ಅಜ್ಜಂಪುರ ಜಾತ್ರೆ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಇಲ್ಲಿ ಅತ್ಯುತ್ತಮ ರಾಸುಗಳಿಗೆ ಬಹುಮಾನ ಪ್ರಯೋಜಕತೆಯೂ ಇರುತ್ತದೆ.

೨.೪.೨. ಸಂಸ್ಕೃತಿಮುಖಿ ಜಾತ್ರೆಗಳು

"ಜಾತ್ರೆಗಳು ಜನಪದ ಜೀವನದ ಅವಿಭಾಜ್ಯ ಅಂಗವಾಗಿರುವಂತೆಯೇ ಜಾನಪದ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಿಗಳಾಗಿವೆ."[೩೨] ಧಾರ್ಮಿಕ ಶ್ರದ್ಧೆಯನ್ನು ಒಳಗೊಂಡು ಅದನ್ನು ಮೀರಿದ ಸಂಸ್ಕೃತಿ ವಾಹಕದ ವೇದಿಕೆಯಾಗಿ ಜಾತ್ರೆಗಳು ರೂಪುಗೊಳ್ಳುತ್ತವೆ. ಇವು ಗ್ರಾಮೀಣ ಸಮುದಾಯಕ್ಕೆ ಸೀಮಿತವಾಗಿರದೆ ನಗರ ಸಮುದಾಯದಲ್ಲೂ ಇವೆ. "ಜಾತ್ರೆಗಳು ನಿರ್ದಿಷ್ಟ ಪುರಾಣಗಳ ಪುನರಭಿನಯ ರೂಪಗಳು. ಈ ಪುನರಭಿನಯ ತನ್ನೊಳಗಿನ ಜಾನಪದೀಯ ಮೂಲ ದ್ರವ್ಯವಾದ ನಂಬಿಕೆಯನ್ನು

[illegible]

ಉಳಿಸಿಕೊಂಡು ಬದುಕಿನ ಸ್ಥಿತಿಗತಿಗನುಗುಣವಾಗಿ ರೂಪ, ಪುನರ್‌ರೂಪಗಳನ್ನು ಪಡೆಯುತ್ತಾ ನಡೆಯುತ್ತದೆ. ಯಾವುದೇ ಜಾತ್ರೆಯನ್ನು ಗಮನಿಸಿದರೂ ಅದು ನಿರ್ದಿಷ್ಟ ಸಮಾಜವೊಂದರ ಸ್ವರೂಪ ರಚನೆಯನ್ನು ವಿಶಿಷ್ಟ ರೀತಿಯಲ್ಲಿ ಮೈಗೂಡಿಸಿಕೊಂಡಿರುತ್ತದೆ. ಈ ಅರ್ಥದಲ್ಲಿಯೆ ಜಾತ್ರೆಗಳು ಆಯಾ ನಿರ್ದಿಷ್ಟ ಸಮಾಜಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕೀರ್ಣ ವ್ಯವಸ್ಥೆಯ ಮೂರ್ತ ರೂಪಗಳು." [೩೩] ನಗರಗಳಲ್ಲೂ ಜಾತ್ರೆಗಳು ನಡೆಯುತ್ತವೆ. ನಗರದ ಒಳಗಡೆ ಹಳ್ಳಿ ಇರುವುದರಿಂದ ಆ ಹಳ್ಳಿಗಳ ಹೆಸರಿನ ಬದಲಾವಣೆಯೊಂದಿಗೆ ಬಡಾವಣೆಗಳಾಗಿವೆ. ಆದರೆ ಹಳ್ಳಿಗಳಲ್ಲಿ ಹಿಂದೆ ನಡೆಯುತ್ತಿದ್ದ ಜಾತ್ರೆಗಳು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಬೆಂಗಳೂರು ನಗರದಲ್ಲಿ ದ್ರೌಪದಿ ಕರಗ, ಧರ್ಮರಾಯನ ಹಸಿಕರಗ, ಅಣ್ಣನ ಜಾತ್ರೆ ಹೀಗೆ ಸುಮಾರು ಪ್ರತಿವರ್ಷ ೨೫೦-೨೦೦೦ ಜಾತ್ರೆಗಳು ನಡೆಯುತ್ತವೆ ಅಂದರೆ ಆಶ್ಚರ್ಯಪಡಬೇಕಾಗಿಲ್ಲ. ಇಲ್ಲಿಯೂ ಸಹ ಕೆಂಡ ತುಳಿಯುವುದು, ಅಲಗು ಸೇವೆ, ಬಾಯಿಗೆ ಬೀಗ ಮುಂತಾದ ಆಚರಣೆಗಳಿವೆ.

೨.೪.೩. ಉದ್ಯಮಮುಖಿ ಜಾತ್ರೆಗಳು

ಇದು ಸಂಪೂರ್ಣವಾಗಿ ನಗರಗಳಿಗೆ ಸಂಬಂಧಪಟ್ಟಂತಹ ಜಾತ್ರೆಗಳು. ಇಲ್ಲಿ ಸಂಸ್ಕೃತಿ, ಪರಂಪರೆ ಎನ್ನುವುದು ಗೈರುಹಾಜರಿಯಾಗಿ ಸಂಪೂರ್ಣವಾಗಿ ವಾಣಿಜ್ಯಮಯವಾಗಿರುತ್ತವೆ. ನಗರಗಳಲ್ಲಿ ನಡೆಯುವ ಕರಕುಶಲ ಪ್ರದರ್ಶನವಾಗಲಿ, ಹೈಟೆಕ್ ಮೇಳ, ಜಾನಪದ ಮೇಳ, ಕಂಪ್ಯೂಟರ್ ಮೇಳ, ಖಾದಿ ಸಪ್ತಾಹಗಳು, ಪುಸ್ತಕ ಮೇಳ, ವೈವಿಧ್ಯಮಯ ಸಮ್ಮೇಳನಗಳು, ಸಾಹಿತ್ಯ ಸಮ್ಮೇಳನಗಳು ಮುಂತಾದವು ನಗರಗಳಲ್ಲಿ ನಡೆಯುತ್ತವೆ. ಇಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯಗಳಿರದೆ, ಉದ್ಯಮ ಮತ್ತು ವಾಣಿಜ್ಯೀಕರಣದ ಕೇಂದ್ರಬಿಂದುವಾಗಿರುತ್ತವೆ. ಹಳ್ಳಿಯ ಜಾತ್ರೆಗಳಲ್ಲಿ ದನ ಕೊಳ್ಳಲು ಜಾತ್ರೆಗೆ ಹೋದರೆ, ನಗರಗಳಲ್ಲಿ ಗ್ರಾಹಕರು ತಮಗೇ ಬೇಕಾದ ವಸ್ತುಗಳನ್ನು ಕೊಳ್ಳಲು ಇಂತಹ ಮೇಳಗಳಿಗೆ ಹೋಗುತ್ತಾರೆ. ಬೆಂಗಳೂರಿನ ಅರಮನೆ ಮೈದಾನವೊಂದರಲ್ಲೇ, ತಿಂಗಳಿಗೆ ಸುಮಾರು ೧೫-೧೬ ಇಂತಹ ಜನ ಜಾತ್ರೆಗಳು ನಡೆಯುತ್ತವೆ.

೨.೫. ನಗರ ದೇವತೆಗಳು

"ಪ್ರಾಚೀನ ಭಾರತದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಗ್ರಾಮದೇವತೆಯ ದೇವಾಲಯವಿರುತ್ತಿತ್ತು. ಗ್ರಾಮಗಳು ನೆಲೆಗೊಂಡಂದಿನಿಂದ ಅಂದರೆ ವೇದಪೂರ್ವ ಕಾಲದಿಂದಲೂ ಗ್ರಾಮದೇವತೆಯ ಸಂಪ್ರದಾಯ ಇದ್ದಿರಬಹುದೆಂದು ಹೇಳುತ್ತಾರೆ."[೩೪] ಗ್ರಾಮದೇವತೆಯ ಸಂಪ್ರದಾಯವು ಪ್ರತಿ ಊರುಗಳಲ್ಲಿ ಇರುವಂತೆ ಪ್ರತಿನಗರಗಳಲ್ಲೂ ಇವೆ. ಹಲವಾರು ಹಳ್ಳಿಗಳು ನಗರದ ಒಳಗಡೆ ಇರುವುದರಿಂದ ಗ್ರಾಮದೇವತೆಗಳ ನೆಲೆ ಇರುತ್ತದೆ. "ಕೃಷಿ ಮತ್ತು ಪಶು ಸಂಗೋಪನ ಸಂಸ್ಕೃತಿಯಿಂದ ಬಂದ ಗ್ರಾಮದೇವತೆ ಆಯಾ ಗ್ರಾಮದ ಸಾಮೂಹಿಕ ವಿಧೇಯತೆಯಲ್ಲಿ ಸಂಸ್ಥಾನಗೊಂಡಿರುತ್ತದೆ. ಈ ದೇವತೆಯ ಮೇಲಿನ ನಿಷ್ಠೆಯಿಂದಲೇ ಊರಿನಲ್ಲಿ ಹಲವಾರು ಕಾರ್ಯಗಳು

ನಡೆಯುತ್ತವೆ. 'ಭಾರತಕ್ಕೆ ಆರ್ಯರ ಆಗಮನದ ನಂತರ ಅವರ ವಸಾಹಾತುಶಾಹಿ ದಬ್ಬಾಳಿಕೆಯಲ್ಲಿ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾ ಬಂದ ದ್ರಾವಿಡರು ಅಥವಾ ಇಂಡಿಯಾದ ಮೂಲ ನಿವಾಸಿಗಳು ವರ್ಣಭೇದ ನೀತಿಯ ಶ್ರೇಣೀಕರಣಕ್ಕೆ ಒಳಗಾದರು ಅನಂತರ ಗ್ರಾಮೀಣ ಭಾರತದ ಆರಾಧನಾ ವಿಚಾರಗಳಲ್ಲಿ ಆದ ಬದಲಾವಣೆಗಳು ಇನ್ನಷ್ಟು ಕುತೂಹಲಕರ. ಅವರ ದೇವತೆಗಳಾದ ಬ್ರಹ್ಮ, ವಿಷ್ಣು, ಮಹೇಶ್ವರ, ಲಕ್ಷ್ಮಿ, ಸರಸ್ವತಿ, ಪಾರ್ವತಿ, ಅಗ್ನಿ, ವಾಯು, ಇಂದ್ರ ಮುಂತಾದ ಆಮದು ದೇವತೆಗಳ ಗಾಢ ಪ್ರಭಾವವಾಯಿತು. ಈ ಕಾರಣಕ್ಕಾಗಿ ಚೌಡಮ್ಮ, ಚೌಡೇಶ್ವರಿಯಾಗಿ; ಮಾರಮ್ಮ, ಮಹೇಶ್ವರಿಯಾಗಿ, ಮಾದಪ್ಪ ಮಾದೇಶ್ವರನಾಗಿ, ಸಿದ್ದಪ್ಪ ಸಿದ್ದಲಿಂಗೇಶ್ವರನಾಗಿ ಪರಿವರ್ತಿತವಾಯಿತು"[೩೫] ಬೆಂಗಳೂರಿನಂತಹ ಮೆಟ್ರೊಪಾಲಿಟಿಯನ್ ಸಿಟಿಯಲ್ಲಿ ಗ್ರಾಮದೇವತೆಗಳು ಸುಮಾರು ೩೦೦-೩೫೦ಕ್ಕೂ ಹೆಚ್ಚು ಇವೆ. ಸಾಮಾನ್ಯವಾಗಿ ಪ್ರತಿಯೊಂದು ಬಡಾವಣೆಯಲ್ಲಿ ಗ್ರಾಮದೇವತೆ ಇದ್ದಾಳೆ.

ಗಾಂಧಿನಗರದಲ್ಲಿ ಅಣ್ಣಮ್ಮ ದೇವತೆಗೆ ಸುಮಾರು ೪೫೦ ವರ್ಷಗಳ ಇತಿಹಾಸವಿದೆ. ಇವಳು ಮೊದಲು ಗ್ರಾಮದೇವತೆಯಾಗಿದ್ದು, ಬೆಂಗಳೂರು ಮಹಾನಗರವಾಗಿ ರೂಪುಗೊಂಡಂತೆಲ್ಲ, ನಗರದೇವತೆಯಾಗಿ ಮಾರ್ಪಟ್ಟಿದ್ದಾಳೆ. ಈಗ ಈ ದೇವತೆಯನ್ನು 'ನಗರ ದೇವತೆ ಅಣ್ಣಮ್ಮ' ಎಂತಲೇ ಕರೆಯುವುದುಂಟು. ಬಾಗಲುಗುಂಟೆಯಲ್ಲಿರುವ ಮಾರಮ್ಮ ಗ್ರಾಮದೇವತೆ - ಈ ದೇವತೆಯ ನಾಮ ಶಿಷ್ಟೀಕರಣಗೊಂಡು ಈಗ ಮಹಾಲಕ್ಷ್ಮಿಯಾಗಿದ್ದಾಳೆ. ಆದರೂ ಗ್ರಾಮ ದೇವತೆಯ ಜಾತ್ರೆಯಲ್ಲಿ ನಡೆಯುವ ಬಲಿ ಪದ್ಧತಿ, ಅಲಗು ಸೇವೆ, ದೇವರು ಮೈದುಂಬುವುದು, ಕೆಂಡ ತುಳಿಯುವ ಆಚರಣೆಗಳಿವೆ ಇಲ್ಲಿಗೆ ಆರುತಿಯನ್ನು ಅಕ್ಕಪಕ್ಕದ ಬಡಾವಣೆಗಳಿಂದಲೂ ತರುತ್ತಾರೆ. ಕಲಾಸಿಪಾಳ್ಯದ ಸರ್ಕಲ್‌ನಲ್ಲಿರುವ ಮಾರಮ್ಮ ದೇವತೆ ಬ್ರಿಟಿಷ್ ಕಾಲದಲ್ಲಿ ಸ್ಥಾಪನೆಯಾಗಿರುವುದೆಂದು ಹೇಳುತ್ತಾರೆ. ಈಗ ಇದಕ್ಕೆ ಲೋಕಮಾತೆ ಎಂದು ಕರೆಯುತ್ತಾರೆ. ಹಿಂದೆ ಇಲ್ಲಿ ಕೊಂಡ ಹಾಯುವುದು ಇತ್ತಂತೆ. ಈಗ ಸಂಪೂರ್ಣವಾಗಿ ಬಸ್ ನಿಲ್ದಾಣವಾಗಿರುವುದರಿಂದ ಸ್ಥಳದ ಕೊರತೆಯಿಂದ ಈ ಆಚರಣೆಯನ್ನು ನಿಲ್ಲಿಸಿರಬಹುದು.

ಮಾವಳ್ಳಿಯಲ್ಲಿರುವ ಬಿಸಿಲುಮಾರಮ್ಮ ತುಂಬ ಹೆಸರಾದ ಗ್ರಾಮದೇವತೆ. ಈ ದೇವತೆ ಸಂಪೂರ್ಣವಾಗಿ ಬಿಸಿಲಿನಲ್ಲೆ ಇರಬೇಕು, ಆದ್ದರಿಂದ ಗುಡಿಯನ್ನು ಕಟ್ಟಿಲ್ಲ ಸುತ್ತ ಗೋಡೆಯನ್ನು ಮಾತ್ರ ಕಟ್ಟಿದ್ದಾರೆ. ಇಲ್ಲಿ ಪ್ರತಿವರ್ಷ ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಜಾತ್ರೆ ನಡೆಯುತ್ತದೆ. ಬೆಂಗಳೂರನ್ನು ಕಟ್ಟಿದ ಕೆಂಪೇಗೌಡರ ಮನೆದೇವತೆಯಾದ ಕೆಂಪಮ್ಮ; ಹಲಸೂರು, ಮದ್ರಾಸ್ ರಸ್ತೆಯಲ್ಲಿದೆ. ಇಲ್ಲಿ ಸಿಡುಬು, ದಡಾರ, ಕಾಣಿಸಿಕೊಂಡವರು ಈಗಲೂ ಬಂದು ಮೊಸರು ಮತ್ತು ಉಪ್ಪನ್ನು ಹೊರಗಡೆ ಇರುವ ಶಿಲೆಯ ಮೇಲೆ ಸುರಿಯುತ್ತಾರೆ. ಇಲ್ಲಿ ಪ್ರತಿವರ್ಷ ವೈಭವಯುತವಾಗಿ ಉತ್ಸವವನ್ನು ಮಾಡುತ್ತಾರೆ. ಯಲಹಂಕ ನಾಡಪ್ರಭುವಾದ ಗಿಡ್ಡಪ್ಪಗೌಡನಿಗೆ ಬಹಳಕಾಲ ಮಕ್ಕಳಾಗದಿದ್ದಕ್ಕೆ ಈ ದೇವತೆಗೆ ನಡೆದುಕೊಂಡರಂತೆ. ಆಗ ಗಂಡು ಮಗುವಾಯಿಂತಂತೆ; ಅವನಿಗೆ 'ಕೆಂಪೇಗೌಡ' ಎಂದು ಹೆಸರಿಟ್ಟರೆಂದು ಒಂದು ಪ್ರತೀತಿ ಇದೆ. ಇದರ ಪಕ್ಕದಲ್ಲೆ 'ಪ್ಲೇಗ್ ಮಾರಿಯನ್' ದೇವಸ್ಥಾನವಿದೆ. ಬೆಂಗಳೂರು ನಗರದಲ್ಲಿ ತಮಿಳು ಜನಾಂಗ ಇರುವೆಡೆಯಲ್ಲಿ 'ಮಾರಿಯಮ್ಮ', 'ಮಾರಿಯನ್' ಮುತ್ತುಮಾರಿಯಮ್ಮ

ಎಂಬಂತಹ ನಾಮ ವಿಶೇಷಣ ಇರುವ ಗ್ರಾಮದೇವತೆಗಳು ಇರುತ್ತವೆ. ಈ ಗ್ರಾಮದೇವತೆಗಳಿಗೆ ಪೂಜಾರಿಗಳು ತಮಿಳು ಜನಾಂಗದವರೇ ಆಗಿರುತ್ತಾರೆ. ಶಿವಾಜಿನಗರದಲ್ಲಿರುವ ಓಂ ಶಕ್ತಿ ದೇವಸ್ಥಾನದಲ್ಲಿರುವ ಪದ್ಧತಿಯು ತುಂಬ ಕುತೂಹಲಕರವಾಗಿದೆ. ಇಲ್ಲಿ ಬೈಬಲ್, ಭಗವದ್ಗೀತೆ ಮತ್ತು ಕುರಾನ್ ಮೂರೂ ಧರ್ಮಗ್ರಂಥಗಳನ್ನು ಇಟ್ಟು ಪೂಜಿಸುತ್ತಾರೆ. ಇಲ್ಲಿ ಗ್ರಾಮದೇವತೆಯೂ ಇದೆ. ಆದರೆ ಪೂಜಾರಿಗಳಿಲ್ಲ. ಭಕ್ತಾದಿಗಳೇ ಸ್ವತಃ ಮಂಗಳಾರತಿ ಮಾಡಿ, ದೇವರಿಗೆ ಊದುಬತ್ತಿ ಹಚ್ಚಿ ಹೋಗುತ್ತಾರೆ. ಇದರ ವ್ಯವಸ್ಥಾಪಕ ಮತ್ತು ಸಂಸ್ಥಾಪಕ ತಮಿಳು ಜನಾಂಗದವನಾಗಿದ್ದು, ಪ್ರತಿವರ್ಷ ಶರಣಂ ಅಯ್ಯಪ್ಪ ದೇವರಿಗೆ ಇಡುಮುಡಿ ಕಟ್ಟುವ ಮತ್ತು ತಮಿಳುನಾಡಿಗೆ ಹೋಗುವ ರೀತಿಯಲ್ಲಿ; ಓಂ ಶಕ್ತಿ ಸೇರುವವರು 'ಇಡುಮುಡಿ' ಕಟ್ಟಿ ಇಲ್ಲಿಂದಲೇ ತಮಿಳುನಾಡಿನಲ್ಲಿರುವ ಮೂಲ ದೇವಸ್ಥಾನಕ್ಕೆ ಹೋಗಿಬರುತ್ತಾರೆ. ಕೇವಲ ಸ್ತ್ರೀಯರಿಗೆ ಮಾತ್ರ ಈ ಅವಕಾಶ. ಶಿವಾಜಿನಗರದಲ್ಲಿರುವ ದಂಡು ಮಾರಮ್ಮ ಈ ದೇವತೆಗೆ ಮೊದಲಿನಿಂದಲೂ ಬ್ರಾಹ್ಮಣರು ಪೂಜೆ ಮಾಡುತ್ತಿರುವುದರಿಂದ ಶಾಕಹಾರಿ ದೇವತೆಯಾಗಿಯೇ ಉಳಿದಿದ್ದಾಳೆ. ಜಯನಗರದಲ್ಲಿರುವ 'ಪಟಾಲಮ್ಮ' ಚಿಕ್ಕಪೇಟೆಯಲ್ಲಿರುವ 'ಚೌಡಮ್ಮ' ಬಸವನಗುಡಿಯಲ್ಲಿರುವ 'ಯುಲ್ಲಮ್ಮ', ಸುಂಕದಕಟ್ಟೆಯಲ್ಲಿರುವ 'ಸೊಲ್ಲಾಪುರದಮ್ಮ' ಇಂದಿರನಗರದಲ್ಲಿರುವ ಮಾರಿಯಮ್ಮ, ಟಿನ್ ಫ್ಯಾಕ್ಟರಿ ಬಳಿ ಇರುವ ಮುತ್ತುಮಾರಿಯಮ್ಮ, ಮೈಸೂರು ರಸ್ತೆಯಲ್ಲಿರುವ ಪೆಲ್ಲಿಗಮ್ಮ, ಹೆಬ್ಬಾಳದಲ್ಲಿರುವ ಪಿಳೈಕಮ್ಮ ಮುಂತಾದ ಅಸಂಖ್ಯಾತ ಗ್ರಾಮದೇವತೆಗಳನ್ನು ಬೆಂಗಳೂರನಲ್ಲಿ ಕಾಣಬಹುದು.

ಭಾರತದಂತಹ ತೃತೀಯ ಜಗತ್ತಿನ 'ನಗರಗಳಲ್ಲಿ' ಗ್ರಾಮದೇವತೆಗಳು ಇನ್ನೂ ಪೂಜೆಗೆ ಒಳಗಾಗುತ್ತಿವೆ. ಆಯಾ ಪ್ರದೇಶದ ಭೌಗೋಳಿಕ ಲಕ್ಷಣ ಆಯಾ ಜನಾಂಗದ ಆಚಾರ - ವಿಚಾರ ಸಂಪ್ರದಾಯ ಮತ್ತು ಇಂಥವುಗಳಿಗೆ ಪರಿಹಾರಾತ್ಮಕವಾಗಿ ಬಂದಿರುವ ಶಿಕ್ಷಣ, ಆಧುನಿಕತೆ, ಎಚ್ಚರ ಮುಂತಾದವುಗಳಲ್ಲೆದರ ಪ್ರಭಾವದಿಂದ ಗ್ರಾಮದೇವತೆಗಳು ಹೆಚ್ಚು ಶಿಷ್ಟೀಕರಣಕ್ಕೆ ಒಳಗಾಗುತ್ತಿವೆ. "ಜನರ ಸ್ಥಿತಿಗತಿಗಳಾದಂತೆ ಗ್ರಾಮದೇವತೆ ಇರುವಳು, ಜನರು ಬದಲಾದಂತೆ ಗ್ರಾಮ, ಗ್ರಾಮದೇವತೆಯು ಬದಲಾಗುವಳು, ಅವರಿದ್ದಂತೆ ಅವಳಿರುವಳು, ಅವರುಂಡದ್ದು ಉಂಡು, ಉಟ್ಟಿದ್ದು ಉಟ್ಟು ಅವರು ಕನಸು ಕಂಡದ್ದು ಕಂಡು; ಅವರೇ ಅವಳಾಗುವಳು, ಅವಳೇ ಅವರಾಗುವರು. ಅದಕ್ಕಾಗಿ ಗ್ರಾಮದೇವತೆಗಳ ಮತ್ತು ಆ ಭಾಗದ ಜನರ ಸ್ಥಿತಿಗತಿಗಳ ಅಧ್ಯಯನ ಮುಖ್ಯವಾದದ್ದು."[೩೬] ಎಂಬ ವಾಲೀಕಾರರ ಮಾತು ಬದಲಾಗುತ್ತಿರುವ ಈ ಪರಿಸರದಲ್ಲಿ ಗ್ರಾಮದೇವತೆಗಳ ವಿಷಯಕ್ಕೆ ಸಂಬಂಧಪಟ್ಟಂತೆ ಬಹಳ ಮೌಲಿಕವಾದುದು.

ಹೀಗೆ ನಗರಗಳಲ್ಲಿ ಅನೇಕ ಗ್ರಾಮದೇವತೆಗಳು ಮತ್ತು ಅವುಗಳ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆ. ಆಚರಣೆಗಳು ಹೆಚ್ಚು ಶಿಷ್ಟೀಕರಣಕ್ಕೆ ಒಳಗಾಗುತ್ತಾ ಬರುತ್ತಿವೆ. ಕೃಷಿ ಮತ್ತು ಪಶುಪಾಲನೆಯ ನೆರಳಿನಲ್ಲಿ ಬಂದಂತಹ ಈ ಗ್ರಾಮದೇವತೆಗಳು; ನಗರಗಳ ಕಾರ್ಖಾನೆಯ ಸದ್ದುಗದ್ದಲಗಳಲ್ಲಿ ತನ್ನ ಉಳಿವು ಅಳಿವನ್ನು ಯಾವ ರೀತಿ ನಿರ್ಧರಿಸುತ್ತವೆ ಎಂಬುದು ಜಾನಪದ ವಿದ್ಯಾರ್ಥಿಗಳಿಗೆ ಅಧ್ಯಯನ ಶೀಲ ವಸ್ತುವಾಗಿದೆ.

ಕೊನೆ ಟಿಪ್ಪಣಿಗಳು

೧. ಪ್ರೊ. ಡಿ. ಲಿಂಗಯ್ಯ, ಡಾ. ಕೆ. ಆರ್. ಸಂಧ್ಯಾರೆಡ್ಡಿ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ. ೧೦೪.
೨. ಸಂ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ. ೨೭೦.
೩. ಟಿ. ಎಸ್. ಸತ್ಯನಾಥ್, ಕನ್ನಡ ಜಾನಪದ ಕೆಲವು ಮುಖಗಳು, ಪುಟ. ೬೨.
೪. ಡಾ. ಬಿ.ಎಸ್. ಸ್ವಾಮಿ, ಜಾನಪದ ಸೌರಭ, ಪುಟ. ೩೩೭.
೫. ಸಂಪಾದಕರು ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ. ೧೬೨.
೬. ಅದೇ..... ಪುಟ. ೧೬೪.
೭. ಅದೇ....... ಪುಟ ೧೬೩.
೮. ಡಾ. ಜಿ.ಶಂ.ಪ, ಮೈಸೂರು ನಗರದ ಜನಪದ ಸಂಪ್ರದಾಯ, ೯೦.
೯. ಎ.ವಿ. ನಾವಡ, ಒಂದು ಸೊಲ್ಲು ನೂರು ಸ್ವರ, ಪುಟ. ೮೮.
೧೦. ಸಂ. ಡಾ. ರಂಗಾರೆಡ್ಡಿ ಕೋಡಿರಾಂಪುರ, ಜಾನಪದ, ಪುಟ. ೫೧.
೧೧. ಸಂ. ಎಚ್. ಜೆ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ. ೧೮೮
೧೨. ಡಾ|| ಕೆ.ಅರ್. ಸಂಧ್ಯಾರೆಡ್ಡಿ ಜಾನಪದ ಸ್ವರೂಪ ಮತ್ತು ಸಾಹಿತ್ಯ, ೧೯
೧೩. ಸಂ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ೧೯೧.
೧೪. ಡಾ. ಮಧು ವೆಂಕಾರೆಡ್ಡಿ, ಜಾನಪದ ಕಸೂತಿ, ಪುಟ ೧-೫
೧೫. ಬರಗೂರು ರಾಮಚಂದ್ರಪ್ಪ, 'ಬೆಂಗಳೂರು ನಗರ ಎಂಬ ಒಂದು ಹಳ್ಳಿ', ಜನಪದ ೧೯೯೩, ಪುಟ ೪೯.
೧೬. ಶಂಕರ ಪಾಟೀಲ, ಚಿತ್ರಕಲಾ ಚಿಂತನೆ, ಪುಟ ೪.
೧೭. ಡಾ. ಎಚ್. ಜೆ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ ೧೫೦.
೧೮. ಅಶೋಕ್ ಬಿ.ಎಸ್, ಪ್ರಜಾವಾಣಿ ದಿನ ಪತ್ರಿಕೆ, ೧೭.೦೯.೦೩.
೧೯. ಮಧು ವೆಂಕಾರೆಡ್ಡಿ, ಜಾನಪದ ಕಸೂತಿ, ಪುಟ ೩೧
೨೦. ಡಾ|| ಪಿ.ಕೆ. ಖಂಡೋಬ, ಜಾನಪದ ಮುನೋಟ, ಪುಟ ೧೨.
೨೧. ಶ್ರೀಗಣಕನಾಥ ಎಕ್ಕಾರು, ಜನಪದ ಆಟಗಳು, ಪುಟ ೧೫.
೨೨. ದೇ.ಜ.ಗೌ, ಜಾನಪದ ಅಧ್ಯಯನ, ಪುಟ ೨೫೮.
೨೩. ಶ್ರೀ ಬಿ.ನ. ಸುಂದರರಾಯ, ಬೆಂಗಳೂರಿನ ಇತಿಹಾಸ, ಪುಟ ೪.
೨೪. ಡಾ|| ಜೀ.ಶಂ.ಪ, ಜಾನಪದ ಕೆಲವು ಮುಖಗಳು, ಪುಟ ೮೪.
೨೫. ಡಾ|| ಜೀ.ಶಂ.ಪ, ಜಾನಪದ ಕೆಲವು ಮುಖಗಳು, ಪುಟ ೯೧
೨೬. ಡಾ|| ಬಿ ಎಸ್. ಸ್ವಾಮಿ, ಜಾನಪದ ಸೌರಭ, ಪುಟ ೩೪೫.
೨೭. ಡಾ|| ಬಸವರಾಜ ಸಬರದ, ಬಂಡಾಯ ಕಾವ್ಯ ಮತ್ತು ಜಾನಪದ, ಪುಟ ೮೪.
೨೮. ಸಂ. ರಂಗಾರೆಡ್ಡಿ ಕೋಡಿರಾಂಪುರ, ಜಾನಪದ ೧೯೯೩' ಪುಟ ೧೧೬
೨೯. ಸಂ. ಸಿ.ಎನ್. ಶಿವಕುಮಾರಸ್ವಾಮಿ, ಕರ್ನಾಟಕ ಜಾತ್ರೆಗಳು, ಪುಟ ೬೮.
೩೦. ಅದೇ ಪುಟ ೧೯೬
೩೧. ಅದೇ ಪುಟ ೬೫.
೩೨. ಡಾ|| ದೇ.ಜ.ಗೌ, ಕರ್ನಾಟಕ ಜಾನಪದ, ಪುಟ ೧೬೮.
೩೩. ಎಸ್. ಜಿ. ಸಿದ್ಧಾರಾಮಯ್ಯ, 'ಆಧುನಿಕ ಸಂದರ್ಭಗಳಲ್ಲಿ ಜಾತ್ರೆಗಳು' - ಲೇಖನ.
೩೪. ಪ್ರ. ಸಂ. ಡಾ|| ಎಂ. ಎಸ್. ಸುಂಕಾಪುರ, ಜಾನಪದ ಸಾಹಿತ್ಯ ದರ್ಶನ ಭಾಗ ೮, ಪುಟ ೨೧೫.
೩೫. ಹಿ.ಚಿ. ಬೋರಲಿಂಗಯ್ಯ, ಕಾಡು ಕಾಂಕ್ರಿಟ್ ಮತ್ತು ಜಾನಪದ, ಪುಟ ೭೪.
೩೬. ಡಾ|| ಚೆನ್ನಣ್ಣ ವಾಲೀಕಾರ, ಹೈದರಬಾದ್ ಕರ್ನಾಟಕ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪುಟ ೩೧೭.

ಅಧ್ಯಾಯ - ೩

ಆಡುಮಾತಿನ ಜಾನಪದ

ಆಡುಮಾತಿನ ಜಾನಪದ

ಆಡುಮಾತಿನ ಜಾನಪದ ಎಂಬುದು ಜನಪದರ ಸ್ಮೃತಿಗಳಲ್ಲಿ ಮೌಖಿಕವಾಗಿ ಉಳಿದುಕೊಂಡು ಬಂದಿರುವಂತಹ ಜಾನಪದ ಪ್ರಕಾರವಾಗಿದ್ದು; ಇದು ಇತ್ತೀಚೆಗಷ್ಟೆ ಹಾಸ್ಯ ಬರಹಗಳ ರೂಪದಲ್ಲಿ ಲಿಖಿತರೂಪ ಪಡೆಯುತ್ತಿದೆ. ಈ ಪ್ರಕಾರವು ಯಾವುದಾದರು ಘಟಿಸಿದ ಘಟನೆಯೊಂದರ ಸುತ್ತ ಹುಟ್ಟಿಕೊಂಡ ಸುದ್ದಿಯಾಗಿದ್ದು; ಇಲ್ಲಿ ನೈಜತೆ ಸಂಪೂರ್ಣವಾಗಿ ವೈಭವೀಕರಣಗೊಂಡಿರುತ್ತದೆ. ಇಂದಿಗೂ ಜನಪದರಲ್ಲಿ ಮೌಖಿಕ ರೂಪದಲ್ಲಿ ಬಾಯಿಂದ ಬಾಯಿಗೆ ಹೆಚ್ಚು ಪ್ರಚಾರ ಪಡೆಯುತ್ತಿರುವ ಪ್ರಕಾರವೂ ಆಗಿದೆ. ಇಂತಹ ಘಟನೆಗಳು ಇತ್ತೀಚಿನವರೆಗೆ ಎಲ್ಲೂ ದಾಖಲಾಗದೆ ಮೌಖಿಕತ್ವವನ್ನೇ ಜೀವಾಳವಾಗಿಸಿಕೊಂಡಿವೆ. ಹಾಸ್ಟಲ್‌ಗಳಲ್ಲಿ ಹೆಚ್ಚು ಊಟಮಾಡುತ್ತಿದ್ದ ವಿದ್ಯಾರ್ಥಿ, ಮರೆಗುಳಿನ ಅಧ್ಯಾಪಕ, ದಡ್ಡ ರಾಜಕಾರಣಿಗಳ ಹಾಸ್ಯಮಯ ಸನ್ನಿವೇಶಗಳು, ಅತಿಬುದ್ಧಿವಂತ ಸಾಹಸ ಕಾರ್ಯಗಳು, ಇಂತಹ ಅನೇಕ ಬಗೆಯ ಘಟನೆಗಳು ತಲೆಮಾರಿನಿಂದ ತಲೆಮಾರಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಉಳಿದು ಬಂದಿರುತ್ತವೆ. ಇವು ಆಯಾ ಪ್ರದೇಶಗಳಲ್ಲೇ ಹೆಚ್ಚಿನ ಪ್ರಚಲಿತವಿದ್ದು ಇವುಗಳನ್ನು ಗಂಭೀರವಾಗಿ ತೆಗೆದುಕೊಳ್ಳದೆ ವ್ಯಕ್ತಿಯೋರ್ವನ ಗುಣಾಗುಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಆಶಯಗಳಾಗಿ ನಮ್ಮ ನಡುವೆ ಕಂಡುಬರುತ್ತದೆ. "ಇದೇ ನಿಟ್ಟಿನಲ್ಲಿ ಆಲೋಚನೆ ಮಾಡಿರುವ ಅಮೇರಿಕಾದ ಸುಪ್ರಸಿದ್ಧ ಜಾನಪದ ವಿದ್ವಾಂಸರಾದ ರಿಚರ್ಡ್ಸ್ ಎಂ. ಡಾರ್ಸನ್ American Folklore ಎಂಬ ತಮ್ಮ ಗ್ರಂಥದಲ್ಲಿ ಆಧುನಿಕ ಜಾನಪದದ ಬಗ್ಗೆ ಕೂಲಂಕುಶವಾಗಿ ಚರ್ಚೆ ನೆಡೆಸಿದ್ದಾರೆ. ಮರೆವಿಗೆ ಮಾದರಿಯಾಗಿರುವ ಪ್ರಾಧ್ಯಾಪಕರ ಬಗ್ಗೆ ಹುಟ್ಟಿಕೊಂಡಿರುವ ಅನೇಕ ಕಥೆಗಳನ್ನು ಉಲ್ಲೇಖಿಸಿ ಆಧುನಿಕ ಜಾನಪದದಲ್ಲಿ ಸೇರ್ಪಡೆಗೊಳಿಸುತ್ತಾರೆ."[೧]

ಒಬ್ಬ ಪ್ರಾಧ್ಯಾಪಕ ಕಾರು ತೆಗೆದುಕೊಂಡು ಯಾವುದೋ ಊರಿಗೆ ಹೋದ. ಅಲ್ಲಿ ಕಾರು ಬಿಟ್ಟು ರೈಲು ಹತ್ತಿ ತನ್ನೂರಿಗೆ ಹಿಂದಿರುಗಿದ ತನಗೋಸ್ಕರ ಕಾರು ತಂದು ನಿಲ್ದಾಣದಲ್ಲಿ ಮಡದಿ ಕಾದುಕೊಂಡಿರಬೇಕೆಂದು ಕಾದ. ಅಂಥದೇ ಮತ್ತೊಂದು ಕತೆ ಮಿಚಿಗನ್ ವಿಶ್ವವಿದ್ಯಾಲಯದ ಗಣಿತವಿಜ್ಞಾನದ ಪ್ರಾಧ್ಯಾಪಕನಿಗೆ ಸಂಬಂಧಿಸಿದ್ದು. ಉಸಿರು ತುಂಬಿಸಿಕೊಳ್ಳಲು ದಾರಿ ಬದಿಯ ಬಂಕಿನ ಬಳಿ ಅವನು ಕಾರು ನಿಲ್ಲಿಸಿದ; ಅಷ್ಟರಲ್ಲಿ ಹೆಂಡತಿ ಪಕ್ಕದಲ್ಲಿದ್ದ ವಿಶ್ರಾಂತಿಧಾಮಕ್ಕೆ ಧಾವಿಸಿದ್ದಳು. ಅವಳು ಕೆಲವು ನಿಮಿಷಗಳಲ್ಲಿ ಹೊರಗೆ ಬಂದು ನೋಡುತ್ತಾಳೆ. ಗಂಡನು ಇಲ್ಲ ಕಾರೂ ಇಲ್ಲ ಹೊಸದಾಗಿ ಆ ಪ್ರದೇಶಕ್ಕೆ ಬಂದಿದ್ದರಿಂದ ಆಂಗ್ಲಭಾಷೆಯ ಪರಿಚಯವಿಲ್ಲದರಿಂದ ಅವಳು ತುಂಬ ಪೇಚಾಡಬೇಕಾಯಿತು. (American Foklore by Richared M. Dorson - P.226)

[illegible]

[illegible]

[illegible]

ಪ್ರಾಧ್ಯಾಪಕರುಗಳ, ಬಗೆಗಳಂತೋ, ಅಂತೆಯೇ ನಮ್ಮ ಮಂತ್ರಿಗಳ ಬಗ್ಗೆಯೂ ಇಂತಹ ಕತೆಗಳು ಸಾಕಷ್ಟು ಸೃಷ್ಟಿಯಾಗಿರುವುದನ್ನು ಕಾಣಬಹುದು. ಒಬ್ಬ ಮಂತ್ರಿ ಪ್ರವಾಸ ಹೊರಟಿದ್ದರು, ಬಿರು ಬಿರನೆ ಸಾಗುತ್ತಿದ್ದ ಕಾರು ದಾರಿಯಲ್ಲಿ ಹಠತ್ತಾನೆ ನಿಂತಿತು. ನಿದ್ರಾಮುದ್ರಿತರಾಗಿದ್ದ ಸಚಿವರು ಜಗ್ಗನೆದ್ದು ಏನಾಗಿದೆಯೆಂದು ಚಾಲಕನನ್ನು ಪ್ರಶ್ನಿಸಿದರು; ಯಾರೋ ದಾರಿಗಡ್ಡಲಾಗಿ ಕಲ್ಲು ಜೋಡಿಸಿದ್ದಾರೆಂದು ಚಾಲಕ ಉತ್ತರಿಸಿದ. ಜೋರಾಗಿ ಹಾರನ್ ಮಾಡಿ ಕಾರು ಬಿಡು ಎಂದು ಸಚಿವರು ಚಾಲಕನಿಗೆ ಹುಕುಮ್ ಮಾಡಿದರು.

ಒಂದು ರಾಜ್ಯದ ಮಂತ್ರಿ ಮುಂಬಯಿಯಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಉದ್ಘಾಟನಾ ಭಾಷಣ ಮಾಡಬೇಕಾಗಿತ್ತು. ಭಾಷಣ ಸಿದ್ಧ ಮಾಡುವಂತೆ ಅವರು ತಮ್ಮ ಆಪ್ತ ಸಹಾಯಕರಿಗೆ ತಾಕೀತು ಮಾಡಿದರು. ಭಾಷಣ ಹದಿನೈದು ನಿಮಿಷದ ಅವಧಿಯಲ್ಲಿ ಮುಗಿಯಬೇಕೆಂದು ಹೇಳಲಾಗಿತ್ತು. ಆಪ್ತ ಸಹಾಯಕ ಭಾಷಣದ ಮೂರು ಪ್ರತಿಗಳನ್ನು ಫೈಲಿನಲ್ಲಿಟ್ಟು ಕಳುಹಿಸಿದರು. ಮಂತ್ರಿಗಳು ಮೂರನ್ನು ಓದಿ ಬಿಟ್ಟರು. ಈ ರೀತಿಯ ಸಮಯಾಕ್ರಮಣವಾಗಿ ಕಾರ್ಯಕರ್ತರು ಕಕ್ಕಾಬಿಕ್ಕಿಯಾದರು. ಅದನ್ನರಿತ ಮಂತ್ರಿಗಳು ಆಪ್ತ ಸಹಾಯಕರನ್ನು ತರಾಟೆಗೆ ತೆಗೆದುಕೊಂಡರು. ಸಹಸ್ರ ಸಹಸ್ರ ಪುಸ್ತಕಗಳನ್ನು ಓದಿ ಆಂಗ್ಲ ನಿಘಂಟನ್ನು ಉರುಹಚ್ಚಿದ್ದರೆನ್ನುವ ಮತ್ತೊಂದು ರಾಜ್ಯದ ಮಂತ್ರಿಗಳು ಕಾಲೇಜೊಂದರ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ವಿದ್ಯುತ್‌ಚ್ಛಕ್ತಿ ತಯಾರಿಸಿದ ನಂತರ ನೀರಿನ ಶಕ್ತಿ ಕ್ಷಯಿಸುತ್ತದೆಂದೂ; ಅಂಥ ನೀರನ್ನು ಕುಡಿಯಬಾರದೆಂದು ಹೇಳಿದ್ದುಂಟು. ಮತ್ತೊಂದು ಕತೆ ಪ್ರಖ್ಯಾತ ವೈದ್ಯರೊಬ್ಬರಿಗೆ ಸಂಬಂಧಿಸಿದುದು. ಬರ್ನಾರ್ಡ್ ಹೃದ್ರೋಗ ವೈದ್ಯರು. ಅವರ ಖ್ಯಾತಿಯಿಂದಾಗಿ ಅವರನ್ನು ಸಭೆ ಸಮಾರಂಭಗಳಿಗೆ ಆಹ್ವಾನಿಸುವುದು ಜಾಸ್ತಿಯಾಯಿತು. ಅವರಿಗೆ ಬೇಸರವಾಗಿ ಒಮ್ಮೆ ಕಾರು ಚಾಲಕನಿಗೆ ತಮ್ಮ ಉಡುಪು ತೊಡಿಸಿ ತಾವೇ ಚಾಲಕರೆಂದೂ, ಚಾಲಕನೇ ವೈದ್ಯರೆಂದೂ ಹಠಕಟ್ಟಿ ಸಭೆಗೆ ಹೋದರಂತೆ. ಆ ದಿನದ ಭಾಷಣವನ್ನು ಬರೆದುಕೊಟ್ಟಿದ್ದರಿಂದ ವೇಷಧಾರಿ ವೈದ್ಯ ಚೆನ್ನಾಗಿ ಓದಿಬಿಟ್ಟ ಸಭಿಕರಲ್ಲೊಬ್ಬ ಮೇಲೆದ್ದು ಪ್ರಶ್ನೆ ಕೇಳಬಹುದೇ ಎಂದ. ಕೃತಕ ಮತ್ತು ನಿಜ ವೈದ್ಯರಿಬ್ಬರಿಗೂ ಕಕ್ಕಾಬಿಕ್ಕಿಯಾಯಿತು. ವಿಧಿಯಿಲ್ಲದೆ ಪ್ರಶ್ನೆ ಕೇಳಬಹುದು ಎಂದು ಹೇಳಿದ. ಸಭಿಕ ಪ್ರಶ್ನೆ ಹಾಕಿದ ಕೂಡಲೇ ಕೃತಕ ವೈದ್ಯ ಗತ್ತಿನಿಂದ ಓಹೋ ಇಂಥ ಸರಳ ವಿಷಯ ನಿಮಗರ್ಥವಾಗಲಿಲ್ಲವೆ? ನಮ್ಮ ಚಾಲಕನೇ ಉತ್ತರ ಹೇಳಬಲ್ಲ ಉತ್ತರ ಹೇಳುವಂತೆ ಅವನನ್ನು ಕೇಳಲೇನು? ಎಂದು ನುಡಿದ ಸಭಿಕನಿಗೆ ಅವಮಾನವಾದಂತವಾಗಿ ತೆಪ್ಪಗಾದ.”[೨] ಇಂದಿರಾಗಾಂಧಿಯನ್ನು ಮದುವೆಯಾಗಲು ವರನೊಬ್ಬ ಹೋದಾಗ ಅವಳು ಹಣದ ನೋಟುಗಳನ್ನು ಒಲೆಗೆ ಹಾಕಿ ಕಾಫಿ ಮಾಡಿಕೊಟ್ಟಳಂತೆ. ವಿಜ್ಞಾನಿಯೊಬ್ಬ ಕಪ್ಪೆಯ ಹೃದಯ ಬಡಿತವನ್ನು ಪರೀಕ್ಷೆ ಮಾಡಲು ಪ್ರಯೋಗಾಲಯಕ್ಕೆ ಕೊಂಡೊಯ್ಯುತ್ತಿದ್ದನಂತೆ ಹಾಗೆ ಬರುವಾಗ ಹಸಿವೆಗೆಂದು ಒಂದು ಪ್ಯಾಕ್ ಬನ್ (ಬ್ರೆಡ್) ತೆಗೆದುಕೊಂಡು ಬಂದನಂತೆ ದಾರಿಯಲ್ಲಿ ಬರುವಾಗ ಬನ್ ಬದಲಾಗಿ ಕಪ್ಪೆಯನ್ನು ತಿಂದು ಪ್ರಯೋಗಾಲಯಕ್ಕೆ ಬ್ರೆಡ್‌ಪ್ಯಾಕ್‌ನ್ನು ತಂದಿದ್ದನಂತೆ. ಇದರ ಭಿನ್ನ ಪಠ್ಯಗಳು ಎರಡು ಮೂರು ರೀತಿಯಲ್ಲಿ ದೊರೆಯುತ್ತವೆ.

[illegible]

[illegible]

ಆಯಾ ಪ್ರಾದೇಶಿಕ ಪರಿಸರದಲ್ಲಿ ಮರುವಿಗೆ ಹೆಸರಾದವರ ಪ್ರತಿಷ್ಠಿತ ಸ್ಥಾನ ಪಡೆದು ದಡ್ಡತನವನ್ನು ಮೈಗೂಡಿಸಿಕೊಂಡವರ, ದಡ್ಡ ರಾಜಕಾರಣಿಗಳ ಮುಂತಾದ ಮತ್ತು ಇಂಥವರ ಅನೇಕ ಪ್ರಸಂಗಗಳು ಜನರ ಬಾಯಲ್ಲಿ ಹರಿದು ಬರುತ್ತಿರುತ್ತವೆ. ಕೆಲವು ಪ್ರಾದೇಶಿಕತೆಯ ಭಿನ್ನತೆಯಿಂದ ಹಲವು ಮಾದರಿಗಳನ್ನು ಕಾಣಬಹುದು.

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಎಂ.ಎಲ್.ಎ.ಗೆ ಸಂಬಂಧಪಟ್ಟಂತೆ ಕೆಲವು ಪ್ರಸಂಗಗಳನ್ನು ಕಾಣಬಹುದು. ಒಮ್ಮೆ ವಿಧಾನಸಭೆ ನಡೆಯುತ್ತಿರಬೇಕಾದರೆ ಕರಾವಳಿ ಪ್ರದೇಶದ ಎಂ.ಎಲ್.ಎ. ಎದ್ದು ನಿಂತು ಸಭಾಧ್ಯಕ್ಷರನ್ನು ಕುರಿತು ಸಾರ್ ನಮ್ಮ ವಿಧಾನಸಭೆ ವ್ಯಾಪ್ತಿಯಲ್ಲಿ ಒಂದು ಹಾರ್‌ಬರ್ (ಬಂದರು)ನ್ನು ಸ್ಥಾಪಿಸಿ ವಾಣಿಜ್ಯ ವ್ಯವಹಾರಕ್ಕೆ ಅನುಕೂಲಮಾಡಿಕೊಡಬೇಕೆಂದು ಸದಸ್ಯರು ಕೇಳಿಕೊಂಡರು. ಈ ವಿಷಯವನ್ನು ಕೇಳಿದ ಬಯಲುಸೀಮೆಯ ಸಚಿವರೊಬ್ಬರು ಹಾರ್‌ಬರ್ ಎಂಬುವುದರ ಬಗ್ಗೆ ತಿಳಿಯದೆ ನನಗೂ ಹಾರ್‌ಬರ್ ಬೇಕೆಂದು ಅಧ್ಯಕ್ಷರಲ್ಲಿ ಒತ್ತಾಯಿಸಿದರಂತೆ. ಆಗ ನೀವು ಯಾವ ಕ್ಷೇತ್ರದವರು ಎಂದು ಅಧ್ಯಕ್ಷರು ಪ್ರಶ್ನಿಸಿದಾಗ ಅದರ ಬಗ್ಗೆ ಹೆಚ್ಚು ಯೋಚನೆ ಮಾಡದೆ; ನೋಡಿ ಅಧ್ಯಕ್ಷರೆ ನಮ್ಮ ಕ್ಷೇತ್ರಕ್ಕೆ ಹಾರ್‌ಬರ್ ಬೇಕಷ್ಟೆ ಎಂದು ಒತ್ತಾಯ ಶುರುಮಾಡಿದರಂತೆ. ಇದರಿಂದ ಅಧ್ಯಕ್ಷರು ಕುಪಿತರಾಗಿ ನೀವು ಯಾವ ಕ್ಷೇತ್ರದವರು ಎಂದು ಹೇಳದಿದ್ದರೆ ನಿಮ್ಮ ಬೇಡಿಕೆಗೆ ನಾವು ಸ್ಪಂದಿಸುವುದಿಲ್ಲ ಎಂದಾಗ; ಆಗ ಎಂ.ಎಲ್.ಎರವರು ನಮ್ಮದು ಪಾವಗಡ ಕ್ಷೇತ್ರ ಎಂದರಂತೆ. ಅಲ್ಲಿ ಯಾವ ಸಮುದ್ರವಿದೆ, ಯಾವ ಕರಾವಳಿ ಇದೆ ಎಂದಿದ್ದಕ್ಕೆ ಎಲ್ಲರು ಗೊಳ್ಳೆಂದು ನಕ್ಕರಂತೆ.

ಎಂ.ಎಲ್.ಎ. ರವರು ಅಧಿವೇಶನ ಮುಗಿಸಿಕೊಂಡು ತಮ್ಮ ಕ್ಷೇತ್ರಕ್ಕೆ ಹಿಂದಿರುಗುತ್ತಿದ್ದಾಗ ದಾರಿ ಮಧ್ಯೆದಲ್ಲಿ ಕಾರನ್ನು ನಿಲ್ಲಿಸಿ. ಹಸಿವಿಗೆ ಏನಾದರೂ ತಿನ್ನಲು ಡ್ರೈವರ್‌ನ್ನು ಕಳಿಸಿದರಂತೆ. ಆಗ ಅವನು ಎಲ್ಲಾ ಕಡೆ ತಿರುಗಾಡಿ ಸಾರ್ ಈ ದಿನ ಹಾಲಿಡೇ (Holiday) ಇದೆ ಸಾರ್ ಎಂದನು, ಇವರು ಅದನ್ನು ಒಂದು ಪ್ಲೇಟ್ ತೆಗೆದುಕೊಂಡು ಬಾ ಅಂದನಂತೆ. ಇದೇ ರೀತಿ ಒಮ್ಮೆ ಬೆಂಗಳೂರಿನಿಂದ ಪಾವಗಡಕ್ಕೆ ಎಂ.ಎಲ್.ಎ.ರವರು ಬರುತ್ತಿರುವಾಗ ಕಾರಿನಲ್ಲಿ ನಿದ್ದೆ ಮಾಡುತ್ತಿದ್ದರಂತೆ. ಚಾಲಕ ತುಂಬ ರಭಸವಾಗಿ ಬರುತ್ತಿದ್ದವನು ಇದ್ದಕ್ಕಿದ್ದ ಹಾಗೆ ಚಕ್ ಅಂತ ಬ್ರೇಕ್ ಹಾಕಿದಾಗ ತೂಕಡಿಸುತ್ತಿದ್ದ ಎಂ.ಎಲ್.ಎ.ರವರು ಮುಂದಿನ ಸೀಟಿಗೆ ಹಣೆಯನ್ನು ಬಡಿದುಕೊಂಡರಂತೆ, ಯಾಕೋ ಸ್ವಲ್ಪ ನಿಧಾನಕ್ಕೆ ಓಡ್ಸಾಕೆ ಆಗಲ್ವೆ ಎಂದು ಹೇಳಿದ್ದಕ್ಕೆ ಹಮ್ಸ್ (Humps) ಇದೆ ಸಾರ್ ಅಂತ ಚಾಲಕ ಹೇಳಿದರಂತೆ; ಜೋರಾಗಿ ಹಾರನ್ ಮಾಡು ಪಕ್ಕಕ್ಕೆ ಹೋಗಲಿ ಅಂದರಂತೆ.

ಒಂದು ದಿನ ಬೆಂಗಳೂರಿಗೆ ಹೋಗುತ್ತಿರುವಾಗ ದಾರಿ ಮಧ್ಯೆ ಕಾರು ಇದ್ದಕ್ಕಿದ್ದಂತೆ ಚಲಿಸದೆ ನಿಂತಿತಂತೆ. ಅದಕ್ಕೆ ಎಂ.ಎಲ್.ಎ. ರವರು ಯಾಕೆ ನಿಲ್ಲಿಸಿದ್ದು ಅಂತ ಕೇಳಿದರು ಸಾರ್ ಪೆಟ್ರೋಲ್ ಮುಗಿದಿದೆ ಎಂದಿದ್ದಕ್ಕೆ ಹಾಗಾದರೆ ಕಾರನ್ನು ಹಿಂದಕ್ಕೆ ಓಡಿಸು ಎಂದರಂತೆ. ಮಾರಿಕಣಿವೆ ಡ್ಯಾಂ (ಚಿತ್ರದುರ್ಗ ಜಿಲ್ಲೆ) ಬಗ್ಗೆ ಇಂಥದ್ದೇ ಆದ ಪ್ರಕಾರ ಆ ಪ್ರದೇಶದಲ್ಲಿ ಜನರಲ್ಲಿ ಪ್ರಚಲಿತವಾಗಿದೆ. ಒಮ್ಮೆ

ವಿಶ್ವೇಶ್ವರಯ್ಯ ಆ ಮಾರ್ಗದ ಮಧ್ಯೆ ಹೋಗುತ್ತಿರುವಾಗ ರೈತನೊಬ್ಬ ಎರಡು ಗುಡ್ಡಗಳ ನಡುವೆ ಹರಿಯುತ್ತಿರುವ ಹಳ್ಳವನ್ನು ಕಂಡು ಇವರೆಡರ ಮಧ್ಯೆ ಕಟ್ಟೆ ಹಾಕಿದರೆ ವ್ಯವಸಾಯಕ್ಕೆ ಅನುಕೂಲವಾಗುತ್ತೆ ಎನ್ನುವುದನ್ನು ಹೇಳಿದ ಮೇಲೆ ವಿಶ್ವೇಶ್ವರಯ್ಯನವರು ಅಲ್ಲಿ ಅಣೆಕಟ್ಟು ಕಟ್ಟಲು ಯೋಜನೆಯೊಂದನ್ನು ಹಾಕಿಕೊಂಡರಂತೆ. ಕೆ.ಆರ್.ಎಸ್. ಅಣೆಕಟ್ಟೆಗೂ ಇಂತಹದೇ ರೈತನೊಬ್ಬನಿಂದ ಸಲಹೆ ಪಡೆದು ಕಟ್ಟಿರುವುದು ಎಂದು ಜನಪದರಲ್ಲಿ ನಂಬಿಕೆ ಇದೆ.

ವಿಶ್ವೇಶ್ವರಯ್ಯನವರನ್ನು ಒಮ್ಮೆ ಬ್ರಿಟಿಷ್ ಸರ್ಕಾರ ಇಂಗ್ಲೆಂಡ್‌ನಲ್ಲಿ ಅಣೆಕಟ್ಟನ್ನು ಕಟ್ಟಲು ಯೋಜನೆಯೊಂದನ್ನು ರೂಪಿಸಲು ಕರೆದುಕೊಂಡು ಹೋದರಂತೆ. ಆಗ ವಿಶ್ವೇಶ್ವರಯ್ಯನವರು ಸ್ಥಳ ಪರಿಶೀಲನೆಮಾಡಿ ಯೋಜನೆಯೊಂದನ್ನು ರೂಪಿಸಿಕೊಟ್ಟು ಬಂದರಂತೆ. ಅಣೆಕಟ್ಟು ಪೂರ್ತಿಗೊಳಿಸಿದ ನಂತರ ಉದ್ಘಾಟನೆಗೆ ಇವರನ್ನು ಕರೆದುಕೊಂಡು ಹೋದರಂತೆ; ಇವರು ಉದ್ಘಾಟನೆ ಮಾಡಿ ಹೆಲಿಕ್ಯಾಪ್ಟರ್‌ನಲ್ಲಿ ಬರುತ್ತಿರುವಾಗ ಅಣೆಕಟ್ಟನ್ನು ಮೇಲಿಂದ ನೋಡಿದರೆ ಇಂಡಿಯಾ ಎಂಬ ಹೆಸರಿನಂತೆ ಕಾಣುತ್ತಿತ್ತಂತೆ ಅದನ್ನು ನೋಡಿ ಅಧಿಕಾರಿಗಳು ಬೆಚ್ಚಿಬಿದ್ದರಂತೆ. ಹೀಗೆ ಇವರ ಅಗಾದ ವಿದ್ವತ್ತಿನ ಸುತ್ತಾ ಅನೇಕ ಮಿತ್‌ಗಳು ಜನಪದರಲ್ಲಿ ಉಳಿದುಕೊಂಡು ಬಂದಿವೆ.

ಕೊನೆ ಟಿಪ್ಪಣಿ

೧. ದೇ.ಜ.ಗೌ, ಜಾನಪದ ಸೌಂದರ್ಯ, ಪುಟ ೬೨.

೨. ಅದೇ ಪುಟ ೬೫.

ಅಧ್ಯಾಯ - ೪

ಸಮೂಹ ಮಾಧ್ಯಮಗಳಲ್ಲಿ ಜಾನಪದ

ಸಮೂಹ ಮಾಧ್ಯಮಗಳಲ್ಲಿ ಜಾನಪದ

ಇದು ಮಾಧ್ಯಮಗಳ ಕಾಲ. ಜಗತ್ತಿನ ಯಾವುದೇ ಘಟನೆಗಳಾಗಲಿ, ಸುದ್ದಿಯಾಗಲಿ ದುತ್ತೆಂದು ಕ್ಷಣಾರ್ಧದಲ್ಲಿ ಪ್ರತ್ಯಕ್ಷ ಮಾಡಿಸುವ ಸಂವಹನಗಳೇ ಸಮೂಹ ಮಾಧ್ಯಮಗಳು. ಆಧುನಿಕ ಜಗತ್ತಿನಲ್ಲಿ ಸ್ಪಷ್ಟ ವಿಷಯವೊಂದು ಅಲ್ಪ ಸಮಯದಲ್ಲೇ ಅತಿ ಹೆಚ್ಚು ಜನರನ್ನು ತಲುಪುವ ಸಲುವಾಗಿ ಆಧುನಿಕ ಸಮೂಹ ಮಾಧ್ಯಮಗಳು ಅನ್ವೇಷಣೆಗೊಂಡವು. ಸಮೂಹ ಮಾಧ್ಯಮವೆಂದರೆ "ಯಾವುದಾದರೂ ವಿಷಯವೊಂದನ್ನು ಸಮುದಾಯಕ್ಕೆ ತಿಳಿಸಲು ಸಹಾಯಕವಾದ ಸಾಧನ[1] ಅನೇಕ ಶತಮಾನಗಳಿಂದಲೂ ಮೌಖಿಕ ಮಾಧ್ಯಮವು ಇತರ ಮಾಧ್ಯಮಗಳಿಗಿಂತ ಪುಷ್ಟಿಗೊಳ್ಳುತ್ತಾ ಬಂದಿದೆ. ಉದಾಹರಣೆ ತಾಳೆಗರಿಗಳು, ಶಾಸನಗಳು, ತಾಮ್ರಪಟಗಳು, ಮುದ್ರಿತ ಪುಸ್ತಕಗಳು ಮತ್ತು ದಿನ ಪತ್ರಿಕೆಗಳು (ಬಹುಪಾಲು ೧೯ನೇ ಶತಮಾನದಿಂದೀಚೆಗೆ) ಮತ್ತು ಇತ್ತೀಚೆಗೆ ವಿದ್ಯುನ್ಮಾನ ಮಾಧ್ಯಮ ಉದಾಹರಣೆ ಟಿ.ವಿ. ವಿಡಿಯೋ ಕ್ಯಾಸೆಟ್, ಆಡಿಯೋ ಕ್ಯಾಸೆಟ್ ಈ ಮಾಧ್ಯಮಗಳು ಯಾವಾಗಲೂ ಪರಸ್ಪರ ಸಂಪರ್ಕಗೊಂಡು ಹೊಸಹೊಸ ಪರಿಣಾಮಗಳನ್ನು ಉಂಟುಮಾಡಿದೆ. ವಾಚನದಲ್ಲಿ ಇಲ್ಲವೆ ನಾಟಕದಲ್ಲಿ ಅಥವಾ ರೇಡಿಯೋ, ಸಿನಿಮಾ ಇಲ್ಲವೇ ಟಿ.ವಿಯಲ್ಲಿ ಒಂದು ಕೃತಿಯು ಮೌಖಿಕವಾಗಿ ಕಟ್ಟಲ್ಪಟ್ಟು ಬರಹದಲ್ಲಿ ವ್ಯಕ್ತಗೊಳ್ಳಬಹುದು ಅಥವಾ ಬರಹದಲ್ಲಿ ಕಟ್ಟಲ್ಪಟ್ಟು ಮೌಖಿಕವಾಗಿ ವ್ಯಕ್ತವಾಗಬಹುದು"[2]. ಆಧುನಿಕ ಸಮೂಹ ಮಾಧ್ಯಮದ ತೆರೆ ಪಾಶ್ಚಾತ್ಯ ಆಗಮನದೊಂದಿಗೆ ಹೆಚ್ಚು ಪರಿಚಯವಾಯಿತು. ಹಿಂದೆ ರಾಜಮಹಾರಾಜರು ಸುದ್ದಿಯನ್ನು ಮುಟ್ಟಿಸುವಾಗ ಓಲೆಗಳ ಮುಖಾಂತರ ಇಲ್ಲವೇ ಪಾರಿವಾಳಗಳ ಮುಖಾಂತರ ಸುದ್ದಿಯನ್ನು ತಲುಪಿಸುತ್ತಿದ್ದರು. ಸಾಮಾನ್ಯ ಜನತೆಗಂತೂ ನಡಿಗೆ ಇಲ್ಲವೇ ಕತ್ತೆಗಳೇ ಪ್ರಮುಖ ಸಾಧನವಾಗುತ್ತಿತ್ತು. ಹದಿನೇಳನೇ ಶತಮಾನದಲ್ಲಿ ವಸಾಹತುಶಾಹಿಯಿಂದ ನಮ್ಮ ದೇಶಕ್ಕೆ ಮುದ್ರಣ ಮಾಧ್ಯಮ ಕಾಲಿರಿಸಿತು. ಅದಕ್ಕೂ ಮುಂಚೆ ಇವುಗಳ ಪಾತ್ರವನ್ನು ಕಾವ್ಯ, ಪುರಾಣ, ಗೀತೆ, ಆಚರಣೆ, ಗಾದೆ, ಪ್ರದರ್ಶನ ಕಲೆ ಮುಂತಾದುವು ನಿರ್ವಹಿಸುತ್ತಿದ್ದವು. ಈ ಎಲ್ಲಾ ಜಾನಪದ ಪ್ರಕಾರಗಳು ಆಚಾರ, ಸಂಪ್ರದಾಯ, ನಂಬಿಕೆ, ಹಬ್ಬ ಹರಿದಿನ ಜಾತ್ರೆ ಮತ್ತು ಮೌಖಿಕ ಸ್ವರೂಪದಿಂದ ಒಬ್ಬರಿಂದ ಮತ್ತೊಬ್ಬರಿಗೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಂವಹನ (Channel) ಗೊಳ್ಳುತ್ತಿದ್ದವು. ಒಂದು ರೀತಿ ಇಡೀ ಜಾನಪದವೇ ಸಾಂಸ್ಕೃತಿಕ ಪರಂಪರೆಯನ್ನು ಬಿತ್ತುವ ಸ್ಥಳಾಂತರಗೊಳ್ಳುವ ವಾಹಕಗಳಾಗಿ ಜಾನಪದ ಮಾಧ್ಯಮಗಳು ಬಳಕೆಯಲ್ಲಿದ್ದವು. ಆಧುನಿಕ ಸಮೂಹ ಮಾಧ್ಯಮಗಳು ಇಡೀ ಜಾಗತಿಕ ಆಲೋಚನೆಯ ಪರಿಯನ್ನೇ ಬದಲಾಯಿಸುವ ಮಟ್ಟಿಗೆ ಬೆಳೆದು

ನಿಂತಿವೆ. ಸಮಾಜದ ಮುಖ್ಯವಾಹಿನಿಯಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿವೆ. ಇಂತಹ ಪ್ರಬಲವಾದ ಶಕ್ತಿಯಲ್ಲಿ ಜಾನಪದದ ಕುರುಹನ್ನು ಹುಡುಕುವುದು ಅಧ್ಯಯನ ವಸ್ತುವಾಗಿದೆ.

ಜಾನಪದಕ್ಕೂ ಮತ್ತು ಸಮೂಹ ಮಾಧ್ಯಮಗಳಿಗೂ ಮೇಲ್ನೋಟಕ್ಕೆ ಸಂಬಂಧ ಇಲ್ಲವೆಂದು ತೋರಬಹುದು. ಏಕೆಂದರೆ ಜಾನಪದವು ಸಾಂಸ್ಕೃತಿಕ ಪರಂಪರೆಯಿಂದ ಬಂದದ್ದು, ಸಮೂಹ ಮಾಧ್ಯಮಗಳು ಆಧುನೀಕರಣದ ಫಲವಾಗಿ ಶೀಘ್ರಗತಿಯಲ್ಲಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿದ್ದು. ಇವುಗಳ ಹುಟ್ಟು ಒಂದು ರೀತಿಯಲ್ಲಿ ಭಿನ್ನ ಹಾಗೂ ಸಂಬಂಧವೂ ಸಹ "ಜಾನಪದ ಒಂದು ಸಂವೇದನೆ ಮಾತ್ರ, ಎಲ್ಲಾ ಕಾಲದ ಸಂವೇದನೆಗಳಿಗೂ ಸಂಸ್ಕೃತಿಯಲ್ಲಿ ಏಕಪ್ರಕಾರವಾಗಿರಬೇಕಿಲ್ಲ ಆತ್ಮರತಿಯ ಪ್ರಲಾಪದಂತೆ ಜಾನಪದವನ್ನು ವಿಸ್ತರಿಸಲಾಗದು. ಆಧುನಿಕ ಸಮೂಹ ಮಾಧ್ಯಮಗಳು ಹೊಸ ಜಗತ್ತಿನ ಜಾನಪದವಾಗಿ ಸಮುದಾಯಗಳ ಸಂವೇದನೆಯಲ್ಲಿ ಬೆರೆತಿದೆ. ದೈನಂದಿನ ಸುದ್ದಿ ಪತ್ರಿಕೆಗಳು ವರದಿಗಳು ಜಾನಪದದ ಇನ್ನೊಂದು ರೂಪವಾಗಿ ಸುದ್ದಿಯಾಗಿ ಬಾಯಿಂದ ಬಾಯಿಗೆ ವಿಸ್ತರಿಸುತ್ತಿರುತ್ತದೆ. ಹೊಸ ಜಗತ್ತಿನ ಜಾನಪದಕ್ಕೆ ಹಳೆಯ ಜಗತ್ತಿನ ಜಾನಪದದ ತಕ್ಕ ನಿಯಮಗಳನ್ನು ಅಳವಡಿಸಿದಾಗಲೆಲ್ಲ. ವೈರುಧ್ಯಗಳು ಹೆಚ್ಚುತ್ತವೆ. ಈ ಎರಡೂ ಸಾಂಸ್ಕೃತಿಕ ಜಗತ್ತುಗಳ ಸಂವೇದನೆಯ ಸ್ವರೂಪದಲ್ಲಿ ಜಾನಪದ ಅಂತರ್ಗತವಾಗಿರುತ್ತದೆ[೩]. ಸಾಂಸ್ಕೃತಿಕ ಪರಂಪರೆಯನ್ನು ಅಭಿವ್ಯಕ್ತಿಸುವ ಜಾನಪದವನ್ನು ಅದೇ ಸ್ಥಿತಿಯಲ್ಲಿ ಸಂರಕ್ಷಿಸಿಕೊಂಡು ಬರಬೇಕೆಂಬ ಮಾತು ಸಮಂಜಸವಲ್ಲ. ಏಕೆಂದರೆ ಒಂದು ಕಾಲದ ಜಾನಪದ ಮಾದರಿಗಳು ಮತ್ತೊಂದು ಕಾಲಕ್ಕೆ ಅಪ್ರಸ್ತುತವೆನಿಸಬಹುದು. ಆದ್ದರಿಂದ ಬದಲಾವಣೆಯ ಸ್ಥಿತಿಯಲ್ಲಿರುವ ಜಾನಪದವನ್ನು ಪೂರ್ವಸ್ಥಿತಿಯಲ್ಲೇ ಕಾಣಬೇಕೆಂಬುದು ಪ್ರತಿಗಾಮಿತನವಾಗುತ್ತದೆ. ಜಾನಪದವೆಂಬುದು ಸ್ಥಿತ್ಯಂತರ ತೊಟ್ಟಿಲಲ್ಲಿ ಎಚ್ಚರವಾಗಿರುತ್ತದೆ. ಆಧುನಿಕತೆಯ 'ಅಭಿವ್ಯಕ್ತಿ' ಸ್ವರೂಪ ಭಿನ್ನವಾದಂತೆಲ್ಲಾ ಎಷ್ಟೋ ಹಳೆಯ ಜಾನಪದ ಪ್ರಕಾರಗಳು ಅಪ್ರಸ್ತುತವೆನಿಸುತ್ತವೆ. ಈ ಅಪ್ರಸ್ತುತ ಜಾನಪದ ಅಳಿವಿನಂಚಿನಲ್ಲಿದ್ದರೆ ಅದಕ್ಕೆ ವ್ಯಥೆಪಡಬೇಕಾಗಿಲ್ಲ. ಏಕೆಂದರೆ ಆಧುನಿಕ ಜಾನಪದದ ಸಂವೇದನೆಗಳು ಜಾಗತೀಕರಣ, ತಂತ್ರಜ್ಞಾನ ಇಂತಹವುಗಳ ಮೂಲಕ ಹೇಗೆ ಅಭಿವ್ಯಕ್ತಿಸಬಲ್ಲದು ಎಂಬ ನಿರ್ಣಾಯಕ ಅಂಶವೇ, ಇಂದಿನ ಜಾನಪದ. ಈ ತೆರನಾದ ಚಿಂತನೆಗಳು ಆಧುನಿಕ ಜಾನಪದದ ಮುಖ್ಯ ಅಧ್ಯಯನವಾಗಬೇಕಾಗಿದೆ.

ಜಾನಪದ ಅಭಿವ್ಯಕ್ತಗೊಳ್ಳುವ ಮಾರ್ಗ ತಾಂತ್ರೀಕೃತಗೊಂಡಿದೆ. ಹಳೆಯ ಜಾನಪದ ಮಟ್ಟುಗಳನ್ನು ಕಾಣಲು ಸಾಧ್ಯವಿಲ್ಲ. ಬೀಸುವ ಕಲ್ಲು ಶ್ರಮ ಸಂಸ್ಕೃತಿಯ ದ್ಯೋತಕವಾಗಿ ಹುಟ್ಟಿಕೊಂಡಿದ್ದು ಬೀಸುವ ಪದಗಳು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಏಕೆಂದರೆ ಇಲ್ಲಿ ಬಳಸುವ ಪರಿಕರದ ಮೂಲಧಾತು ಬದಲಾವಣೆಗೊಂಡಿದೆ. ಈ ಮೂಲಧಾತು ಬದಲಾವಣೆಯೊಂದಿಗೆ ಅದರ ಉಪ ಉತ್ಪನ್ನವಾದ ಜನಪದ ಸಾಹಿತ್ಯವೂ ಕಣ್ಮರೆಯಾಗುತ್ತಿದೆ. ಇದನ್ನು ಸಂರಕ್ಷಿಸಬೇಕೆಂದು ಬೇರೊಂದು ಕ್ರಮದಲ್ಲಿ ಪ್ರಯತ್ನಿಸಬಹುದು. ಈ ರೀತಿಯ ಸಂರಕ್ಷಿಸಿದ ಜಾನಪದವು ಸೃಜಿಸುವ ಗುಣವನ್ನು ಕಳೆದುಕೊಂಡು

'ಪಠ್ಯ' (Text) ಕ್ಕೆ ನಿಂತುಬಿಡುತ್ತದೆ. ಹೀಗೆ ಶ್ರಮ ಸಂಸ್ಕೃತಿಯ ಮೂಲ ಪ್ರಕ್ರಿಯೆಯಾಗಿ ಹುಟ್ಟಿಕೊಂಡ ಜಾನಪದದ ವಿವಿಧ ಮಜಲುಗಳನ್ನು ಕಾರ್ಖಾನೆಗಳಲ್ಲಿ, ಕಾಲೇಜುಗಳಲ್ಲಿ ಗಣಿಗಾರಿಕೆಗಳಲ್ಲಿ ಮರುಹುಟ್ಟು ಪಡೆಯುತ್ತಿರುವುದನ್ನು ಕಾಣಬಹುದು. ಈ ದೆಸೆಯಲ್ಲಿ ಹಲವಾರು ಜಾನಪದ ವಿದ್ವಾಂಸರು ವಿದೇಶದಲ್ಲಿ ಮಾತ್ರವಲ್ಲದೆ ಇಲ್ಲಿಯೂ ಸಹ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದಾರೆ. ಬದಲಾಗುತ್ತಿರುವ ಮಾನವನ ಮನೋಸ್ಥಿತಿಗಳು ಇಡೀ ವ್ಯವಸ್ಥೆಯನ್ನು ತಮ್ಮ ಇಚ್ಛೆಯಂತೆ ಪರಿವರ್ತಿಸಿಕೊಳ್ಳುವ ಶಕ್ತಿ ಪಡೆದಿರುತ್ತವೆ. ವಿದ್ಯಾವಂತ ಸಮುದಾಯ ಹೆಚ್ಚಿದಂತೆಲ್ಲಾ ಅವರ ಅಭಿರುಚಿಯ ಆಶೋತ್ತರಗಳು ವಿಭಿನ್ನವಾಗಿರುತ್ತವೆ. ಈ ವಿಭಿನ್ನತೆಯನ್ನು ಸುಧಾರಿಸಲು ಹಲವು ಮಗ್ಗುಲುಗಳೊಡನೆ ಆಧುನಿಕತೆ ಕಸರತ್ತು ಮಾಡುತ್ತಿರುತ್ತದೆ. ಯುವ ಪೀಳಿಗೆಯ ಆಶೋತ್ತರಗಳಿಗೆ ಅನುಗುಣವಾಗಿ ಉತ್ಪಾದನಾಕ್ರಿಯೆ ಅವಲಂಬಿಸಿದೆ. ಈ ಉತ್ಪಾದನಾ ಕ್ರಿಯೆಯ ಪ್ರಮುಖ ಕಾಳಜಿ ಲಾಭ, ಆದ್ದರಿಂದಲೇ ಅಭಿರುಚಿಗೆ ತಕ್ಕಂತೆ ಮಾರುಕಟ್ಟೆಯ ಉತ್ಪಾದನಾ ಸಾಮಗ್ರಿಗಳು ಹೆಚ್ಚು ಪ್ರಸ್ತುತಗೊಳ್ಳುತ್ತಿರುತ್ತವೆ.

ಇಂದು ಜಗತ್ತಿನ ಸಮುದಾಯದ ಜಾನಪದವೂ ಸಹ ತಾಂತ್ರಿಕಗೊಂಡಿದೆ. ಇದರ ಫಲವಾಗಿ ಕಾರ್ಖಾನೆ, ಕಂಪ್ಯೂಟರ್, ಇಂಟರ್‌ನೆಟ್, ವಿದ್ಯುನ್ಮಾನ, ಗಣಿಗಾರಿಕೆ, ಸಮೂಹ ಮಾಧ್ಯಮ, ಜಾಗತೀಕರಣ ಮುಂತಾದವು ಜನಸಮುದಾಯದ ಮೇಲೆ ಹಿಡಿತ ಸಾಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ಜಾನಪದದ ಸಂವೇದನೆಗಳ ಹುಟ್ಟು ಯಾವ ತೆರನಾದುದು? ಮತ್ತು ಅದನ್ನು ಹೇಗೆ ಜಾನಪದದ ಪರಿಧಿಯಲ್ಲಿ ತರಲು ಕಷ್ಟಸಾಧ್ಯವೆಂಬುದು ಜಾನಪದ ವಿದ್ವಾಂಸರಿಗೆ ಸವಾಲಾಗಿದೆ. ಕೇವಲ ಪಾಶ್ಚಿಮಾತ್ಯ ಮಾನದಂಡಗಳಿಂದ ನಮ್ಮ ಪ್ರಾದೇಶಿಕ ಜನಸಮುದಾಯದ ಜಾನಪದ ಉತ್ಪನ್ನವನ್ನು ತೂಕ ಹಾಕುವುದು ಸಮಂಜಸವಲ್ಲ. ಈ ಮಾನದಂಡಗಳು ದೇಸಿ ಚಿಂತನೆಯಿಂದಲೇ ಹುಟ್ಟಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಇವೆಲ್ಲವನ್ನು ಒಳಗೊಂಡಂತೆ ಪಾಶ್ಚಿಮಾತ್ಯ ಚಿಂತನೆಯನ್ನು ಸಿದ್ಧಾಂತಗಳನ್ನು ಅರಗಿಸಿಕೊಂಡು ದೇಸಿ ನೆಲೆಯಲ್ಲಿ ಆಧುನಿಕ ಜಾನಪದದ ಹುಟ್ಟನ್ನು ವಿಮರ್ಶಿಸುವುದು ಹೆಚ್ಚು ಪ್ರಸ್ತುತ.

ಜಾನಪದ ಮತ್ತು ಸಮೂಹ ಮಾಧ್ಯಮಗಳೆರಡರ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ವಿದ್ವಾಂಸರ ಹೇಳಿಕೆಯಿಂದ ವಿಮರ್ಶಿಸಿ ನೋಡುವುದು ಸೂಕ್ತವೆನಿಸುತ್ತದೆ. ಜಾನಪದ ಮತ್ತು ಸಮೂಹ ಮಾಧ್ಯಮಗಳು ಒಂದಕ್ಕೊಂದು ತೀರಾ ವಿರುದ್ಧವಾದ ಮಾಧ್ಯಮಗಳು. ಪರಂಪರೆ, ಸಂಪ್ರದಾಯ ಮತ್ತು ವಿಜ್ಞಾನ - ತಾಂತ್ರಿಕತೆಗಿರುವಷ್ಟೆ ವ್ಯತ್ಯಾಸ ಈ ಎರಡೂ ಮಾಧ್ಯಮಗಳಿಗೆ ಇವೆ.

ಜಾನಪದ ವ್ಯಕ್ತಿ ಮತ್ತು ವ್ಯಕ್ತಿಗಳ ನಡುವಿನ ವ್ಯಕ್ತಿಗತ ಮಾಧ್ಯಮ. ಅದಕ್ಕೆ ಕಾಲ ಜನಜೀವನ ಸಾಮಾಜಿಕತೆ, ಪರಿಸರಕ್ಕೆ ಹೊಂದಿಕೊಂಡಂತೆ ತನ್ನದೇ ಆದ ರೂಪ ಮತ್ತು ಬಂಧ ಇರುತ್ತದೆ. ಅದು ಸ್ಥಳೀಕವೂ ಹೌದು. ಇಲ್ಲಿ ಕಲಾವಿದ ಮತ್ತು ಪ್ರೇಕ್ಷಕರಲ್ಲಿ ತತ್‌ಕ್ಷಣದ Feed Back ಇರುತ್ತದೆ. ಜಾನಪದ ಕಲಾವಿದ ಇಲ್ಲಿ ಪ್ರೇಕ್ಷಕರ ನಾಡಿಮಿಡಿತದೊಂದಿಗೆ ಪ್ರತಿಸ್ಪಂದಿಸಬಲ್ಲ; ಬದಲಾಗಬಲ್ಲ. ಆದರೆ ಸಮೂಹ ಮಾಧ್ಯಮಗಳಿಗೆ ಬೃಹದಾಕಾರದ ಅಸಂಖ್ಯ ಜನತೆ ಇದರ ಪ್ರೇಕ್ಷಕರು. ಕಾಲ

[illegible]

[illegible]

[illegible]

[illegible]

ಜನಜೀವನ, ಗಡಿ ಮತ್ತು ಭೌಗೋಳಿಕ ಸೀಮೆಗಳನ್ನು ಉಲ್ಲಂಘಿಸಿ ಹಾದುಹೋಗುತ್ತದೆ. ಇದೊಂದು ತಾಂತ್ರಿಕ ಮಾಧ್ಯಮ ಇದಕ್ಕೊಂದು ಸ್ಪಷ್ಟರೂಪವಾಗಲೀ ಅಥವಾ ಬಂಧವೇ ಆಗಲಿ ಇಲ್ಲ. ಪ್ರೇಕ್ಷಕರಿಂದ Feed back ಇರುವುದಿಲ್ಲ. ಹೀಗೆ ಜಾನಪದ ಮತ್ತು ಸಮೂಹ ಮಾಧ್ಯಮಗಳು ಒಂದಕ್ಕೊಂದು ಬೆನ್ನು ಮಾಡಿದ ಆ ಮುಖ ಈ ಮುಖಗಳಂತೆ ಇದೆ[5].

ಪ್ರಾಚೀನ ಜಾನಪದ ಇಲ್ಲವೇ ಯಾವುದೇ ಕಾಲದ ಜನಪದದಲ್ಲೂ ಮಾಧ್ಯಮಗಳು ಬಹುದೊಡ್ಡ ಶಕ್ತಿ. ಒಟ್ಟು ಜಾನಪದವೇ ಒಂದು ಬಗೆಯಲ್ಲಿ ಸಮೂಹ ಮಾಧ್ಯಮ. ಹಿಂದೆ ಪರಂಪರೆಯನ್ನು ಕೊಂಡೊಯ್ಯುವ ವಾಹಕವಾಗಿ ಜನಪದ ಪ್ರಕಾರಗಳು ಕೆಲಸಮಾಡುತ್ತಿದ್ದವು. ಕಾವ್ಯ, ಪುರಾಣ, ಗೀತೆ, ಆಚರಣೆ, ಗಾದೆ, ಒಗಟು ಪ್ರದರ್ಶನ ಕಲೆಗಳೆಲ್ಲವೂ ಒಂದೊಂದು ಸಮೂಹ ಮಾಧ್ಯಮಗಳಾಗಿದ್ದವು.

ಮೇಲಿನೆರಡು ಭಿನ್ನ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕದಲ್ಲಿ ಜಾನಪದ ಅಧ್ಯಯನವು ವಿವಿಧ ಮಜಲುಗಳಲ್ಲಿ ಬೆಳೆದು ಬಂದ ಬಗ್ಗೆ ಸ್ಪಷ್ಟತೆಯನ್ನು ಕೊಡುತ್ತವೆ. ಮೊದಲನೆಯ ಪ್ರತಿಪಾದನೆಯು ಜಾನಪದವನ್ನು ಮಡಿವಂತಿಕೆಯಿಂದಲೂ, ಎರಡನೇ ಪ್ರತಿಪಾದನೆಯು ಪಾಶ್ಚಾತ್ಯ ಚಿಂತನೆಯನ್ನು ಅರಗಿಸಿಕೊಂಡು ದೇಶಿನೆಲೆಯ ದೃಷ್ಟಿಯಿಂದ ನೋಡಿರುವುದು ಕಂಡು ಬರುತ್ತದೆ. ಹಳೆಯ ಜಾನಪದ ಮಾಧ್ಯಮಗಳು ಪರಂಪರೆ ಸಂಪ್ರದಾಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುತ್ತಿದ್ದವು. ಆದರೆ ಇಂದಿನ ಸಮೂಹ ಮಾದ್ಯಮಗಳು ಜಾನಪದ ವಿವಿಧ ಪ್ರಕಾರಗಳನ್ನು ಜಗತ್ತಿನ ವಿವಿಧ ಜನ ಸಮುದಾಯಗಳ ಬಳಿಗೆ ಕೊಂಡೊಯ್ಯುತ್ತಿವೆ. ಹಳೆಯ ಜಾನಪದದ ಕ್ಷೇತ್ರ ಸೀಮಿತವಾಗಿತ್ತು. ಆಧುನೀಕರಣದ ಫಲವಾಗಿ ಇಂದಿನ ಜಾನಪದ ಕ್ಷೇತ್ರ ತುಂಬ ವಿಸ್ತಾರವಾಗಿದೆ. ಇಷ್ಟೇ ಅಲ್ಲದೆ ತಂತ್ರಜ್ಞಾನದ ಪ್ರಭಾವಕ್ಕೆ ಒಳಗಾಗಿದೆ. ಹಳೆಯ ಜಾನಪದ ಸಮೂಹ ಮಾಧ್ಯಮಗಳು ಕೇವಲ ಒಂದು ಜನಾಂಗ ಒಂದು ಸಮುದಾಯ ಇಲ್ಲವೇ ಒಂದು ಪ್ರಾದೇಶಿಕತೆಗೆ ಮಾತ್ರ ಸೀಮಿತವಾಗಿತ್ತು. ಆದರೆ ಇಂದು ಆಧುನಿಕ ಸಮೂಹ ಮಾಧ್ಯಮಗಳಿಂದಾಗಿ ಜಗತ್ತಿನೆಲ್ಲೆಡೆ ಪ್ರಾದೇಶಿಕ ಜಾನಪದವನ್ನು ಪರಿಚಯಿಸುವ ಪ್ರಕ್ರಿಯೆ ನಡೆಯುತ್ತಿದೆ.

ಜಗತ್ತಿನ ವಿವಿಧ ಸಂಸ್ಕೃತಿಗಳ ಜಾನಪದಗಳ ಬೆರೆಯುವಿಕೆಯಿಂದಾಗಿ ಮಿಶ್ರ ಜಾನಪದ (Cross Foklore) ವು ಹುಟ್ಟುತ್ತಿದೆ. ಪೂರ್ವ ಏಷಿಯಾದ ರಂಗಭೂಮಿಯ ಸಾಧ್ಯತೆಗಳನ್ನು ಪಾಶ್ಚಿಮಾತ್ಯ ರಂಗಭೂಮಿಗೆ ಬಳಸಿಕೊಂಡು ಎಪಿಕ್‌ಥಿಯೇಟರ್ ರೂಪಿಸಿದ ಜರ್ಮನಿಯ ನಾಟಕಕಾರನಾದ ಬರ್ಟೋಲ್ಡ್ ಬ್ರೆಕ್ಟ್‌ನ ಉದಾಹರಿಸಬಹುದು. ಭಾರತದ ಸಂದರ್ಭದಲ್ಲಿ ಬಾಳಪ್ಪ ಹುಕ್ಕೇರಿ ಬಿ.ವಿ. ಕಾರಂತ, ಪಿ. ಕಾಳಿಂಗರಾವ್ ಮುಂತಾದ ಸಂಗೀತ ವಿದ್ವಾಂಸರೆಲ್ಲ ಶಿಷ್ಟ ಸಂಸ್ಕೃತಿಯ ರಾಗ - ತಾಳವನ್ನು ಜಾನಪದ ಗೀತೆಗಳಿಗೆ, ಹಾಡುಗಳಿಗೆ ಜೋಡಿಸಿ, ಇಲ್ಲವೇ ಜನಪದ ಮಟ್ಟುಗಳಿಗೆ ಅನುಗುಣವಾಗಿ ವಚನಗಳನ್ನೋ ಕೀರ್ತನೆಗಳನ್ನೋ, ಕವಿವರ್ಯರ ಕವನಗಳನ್ನೋ ಕಟ್ಟಿ ಅಂತ -

ರಾಷ್ಟ್ರೀಯ ಮಟ್ಟದ ಸಮಾರಂಭಗಳಲ್ಲಿ ಹಾಡುತ್ತಿದ್ದನ್ನು ಕಾಣಬಹುದು. ಈ ವಿದ್ವಾಂಸರು ಮಿಶ್ರ ಜಾನಪದ ಮಟ್ಟುಗಳನ್ನು ಹುಟ್ಟು ಹಾಕಿ ದೇಶದಾದ್ಯಂತ ಕಾರ್ಯಕ್ರಮಗಳನ್ನು ಕೊಟ್ಟು ಹೆಚ್ಚು ಜನಪ್ರಿಯರಾಗಿದ್ದಾರೆ. ಇತ್ತೀಚೆಗೆ ಅಪ್ಪಗೆರೆ ತಿಮ್ಮರಾಜುರಂಥಹವರು ಸಹ ಜನಪದ ಗೀತೆಗಳನ್ನು ಆಧುನಿಕ ಪರಿಕರಗಳ ರಾಗ - ತಾಳದಿಂದ ಹಾಡುವುದರಿಂದ ಅಮೇರಿಕಾ ಮುಂತಾದ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟು ಬಂದಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಯಾವುದೋ ಮೂಲೆಯಲ್ಲಿ ಕುಳಿತು ತಮ್ಮ ತಮ್ಮ ಮನರಂಜನೆಗಳಿಗೆ ಹಾಡಿಕೊಳ್ಳುತ್ತಿದ್ದ, ಆಡಿಕೊಳ್ಳುತ್ತಿದ್ದ, ಎಷ್ಟೋ ಗ್ರಾಮೀಣ ಜನಪದ ಹಾಡುಗಾರರನ್ನ, ಕ್ರೀಡೆಗಳನ್ನು, ವಾದ್ಯಗಾರರನ್ನ, ವೃತ್ತ ಪತ್ರಿಕೆ, ದೂರದರ್ಶನ, ರೇಡಿಯೋಗಳು ದೇಶದಾದ್ಯಂತ ಪರಿಚಯಮಾಡಿಕೊಡುತ್ತಿವೆ.

ಡೊಳ್ಳು ಕುಣಿತ ಜಾನಪದ ಕಲೆಯು ತುಮಕೂರು, ಬೆಳಗಾವಿ, ಬಳ್ಳಾರಿ, ವಿಜಾಪುರ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಈ ಕಲೆ ಜನಪದ ಜೀವಾಳವಾಗಿದೆ. 'ಡೊಳ್ಳು' ಎನ್ನುವ ವಾದ್ಯದೊಂದಿಗೆ ಇದರ ನಡಿಗೆ ಆರಂಭವಾಗುತ್ತದೆ. ಈ ಕಲೆ ನಶಿಸುವ ಹಾದಿಯಲ್ಲಿದೆ ಎನ್ನುವ ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತಿವೆ. ಆದರೂ ಸಹ ಈ ಕುಣಿತವನ್ನು ಕರಗತಮಾಡಿಕೊಂಡವರು ತಂಡಗಳನ್ನು ಕಟ್ಟಿ ನವ ಪೀಳಿಗೆಗೆ ಕಲೆಯ ಬಗ್ಗೆ ಉತ್ಸಾಹ ತುಂಬುತ್ತಿದ್ದಾರೆ. ಇಂತಹ ತಂಡವನ್ನು ಉದಾಹರಣೆ ಸಹಿತ ನೋಡಬಹುದು. "ಮಾರಿಜಾತ್ರೆ, ಮೈಲಾರಲಿಂಗನ ಜಾತ್ರೆ, ಆರಾಧನೆ, ಭೂಮಿ ಹುಣ್ಣಿಮೆ, ಗೌರಿಪೂಜೆ ಮುಂತಾದ ಧಾರ್ಮಿಕ ಸಮಾರಂಭಗಳಲ್ಲಿ ಡೊಳ್ಳು ಬಾರಿಸುತ್ತಿದ್ದು ಬರಬರುತ್ತಾ ಚುನಾವಣೆಯ ವಿಜಯೋತ್ಸವ ಪ್ರತಿಷ್ಠಿತ ವ್ಯಕ್ತಿಗಳ ಸ್ವಾಗತಗಳಲ್ಲಿ, ಅಕಾಡಮಿಗಳ ಉತ್ಸವಗಳಲ್ಲಿ ಕುಣಿಯುವುದಕ್ಕೆ ಮಾತ್ರ ಸೀಮಿತವಾಯಿತು. ಈಗಿನ ಯುವಕರಿಗೆ ಈ ಡೊಳ್ಳಿನ ವಿಶೇಷಣಗಳು ಅಷ್ಟಾಗಿ ತಿಳಿದಿಲ್ಲ. ಈ ಕಲೆಯ ಹಿರಿಮೆ ಬಲ್ಲ ಹಿರಿಯರೂ ಇದರ ಗೊಡವೇ ಬೇಡ ಎಂಬಂತೆ ಮಾಡಿದ್ದಾರೆ. ಇಂತಹ ಬಿಕ್ಕಟ್ಟು ಇರುವಾಗಲೇ ಡೊಳ್ಳು ಕಲೆಯನ್ನು ಚೆನ್ನಾಗಿ ಬಲ್ಲ ವೃತ್ತಿಯಲ್ಲಿ ದೈಹಿಕ ಶಿಕ್ಷಕರಾದ ಸಾಗರದ ಗೌತಮಪುರದ ಬೆಳ್ಳಿಯಪ್ಪ ತಾನು ಇರುವ ಶಾಲೆಯ ವಾತಾವರಣದಲ್ಲೇ ಈ ಕಲೆಯನ್ನು ಉಳಿಸಿಕೊಳ್ಳುವ ಯೋಜನೆ ಹಾಕಿ ಕಾರ್ಯಗತ ಮಾಡಿಕೊಂಡಿದ್ದಾರೆ. ಬೆಳ್ಳಿಯಪ್ಪ ಅವರಿಗೆ ಈ ಡೊಳ್ಳು ಕಲೆ ಪಾರಂಪರಿಕವಾಗಿ ಬಂದಿದ್ದು ಚಿಕ್ಕಂದಿನಿಂದಲೂ ಅಪ್ಪ ಅಣ್ಣರ ಸಹವಾಸದಿಂದ ಈ ಕಲೆಯನ್ನು ಆಧುನಿಕತೆ ಮಾದರಿಯಲ್ಲಿ ಜಾಗತಿಕ ಪ್ರಪಂಚಕ್ಕೆ ತೋರಿಸಬೇಕೆಂಬ ಪ್ರಯತ್ನದಿಂದ ತನ್ನ ಊರಲ್ಲೇ 'ಗೌತಮೇಶ್ವರ ಯುವಕರ ಸಂಘ'ವನ್ನು ಕಟ್ಟಿಕೊಂಡು ಸುಮಾರು ಹದಿನೈದು ಜನರಿರುವ ಈ ತಂಡವು ಸಂಪೂರ್ಣ ತರಬೇತಿ ಪಡೆದು ದೆಹಲಿಯಲ್ಲಿಯೂ ಪ್ರದರ್ಶನ ನೀಡಿದೆ. ೧೯೮೫ರಲ್ಲಿ 'ನ್ಯಾಷನಲ್ ಗೇಮ್ಸ್' ಉದ್ಘಾಟನೆ ಸಂದರ್ಭದಲ್ಲಿ ಪಾಲ್ಗೊಂಡಿದೆ. ಈ ತಂಡ ಪ್ರತಿಮಾ ಬೇಡಿ ಅವರ ನೃತ್ಯ ಗ್ರಾಮದ ಉತ್ಸವದ ಖಾಯಂ ಅತಿಥಿ ೧೯೯೯ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳ್ಳಿಯಪ್ಪನವರಿಂದ ಡೊಳ್ಳು ಬಾರಿಸುವ ೧೨೫ ಮಕ್ಕಳನ್ನು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ 'ಚಿಣ್ಣರ ಡೊಳ್ಳು

[illegible]

[illegible]

ಕುಣಿತ'ವನ್ನು ಪ್ರದರ್ಶನ ಮಾಡಿಸಿ ಬಹುಮಾನಗಳನ್ನು ಪಡೆಯಿತು" [೫]. ಹೀಗೆ ಜಾನಪದ ಕಲೆಗಳು ವಿದ್ಯಾವಂತ ಸಮುದಾಯದಲ್ಲಿ ಮರುಹುಟ್ಟು ಪಡೆಯುತ್ತಿರುವುದನ್ನು ಕಾಣಬಹುದು. ಈ ಒಂದು ಪರಿಚಯ ಕೇವಲ ಪ್ರಾತಿನಿಧಿಕವಷ್ಟೆ. ಇದೇ ರೀತಿ ಬೆಂಗಳೂರಿನಲ್ಲಿ "ಅಖಿಲ ಭಾರತೀಯ ವೀರಶೈವ ಮಹಾಸಭಾ"ದವರು ಮಹಿಳೆಯರಿಗೆ 'ವೀರಗಾಸೆ' ಜಾನಪದ ಕಲೆಯಲ್ಲಿ ತಯಾರು ಮಾಡಿ ದೇಶ ವಿದೇಶಗಳಿಗೆ ಹೋಗಿ ಕಾರ್ಯಕ್ರಮಗಳನ್ನು ಕೊಟ್ಟು ಬಂದಿದ್ದಾರೆ. "ಹಾಗೆ ಎನ್.ಎಂ.ಕೆ.ಆರ್.ವಿ ಕಾಲೇಜಿನಲ್ಲಿ 'ಹುಡುಗಿಯರಿಂದ ಯಕ್ಷಗಾನ'ದ ಅಭ್ಯಾಸ ಮಾಡಿಸುತ್ತಿದಾರೆ"[೬]. ಈ ಎಲ್ಲಾ ಅಂಶಗಳು ಅಳಿವಿನಂಚಿನಲ್ಲಿರುವ ಜಾನಪದ ವಿಶಿಷ್ಟ ಕಲೆಗಳನ್ನು 'ಸಂಘ' ಆಧುನಿಕತೆಗೆ ಪ್ರಸ್ತುತ ಪಡಿಸುತ್ತಿದ್ದಾರೆ. ಆದರೆ ಇಂತಹ ಬೆಳವಣಿಗೆಗಳ ಬಗ್ಗೆ ಜಾನಪದ ವಿದ್ವಾಂಸರ ಎಷ್ಟೇ ತಗಾದೆಗಳಿದ್ದರೂ ಇವುಗಳ ಬೆಳವಣಿಗೆಯ ಟಿಸಿಲುಗಳನ್ನು ನಿರಾಕರಿಸಲು ಸಾಧ್ಯವಿಲ್ಲ.

ಜಾನಪದ ಪ್ರಕಾರವೊಂದು ನಶಿಸುತ್ತಿದೆ ಎಂದರೆ ಮತ್ತೊಂದು ರೂಪದಲ್ಲಿ ಅದರ 'ಹುಟ್ಟುವಳಿ'ಯನ್ನು ಕಾಣಬಹುದು. ಬದಲಾಗುತ್ತಾ ಹೋಗುವ ಸಾಮಾಜಿಕ ಅಭಿರುಚಿ ಮತ್ತು ಪುನಃ ಸೃಷ್ಟಿಗೆ ಒಳಗಾಗುವ ಜಾನಪದಕ್ಕೆ ನಿರ್ದಿಷ್ಟವಾದ (Fixed) ಹಳೆಯ ಅಳತೆಗೋಲುಗಳನ್ನೇ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದಲೇ ಯಾವುದೇ ಜಾನಪದ ಪ್ರಕಾರ ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ. ಭಿನ್ನರೂಪಗಳಲ್ಲಿ ಕಾಣಿಸಿಕೊಳ್ಳಲು ಸಾಧ್ಯ. ಅದರ ಮೂಲವಸ್ತು, ತಂತ್ರ, ಭಾಷೆ, ಮಟ್ಟು, ಇತ್ಯಾದಿಗಳಲ್ಲಿ ಬದಲಾವಣೆ ಕಂಡರೂ ಅದರ ಮೂಲ ಉದ್ದೇಶ, ಆಶಯ ಒಂದೇ ಆಗಿರುತ್ತದೆ.

ಜನಕೋಟಿಯ ಆಶೋತ್ತರಗಳಿಗೆ ತಕ್ಕಂತೆ ಹುಟ್ಟಿಕೊಂಡು ಬಂದಿರುವ ಈ ಜಾನಪದ ಸಮೂಹ ಮಾಧ್ಯಮಗಳು ಆಧುನಿಕ ಸಮೂಹ ಮಾಧ್ಯಮಗಳಿಗೆ ಭಿನ್ನವಾದರೂ ಪರಸ್ಪರ ಪೂರಕವಾಗಿರುವುದು ಗಮನಾರ್ಹ. ಇಂದಿನ ಹವ್ಯಾಸಿ ಕಂಪನಿ ನಾಟಕ, ಸಿನಿಮಾ ರೇಡಿಯೋ ದೂರದರ್ಶನ ಮುಂತಾದ ಮಾಧ್ಯಮಗಳು ಜಾನಪದ ಕಲೆಯನ್ನು, ಜಾನಪದ ಕತೆ ಹಾಗೂ ನಾಟಕದ ತಂತ್ರಗಳನ್ನು, ಗ್ರಾಮೀಣ ಬದುಕಿನ ಹಲವಾರು ವಿಭಿನ್ನ ಅಂಶಗಳನ್ನು ಬಳಸಿಕೊಂಡಿದೆ. ದೇಶದ ಜ್ವಲಂತ ಸಮಸ್ಯೆಗಳನ್ನು ಜನಸಾಮಾನ್ಯರಿಗೂ ಮುಟ್ಟಿಸುವಲ್ಲಿ, ಸಾಕ್ಷರತೆಯ ಪ್ರಸಾರ, ವರದಕ್ಷಿಣೆ ವಿರೋಧಿ ನೀತಿ, ಕುಟುಂಬ ಯೋಜನೆ, ಹಸಿರುಕ್ರಾಂತಿ ಹಾಗೂ ೨೦ ಅಂಶಗಳ ಕಾರ್ಯಕ್ರಮ ಇತ್ಯಾದಿ ಸರ್ಕಾರಿ ಯೋಜನೆಗಳ ಪ್ರಸಾರಕ್ಕೆ ಆಧುನಿಕ ಮಾಧ್ಯಮಗಳಲ್ಲಿ ಜಾನಪದ ಮಾಧ್ಯಮವನ್ನು ಅನುಕರಿಸುವುದನ್ನು ಕಾಣುತ್ತೇವೆ. ಯುನೆಸ್ಕೊ ೧೯೭೨ರ ಲಂಡನ್ ಸಭೆಯ ವರದಿಯು ಕೂಡ ಪ್ರಾಯೋಗಿಕವಾಗಿ ಜನಪದ ಸಮೂಹ ಮಾಧ್ಯಮಗಳು ಏಳ್ಗೆಯ ಯೋಜನೆಗಳಿಗೆ ಪೂರ ಸಾಮಾಗ್ರಿ ಒದಗಿಸುತ್ತವೆ ಎಂಬ ವಿಚಾರ ತಿಳಿಸುತ್ತದೆ. ಕಾಲಕ್ಕೆ ತಕ್ಕಂತೆ ಬಹುಸಮುದಾಯದ ವಿಚಾರಗಳನ್ನು ಪ್ರಸಾರಮಾಡುವಲ್ಲಿ ಇಂದಿನ ಆಧುನಿಕ ಸಮೂಹ ಮಾಧ್ಯಮಗಳು ಹೆಚ್ಚು ಆಸಕ್ತಿ ವಹಿಸಿವೆ. ಹೊಸ ಸಮಾಜದ ನಿರ್ಮಾಣದ ದಾರಿಯಲ್ಲಿ ಪರಂಪರಾಗತವಾಗಿ ಬಂದ ಜನಪದ ಮಾಧ್ಯಮಗಳ ಪಾತ್ರ ಇಂದು ಎಂದಿಗಿಂತ ಮಹತ್ವವಾಗಿದೆ.

ಪ್ರಸ್ತುತ ಈ ಅಧ್ಯಯನದ ಉದ್ದೇಶ ಸಮೂಹ ಮಾಧ್ಯಮಗಳಲ್ಲಿ ಜಾನಪದ ಮರುಹುಟ್ಟು ಪಡೆಯುವ ಬಗ್ಗೆ ಮತ್ತು ಅದರ ಬಳಕೆಯನ್ನು ಕುರಿತಂತೆ ಚರ್ಚಿಸುವುದೇ ಆಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಕೆಳಗಿನಂತೆ ವಿಭಾಗಿಸಿಕೊಂಡು ಅಧ್ಯಯನ ನಡೆಸಲಾಗಿದೆ.

೪.೧ ಪತ್ರಿಕೋದ್ಯಮ ಮತ್ತು ಜಾನಪದ.

೪.೨ ಬಾನುಲಿ ಮತ್ತು ಜಾನಪದ.

೪.೩ ದೂರದರ್ಶನದಲ್ಲಿ ಜಾನಪದ.

೪.೪ ಸಿನಿಮಾ ಮಾಧ್ಯಮ ಮತ್ತು ಜಾನಪದ ಪರಿಕಲ್ಪನೆ.

೪.೫ ಜನಪದ ರಂಗಭೂಮಿ ಮತ್ತು ಹೊಸ ಸಾಧ್ಯತೆಗಳು.

೧. ಪತ್ರಿಕೋದ್ಯಮ ಮತ್ತು ಜಾನಪದ

ಪ್ರಪಂಚದ ವಿದ್ಯುನ್ಮಾನ ಘಟನೆಗಳನ್ನು ಜನರಿಗೆ ನಿಖರವಾಗಿ, ನಿಷ್ಪಕ್ಷಪಾತವಾಗಿ ಬಿತ್ತರಿಸುವುದೇ ಪತ್ರಿಕೋದ್ಯಮ. ಭಾರತದ ಪತ್ರಿಕೋದ್ಯಮಕ್ಕೆ ಕೇವಲ ಎರಡು ಶತಮಾನಗಳ ಇತಿಹಾಸವಿದೆ. ಆದರೆ ಈಗ ಪತ್ರಿಕೋದ್ಯಮದಲ್ಲಿ ಪ್ರಪಂಚದ ನಾಲ್ಕನೇ ಸ್ಥಾನದಲ್ಲಿದೆ. ಮೊಟ್ಟ ಮೊದಲನೆಯ ಪತ್ರಿಕೆಯನ್ನು ಪ್ರಾರಂಭಿಸಿದ ಕೀರ್ತಿಯು ಜೇಮ್ಸ್ ಅಗಸ್ಟೀನ್ ಹಕ್ಕಿಗೆ ಸೇರುತ್ತದೆ. ಪತ್ರಿಕೆಯ ಮೊದಲನೆಯ ಪ್ರತಿಯು ೧೭೮೦ ನೇ ಜನವರಿ ೨೯ರಲ್ಲಿ ಕಲ್ಕತ್ತಾದಲ್ಲಿ 'ದಿ ಬೆಂಗಾಲ್ ಗೆಜೆಟ್' ಹೊರಬಂತು. ಕರ್ನಾಟಕದಲ್ಲಿ 'ಮಂಗಳೂರು ಸಮಾಚಾರ್' ಪತ್ರಿಕೆಯು ಮೊದಲಾಯಿತು. ಪತ್ರಿಕೋಧ್ಯಮ ಎಂದರೇನು ಎಂಬುದನ್ನು ಹಲವಾರು ವಿದ್ವಾಂಸರು ತಮ್ಮ ವಿವೇಚನಾ ಪರಿಧಿಯಲ್ಲಿ ತೆರೆದಿಟ್ಟಿದ್ದಾರೆ. ಅಮೇರಿಕಾದ ಸುಪ್ರಸಿದ್ಧ ಪತ್ರಿಕೋದ್ಯಮದ ಪ್ರಾಧ್ಯಾಪಕರಾದ 'ರೋಲೆಂಡ್ ಇವುಲ್‌ಸೆಲ್' ಪತ್ರಿಕೋದ್ಯಮವನ್ನು ಈ ರೀತಿಯಾಗಿ ವರ್ಣಿಸಿದ್ದಾರೆ. "ಸಾರ್ವಜನಿಕ ಅಭಿಪ್ರಾಯಗಳನ್ನು ಮತ್ತು ಸಾರ್ವಜನಿಕ ಸತ್ಕಾರ ಮತ್ತು ವಿನೋದಗಳನ್ನು ಆಧುನಿಕ ಪ್ರಚಾರ ಮಾರ್ಗಗಳ ಮೂಲಕ ಕ್ರಮಬದ್ಧವಾಗಿ ನಂಬಿಕೆಗೆ ಅರ್ಹವಾಗುವಂತೆ ಪ್ರಸಾರ ಮಾಡುವ ಸಾಧನವೇ ಪತ್ರಿಕೋದ್ಯಮ"[೪] ಅಂದರೆ ಪತ್ರಿಕೋದ್ಯಮದ ಕೆಲಸ ಸಾರ್ವಜನಿಕ ಸುದ್ದಿ ವಿಷಯಗಳನ್ನು ಸಂಗ್ರಹಿಸಿ ಮತ್ತೆ ಸಾರ್ವಜನಿಕರಿಗೆ ತಿಳಿಸುವುದೇ ಆಗಿದೆ. ಸಾರ್ವಜನಿಕ ವಿಷಯಗಳನ್ನು ಸಂಗ್ರಹಿಸುವಾಗ ನೀತಿ ನಿಯಮಗಳಿಗೆ ಬದ್ದರಾಗಿರಬೇಕು ಮತ್ತು ನಿರ್ದಿಷ್ಟ ಭೂ ಪ್ರದೇಶವನ್ನು ತಲುಪುವಂತಿರಬೇಕು. ಈ ಉದ್ಯಮವು ಭೂತಕಾಲವನ್ನು ಒಳಗೊಂಡಂತೆ ವರ್ತಮಾನಕಾಲಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತದೆ. ಪತ್ರಿಕೆಗಳು ಮಾನವನ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದರೊಂದಿಗೆ ಪ್ರಜಾಪ್ರಭುತ್ವದ ಕಾವಲು ನಾಯಿಯಾಗಿ ಕೆಲಸ ಮಾಡುತ್ತದೆ. ಇಂಗ್ಲೇಂಡಿನ ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರಾಗಿದ್ದ ಕಿಂಗ್ಲೆಮಂರ್ಟಿನ್ ಹೀಗೆ ನುಡಿದಿದ್ದಾರೆ. "ಈ ಪ್ರಪಂಚದಲ್ಲಿ ಜೀವನ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಪ್ರಪಂಚದ ಆಗು ಹೋಗುಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತಾನೆ ಹೀಗಿರುವಾಗ ಜಗತ್ತಿನಲ್ಲಿ

ನಡೆಯುವ ಆಂದೋಲನದ ಬಗ್ಗೆ ವಿಷಯಗಳನ್ನು ತಿಳಿಸಿ ಶಿಕ್ಷಣ ಕೊಡುವ ಕರ್ತವ್ಯವು ಪತ್ರಿಕೆಯದಾಗಿರುತ್ತದೆ”[೯].

ಕೈಗಾರೀಕರಣ, ಉದಾರೀಕರಣ ಮತ್ತು ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಇಂದು ವಿಶ್ವವೇ ಒಂದು ಹಳ್ಳಿಯಾಗುತ್ತಿದೆ. ಪ್ರಪಂಚದ ಮಾಹಿತಿಯನ್ನು ಕುಂತಲ್ಲೆ ತಿಳಿಯುವಷ್ಟು ತಂತ್ರಜ್ಞಾನ ಮುಂದುವರೆದಿದೆ. ಆಧುನಿಕ ಜ್ಞಾನದ ಪ್ರತಿನಿಧಿಯಾದ ಪತ್ರಿಕೋದ್ಯಮಕ್ಕೂ ಮತ್ತು ಜಾನಪದಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ತೋರಬಹುದು. ಆದರೆ ಎರಡೂ ವಿಷಯಗಳ ಒಳಹೊಕ್ಕು ಧ್ಯಾನಿಸಿದಾಗ ಸಾಮಾನ್ಯತೆಯಷ್ಟೇ ಅಲ್ಲ ಪತ್ರಿಕೋದ್ಯಮವು ಜಾನಪದವನ್ನು ಅಂತರಾಳದಲ್ಲಿ ಹುದುಗಿಸಿಕೊಂಡಿರುವುದನ್ನು ಅಧ್ಯಯನ ಮಾಡಿ ತಿಳಿಯಬಹುದಾಗಿದೆ. ಪತ್ರಿಕೋದ್ಯಮ ಮತ್ತು ಜಾನಪದ ಕ್ಷೇತ್ರಗಳ ವಿದ್ವಾಂಸರ ನಿರ್ವಚನಗಳನ್ನು ತಾಳೆಹಾಕುವುದರಿಂದ ಇವೆರಡರ ಸಂಬಂಧಾಂತರಗಳನ್ನು ಕಂಡುಕೊಳ್ಳಬಹುದು. ಜಾನಪದದ ಬಗ್ಗೆ 'ಕೆನತ್' ಮತ್ತು 'ಮೇರಿಕ್ಲಾಕ್'ರವರು ಹೀಗೆ ಹೇಳಿದ್ದಾರೆ. “ಜಾನಪದ ಎನ್ನುವುದು ವಾತಾವರಣದಂತೆ ಸಾರ್ವತ್ರಿಕವಾದ ವಿಷಯ ನಮ್ಮೆಲ್ಲರ ಬದುಕಿನ ಮೇಲೆ ಅಗೋಚರವಾದರೂ ಮಹತ್ತರವಾದ ಪ್ರಭಾವ ಬೀರುವಂತದ್ದು ವಾತಾವರಣದಂತೆಯೇ ಶಾಸ್ತ್ರೀಯವಾದ ಅಧ್ಯಯನಕ್ಕೆ ಒಳಪಡುವಂತದ್ದು” ಎಂದಿದ್ದಾರೆ.

ಎಂ. ಹಾರ್ಮನ್ “ಜಾನಪದ ಯಾವುದೇ ವಸ್ತುವಿನಲ್ಲಿ ಯಾವುದೇ ವ್ಯಕ್ತಿ ಅಥವಾ ಸಮೂಹದಲ್ಲಿ ಯಾವುದೇ ಸಮಯ ಮತ್ತು ಸ್ಥಳದಲ್ಲಿ ಕಾಣಿಸಿಕೊಳ್ಳಬಹುದು.”

ರಿಚರ್ಡ್ ಎಂ. ಡಾರ್ಸನ್ “ಜಾನಪದ ಭೂತದ ಪ್ರತಿನಿಧಿಯಾಗಿರುವಂತೆ ವರ್ತಮಾನಕಾಲದ ಕಸುವುಳ್ಳ ದನಿಯೂ ಆಗಿದೆ” ಜಾನಪದದ ಪರಿಕಲ್ಪನೆಯ ಬಗೆಗೆ ಸ್ಪಷ್ಟವಾಗಿ ತಿಳಿದುಕೊಂಡಿದ್ದ ಡಾರ್ಸನ್‌ರವರ ಪ್ರಕಾರ ಜಾನಪದ ಜೀವಂತವಾದ, ಸ್ವತಂತ್ರವಾದ, ಪರಿಷ್ಕೃತವಾದ ಅಧ್ಯಯನಕ್ಕೆ ಯೋಗ್ಯವಾದ ಅತ್ಯಾಧುನಿಕ ಜ್ಞಾನದ ಕ್ಷೇತ್ರ. ಇಂದಿನ ಯಾತನಾಮಯವಾದ ಪೂರ್ಣಜಗತ್ತಿನಲ್ಲಿ ಜಾನಪದ ಖಂಡಿತ ಅವಶ್ಯಕ. ಇದನ್ನು ಪ್ರತಿಯೊಂದು ಕಾಲೇಜ್ ಕ್ಯಾಂಪಸ್ಸಿನಲ್ಲೂ ಕಲಿಯಬೇಕು. ಇದು ಜಾನಪದವನ್ನು ಕುರಿತಾದ ದರ್ಶನ”[೧೦] ಎಂದು ಒಂದೆಡೆ ಹೇಳಿದ್ದಾರೆ. ಮೇಲ್ಕಾಣಿಸಿದ ವ್ಯಾಖ್ಯಾನಗಳ ಕೆಲವೊಂದು ಲಕ್ಷಣಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

ಪತ್ರಿಕೋದ್ಯಮ

೧. ನಂಬಿಕೆ ಅರ್ಹವಾಗುವಂತೆ ಪ್ರಸಾರಮಾಡುವುದು
೨. ಪ್ರಪಂಚದ ನಡಾವಳಿಗಳನ್ನು ಪ್ರಸಾರಮಾಡುವ ಸಾಧನ
೩. ಸಾರ್ವಜನಿಕ ಸತ್ಕಾರ ಮತ್ತು ವಿನೋದ

೪. ಮಾನವನ ಯೋಗಕ್ಷೇಮ
೫. ಸಾರ್ವಜನಿಕ ಅಭಿಪ್ರಾಯಕ್ಕೆ ಹೆಚ್ಚು ಗಮನ.

ಜಾನಪದ

೧. ಜಾನಪದ ಎನ್ನುವುದು ಸಾರ್ವತ್ರಿಕ ವಿಷಯ
೨. ನಮ್ಮೆಲ್ಲರ ಮೇಲೆ ಮಹತ್ವದ ಪ್ರಭಾವ ಬೀರುವಂತದ್ದು
೩. ಯಾವುದೇ ವ್ಯಕ್ತಿ ಅಥವಾ ಸಮೂಹಗಳಲ್ಲಿ ಯಾವುದೇ ಸಮಯ ಮತ್ತು ಸ್ಥಳಗಳಲ್ಲಿ ಕಾಣಿಸಿಕೊಳ್ಳುವಂತದ್ದು.
೪. ನಂಬಿಕೆಗಳಲ್ಲಿ ನಡಾವಳಿಗಳಲ್ಲಿ ಸಂಪ್ರದಾಯದಲ್ಲಿ ಅದು (ಜಾನಪದ) ತೋರಿಬರುತ್ತದೆ.
೫. ಭೂತಕಾಲದ ಪ್ರತಿಧ್ವನಿಯಾಗಿರುವಂತೆ ವರ್ತಮಾನದ ಕಾಲದ ಕಸುವುಳ್ಳ ದನಿಯೂ ಆಗಿದೆ.

ಮೇಲಿನ ಎರಡು ವಿಷಯಗಳಲ್ಲಿ ಸಾಮ್ಯತೆಗಳನ್ನು ಕಾಣಬಹುದು. ಪತ್ರಿಕೋದ್ಯಮ ಎನ್ನುವುದು ಜಾನಪದದ ಲಿಖಿತ ರೂಪವಾಗಿದೆ. ಘಟನೆಗಳನ್ನು ನಿಖರವಾಗಿ, ಸಾರಸಂಗ್ರಹವಾಗಿ 'ಲಿಖಿತ'ತೆಯ ಮೂಲಕ ಜನಾಂಗಕ್ಕೆ ಕೊಂಡೊಯ್ಯುವ ಸಾಧನವಾಗಿದ್ದರೆ ಮತ್ತು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವಾದರೆ, ಜಾನಪದ ಎನ್ನುವುದು ಜೀವಂತವಾಗಿ, ಶಿಷ್ಟ ಸಂಸ್ಕೃತಿಯ ತಾಯಿಯಾಗಿ ಒಂದು ನಿರ್ದಿಷ್ಟ ಜನಾಂಗದ ಸಮಸ್ತ ವರ್ತನೆಯ ಸಾಂಸ್ಕೃತಿಕ ಅಂಗವಾಗಿ ಕಾರ್ಯನಿರ್ವಹಿಸುತ್ತದೆ. ಜಾನಪದವನ್ನು ಕುರಿತು ಗಂಭೀರ ಚರ್ಚೆ ನಡೆಸಿದ ಅಲನ್‌ಡೆಂಡಸ್ ಅವರ ಕೃತಿಯಲ್ಲಿ ಜಾನಪದಕ್ಕೆ ಸಂಬಂಧಿಸಿದ ಇಪ್ಪತ್ತೊಂದು ನಿರ್ವಚನಗಳಿವೆ. ಹದಿಮೂರು ನಿರ್ವಚನಗಳಲ್ಲಿ ಪರಂಪರೆ ಎಂಬ ಉಲ್ಲೇಖ ಪ್ರಧಾನವಾಗಿ ಕಾಣುತ್ತದೆ. ಒಟ್ಟಾರೆ ಪರಂಪರೆ ಮತ್ತು ಪ್ರಸರಣ ಗುಣಗಳು ಜಾನಪದ ಅಂತಃಶಕ್ತಿಯಾಗಿರುವುದನ್ನು ಇಲ್ಲಿ ಗುರುತಿಸಬಹುದು. ಪರಂಪರೆ ಎಂದರೆ ಅದು ಜಡಸಂಪ್ರದಾಯವಲ್ಲ ಚಲನಶೀಲ ನಿರಂತರತೆಯೆಂದು ಗುರುತಿಸುತ್ತೇವೆ. ಇನ್ನು ಪ್ರಸರಣವೆಂಬ ಕಲ್ಪನೆಯು ಜಾನಪದ ಚಲನಶೀಲತೆಯನ್ನು ನಿರ್ದೇಶಿಸುತ್ತದೆ. ಅಂದರೆ ಜಾನಪದವು ನಿಂತ ನೀರಲ್ಲ, ಅದು ಜಡಸಂಪ್ರದಾಯಗಳ ಸಮೂಹವಲ್ಲ, ವಿಕಸನಶೀಲ ಶಕ್ತಿಯನ್ನು ಒಳಗೊಂಡ ಒಂದು ಪರಿಕಲ್ಪನೆಯೆಂಬ ಅಂಶ ಆರಂಭಿಕ ನಿರ್ವಚನಗಳ ಆಂತರ್ಯದಲ್ಲಿ ಅಡಗಿದೆ. ಆದ್ದರಿಂದ ಜಾನಪದ ಎನ್ನುವುದು ಒಂದು ಚಲನಶೀಲ ಪರಂಪರೆ.[೧೧]

ಜಾನಪದವು ಪರಂಪರೆಯೊಂದಿಗೆ ಸದಾ ಮುಂದುವರೆಯುತ್ತದೆ. ಆಧುನಿಕತೆಯನ್ನು ತನ್ನೊಂದು ಅಂಶವಾಗಿ ಮಾಡಿಕೊಳ್ಳುವ ಔದಾರ್ಯ ಜಾನಪದಕ್ಕಿದೆ. ಇಂದಿನ ಪತ್ರಿಕೆಗಳು, ನಿಯತಕಾಲಿಕೆಗಳು ಜಾನಪದದ ವಿವಿಧ ಪ್ರಕಾರಗಳನ್ನು, ವಿಶಿಷ್ಟ ಸಂಪ್ರದಾಯಗಳನ್ನು ಅಕ್ಷರ ಸಮುದಾಯಕ್ಕೆ

ದಿನಬೆಳಗಾದರೆ ತಲುಪಿಸುವಲ್ಲಿ ಪ್ರಭಾವಯುತವಾಗಿವೆ. ಇಷ್ಟೇ ಅಲ್ಲ ಪತ್ರಿಕೆಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ಜಾನಪದದ ಮರುಹುಟ್ಟನ್ನು ಕಾಣಬಹುದು. ಪತ್ರಿಕೆಗಳು ಜಾನಪದದ ಪ್ರಸರಣಕ್ರಿಯೆಯನ್ನು ಮಾಡುತ್ತವೆ. ನಿರ್ದಿಷ್ಟ ಭೂಪ್ರದೇಶಕ್ಕೆ ಸೀಮಿತವಾಗಿದ್ದ ಜಾನಪದದ ವಿವಿಧ ಪ್ರಕಾರಗಳು ಪತ್ರಿಕೆಗಳಿಂದ ರಾಷ್ಟ್ರದಾದ್ಯಂತ ತಲುಪುವಂತಾಗಿದೆ. ಪತ್ರಿಕೋದ್ಯಮದ ಒಂದು ಮುಖವನ್ನು ಜಾನಪದದ ಪ್ರಸರಣ ವೇದಿಕೆಯನ್ನಾಗಿಯೂ ನೋಡಬಹುದು. ಈವರೆಗೂ ಪ್ರತಿಯೊಂದು ಹಳ್ಳಿಯೂ ಸಹ ಒಂದೊಂದು ಜಾನಪದ ಲೋಕವೆ. ಅಲ್ಲಿಯ ಆ ಜ್ಞಾತ ಕಲಾವಿದರನ್ನು ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು, ಹೇಳುವವರನ್ನು ನಾವು ಅವರಿರುವ ಸ್ಥಳಕ್ಕೆ ಹೋಗಿ ನೋಡಲು ಸಾಧ್ಯವಿಲ್ಲ. ಆದರೆ ಇಂತಹ ನೋಟವನ್ನು ದಿನಬೆಳಗಾದರೆ ಪತ್ರಿಕೆಗಳಲ್ಲಿ ನಿಯತಕಾಲಿಕೆಗಳಲ್ಲಿ ಕಾಣಬಹುದು. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ತ್ರೈಮಾಸ ಪತ್ರಿಕೆಗಳಲ್ಲಿ ಜಾನಪದ ಕಲೆ ಮತ್ತು ಕಲಾವಿದರನ್ನು ಪರಿಚಯಿಸುವ ಪ್ರತ್ಯೇಕವಾದ ಕಾಲಂನ್ನು ಮೀಸಲಾಗಿ ಇಟ್ಟಿರುತ್ತಾರೆ.

ಸಾಪ್ತಾಹಿಕ ಪುರವಣಿಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಪತ್ರಿಕೆಗಳಲ್ಲೂ ಜಾನಪದಕ್ಕೆ ಸಂಬಂಧಿಸಿದ ಯಾವುದೇ ಪ್ರಕಾರವನ್ನಾಗಲಿ, ಜನಪದ ಕಲಾವಿದರನ್ನಾಗಲಿ ಪರಿಚಯಿಸುವ ಪರಿಚಯಾತ್ಮಕವಾದ ಲೇಖನಗಳು ಇರುವುದನ್ನು ಕಾಣಬಹುದು. ಜಾನಪದದ ಬಗ್ಗೆ ಆಸಕ್ತಿಯುಳ್ಳ ವಿದ್ಯಾವಂತ ಸಮುದಾಯವು ತಮ್ಮ ಸುತ್ತಮುತ್ತಲಿನಲ್ಲಿರುವ ಕಲಾವಿದರನ್ನೋ ವಿಶಿಷ್ಟ ಜನಪದ ಸಂಪ್ರದಾಯ, ಕ್ರೀಡೆ, ಜನಪದ ಸಾಹಿತ್ಯ ಮತ್ತು ವಿವಿಧ ಪ್ರಕಾರಗಳನ್ನು ಲೇಖನಗಳ ಮೂಲಕ ಕಟ್ಟಿಕೊಟ್ಟು ಪತ್ರಿಕೆಗಳ ಮುಖಾಂತರ ಎಲ್ಲರಿಗೂ ಜಾನಪದ ವೈಶಿಷ್ಟ್ಯವನ್ನು ತಿಳಿಸುತ್ತಾರೆ.

ಉದಾ: 'ಕಂಬಳ' ಕೆಸರುಗದ್ದೆಯ ರೋಚಕ ಓಟ[೧೨]

ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಜಾನಪದ ಕ್ರೀಡೆ ಕಂಬಳ, ಮಳೆಗಾಲ ಕಳೆದು ಬೇಸಿಗೆ ಮುಗಿಯುವವರೆಗೆ ಈ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ 'ಕಂಬಳ'ದ ಸಡಗರ ಕೆಸರನ್ನು ಬಾನೆತ್ತರಕ್ಕೆ ಚಿಮ್ಮಿಸುತ್ತಾ ಓಡುವ ಕೋಣಗಳ ಸ್ಪರ್ದೆಯೇ ಕಂಬಳ. ಇದು ಇಲ್ಲಿನ ಜನಪದ ಬದುಕಿನ ಶ್ರೀಮಂತಿಕೆಯ, ಮನೋರಂಜನೆಯ ಪ್ರತೀಕವೂ ಆಗಿದೆ. ಸರಕಾರದಿಂದಲೂ ನಿರ್ಲಕ್ಷಿತವಾಗಿ, ಅವಸಾನದ ಅಂಚಿನಲ್ಲಿರುವ ತುಳುನಾಡಿನ ಈ ಕ್ರೀಡೆ ಇಂದು ಸ್ವಲ್ಪವಾದರೂ ಉಳಿದುಕೊಂಡಿದ್ದರೆ ಅದಕ್ಕ ಕಾರಣ ಇದರೊಂದಿಗಿರುವ ಕರಾವಳಿಯ ಜನರ ಸಾಂಸ್ಕೃತಿಕ ಬೆಸುಗೆ. ಕರಾವಳಿಯ ಜನಪದಕ್ಕೆ ಸಂಬಂಧಿಸಿದಂತೆ ಇದೊಂದು ಗಂಭೀರ ಸಮಸ್ಯೆಯು ಹೌದು.

ಈಗ ಕಾಸರಗೋಡಿನಿಂದ ಬೈಂದೂರು ತನಕದ ಕರಾವಳಿ ತೀರದಲ್ಲಿ ರೈತಾಪಿ ಜನರು ಜತನದಿಂದ ಕಾಪಾಡಿಕೊಂಡು ಬಂದ ಭ್ರಾತೃತ್ವ. ಸಾಮರಸ್ಯ ಮತ್ತು ಒಗ್ಗಟ್ಟಿನ ದ್ಯೋತಕವಾದ ಕಂಬಳದ ವೈಭವವನ್ನು ಕಾಣಬಹುದು. ವರ್ಷವಿಡೀ ತಿಂದು ಬಲಿಷ್ಟವಾಗಿರುವ ದಷ್ಟಪುಷ್ಟ ಕೋಣಗಳಿಗೆ ಕೃಷಿ

ಕೆಲಸ ಮುಗಿದು ಕಂಬಳದ ಸಂಭ್ರಮ! ಕೋಣಗಳನ್ನು ಜತೆಜತೆಯಾಗಿ ಕಟ್ಟಿ 'ಕೆರೆ' (ಕಂಬಳಕ್ಕೆಂದೇ ವಿಶೇಷವಾಗಿ ಸಿದ್ಧಪಡಿಸಿದ ಟ್ರ್ಯಾಕ್ - ಗದ್ದೆ)ಗಳಲ್ಲಿ ಓಡಿಸುವ ಈ ಗ್ರಾಮೀಣ ಸ್ಪರ್ಧೆ ೪ ವಿಭಾಗಗಳಲ್ಲಿ ನಡೆಯುತ್ತದೆ. ೧. ಕನೆ ಹಲಗೆ ೨. ಹಗ್ಗದ ವಿಭಾಗ, ೩. ನೇಗಿಲ ವಿಭಾಗ. ೪. ಅಡ್ಡ ಹಲಗೆ. ಪ್ರತಿಯೊಂದರಲ್ಲಿ ಕೋಣಗಳ ಹಲ್ಲುಗಳ ಆಧಾರದ ಮೇಲೆ ಕಿರಿಯ (ಆರು ಹಲ್ಲುಗಳಿಗಿಂತ ಕಡಿಮೆ) ಮತ್ತು ಹಿರಿಯ (ಆರು ಹಲ್ಲುಗಳಿಗಿಂತ ಹೆಚ್ಚು) ವಿಭಾಗದಲ್ಲಿ ಸ್ಪರ್ಧೆ ನಡೆಯುತ್ತದೆ. ಕಂಬಳ ಓಟದ ಕೆರೆ ೧೩೦ ರಿಂದ ೧೪೦ ಮೀಟರ್ ಉದ್ದವಿರುತ್ತದೆ. ಕೆರೆಗಳಿಗೆ ಅಡ್ಡಲಾಗಿ ನಿರ್ದಿಷ್ಟ ಎತ್ತರದಲ್ಲಿ ಗುರಿಯನ್ನು ಕಟ್ಟಿರುತ್ತಾರೆ. ಇದಕ್ಕೆ 'ನಿಶಾನಿ' ಎಂದು ಹೆಸರು. ಇದು ಸುಮಾರು ೬ ರಿಂದ ೭ ಮೀಟರ್ ಎತ್ತರದಲ್ಲಿರುತ್ತದೆ. ನಿಶಾನಿಗೆ ನೀರೆರಚಿ ಕೋಣಗಳು ತಮ್ಮ ಗೆಲುವನ್ನು ಸಾಬೀತುಪಡಿಸಬೇಕು. ಕೆರೆಯಲ್ಲಿ ಕೋಣಗಳು ಕಾರಂಜಿಯಂತೆ ಬಾನೆತ್ತರಕ್ಕೆ ನೀರು ಚಿಮ್ಮುತ್ತಾ ಮಿಂಚಿನ ವೇಗದಿಂದ ಧಾವಿಸುತ್ತಿದ್ದರೆ ಜನತೆಗೆ ಉಸಿರುಬಿಗಿ ಹಿಡಿದು ವೀಕ್ಷಿಸುವ ರೋಮಾಂಚನ.

ಕಂಬಳಕ್ಕೆ ಕೋಣಗಳನ್ನು ಆರೈಕೆ ಮಾಡಿ ಬೆಳೆಸುವುದೇ ಒಂದು ಸಾಹಸ. ವರ್ಷಕ್ಕೆ ಸುಮಾರು ೩ ಲಕ್ಷಕ್ಕೂ ಹೆಚ್ಚು ಹಣ ವ್ಯಯಿಸಿ ವಿಶೇಷ ಆಹಾರ, ಆರೈಕೆ ಮಾಡಬೇಕು. ಕಂಬಳದ ಗದ್ದೆಗಳಲ್ಲಿ ಕೋಣಗಳ ಹಿಂದೆ ಓಡುವ ಓಟಗಾರರಿಗೂ, ಕೋಣಗಳನ್ನು ಸ್ಪರ್ಧೆಯ ವೇಳೆ ಬಿಡುವವರಿಗೂ ವಿಶೇಷ ನೈಪುಣ್ಯವಿರಬೇಕು. ಸುಮಾರು ೬-೭ ಇಂಚು ಎತ್ತರದಲ್ಲಿ ಕೆಸರು ತುಂಬಿದ ಕೆರೆಯ ಉದ್ದಕ್ಕೂ ಕೋಣಗಳನ್ನು ಹುರಿದುಂಬಿಸಿಕೊಂಡು ನಿಯಂತ್ರಣದಲ್ಲಿ ಓಡಿಸುತ್ತಾ ಗುರಿ ಸಾಧಿಸುವುದು ಅಷ್ಟು ಸುಲಭದ ಕೆಲಸವೇನಲ್ಲ.

ಇತ್ತೀಚಿನ ದಿನಗಳಲ್ಲಿ ಕಂಬಳದಲ್ಲೂ ಆಧುನಿಕತೆ ಅಂತರ್ಗತಗೊಂಡಿದೆ. ಕಂಬಳ ಕೋಣಗಳ ಮಾಲೀಕರ ಮತ್ತು ಬೆಂಬಲಿಗರ ಒಣ ಪ್ರತಿಷ್ಠೆ ಮತ್ತು ವ್ಯವಹಾರ ದೃಷ್ಟಿ ಎಲ್ಲಾ ಸ್ಪರ್ಧೆಯಲ್ಲಿ ಗೆದ್ದು ಹೆಸರು, ಚಿನ್ನ ಗಳಿಸಿಬೇಕೆಂಬ ಹಂಬಲ ಕಂಬಳದ ಹಿಂದಿರುವ ಸಾಂಸ್ಕೃತಿಕ ಆಸಕ್ತಿಯನ್ನು ಕಡಿಮೆ ಮಾಡುತ್ತಿದೆ ಎಂಬ ಅಪವಾದ ಕೇಳಿಬರುತ್ತಿದೆ. ಎರಡು ದಿನ ಹಗಲು ರಾತ್ರಿ ನಡೆಯುವ ಕಂಬಳದಲ್ಲಿ ಈಗ ಹೊನಲು ಬೆಳಕಿನ ವ್ಯವಸ್ಥೆಯಿದೆ. ವೀಕ್ಷಕ ವಿವರಣೆ, ಸ್ಥಳೀಯ ಕೇಬಲ್ ಟಿ.ವಿಗಳಲ್ಲಿ ನೇರ ಪ್ರಸಾರವನ್ನು ಮಾಡಲಾಗುತ್ತದೆ. ಒಮ್ಮೊಮ್ಮೆ ಮೊದಲು ಗುರಿ ತಲುಪಿದ ಕೋಣಗಳನ್ನು ಗುರಿತಿಸಲು ರೀಪ್ಲೆ ಮೂಲಕ 'ಮೂರನೇ ಕಣ್ಣು' (ಟಿವಿ-ಥರ್ಡ್ ಅಂಪೈರ್ ರೀತಿ) ಬಳಸಬೇಕಾದ ಸಂದರ್ಭವೂ ಬರುವುದಿದೆ. ಸಹಸ್ರಾರು ಮಂದಿ ಕಂಬಳ ವೀಕ್ಷಿಸಲು ಬರುತ್ತಾರೆ. ಹಾಗಾಗಿ ಈಗ ಕಂಬಳ ನಡೆಯುವ ಪರಿಸರದಲ್ಲಿ ಅಂತರರಾಷ್ಟ್ರೀಯ ಸ್ಟೇಡಿಯಂನ ವ್ಯವಸ್ಥೆಯನ್ನು ಕಾಣಬಹುದು. ಈಚಿನ ವರ್ಷಗಳಲ್ಲಿ ಕಂಬಳ ಕೂಡ ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಗೆ ಗ್ರಾಸವಾಗುತ್ತಿದೆ. ಮೂಕ ಪ್ರಾಣಿಯನ್ನು ಹೊಡೆದು ಬಡಿದು ಓಡಿಸಿ ಮನೋರಂಜನೆ ಪಡೆಯುವ ಕಂಬಳದಲ್ಲಿ ಅಪಾರ ನೋವಿದೆಯೆಂಬ ಆರೋಪ ಹುಟ್ಟಿಕೊಂಡಿದೆ. ಓಟದ ವೇಳೆ ಕೋಣಗಳನ್ನು ಹಿಂಸಾತ್ಮಕವಾಗಿ ದಂಡಿಸಲಾಗುತ್ತಿದೆ. ಅತಿಯಾದ

ಹಿಂಸೆಯಾಗುತ್ತಿದೆ ಎಂದು ಕೇಂದ್ರ ಮಂತ್ರಿಯಾಗಿದ್ದ ಮೇನಕಾ ಗಾಂಧಿ ಕಳೆದ ವರ್ಷ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮತ್ತು ಉಸ್ತುವಾರಿ ಸಚಿವ ರಮಾನಾಥ ರೈ ಅವರಿಗೆ ಪತ್ರ ಬರೆದು ವಿವರಣೆ ಕೇಳಿದಾಗ ಕಂಬಳ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡೆದಿತ್ತು. ಕಂಬಳ ಸಾಂಸ್ಕೃತಿಕ ಕ್ರೀಡೆಯೇ? ರೋಚಕ, ರಂಜಕತೆಯ ಸಮರೋತ್ಸವದಲ್ಲಿ ಕೋಣಗಳ ಮೇಲೆ ಮಾನವನ ಕ್ರೌರ್ಯವೇ? ಎಂಬ ಪ್ರಶ್ನೆ ಎದುರಾಗಿತ್ತು. ಕೋಣಗಳಿಗೆ ಒಂದೇ ಸಮನೆ ಹತ್ತಾರು ಜನ ಮನಬಂದಂತೆ ಬಾರುಕೋಲಿನಿಂದ ಹೊಡೆಯುವುದು ಚಾಟಿ ಏಟನ್ನು ಪ್ರತಿಭಟಿಸಲಾರದೆ ಕಣ್ಣುಗಳನ್ನು ತಿರುಗಿಸುತ್ತಾ, ಬಾಯಿಯಿಂದ ಜೊಲ್ಲನ್ನು ಸುರಿಸುತ್ತಾ ಹೊಡೆತದಿಂದ ತಪ್ಪಿಸಿಕೊಳ್ಳಲು ಪ್ರಯಾಸ ಪಡುವ ಕೋಣಗಳ ನರಳಾಟ, ಚರ್ಮಸೀಳಿ ರಕ್ತ ಚಿಮ್ಮುವ ದೃಶ್ಯ.... ಕಂಬಳ ನಡೆಯುವ ಸ್ಥಳದಲ್ಲಿ ಸಾಮಾನ್ಯ ಪ್ರಾಣಿ ಹಿಂಸೆ ನಡೆಯುತ್ತಿದೆ ಎನ್ನಲು ಇಷ್ಟೇ ಸಾಲದೇ!

ಕಂಬಳ ತೀರಾ ಹಿಂಸಾತ್ಮಕವಾಗಿ ನಡೆಯುತ್ತಿದೆ. ಕೋಣಗಳಿಗೆ ನಿರ್ದಾಕ್ಷಿಣ್ಯವಾಗಿ ಹೊಡೆಯಲಾಗುತ್ತಿದೆ. ಅಪರಿಮಿತ ಕ್ರೌರ್ಯ ಪ್ರದರ್ಶನವಾಗುತ್ತಿದೆ. ಕಂಬಳ ನಡೆಯುವ ಸ್ಥಳದಲ್ಲಿ ಜೂಜು ಮತ್ತು ಅಮಲು ಪದಾರ್ಥಗಳ ವ್ಯವಹಾರ ನಡೆಯುತ್ತಿದೆ. ಪ್ರಾಣಿ ಕ್ರೌರ್ಯ ತಡೆ ನಿಯಮ (೧೯೬೦) ದಂತೆ ಶಿಕ್ಷಾರ್ಹ ಅಪರಾಧ, ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಕಾನೂನು ಕ್ರಮ ಕೈಗೊಂಡು ಮಾಹಿತಿಯನ್ನು ನೀಡಬೇಕು ಎನ್ನುವುದು ಮೇನಕ ಗಾಂಧಿ ಬರೆದ ಪತ್ರದ ಒಕ್ಕಣೆಯಾಗಿತ್ತು.

ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಕಂಬಳದಲ್ಲಿ ಕ್ರೌರ್ಯ, ಜೂಜು, ಅಮಲು ಪದಾರ್ಥಗಳ ವ್ಯವಹಾರದ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಿ ಬಳಿಕ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕಂಬಳ ಸಮಿತಿಯ ಮಹಾಸಭೆಯಲ್ಲಿ ಜಾನಪದ ಕ್ರೀಡೆಯಾದ ಕಂಬಳ ಆಚರಣೆ ಮತ್ತು ಆರಾಧನೆ ಮೌಲ್ಯಗಳನ್ನು ಉಳಿಸಿಕೊಂಡು ಅಹಿಂಸಾತ್ಮಕವಾಗಿ ಕಂಬಳವನ್ನು ನಡೆಸಬೇಕು ಎಂಬ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಂಬಳದ ಕೋಣಗಳಿಗೆ ವಿಪರೀತವಾಗಿ ಹೊಡೆಯುವುದನ್ನು ನಿಲ್ಲಿಸುವುದು. ಪ್ರಾಣಿ ಕ್ರೌರ್ಯ ತಡೆನಿಯಮವನ್ನು ಗೌರವಿಸುವುದು. ನಿಗದಿತ ವೇಳೆಯಲ್ಲಿ ಕೋಣಗಳನ್ನು ಓಟದ ಮುಕ್ತಾಯದ ಬಳಿಕ ಕೋಣಗಳಿಗೆ ಹೊಡೆದ ಓಟಗಾರನಿಗಾಗಲಿ, ಯಜಮಾನನಿಗಾಗಲಿ ಮುಂದಿನ ಕಂಬಳಕ್ಕೆ ಅವಕಾಶ ನಿಷೇಧಿಸುವುದು ಮುಂತಾದ ಕೆಲವು ನಿರ್ಧಾರಗಳನ್ನು ಕಂಬಳ ಸಮಿತಿ ಜಾರಿಗೆ ತರಲು ತೀರ್ಮಾನಿಸಿದೆ.

ಕಂಬಳದಲ್ಲಿ 'ಹಿಂಸೆ' ಎಂಬ ಪದದ ಬಳಕೆಯೇ ಸರಿಯಿಲ್ಲ ಎನ್ನುತ್ತಾರೆ ಕಂಬಳ ಕೋಣಗಳ ಮಾಲೀಕರು. ಪರಂಪರೆಯ ಈ ಕ್ರೀಡೆಯ ಹಿನ್ನೆಲೆ, ಸಂಸ್ಕೃತಿ ತಿಳಿಯದವರು ಇದಕ್ಕೆ ಪ್ರಾಣಿ ಹಿಂಸೆಯ ಲೇಬಲ್ ಹಚ್ಚುತ್ತಾರೆ. ಕಂಬಳ ಸಾಂಸ್ಕೃತಿಕ ಕ್ರೀಡೆ. ಜನಪದ ಉತ್ಸವ ಇದನ್ನು 'ಪ್ರಾಣಿಹಿಂಸೆ' ಎಂಬ ದೃಷ್ಟಿಯಲ್ಲಿ ನೋಡುವುದು ಸರಿಯೋ? ಇದು ಮಾಲೀಕರ ಪ್ರಶ್ನೆ, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ವರ್ಷವಿಡೀ ಹುರುಳಿ ಹಸಿರು ಹುಲ್ಲು ಹಾಕಿ ನಿತ್ಯ ಎಣ್ಣೆ ಮಾಲಿಶು ಮಾಡಿದ ಕೋಣಗಳ

ಪರ ಕಂಬಳ ಪ್ರೇಮಿಗಳು ಬಾಜಿ ಕಟ್ಟಿ ಆನಂದ ಪಡುತ್ತಾರೆ.

ಕಂಬಳ ಅನ್ನುವುದು ಕೇವಲ ಕ್ರೀಡೆಯಲ್ಲ. ಕನ್ನಡ ನಾಡಿನ ತುಳು ಜನರ ಜನಪದ ಪರಂಪರೆಯ ದರ್ಶನ. ಆದ್ದರಿಂದ ಈ ಪರಂಪರೆಗೆ 'ಪ್ರಾಣಿಹಿಂಸೆ'ಯ ಹೆಸರಿನಲ್ಲಿ ನಿಯಂತ್ರಣ ಹೇರುವುದು ಸರಿಯಲ್ಲ ಸ್ವಲ್ಪವಾದರೂ ಹೊಡೆಯದೆ ಮಾತು ಬಾರದ ಕೋಣಗಳನ್ನು ಕಂಬಳದ ಗದ್ದೆಗೆ ಇಳಿಸಿ ಓಡಿಸಲು ಸಾಧ್ಯವಿಲ್ಲ ಎಂಬುದು ಕಂಬಳ ಕಂಡವರಿಗಷ್ಟೇ ಗೊತ್ತು.

ಒಟ್ಟಿನಲ್ಲಿ ಕಂಬಳ ನಿರಂತರವಾಗಿ ಸಾಗಬೇಕು. ಆದರೆ ಹಿಂಸೆಯಿಂದ ಸಂಪೂರ್ಣ ಮುಕ್ತವಾಗಿರಬೇಕು. ಹೀಗಾದರೆ ಪ್ರತಿಯೊಬ್ಬರು ಮನನೊಂದುಕೊಳ್ಳದೆ, ಕ್ರೀಡೆಯ ಸವಿಯನ್ನು ಉಂಡು ಆನಂದಿಸಬಹುದು. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಕಂಬಳಕ್ಕಾಗಿ ಕಳೆದ ವರ್ಷ ೨ ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದೆ. ಕಾಸರಗೋಡಿನ ಮಂಜೇಶ್ವರದಲ್ಲಿ ಕಂಬಳಕ್ಕೆಂದೇ ಶಾಶ್ವತ ಕೆರೆಯನ್ನು (ಗದ್ದೆ) ನಿರ್ಮಿಸಲು ಕೇರಳ ಸರಕಾರ ಮುಂದಾಗಿದ್ದು, ಸ್ಥಳ ಗುರುತಿಸಲು ಕಾಸರಗೋಡು ಜಿಲ್ಲಾಧಿಕಾರಿ ಅವರಿಗೆ ವರ್ಷಗಳ ಹಿಂದೆಯೇ ಆದೇಶ ನೀಡಿತ್ತು. ಇದಿಷ್ಟೇ ಸಾಲದು 'ಕಂಬಳ'ವನ್ನು ಪ್ರೋತ್ಸಾಹಿಸಲು ಪ್ರೇರಣೆ ನೀಡಲು ಅಸ್ತಿತ್ವವನ್ನು ಉಳಿಸಲು ಇನ್ನಷ್ಟು ಆರ್ಥಿಕ ನೆರವು ಒದಗಿಸಬೇಕು. ಕಂಬಳ ಓಟಗಾರರನ್ನು ಗುರುತಿಸಿ ಪ್ರಶಸ್ತಿ ಗೌರವ ಸಲ್ಲುವಂತಾಗಬೇಕು. ಸರ್ಕಾರ ಈ ನಿಟ್ಟನಲ್ಲಿ ಕಾರ್ಯ ಪ್ರವೃತ್ತವಾದೀತು. ಎಂಬ ನಿರೀಕ್ಷೆಯಲ್ಲಿದ್ದಾರೆ ಕಂಬಳಪ್ರಿಯರು.

ಜನಪದ ಕಲಾವಿದರು

ಜನಪದ ಹಾಡುಗಳ ಗಣಿ ಮಳ್ಳವ್ವ ಪೂಜಾರ

ಸುಡು ಬಿಸಿಲಿನ ಉತ್ತರ ಕರ್ನಾಟಕದಲ್ಲಿ ಎಲ್ಲೆಲ್ಲೂ ಗುಡ್ಡಗಳದ್ದೆ ಕಾರುಬಾರು. ಆದರೂ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಪಡಿದುಕೊಂಡಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಜಾನಪದೀಯ ಕ್ಷೇತ್ರದಲ್ಲಿ ಒಂದು ಮಹೋನ್ನತ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ ಇಲ್ಲಿನ ಜಾನಪದ ಬದುಕಿನ ಸೊಗಡೇ ಅಂಥಾದ್ದು. ಕಲಾವಿದರ ಕೀರ್ತಿಯೇ ಅಂಥಾದ್ದು. ಬಿಸರಳ್ಳಿಯ ಮಳ್ಳವ್ವ ಪೂಜಾರರಂತವರ ಗಮ್ಮತ್ತೆ ಅಂಥಾದ್ದು. ಬಿಸಿಲ ನೆಲದ ಬದುಕಿನಲ್ಲಿಯೇ ಬರಡು ನೆಲವಾಗಿ ಕಾಣುವ ಕೊಪ್ಪಳ ಜಿಲ್ಲೆಯ ಬಿಸರಹಳ್ಳಿ ಶೈಕ್ಷಣಿಕ ಸಾಂಸ್ಕೃತಿಕ ಸಾಹಿತ್ಯಿಕವಾಗಿ ಅಚ್ಚಳಿಯದ ಹೆಸರು ಮೂಡಿಸುವಂತೆ ಜನಪದ ಎನ್ನಲು ಮಳ್ಳವ್ವ ಪೂಜಾರರಂತಹ ಜನಪದ ಹಾಡುಗಾರ್ತಿಯರೇ ಕಾರಣ. ಇವತ್ತು ಜನಪದ ಬದುಕಿನ ನೆಲ ಬಿಸರಹಳ್ಳಿಯು ಹೊಕ್ಕರೆ. ಅಲ್ಲಿನ ಒಂದೊಂದು ಮನೆಗಳಲ್ಲೂ ಒಬ್ಬೊಬ್ಬ ಜನಪದ ಕಲಾವಿದರು ಸಿಗುತ್ತಾರೆ. ಅದರಲ್ಲೂ ಮಳ್ಳವ್ವ ಪೂಜಾರಳೆಂದರೆ ಜನಪದ ಹಾಡುಗಳ ಗಣಿ.

ಕಪ್ಪನೆಯ ದೇಹಕ್ಕೆ ಕೆಂಪುದಡಿಯ ಹಸಿರು ಸೀರೆ. ಕಣಕುಪ್ಪಸ ಧರಿಸಿ ಕೇಸರಿಯ ಬಳೆ ತೊಟ್ಟು ತುಂಬು ಸೆರಗು ಹೊದ್ದು ಬಸುರಿಕಟ್ಟೆಗೆ ಗದ್ದಕ್ಕೆಟ್ಟೆ ಕೈಕೊಟ್ಟು ಕುಳಿತ ಮಳ್ಳವ್ವ ಪೂಜಾರ ಹುಟ್ಟಿನಿಂದ ಅನಕ್ಷರಸ್ಥಳು. ಹೆಬ್ಬೆಟ್ಟೇ ಆಕೆಯ ಪಾಲಿನ ಅಕ್ಷರ. ಆದರೆ ಆಕೆಯ ಬಾಯಿಂದ ಹೊರ ಬರುವ ಹಾಡುಗಳಿಗೆ ಸರಿಸಮಾನವಾದ್ದು ಬೇರೆ ಇಲ್ಲ. ಮುಳ್ಳವ್ವನ ಒಡಲಾಳದಲ್ಲಿರುವ ಹಾಡುಗಳು ಒಂದಲ್ಲ. ನೂರಾರು, ಸಾವಿರಾರು. ಸೋಬಾನೆ, ಋತುಮತಿ, ಬೀಸುವ ಕಲ್ಲು, ಒಳಕಲ್ಲು, ಶ್ಯಾವಿಗೆ ಮಣೆ, ಪೂಜೆ, ಸೀಮಂತ, ಹಂದರಗೋಳು, ಆಲಗಂಭ, ದಿಂಡು ನಮಸ್ಕಾರ, ಉಡಿಅಕ್ಕಿ, ಪ್ರಸ್ತ, ನಾಮಕರಣ, ಮಾಡುವಾಗ ಹಾಡುವಂತಹ ಹಲವಾರು ಬಗೆಯವು ಅವುಗಳನ್ನು ಮಳ್ಳವ್ವ ಹಾಡಿದರೆ ಚೆಂದ.

ದಂಡಿ ದಂಡಿ ನೋಡು
ದಂಡಿ ತೊಂಡು ನೋಡು
ದಂಡಿಯ ಮಾಟೆಂದು ಇಪರೀತ

“ಮಲ್ಲಿಗೆಯ ತನುವಿರಲಿ, ಶನಿಕಾಂಬರಿಯ ಮನವಿರಲಿ, ಹೂವೆಂಬುದರ ಯಾವುದೆ ಬಳುಕಿರಲಿ. ಅದು ದಂಡಿಯಾಗಿರಲಿ, ಆ ದಂಡಿ ಋತುಮತಿಯ ಮುಡಿಯೇರಲಿ, ಎಣ್ಣೆ ಮೈತೊಳೆದವಳ ಮದುವಣೆಯ ಜಡಿ ಇರಲಿ.” ಇದು ಎಲ್ಲೇ ಇರಲಿ. ಅದರ ಅಂದವೇ ಅಂಥಾದ್ದು ಬಳಕುವ ಚಂದವೇ ಅಂಥಾದ್ದು. ಅದರಲ್ಲೂ ದಂಡಿಯ ಸಾಂಸ್ಕೃತಿಕ ಮಾಟವೇ ಮನಸೋಲುವಂಥಾದ್ದು ಎಂದು ಹೂ ಮುಡಿಸುವ ಆಚರಣೆಯಲ್ಲಿ ದಂಡಿಯ ಸೌಂದರ್ಯದ ಬಗ್ಗೆ ಹೇಳಿದರೆ.

ಹರಿಶ್ಚಂದ್ರರಾಯರಿವರು
ದೇಶಕ್ಕೆ ದೊಡ್ಡವರಂತೆ
ಕೋಲಣ್ಣ ಕೋಲ ಕೋಲ

ಸತ್ಯಕ್ಕೆ ಹೆಸರಾಗಿ ಇತಿಹಾಸ ಪುಟದಲ್ಲಿ ಅಚ್ಚೊತ್ತಿದ ಹೆಸರಾಗಿ ಮೆರೆದ ಸತ್ಯಹರಿಶ್ಚಂದ್ರಾದಿಯರ ಕಥೆಯು ಹಾಡಾಗಿ ಹರಿಯುವುದು. ಇದು ನಿಮಿಷದ್ದಾಗಿರುವುದಾಗಿ ಗಂಟೆಯದ್ದೇ ಆಗಿರುತ್ತದೆ. ಇನ್ನು ಕಾಲುಂಗರದೊಂದು ಕೈ ಬಳೆಯದೊಂದು ಉಡುವ ಸೀರೆಗೊಂದು ಮುಡಿದ ಹೂವಿಗೊಂದು ಹೀಗೆ ಸಾಲುಗಟ್ಟಿದ ಸಾಂಸ್ಕೃತಿಕಗಳಿಗೆ ಸಾವಿರ ಮುಟ್ಟುವ ಹಾಡುಗಳು ಅದು ಎಡ ಬಿಡದೇ ಹಾಡಿದರೆ. ಹತ್ತು ತಾಸು ಮೀರಬಹುದು ಎನ್ನವ ಮಾತು ಬೇರೆ. ಏಕೆಂದರೆ ಅವರು ಅಂತಿಥ ಹಾಡುಗಾರ್ತಿಯಲ್ಲ. ಒಂದೆರಡು ಹಾಡುಗಳ ಗಣೆಯೂ ಅಲ್ಲ. ಹಾಡಿದರೆ ಕೇಳಿದವರು ಬೆರಳು ಮೂಗ ಮೇಲೆ ಇಡಬೇಕು. ಆದರೆ ಇವತ್ತು ಮಳ್ಳವ್ವನ ಬದುಕು ಎಂಥಾದ್ದು? ಅದೊಂದು ಪುಟ್ಟಗುಡಿಸಲು. ಮಳೆ ಬಂದರೆ ನೀರೆಲ್ಲಾ ಅದರೊಳಗೆ. ಅದು ಅಲ್ಲದೆ ಜೊತೆಗೆ ಎರಡು ಮಕ್ಕಳು ಬೇರೆ. ಇದರ ಜೊತೆ ಏನು ಬಿದ್ರಿ ಎಷ್ಟೊತ್ತಿದ್ರು ದುಡಿದಾ ತಿನ್ನಬೇಕು. ಒಂದು ದಿವಸ ದುಡಿಯೋದು ಬಿಟ್ರ ಆವತ್ತು ಹೊಟ್ಟೆಗೆ

[illegible]

[illegible]

[illegible]

[illegible]

ಕೂಳಿಲ್ಲ. ಏನೋ ಹಾಡಿನ್ರೀ ಇದುವರೆಗೆ ಯಾವುದು ಸೌಲತ್ತು ಸಿಕ್ಕಿಲ್ಲ. ಹೋಗ್ಲಿ ಒಂದು ಮನಿಗಾದರೂ..... ಬ್ಯಾಡೇನು? ಎನ್ನುವಮಾತು ಬೇರೆ.

ಅರವತ್ತರ ಆಜುಬಾಜಿನಲ್ಲಿರುವ ಮಳ್ಳವ್ವ ಪೂಜಾರಳ ಮಾತು ಬರೀ ಮಾತಲ್ಲ. ಅದು ಅವರ ಭವಿಷ್ಯದ ಬಗೆಗಿನ ಕಳಕಳಿಯ ಮಾತು. ಅದರಿಂದ ಜನಪದ ಹಾಡುಗಳ ಗಣಿ ಮಳ್ಳವ್ವ ಪೂಜಾರಳಿಗೆ ತಕ್ಷಣಕೊಂದು ಸೂರು ಬೇಕು[೧೩].

ಜನಮನ್ನಣೆ ಗಳಿಸುತ್ತಿರುವ ಯಕ್ಷಗಾನ

"ಬೆಂಗಳೂರಿನಲ್ಲಿ ಯಕ್ಷಗಾನ ಪ್ರದರ್ಶನಗಳು ಈಗೀಗ ಜನಪ್ರಿಯವಾಗುತ್ತಿವೆ. ಬನಶಂಕರಿ ಬಳಿಯಲ್ಲಿರುವ ಧರ್ಮಗಿರಿಯ ಮಂಜನಾಥ ದೇವಾಲಯದ ಆಡಳಿತ ವರ್ಗವು ಯಕ್ಷಗಾನ ಪ್ರದರ್ಶನವೊಂದನ್ನು ಏರ್ಪಡಿಸಿದ್ದು ಪ್ರೇಕ್ಷಕರು ರಾತ್ರಿಯಿಡೀ ನಿದ್ದೆಗೆಟ್ಟು ಕುಳಿತು ವೀಕ್ಷಿಸಿದ್ದೇ ಅದಕ್ಕೆ ಸಾಕ್ಷಿ. ಕೆ. ಮೋಹನ್ ಸಾರಥ್ಯದ ಯಕ್ಷದೇಗುಲ ಪ್ರದರ್ಶನ ನಡೆಸಿಕೊಟ್ಟಿತು. ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ರಚಿಸಿರುವ 'ಪಂಚಾಕ್ಷರಿ ಮಹಿಮೆ' ಪ್ರಸಂಗವನ್ನು ಇಲ್ಲಿ ಪ್ರದರ್ಶಿಸಲಾಯಿತು. ದುರ್ಜಯಾಸುರ ಎಂಬ ರಕ್ಕಸನಿಂದ ಮರಣ ಹೊಂದಿದ್ದ ಶ್ವೇತಕುಮಾರ ಎಂಬ ರಾಜ ಪಂಚಾಕ್ಷರಿ ಮಂತ್ರ ಪಠಿಸಿ ಶಿವನ ಅನುಗ್ರಹದಿಂದ ಪುನಃ ಬದುಕುತ್ತಾನೆ. ಅಲ್ಲದೆ ದುರ್ಜಯಾಸುರನನ್ನು ಸಂಹರಿಸುತ್ತಾನೆ. ಇದಕ್ಕೂ ಮುನ್ನ 'ಸತ್ತು ಬದುಕಿಬಂದವರಿಂದಲೇ ತನಗೆ ಮರಣ ಪ್ರಾಪ್ತಿಯಾಗಲಿ' ಎಂಬ ವರವನ್ನು ದುರ್ಜಯಾಸುರ ಪಡೆದಿರುತ್ತಾನೆ. ದುಷ್ಟ ಸಂಹಾರ ಮತ್ತು ಶಿವ ಭಕ್ತರ ರಕ್ಷಣೆಯ ಸಂದೇಶ ಸಾರುವುದೇ ಪ್ರಸಂಗದ ಕಥಾವಸ್ತು. ವೃತ್ತಿ ನಿರತರಿಗೆ ಯಾವ ಪ್ರಸಂಗವನ್ನಾದರೂ, ಯಾವ ಸಂದರ್ಭದಲ್ಲಿಯಾದರೂ ನಿಭಾಯಿಸುವುದು ಸಲೀಸು. ಅದೇ ಮಾತು ಹವ್ಯಾಸಿ ಕಲಾವಿದರಿಗೆ ಅನ್ವಯವಾಗುವುದಿಲ್ಲ. (ಆಡುಭಾಷೆಯಲ್ಲಿ ಇಂತಹ ಕಲಾವಿದರಿಂದ ಕೂಡಿದ ಮೇಳವನ್ನು 'ಹಕ್ಕುಮೇಳ' ಎನ್ನುವುದುಂಟು) ಅಪರೂಪದ ಪ್ರಸಂಗವಾಗಿದ್ದರೂ ಕೆಲಸದ ಒತ್ತಡದ ನಡುವೆಯೂ ಪ್ರದರ್ಶನ ನೀಡಿದರೂ ಎಲ್ಲಿಯೂ ಎಡವದೇ ಬೇಸರ ತರಿಸದೇ ನೋಡಿಕೊಂಡು ಹೋದದ್ದು ವಿಶೇಷ.

ಕಥಾನಾಯಕ ಶ್ವೇತಕುಮಾರನ ಪಾತ್ರನಿರ್ವಹಿಸಿದ ನಾರಾಯಣ ಪ್ರಭು ಅವರ ಮಾತುಗಾರಿಕೆ ಕೆಲವೊಮ್ಮೆ ನೀರಸ ಎನ್ನಿಸಿದರೂ ಭಾಷಾಪ್ರಭುತ್ವದಿಂದ ಗಮನ ಸೆಳೆಯುವಲ್ಲಿ ಸಫಲರಾದರು. ಅನೇಕ ಸಾಮಾಜಿಕ ವಿಚಾರಗಳನ್ನು ಪ್ರಸಂಗದ ಚೌಕಟ್ಟಿಗೆ ಎಳೆದುತಂದ ಶೈಲಿಯಿಂದಾಗಿಯೇ ಪ್ರೇಕ್ಷಕರ ಮೆಚ್ಚುಗೆ ಪಾತ್ರರಾದರು. ಅದೇ ರೀತಿ ನೋಡುಗರ ಮನಸೂರೆಗೊಂಡ ಮತ್ತೊಬ್ಬ ಕಲಾವಿದ ಕೃಷ್ಣಮೂರ್ತಿತುಂಗ. ವಿಶ್ವಕಪ್ ಕ್ರಿಕೆಟ್. ಕ್ರಿಕೆಟ್ ಮೋಸದಾಟ ಮತ್ತಿತರ ಸಂಗತಿಗಳನ್ನು ಪ್ರಸ್ತಾಪಿಸಿ ಪ್ರೇತಾತ್ಮಗಳ ವಿಚಾರಣೆ ನಡೆಸಿದ ರೀತಿ ಪ್ರೇಕ್ಷಕರು ಬಿದ್ದು ಬಿದ್ದು ನಗುವಂತೆ ಮಾಡಿತು.

ಖಳನಾಯಕ ದುರ್ಜಯನಾಗಿ ರಾಜೇಶ್ ಭಟ್ ಶಿರಸಿ, ಯಮನಾಗಿ ಬಾಲಕೃಷ್ಣಭಟ್ ಶಿವಯೋಗಿ ಸಿ. ವಿಶ್ವನಾಥ ವಿರಾಳ ಲೋಹಿತ ನೇತ್ರ ಮತ್ತು ವೀರಭದ್ರನ ಪಾತ್ರಗಳಲ್ಲಿ ರಮೇಶ್, ರಂಬೆಯಾಗಿ ಸದಾಶಿವಭಟ್, ತ್ರಿಲೋಕ ಸುಂದರಿಯಾಗಿ ರಾಧಾ ಕೃಷ್ಣ ಉತ್ತಮ ಪ್ರದರ್ಶನ ನೀಡಿದರು. ಹಿಮ್ಮೇಳದಲ್ಲಿ ಸುಬ್ರಮಣ್ಯ ಹೊಳ್ಳ ಮತ್ತು ಲಂಬೋದರ ಹೆಗ್ಡೆ (ಭಾಗವತಿಕೆ) ಗಣೇಶ್ ಭಂಡಾರಿ (ಮೃದಂಗ) ಮಾಧವ ಮಣೂರು (ಚಂಡೆ) ಮಿಂಚಿದರು" [೧೪].

ಜಾನಪದದ ಬಗ್ಗೆ ಸ್ವತಃ ಪತ್ರಿಕೆ ವರದಿಗಾರರಿಂದ ಸಂಗ್ರಹಿಸಿ ಪ್ರಕಟಿಸಿ ಪ್ರಚಾರ ಮಾಡುವುದರಿಂದ ಅಕ್ಷರ ಸಮುದಾಯದೊಡನೆ ಜಾನಪದ ಪರಿಚಯಾತ್ಮಕ ಸಂಬಂಧ ಏರ್ಪಡಿಸುತ್ತದೆ. ಅಷ್ಟೆ ಅಲ್ಲದೆ ನಗರಗಳಲ್ಲಿಯೂ ಜಾನಪದ ಕಲಾವಿದರನ್ನು ಗೌರವಿಸುವ ಮತ್ತು ಜಾನಪದ ಕಲೆಗಳನ್ನು ಕಲಿಯುವುದಕ್ಕೆ ಉತ್ಸಾಹ ಸಿಕ್ಕಿದ ಹಾಗೆ ಆಗುತ್ತದೆ. ಇಂತಹ ಸಂಸ್ಕೃತಿಯೊಂದನ್ನು ಪತ್ರಿಕೋದ್ಯಮ ಹುಟ್ಟುಹಾಕುತ್ತಿದೆ. ಈ ರೀತಿಯ ಪ್ರಚಾರ ಪ್ರಭಾವದಿಂದ ಕೆಲವೊಂದು ಸಂಘ ಸಂಸ್ಥೆಗಳು, ಕಾಲೇಜು ಆಡಳಿತ ಇಂತಹ ಯಾವುದೇ ಜಾನಪದ ಪ್ರಕಾರವೊಂದನ್ನು ಕರಗತ ಮಾಡಿಕೊಂಡು. ಅದರಲ್ಲೆ ಪ್ರಬುದ್ಧತೆಯನ್ನು ಪಡೆದು ದೇಶವಿದೇಶಗಳಿಗೂ ಹೋಗಿ ಪ್ರದರ್ಶನ ಮಾಡಿ ಬಂದಿರುವ ಉದಾಹರಣೆಗಳನ್ನು ಕಾಣಬಹುದು.

ಬೆಂಗಳೂರಿನ ಯಲಹಂಕ ನಗರದಲ್ಲಿ 'ಸ್ನೇಹ ಮಹಿಳಾ ವೀರಗಾಸೆ ತಂಡ' ಎಂಬ ಸಂಘವನ್ನು ಮಹಿಳೆಯರೇ ಕಟ್ಟಿಕೊಂಡು ನುರಿತ ಕಲಾವಿದರಿಂದ ಈ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಪ್ರಮೀಳಾಪ್ರಕಾಶ್ ಎನ್ನುವವರು ಇದರ ಕಾಯದರ್ಶಿಗಳಾಗಿದ್ದು ಇದರ ಸಂಪೂರ್ಣ ಜವಾಬ್ದಾರಿ ಇವರದೇ ಆಗಿದೆ. ಈ ಕಲೆ ಕೇವಲ ಗಂಡಸರಿಗೆ ಮಾತ್ರ ಎಂಬಂತೆ ಇತ್ತು. ಇಂತಹ ಗಂಡುಕಲೆಯನ್ನು ಮಹಿಳೆಯರೇ ಹಲವಾರು ಮಟ್ಟುಗಳನ್ನು ಕಲಿತು ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ಇಲ್ಲಿ ಸಮಯೋಚಿತ ಸಂದರ್ಭಕ್ಕೆ ಅನುಗುಣವಾಗಿ ತಾಂತ್ರಿಕತೆಯಲ್ಲಿ ಬದಲಾವಣೆ ತಂದುಕೊಂಡಿದ್ದರು. ಮೂಲ ಆಶಯ ಬದಲಾಗಿಲ್ಲ. ಇವರು ಪಾಶ್ಚಿಮಾತ್ಯ ದೇಶಗಳಿಗೂ ಹೋಗಿ ಕಾರ್ಯಕ್ರಮವನ್ನು ನೀಡಿದ್ದಾರೆ. ಈ ಸಾಧನೆಯನ್ನು ನಾಡಿನ ಎಲ್ಲಾ ಪತ್ರಿಕೆ, ನಿಯತಕಾಲಿಕೆಗಳಲ್ಲಿ ಪ್ರಶಂಸಿಸಿ ಬರೆದಿದ್ದಾರೆ. ಇದೇ ರೀತಿ 'ಯಕ್ಷದೇಗುಲ' ಎಂಬ ಚಿಕ್ಕ ಮಕ್ಕಳ ಕಲಾತಂಡವು 'ಅಭಿಮನ್ಯುವಿನ ಕಾಳಗ' ಯಕ್ಷಗಾನವನ್ನು ಕುರಿತು ಇಡೀ ಭಾರತದಾದ್ಯಂತ ಮತ್ತು ಮಿಲೇನಿಯಂ ಕಾನ್ಫರೆನ್ಸ್ ಯು.ಕೆ. ಯು.ಎಸ್.ಎ ಯಲ್ಲಿ ಭದ್ರಬುನಾದಿ ಹಾಕಿದವರೇ ಡಾ॥ ಶಿವರಾಮ ಕಾರಂತರವರು. ಇವರ ಪ್ರಯೋಗ ನಾಡಿನಾದ್ಯಂತ ಫಲ ನೀಡುತ್ತಿದೆ. ಈ ರೀತಿ ಅನೇಕ ಸಂಘ ಸಂಸ್ಥೆಗಳು ಕಾಲೇಜು, ಕ್ಯಾಂಪಸ್‌ಗಳು ವಿವಿಧ ಜಾನಪದ ಕಲೆಗಳನ್ನು ಕಲಿಸುತ್ತಿವೆ. ಕೆಲವೊಂದು ಜಾನಪದ ತಂಡಗಳಿಗೆ 'ಉದರನಿಮಿತ್ತಂ' ವಾಗಿವೆ. ಪೂರ್ಣಸಮಯ ಆರ್ಕೆಸ್ಟ್ರಗಳ ರೀತಿಯಲ್ಲಿ ನಗರಗಳಲ್ಲಿ ಬೇರೆಬೇರೆ ಸ್ಥಳಗಳಿಗೆ ಹೋಗಿ ಕಾರ್ಯಕ್ರಮವನ್ನು ಕೊಡುತ್ತಿವೆ. ಇವುಗಳಿಗೆ ಉತ್ತೇಜನವೆಂಬಂತೆ ಪತ್ರಿಕೋದ್ಯಮವು ಸಹ ಪ್ರಭಾವ ರೀತಿಯಲ್ಲಿ ವರದಿಗಳನ್ನು ನೀಡುತ್ತಿವೆ.

ಲಿಖಿತ ಭಾಷೆಯನ್ನು ಸಾಧನವಾಗಿ ಬಳಸಿ ದೈನಂದಿನ ಆಗು ಹೋಗುಗಳನ್ನು ದಾಖಲಿಸುವ ವೃತ್ತಪತ್ರಿಕೆಗಳು ಎಷ್ಟರ ಮಟ್ಟಿಗೆ ಜನಪದರಿಂದ ಪ್ರಭಾವಗೊಂಡಿವೆ. ಜಾನಪದ ಈ ಪತ್ರಿಕೆಗಳ ಮೇಲೆ ಎಷ್ಟರ ಮಟ್ಟಿನ ಪ್ರಭಾವ ಬೀರಿದೆ ಎಂಬುದನ್ನು ಗಮನಿಸಿದಾಗ ತಲೆಮಾರಿನಿದ ತಲೆಮಾರಿಗೆ ಅರಿವಿಲ್ಲದೆಯೋ ಅರಿವಿನಿಂದಲೋ ಸಾಗುತ್ತಿದ್ದ ಜಾನಪದ ವೈವಿಧ್ಯತೆಯನ್ನು ದಾಖಲಿಸಿ ಅವುಗಳು ಬಗೆಗೆ ಗಮನಾರ್ಹ ಪಾತ್ರ ವಹಿಸಿವೆ. ನಾಡಿನ ವಿವಿಧ ಕಡೆಗಳಿಂದ ಜಾನಪದ ಕಲೆ ಮತ್ತು ಕಲಾವಿದರನ್ನು ಪರಿಚಯಿಸುವಲ್ಲಿ ಪತ್ರಿಕೆಗಳ ಪಾತ್ರ ಮಹತ್ತರ. ಜಾನಪದಕ್ಕೆ ಒಂದು ಬಗೆಯ ಚಾಲನೆಯನ್ನು ದೊರಕಿಸುವಲ್ಲಿ ಇವುಗಳ ಪ್ರಯತ್ನ ಅಮೂಲ್ಯ. ಇದರಿಂದ ಆಚಾರ ವಿಚಾರಗಳ ಹಿನ್ನೆಲೆ, ಅವುಗಳ ಉದ್ದೇಶ, ಅಲ್ಲಿರುವ ನಂಬಿಕೆಗಳನ್ನು ಸಾರ್ವತ್ರಿಕವಾಗಿ ತಿಳಿಸುವಲ್ಲಿ ಪತ್ರಿಕೆಗಳ ಪಾತ್ರ ಹಿರಿದು ಇದರಿಂದ ಜಾನಪದ ದಾಖಲಾಗುವುದರ ಜೊತೆಗೆ ಸಮುದಾಯದ ಇತರೆ ಜನಗಳಿಗೆ ತಿಳಿಯಲ್ಪಡುತ್ತದೆ.[೧೫]

ಪತ್ರಿಕೋದ್ಯಮವು ಜಾನಪದವನ್ನು ಬೆಳೆಯುವ, ಬೆಳೆಸುವ ಕ್ಷೇತ್ರವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಎಸ್. ಕೆ. ಕರೀಂಖಾನ್‌ನವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಅಧ್ಯಕ್ಷರಾಗಿದ್ದಾಗ ವಿ. ಮೋಹನ್ ಸಂಪಾದಕತ್ವದಲ್ಲಿ 'ಗೆಜ್ಜೆ ಮಾತಾಡುತ್ತಾವೆ' ಎಂಬ ಹೊತ್ತಿಗೆಯನ್ನು ತಂದರು. ಈ ಅವಧಿಯಲ್ಲಿ ನಡೆಸಿಕೊಟ್ಟ ಜಾನಪದ ಸಮ್ಮೇಳನಗಳು, ಸಂಶೋಧನೆಗಳು, ಗಿರಿಜನ ವಿಚಾರ ಸಂಕಿರಣಗಳು ಮುಂತಾಗಿ ನೂರಾರು ಕಾರ್ಯಕ್ರಮಗಳು, ಇದರ ಜೊತೆಗೆ ಸಹ್ಯಾದ್ರಿ ಬೆಟ್ಟದಲ್ಲಿರುವ ಬುಡಕಟ್ಟು ಜನಾಂಗವನ್ನು ಭೇಟಿಮಾಡಿ ಅವರನ್ನು ಹೊರಜಗತ್ತಿಗೆ ಪರಿಚಯಿಸುವ, ಅವರ ಕಲೆಗಳ ಬಗ್ಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಿವೆ. ಈ ಅವಧಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ದಿನ ಪತ್ರಿಕೆಗಳಲ್ಲಿ ಬಂದ ಹಲವು ಲೇಖನಗಳನ್ನು 'ಗೆಜ್ಜೆಮಾತಾಡುತ್ತಾವೆ' ಎಂಬ ಪುಸ್ತಕದಲ್ಲಿ ತಂದರು. ಇದರಲ್ಲಿ ಪತ್ರಿಕೆಗಳ ಮುಖಪುಟದೊಂದಿಗೆ ಲೇಖನ ಮತ್ತು ಚಿತ್ರ ಸಮೇತ ಮುದ್ರಣಗೊಂಡಿದೆ. ಈ ಹೊತ್ತಿಗೆಯು ಜಾನಪದ ಮತ್ತು ಪತ್ರಿಕೋದ್ಯಮದ ಸಂಬಂಧದ ಕುರುಹಾಗಿದೆ.

ಜಾನಪದ ಮತ್ತು ಪತ್ರಿಕೋದ್ಯಮ ಸಂಬಂಧ ಈಗಿನ್ನು ಶೈಶಾವಾಸ್ಥೆಯಲ್ಲಿದೆ. ಇತ್ತೀಚೆಗೆ ಗಮನಾರ್ಹವಾಗಿ ಜಾನಪದ ವಿವಿಧ ಪ್ರಕಾರಗಳು ಹಲವಾರು ಬದಲಾವಣೆಯೊಂದಿಗೆ ಹೊಸ ಹುಟ್ಟನ್ನು ಪಡೆಯುತ್ತಿವೆ.

ಪತ್ರಿಕೋದ್ಯಮದಲ್ಲಿ ಜಾನಪದವಿನೋದ : ಜಾನಪದವೆನ್ನುವುದು ಶ್ರಮ ಜೀವಿಗಳ ಉಪ ಉತ್ಪನ್ನವಾದರೆ ವಿನೋದ ಎನ್ನುವುದು ಜಾನಪದದ ಒಂದು ಪ್ರಕಾರ. ಮನುಷ್ಯ ಸಮಸ್ಯೆಗಳ ಜಂಜಾಟದಿಂದ ಪರಿತಪಿಸುವಾಗ ಅವನ ಮನಸ್ಸಿಗೆ ಸಂತೋಷ ನೀಡುವುದೆ ಹಾಸ್ಯ. ಇಂತಹ ಹಾಸ್ಯ ಗ್ರಾಮೀಣರ ಬದುಕಿನಲ್ಲಿ ಹಾಸುಹೊಕ್ಕಾಗಿರುತ್ತದೆ. ಅವರ ಬದುಕಿನ ರೀತಿಯೇ ಒಂದು ರೀತಿ

ಹಾಸ್ಯಮಯವಾದುದು. "ಜನಪದ ಸಾಹಿತ್ಯದಲ್ಲಿ ಕಾಣುವುದು ಮುಗ್ಧ ಸ್ವಭಾವದಿಂದ ಹೊರಟ ಹಾಸ್ಯದ ಪರಿಮಳ ಸಹಜವಾಗಿ ಜೀವನದ ಅನುಭವದಿಂದಲೇ ಚಿಮ್ಮಿ ಬಂದ ಅಕೃತವಾದ ನೈಜ ಹಾಸ್ಯ ಜನಪದ ಕವಿಗಳ ದೃಷ್ಟಿಯಲ್ಲಿ ಹಾಸ್ಯರಸ ಪ್ರಚೋದನದ ವಿದೂಷಕನೇ ಆಗಬೇಕೆಂದಿಲ್ಲ. ಕಥಾನಾಯಕನೂ, ನಾಯಕಿಯೂ ಅದಕ್ಕೆ ಕಾರಣವಾಗಲೂಬಹುದು. ಮಾನವ ಜೀವನದಲ್ಲಿ ಹಾಸುಹೊಕ್ಕಾಗಿರುವ ಹಾಸ್ಯಕ್ಕೆ ವಿಶಿಷ್ಟವಾದ ಪಾತ್ರವೇ ಆಗಬೇಕಿಲ್ಲವೆಂದರೂ ಚಿಮ್ಮಿ ಬರಬಹುದು"[೧೬]. ಹಾಸ್ಯ ಪ್ರಜ್ಞೆ ಮಾನವನ ಬದುಕಿನಲ್ಲಿ ನಿರಂತರವಾದುದು. ಹಾಸ್ಯದ ಮೂಲಕ್ರಿಯೆ ನಗು ಮನಸ್ಸಿನ ಸುಖದ ಸಂಕೇತ ನಗು ನಗಲಾರದವನ ಬದುಕು ಬರಡು. ನಗುವಿನ ಬದುಕು ಹಸಿರು, ಉತ್ತಮ, ಆರೋಗ್ಯದ ಉಸಿರು.

"ಚಿಕ್ಕದಾದ, ಸರಳವಾದ ಹಾಸ್ಯಕಥೆ, ಸಾಮಾನ್ಯವಾಗಿ ದೈನಂದಿನ ಜೀವನವನ್ನು ಕುರಿತದ್ದು. ಇದನ್ನು ವಿನೋದಕಥೆ, ಶಾಂಕ್, ಹಾಸ್ಯವೃತ್ತಾಂತ ಹೀಗೆ ವಿಧವಿಧವಾಗಿ ಕರೆಯುತ್ತಾರೆ. ಕೆಲವೊಮ್ಮೆ ಹಾಗೂ ವಿಶೇಷವಾಗಿ ಕೆಲವು ಪ್ರದೇಶಗಳಲ್ಲಿ ಅದು ಪ್ರಾಣಿಕಥೆಯಾಗಿರುತ್ತದೆ. ಆದರೆ ಸಾಮಾನ್ಯವಾಗಿ ಇಲ್ಲಿ ಮಾನವನ ಪಾತ್ರಗಳೆ ಇರುತ್ತವೆ. ಆ ಕಥೆಗಳು ಪೆದ್ದರ ಕಥೆಗಳಾಗಿರಬಹುದು. ವಂಚನೆಯ ಅಥವಾ ಅಶ್ಲೀಲವಾದ ಕಥೆಗಳಾಗಿರಬಹುದು. ಈ ಕಥೆಯಲ್ಲಿ ಯಾವ ಸಂಕೀರ್ಣತೆಯೂ ಇರದೆ ಸಾಮಾನ್ಯವಾಗಿ ಒಂದೇ ಒಂದು ಪ್ರೇರಣೆ ಸೀಮಿವಾಗಿರುತ್ತವೆ"[೧೭] ಹಾಸ್ಯಕ್ಕೆ ಜಾನಪದರಲ್ಲಿ ಮಹತ್ವದ ಸ್ಥಾನವಿದೆ. ದಿನನಿತ್ಯ ತಮ್ಮ ಕಾಯಕದೊಡನೆ ಸಮಯಕ್ಕೆ ಅನುಸಾರವಾಗಿ ಹಾಸ್ಯಗಳನ್ನು ಸೃಷ್ಟಿಸಿ ನೋವುಗಳನ್ನು ನೀಗಿಸಿಕೊಳ್ಳುವ ಜನಸಾಮಾನ್ಯರನ್ನು ನಾವು ಕಾಣಬಹುದು. ಹಾಗೆ ಮನೋರಂಜನೆಗಳು, ಹಾಸ್ಯ ಪ್ರಮುಖ ಸ್ಥಾನದಲ್ಲಿರುತ್ತದೆ. ತಮ್ಮ ಮನಸ್ಸಿನಾಳದ ನೋವುಗಳನೆಲ್ಲ ನಕ್ಕು ಮರೆಯುತ್ತೇವೆ.ಈ ಹಾಸ್ಯವೇ ಸ್ವಲ್ಪಮಟ್ಟಿನ ಅವರ ಜೀವನಕ್ಕೆ ಸಂತೋಷವನ್ನು ತರಬಲ್ಲದು. ಈ ಹಾಸ್ಯವು ಒಡಪುಗಳಲ್ಲಿ ಮೊಕ್ಷೆ ಗಾದೆಗಳಲ್ಲಿ, ವಿನೋದ ಕಥೆಗಳಲ್ಲಿ, ತಮಾಷೆ ಕಥೆಗಳಲ್ಲಿ, ಮನರಂಜನ ಕಾರ್ಯಕ್ರಮಗಳಲ್ಲಿ, ಮದುವೆಗಳಲ್ಲಿ, ನಾಟಕಗಳಲ್ಲಿ, ಹೆಚ್ಚು ಅಭಿವ್ಯಕ್ತಿತವಾಗುತ್ತಿರುತ್ತವೆ. ಹಾಸ್ಯಗಳು ಒಮ್ಮೆ ಆಕಸ್ಮಿಕವಾಗಿ ಉಂಟಾದರೆ ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಹಾಸ್ಯಪ್ರಸಂಗವನ್ನು ಸೃಷ್ಟಿಸುತ್ತಾರೆ. ಭರತನ ರಸಸೂತ್ರದಲ್ಲೂ ಇದಕ್ಕೆ ಮಹತ್ವದ ಸ್ಥಾನವುಂಟು.'ನಮ್ಮ ಜನಪದರಿಗೆ ಜೀವನದ ಬಗೆಗೆ ಗಾಂಭಿರ್ಯ ಶ್ರದ್ಧೆಗಳನಿಟ್ಟುಕೊಂಡಂತೆಯೋ ರಸಿಕತೆಯನ್ನು ಮೈಗೂಡಿಸಿಕೊಂಡು ನಿತ್ಯಗಟ್ಟಲೆಯ ತಾಪತ್ರಯಗಳ ಕಹಿಬೇವಿನಲ್ಲೂ ನಗೆಯ ಸಿಹಿ ಜೇನನ್ನು ಬಿಡಿಸಿಕೊಂಡು ಸವಿಯುವ ತಾಳ್ಮೆ ಅಭಿರುಚಿ ಜಾಣ್ಮೆ ಆಜನ್ಮಸಿದ್ಧವಾದುದು.[೧೮]

ಯಕ್ಷಗಾನದಲ್ಲಿ ಬರುವ ಹನುಮನಾಯಕ ಹಾಸ್ಯದ ಪ್ರತೀಕ ಅವನ ಪಾತ್ರದ ಗುರಿಯೇ ನೋಡುಗರಲ್ಲಿ ಹಾಸ್ಯವನ್ನು ಹುಟ್ಟಿಸಿ ನಗಿಸುವುದು. ಇದೆ ರೀತಿ ಮದುವೆಯ ಸಂದರ್ಭದಲ್ಲಿ ಹುಟ್ಟುವ

ಹಾಸ್ಯ ಹಾಡುಗಳನ್ನು ಗಮನಿಸಿ. ಮದುವೆ ಸಂಪ್ರದಾಯದಲ್ಲಿ ಬೀಗರನ್ನು ಜರಿಯುವ ಹಾಡುಗಳೆ ರೋಮಾಂಚನ ಎರಡೂ ಕಡೆಯ ಬೀಗತಿಯರು ಹಸೆ ಬರೆಯುವಾಗ ಮದಲಿಂಗ ಶಾಸ್ತ್ರ ಮಾಡುವಾಗ ನಡುಮನೆಯಲ್ಲಿ ಕುಳಿತಿರುತ್ತಾರೆ. ಹಾಡುಗಳ ಸುರಿಮಳೆ ಪ್ರಾರಂಭವಾಗುತ್ತದೆ.

ಒಂಟೆ ಬರುತ್ತಾವೆಂದು ಎಂಟು ಬಣವಿಗೊಂಡೆ
ಒಂಟೆಲ್ಲಿ ನಿಮ್ಮದಳವೆಲ್ಲಿ, ಬೀಗರಿರಾ
ಕುಂಟ್ಹೋರಿ ಮ್ಯಾಲೆ ಬರಬಹುದಾ

ಹನ್ನೆರೆಡು ವರುಷದ ಸಣ್ಣಡುಗನೆಂತಿದ್ದೆ
ಕೆನ್ನೀಗೆ ಬಂದಾವೆ ಮುದಿನೆರೆ। ಮೂಲಂಗಿ
ಹಣ್ಣಿನಂಗವನ ಮದುವಣ್ಣ.

ಹೀಗೆ ಹೆಣ್ಣಿನ ಕಡೆಯವರು ಗಂಡನ್ನೂ ಮತ್ತು ಗಂಡಿನ ಜೊತೆಯಲ್ಲಿ ಬಂದಿರುವವರನೆಲ್ಲ ಜರಿಯುತ್ತಾರೆ, ಆಗ ಗಂಡಿನ ಕಡೆಯವರು ಸುಮ್ಮನಿದ್ದಾರೆಯೇ? ಹೆಣ್ಣಿನ ತಾಯಿ, ಮನೆ ಅವರ ಊಟ ತಿಂಡಿಗಳನ್ನೆಲ್ಲ ಜರಿಯುತ್ತಾರೆ. ಇದೊಂದು ವಾಕ್‌ಯುದ್ದವಾಗಿದ್ದು 'ಸವಾಲ್ ಜವಾಬ್‌ಗಳು' ಕುಳಿತಿದ್ದವರನೆಲ್ಲ ನಗೆಗಡಲಲ್ಲಿ ಮುಳುಗಿಸುತ್ತವೆ.[೧೯]

ಇದೇ ರೀತಿ ಬಂಡಿ ಹೊಡೆಯುವ ಪದಗಳನ್ನೂ ಕಾಣಬಹುದು. ಹಿಂದೆ ಮದುವೆಯಂಥ ಕಾರ್ಯಗಳನ್ನು ಮೂರುನಾಲ್ಕು ದಿನ ಮಾಡುತ್ತಿದ್ದರಿಂದ ಇಲ್ಲಿ ಸಾಂಸ್ಕೃತಿಕ ಕೊಳು ಕೊಡುಗೆಯಾಗುತ್ತಿತ್ತು. ಜೊತೆಗೆ ಜಾನಪದ ವಿವಿಧ ಪ್ರಕಾರಗಳು ಜೀವಂತವಾಗಿ ಉಳಿದುಕೊಂಡು ಬರುತ್ತಿದ್ದವು. ಒಬ್ಬರಿಗೊಬ್ಬರು ಮನವರಿತು ಸಂತೋಷದಿಂದ ಜೀವನ ಸಾಗಿಸುತ್ತಿದ್ದರು. ಆದರೆ ನಾಗರೀಕತೆ ಊರ್ಧ್ವ ಮುಖವಾಗಿರುವುದರಿಂದ ಇಂತಹ ಪ್ರಾಚೀನ ಜಾನಪದ ಮಟ್ಟುಗಳನ್ನು ಕಾಣಲು ಸಾಧ್ಯವಿಲ್ಲ. ಜೀವನದ ಓಘದ ಬೆಳವಣಿಗೆಯಲ್ಲಿ ಬದಲಾವಣೆಗಳು ಆಗುವುದು ಸಹಜ. 'ಜಟಿಲವಾದ ಸಂಸಾರದ ಕೋಟಲೆಗೆ ಸಿಕ್ಕಿ ನರಳುವಂತ ಮನುಷ್ಯನಿಗೂ ಕೂಡ ವಿನೋದ, ಹಾಸ್ಯ ಸ್ವಲ್ಪ ಮಟ್ಟಿಗಾದರೂ ನೆಮ್ಮದಿಯನ್ನು ಆಪ್ಯಾಯಮಾನವನ್ನು ತರಬಲ್ಲದು. ದುಃಖವಿರುವೆಡೆಯಲ್ಲಿ ಇದಕ್ಕೆ ಆಸ್ಪದವಿಲ್ಲ. ಏಕತಾನತೆಯ ಬದುಕಿನಲ್ಲಿ ವೈವಿಧ್ಯತೆಯನ್ನು ಮೂಡಿಸಿ ಬಾಳಿಗೊಂದು ಭರವಸೆಯನ್ನು ನೀಡಬಲ್ಲ ವಿನೋದ, ಹಾಸ್ಯ ಜೀವನದಲ್ಲಿ ಯಾರಿಗೆ ಬೇಕಿಲ್ಲ. ಮಕ್ಕಳು, ಮುದುಕರು, ಹೆಂಗಸರು, ಗಂಡಸರು ಹೀಗೆ ಎಲ್ಲರಿಗೂ ಬೇಕು. ಇದನ್ನು ಸೃಷ್ಟಿಸುವರ್‍ಯಾರು? ಯಾವ ಸ್ಥಳದಲ್ಲಿ ಯಾವ ವೇಳೆಯಲ್ಲಿ? ಇಂಥ ಪ್ರಶ್ನೆಗಳು ಏಳುವುದು ನಗರದಲ್ಲಿ ವಾಸಿಸುವರಿಗೆ ಮಾತ್ರ. ಏಕೆಂದರೆ ಮುಂಜಾನೆ ಮನೆ ಬಿಟ್ಟು ಕಛೇರಿಗೋ ಕಾರ್ಖಾನೆಗೋ ಹೋಗಿ ಯಂತ್ರದೊಡನೆ ಯಂತ್ರವಾಗಿ ಸಂಜೆಯುವರೆಗೂ ದುಡಿದು ಮನೆಗೆ

ಬರುವುದರೊಳಗೆ ಮಕ್ಕಳುಮರಿಯೆಲ್ಲರೂ ಉಂಡು ಮಲಗಿರುತ್ತವೆ. ಇಡೀ ವಾರವೆಲ್ಲಾ ಇದೇ ಜೀವನ. ಭಾನುವಾರ ಬಂತೆಂದರೆ ಮಹಾದಾನಂದ. ಆ ದಿನ ಬೇಸರ ಹೋಗಲಾಡಿಸಿಕೊಳ್ಳಲು. ಮನಸ್ಸಿಗೆ ಉಲ್ಲಾಸ ಆನಂದ ತಂದುಕೊಳ್ಳಲು ಪೇಟೆಗೋ ಪಾರ್ಕಿಗೋ ಪ್ರಾಣಿಸಂಗ್ರಹಾಲಯಕ್ಕೋ ಹೋಗುತ್ತಾರೆ.[೨೦]

ಬದುಕು ಯಾಂತ್ರೀಕೃತಗೊಂಡಂತೆಲ್ಲ ಜೀವನದ ಸಹಜವಾದ ಅಭಿರುಚಿಗಳಿಗೆ ಮಿತಿಯುಂಟಾಗುತ್ತದೆ. ಇಂದು ನಗರಗಳಲ್ಲಿ ಹಾಸ್ಯ ಪ್ರಜ್ಞೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಅಲ್ಲಲ್ಲಿ'ನಗೆ ಸಂಘ', 'ಹಾಸ್ಯ' ಸಂಘಗಳು ಹುಟ್ಟಿಕೊಂಡಿವೆ. ಬೆಂಗಳೂರಂಥ ಮಹಾನಗರಗಳಲ್ಲಿಯೂ ಇಂತಹ ಸಂಘಗಳು ಹುಟ್ಟಿಕೊಂಡಿವೆ. ಇವುಗಳ ಕಾರ್ಯ ನಗಿಸುವುದು. ತಿಂಗಳಿನ ನಿರ್ದಿಷ್ಟವಾದ ಒಂದು ದಿನ ಖಾಯಂ ಮಾಡಿಕೊಂಡು ಯಾವುದೇ ಆಮಂತ್ರಣವಿಲ್ಲದೆಯೂ ಒಂದು ಜಾಗದಲ್ಲಿ ಸೇರುತ್ತಾರೆ. ಆ ದಿನಪೂರ್ತಿ ಕಾರ್ಯಸಂಯೋಜಕರು ಏರ್ಪಡಿಸಿದ ನಗುವ ಕಾರ್ಯಕ್ರಮಗಳೇ ಇರುತ್ತವೆ. ಆ ದಿನವೆಲ್ಲ ನಗುವುದೊಂದೇ ಕೆಲಸ. ಇಂತಹ ಸಂಘಗಳು ಮಾನವನನ್ನು ಏಕತಾನತೆಯಿಂದ ಬಿಡಿಸಿಕೊಂಡು ಸಾಮೂಹಿಕವಾಗಿ ಹತ್ತಿರ ತರುವುದರಿಂದ ಪರಸ್ಪರ ಬಾಂಧವ್ಯಗಳನ್ನು ಮಾಡಿಕೊಂಡು ಸ್ನೇಹ ಸೌಹಾರ್ದದಿಂದ ಬಾಳುತ್ತಾರೆ. ಇಂತಹ ಸಂಘಗಳಿಂದಲೇ ಜೋಕ್ಸ್ ಪುಸ್ತಕಗಳು ಹೊರಬೀಳುತ್ತವೆ.

ನಗರಗಳಲ್ಲಿ ಈ ರೀತಿಯಾದ ವಿನೋದಕೂಟಗಳು ನಿಧಾನಗತಿಯಲ್ಲಿ ತಲೆ ಎತ್ತುತ್ತಿವೆ. ಈ ಒಂದು ಪಳೆಯುಳಿಕೆಯನ್ನು ವೃತ್ತ ಪತ್ರಿಕೆಗಳು ಮುಂದುವರೆಸಿಕೊಂಡು ಹೋಗುತ್ತವೆ. ದಿನ ನಿತ್ಯ ಸಮಾಚಾರವನ್ನು ಹೊತ್ತು ತರುವ ಇವು ಹಾಸ್ಯ ಬರಹಗಳನ್ನು ಮಡಿಲಲ್ಲಿ ಇಟ್ಟುಕೊಂಡು ಬರುತ್ತವೆ. ಈ ಅಂಶವನ್ನು ಎಲ್ಲಾ ವೃತ್ತ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಕಾಣಬಹುದು, ಪ್ರತಿದಿನ ಮನೆಬಾಗಿಲಿಗೆ ಬಂದು ಬೀಳುವ ಪತ್ರಿಕೆಯಿಂದ ಹಿಡಿದು ಕಾಲಕಾಲಕ್ಕೆ ಸರಿಯಾಗಿ ಬರುವ ನಿಯತಕಾಲಿಕೆಗಳಲ್ಲೂ ಈ ಪಳೆಯುಳಿಕೆಯ ಕೊಂಡಿಯನ್ನು ಗುರುತಿಸಬಹುದು. ಪತ್ರಿಕೆಗಳಲ್ಲಿ ನೋಡಿದಾಗ ವ್ಯಂಗ್ಯ ಚಿತ್ರಗಳು ಮತ್ತು ಬರಹಗಳು, ಚಿನಕುರಳಿ, ಗೂಫ, ಪ್ಯಾಂಟಮ್, ಕಾಡುಹರಟೆ, ನಗೆಹೊನಲು, ಚುಟಕ, ಕೇಳಿ, ಉತ್ತರೆ, ಜೋಕ್ಸ್ ಪ್ರಸಂಗಗಳು, ಹಾಸ್ಯಬರಹಗಳು, ಪಂಚತಂತ್ರ ಕಥೆಗಳು, ಅಕ್ಬರ್ ಮತ್ತು ಬೀರಬಲ್ಲನ ಕಥೆಗಳು, ತೆನಾಲಿ ರಾಮಕೃಷ್ಣನ ಹಾಸ್ಯಕಥೆಗಳು, ಬೇತಾಳಕಥೆಗಳು, ಅರೇಬಿಯನ್ ನೈಟ್ಸ್, ಜನಪದ ಕಥೆಗಳು, ಕಿನ್ನರಕಥೆಗಳು ಮುಂತಾದ ಎಲ್ಲಾ ತೆರನಾದ ಬರಹಗಳು ಬದಲಾವಣೆಗೊಳ್ಳುತ್ತಿರುವ ಸಂದರ್ಭದಲ್ಲಿ ಜಾನಪದದ ಹೊಸ ಹುಟ್ಟುಗಳಾಗಿ ಕಂಡು ಬರುತ್ತದೆ. ಇವುಗಳನ್ನು ಇಲ್ಲಿ ಪ್ರಾಯೋಗಿಕವಾಗಿ ಕಾಣಬಹುದು.

೪.೧.೧. ದಿನ ಪತ್ರಿಕೆಗಳು

೪.೧.೨. ನಿಯತಕಾಲಿಕೆಗಳು

೪.೧.೩. ಪ್ರಮುಖ ಜಾನಪದ ಪತ್ರಿಕೆಗಳು

೪.೧.೧ ದಿನ ಪತ್ರಿಕೆಗಳು

ವಿಜಯ ಕರ್ನಾಟಕ

ಗರಂಗರಮಾ : ಈ ಕಾಲಂ ಪತ್ರಿಕೆಯ ಮೊದಲ ಪುಟದಲ್ಲಿದ್ದು, ಪ್ರಸ್ತುತ ರಾಜಕೀಯ ಸ್ವರೂಪ, ಕಾನೂನುಗಳು, ಕೋರ್ಟ್‌ನ ಆದೇಶಗಳು, ಸಚಿವರ ಹೇಳಿಕೆಗಳು ಮುಂತಾದ ಸಮಯ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಗೇಲಿಮಾಡುವ ಹಾಸ್ಯಮಯವಾದ ಬರಹ ಮತ್ತು ವ್ಯಂಗ್ಯಚಿತ್ರಗಳಿರುತ್ತವೆ.

ಉದಾ: ಲಾಟರಿ, ಜೂಜು, ಸಾರಾಯಿ ಅಂಗಡಿ ತೆರೆಯುವುದು ಸರ್ಕಾರದ ಹಕ್ಕು ಅವುಗಳಿಗೆ ಹೋಗದಂತೆ ಗಂಡಂದಿರನ್ನು ತಡೆಯುವುದು ನಿಮ್ಮ ಕರ್ತವ್ಯ.(ಮುಖ್ಯಮಂತ್ರಿಗಳು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಕುರಿತು ಭಾಷಣ.

ಪಂಚ್: ಇದರಲ್ಲಿ ಎರಡುಮೂರು ಸಣ್ಣ ಸಣ್ಣ ವಾಕ್ಯಗಳಲ್ಲಿ ಹಾಸ್ಯಚಟಾಕಿಯನ್ನು ಹಾರಿಸಿ. ಗಂಭೀರವಾದ ವಿಷಯವೊಂದನ್ನು ಗ್ರಹಿಸಿರುತ್ತದೆ.

ಉದಾ : ಸರ್ಕಾರದ ಆದೇಶ

ಶೌಚಾಲಯಗಳು ಇಲ್ಲದ ಶಾಲೆಗೆ ಅನುಮತಿ ಇಲ್ಲ
ಶೌಚಾಲಯಗಳಂತಿರುವ ಶಾಲೆಗೆ ಅನುಮತಿ ಕೊಡ್ತಾರಾ !

ಶುದ್ದತರ್ಲೆ : ಕಾರಣವೇ ಇಲ್ಲದಿದ್ದರೂ ಬೆನ್ನುಬಿದ್ದು
ಕಾಡುವವನಿಗೆ ಏನಂತಾರೆ?
ಬೇತಾಳ !

ವಕ್ರ ತುಂಡೋಕ್ತಿ : ಇಲ್ಲಿ ಯಾವುದೇ ಸಮಸ್ಯೆಗಳಿಗೆ ಪರಿಹಾರ ಇನ್ನೊಂದು ಮುಖ ಚಿತ್ರಿಸುವುದು. ಇದು ಒಮ್ಮೊಮ್ಮೆ ಗಂಭೀರವಾಗಿದ್ದರೂ ಹಾಸ್ಯಮಯದಿಂದ ಕೂಡಿರುತ್ತದೆ.

ಉದಾ :ಎಲ್ಲದರಲ್ಲೂ ವಿಫಲವಾದರೆ ಆತ್ಮಹತ್ಯೆ ಮಾಡಿಕೊಳ್ಳುವ ಬದಲು ಆಗಸದಿಂದ ನೆಗೆಯುವ (ಸ್ಕೈ ಡ್ರೈವಿಂಗ್) ಸ್ಪರ್ದೆಗಳಲ್ಲಿ ಪಾಲ್ಗೊಳ್ಳಬಹುದು.

ಪುಟಾಣಿ ವಿಜಯ

ಈ ಕಾಲಂನಲ್ಲಿ ಮಕ್ಕಳ ಮುಗ್ದ ಮನಸ್ಸುಗಳಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾಗಿ, ಚಿಕ್ಕದಾಗಿ ಜಾನಪದ ಕಥೆಗಳಾದ ಪ್ರಾಣಿ ಕಥೆಗಳು, ಯಕ್ಷಕಿನ್ನರ ಕಥೆಗಳು, ತಮಾಷೆ ಕಥೆಗಳು, ನೀತಿಕಥೆಗಳು ಬೇತಾಳ ಕಥೆಗಳು, ಮಕ್ಕಳ ಕಥೆಗಳಿದ್ದು ಕಥೆಗಳ ಅರ್ಥಕ್ಕೆ ಸಂಬಂಧಿಸಿದಂತೆ ಚಿತ್ರವೂ ಇರುತ್ತದೆ.

ಸಿಂಪ್ಲಿ ಸಿಟಿ, ಶೌರಿ, ಲಾನ್‌ಫೆಗ್, ಸಿಲಿಕಾನ್ ಸಿಟಿ : ಈ ಕಾಲಂಗಳಲ್ಲಿ ನಗರಗಳಲ್ಲಿ ನಡೆಯುವ ವಿವಿಧ ವಿದ್ಯಮಾನಗಳ ಬಗ್ಗೆ ಸೂಕ್ಷ್ಮಗಮನ ಹರಿಸಿ ತೆಳುವಾದ ಕೃತಕವಾದ ಹಾಸ್ಯಲೇಪನ ಬರಹವಿರುತ್ತದೆ.

ಉದಾ : ಮೊದಲು ನನ್ನ ಹೃದಯಕ್ಕೆ ಅತ್ಯಂತ ಹತ್ತಿರ ನೀನಿದ್ದೆ, ಈಗ ಮೊಬೈಲ್ ಇದೆ!

(ಪ್ರೇಮಿಗಳಿಬ್ಬರು ಮಾತನಾಡಿಕೊಂಡು ಬರುವ ಚಿತ್ರ)

ಉದಯವಾಣಿ

ಬಾಲಂಗೋಚಿ : ಇಲ್ಲಿ ರಾಜ್ಯದ, ರಾಷ್ಟ್ರದ, ಅಂತರಾಷ್ಟ್ರೀಯ ನಾಯಕರುಗಳ ಹೇಳಿಕೆಗಳು, ಸದ್ಯದ ಪರಿಸ್ಥಿತಿಯ ಅವಗಢಗಳ ಬಗ್ಗೆ ಹಾಸ್ಯ ಬರಹವೆನಿಸಿದರೂ ಜನಪದರನ್ನು ಗಂಭೀರವಾಗಿ ಆಲೋಚಿಸುವ ಮತ್ತು ಘಟನೆಗಳ ಬಗ್ಗೆ ಚಿಂತಿಸುವ ಬರಹ ಮತ್ತು ವ್ಯಂಗ್ಯ ಚಿತ್ರಗಳಿರುತ್ತವೆ.

ಉದಾ :ಒಂದ್ವೇಳೆ ಸದ್ದಾಂ ಹುಸೇನ್ ಶರಣನಾಗಿಬಿಟ್ಟರೆ!

ಬುಷ್ ನಿಜವಾಗಿಯೂ ನಿರಾಶವಾದಿಯಾಗುತ್ತಾನೆ.

ವಾಲ್ಮೀಕಿ ರಾಮಾಯಣ : ಚಂದಮಾವ ಸಾದರಪಡಿಸುವ ರಾಮಾಯಣ ಮಹಾಭಾರತದ ಉಪಕಥೆಗಳನ್ನು, ಭಟ್ಟಿ ವಿಕ್ರಮರಾಯನ ಕಥೆಗಳನ್ನು ನಾಲ್ಕು ಬಾಕ್ಸ್‌ಗಳಲ್ಲಿ ಕಂತುಗಳಂತೆ ವ್ಯಂಗ್ಯ ಚಿತ್ರ ಮತ್ತು ಈ ಚಿತ್ರಗಳು ಬಾಯಿಂದ ಮಾತಾನಾಡುವ ರೀತಿಯಲ್ಲಿ ಬರಹಗಳಿರುತ್ತವೆ.

ಇನ್‌ಸ್ಪೆಕ್ಟರ್ ಗರುಡ : ಈ ಕಾಲಂನಲ್ಲಿ ಸಿ.ಬಿ.ಐ, ಸಿ.ಒ.ಡಿ ಮತ್ತು ಗುಪ್ತದಳದವರು ಒಂದು ಅಪರಾಧ ಸಂಬಂಧಪಟ್ಟಂತೆ ಅನ್ವೇಷಣೆ ರೂಪದಲ್ಲಿ ವ್ಯಂಗ್ಯಚಿತ್ರ ಮತ್ತು ಬರಹಗಳಿರುತ್ತವೆ. ಈ ಕಾಲಂನ್ನು ಓದುತ್ತಾ ಹೋದಹಾಗೆಲ್ಲ ಆಸಕ್ತಿಯ ತೀವ್ರತೆ ಹೆಚ್ಚಾಗುತ್ತದೆ.

ಪುಟಾಣಿ ಸರ್ಕಲ್ : ಈ ಕಾಲಂನಲ್ಲಿ ಒಗಟುಗಳಿರುತ್ತವೆ. ಹದಿನೈದು ದಿನಗಳಿಗೊಮ್ಮೆ ಐದು ಒಗಟುಗಳನ್ನು ಪ್ರಕಟಿಸಿ ಓದುಗರಿಂದ ಉತ್ತರವನ್ನು ಪಡೆದು ಸರಿಯುತ್ತರ ಬರೆದವರ ಹೆಸರು ಮತ್ತು ವಿಳಾಸವನ್ನು ಪ್ರಕಟಿಸುವುದು. ಒಗಟುಗಳು ಕೆಲವು ಹಳೆಯದಾಗಿದ್ದರೆ, ಕೆಲವೊಂದು ಇತ್ತೀಚಿನ ಸ್ಥಿತಿಗತಿಯನ್ನು ಕುರಿತು ಕಟ್ಟಿದಂಥ ಹೊಸರಚನೆಯ ಒಗಟುಗಳಿರುತ್ತವೆ. ಒಗಟಿನ ಸೃಷ್ಟಿಕ್ರಿಯೆ ನಿಂತು ಹೋಗಿದೆ ಎಂಬುದಕ್ಕೆ ಅಪವಾದ ಎನ್ನುವ ರೀತಿಯಲ್ಲಿ ಈ ಕಾಲಂನಲ್ಲಿ ಒಗಟುಗಳಿರುತ್ತವೆ. ಇದರಲ್ಲಿ ವೈಜ್ಞಾನಿಕ, ತಂತ್ರಜ್ಞಾನ, ಜಾಗತೀಕರಣ ವಿಷಯುಗಳನ್ನು ಕುರಿತು ಹಲವಾರು ಒಗಟುಗಳಿರುತ್ತವೆ.

ಉದಾ:

೧. ನೀರಿಲ್ಲದ ಸಮುದ್ರ, ಜನರಿಲ್ಲದ ದೇಶ, ಮರಗಳಿಲ್ಲದ ಕಾಡು, ಹಾಗಾದರೆ ನಾನಾರು?
ಭೂಪಟ

೨. ಕೆರಳಿದರೆ ಮರಿ ಹುಲಿ, ಮೈಮುರಿದರೆ ಮರಿ ಒಂಟೆ, ಹೆಣ್ಣಾದರು ಮೀಸೆಯುಂಟು ಹಾಗಾದರೆ ನಾನಾರು?

೩. ಸುತ್ತಿ ಸುತ್ತಿ ಬರಬೇಡ ನನಗಾಗಿ, ಮೇಲೊಬ್ಬ ಕುಳಿತವ್ನೆ ನಿನಗಾಗಿ.

೪. ಬೆಣ್ಣೆಯವಂಶ, ಸುಗಂಧದ ನೋಟ, ಕೆನ್ನೆಗೆ ಶೀತಾಳ ಮಿತ್ರ ಹಾಗಾದರೆ ನಾನಾರು?

೫. ಉದ್ದ ಇರುವೆನು ಅದರೆ ಎದ್ದು ನಿಲ್ಲಲಾರೆ.

ಮಾರ್ಚ್ ೧೩/೨೦೦೩

ಇಂತಹ ಒಗಟುಗಳ ಮರುಹುಟ್ಟನ್ನು ಕಾಣಬಹುದು. ಕೆಲವೊಂದು ಜಾನಪದ ಪ್ರಕಾರಗಳು ಕಾಲಾಂತರದಲ್ಲಿ ನಶಿಸುತ್ತಿದ್ದು ಮತ್ತೆ ಹೊಸಹುಟ್ಟನ್ನು ಪಡೆಯುತ್ತವೆ. ಇದೇ ಕಾಲಂನಲ್ಲಿ ಸಣ್ಣಪುಟ್ಟ ಜಾನಪದ ಮಕ್ಕಳ ಕಥೆಗಳು ಇರುತ್ತವೆ. ಇಲ್ಲಿ ವಿವಿಧ ಪ್ರದೇಶಗಳಿಂದ ಬರೆಯಲ್ಪಟ್ಟ ಚಿಕ್ಕಮಕ್ಕಳ ಕಥೆಗಳಿರುತ್ತವೆ. ಇವೆಲ್ಲ ಕಳೆದು ಹೋಗುತ್ತಿರುವ ಜಾನಪದ ಹಳೆಯ ಮಟ್ಟುಗಳನ್ನು ಉಳಿಸುವ ಪ್ರಯತ್ನ ಮಾಡುತ್ತಾ ಹೋದಂತೆ ಜಾನಪದ ಪ್ರಕಾರಗಳು ರೂಪಗೊಳ್ಳುತ್ತಿವೆ. ಈ ಕಾಲಂ ಸಂಪೂರ್ಣವಾಗಿ ಜಾನಪದ ಮತ್ತು ಪತ್ರಿಕೋದ್ಯಮದ ನಂಟಿನ ಕುರುಹಾಗಿದೆ.

ಸಂಯುಕ್ತ ಕರ್ನಾಟಕ

ಟಿಂಗರ ಬುಡ್ಡಣ್ಣ ಈ ಭಾಗದಲ್ಲಿ ಪ್ರಸ್ತುತ ರಾಜಕೀಯ ವಿಚಾರವೊಂದನ್ನು ತೆಗೆದುಕೊಂಡು ಹಾಸ್ಯಮಯವಾದ ಪುಟ್ಟ ಲೇಖನವಿರುತ್ತದೆ. ಇಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಕಾರ್ಯಗಳನ್ನು ಗೇಲಿಮಾಡುವುದು ಮತ್ತು ಸಚಿವರ ವರ್ತನೆ ಅಥವಾ ಹೇಳಿಕೆಗಳನ್ನು ಕುರಿತು ಊಹಾತ್ಮಕವಾದ ಆದರೂ ಸತ್ಯದ ಕಡೆ ಮುಖಮಾಡುವ ಬರಹಗಳಿರುತ್ತವೆ. ಭಾಷೆಯು ಸರಳವಾಗಿದ್ದು ಸರಾಗವಾಗಿ ಓದಿಸಿಕೊಂಡು ಹೋಗುವ ಗುಣವಿರುತ್ತದೆ. ಯಕ್ಷಗಾನದ ಹನುಮನಾಯಕ ಪ್ರೇಕ್ಷಕರನ್ನು ನಗಿಸಲು ಪ್ರಸಿದ್ಧವಾಗಿದ್ದರೆ, ಟಿಂಗರ ಬುಡ್ಡಣ್ಣ ಪೆದ್ದುತನಕ್ಕೆ ಹೆಸರುವಾಸಿ. ಪ್ರೊ. ಚಂದ್ರಶೇಖರ ಪಾಟೀಲರ ಈ ನಾಟಕವು ತುಂಬ ಹಾಸ್ಯಮಯವಾಗಿದ್ದು. ದೂರದರ್ಶನದ ಡಿ.ಡಿ. ೯ ರಲ್ಲಿ ಈ ನಾಟಕವನ್ನು ಸಾದರಪಡಿಸುತ್ತದೆ. ಈ ಪಾತ್ರವನ್ನು ಇಟ್ಟುಕೊಂಡು ಆಧುನಿಕ ವಿಚಾರಗಳನ್ನು ಎಣೆಯುವುದು ಈ ಕಾಲಂನ ಉದ್ದೇಶ. ಇಲ್ಲಿ ಟಿಂಗರಬುಡ್ಡಣ್ಣ ಮುಗ್ಧ ರೀತಿಯಲ್ಲಿ ರಾಜಕೀಯ ವ್ಯಕ್ತಿಗಳ ಜೊತೆ ವಿಚಾರವನ್ನು ಮಂಡಿಸುತ್ತಾ, ಪ್ರಶ್ನೆಗಳನ್ನು ಕೇಳುತ್ತಾ ಕೊನೆಯಲ್ಲಿ ವ್ಯವಸ್ಥೆಯೊಂದಿಗೆ

ತಾನೂ ಶಾಮೀಲಾಗಿ ತನ್ನ ಮೊದಲ ಮಾತನ್ನೆ ಮರೆತು ಅದರ ವಿರುದ್ಧದ ರೀತಿಯಲ್ಲಿ ನಡೆಯುವುದು, ನಂತರ ಬೆಪ್ಪನಾಗುವ ಪರಿಸ್ಥಿತಿ. ಇದು ರಾಜಕಾರಣದ ಕೀಳು ಅಭಿರುಚಿಯನ್ನು ವಿನೋದದ ಮೂಲಕ ಕಟ್ಟಿ ಆ ಪಾತ್ರಗಳ ದಾಷ್ಟ್ಯತೆಯನ್ನು ಅನಾವರಣ ಮಾಡಿರುತ್ತದೆ.

ಉದಾ : ಆಲ್‌ಲೈನ್ ಲಾಟರಿ ಪುರಾಣ!

ಆನ್‌ಲೈನ್ ಲಾಟರಿ, ಜೂಜಾಟ ಮುಂತಾದುವುಗಳನ್ನೆಲ್ಲ ಸರಕಾರದ ತಲೆಗೆ ಕಟ್ಟುವ ವಿರೋಧ ಪಕ್ಷದ ಹಳೆಯ ಚಾಳಿಯ ಬಗ್ಗೆ ಮುಖ್ಯಮಂತ್ರಿ ಕೃಷ್ಣ ವಿಷಣ್ಣರಾಗಿದ್ದರು. ಈ ಲಾಟರಿ ಆಟದಲ್ಲಿ ಹಣ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ಗಳಗಳ ಅತ್ತರು (ಈಗೀಗ ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ಹೋಗಿ ಅಳುವುದು ಕೂಡ ಒಂದು ಪ್ಯಾಶನ್ ಆಗಿದೆ) ಮುಖ್ಯಮಂತ್ರಿಗಳನ್ನು ಬಹುದಿನಗಳಿಂದಲೂ ಸಂದರ್ಶನ ಮಾಡಲು ಕಾಯುತ್ತಿದ್ದ ಬುಡ್ಡಣ್ಣನಿಗೆ ಇದೊಂದು ಸುವರ್ಣಾವಕಾಶ ಸಿಕ್ಕಿತು. ತಕ್ಷಣ ಅವರನ್ನು ಬೇಟಿಯಾದ

ಮುಖ್ಯಮಂತ್ರಿ : ಬನ್ನಿ ಬುಡ್ಡಣ್ಣ. ಅಂದ ಹಾಗೆ ಆನ್‌ಲೈನ್ ಲಾಟರಿಯಲ್ಲಿ ನೀವೆಷ್ಟು ಕಳೆದುಕೊಂಡಿರಿ? ನಿಮ್ಮದೇನು ತಕರಾರು.

ಬುಡ್ಡಣ್ಣ : ನಮ್ಮೂರಿನಲ್ಲಿ ನನಗೆ ಮೂರು ರೂಪಾಯಿಗೊಂದು ಕೊಡ ನೀರು ತೆಗೆದುಕೊಳ್ಳುವುದಕ್ಕೆ ಹಣವಿಲ್ಲ. ಇನ್ನು ಲಾಟರಿಗೆಲ್ಲಿಂದ ತರೋಣಾ ಜಹಂಪನಾ.

ಮುಖ್ಯಮಂತ್ರಿ : ಅಲ್ಲ ಬುಡ್ಡಣ್ಣ ಆನ್‌ಲೈನ್ ಲಾಟರಿ, ನಾನು ಆಡು ಅಂತ ಹೇಳಿದೀನಾ?

ಜನ ಆಡಿದರೆ ನಂದೇನು ತಪ್ಪು? ಜೂಜಾಟ ಮನುಷ್ಯನ ಮನೋಧರ್ಮ ಅಲ್ಲವೆ?

ಬುಡ್ಡಣ್ಣ : ಹಾಂಗಲ್ಲ ಹುಜೂರ್, ಇದು ನಿಮ್ಮ ರಾಜ್ಯ, ರಾಜ್ಯದಲ್ಲಿ ಏನೇ ಆದರೂ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗುತ್ತೆ. ಇದನ್ನು ನಾನು ನಿಮಗೆ ಹೇಳಬೇಕಾ?

ಮುಖ್ಯಮಂತ್ರಿ : ಹಿಂದೆ ಮಹಾಭಾರತದಲ್ಲಿ ಧರ್ಮರಾಯ ಜೂಜಾಟದಲ್ಲಿ ಏನೆಲ್ಲವನ್ನು ಕಳೆದುಕೊಂಡ. ಕಡೆಗೆ ಆತನೂ ಆತನ ಐವರ್ ಬ್ರದರ್ಸ್ ಮತ್ತು ಮದರ್ ಹಾಗೂ ವೈಫ್ ಎಲ್ಲರೂ ವೀರಪ್ಪನಂತೆ ಅಡವಿಯಲ್ಲಿ ತಲೆಮರಸಿಕೊಳ್ಳಬೇಕಾಯಿತು. ಅದಕ್ಕೂ ನಾನು ಹೊಣೆನಾ? ಅದನ್ನು ನನ್ನ ತಲೆಗೆ ಕಟ್ಟಬೇಕಾ?

ಬುಡ್ಡಣ್ಣ : ಅಲ್ಲ ಸಾರ್ ಜೂಜಾಟ ಯಾವಾಗ ಕೆಟ್ಟದೆನಿಸುತ್ತದೆ ಗೊತ್ತ? ಎಲ್ಲವನ್ನು ಕಳೆದುಕೊಂಡಾಗ. ಅದಕ್ಕೂ ಅದೃಷ್ಟಬೇಕು ನೋಡಿ. ಮೊನ್ನೆ, ತಾನೆ ನೀವು ನಿಗಮ ಮಂಡಳಿಗಳಿಗೆ

ನೇಮಕ ಮಾಡಿದಿರಿ. ಎಷ್ಟೋ ಜನಕ್ಕೆ ಲಾಟರಿ ಹೊಡೀತು. ಆಗ ಅವರೆಲ್ಲ ನಿಮ್ಮನ್ನು ನೆನೆಸೋದಿಲ್ವೇ? ಅದೇ ಲಾಟರಿ ಉಲ್ಟಾ ಆದಾಗ ಅವರೇ ನಿಮ್ಮನ್ನ ಬೈತಾರೆ. ಇದು ಲಾಟರಿ ನಿಯಮ ಸಾರ್ ಇದಕ್ಕೆ ಯಾಕಿಷ್ಟು ತಲೆಕೆಡಸಿಕೊಳುತ್ತೀರಾ?

ದಿನಾಂಕ : ೭.೩.೨೦೦೩

ಪ್ರಜಾವಾಣಿ

ಚಿನಕುರಳಿ : ಪ್ರಸ್ತುತ ಘಟನೆಯೊಂದನ್ನು ತೆಗೆದುಕೊಂಡು ವ್ಯಂಗ್ಯಮಾಡುತ್ತಲೇ ಗಂಭೀರವಾದ ಚಿಂತನೆಯನ್ನು ಮೂಡಿಸುವ ವ್ಯಂಗ್ಯಚಿತ್ರ ಮತ್ತು ಬರಹಗಳಿರುತ್ತವೆ.

ಉದಾ: ಆನ್‌ಲೈನ್ ಲಾಟರಿ[೨೧] ಸುದ್ದಿ

ಬಂದರೆ ಕೋಟಿ
ಹೋದರೆ ನಮ್ಮ ಮಗನಿಗೆ
ಶಾಲೆಯಲ್ಲಿ ಬಿಸಿ ಊಟ!
(ಲಾಟರಿ ಹಣದಲ್ಲಿ ಮಕ್ಕಳಿಗೆ ಬಿಸಿಯೂಟ ಸರ್ಕಾರದ ಆದೇಶಕ್ಕೆ ಪ್ರತಿಕ್ರಿಯೆ)

ಗುಂಡಣ್ಣ : ಈ ಕಾಲಂನಲ್ಲಿ ಬರಹ ಇಲ್ಲದೆ ಕಾರ್ಟೂನ್ ಚಿತ್ರ ತರಹ ಗುಂಡಣ್ಣ ಇರುತ್ತಾನೆ. ಇವನನ್ನು ನಾಲ್ಕು ಆಕೃತಿಗಳಲ್ಲಿ ಚಿತ್ರಿಸಿರುತ್ತಾರೆ. ಇಲ್ಲಿ ಏನಾದರೂ ಅರ್ಥರೂಪದಲ್ಲಿ ಅಭಿವ್ಯಕ್ತಿಗೊಂಡಿರುತ್ತದೆ.

ಕೊನೆಹನಿ, ಮಿಂಚು, ಒಳಶುಂಠಿ : ಇಲ್ಲಿ ಹಾಸ್ಯಬರಹಗಳು ಇರುತ್ತವೆ.

ಉದಾ: ಏನ್‌ಸಾರ್ ಈ ವಯಸ್ಸಿನಲ್ಲೂ ಕರೆದ ಕಾರ್ಯಕ್ರಮಗಳಿಗೆಲ್ಲಾ[೨೨]

ಮುಖ್ಯ ಅತಿಥಿಗಳಾಗಿ ಬರ್ತಿರಲ್ಲ ನಿಮಗೆ ಇಷ್ಟೊಂದು
ಉತ್ಸಾಹ ಎಲ್ಲಿಂದ ಬರುತ್ತೆ?

: ನನ್ನ ಹೆಂಡ್ತಿನೇ ಇದಕ್ಕೆ ಸ್ಫೂರ್ತಿ!

: ಅದ್ಹೇಂಗೆ ಸಾರ್

: ಮನೇಲಿ ಇದ್ರೆ ಆಕೆ ಕಾಟ ತಾಳಕೆ ಆಗಲ್ಲ
ಅದಕೆ ಕರೆದಲೆಲ್ಲಾ ಬರುತ್ತೇನೆ.

ಮಕ್ಕಳ ಮನೋರಂಜನೆ : ಈ ಕಾಲಂನಲ್ಲಿ ಮಕ್ಕಳಿಗೋಸ್ಕರ ಪ್ರಾಣಿ ಕಥೆಗಳು, ಕಿನ್ನರ ಕಥೆಗಳು, ರಾಜ-ರಾಜಕುಮಾರಿ ಕಥೆಗಳಿರುತ್ತವೆ. ಚಂದಮಾಮ ನಿರ್ಮಾಣದ ಅಜೇಯ 'ಗರುಡ' ಮತ್ತು ಒಗಟುಗಳಿರುತ್ತವೆ. ಇವು ಕೆಲವೊಮ್ಮೆ ಹಳೆಯದಾಗಿದ್ದರೆ ಮತ್ತೆ ಕೆಲವೊಮ್ಮೆ ಹೊಸದಾಗಿ ರಚನೆಗೊಂಡಿರುತ್ತವೆ. ಇವುಗಳನ್ನು ಏಕವ್ಯಕ್ತಿ ಸೃಷ್ಟಿಸಿದ್ದರೂ ಸಮೂಹದಲ್ಲಿ ಬಿದ್ದು ಜಾನಪದ ಪ್ರಕಾರಗಳಾಗಿ ಪರಿವರ್ತಿಸಲ್ಪಡುತ್ತವೆ. ಕೆಳಕಂಡಂತೆ ಪರಿವರ್ತಿತ ಒಗಟುಗಳನ್ನು ಕಾಣಬಹುದು.

ಉದಾ: [೨೩]

೧. ಮಲೆನಾಡಿನ ಮಗನೀತ
ಕನ್ನಾಡಿಗೆ ಶ್ರೇಷ್ಠ
ಮಹಾಛಂದಸ್ಸಿನಲ್ಲಿ
ರಾಮಾಯಣ ದರ್ಶನಂ ಪಾಠ
ಕನ್ನಡಕ್ಕೆ ಸಂದಿತು
ಮೊದಲು ಜ್ಞಾನಪೀಠ
ಯಾರು ಹೇಳಿರೀತ
....

೨. ಪಾತರಗಿತ್ತಿ ಪಕ್ಕ
ನೋಡಿದೇನೆ ಅಕ್ಕ
ಧಾರವಾಡದಲ್ಲಿ ಕೂತು
'ನಾಕುತಂತಿ'ನಾದ
ಒಂದಕ್ಕೊಂದು ಪಾಕ
ಪದಗಳೊಡನೆ ಆಟ
ಯಾರು ಹೇಳಿರೀತ
....

೩. ಮೂಕಜ್ಜಿಯ ಕನಸು
ವೈಚಾರಿಕ ಮನಸ್ಸು
ಪ್ರಯೋಗಶೀಲ ನನಸು
ಬಾಲವನದ ಅಜ್ಜ
ಕಡಲತೀರದ ಭಾರ್ಗವ
ಯಾರು ಹೇಳಿರಿ ಕೇಳುವ
....

೪.	ಚಿಕ್ಕಕಥೆಗಳ ಜನಕ
ನಗೆ ಮುಖದ ಅಜ್ಜ
'ಚಿಕ್ಕವೀರ ರಾಜೇಂದ್ರ'ಕ್ಕೆ
ಜ್ಞಾನಪೀಠ ಪಡೆದ ಇವರು ಯಾರು ಹೇಳಿ
....

೫.	ಇಂಗ್ಲೀಷ್ ಅಧ್ಯಾಪಕನೀತ
ಕನ್ನಡಕ್ಕೆ ಗೋಕಾಕ
ಸಮುದ್ರದಲೆಗಳ ಹೊಯ್ದಾಟ
ಪುಸ್ತಕದಲ್ಲಿ ಹಿಡಿದಾತ
ಜ್ಞಾನ ಪೀಠವ ಪಡೆದಾತ
ಯಾರು ಹೇಳಿರೀತ
....

೬.	ಮೂರ್ತಿಗಳು ಒಂದಲ್ಲ
ಅನಂತ ಅನಂತಾನಂತ
ಓಡಾಟದ ಕನಸು
ಕಡೆ ಹೆಣೆದ ಮನಸ್ಸು
ವಿಚಾರದ ನನಸು
ಇವರು ಯಾರು ಬಲ್ಲಿರಾ
....

೭.	ನಾಟಕ ಮಾಡಲು ಶ್ರೇಷ್ಠ
ಪ್ರಯೋಗ ನೋಡಲು ವಿಶಿಷ್ಟ
ಈತನ ಹೆಸರುಕೇಳು
'ಗಿರಿಯಲ್ಲಿರುವ ಈಶ'
ಸಪ್ತ ಸಾಗರದಂತೆ
ಸಂದಿತು ಜ್ಞಾನ ಪೀಠ
ಯಾರು ಹೇಳಿರೀತ
....

೮. "ಮಕ್ಕಳೇ ಒಗಟು ಬಿಡಿಸಿ"[೨೪] ಇಲ್ಲಿ ಉತ್ತರಗಳನ್ನು ಕೆಳಗಡೆ ತಿರಿಗಿಸಿ ಕೊಟ್ಟಿರುತ್ತಾರೆ.

೧. ದಿನಾಲು ಬೆಳಗುವ ಸೂರ್ಯನಲ್ಲ
ಹಗಲಲ್ಲೂ ನನ್ನನು ಬಳಸುವರಲ್ಲ
ಇರುಳಾಗಲು ನಾ ನಿಮಗೆ ಸಾಬಿಬೆಲ್ಲ
ಯಾರೆಂದು ನೀವು ಹೇಳಿರೆಲ್ಲ?

೨. ಸುತ್ತ ಮುತ್ತ ಹಸಿರು ಕಾಡು
ನಡುವೆ ನಡುವೆ ಕರಿಯ ಗೀರು
ಒಳಗೆ ನೋಡು ಕೆಂಪುಕೋಟೆ
ಕಾವಲಿಗುಂಟು ಕಪ್ಪು ಸೈನಿಕರು
ನಾನು ಯಾರು ನೀವು ಹೇಳಿರೇನು?

೩. ಮೇಲೆ ಕಪ್ಪು ಆಕಾಶವುಂಟು
ಬಿಸಿಲು ಮಳೆಗೆ ನಾನೇ ಗಂಟು
ಕೋಲಿನ ಸಹಾಯದಿ ನಿಲ್ಲುವೆನು
ಗುಂಡಿಯ ಒತ್ತಲು ತೆರೆಯುವನು
ನಾನು ಯಾರು ನೀವು ಹೇಳಿರೇನು?

೪. ಪೇಟೆಯಿಂದ ತರ್ತಾರೆ
ಈಳಿಗೆ ಮುಂದೆ ಇಡ್ತಾರೆ
ಹೋಳು ಹೋಳು ಕೊಯ್ತಾರೆ
ಕಣ್ಣೀರು ತಂದು ಅಳ್ತಾರೆ?

೫. ಮರುಭೂಮಿಯಲ್ಲಿ
ನನ್ನ ವಾಸ
ಬೇಕಿಲ್ಲ ನೀರಿನ ಸಹವಾಸ
ಮರಳಿನ ಹಡಗು
ಎನುವರು ನನಗೆ
ಹಡಗಂತೂ ನಾನಲ್ಲ
ನಾನು ಯಾರು ಬಲ್ಲಿರಾ

೧ ವಿದ್ಯುತ್ ೨. ಕಲ್ಲಂಗಡಿ ಹಣ್ಣು ೩. ಕೊಡೆ ೪. ಈರುಳ್ಳಿ ೫. ಒಂಟೆ.

ಸಾಪ್ತಾಹಿಕ ಪುರವಣಿಗಳಲ್ಲಿ

ಅಜ್ಞಾತ ಜನಪದ ಕಲಾವಿದರನ್ನು ಪರಿಚಯಿವುದು, ಜನಪದ ವೈದ್ಯ, ಆಚರಣೆ ಸಂಪ್ರದಾಯದ ಬಗ್ಗೆ ಲೇಖನಗಳಿರುತ್ತವೆ.

೧ ಉದಾ : ಗಂಗೆ ಭಾಷೆ ಕೇಳೋಣವೇ?[೨೫] ಇದೊಂದು ಮಳೆಗಾಲ ಪ್ರಾರಂಭವಾಗದ ಋತುಮಾನದಲ್ಲಿ ಆಚರಿಸುತ್ತಾರೆ.

ತಾನ್ ಸೇನ್ ಮೇಘ ಮಲಾರ ರಾಗ ಹೇಳಿ ಮಳೆ ತರುಸುತ್ತಿದ್ದ ಕಾಲವೊಂದಿತ್ತು. ಈ ಸಾಲಿನಲ್ಲಿ ಮಳೆ ತರಿಸುವ ನಂಬಿಕೆಗಳು ಇನ್ನೂ ಕೆಲವು ಗ್ರಾಮಗಳಲ್ಲಿ ನಾನಾರೀತಿಯಲ್ಲಿ ಜೀವಂತವಿದೆ, ಮಳೆಯನ್ನು ನಂಬಿ ಜೀವಿಸುತ್ತಿರುವ ಬಯಲು ಸೀಮೆಯ ರೈತರು ಮುಂಗಾರು ಮಳೆಯನ್ನು ಜೀವ ಮಳೆ, ಬೀಜಮಳೆ ಎಂದೆಲ್ಲಾ ಕರೆಯುತ್ತಾರೆ. ಈ ಮಳೆ ಏನಾದರೂ ಹುಸಿಯಾದರೆ ರೈತನ ಪರಿಸ್ಥಿತಿ ಹೇಳತೀರದು. ಬೇಸಿಗೆ ಸಮಯದಲ್ಲಿ ರೈತ ತನ್ನ ಹೊಲಗಳನ್ನೆಲ್ಲಾ ಹಸನುಗೊಳಿಸಿ ಬಿತ್ತುವ ಪರಿಕರಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಆರಂಭವಾಗುವ ಮುಂಗಾರು ಮಳೆಗಾಗಿ ಆಗಸ ದಿಟ್ಟಸುತ್ತಾ ಸಾಗಿ ಹೋಗುವ ಮಾರುತಗಳನ್ನು ಎಣಿಸುತ್ತಿರುತ್ತಾನೆ. ಮಳೆಸುರಿ ಕಾದ ಭೂಮಿಯೆಲ್ಲಾ ತಂಪಾಗಿ ಕೆರೆ ಕೊಂಟೆಗಳು ಭರ್ತಿಯಾದರೆ ರೈತನಿಗೆಲ್ಲಿಂದ ಬಂದೀತು ದಣಿವು ಕೆಸರಿನೊಳಗೆ ಕೈಯಾಡಿಸುತ್ತಾ ವರ್ಷದ ಬಾನಕ್ಕೆ ಪಡೆಯಲು ತಯಾರಾಗುತ್ತಾನೆ.

ಸರಿಯಾದ ಸಮಯಕ್ಕೆ ಮಳೆ ಬಾರದಿದ್ದರೆ ಸಂಗ್ರಹಿಸಿಟ್ಟ ಬೀಜ ಹುಳು ಹತ್ತುವ ಚಿಂತೆ ಒಂದೆಡೆಯಾದರೆ ಸಮಯ ಮೀರಿ ಬಿತ್ತಿದರೂ ಮುಂದೆ ರೋಗರುಜಿನಗಳಿಗೆ ಹಾಳಾಗುವ ಚಿಂತೆ ಮತ್ತೊಂದೆಡೆ ಇಂತಹ ಪರಿಸ್ಥಿತಿಯಲ್ಲಿ ರೈತರು ತಮ್ಮ ಸಮಾಧಾನಕ್ಕಾಗಿ ದೇವರಿಗೆ ಉಡಿತುಂಬುವುದು, ಭಿಕ್ಷೆಬೇಡುವುದು ಗುರುಜಿತಿರುಗುವುದು, ಮಳೆ ಪದ ಹೇಳುವುದು ಇಂತಹ ಹಲವಾರು ಆಚರಣೆ ಆಚರಿಸಿದರೆ ಮಳೆ ಬಂದೀತು ಎಂಬ ನಂಬಿಕೆಯಿಂದ ಆಚರಿಸುವ ಜನಪದ ಪದ್ದತಿಯಲ್ಲೊಂದು ಗಂಗೆ ಭಾಷೆ ಕೇಳುವುದಾಗಿದೆ, ಗೋಧೂಳಿಯ ಸಂಧ್ಯಾಕಾಲದಲ್ಲಿ ಗ್ರಾಮದ ಹಿರಿಯರ ಸಲಹೆಯಂತೆ ಓಣಿಯ ಬಾಲೆಯರೆಲ್ಲಾ ಸೇರಿ ಮಳೆಗಾಗಿ ಗಂಗೆ ನುಡಿ ಕೇಳಲು ಮುಂದಾಗುತ್ತಾರೆ. ಗುಡಿಗಳ ಮುಂದೆ ಇಲ್ಲವೇ ಬಯಲಲ್ಲಿ ಗೋಮಯ (ನೆಲಸಾರಿಸಿ) ಮಾಡಿ ರಂಗೋಲಿ, ತಳಿರು ತೋರಣಗಳಿಂದ ಸಿಂಗರಿಸುತ್ತಾರೆ, ಅಷ್ಟೊತ್ತಿಗಾಗಲೇ ಊರ ಮಂದಿ ಬಾಯಿಯಲ್ಲಿ 'ಏ ಬಡಿಗ್ಯಾರ ಓಣ್ಯಾಗ ಗಂಗಿ ಕೇಳ್ತಾರಂತಪ ನೋಡೋಣ ನಡ್ರಿ' ಎಂಬಂತಹ ಮಾತು ಊರತುಂಬೆಲ್ಲಾ ತುಂಬಿ ಆ ಸ್ಥಳದಲ್ಲಿ ನುಡಿ ಕೇಳಲು ನೆರೆಯುತ್ತಾರೆ.

ಕಪಟ ಮಳೆಯೇ ಕಾರಮಳೆಯೇ
ದೇವರ ಗುಡಿಗೆ ನೀರಿಲ್ಲ
ಸುಣ್ಣ ಕೊಡ್ತಿನಿ ಸುರಿಯಲೆ ಮಳೆಯೇ
ಬಣ್ಣ ಕೊಡ್ತಿನಿ ಬಾರಲೇ ಮಳೆಯೇ
ಹಿಟ್ಟು ಕೊಡ್ತಿನಿ ಕುಟ್ಟಲೇ ಮಳೆಯೇ
ಹಂಚು ಕೋಡ್ತಿನಿ ಮಿಂಚಲೇ ಮಳೆಯೇ
ಬಾರೋ ಬಾರೋ ಮಳೆರಾಯ
ಬಾಳಿ ತೋಟಕೆ ನೀರಿಲ್ಲ.

ಎಂಬಂತಹ ಮಳೆ ಹಾಡು ಹೇಳುತ್ತಾ ಹಸಿರು ಸೀಟೆ (ಸೀರೆ) ಉಟ್ಟ ಬಾಲೆಯರು ಊರ ಮುಂದಿನ ಬಾವಿಗೆ ಹೋಗಿ ಗಂಗೆ ಪೂಜಿಸಿ ಕೊಡ ತುಂಬಿಕೊಂಡು ಹಾಗೆ ಹಾಡು ಹೇಳುತ್ತಾ ಭಾಷೆ ಕೇಳುವ ಸ್ಥಳಕ್ಕೆ ಬರುತ್ತಾರೆ. ಸಾರಣಿಗೆಯಾದ ಸ್ಥಳದಲ್ಲಿ ಧಾನ್ಯ ಹಾಕಿ, ಆ ಧಾನ್ಯದ ಮೇಲೆ ಬಾಲೆಯರು ಗಂಗೆಯನ್ನು ಇಳಿಸುತ್ತಾರೆ. ಗಂಗೆಗೆ (ಕೊಡ) ಖಣ, ಲಿಂಗು,ಬಳೆ ತಾಳಿ ಹಾರಗಳಿಂದ ಅಲಂಕೃತಗೊಳಿಸಿ ತುದಿಗೆ ತೆಂಗಿನಕಾಯಿ ಇಟ್ಟು. ಹಣ್ಣು ಹಂಪಲುಗಳ ನೈವೇದ್ಯ ಮಾಡಿ ಭಾಷೆ ಕೇಳಲು ಅಣಿಯಾಗುತ್ತಾರೆ, ಸುತ್ತಲೂ ಕುಳಿತ ಜನರೆಲ್ಲ 'ಈ ಸಲ ಗಂಗಿ ಮಳಿತರ್ತಾಳ ನೋಡಿವರಂತ' ಎಂದು ತಮ್ಮ ತಮ್ಮಲ್ಲೆ ಸಮಾಧಾನದ ಮಾತು ಹೇಳುತ್ತಾ ಬಾಲೆಯರು ಸಿಂಗರಿಸುತ್ತಿರುವ ಗಂಗೆಯ ಕಡೆ ದೃಷ್ಟಿನೆಟ್ಟಿರುತ್ತಾರೆ 'ಗಂಗವ್ವ ಗೌರವ್ವ ಶಾಂತಕ್ಕ ಬರ್ರಿ' ಎನ್ನತ್ತಾ ಆ ಐದು ಬಾಲೆಯರು ಗಂಗಿಗೆ ನಮಸ್ಕರಿಸಿ ಸುತ್ತಲೂ ಬಾಗಿ ಬೆರಳುಗಳಿಂದ ಮೃದುವಾಗಿ ಮುಟ್ಟಿನಿಲ್ಲುತ್ತಾರೆ. ಹಾಗೆ ನಿಂತಾಗ ಕೂಡ ತಿರುಗುವ ಸೂಚನೆ ಕಂಡರೆ ಅದರೊಂದಿಗೆ ತಾವು ತಿರುಗುತ್ತಾರೆ. ಅಂದರೆ ಈ ಮಳೆ ಇದೇ ಪಾದದಲ್ಲಿ ಬರುತ್ತದೆ ಎಂದು ಅರ್ಥೈಸಿಕೊಳ್ಳುತ್ತಾರೆ. ಕೊಡ ತಿರುಗದೆ ಹಾಗೆ ನಿಂತರೆ ಈ ಪಾದದಲ್ಲಿ ಮಳೆಬರುವುದಿಲ್ಲ. ಮುಂದಿನ ಪಾದ ಕೇಳ್ರಿ ಎಂದು ಹಿರಿಯರ ಗುಂಪಿನಿಂದ ಮಾತು ಮೊಳಗುತ್ತದೆ.

ಒೀಗೆ ಸದ್ಯದ ಮಳೆಯ ಎಲ್ಲಾ ಪಾದಗಳನ್ನೂ ಕೇಳುತ್ತಾ ಹೋಗುತ್ತಾರೆ. ಕೊಡ ತಿರುಗಿದಾಗ ಎಲ್ಲರೂ ಹೋ ಎಂದು ಹರ್ಷೋದ್ಗಾರ ಮಾಡಿ 'ನೋಡ್ರಪಾ ಗಂಗಿ ಭಾಷಾ ಕೊಟ್ಟು' ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಯಾವುದೇ ಕಾರಣಕ್ಕೂ ಅಂದಿನ ಮಳೆಯನ್ನು ಕೇಳಬೇಕೇ ಹೊರತು ಮುಂದಿನ ಮಳೆ ಕೇಳಬಾರದೆಂಬ ನಿಯಮವಿದೆ. ಇಲ್ಲಿ ಕೊಡ ತಿರುಗುವುದು ಹೆಂಗಳೆಯರ ಚಲನ ಶಕ್ತಿಯಿಂದ ಎಂದೆನಿಸಿದರೂ ಮಳೆ ಬರದಿರುವುದು ಬಿಡುವುದು ಇಲ್ಲಿ ಪ್ರಸ್ತುತವಲ್ಲ. ಹಲವಾರು ನಂಬಿಕೆಗಳಂತೆ ಇದೊಂದಾಗಿದೆ. ಆ ಸಮಯದಲ್ಲಿ ಹಳ್ಳಿಯ ಜನರೆಲ್ಲಾ ಒಂದೇ ಮನೋಭಾವನೆಯಿಂದ ಸೇರಿ ಹಬ್ಬಗಳಂತೆ ಆಚರಿಸಿ ಉಲ್ಲಸಿತರಾಗುವುದು ಒಂದು ಉತ್ತಮ ಅಂಶವಾಗದೆ. ನೋಡಲು ಸೊಗಸಾದ ಇಂತಹ ಗ್ರಾಮೀಣ ಸೊಗಡು ಕೆಲವೊಂದು ಸಮಯ ಮನಸ್ಸಿಗೆ ಮುದ ನೀಡುವುದರ

ಜೊತೆಗೆ ಬಾಲೆಯರು ಗಂಗೆ ಕಳಿಸಿ ತುರಿ ಹಂಚಿ ಹಿರಿಯರಿಂದ ಆಶೀರ್ವಾದ ಪಡೆಯುವುದು, ಗ್ರಾಮದಲ್ಲಿ ಹಬ್ಬದ ವಾತಾವರಣ ಮೂಡುತ್ತದೆ. ಮಳೆ ಬಾರದಿದ್ದರೂ ರೈತರ ಮನವಂತೂ ತಂಪಾಗುತ್ತದೆ.

೨. ಜನಪದ ವೈದ್ಯಕ್ಕೆ ಉದಾಹರಣೆ[೨೯]

ಈಶ್ವರಿ ಬಳ್ಳಿಯ ತ್ರಿಮೂರ್ತರೂಪ
ಒಂದ್ಕಿತ ಇದರ ವಾಸನೆ ನೋಡೀಸಾ
ಇನ್ನ್ಯಾವತ್ತೂ ನೀವು ಮರೆಯಾಕಿಲ್ಲ

ಎನ್ನುತ್ತಾ ಗಿಡವೊಂದರ ಎಲೆಯನ್ನು ಕಿತ್ತು ಅದನ್ನು ಕೈ ಬೆರಳುಗಳ ಮಧ್ಯೆ ಹಿಸುಕಿ ನನ್ನಕೈಗೆ ವರ್ಗಾಯಿಸಿದರು ನಾಟಿ ವೈದ್ಯ ತಿರುಮಲಯ್ಯನವರು. ದೇವರಾಯನ ದುರ್ಗ ಅರಣ್ಯ ಶ್ರೇಣಿಯಲ್ಲಿದ್ದ ರಾಮದೇವರ ಬೆಟ್ಟದಲ್ಲಿ ಎಂಟು ವರ್ಷದ ಹಿಂದೊಂದು ದಿನ ನನ್ನ ಜತೆ ಸಸ್ಯ ಸಮೀಕ್ಷೆಯಲ್ಲಿ ಸಾರಥಿಯಾಗಿದ್ದರು. ಅವರು ಕೊಟ್ಟ ಆ ಎಲೆಯನ್ನು ಮೂಸಿನೋಡಿದೆ. ಮುಖ ಸಿಂಡರಿಸುವಂತ ವಿಶಿಷ್ಟವಾದ ಕಟು ವಾಸನೆ, ವಾಕರಿಕೆ ಬರಿಸುವಂತ ದುರ್ಗಂಧವಲ್ಲ. ಹಾಗೆಂದು ಆಸ್ವಾದಿಸುವಂತಹ ಸುಂಗಧವೂ ಅಲ್ಲ. ಒಮ್ಮೆ ಅದನ್ನು ಆಘ್ರಾಣಿಸಿದರೆ ಸದಾಕಾಲ ನೆನಪಿನಲ್ಲಿ ಉಳಿಯಬಲ್ಲಂಥ ಗಾಢವಾದ ಕಟುವಾಸನೆ ಅವರು ಎಲೆ ಕಿತ್ತ ಗಿಡ ಕಾಣಿಸಲಿಲ್ಲವಾದ್ದರಿಂದ .... ಈಶ್ವರಿ ತಾನೆ ......? ಎಂದು ಅನುಮಾನದಿಂದಲೇ ಕೇಳಿದೆ.

“........ ಬರೀ ಈಸ್ವರಿ ಅಲ್ಲಾಸಾ ಕರಿ ಈಸ್ವುರಿ ಶ್ಯಾನೆ ಅಪ್ರೂಪ ಸಾ .... ಇಲ್ನೋಡಿ.... ಎಂದು ನೆಲದಲ್ಲಿ ಆಗತಾನೆ ಚಿಗುರುತ್ತಿದ್ದ ಎರಡೆಲೆ ಇದ್ದ ಗಿಡದ ಕಡೆ ಕೈ ತೋರಿದರು. ಹೌದು ಅಂದು ನಮಗೆ ದೊರೆತಿದ್ದ ಅಪರೂಪದ ಗಿಡ ಈಶ್ವರಿ. ಅಸಾಧಾರಣವಾದ ನಂಜುನಾಶಕ ಗುಣಗಳಿರುವ ನಂಬಲರ್ಹವಾದ ಪ್ರತಿ ವಿಷ ಎಂದು ಬಣ್ಣಿಸಬಹುದಾದ ಔಷಧಿ. ಸಸ್ಯ ಬಯಲು ಸೀಮೆ ಮತ್ತು ಮಲೆನಾಡಿನ ಎಲ್ಲಾ ಉದುರೆಲೆ, ಅರೆ ನಿತ್ಯಹರಿದ್ವರ್ಣ ಮತ್ತು ಕುರುಚಲು ಕಾಡುಗಳ ತೆರೆದ ಜಾಗಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ವಿರಳವಾದ ಸಣ್ಣ ಬಳ್ಳಿ ಎಲ್ಲಿ ವಿಷ ವೈದರ ಬಳಿ ಸದಾ ಕಾಲವು ಇರುವ ನಂಬಿಕಸ್ಥ ಔಷಧಿ ಸಸ್ಯ, ಕೃಶಕಾಯವಾದ್ದರಿಂದ ಈಶ್ವರಿ ತನ್ನ ವಾಸದ ನೆಲೆಯಲ್ಲಿ ಅಷ್ಟಾಗಿ ಎದ್ದು ಕಾಣದು. ಆಸರೆಗೆ ಸಿಕ್ಕಪೊದೆಯನ್ನೊ ಮರವನ್ನೋ ತಟ್ಟಿಕೊಂಡು ಕಂಡೂಕಾಣದಂತೆ ಬೆಳೆದುಕೊಂಡಿರುತ್ತದೆ. ಹಾವಿನ ಹಾಗೆಯೇ ತಳಕು ಹಾಕಿಕೊಂಡಿರುವ ಮೈ, ಎರಡು ಬೆರಳಗಲದ ಹಸಿರುಗಪ್ಪು ಬಣ್ಣದ ಎಲೆಗಳು. ಎಲೆಯ ಬೆನ್ನ ಮೇಲೆ ಕಂಡೂಕಾಣದಂತಹ ಎಳೆಗಂದು ಬಣ್ಣದ ಗೆರೆಗಳು ಬಾಯ್ದೆರೆದ ಹಾವಿನ ಮೂತಿಯನ್ನು ಹೋಲುವ ಹಸಿರುಗಂದು ಬಣ್ಣದ ಅಂಗುಲ ಉದ್ದದ ಕೊಳವೆ ಹೂಗಳು. ಅದು ಹೂವೇ ಎಂದು. ಸಂದೇಹ ಪಡುವಷ್ಟು ಅನಾಕರ್ಷಕ

ರೂಪ. ಎಲೆಗಳ ಮಧ್ಯೆ ಇಳಿ ಬಿದ್ದ ಹೆಬ್ಬೆರಳ ದಪ್ಪದ ಗಂಟೆಯಂತಹ ಕಾಯಿಗಳು, ಒಣಗಿದ ಕಾಯಿ ಆರು ಭಾಗಗಳಾಗಿ ಸೀಳು ಬಿಟ್ಟಾಗ ಗುಂಡಗಿನ ಕುಂಕಮ ಬರಣಿಯನ್ನು ಆರುದಾರ ಕಟ್ಟಿ ತೂಗು ಬಿಟ್ಟ ಹೂ ಬುಟ್ಟಿಯಂತೆ ಕಾಣುತ್ತದೆ. ಆದ್ದರಿಂದಲೇ ಇದರ ಇನ್ನೊಂದು ಹೆಸರು 'ತೊಟ್ಟಿಲು ಬಳ್ಳಿ' ಕಾಯಿಯ ಒಳಗೆ ತೊಗರಿ ಬೇಳೆಯಗಲದ ತೆಳ್ಳಗಿನ ಹುರಪೆಯಂತಹ ಕಪ್ಪು ಬೀಜಗಳು. ಅವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಹಾವಿನ ಹೆಡೆಯ ಮುಸುಕು ರೂಪ ಕಾಣುತ್ತದೆ. ರೂಪಕ್ಕೆ ತಕ್ಕುದಾದ ಔಷದೀಯ ಗುಣ ಈಶ್ವರಿಯದು.

ಅರಿಸ್ಟೊಲೋಕಿಯೇಸಿ ಕುಟುಂಬಕ್ಕೆ ಸೇರಿದ ಈಶ್ವರಿಯಲ್ಲಿ ನಾಟಿ ವೈದ್ಯರು ಗುರುತಿಸುವಂತೆ ಮೂರು ರಖಮುಗಳಿವೆ. ಈಶ್ವರಿ, ದೊಡೀಶ್ವರೀ, ಗಂಡು ಈಶ್ವರೀ ಇದನ್ನು ಈಶ್ವರಿಯ ತ್ರಿಮೂರ್ತಿರೂಪ ಎನ್ನಬಹುದು. ಮೂರು ಒಂದನ್ನೊಂದು ಹೋಲುವ ಬಳ್ಳಿಗಳು. ಮೂರಕ್ಕೂ ಸಮಾನವಾದ ಔಷಧೀಯ ಗುಣಗಳು. ಸಸ್ಯ ಶಾಸ್ತ್ರೀಯವಾಗಿ ಇವನ್ನು ಕ್ರಮವಾಗಿ ಅರಿಸ್ಟೋಲೋಕಿಯ ಇಂಡಿಕ, ಅರಿಸ್ಟೋಲೋಕಿಯ ಬ್ರಾಕ್ಟಿಯೇಟ ಅರಿಸ್ಟೋಲೋಕಿಯಟಗಾಲ ಎಂದು ಗುರುತಿಸಲಾಗಿದೆ. ಈ ಮೂರರ ಪೈಕಿ ಈಶ್ವರಿಯಲ್ಲಿ ಇನ್ನೆರಡು ಒಳಬಗೆಗಳಿವೆ. ಹಸಿರು ಎಲೆಗಳ 'ಬಿಳೀ ಈಶ್ವರಿ' ಮತ್ತು ನೇರಳೆರೇಕುಗಳ ಎಲೆಗಳಿರುವ 'ಕರಿಈಶ್ವರಿ, ಇವರಡಕ್ಕೂ ಬಯಲುಸೀಮೆ ಮತ್ತು ಮಲೆನಾಡಿನಲ್ಲಿ ಸಮಾನವಾದ ವ್ಯಾಪನೆಯಿದೆ. ದೊಡೀಶ್ವರಿ ಬೀದರ್, ಗುಲ್ಬರ್ಗ. ರಾಯಚೂರಿನಂತಹ ರಣರಣ ಬಿಸಿಲಿರುವ ಪ್ರದೇಶಗಳಲ್ಲೂ ಗಂಡುಈಶ್ವರಿ ಕೊಡಗು, ಹೆಗ್ಗಡದೇವನ ಕೋಟೆ ಮಲೆನಾಡಿನ ಹಸಿ ಉದುರೆಲೆ ಕಾಡಿನಲ್ಲೂ ಕಂಡುಬರುತ್ತದೆ. ಪರಿಣಾಮಕಾರಿಯಾದ ನಂಜುನಾಶಕ ಸಸ್ಯಗಳ ಪೈಕಿ ಈಶ್ವರಿಗೆ ಅಗ್ರಸ್ಥಾನ. ಎಲೆ ಮತ್ತು ಬೇರಿನಲ್ಲಿರುವ ಅರಿಸ್ಟೋಲೋಕಿನ್ ಅಂಶವೇ ಈ ನಂಜುನಾಶ ಗುಣಕ್ಕೆ ಮುಖ್ಯಕಾರಣ. ನೂರು ಗ್ರಾಂ ಬೇರಿನಿಂದ ೫ ಗ್ರಾಂ ಅರಿಸ್ಟೋಲೋಕಿನ್ ಸತ್ವವನ್ನು ಸಂಶ್ಲೇಷಿಸಬಹುದು. ಪೋಷಕ, ಚೋದಕ ಮತ್ತು ಸಂಕೋಚಕ ಗುಣಗಳನ್ನು ಪ್ರಕಟಿಸಿದರೂ ಕೂಡ ಈಶ್ವರಿ ನಂಜುನಾಶಕವಾಗಿಯೇ ಹೆಚ್ಚು ಜನಪ್ರಿಯ. ಹಾವಿನ ಕಡಿತ, ಚೇಳಿನ ಕುಟುಕು, ನೆಲಗಿರುಬದಂತಹ ವಿಷ ಜಂತುಗಳ ಸಂಪರ್ಕದಿಂದ ಏರುವ ನಂಜನ್ನು ಸಂಪೂರ್ಣವಾಗಿ ಪ್ರತಿಬಂಧಿಸುವ ಗುಣ ಈಶ್ವರಿಗಿದೆ. ಆದ್ದರಿಂದಲೇ ಇದರ ಇನ್ನೊಂದು ಹೆಸರು 'ಗರುಡ ಕುಡಿ' ವಿಷ ಚಿಕಿತ್ಸೆಯಲ್ಲಿ ಈಶ್ವರಿಯನ್ನು ಬಳಸಿಕೊಳ್ಳದ ವಿಷ ವೈದ್ಯರೇ ಇಲ್ಲ ಎನ್ನಬಹುದು. ಮೈಮೇಲಿನ ಹುಣ್ಣು. ವ್ರಣ ಗಾಯಗಳು ತೊನ್ನು, ಗಜಕರ್ಣದಂತಹ ಚರ್ಮವ್ಯಾಧಿಗಳ ಚಿಕಿತ್ಸೆಯಲ್ಲೂ ಹಾಗೂ ವಿಷ ಜಂತುಗಳ ಸಂಪರ್ಕದಿಂದಾಗುವ ನವೆ,ಉರಿ, ದದ್ದು, ಕೆರೆತ, ಅಲರ್ಜಿಯಂತಹ ತೊಂದರೆಗಳ ಚಿಕಿತ್ಸೆಗೂ ಈಶ್ವರಿ ಪರಿಣಾಮಕಾರಿಯಾದ ಔಷಧಿ.

ಪ್ರಕೃತಿಯ ಮತ್ತೊಂದು ವಿಸ್ಮಯಕಾರಿ ಸಂಗತಿಯಲ್ಲೂ ಈಶ್ವರಿ ಪಾಲು ಪಡೆದಿದೆ. ನಾಟಿ ವೈದ್ಯರು ಗುರುತಿಸುವಂತೆ ಈಶ್ವರಿ ಒಂದು ಪ್ರದೇಶದಲ್ಲಿರುವ ಹಾವಿನ ಹುತ್ತದ ಸೂಚಕ ಸಸ್ಯ ಈಶ್ವರಿ

ಬಳ್ಳಿಯಿರುವ ಸಮೀಪದಲ್ಲೆ ಒಂದು ಹುತ್ತ ಬೆಳೆದಿರುವುದು ಖಚಿತ. ಹಾವಿರುವ ಹುತ್ತದ ಸಮೀಪದಲ್ಲೆ ಹಾವಿನ ವಿಷವನ್ನು ಪ್ರತಿಬಂಧಿಸಬಲ್ಲ ಪ್ರತಿ ವಿಷವು ಕಂಡುಬರುವುದು ಪ್ರಕೃತಿಯ ಅಪೂರ್ವ ಕೊಡುಗೆ ಎಂದು ನಾಟಿ ವೈದ್ಯರು ನಂಬುತ್ತಾರೆ. ಹುತ್ತದ ಪೂರ್ವ ಭಾಗದಲ್ಲಿ ಬೆಳೆದಿರುವ ಈಶ್ವರಿ ಔಷಧಿಯಾಗಿ ಹೆಚ್ಚು ಪರಿಣಾಮಕಾರಿ ಎನ್ನುವ ನಂಬಿಕೆಯೂ ಅವರದು. ಅಂತಹ ಬಳ್ಳಿಯಿಂದಲೆ ಅವರು ಬೇರು ಎಲೆಗಳನ್ನು ಸಂಗ್ರಹಿಸುತ್ತಾರೆ. ಮೂರು ಈಶ್ವರಿಗಳ ಪೈಕಿ ದೊಡ್ಡೀಶ್ವರಿ ಮತ್ತು ಗಂಡು ಈಶ್ವರಿಯ ಪರಿಸ್ಥಿತಿ ಚೆನ್ನಾಗಿಲ್ಲ ಸ್ಥಾಭಾವಿಕವಾಗಿರುವ ವಿರಳತೆ ಮತ್ತು ಅತಿಯಾದ ಸಂಗ್ರಹಣೆಯ ಕಾರಣ ಇವನ್ನು ವಿಪತ್ತಿನಲ್ಲಿ ಸಿಕ್ಕಿ ಕೊಂಡಿರುವ ಸಸ್ಯಗಳು ಎಂದು ಗುರುತಿಸಲಾಗಿದೆ.

೩. ಜನಪದ ವೈದರ ಪರಿಚಯ ಲೇಖನ

ಉದಾ : ನಂಜು ತೆಗೆಯುವ ನಾಟಿ ವೈದ್ಯೆ ಮರಿಯಮ್ಮ.[೨೬]

ಕೊಳಕು ಮಂಡಲ, ನಾಗರಹಾವು, ಚೇಳು, ಮಂಡರಕಪ್ಪೆ, ನಾಯಿ, ಹುಚ್ಚು ನಾಯಿ, ಹುಚ್ಚು ಕುದುರೆ, ಮಂಗ, ಮಾನವ ಯಾರೇ ಕಚ್ಚಿದರೂ ಆ ಗಾಯ ಯಾವುದೇ ರೂಪದಲ್ಲಿದ್ದು ಎಷ್ಟೇ ಹಳೆಯದಾಗಿದ್ದರೂ ವೈದ್ಯರು ಗಾಯವಾಗಿರುವ ಕೈಯನ್ನೂ ಕತ್ತರಿಸಬೇಕೆಂದು ಹೇಳಿದ್ದರೂ ಗಾಯವೆಲ್ಲಾ ಕೊಳೆತು ಮಾಂಸವೆಲ್ಲಾ ಉದುರಿ ಆ ಭಾಗ ರಂಧ್ರವಾಗಿ ದುರ್ನಾತಕ್ಕಿಟ್ಟುಕೊಂಡಿದ್ದರೂ, ಹುಚ್ಚುನಾಯಿ ಕಡಿದು ರೇಬೀ ಆಕ್ರಮಣ ಮಾಡಿ ನಾಯಿಯ ಹಾಗೆಯೇ ನೀವು ಬೊಗಳುತ್ತಿದ್ದರೂ ಚಿಂತಿಸದಿರಿ. ಇವೆಲ್ಲಕ್ಕೂ ಮದ್ದು ಕೊಟ್ಟು ಸಂಪೂರ್ಣ ಗುಣ ಮಾಡುವ ದಿವ್ಯೌಷದಿ ಇದೆ- ಹನಗವಾಡಿಯ ಮರಿಯಮ್ಮನಲ್ಲಿ. ದಾವಣಗೆರೆಯಿಂದ ೧೪.ಕಿ.ಮೀ. ಹರಿಹರದಿಂದ ೬ ಕಿ.ಮೀ ದೂರದಲ್ಲಿ ಬೈಪಾಸಿನ ಎಡಗಡೆ ಇರುವ ಹನಗವಾಡಿ ಸುಮಾರು ೨೫೦೦ ಜನ ಸಂಖ್ಯೆ ಇರುವ ಸಣ್ಣಗ್ರಾಮ. ಆದರೆ ಖ್ಯಾತಿ ಮಾತ್ರ ಕರ್ನಾಟಕದೆಲ್ಲೆಡೆಯಿಂದ ನೆರೆ ರಾಜ್ಯಗಳಿಗೂ ಹಬ್ಬಿರುವುದು ನಾಟಿ ಔಷಧಿ ಕೊಡುವ ಮರಿಯಮ್ಮನಿಂದಾಗಿ. ನಿಮಗೆ ನಂಬಿಕೆ ಬರುತ್ತಿಲ್ಲವೇ, ಹಾಗಾದರೆ ಕೇಳಿ ಹಗವಾಡಿಯ ಜನರೇ ಹೆಮ್ಮೆಯಿಂದ ಹೇಳುವ ರೊಚಕ ಸಂಗತಿಗಳನ್ನು. ಒಂದು ಮಧ್ಯಾಹ್ನ ಹೊಳೆ ರಿಗೆಯಲ್ಲಿ ಮಹಿಳೆಯೊಬ್ಬಳು ಎಂದಿನಂತೆ ಹೊಲಕ್ಕೆ ಬುತ್ತಿ ಹೊಯ್ಯುತ್ತಿದ್ದಳು. ಅದೆಲ್ಲಿತ್ತೊ ಹುಚ್ಚು ಹಿಡಿದ ಕುದುರೆಯೊಂದು ಓಡಿ ಬಂದದ್ದೇ ಆಕೆಯನ್ನು ನೆಲಕ್ಕೆ ಕೆಡವಿ ಸೀದಾ ಮೊಲೆಗೇ ಬಾಯಿ ಹಾಕಿ ಕಚ್ಚಿಬಿಟ್ಟಿತು. ಎಲ್ಲೆಲ್ಲಿಯೋ ಔಷಧೋಪಚಾರ ನಡೆದರೂ ಗಾಯ ಮಾಯಲಿಲ್ಲ. ಮಣಿಪಾಲ್‌ಗೆ ಹೋದರೂ ಉಪಯೋಗವಾಗಲ್ಲ. ಗಾಯ ಕೊಳೆಯುತ್ತಿತ್ತು. ಮಾಂಸವೆಲ್ಲ ಉದುರಿ ಅಲ್ಲಿ ದೊಡ್ಡ ರಂಧ್ರವಷ್ಟೇ ಇತ್ತು. ಅಲ್ಲಿಂದ ಒಸರುವ ಕೀವು, ರಕ್ತ ತಡೆಯಲು ರಂಧ್ರಕೊಂದು ಬಟ್ಟೆ ತುಂಬಿದ್ದರು. ಹೀಗೇ ಯಾರೋ ಹೇಳಿದರು ಮರಿಯಮ್ಮನ ಬಗ್ಗೆ. ಸರಿಕೊನೆಯ ಪ್ರಯತ್ನವೆಂದು ಆಕೆಯನ್ನು ಹೊತ್ತು ಬಂದರು ಹನಗವಾಡಿಗೆ. ನೂರಾರು ಜನರ ನಡುವೆ ತನ್ನೆದುರಿನ ಬಂಡೆ ಹಾಸಿನ ಮೇಲೆ ಏನೋ ತೇಯುತ್ತಾ ಕೂತಿದ್ದ ಮರಿಯಮ್ಮ ಆಕೆಯನ್ನು ನೋಡಿ. ಎದೆಯ ರಂಧ್ರದಲ್ಲಿ ತುಂಬಿದ್ದ ಬಟ್ಟೆ ಕಿತ್ತಳಷ್ಟೆ! ಸುತ್ತಲಿದ್ದವರೆಲ್ಲಾ

ಮೂಗು. ಬಾಯಿ ಮುಚ್ಚಿಕೊಂಡು ಓಟ ಕಿತ್ತರು. ಅಷ್ಟೊಂದು ದುರ್ನಾತ. ಮರಿಯಮ್ಮ ಮಾತ್ರ ತಲೆಕೆಡಿಸಿಕೊಳ್ಳದೆ ಹತ್ತುವಾರ ಬಿಡದೇ ಔಷಧಿ ಕೊಟ್ಟಳು. ಅಷ್ಟೊತ್ತಿಗೆ ವಾಸನೆ ಇರಲಿಲ್ಲ. ರಂಧ್ರವಿದ್ದ ಜಾಗದಲ್ಲಿ ಹೊಸ ಮಾಂಸ ಬೆಳೆದಿತ್ತು. ಆಕೆ ಸಂಪೂರ್ಣ ಗುಣ ಹೊಂದಿದ್ದಳು.

ನೇರ್ಲಿಗೆಯ ಅಂಗನವಾಡಿ ಕೇಂದ್ರವೊಂದರಲ್ಲಿ ಅಡಿಗೆ ಕೆಲಸ ಮಾಡುವ ಅನುಸೂಯಮ್ಮ. ಶಾಲೆಯ ಪಕ್ಕದ ಗದ್ದೆಯ ಬದುವಿಗೆ ಕುಳಿತು ಕಾಲ್ಮಡಿಯುತ್ತಿದ್ದಳು. ಕೊಳಕುಮಂಡಲ ಹಾವು ಪಾದಕ್ಕೆ ಕುಟುಕಿ ಸರಸರನೆ ಹರಿದು ಹೋಯಿತು. ರಕ್ತ ಸೋರುತ್ತಿದ್ದ ಪಾದಕ್ಕೆ ಬಟ್ಟೆ ಕಟ್ಟಿ ಬಸ್ಸಿನಲ್ಲಿ ಹಾಕಿಕೊಂಡು ಊರವರು ಸೀದಾ ದಾವಣಗೆರೆಯ ಆಸ್ಪತ್ರೆಯೊಂದಕ್ಕೆ ಸೇರಿಸಿದರು. ಪ್ರಾಣವೇನೋ ಉಳಿಯಿತು, ಅದರೆ ಪಾದ ಕೊಳೆಯತೊಡಗಿತ್ತು. ತೊಡೆಯ ಬಳಿ ಚರ್ಮ ತೆಗೆದು ಪ್ಯಾಚಪ್ ಮಾಡಲು ಎರಡು ಬಾರಿ ಶಸ್ತ್ರಚಿಕಿತ್ಸೆ ನಡೆಸಿದರೂ ಅದು ಮತ್ತೆ ಮತ್ತೆ ಕೊಳೆಯುತ್ತಲೇ ಹೋಯಿತು. ಇನೊಂದು ಶಸ್ತ್ರ ಚಿಕಿತ್ಸೆ ಮಾಡಿದರು ಫಲಕಾರಿಯಾಗದಿದ್ದರೆ, ಪಾದವನ್ನು ಕತ್ತರಿಸಬೇಕಾಗುತ್ತದೆ ಎಂದರು ವೈದ್ಯರು. ಬರಲಿದ್ದ ಯುಗಾದಿಯ ನೆಪವೊಡ್ಡಿ ಅಂದೇ ಆಸ್ಪತ್ರೆ ಖಾಲಿ ಮಾಡಿದ ಗಂಡ- ಹೆಂಡತಿ ಸೀದಾ ಹೋದದ್ದು ಹನಗವಾಡಿಗೆ. ಈಕೆ ಸಂಪೂರ್ಣ ಗುಣವಾಗಿ ನಡೆದಾಡುತ್ತಾ ಕೆಲಸಕ್ಕೂ ಹೋಗಿ ಬರುತ್ತಾಳೆ. ಅನಸೂಯ ಬೇರೆಯಾರೂ ಅಲ್ಲ ನನ್ನ ಸೋದರ ಮಾವನ ಹೆಂಡತಿ ಅನಸೂಯ ಅಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೇ ಗೋವಾದಿಂದ ಒಬ್ಬರು ಬಂದಿದ್ದರು. ಹುಚ್ಚು ನಾಯಿ ಕಡಿದು ರೇಬಿಸ್‌ಗೆ ತಿರುಗಿ ಆತ ನಾಯಿಯ ಹಾಗೆ ಬೊಗಳುತ್ತಾ ಮರಿಯಮ್ಮನ ಬಳಿಗೆ ಬಂದಿದ್ದ. ಹತ್ತು ವಾರದಲ್ಲಿ ಮರಿಯಮ್ಮ ಆತನ ಕಾಯಿಲೆ ವಾಸಿ ಮಾಡಿದಳು. ಬೊಗಳುವುದೂ ನಿಂತು ಈಗವರು ಪೂರ ಸುರಕ್ಷಿತ.

ತಮಿಳು ನಾಡಿನ ಹಳ್ಳಿಯೊಂದರಲ್ಲಿ ಎರಡು ಗುಂಪಿನ ನಡುವೆ ಹೊಡೆದಾಟವಾಗಿ ಎದುರಾಳಿಯನ್ನು ಒಂದು ಗುಂಪಿನವ ಬಾಯಿ ಹಾಕಿ ಕಚ್ಚಿ ಬಿಟ್ಟ. ಅದು ನಂಜಾಗಿ ಅವನ ಸ್ಥಿತಿ ತೀರಾ ಗಂಭೀರವಾದಾಗ ಹನಗವಾಡಿಗೆ ಕರೆತಂದರು. ಎಂಟು ವಾರದಲ್ಲಿ ಆತ ಮೊದಲಿನಂತಾದ. ಇಂತಹ ನೂರಾರು ರೋಚಕ, ಮೈಜುಂ ಎನ್ನುವಂತಹ ಸಂಗತಿಗಳು ಬಿಚ್ಚಿಕೊಳ್ಳುತ್ತವೆ ಹನಗವಾಡಿಗೆ ಕಾಲಿಟ್ಟೊಡನೆ.

ಸುಮಾರು ಇಪ್ಪತ್ತು ವರ್ಶಗಳಿಂದ ಮರಿಯಮ್ಮ ಈ ನಾಟಿ ವೈದ್ಯೆ ಮಾಡುತ್ತಿದ್ದಾಳೆ. ನಂಜಾದ, ಕಚ್ಚಿದ ಗಾಯಗಳಿಗೆ, ಅವುಗಳ ದುಷ್ಪರಿಣಾಮಗಳಿಗೆ ಆಕೆ ಕೊಡುವ ಮಾಂತ್ರಿಕ ಮದ್ದು ನೂರಕ್ಕೆ ನೂರು ಖಾತರಿ, ಇಲ್ಲದಿದ್ದರೆ ಆಕೆ ಮುಟ್ಟುವುದೇ ಇಲ್ಲ. ವಾಸಿಯಾಗುವುದಿಲ್ಲ ಎಂದು ಹೇಳಿಯೇ ಬಿಡುತ್ತಾಳೆ. ತನ್ನಲ್ಲಿಗೆ ಔಷಧಿ ಕೇಳಿ ಬಂದವರಿಗೆ ಆಕೆ ತರಲು ಹೇಳುವುದು ನಿಂಬೆಹಣ್ಣುಗಳನ್ನು ಗಾಯದ ಸ್ವರೂಪ ಅವಲಂಬಿಸಿ ನಿಂಬೆಹಣ್ಣುಗಳ ಸಂಖ್ಯೆ ಇರುತ್ತದೆ. ಗಾಯಾಳುಗಳೇ ನಿಂಬೆಹಣ್ಣ ತಂದಿದ್ದರೆ ಔಷಧಿಗೆ ಒಂದು ರೂಪಾಯಿ ಮಾತ್ರ. ಇಲ್ಲವಾದಲ್ಲಿ ಮರಿಯಮ್ಮನೆ ಹಣ್ಣುಕೊಟ್ಟು ಹಣ್ಣಿಗೆ ಒಂದು ರೂಪಾಯಿ ಕೇಳುತ್ತಾಳೆ. ಇಷ್ಟೇ ಅವಳ ಫೀಸು. ಮರಿಯಮ್ಮನ ಮನೆಯೆದುರಿನ ರೋಡಿನಿಂದ

ಆಕೆ ಕುಳಿತ ಜಾಗದವರೆಗೂ ನಿಂಬೆಹಣ್ಣುಗಳಿರುವ ಬಟ್ಟಲುಗಳ ಸಾಲು ಇರುತ್ತದೆ. ಸರದಿಯಂತೆ ಔಷಧಿ ಕೊಡುತ್ತಾ ಹೋಗುತ್ತಾಳೆ.

ಮೂಲತಃ ಮುದೇನೂರಿನ ಮರಿಯಮ್ಮನ ಗಂಡನ ಮನೆ ಚಳಗೇರಿ. ಬದುಕು ಅರಸುತ್ತಾ ಹೊರಟು ನೆಲೆನಿಂತದ್ದು ಹನಗವಾಡಿಯಲ್ಲಿ. ಈಕೆಯ ಮುತ್ತಾತ ಬಾಬಾಬುಡನ್‌ಗಿರಿಯಲ್ಲಿ ಒಬ್ಬ ಸ್ವಾಮಿಯಿಂದ ಕಲಿತದ್ದು ಈ ವಿದ್ಯೆ. ಅದೀಗ ಮರಿಯಮ್ಮನವರಿಗೆ ಮುಂದುವರಿದಿದೆ. ಶಿವಮೊಗ್ಗದ ಕಡೆ ಕಾಡುಗಳನ್ನು ಹೊಕ್ಕು ಗಿಡಮೂಲಿಕೆ ಬೇರನ್ನು ತರುತ್ತಿದ್ದಳು, ಆ ಬೇರನ್ನು ಗಾಯಾಳುಗಳು ತಂದ ನಿಂಬೆ ಹಣ್ಣಿನ ರಸದಲ್ಲಿ ತೇಯ್ದು, ಲೇಹ್ಯವನ್ನು ಹಿಂಡಿದ ಹೋಳುಗಳಿಗೆ ಸವರಿ ಅವುಗಳನ್ನು ನೆಕ್ಕಿಸುತ್ತಾಳೆ. ಸಾಧು ಪ್ರಾಣಿಗಳ ಕಡಿತಕ್ಕೆ ಇದಾಯಿತು. ಇನ್ನು ಹುಚ್ಚು ಹಿಡಿದ ಪ್ರಾಣಿಗಳು ವಿಷ ಜಂತುಗಳು ಕಚ್ಚಿದ್ದಕ್ಕೆ ಈಕೆಯೇ ತಯಾರಿಸುವ ಕಪ್ಪನೆಯ ಗುಳುಗೆಗಳನ್ನು ತೇಯ್ದು ಅದನ್ನು ಕೊಡುತ್ತಾಳೆ, ಕೆಲವರಿಗೆ ಎರಡು ನಿಂಬೆ ಹಣ್ಣು ಕೆಲವರಿಗೆ ಹತ್ತು, ಇಪ್ಪತ್ತು ಅವರವರ ಗಾಯವನ್ನು ಅವಲಂಬಿಸಿ ಕಪ್ಪನೆಯ ಗುಳಿಗೆಗಳನ್ನು ಆಕೆ ತರುವ ಬೇರನ್ನು ಕುಟ್ಟಿ ಪುಡಿ ಮಾಡಿ ಇಂಗಳ ಹಣ್ಣನ್ನು ಚೆನ್ನಾಗಿ ತೇಯ್ದು ಅದಕ್ಕೆ ಪುಡಿ ಮಾಡಿದ ಬೇರನ್ನು ಸೇರಿಸಿ ಚೆನ್ನಾಗಿ ಕುಟ್ಟಿದರೆ ಒಂದು ತೆರನ ಮೇಣ ತಯಾರಾಗುತ್ತದೆ. ಅದನ್ನು ಗಾಯಕ್ಕೆ ಹಚ್ಚುತ್ತಾಳೆ.

ಮಕ್ಕಳು ಮನೋರಂಜನೆ ಕಾಲಂನಲ್ಲಿ ಪ್ರಾಣಿಕಥೆಗಳು ಇರುತ್ತವೆ.

ಉದಾ : ತಬ್ಬಲಿಯಾದ ಮರಿ ಜಿಂಕೆ[೨೮]

ಒಂದು ಕಾಡಿನಲ್ಲಿ ಒಂದು ಹೆಣ್ಣು ಜಿಂಕೆ ವಾಸಿಸುತ್ತಿತ್ತು. ಅದರ ಹೊಟ್ಟೆಯಲ್ಲಿ ಪಾಪು ಇತ್ತು. ಗರ್ಭಿಣಿ ಜಿಂಕೆ ಪ್ರತಿ ದಿನ ಸುತ್ತು ಬೆಳೆದಿದ್ದ ಹುಲ್ಲುಗಳನ್ನು ತಿಂದು ಕಾಡಿನ ಪಕ್ಕದಲ್ಲಿಯೇ ಹರಿಯುತ್ತಿದ್ದ ನದಿಯ ಬಳಿ ಬಂದು ನೀರು ಕುಡಿಯುತ್ತಿತ್ತು. ಆ ನದಿಯ ಹತ್ತಿರ ಕೆಲವು ಕಾಡು ಮನುಷ್ಯರು ಗುಡಿಸಲು ಕಟ್ಟಿಕೊಂಡಿದ್ದರು. ಆ ಮಾನವರ ಬಗ್ಗೆ ಜಿಂಕೆ ಸದಾ ಜಾಗ್ರತವಾಗಿಯೇ ಇರುತ್ತಿತ್ತು. ಅವರ ಗುಡಿಸಲುಗಳ ಹತ್ತಿರ ಹೋಗದೆ ಬಹುದೂರಗಲ್ಲಿಯೇ ಇದ್ದು ನೀರನ್ನು ಕುಡಿದು ಹೊರಟು ಹೋಗುತ್ತಿತ್ತು. ಸ್ವಲ್ಪ ಕಾಲವಾದ ಬಳಿಕ ಜಿಂಕೆಯ ಹೊಟ್ಟೆಯೊಳಗಿಂದ ಈ ಮರಿ ಈಚೆ ಬಂದಿತು. ತಿಳಿ ಕನಕಾಂಬರ ಹೂವಿನ ಬಣ್ಣದಿಂದ ಕೂಡಿದ ಮುದ್ದಾದ ಮಗುವಾಗಿತ್ತು. ತಾಯಿ ಜಿಂಕೆ ತನ್ನ ಕಂದನನ್ನ ಕಣ್ತುಂಬಾ ನೋಡಿ ಅದರ ಮೈಯನ್ನು ನೆಕ್ಕಿತು. ತಾಯಿ ಪ್ರೀತಿಯ ಸ್ಪರ್ಶಕ್ಕೆ ಪುಳಕಿತವಾಗಿ ಮರಿ ಚೈತನ್ಯಗೊಂಡಿತು. ಎದ್ದು ನಿಲ್ಲಲ್ಲು ಪ್ರಯತ್ನಿಸುತ್ತಿತ್ತು. ನಡೆದಾಡಲು ಹೆಜ್ಜೆ ಇಟ್ಟರೆ ಕೆಳಕ್ಕೆ ಬೀಳುತ್ತಿತ್ತು. ಸ್ವಲ್ಪ ಸಮಯ ಹೀಗೆಯೇ ನಡೆಯಿತು. ನಂತರ ಎದ್ದು ನಿಂತು ಅಮ್ಮನ ಬಳಿ ಬಂದು ಹಾಲು ಕುಡಿಯಿತು. ಮರಿಗೆ ನಡೆದಾಡಲು ಹೆಚ್ಚು ಶಕ್ತಿ ಬರುವುದು ಕೆಲವು ದಿವಸ ಹಿಡಿಯುವುದರಿಂದ ತಾಯಿ ಜಿಂಕೆ ಅದನ್ನು ಜೋಪಾನವಾಗಿ ಒಂದು ಗಿಡದ ಪೊದೆಯಲ್ಲಿ ಸುರಕ್ಷಿತವಾಗಿ ಇರಿಸಿತು.

ಜಿಂಕೆ ಪ್ರತಿದಿನ ಆಹಾರ ಸೇವಿಸಿ, ನೀರು ಕುಡಿದು ತನ್ನ ಕಂದ ಇದ್ದ ಜಾಗಕ್ಕೆ ಬಂದು ಹಾಲು ಕುಡಿಸುತ್ತಿತ್ತು ಕ್ರಮೇಣ ಚೇತರಿಕೆ ಆಯಿತು. ಸರಿಯಾಗಿ ಎದ್ದು ನಿಂತು ಓಡಾಡುವಷ್ಟರ ಮಟ್ಟಿಗೆ ಬೆಳೆಯಿತು. ಈಗ ತಾಯಿ ಜಿಂಕೆ ತನ್ನೊಂದಿಗೆ ಮರಿಯನ್ನು ಹೊರಗೆ ಕರೆದುಕೊಂಡು ಹೊರಟಿತು. ಅಮ್ಮನೊಂದಿಗೆ ಪುಟ್ಟಪುಟ್ಟ ಹೆಜ್ಜೆ ಇರಿಸುತ್ತ ನಡೆಯಿತು. ದಾರಿಯಲ್ಲಿ ಕಾಣುವ ಪ್ರತಿಯೊಂದು ವಸ್ತುವನ್ನು ಕುತೂಹಲದಿಂದ ನೋಡುತ್ತಾ ಅಮ್ಮನಿಗೆ ಪ್ರಶ್ನೆ ಮಾಡುತಿತ್ತು. ಮಗು ಕೇಳುತ್ತಿದ್ದ ಪ್ರಶ್ನೆಗಳಿಗೆ ಜಿಂಕೆ ಉತ್ತರಿಸುತ್ತಾ ಬರುತ್ತಿತ್ತು. ಹುಲ್ಲು ತಿಂದ ಮೇಲೆ ತಾಯಿ ಮರಿ ನದಿಯ ಬಳಿ ಬಂದರು. ಮರದ ಬಳಿ ಪೂಜೆ ಮಾಡುತ್ತಿದ್ದನ್ನು ಮರಿಜಿಂಕೆ ಕಂಡು ಅವರು ಯಾರು? ಏನು ಮಾಡುತ್ತಿದ್ದಾರೆ? ಎಂದು ಪ್ರಶ್ನೆ ಮಾಡಿತು. ಅದಕ್ಕೆ ತಾಯಿ ಅವರು ಮನುಷ್ಯರು ಯಾವುದೋ ಪ್ರಾಣಿಯನ್ನು ಬೇಟೆಯಾಡಿ ದೇವರಿಗೆ ಇಟ್ಟು ಪೂಜೆ ಮಾಡುತ್ತಿದ್ದಾರೆ; ಎಂದು ಆ ಶಬ್ದ ಓಡಾಟ ಗಮನಿಸಿ ಉತ್ತರ ನೀಡಿತು.

ಆ ಸ್ಥಳದ ಹತ್ತಿರ ಹೋಗಬೇಕೆಂದು ಮರಿಗೆ ಆಸೆ ಆಯಿತು 'ಬೇಡಮಗು, ಅವರ ಬಳಿ ಹೋಗುವುದು ನಮಗೆ ಅಪಾಯ' ಎಂದು ತಾಯಿ ಎಚ್ಚರಿಸಿದರೂ ಬಿಡದೆ ಜಿಂಕೆ ಮರಿ ಆ ಜಾಗದ ಬಳಿ ಓಡಿತು. ತಾಯಿ ಜಿಂಕೆಯೂ ನಿರ್ವಾಹವಿಲ್ಲದೆ ಅದರ ಹಿಂದಿನಿಂದ ಓಡಿ ಹೋಗಿ ಮರಿಯನ್ನು ಒಂದು ದೊಡ್ಡ ಮರದ ಹಿಂದೆ ನಿಲ್ಲಿಸಿತು. ಸುತ್ತ ಅಗಾಧವಾದ ಬಂಡೆಗಳ ರಾಶಿ ಇದ್ದು ಮಧ್ಯೆ ವಿಶಾಲವಾದ ಸ್ಥಳ ಇತ್ತು. ಅಲ್ಲಿ ನಡೆಯುತ್ತಿದ್ದ ದೃಶ್ಯಗಳನ್ನು ಈ ತಾಯಿ ಮಗು ನೋಡುತ್ತಾ ನಿಂತಿದ್ದರು. ಮಧ್ಯದಲ್ಲಿ ಒಂದು ಎತ್ತರವಾದ ಹೆಣ್ಣು ದೇವತೆಯ ಮಣ್ಣಿನ ಬೊಂಬೆಯನ್ನು ಮಾಡಲಾಗಿತ್ತು. ಅದರ ಮೈಮೇಲೆ ನಾನಾ ರೀತಿಯ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ದೇವತೆಯ ಮುಖದ ಮೇಲೆ ದೊಡ್ಡದಾದ ಕುಂಕುಮ, ವಿಭೂತಿ, ಅರಿಶಿನಗಳನ್ನು ಬಳಿದಿದ್ದರು. ಅಕ್ಕ ಪಕ್ಕದಲ್ಲಿ ಧೂಪದ ಹೊಗೆ ಧುಮಧುಮ ಎಂದು ಏಳುತ್ತಿತ್ತು. ಎದುರಿಗೆ ಒಂದು ಉದ್ದನೆಯ ತ್ರಿಶೂಲವನ್ನು ನೆಟ್ಟಿದ್ದರು. ಅದರ ಕೆಳಗಿನ ಪೀಠದ ಮೇಲೆ ಒಂದು ಪ್ರಾಣಿಯನ್ನು ದೇವತೆಗೆ ಬಲಿಕೊಡಲು ಮಲಗಿಸಿದ್ದರು. ಆ ಪ್ರಾಣಿಗೆ ಕೈಕಾಲುಗಳನ್ನು ನಾರಿನಿಂದ ಕಟ್ಟಿದ್ದರು ಅದು ಬಿಡಿಸಿಕೊಳ್ಳಲು ಒದ್ದಾಡುತ್ತಿತ್ತು.

ಆ ಪ್ರಾಣಿಯ ಅಕ್ಕ ಪಕ್ಕದಲ್ಲಿ ವಿಚಿತ್ರ ವೇಷಧರಿಸಿದ್ದ ಇಬ್ಬರು ಧಡೂತಿ ಮನುಷ್ಯರು ಕೇಕೆ ಹಾಕುತ್ತಾ ಕೈಯಲ್ಲಿದ್ದ ವಿವಿಧ ಬಗೆಯ ಆಯುಧಗಳನ್ನು ಮೇಲಕ್ಕೆ ಕೆಳಕ್ಕೆ ಆಡಿಸುತ್ತಾ ನರ್ತಿಸುತ್ತಿದ್ದರು. ಇದನ್ನು ನೋಡಿದ ಮರಿ ಜಿಂಕೆಗೆ ಆಶ್ಚರ್ಯವಾಯಿತು. 'ಅದ್ಯಾಕಮ್ಮಾ .... ನಮ್ಮ ಬಂಧುವನ್ನು ಹಾಗೆ ಒಡಿದು ಕಟ್ಟಿದ್ದಾರೆ? ಎಂದು ಆ ದೃಶ್ಯದ ಬಗ್ಗೆ ಕುತೂಹಲದಿಂದ ಪ್ರಶ್ನೆ ಮಾಡಿತು. ಅದಕ್ಕೆ ತಾಯಿ 'ಅಲ್ಲಿರುವ ದೇವತೆಗೆ ಬಲಿ ಕೊಡುತ್ತಿದ್ದಾರೆ, ಈ ಹಿಂದೆ ಒಂದು ಸಾರಿ ನಾನು ಮತ್ತು ನಿನ್ನ ಅಪ್ಪ ನೀರು ಕುಡುಯಲು ಬಂದಿದ್ದೆವು. ಆಗ ನನ್ನನ್ನೂ ಹೀಗೆ ಹಿಡಿಯಲು ಬಂದಿದ್ದರೂ. ಆಗ ನೀನು ಇನ್ನೂ ನನ್ನ ಹೊಟ್ಟೆಯಲ್ಲಿ ಇದ್ದೆ. ಬಹಳ ಕಷ್ಟ ಪಟ್ಟು ಹೇಗೋ ತಪ್ಪಿಸಿಕೊಂಡು ಓಡಿಹೋದೆ.

ಆದರೆ ನಿನ್ನ ಅಪ್ಪ ಮಾತ್ರ ಮತ್ತೆ ನನಗೆ ಕಾಣಲೇ ಇಲ್ಲ. ಎಂದು ತನ್ನ ಹಿಂದಿನ ಕತೆಯನ್ನು ಜ್ಞಾಪಿಸಿಕೊಂಡು ಕಣ್ಣಿನಿಂದ ತೊಟ್ಟಿಕ್ಕಿದ ನೀರನ್ನು ಒರೆಸಿಕೊಂಡಿತು. 'ನೀನು ಯಾವಾಗಲೂ ಹುಷಾರಾಗಿರಬೇಕು' ಎಂದು ತಿಳಿಸುತ್ತಿರುವಂತೆಯೇ ಅಲ್ಲಿ ವಿಗ್ರಹದ ಮುಂದಿನ ಪ್ರಾಣಿಯನ್ನು ಕಚಕ್ಕನೆ ಕಡಿದು ಹಾಕಿದ ದೃಶ್ಯ ಮರಿ ಜಿಂಕೆಗೆ ಕಾಣಿಸಿತು. ಅದನ್ನು ನೋಡಲಾಗದೆ ತಾಯಿ ಜಿಂಕೆ ಮತ್ತು ಅದರ ಮರಿ ಹಿಂದಕ್ಕೆ ಓಡಿ ಬಂದವು. ದಾರಿಯಲ್ಲಿ ಬರುವಾಗ 'ಅಮ್ಮಾ ದೇವರಿಗೆ ನಮ್ಮನ್ನು ಯಾಕೆ ಕೊಲ್ಲ ಬೇಕು? ಅದು ದೇವತೆಗೆ ಇಷ್ಟಾನ? ಎಂದು ಮುಗ್ದವಾಗಿ ಮರಿ ಜಿಂಕೆ ಅಮ್ಮ ನನ್ನು ಕೇಳಿತು.

ಈ ಪ್ರಶ್ನೆಗೆ ಏನು ಉತ್ತರ ಕೊಡಬೇಕು ಎಂಬುದು ತಾಯಿಗೆ ತಿಳಿಯದಾಯಿತು.'ಗೊತ್ತಿಲ್ಲ ಮಗು' ಎಂದಷ್ಟೇ ಹೇಳಿ ನದಿಯ ನೀರನ್ನು ಕುಡಿದು ತಮ್ಮ ಜಾಗಕ್ಕೆ ವಾಪಸ್ಸು ಕರೆದುಕೊಂಡು ಬಂದಿತು. ಮಾರನೆಯ ದಿನ ಎಂದಿನಂತೆ ತಾಯಿ, ಮಗು ಇಬ್ಬರು ಆಹಾರ ಸೇವಿಸಲು ದಟ್ಟವಾಗಿ ಬೆಳೆದಿದ್ದ ಹುಲ್ಲು ಪ್ರದೇಶಕ್ಕೆ ಬಂದವು. ಹೊಟ್ಟೆ ತುಂಬಾ ಹುಲ್ಲನ್ನು ತಿಂದವು. ನಂತರ ನೀರು ಕುಡಿಯಲೆಂದು ನದಿತೀರಕ್ಕೆ ಬಂದವು. ಇನ್ನೇನು ನೀರು ಕುಡಿಯಬೇಕು. ಎನಿಸುವಷ್ಟರಲ್ಲಿ ಹಿಂದಿನಿಂದ ಮನುಷ್ಯರ ಆರ್ಭಟ ಕೇಳಿ ಬಂತು. ತಕ್ಷಣ ತಾಯಿ ಜಿಂಕೆ ಮರಿಗೆ ಎಚ್ಚರಿಕೆ ಕೊಟ್ಟು ಓಡಲು ಹೇಳಿತು. ಓಡು ..... ಓಡು ಎಂದಷ್ಟೆ ಶಬ್ದ ಕಿವಿ ಮೇಲೆ ಬೀಳಿಸಿ ಕೊಳ್ಳುತ್ತಿದ್ದ ಮರಿ ಜಿಂಕೆ ತುಂಬಾದೂರ ಓಡಿತು, ಮರದ ಸಂಧಿಗಳಿಂದ ನೆಗೆತ ನೆಗೆಯುತ್ತಾ ಓಡಿ ಬಂದು ಬಿಟ್ಟಿತು. ಅಮ್ಮ ಇರಿಸಿದ್ದ ಸ್ಥಳಕ್ಕೆ ಬಂದು ನಿಂತು ದಣಿವು ಆರಿಸಿಕೊಂಡ ನಂತರ ಮೆಲ್ಲನೆ ಹಿಂದೆ ತಿರುಗಿನೋಡಿತು ಅಲ್ಲಿ ಅಮ್ಮ ಇರಲಿಲ್ಲ ಸುತ್ತಮುತ್ತ ಎಲ್ಲಿಯೂ ಕಂಡುಬರಲಿಲ್ಲ ಭಯ ಪಡುತ್ತಲೇ ಅಷ್ಟು ದೂರ ಒಂದಕ್ಕೆ ಬಂದು ಹುಡಕಾಡಿತು. ಆದರೆ ಎಲ್ಲಿಯೂ ಅಮ್ಮನ ಸುಳಿವು ದೊರೆಯಲಿಲ್ಲ. ಅಮ್ಮನನ್ನು ಕೂಗಿ ಕರೆಯಿತು. ಹ್ಲೂ ..... ಹೂ ಅಮ್ಮನಿಂದ ಯಾವ ಶಬ್ದವೂ ಬರಲಿಲ್ಲ. ಸಂಜೆಯ ಸೂರ್ಯಮುಳುಗುತಲಿದ್ದ. ಕಾಡೆಲ್ಲ ನಿಶಬ್ದವಾದ ವಾತಾವರಣ ಮರಿ ಜಿಂಕೆ ಈಗ ಬಂದಾಳು ಎಂದು ನಿರೀಕ್ಷೆ ಮಾಡುತ್ತಲೇ ಇತ್ತು. ರಾತ್ರಿಯಾಗಿ ಚಂದ್ರನ ಬೆಳದಿಂಗಳು ಮರಗಳ ಮರೆಯಿಂದ ಕಾಣಿಸಿತು. ಈಗ ಮರಿ ಜಿಂಕೆಗೆ ನಿಜವಾಗಿಯೂ ಏಕಾನತೆಯ ಭಯ ಆವರಿಸತೊಡಗಿತು.

ಒಂದಿನ ದಿನ ನೋಡಿದ್ದ ಆ ಮನುಷ್ಯರ ಪೂಜೆಯ ಚಿತ್ರ ಕಣ್ಣುಮುಂದೆ ಬಂದಂತಾಯಿತು. ಬೆಚ್ಚಿ, ನನ್ನ ಅಮ್ಮನೂ ಬಲಿಯಾಗಿರಬಹುದೆ ಎಂದೆನ್ನುತ್ತಾ ' ಓ ...... ದೇವರೆ ನನ್ನ ಅಮ್ಮ ಯಾರಿಗೆ ಏನು ತೊಂದರೆ ಮಾಡಿದಳು ? ಅವಳನ್ನೇಕೆ ನನ್ನಿಂದ ದೂರಮಾಡಿದೆ .....? ಎಂದು ಒಂಟಿಯಾಗಿ ಕಣ್ಣೀರು ಸುರಿಸಿತು.

ಕನ್ನಡ ಪ್ರಭ

ಪ್ರತಿಬಿಂಬ : ಇಲ್ಲಿ ಕಲ್ಪನಾ ಚಮತ್ಕಾರಗಳಲ್ಲಿ ಸ್ವಲ್ಪ ಅತಿಶಯೋಕ್ತಿ ಎಂಬಂತೆ ಅಸಂಭಾವ್ಯತೆಗಳು ಸೃಷ್ಟಿಯಾಗುತ್ತಿರುತ್ತವೆ. ಕ್ಷಣ ಮಾತ್ರ ವಿನೋದಗಳಿದ್ದು ವರ್ತಮಾನವೊಂದನ್ನು ಕುರಿತಂತೆ ವ್ಯಂಗ್ಯವಾಗಿ ಹಾಸ್ಯ ಮಾಡಲಾಗುತ್ತೆ.

ವೈ - ಫಲ, ಗೂಫ : ಈ ಕಾಲಂನಲ್ಲಿ ಬರಹವಿಲ್ಲದೆ ಕೇವಲ ತಮಾಷೆ ಎನಿಸುವ ಚಿತ್ರಗಳಿರುತ್ತವೆ.

TIMES OF INDIA [೨೯]

You said it : ಇಲ್ಲಿ ಹಾಸ್ಯ ಭರಿತವಾದ ವಕ್ತಿ ಚಿತ್ರ ಮತ್ತು ಬರಹಗಳಿರುತ್ತವೆ.

ಉದಾ : ಅಧಿಕಾರಿಯೊಬ್ಬರು ತನ್ನ ಮೇಲಿನ ಅಧಿಕಾರಿಯೊಬ್ಬರಿಗೆ 'ಬರ'ದ ಬಗ್ಗೆ ನಕ್ಷೆಯನ್ನು ತೋರಿಸುತ್ತಾ ವಿವರಿಸುತ್ತಿರುವುದು.

I toured all drought areas sir,
The people there want only food, Not water
they have got used to not havings it they says,

DUBY MAN : ಇಲ್ಲಿ ವಿಷಯವೊಂದನ್ನು ತನಿಖೆ ಮಾಡುವ ರೀತಿಯಲ್ಲಿದ್ದು ದಿನಾಲು ಕಂತುಗಳ ರೂಪದಲ್ಲಿ ನಾಲ್ಕು ಚಿತ್ರಗಳನ್ನು ಕೊಟ್ಟು ಆ ಚಿತ್ರಗಳಿಂದಲೇ ಮಾತುಗಳನ್ನು ಸೃಷ್ಟಿಸಿ ರಹಸ್ಯವಾದ ನೋಂದನ್ನು ಹೇಳುವ ರೀತಿ ಚಿತ್ರಿಸಿರುವುದು.

INDIAN EXPRESS

Business As usual : ಈ ಕಾಲದಲ್ಲಿ ರಾಷ್ಟ್ರದ ಪ್ರಸ್ತುತತೆಯ ಬಗ್ಗೆ ತಾತ್ಕಾಲಿಕ ಘಟನೆಗಳ ಬಗ್ಗೆ ಹಾಸ್ಯಮಯವಾಗಿ ಚಿತ್ರಿತವಾಗಿರುತ್ತದೆ.

ಉದಾ : ಜಸ್ವಂತ್‌ಸಿಂಗ್ 2003 ರ ಬಜೆಟ್ ಮಂಡನೆ ಮಾಡುವ ರೀತಿಯಲ್ಲಿ

ಅವನ ವ್ಯಂಗ್ಯ ಚಿತ್ರ ಕೊಟ್ಟು ಕೆಳಗೆ ಈ ರೀತಿಯಾಗಿ ಬರಹವಿರುವುದು

Where the budget coulinues look as good is a matter nurelu relative.

DECCAN HEARLD ೨೬

MR. CITIZEN : ಇಲ್ಲಿ ಮಂತ್ರಿ ಮಹೋದಯರ ಹೇಳಿಕೆಗಳು ಗೇಲಿಗೆ ಒಳಪಟ್ಟಿರುತ್ತವೆ.

Yet another international women's
day has come and gone although some
Speaches run through the night.

Comics : ಈ ಕಾಲಂದಲ್ಲಿ TORZZENನ ದಂತ ಕಥೆಗಳನ್ನು ಕಂತುಗಳ ರೂಪದಲ್ಲಿ ದಿನಾಲು ನಾಲ್ಕು ವ್ಯಂಗ್ಯ ಚಿತ್ರ ಮತ್ತು ಬರಹಗಳಿರುತ್ತವೆ.

BLODE, PENANUTS, HAGR, The Horrible mise and mally. ಇವೆಲ್ಲಾ ಪೌರಣಿಕ ಇಲ್ಲವೇ ಸಮಾಕಾಲೀನ ವಿಷಯಗಳ ವ್ಯಂಗ್ಯ ಚಿತ್ರಗಳ ಸಮೇತ ಬರಹಗಳಿರುತ್ತವೆ.

ಹೀಗೆ ಎಲ್ಲಾ ಪತ್ರಿಕೆಗಳನ್ನು ಗಮನಿಸಿದಾಗ, ದಿನಾಲೂ ಬರುವ ಮತ್ತು ವಾರಕ್ಕೊಮ್ಮೆ ಬರುವ ಸಾಪ್ತಾಹಿಕಗಳು ಜಾನಪದ ಕಲಾವಿದರ, ಕ್ರೀಡೆಗಳ, ಜನಪದ ರಂಗಭೂಮಿಗಳ ಮತ್ತು ಹಳ್ಳಿಯಲ್ಲಿ ಅಜ್ಞಾತವಾಗಿ ಉಳಿದ ಜಾನಪದ ಕಲಾವಿದರನ್ನು ಪರಿಚಯಿಸುವ ಬರಹಗಳಿರುತ್ತವೆ; ಕಥೆಗಳಿರುತ್ತವೆ.

೪.೧.೨ ನಿಯತಕಾಲಿಕಗಳು

ಪತ್ರಿಕೋದ್ಯಮ ಎಂದರೆ ಸಾಮಾನ್ಯವಾಗಿ ದಿನಪತ್ರಿಕೆಗಳು ಎಂದು ತಪ್ಪಾಗಿ ತಿಳಿಯುವುದೆ ಹೆಚ್ಚು, ಇದು ಪತ್ರಿಕೊದ್ಯಮದ ಒಂದು ಭಾಗವಷ್ಟೆ, ನಿಯತಕಾಲಿಕಗಳು ನಿಗದಿತ ಅವಧಿಯೊಳಗೆ (ವಾರ, ಪಾಕ್ಷಕ, ತ್ರೈಮಾಸಿಕ) ಬರುವಂತಹವು. ದಿನ ಪತ್ರಿಕೆಗಳು ಪ್ರಚಲಿತ ಘಟನೆಗಳನ್ನು ವರದಿ ರೂಪವಾಗಿ ಸಿದ್ದಪಡಿಸಿದರೆ, ನಿಯತಕಾಲಿಕೆಗಳು ಯಾವುದೇ ಘಟನೆಯ ಹಲವು ಮಗ್ಗಲುಗಳನ್ನು ಸತ್ಯಾಸತ್ಯಗಳನ್ನು ತುಲನೆ ಮಾಡಿದ ವಿಮರ್ಶನ ರೂಪದಲ್ಲಿ ಬರಹಗಳಿರುತ್ತವೆ. ನಿಯತಕಾಲಿಕಗಳಲ್ಲಿ ಪ್ರಾಚೀನ ಜಾನಪದ ಪ್ರಕಾರಗಳನ್ನು ಕೆದಕುವುದು ಅಸಾಧ್ಯ. ಮನುಷ್ಯನ ಜೀವನ ವಿಧಾನಗಳು ಬದಲಾದಂತೆಲ್ಲಾ ಅಭಿರುಚಿಗಳು ಅಪೇಕ್ಷೆಗಳು ಬದಲಾಗುತ್ತವೆ. ಜಾನಪದವೂ ಸಹ ಜನ ಸಾಮಾನ್ಯರ ವಿಚಾರ ವರ್ತನೆಗಳಿಗೆ ತಕ್ಕಂತೆ ಆಕೃತಿ ಮತ್ತು ತಂತ್ರಸ್ವರೂಪದಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆಗಳಾಗಿರುತ್ತವೆ. ಪ್ರಾಚೀನ ಶಾಬ್ದಿಕ ಜಾನಪದ ಪ್ರಕಾರಗಳಾದ ಕತೆ, ಗಾದೆ, ಒಗಟು, ವಿನೋದಗಳ ಸೃಷ್ಟಿಕ್ರಿಯೆ ನಿಂತದೆಯೇ? ಇವು ಹೊಸತನವನ್ನು ಪಡೆಯುತ್ತಿಲ್ಲವೇ? ಪಡೆದಿದ್ದಾದರೆ ಯಾವ ತರದವು? ಈ ಎಲ್ಲಾ ಪ್ರಶ್ನೆಗಳು ಇಂದು ಜಾನಪದ ವಿದ್ವಾಂಸರಿಗೆ ಸವಾಲುಗಳಾಗಿವೆ.

ಅವಿಭಕ್ತ ಕುಟುಂಬದ ಪ್ರತಿಯೊಂದು ಮನೆಯು ಸಹ ಶಾಬ್ದಿಕ ಜಾನಪದ ಗಣಿಯಾಗಿತ್ತು.

[illegible]

[illegible]

[illegible]

[illegible]

[illegible]

[illegible]

ಅಜ್ಜಿತಾತಂದಿರಿಂದ ರಾತ್ರಿ ಸಮಯದಲ್ಲಿ ಮೊಮ್ಮಕ್ಕಳನ್ನು ಕೂರಿಸಿಕೊಂಡು ರಾಜರಾಣಿಯರ ಕಥೆಗಳು, ಒಗಟುಗಳು, ಹಾಸ್ಯಭರಿತ ಕಥೆಗಳನ್ನು ಹೇಳುತ್ತಿದ್ದರು. ಈ ಪ್ರಕ್ರಿಯೆ ಜಾನಪದದ ಪುನರ್ ಪ್ರಯೋಗದ ಪ್ರಯೋಗಾಲಯಗಳಾಗಿದ್ದವು. ಆದರೆ ಇಂದು ಈ ವಾತಾವರಣವನ್ನು ಕಾಣಲು ಸಾಧ್ಯವಿಲ್ಲ. ಅವಿಭಕ್ತ ಕುಟುಂಬದ ನಾಶದೊಂದಿಗೆ ಇಂತಹ ವಾತಾವರಣವು ಅವನತಿಯ ಸ್ಥಿತಿ ತಲುಪಿತು. ಇಂತಹವುಗಳೆಲ್ಲ ತಿರುವು ಪಡೆದುಕೊಳ್ಳುವುದೇ ಬದಲಾದ ಜೀವನ ಕ್ರಮದಿಂದ ಅಕ್ಷರ ವಂಚಿತ ಸಮುದಾಯವು ಅಕ್ಷರ ಜ್ಞಾನಕ್ಕೆ ತಮ್ಮನ್ನು ತಾವು ತೆರೆದುಕೊಂಡಾಗ ಅವರ ಶ್ರಮ ಸಂಸ್ಕೃತಿ ಉತ್ಪನ್ನವಾದ ಜಾನಪದವು ಬದಲಾವಣೆಗೊಳ್ಳುತ್ತದೆ. ಆದರೆ ನಾಶವಾಗುವುದಿಲ್ಲ. ಅದೊಂದು ಜೀವಂತ ಪಳೆಯುಳಿಕೆಯೆಂದು ಪೀಟರ್ ಹೇಳಿದ್ದಾರೆ. ಇಂತಹ ಬದಲಾವಣೆಯ ಸ್ಥಿತಿಯಲ್ಲಿ ಜಾನಪದವು ನಿಧಾನಗತಿಯಲ್ಲಿ ಅಕ್ಷರ ಸಮುದಾಯದೊಡನೆ ಹೊಂದಾಣಿಕೆ ಮಾಡಿಕೊಳ್ಳತ್ತದೆ. ಇಂತಹ ಹೊಂದಾಣಿಕೆಯ ಪ್ರಕ್ರಿಯೆಯನ್ನು ಗುರುತಿಸುವುದು ಜಾನಪದ ವಿದ್ವಾಂಸರ ಕರ್ತವ್ಯವಾಗಿದೆ.

ಜಾನಪದದ ವಿವಿಧ ಮುಖಗಳು ನಿಯತಕಾಲಿಕಗಳಲ್ಲಿ ಹೇಗೆ ಅಭಿವ್ಯಕ್ತವಾಗಿದೆ. ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಸುಧಾ (ಮಾರ್ಚ್, ೬, ೨೦೦೩)

ಇದೊಂದು ಕರ್ನಾಟಕ ವಾರ ಪತ್ರಿಕೆ. ಇಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಮತ್ತು ಭಾರತ-ದೇಶ - ವಿದೇಶಗಳ ವಿಷಯಗಳನ್ನು ಗಮನಿಸುತ್ತದೆ. ಇದರಲ್ಲಿ ಬರುವ ಕೆಲವೊಂದು ಜಾನಪದದ ವಿವಿಧ ಮುಖಗಳನ್ನು ಕೆಳಗಿನ ರೀತಿಯಲ್ಲಿ ಕಾಣಬಹುದು.

ನೀವು ಕೇಳಿದಿರಿ : ಇಲ್ಲಿ ಓದುಗರಿಂದ ಪ್ರಶ್ನೆಗಳು ಇರುತ್ತದೆ, ಈ ಪ್ರಶ್ನೆಗಳು ರಾಜಕೀಯ, ಸಾಹಿತ್ಯ, ಹಾಸ್ಯ, ಗಂಭೀರತೆ, ಸಮಸ್ಯೆಗಳು, ಕಾಮಬರಹ, ಲೈಂಗಿಕತೆಗಳ ಬಗ್ಗೆ ಪ್ರಶ್ನೆಗಳು ಇರುತ್ತವೆ. ಅದೇ ರೀತಿ ಪತ್ರಿಕೆ ಕಡೆಯಿಂದ ತೀಕ್ಷ್ಣವಾದ ಉತ್ತರವೂ ಇರುತ್ತದೆ.

ಉದಾ : ಆಶ್ವಾಸನೆಯೇ ರಾಜಕಾರಣಿಗಳ ಬಂಡವಾಳವೇ ವೃಶ್ಚಿಕ?
ಹೌದು। ನೀವು ಅದನ್ನೇ ಉಂಡು, ಕುಡಿದು, ಹಾಸಿ
ಹೊದೆದು ಮಲಗಬೇಕು.

ವ್ಯಂಗ್ಯರಂಗ : ಈ ಕಾಲಂನಲ್ಲಿ ವ್ಯಂಗ್ಯ ಚಿತ್ರಗಳೊಂದಿಗೆ ಬರಹಗಳಿದ್ದು, ಸಮಾಜದ ಅನೈತಿಕತೆಯನ್ನು ತಿದ್ದುವ, ಮೌಲ್ಯಗಳನ್ನು ಸಾರಿಹೇಳುವ ಮತ್ತು ಸಾಮಾಜಿಕ ಕಂಟಕ ವರ್ತನೆಗಳನ್ನು ಬಿಚ್ಚಿಡುತ್ತದೆ.

ಉದಾ: ಇವತ್ತಿನ ಕ್ರಿಕೆಟ್ ಆಟ 'ತೀರ ಸಪ್ಪೆ' ಯಾಗಿತ್ತು. ಒಂದೂ ಮನೆಯ ಕಿಟಿಕಿ ಗಾಜುಗಳು ಒಡೆದಿಲ್ಲವಲ್ಲಾ ! (ಕ್ರಿಕೆಟ್ ದುರಭಿಮಾನದ ಬಗ್ಗೆ)

ಕಾಡಹರಟೆಗಳು : ಇವು ಈ ಪತ್ರಿಕೆಯಲ್ಲಿ ಅಲ್ಲಲ್ಲಿ ಕಂಡು ಬರುತ್ತಿದ್ದು. ಸಾಮಾನ್ಯವಾಗಿ ಒಂದು ಪತ್ರಿಕೆಯಲ್ಲಿ ಹದಿನೈದರಿಂದ ಇಪ್ಪತ್ತರವರೆಗೆ ಕಾಣಬರುತ್ತವೆ. ಬರಹದೊಂದಿಗೆ ವ್ಯಂಗ್ಯ ಚಿತ್ರಗಳು ಇರುತ್ತವೆ.

ಉದಾ : ದುಬಾರಿ ದೂರವಾಣಿಯ ಬಗ್ಗೆ ಪ್ರತಿಕ್ರಿಯಿಸುತ್ತಾ .... ಇನ್ಮುಂದೆ ನಾವು ಫೋನಿನಲ್ಲಿ ಮಾತಾಡಿದ್ರೆ ನಮ್ಮ ಮಾತಿಗೆ 'ಬೆಲೆ' ಎಷ್ಟು ಎಂದು ಗೊತ್ತಾಗುತ್ತೆ.

ನಗೆಹೊನಲು : ಈ ಕಾಲಂನಲ್ಲಿ ಹಾಸ್ಯವನ್ನು ಪ್ರಧಾನವಾಗಿ ಇಟ್ಟುಕೊಂಡು ಮೂವತ್ತು ನಲವತ್ತು ಪದಗಳಲ್ಲಿ ಹಾಸ್ಯಭರಿತವಾದ ಚುಟುಕ ಇರುತ್ತದೆ.

ಉದಾ : ಪ್ರೊಫೆಸರ್ ಪಾಠ ಮಾಡುತ್ತಾ "ಹಿಂದಿನ ಕಾಲದಲ್ಲಿ ಅಪರಾಧಿಗಳಿಗೆ ಶಿಕ್ಷೆ ಬಹಳ ಕಠಿಣವಾಗಿರುತ್ತಿತ್ತು. ಉದಾಹರಣೆಗೆ ಒಂದು ಕೋಳಿ ಕದ್ದರೆ ಅಪರಾಧಿಯ ಒಂದು ಕೈ ಕತ್ತರಿಸಿ ಬಿಡ್ತಾ ಇದ್ದರು." ಎಂದು ಹೇಳಿದರು "ಎರಡನೆಯಸಲ ಕದ್ದರೆ' ವಿದ್ಯಾರ್ಥಿಯೊಬ್ಬ ಕೇಳಿದ.

ಪ್ರೊಫೆಸರ್ : ಎರಡನೆಯ ಸಲಕದ್ದರೆ ಇನ್ನೊಂದು ಕೈಯನ್ನು ಕತ್ತರಿಸಿ ಬಿಡ್ತಾ ಇದ್ದರು ಅವನೇನಾದರೂ ಮೂರನೇ ಸಲ ಕೋಳಿ ಕದ್ದರೆ ಅವನ ತಲೆನೇ ಕತ್ತರಿಸಿ ಹಾಕುತ್ತಿದ್ದರು." ಎಂದು ಹೇಳಿದರು.

'ಅದು ಹೇಗೆ ಸಾರ್' ಗುಂಡಕೇಳಿದ

ಹೇಗೆ ಅಂತೆ ಹೇಗೆ ತಲೆಕತ್ತರಿಸಕಾಗಲ್ಲಾಂತೇನ್ರಿ ನಿಮ್ಮ ಅಭಿಪ್ರಾಯ ಪ್ರೊಫೆಸರು ಕಿಡಿಕಾರಿದರು.

ಅದಲ್ಲಾ ಸಾರ್, ತಲೆಯೇನೋ ಯಾರು ಬೇಕಾದರೂ ಕತ್ತರಿಸಿ ಬಿಸಾಕಬಹುದು ಗುಂಡ ಹೇಳಿದ.

ಎರಡೂ ಕೈ ಇಲ್ಲದೆ ಇರುವವನು ಕೋಳಿ ಕದಿಯೋಕೆ ಹೇಗೆ ಸಾಧ್ಯ ಅಂತ!

ಕರ್ಮವೀರ

ಉತ್ತರ : ಇದರಲ್ಲಿ ಓದುಗರಿಂದ ತುಂಟ ಪ್ರಶ್ನೆಗಳಿರುತ್ತವೆ. ಹಾಗೆ ಗಂಭೀರವಾಗಿ ಆಲೋಚಿಸುವ ಬರಹಗಳು ಮತ್ತು ಕಾಮಪ್ರೇಮ ಪ್ರಚೋದಿಹ ಬರಹಗಳು ಇರುತ್ತವೆ.

ಉದಾ: ಅವಳ ಜಡೆ ಹಾವಿನಹೆಡೆ ಹೋಲಿಕೆ ಸರಿಯಾ ಗುರೂ?
ಹತ್ತಿರ ಹೋದಿರಾ ಜೋಕೆ.

ಕಲೆ : ಈ ಕಾಲಂನಲ್ಲಿ ಕರ್ನಾಟಕದಲ್ಲಿರುವ ಜಾನಪದ ಅಜ್ಞಾತ ಕಲಾವಿದರ ಬಗ್ಗೆ ಮತ್ತು ಕಲೆಗಳ ಬಗ್ಗೆ ಲೇಖನಗಳಿರುತ್ತವೆ. ಹಾಗೆ ಯಾವುದಾದರೂ ಜನಪದ ಸಂಪ್ರದಾಯ ಆಚರಣೆಗೆ ಸಂಬಂಧಪಟ್ಟಂತೆ ಲೇಖನಗಳು ಇರುತ್ತವೆ.

ಉದಾ: ಕಂಬಳ, ಯಕ್ಷಗಾನ, ಗಂಗೆಭಾಷೆ ಮುಂತಾದವು.

ವ್ಯಂಗ್ಯಚಿತ್ರ ಮತ್ತು ಬರಹ: ಇಲ್ಲಿ ಹಾಸ್ಯಮಯವಾದ ಕಾರ್ಟೂನ್ ಚಿತ್ರಗಳಿದ್ದೂ ಹಾಸ್ಯಭರಿತವಾದ ಬರಹಗಳಿರುತ್ತವೆ.

ಉದಾ: ಥೂ ನಿನ್ನಧೈರ್ಯವೇ?

ಪ್ರೇಮಿಗಳ ದಿನದಂದುನೂ ಲವ್ಯೂ ಅಂತ ಹೇಳ್ಲಿಲ್ಲ

(ಪಾರ್ಕಿನಲ್ಲಿ ಹುಡಗಿ ಹುಡಗನನ್ನು ತರಾಟೆಗೆ ತೆಗೆದುಕೊಂಡ ಚಿತ್ರ)

ಮನೆಯ ವೈದ್ಯ ನಿಮಗೆಷ್ಟೊತ್ತು : ಈ ಕಾಲಂನಲ್ಲಿ ಜಾನಪದ ವೈದ್ಯವನ್ನು ಹೇಳುತ್ತಾ ಸಾಮಾನ್ಯ ಖಾಯಿಲೆಗಳಿಗೆ ಮನೆಯಲ್ಲಿ ದೊರೆಯಬಹುದಾದ ತರಕಾರಿ, ಬಾಳೆಹಣ್ಣು ಸೌತೆಕಾಯಿ, ನಿಂಬೆಹಣ್ಣು ಮುಂತಾದವುಗಳಿಂದ ತಮ್ಮ ಆರೋಗ್ಯವನ್ನು ಹೇಗೆ ಇಟ್ಟುಕೊಳ್ಳಬೇಕೆಂದು ವಿವರಣಾತ್ಮಕ ವಿಷಯ ಇರುತ್ತದೆ.

ಹಾಸ್ಯ ಲಾಸ್ಯ : ಪ್ರಸ್ತುತ ಯಾವುದಾದರೂ ವಿಷಯವೊಂದನ್ನು ಎತ್ತಿಕೊಂಡು ಗೇಲಿ ಮಾಡುವ ಲೇಖನ ಇರುತ್ತದೆ. ಗಂಡಹೆಂಡಿರಗುಟ್ಟು, ಪ್ರೀತಿ ವಿಶ್ವಾಸ ಕಾಮಪ್ರೇಮಗಳನ್ನು ಇಟ್ಟುಕೊಂಡು ಹಾಸ್ಯಮಯವಾಗಿ ಚಿತ್ರಿತವಾಗಿರುತ್ತದೆ.

ರುಚಿ ವೈವಿಧ್ಯ : ಈ ಕಾಲಂನಲ್ಲಿ ಜನಪದ ಅಡಿಗೆ ಮತ್ತು ಅದನ್ನು ತಯಾರಿಸುವ ವಿಧಾನವನ್ನು ಹೇಳಿರುತ್ತಾರೆ. ಪ್ರಾದೇಶಿಕ ಭಿನ್ನತೆ ಇರುವ ವಿವಿಧ ರೀತಿಯ ರುಚಿ ರುಚಿಯಾದ ಅಡಿಗೆಯ ಬಗ್ಗೆ ವಿವರಿಸಿ ಜನಾಂಗದಿಂದ ಜನಾಂಗಕ್ಕೆ ಹೇಗೆ ಭಿನ್ನ ಎಂಬುದನ್ನು ನೋಡಬಹುದು. ಈ ರೀತಿ ಜನಪದ ಅಡಿಗೆಯ ಸಂಪೂರ್ಣ ಪರಿಚಯ ಸಿಗುತ್ತದೆ.

ಚಿಲಿಪಿಲಿ : ಈ ಕಾಲಂನಲ್ಲಿ ತೆನಾಲಿ ರಾಮಕೃಷ್ಣನ ಬಗ್ಗೆ ಹುಟ್ಟಿಕೊಂಡ ಚಿಕ್ಕ ಚಿಕ್ಕ ಕಥೆಗಳಿರುತ್ತವೆ. ಇವು ಬುದ್ಧಿವಂತಿಕೆ ಮತ್ತು ಚಾಣಾಕ್ಷತನದಿಂದ ಹೆಣೆದಿರುತ್ತಾರೆ.

ಉದಾ : ನೆರಳಿನ ಬಾಡಿಗೆ (೨೦-೨-೨೦೦೩)

ಶ್ರೀ ಕೃಷ್ಣದೇವರಾಯನ ಬಳಿಗೆ ಒಂದು ಸ್ವಾರಸ್ಯಕರವಾದ ಪ್ರಕರಣ ಬಂದಿತು. ಒಬ್ಬ ಮನುಷ್ಯನು ದೀರ್ಘಪ್ರವಾಸಕ್ಕೆ ಹೋಗುವುದಿತ್ತು. ಅವನು ಒಂದು ಒಂಟೆಯನ್ನು ಬಾಡಿಗೆ ಪಡೆದುಕೊಂಡ. ಪ್ರಯಾಣಕ್ಕೆ ಹೋದಾಗ ಅವನು ಒಂಟೆಯ ನೆರಳಲ್ಲಿ ವಿಶ್ರಮಿಸುತ್ತಿದ್ದ ಒಂಟೆಯ ಒಡೆಯರಿಗೆ ಬಾಡಿಗೆ ಕೊಡಲು ಹೋದಾಗ ಒಂಟೆಯ ಮಾಲೀಕನು ಒಂಟೆಯ ನೆರಳಲ್ಲಿ ವಿಶ್ರಮಿಸಿದ ಬಾಡಿಗೆಯು ಬೇಕೆಂದು ಒತ್ತಾಯ ಮಾಡಿದ ಈ ಪ್ರಕರಣ ತನ್ನ ಬಳಿಗೆ ಬಂದಾಗ ಶ್ರೀಕೃಷ್ಣದೇವರಾಯನು ಆದನ್ನು ಇತ್ಯರ್ಥಗೊಳಿಸುವ ಮಾರ್ಗ ಯೋಚಿಸಬೇಕೆಂದು ತೆನಾಲಿ ರಾಮಕೃಷ್ಣನಿಗೆ ಹೇಳಿದ 'ನಿಮ್ಮವಾದ ಭಾರೀ ಬಲವಾಗಿದೆ' ಎಂದು ರಾಮಕೃಷ್ಣನು ಒಂಟೆಯ ಒಡೆಯನಿಗೆ ಹೇಳುವಾಗ ಅವನು ಬಾರೀ ಖುಷಿಪಟ್ಟು ಆಗ ರಾಮಕೃಷ್ಣನು ಈ ಪ್ರಕರಣ ಇತ್ಯಾರ್ಥಪಡಿಸಲು ಇನ್ನು ಹೆಚ್ಚಿನ ವಿಷಯಬೇಕು ಆ ನೆರಳಿನ ಬಗೆಗೆ ಆ ಸ್ಥಳವನ್ನು ತಿಳಿದುಕೊಳ್ಳಬೇಕಾಗಿದೆ ಕಾರಣ ನೀನು ಹೋಗಿ ಆ ನೆರಳನ್ನು ಹಿಡಿದುಕೊಂಡು ಬಾ' ಎಂದು ಹೇಳಿದ.

ಈ ಮಾತನ್ನು ಕೇಳಿ ಒಂಟೆಯ ಮಾಲೀಕ ಗಲಿಬಿಲಿಗೊಂಡ - ಏನು?

ನಾನು ಆ ನೆರಳನ್ನು ಹಿಡಿದು ತರಬೇಕೆ? ಯಾರಾದರೂ ನೆರಳನ್ನು ಹಿಡಿದು ತರುತ್ತಾರೆಯೇ? ಎಂದು ಕೇಳಿದ. ಹಾಗಿದ್ದರೆ ಆ ಪ್ರಕರಣ ಇತ್ಯರ್ಥವಾಗುವ ಬಗೆ ಹೇಗೆ? ಎಂದು ತೆನಾಲಿ ರಾಮಕೃಷ್ಣನು ಹೋಗು ಆ ನೆಲಳನ್ನು ತೆಗೆದುಕೊಂಡು ಬಾ ತಡಮಾಡಬೇಡ ನಮ್ಮ ಸಮಯವನ್ನು ವ್ಯರ್ಥ ಮಾಡಬೇಡ ಎಂದ ಆ ಮನುಷ್ಯ ನಾಚಿಕೆಯಿಂದ ಹೊರಟು ಹೋದವನು ಮತ್ತೆ ಬರಲೇ ಇಲ್ಲ....

ಮಂಗಳ (೧೨-೩-೨೦೦೩)

ಓದಗರ ಸವಾಲ್ : ಓದುಗರಿಂದ ಪ್ರಶ್ನೆಗಳಿರುತ್ತವೆ. ತುಂಟತನದ ಹಾಸ್ಯಮಯವಾದ ಉತ್ತರಗಳಿರುತ್ತವೆ. ಈ ಕಾಲಂ ಎಲ್ಲ ಪತ್ರಿಕೆಗಳದ್ದು. ಇದು ಒಂದು ರೀತಿ ಜಾನಪದದಲ್ಲಿ ಬರುವ ಸವಾಲ್ ಜವಾಬ್‌ಗಳ ರೀತಿ ಕಂಡು ಬರುತ್ತದೆ.

ಉದಾ : ಯುವಕ ಯುವತಿಯರು ಒಟ್ಟಾಗಿ ಸಿನಿಮಾಕ್ಕೆ ಹೋಗಲು ಕಾರಣವೇನು?
ಕತ್ತಲಲ್ಲಿ ಕೈ ಹಿಡಿದು ಕೂರಬಹುದಾದ ಸ್ಥಳ ಅದೊಂದೆ.

ತಿಮ್ಮಣ್ಣತಿಲೋತ್ತಮೆ ಸಲ್ಲಾಪ : ಈ ಕಾಲಂನಲ್ಲಿ ಗಂಡ ಹೆಂಡತಿಯರಿಬ್ಬರು ಸರಸ ಸಲ್ಲಾಪದಲ್ಲಿ ಇರುವುದನ್ನು ಪ್ರತಿವಾರ ಕೊಡುತ್ತಾರೆ. ಪ್ರತಿಸಲವೂ ಬೇರೆ ಬೇರೆ ವಿಷಯಗಳನ್ನು ಆಯ್ದುಕೊಂಡಿರುತ್ತಾರೆ. ಇದು ಸುಮಾರು ಒಂದು ಪುಟ ಬರಹವಿರುತ್ತದೆ.

ನಗೆ ಸಿಂಚನ : ಇದರಲ್ಲಿ ಹಾಸ್ಯ ಬರಹಗಳನ್ನು ಕಾಣಬಹುದು.

ಉದಾ : ಟೀಚರ್, ಎಲೋ ಗುಂಡ ಅಮೇರಿಕಾ ದೂರವೋ ಚಂದ್ರಲೋಕದೂರವೋ.

ಗುಂಡ : ಅಮೇರಿಕಾ ಟೀಚರ್

ಟೀಚರ್ : ಅಂ! ಅದ್ಹೇಂಗೆ?

ಗುಂಡ : ಚಂದ್ರನನ್ನು ದಿನನಿತ್ಯನೋಡುತ್ತೇವೆ ಆದರೆ ಆಮೇರಿಕಾ ಕಾಣದೇ ಇಲ್ವಲ್ಲಾ ಮೇಡಂ!

ಬಾಲಮಂಗಳ : ಈ ಕಾಲಂನಲ್ಲಿ ಜನಪದ ಕಥೆಯ ದಾಟಿಯಲ್ಲೆ ಕಥೆ ಆರಂಭವಾಗಿ ಕಥಾನಾಯಕ ಹಲವು ಕಷ್ಟನಷ್ಟಗಳನ್ನು ಅನುಭವಿಸಿ ನಂತರ ಕೊನೆಯಲ್ಲಿ ಸುಖಾಂತವಾಗಿ ಕೊನೆಗೊಳ್ಳುವುದು. ಇಂತಹವು ಪ್ರತಿವಾರ ಇದ್ದು ಜನಪದ ಕಥೆಗಳಾದ ಕಿನ್ನರ ಕಥೆಗಳು, ಪ್ರಾಣಿಕಥೆಗಳು, ಮುಂತಾದುವು ಇರುತ್ತವೆ.

ಉದಾ: ಬಾಲವನ ಎಂಬ ಒಂದು ರಾಜ್ಯ ಅಲ್ಲಿ ಬಾಲು ಎಂಬ ಬಡರೈತ ತನ್ನ ಹೆಂಡತಿಯೊಡನೆ ಜೀವನ ಸಾಗಿಸುತ್ತಿದ್ದ. ಅವನ ಹೆಂಡತಿಯ ಹೆಸರು ಸುಶೀಲ ಎಂದಿದ್ದರೂ ಮಹಾಜಗಳಗಂಟಿ. ಆದುದರಿಂದ ಅವಳೊಡನೆ ಯಾರು ಮಾತಾನಾಡುತ್ತಿರಲಿಲ್ಲ, ದಿನ ಬೆಳಗಾದರೆ ಅವಳು ಯಾವುದಾದರೂ ಒಂದು ವಿಷಯವನ್ನು ಹಿಡಿದು ನೆರೆ ಹೊರೆಯವರೊಡನೆ ಮತ್ತು ಗಂಡನೊಡನೆ ಜಗಳ ಮಾಡುತ್ತಿದ್ದಳು. ಅದೊಂದು ದಿನ ಅವಳು ತನಗೊಂದು 'ಮುತ್ತಿನ ಹಾರ' ತರಬೇಕೆಂದು ಗಂಡನಿಗೆ ದುಂಬಾಲು ಬಿದ್ದಳು. ತರದಿದ್ದರೆ ನೀನು ಮನೆಗೆ ಕಾಲಿಡಬೇಡ ಎಂದು ಹೇಳಿದಳು. ಅವನು ಹೇಗೋ ಕಷ್ಟಪಟ್ಟು ಒಂದು 'ಮುತ್ತಿನ ಹಾರ' ಮಾಡಿಸಿಕೊಂಡು ಬಂದನು. ತಾನು ಹೀಗೆ ಇವಳೊಡನೆ ಏನಾದರೂ ತರಲು ಹೇಳಿ ತರದಿದ್ದರೆ ಹೆದರಿಸುವುದು ಅಥವಾ ಜಗಳ ಮಾಡಿದರೆ ಅವನು ಖಂಡಿತ ತಂದು ಕೊಡುವನೆಂದು ಅವಳು ಭಾವಿಸಿದಳು.

ರೈತನು ಎರಡು ಮೂರು ಭಾರಿ ಅವಳ ಬೇಡಿಕೆಗಳನ್ನು ತೀರಿಸಿದನು. ಅದರೆ ಅವಳ ಬೇಡಿಕೆ ದಿನಬೆಳಗಾದರೆ ದೊಡ್ಡದಾಗುತಿತ್ತು. ಅವಳ ಕಾಟ ತಡೆಯಲಾರದೆ ಬಾಲು ಮನೆ ಬಿಟ್ಟ. ಬಾಲುನಡೆದು ನಡೆದು ಒಂದು ಕಾಡಿಗೆ ತಲುಪಿದ ಅಷ್ಟರಲ್ಲಿ ಕತ್ತಲಾಯಿತು. ಅವನು ಆ ರಾತ್ರಿ ಒಂದು ಮರದಡಿಯಲ್ಲಿ ಕಳೆದು ಮರುದಿನ ಬೆಳಿಗ್ಗೆ ಎದ್ದು ಪುನಃ ತನ್ನ ಪ್ರಯಾಣವನ್ನು ಮುಂದುವರೆಸಿದನು. ಅವನು ಹಾಗೆ ನಡೆಯುತ್ತಿರುವಾಗ ಅವನ ಕಾಲಿಗೆ ಏನೋ ತಾಗಿದಂತೆ ಭಾಸವಾಯಿತು. ಏನದು ಎಂದು ನೋಡಲು ಒಂದು ಅಪರೂಪದ ದೊಡ್ಡ ಚಿನ್ನದ ನಾಣ್ಯ. ಅವನು ಅದನ್ನು ತೆಗೆಯಲು ಯತ್ನಿಸಿದಾಗ ಅದು ಒಂದು ಕಿಂಡಿಯ ಬಾಗಿಲೆಂದು ತಿಳಿಯಿತು. ಅವನು ಅದನ್ನು ತೆರೆದಾಗ ಒಂದು ಪ್ರಕಾಶಮಾನವಾದ

ಬೆಳಕಿನೊಂದಿಗೆ ಒಳಗೆ ಹೋಗಲು ಮೆಟ್ಟಿಲುಗಳು ಕಂಡವು ಅವನು ಇಳಿದು ಕೆಳಗೆ ಹೋದ. ಆಗ ಅವನಿಗೆ ಯಾರೋ ಒಬ್ಬರು ಅಳುವ ಧ್ವನಿ ಕೇಳಿತು. ಅವನು ಸ್ವಲ್ಪ ಮುಂದೆ ಹೋಗಿ ಒಂದು ಸಣ್ಣ ತೂತಿನ ಮೂಲಕ ಒಳಗೆ ಏನಾಗುತ್ತದೆ ಎಂದು ನೋಡಿದನು. ಅಲ್ಲಿ ಒಬ್ಬ ಮಾಂತ್ರಿಕನು ಒಬ್ಬ ಮನುಷ್ಯನನ್ನು ಒಂದು ಪಂಜರದಲ್ಲಿ ಕೂಡಿಹಾಕಿದ್ದು, ಅವನ ಕೈಯಲ್ಲಿ ಮಾಂತ್ರಿಕ ಕೋಲೊಂದಿತ್ತು. ಆ ಕೋಲನ್ನು ಕೈಯಲ್ಲಿ ಹಿಡಿದು ಅವನು ಮನಸ್ಸಿನಲ್ಲಿ ಏನನ್ನು ಇಚ್ಚಿಸುತ್ತಾನೋ ಅದರಂತೆ ಆಗುತ್ತಿತ್ತು. ಒಳಗೆ ಮಾಂತ್ರಿಕನು ಆ ಕೋಲನ್ನು ಕೈಯಲ್ಲಿ ಹಿಡಿದು ಪಂಜರದೊಳಗಿರುವ ಮನುಷ್ಯನನ್ನು ಒಂದು ಪಕ್ಷಿಯಂತೆ ಮಾಡಿ ಅದನ್ನು ಇನ್ನೊಂದು ಗೂಡಿಗೆ ಹಾಕಿದನು. ಒಳಗೆ ನಡೆಯುತ್ತಿದ್ದ ದೃಶ್ಯವನ್ನು ನೋಡುತ್ತಿದ್ದ ಬಾಲು ಆ ಮನುಷ್ಯನನ್ನು ಹೇಗಾದರೂ ಉಳಿಸಬೇಕೆಂಬ ಒಂದು ಅವಕಾಶಕ್ಕಾಗಿ ಕಾದುಕುಳಿತನು. ಮಾಂತ್ರಿಕನು ಅವಸರ ಅವಸರವಾಗಿ ಎಲ್ಲಿಗೋ ಹೊರಡುವಾಗ ಅವನು ಮಾಂತ್ರಿಕ ಕೋಲನ್ನು ಮಂಚದ ಮೇಲೆ ಮರೆತನು. ಅದೇ ಅವಕಾಶಕ್ಕಾಗಿ ಕಾದುಕುಳಿತಿದ್ದ ಬಾಲು ಮಾಂತ್ರಿಕ ಕೋಲನ್ನು ತೆಗೆದುಕೊಂಡು ಮಾಂತ್ರಿಕನ ಕಡೆತೋರಿಸಿ ಅವನು ಒಂದು ಇರುವೆಯಾಗಲಿ ಎಂದು ಮನಸ್ಸಿನಲ್ಲಿಯೇ ಹೇಳಿದನು. ಕ್ಷಣಮಾತ್ರದಲ್ಲಿ ಮಾಂತ್ರಿಕ ಒಂದು ಚಿಕ್ಕ ಇರುವೆಯಾಗಿ ಹೋದನು. ಆಗ ಬಾಲು ಬೇಗ ಹೋಗಿ ಆ ಇರುವೆಯನ್ನು ಒಂದ ಬೆಂಕಿಕುಂಡಕ್ಕೆ ಬಿಸಾಡಿದನು. ಒಂದು ಭೀಕರ ಶಬ್ದದೊಂದಿಗೆ ಮಾಂತ್ರಿಕನು ಸುಟ್ಟು ಬೂದಿಯಾದ ಮತ್ತೆ ತಡಮಾಡದೆ ಬಾಲು ಆ ಪಂಜರದಲ್ಲಿದ್ದ ಹಕ್ಕಿಯನ್ನು ನಿಜರೂಪಕ್ಕೆ ತರಿಸಿ ಅವನನ್ನು ಬಿಡುಗಡೆ ಮಾಡಿದ. ಮಂತ್ರ ದಂಡದೊಂದಿಗೆ ಊರಿಗೆ ಹೋದನು.

ಅವನನ್ನು ನೋಡಿದ ತಕ್ಷಣ ಹೆಂಡತಿ ರೋಷದಿಂದ 'ಎಲ್ಲಿ ಹೋಗಿದ್ದೆ ಇಷ್ಟು ದಿವಸ? ಈಗ ಯಾತಕ್ಕೆ ಬಂದೆ? ಎಂದು ಮುಂತಾದ ಪ್ರಶ್ನೆಗಳನ್ನು ಹಾಕಿದಾಗ ಅವನು ಆ ಮಂತ್ರದಂಡವನ್ನು ಅವಳತ್ತ ಚಾಚಿ ತನ್ನ ಮನಸ್ಸಿನಲ್ಲಿ ಹೆಂಡತಿ ಒಳ್ಳೆಯ ಗುಣಗಳನ್ನು ಪಡೆಯಲಿ ಎಂದು ಧ್ಯಾನಿಸಿದ, ಸುಶೀಲ ಹೆಸರಿಗೆ ತಕ್ಕಂತೆ ಸುಶೀಲೆಯೇ ಆದಳು. ಬಾಲುವಿನ ಬಾಳು ಬಂಗಾರವಾಯಿತು.

ಇದುವರೆಗೂ ಪತ್ರಿಕೋದ್ಯಮ ಮತ್ತು ಜಾನಪದಗಳ ಸಂಬಂಧಗಳನ್ನು ನೋಡಿದ್ದೇವೆಯಾದರೂ ಪ್ರಾಚೀನ ಜಾನಪದ ಮತ್ತು ವೈಜ್ಞಾನಿಕ ಸಂಬಂಧಾಂತರಗಳನ್ನು ಅವಲೋಕನ ಮಾಡಿಕೊಂಡು ವಿಷಯಕ್ಕೊಂದು ಖಚಿತತೆಯನ್ನು ಪಡೆದುಕೊಳ್ಳಬಹುದು. ವಿನೋದವೆಂಬುದು ಮನುಷ್ಯನಲ್ಲಿ ಸುಖಮಯವಾದ ಕ್ಷಣಗಳನ್ನು ಉಂಟು ಮಾಡುತ್ತದೆ. ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಒಳಶುಂಠಿ ಗರಂಗರಮಾ, ಪಂಚ್, ಲಾಸ್ಟ್‌ಪೇಗ್, ಟಿಂಗರಬುಡ್ಡಣ್ಣ, ಚಿನಕುರಳಿ, ಕೊನೆ ಹನಿ ಬರೆಹ ಮತ್ತು ಕಾರ್ಟೂನ್ ಮತ್ತು ವ್ಯಂಗ್ಯ ಚಿತ್ರಗಳು. ಇಲ್ಲೆಲ್ಲಾ ಸಾಮಾಜದ ಅನಾಚಾರವನ್ನು, ಸರ್ಕಾರಗಳ ದುರಾಡಳಿತವನ್ನು, ವ್ಯಕ್ತಿಗಳ ದುರ್ನಡತೆಯನ್ನು ವಿರೋಧಿಸುವ ಅಂಶವಿದೆ ಈ ಅಂಶವನ್ನು ಪ್ರಧಾನವಾಗಿ ಇಟ್ಟುಕೊಂಡು ಓದುಗನಲ್ಲಿ ನಗು ಹುಟ್ಟಿಸುತ್ತದೆ. ಮೇಲ್‌ನೋಟಕ್ಕೆ ಈ ಪರಿಯ ಹಾಸ್ಯ ತೇಲಿಕೆ ಏನಿಸಬಹುದು. ಆದರೆ ಇದರ ಆಳದಲ್ಲಿ ಸಾಮಾಜಿಕ ಮೌಲ್ಯಗಳನ್ನು ರಕ್ಷಿಸುವ

ದುರಾಡಳಿತವನ್ನು ತಿದ್ದುವ ಗುಣವಿದೆ. ಜನರ ಸಾಮಾಜಿಕ ಪ್ರಜ್ಞೆ ಎಚ್ಚೆತ್ತುಕೊಳ್ಳುವಂತೆ ಮಾಡುತ್ತದೆ. ಇಂತಹ ಸದಭಿರುಚಿಯ ವಿನೋದವನ್ನು ಪತ್ರಿಕೊದ್ಯಮ ಕಟ್ಟಿಕೊಡುತ್ತದೆ. ''ನಗುವನ್ನುಂಟು ಮಾಡುವುದೇ ವಿನೋದ. ಹಾಸ್ಯ, ಹ್ಯೂಮರ್, ವಿಟ್, ಜೋಕ್ ಎಂದೆಲ್ಲಾ ಈ ಪ್ರಕಾರವನ್ನು ಕರೆಯಲಾಗುತ್ತದೆ. ಅಲನ್ ಡೆಂಡಸರು ಇದನ್ನು ಜಾನಪದ ಭಾಷಾ ಪ್ರಕಾರಗಳಲ್ಲಿ ಸೇರಿಸಿದ್ದಾರೆ. ವ್ಯಕ್ತಿಯ ಮುಖ ಭಾವ ಮತ್ತು ದೇಹದ ಅಂಗಾಂಗಗಳ ಚಲನೆಯಿಂದ ಹಾಸ್ಯದ ಪರಿಣಾಮಗಳನ್ನು ಅರಿಯಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಮುಗುಳ್ನಗು ಅದರ ಮೊದಲ ಹಂತವಾದರೆ ಕೇಕೆ ಹಾಕುತ್ತಾ ಬಾಯಿಬಿಟ್ಟು ನಗುವುದು ಅದರ ಕೊನೆಯ ಹಂತವಾಗಿರುತ್ತದೆ. ಹಾಸ್ಯ ಮತ್ತು ಅದು ಉಂಟುಮಾಡುವ ಪರಿಣಾಮಗಳ ಬಗ್ಗೆ ಪ್ಲೆಟೋವಿನ ಕಾಲದಿಂದಲೂ ಚರ್ಚೆಗಳು ನಡೆಯುತ್ತಾ ಬರುತ್ತಿವೆ.''[೨೧]

ನಿಯತಕಾಲಿಕೆಗಳಲ್ಲಿ ಕಂಡುಬರುವ, ಉತ್ತರ, ನೀವು ಕೇಳಿದಿರಿ, ಕೇಳಿ ತುಂಟಾಟ, ಓದುಗರ ಸವಾಲ್ ಈ ಕಾಲಂಗಳಲ್ಲಿ ಲೈಂಗಿಕತೆ ಮತ್ತು ಕಾಮಕ್ಕೆ ಸಂಬಂಧಿಸಿದ ಬರಹದ ಪ್ರಶ್ನೆಗಳಿರುತ್ತವೆ. ಇವು ಸಂಕೇತ ರೂಪದಲ್ಲಿರುತ್ತವೆ, ಜೀವನದಲ್ಲಿ ಕಾಮವು ಪ್ರಮುಖ ಪಾತ್ರವಹಿಸುತ್ತದೆ. ಅಷ್ಟೆ ಅಲ್ಲದೆ ಇದಕ್ಕೆ ಬದುಕನ್ನು ಪ್ರಚೋದಿಸುವ ಶಕ್ತಿ ಇದೆ. 'ಅಲನ್‌ಡೆಂಡಸ್ ಅವರು ಜಾನಪದದಲ್ಲಿ ಕಥೆ, ಗಾದೆ, ಒಗಟು, ಪುರಾಣ, ಐತಿಹ್ಯ, ಅಶ್ಲೀಲ ವಿನೋದಗಳು, ಸಂಪ್ರದಾಯಗಳು, ನಂಬಿಕೆಗಳು, ಆಟಗಳು, ಮೊದಲಾದ ಅನೇಕ ಪ್ರಕಾರಗಳನ್ನು ಫ್ರಾಯ್ಡ್‌ಮಾದರಿಯ ಮನೋವಿಶ್ಲೇಷಣಾ ತತ್ವಗಳನ್ನು ಅನ್ವಯಿಸಿ ಅರ್ಥೈಸುತ್ತಿರುವ ಪ್ರಮುಖ ಜಾನಪದ ವಿದ್ವಾಂಸರಿದ್ದಾರೆ.[೨೨]

ಕಾಮವು ಮನುಷ್ಯನ ಸುಪ್ತ ಬಯಕೆಯಾಗಿದ್ದು, ಸಂಪ್ರದಾಯ ಸಮಾಜದಲ್ಲಿ ಅದು ಅದುಮಿಡಲ್ಪಟ್ಟಿರುತ್ತದೆ. ಅಂತಹ ಅದುಮಿಟ್ಟು ಭಾವನೆಗಳು ಅವಕಾಶಸಿಕ್ಕಿ ವೇದಿಕೆ ದೊರೆತಾಗ ಇಂತಹ (ಬರೆಹ) ರೂಪಗಳನ್ನು ಪಡೆಯುತ್ತವೆ. ಹದಿಹರೆಯದ ಹುಡುಗ ಹುಡುಗಿಯರ ಸರಸ, ವಿರಸ, ಕಾಮ ಪ್ರೇಮದ ಕಣ್ಣುಮುಚ್ಚಾಲೆ ನೋಡಬೇಕಾದಾಗ ಹಿಂದೆ ಮದುವೆಯ ಸಂದರ್ಭದಲ್ಲಿ ಕಾಣಬಹುದಿತ್ತು. ಆದರೆ ಇಂದು ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಲಿಖಿತ ರೂಪವನ್ನು ಪಡೆಯುತ್ತವೆ. ''ಹಾಸ್ಯವನ್ನು ನಿರೂಪಿಸುವವನು ಒಂದು ಬಗೆಯ ಉತ್ಕಟತೆಯನ್ನು ಮತ್ತು ರಹಸ್ಯವನ್ನು ಕಾಪಾಡಿಕೊಂಡಿರುತ್ತಾನೆ. ನಿರೂಪಣೆಯುದ್ದಕ್ಕೂ ಕಾಯ್ದುಕೊಂಡು ಬಂದ ಗೌಪ್ಯತೆಯು ಕೊನೆಯಲ್ಲಿ ಸ್ಫೋಟಗೊಂಡಾಗ ಒಮ್ಮೆಲೆ ನಗೆ ಚಿಮ್ಮಿ ಬರುತ್ತದೆ. ಕಾಮಕ್ಕೆ ಸಂಬಂಧಿಸಿರುವ ವಿಷಯಗಳು ಸಾಮಾನ್ಯವಾಗಿ ಗುಪ್ತವೇ ಆಗಿರುವುದರಿಂದ ಹಾಸ್ಯದಲ್ಲಿ ಸಹಜವಾಗಿ ಅದಕ್ಕೆ ಹೆಚ್ಚಿನ ಸ್ಥಾನ ಇರುತ್ತದೆ''.[೨೨]

ಪುಟಾಣಿಯ ವಿಜಯ, ಪುಟಾಣಿ ಸರ್ಕಲ್, ಕಲೆ ಮುಂತಾದ ಈ ತರಹದ ಕಾಲಂಗಳಲ್ಲಿ ಮಕ್ಕಳಿಗೆ ಕುತೂಹಲ ಕೆರಳಿಸುವ ಪ್ರಾಣಿಕಥೆಗಳ ರಾಜರಾಣಿಯರ, ಕಿನ್ನರ ಕಥೆಗಳಿರುತ್ತವೆ. ಇವು

ಜಾನಪದ ಕಥೆಗಳಂತೆ ಇದ್ದು ಅಧುನಿಕ ವಿಷಯಕ್ಕೆ ಸಂಬಂಧಪಟ್ಟಂತೆ ಕತೆಗಳಿರುತ್ತವೆ. ಇವು ಮಕ್ಕಳಲ್ಲಿ ಯೋಚನೆಯ ಶಕ್ತಿಯನ್ನು ಬೆಳೆಸುವುದಲ್ಲದೆ, ಸಾಮಾಜಿಕ ಮೌಲ್ಯಗಳನ್ನು ಬಿತ್ತರಿಸುತ್ತವೆ. ಈ ತರಹದ ಕಾಲಂಗಳು ಸಂಪೂರ್ಣ ಹೊಸ ಜಾನಪದದ ಸಂವೇದನೆಯ ನೆಲೆಗಳಾಗಿವೆ. ಇವು ಬದಲಾಗುತ್ತಿರುವ ವಾತಾವರಣದಲ್ಲಿ ಜಾನಪದ ಅನನ್ಯತೆಯನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡು ಬೆಳೆಯುತ್ತಿರುತ್ತದೆ.

ನಗೆಹೊನಲು, ಬಾಲಂಗೋಚಿ, ನಗೆಸಿಂಚನ ಟಿಂಗರ ಬುಡ್ಡಣ್ಣ ಮುಂತಾದ ಕಾಲಂಗಳಲ್ಲಿ ಛೇಡಿಸುವ ಪ್ರವೃತ್ತಿಯುಳ್ಳ ಬರಹ ಮತ್ತು ವ್ಯಂಗ್ಯ ಚಿತ್ರಗಳಿರುತ್ತವೆ. ಕೆಲವೊಂದು ಪ್ರಮಾದಕರವಾದ ಹಾಸ್ಯಬರಹಗಳುಂಟು. ಇಲ್ಲಿ ಹಾಸ್ಯ ಅಭಿವ್ಯಕ್ತಿಯೇ ಪ್ರಧಾನವಾಗಿರುವುದರಿಂದ ಗಂಭೀರವಾದ ವಿಷಯುವನ್ನು ತೀರ ಅಪಹಾಸ್ಯ ಮಾಡುವ ರೀತಿಯಲ್ಲಿರುತ್ತವೆ.

ಬಾಲ ಮಂಗಳ ಒಗಟು, ನೆರಳುಬಾಡಿಗೆ ತೆನಾಲಿರಾಮಕೃಷ್ಣನ ಹಾಸ್ಯ ಕಥೆಗಳು ಅಪ್ಪಟ ಜಾನಪದ ಕಥೆಗಳಾಗಿದ್ದು ಸ್ವಲ್ಪ ಮಟ್ಟಿನ ಆಧುನಿಕತೆಯನ್ನು ಗರ್ಭೀಕರಿಸಿಕೊಂಡಿರುತ್ತವೆ. ಇವು ಈ ರೀತಿಯ ಬದಲಾವಣೆಗೆ ಒಳಪಟ್ಟಿದ್ದರೂ ಕಥೆಯಲ್ಲಿ ಬರುವ ಆಶಯ ಮತ್ತು ಮಾದರಿ ಸೂಚಿಗಳನ್ನು ಈ ರೀತಿಯಾಗಿ ಗುರುತಿಸಬಹುದು. ಬಡರೈತ ಒಬ್ಬ ಹೆಂಡತಿಯ ಪೀಡೆಯಿಂದ ಹೊರ ನಡೆಯುತ್ತಿರುವಾಗ ಅವನ ಕಾಲಿಗೆ ಅಪರೂಪದ ದೊಡ್ಡ ಚಿನ್ನದ ನಾಣ್ಯ ಕಾಲಿಗೆ ದೊರಕುವುದು, ಅದನ್ನು ಬಳಸಿಕೊಂಡು ಒಳಗೆ ಹೋದಾಗ 'ಮಾಂತ್ರಿಕನು' ಮನುಷ್ಯನನ್ನು ಪಂಜರದಲ್ಲಿ ಕೂಡಿ ಹಾಕಿದ್ದು, ಅವನ ಕೈಯಲ್ಲಿರುವ ಮಾಂತ್ರಿಕಕೋಲು, ಆ ಕೋಲಿನಿಂದ ಮಾಂತ್ರಿಕ ಮನುಷ್ಯನನ್ನು ಪಕ್ಷಿಯಂತೆ ಮಾಡಿದ್ದು, ನಂತರ ಬಡರೈತ ಮಾಂತ್ರಿಕ ಕೋಲನ್ನು ಹಿಡಿದು ಅವನನ್ನು ಇರುವೆಯನ್ನಾಗಿ ಮಾಡಿ ಸುಟ್ಟು ಬೂದಿಮಾಡಿದ್ದು. ತನ್ನ ಹೆಂಡತಿಯನ್ನು ಮಾಂತ್ರಿಕ ಕೋಲಿನಿಂದ ಅವಳನ್ನು ಸುಶೀಲೆಯನ್ನಾಗಿ ಮಾಡಿದ್ದು; ಈ ಕಥೆಯಲ್ಲಿ ಬರುವ ಪ್ರಮುಖ ಅಶಯಗಳು. ಆಶಯಗಳೆಂದರೆ ಕಥೆಯು ಮನುಷ್ಯನ ಕುತೂಹಲ ಕೆರಳಿಸುತ್ತಾ ಆ ಮೂಲಕವೇ ಸುಖ ನೀಡುವ ಒಂದು ಸಾಹಿತ್ಯ ಪ್ರಕಾರ, ಕಥೆಯಲ್ಲಿಯ ಕುತೂಹಲ ಒಂದೇ ವಿಷಯವನ್ನು ಅವಲಂಬಿಸಿರುವುದಿಲ್ಲ. ಕುತೂಹಲಕ್ಕೆ ಪಾತ್ರ, ಘಟನೆ, ಏನೂ ಬೇಕಾದರೂ ಕಾರಣವಾಗಬಹುದು. ಕಥೆಯಲ್ಲಿನ ಅಸಹಜವಾದ ನಡೆಯನ್ನುಂಟು ಮಾಡುವ ಕಾರಣವೇ 'ಆಶಯ' ವೆಂದೂ ಸರಳವಾಗಿ ವ್ಯಾಖ್ಯಾನಿಸಬಹುದು.[೩೪] "ಬಾಲವನ ಕಥೆಯು ಸ್ಟಿತ್ ಥಾಮ್ಸನ್" ಮತ್ತು ಆಂಟಿ ಅರ್ನೆ ಗುರುತಿಸಿದ ಮಾದರಿ ಸೂಚಿಯಲ್ಲಿ ಸಾಮಾನ್ಯ ಕಥೆಗಳು (೨೦೦ ರಿಂದ ೧೧೯೯) ಉಪಮಾದರಿಯಲ್ಲಿ ೪೬೫ "ವ್ಯಕ್ತಿಯೊಬ್ಬ ತನ್ನ ಸುಂದರ ಹೆಂಡತಿಗಾಗಿ ಪೀಡನೆಗೊಳಗಾಗುವುದು." ಈ ಅಂಶವು ಈ ಕಥೆಯಲ್ಲಿ ಮೈದುಂಬಿದೆ .

ಹೀಗೆ ಪತ್ರಿಕೆಯೊಂದರಲ್ಲಿ ಬಂದಿರುವ ಕಥೆಯೊಂದನ್ನು ಜಾನಪದ ತೆಕ್ಕೆಯೊಳಗೆ ಅವಲೋಕನ ಮಾಡಬಹುದು (ಈ ಕಥೆಯನ್ನು ಉದಾಹರಣೆಗಾಗಿ ಪ್ರಯೊಗಶೀಲಾತ್ಮಕವಾಗಿ ನೋಡಲಾಗಿದೆ).

ಒಟ್ಟಿನಲ್ಲಿ ಪತ್ರಿಕೋದ್ಯಮ ಮತ್ತು ಜಾನಪದ ಸಂಬಂಧವೂ ಇತ್ತೀಚೆಗೆ ಹೆಚ್ಚು ನಿಕಟಗೊಳ್ಳುತ್ತಾ ಬರುತ್ತಿದೆ. ಪತ್ರಿಕೋದ್ಯಮವು ಹೊಸನೆಲೆಯ ಜಾನಪದ ಹುಟ್ಟಿಗೆ ಕಾರಣೀಭೂತವಾಗಿದೆ. ಕಳೆದು ಹೋಗುತ್ತಿರುವ ಹಳೆಯ ಜಗತ್ತಿನ ಜಾನಪದಗಳನ್ನು ಕಟ್ಟಿಕೊಡುವ ಸಾಂಸ್ಕೃತಿಕ ವಾಹಕವಾಗಿ ಪತ್ರಿಕೋದ್ಯಮವು ನಮ್ಮ ನಡುವೆಯೆ ಇದೆ. ಪತ್ರಿಕೋದ್ಯಮದಿಂದ ಜಾನಪದ ಬೆಳೆಯುತ್ತಿದೆ. ಅಷ್ಟೆಅಲ್ಲ ಅದರ ಗರ್ಭದಲ್ಲಿ ವೈಜ್ಞಾನಿಕ ಜಾನಪದವನ್ನು ಹುಟ್ಟು ಹಾಕಿಕೊಳ್ಳುತ್ತಿದೆ. ಈ ಪ್ರಕ್ರಿಯೆಯು ಪ್ರಜ್ಞಾ-ಅಪ್ರಜ್ಞಾ ಪೂರ್ವಕವಾಗಿಯೋ ಉಂಟಾಗುತ್ತದೆ. ಹಳೆಯ ಜಗತ್ತಿನ ಜಾನಪದ ಸಂವೇದನೆಗಳು ಆಧುನಿಕತೆಯಲ್ಲಿ ಬಹುರೂಪತೆ ಮತ್ತು ವಿಭಿನ್ನ ನೆಲೆಗಳನ್ನು ಕಂಡುಕೊಳ್ಳುತ್ತಿವೆ. ಹೊಸಯುಗದ ಜಾನಪದಕ್ಕೆ ಬಹು ಸಂವೇದನೆ ಆಕಾರಗಳ, ಅನನ್ಯತೆಯ ಏಕೀಕರಣ ಸಂಯೋಜಿಸುವ ಕಳಕಳಿಯಿರುತ್ತದೆ.

೪.೧.೩ ಪ್ರಮುಖ ಜಾನಪದ ಪತ್ರಿಕೆಗಳು[೩೫]

ಜಾನಪದ ವಿದ್ವತ್ ಪತ್ರಿಕೆಗಳು (Folklore Journals)

ಜಾನಪದ ಅಧ್ಯಯನಕ್ಕೆ ಮೀಸಲಾದ ಅನೇಕ ಪತ್ರಿಕೆಗಳು ಇವೆ. ಅವುಗಳಲ್ಲಿ ಕೆಲವು ಇಂತಿವೆ.

ಫೋಕ್‌ಲೋರ್ Folklore

ಭಾರತೀಯ ಸಂಶೋಧನೆ ಮತ್ತು ಸಂಗ್ರಹಣೆಗಳಿಗೇ ಮೀಸಲಾದ ಇಂಗ್ಲೀಷ್ ನಿಯತಕಾಲಿಕೆ. ೧೯೫೬ ರಲ್ಲಿ ಅರ್ಧವಾರ್ಷಿಕವಾಗಿ 'ಇಂಡಿಯನ್ ಫೋಕ್‌ಲೋರ್' ಎಂಬ ಹೆಸರಿನಲ್ಲಿ ಮೊದಲು ಪ್ರಕಟವಾಯಿತು. ಇದರ ಸಂಸ್ಥಾಪಕ ಸಂಪಾದಕರು ಶಂಕರ್ ಸೇನಾ ಗುಪ್ತ. ೧೯೫೮ರಲ್ಲಿ ಈ ಪತ್ರಿಕೆ ತ್ರೈಮಾಸಿಕವಾಗಿ ಪ್ರಕಟಗೊಳ್ಳಲಾರಂಬಿಸಿತು. ೧೯೬೦ ರಲ್ಲಿ ಪತ್ರಿಕೆಯ ಹೆಸರನ್ನು 'ಫೋಕ್‌ಲೋರ್' ಎಂದು ಸಂಕ್ಷಿಪ್ತಗೊಳಿಸಲಾಯಿತು. ೧೯೬೧ರ ರವರೆಗೆ ದ್ವೈಮಾಸಿಕವಾಗಿ ಪ್ರಕಟಕೊಂಡ ಈ ಪತ್ರಿಕೆ ೧೯೬೨ರ ಅನಂತರ ಮಾಸಿಕವಾಗಿ ಪ್ರಕಟಗೊಳ್ಳುತ್ತಿದೆ. ಆರಂಭದಿಂದಲೂ ಭಾರತೀಯ ಜಾನಪದ ಸಾಮಗ್ರಿ ಸಂಗ್ರಹಣೆಗೆ ಒತ್ತುಕೊಟ್ಟಿರುವ ಈ ನಿಯತಕಾಲಿಕೆ ಕೆಲವು ಮೌಲಿಕವಾದ ಸಂಶೋಧನಾತ್ಮಕ ಬರಹಗಳನ್ನು ಪ್ರಕಟಿಸಿದೆ.

ಫೋಕ್‌ಲೋರ್-ಜರ್ನಲ್ ಆಫ್ ಫೋಕ್‌ಲೋರ್ ಸೊಸೈಟಿ

Folklore- Journal of folklore society

ಲಂಡನ್ನಿನ ಫೋಕ್‌ಲೋರ್ ಸೊಸೈಟಿಯ ನಿಯತಕಾಲಿಕೆ. ಇದು ಅರ್ಧವಾರ್ಷಿಕ ಪತ್ರಿಕೆ. ೧೮೭೮ ರಲ್ಲಿ ಸೊಸೈಟಿ ಸ್ಥಾಪನೆಯಾದ ಆ ಚರಿತ್ರಾರ್ಹದಿನದಿಂದ ನಿಯತವಾಗಿ ಹೊರಬರುತ್ತಿರುವ

ಅತ್ಯಂತ ಯಶಸ್ವೀ ಇಂಗ್ಲೀಷ್ ನಿಯತಕಾಲಿಕೆ. ಮೌಖಿಕ ಪರಂಪರೆಯಲ್ಲಿ ಸಾಗಿ ಬರುವ ಎಲ್ಲಾ ಬಗೆಯ ಸಾಹಿತ್ಯ ಪ್ರಕಾರಗಳಿಗೂ ಸಮಾನ ಅವಕಾಶ ನೀಡಿದ ಪತ್ರಿಕೆ ಇದು. ಈವರೆಗೆ ಈ ಪತ್ರಿಕೆಯ ೧೧೮ ಸಂಪುಟಗಳು ಪ್ರಕಟವಾಗಿವೆ.

ಸದರ್ನ್ ಫೋಕ್‌ಲೋರ್ Southern Folklore

ನಾಲ್ಕು ತಿಂಗಳಿಗೊಮ್ಮೆ ಪ್ರಕಟಗೊಳ್ಳುವ ಈ ನಿಯತಕಾಲಿಕೆ ಪಶ್ಚಿಮ ಕೆಂಚುಕಿ ವಿಶ್ವವಿದ್ಯಾಲಯದಿಂದ ಹೊರಬರುತ್ತಿದೆ. ೧೯೪೨ರಲ್ಲಿ 'ಕೆಂಚುಕಿ ಫೋಕ್‌ಲೋರ್ ರಿಕಾರ್ಡ್' ಎಂಬ ಹೆಸರಲ್ಲಿ ಆರಂಭಗೊಂಡ ಈ ಪತ್ರಿಕೆ 'ಸದರ್ನ್ ಫೋಕ್ ಲೋರ್ ಕ್ವಾರ್ಟರ್ಲಿ' ಎಂದು ಹೆಸರನ್ನು ಬದಲಿಸಿಕೊಂಡು ಇದೀಗ 'ಸದರ್ನ್ ಫೋಕ್‌ಲೋರ್' ಎಂಬ ಸಂಕ್ಷಿಪ್ತ ಹೆಸರಿನೊಂದಿಗೆ ಪ್ರಚಾರಗೊಳ್ಳುತ್ತಿದೆ. ಕೆಂಚುಕಿ ವಿಶ್ವವಿದ್ಯಾಲಯದ ಮುದ್ರಣಾಲಯದಲ್ಲಿ ಮುದ್ರಣ ಹೊಂದುವ ಈ ಪತ್ರಿಕೆ ಮೊದಲಿನಿಂದಲೂ ಜಾನಪದ ಸಂಬಂಧಿತವಾದ ವಿಶ್ಲೇಷಣಾತ್ಮಕ, ವಿವರಣಾತ್ಮಕ, ತೌಲನಿಕ ಮತ್ತು ಚಾರಿತ್ರಿಕ ಅಧ್ಯಯನಗಳನ್ನು ಪ್ರಕಟಿಸುತ್ತದೆ. ಪ್ರಸಕ್ತ ಪ್ರವೃತ್ತಿಗಳ ಹಿನ್ನೆಲೆಯಲ್ಲಿ ನಿರ್ಧಾರಗೊಂಡ ಬರಹಗಳನ್ನು ಹೆಚ್ಚಾಗಿ ಹೊರತರುತ್ತಿರುವುದು ಲಕ್ಷ್ಯಾರ್ಹವಾಗಿದೆ.

ವೆಸ್ಟರ್ನ್ ಫೋಕ್ ಲೋರ್ [Western Folklore]

ಕ್ಯಾಲಿಫೋರ್ನಿಯಾ ಫೋಕ್‌ಲೋರ್ ಸೊಸ್ಯಾಟಿಯ ತ್ರೈಮಾಸಿಕ ಇದು. ಅಮೇರಿಕೆಯ ಕಿಂಬರ್ಲಿ ಮುದ್ರಣಾಲಯದಿಂದ ಮುದ್ರಣ ಹೊಂದಿ ಹೊರಬರುವ ಈ ಪತ್ರಿಕೆಯ ಸಂಪಾದಕರಾಗಿದ್ದವರೆಲ್ಲ ಅಮೇರಿಕೆಯ ಪ್ರತಿಷ್ಠಿತ ಜಾನಪದ ವಿದ್ವಾಂಸರು. ೧೯೪೧ ರಲ್ಲಿ 'ಕ್ಯಾಲಿಫೋರ್ನಿಯ ಫೋಕ್‌ಲೋರ್ ಕ್ವಾಟರರ್ಲಿ' ಎಂಬ ಹೆಸರಿನಿಂದ ಆರಂಭಗೊಂಡ ಈ ಪತ್ರಿಕೆ ಕ್ರಮೇಣ ಪ್ರಾದೇಶಿಕ ಮಿತಿಯನ್ನು ಕಳಚಿಕೊಂಡು 'ವೆಸ್ಟರ್ನ್ ಫೋಕ್‌ಲೋರ್' ಎಂದು ಮರುನಾಮಕರಣ ಹೊಂದಿ ಅಂತಾರಾಷ್ಟ್ರೀಯ ವ್ಯಾಪ್ತಿಯನ್ನು ಪಡೆಯಿತು. ಅಮೇರಿಕೆಯ ನಿಯತಕಾಲಿಕೆಗಳಲ್ಲಿ ಅತ್ಯಂತ ಪ್ರಮುಖವಾದ ಜಾನಪದ ನಿಯತಕಾಲಿಕವಾಗಿ ಹೊರಬರಲಾರಂಭಿಸಿತು. ಈ ಪತ್ರಿಕೆಯಲ್ಲಿ ಸೈದ್ಧಾಂತಿಕ, ವೈಧಾನಿಕ ಹಾಗೂ ಎಲ್ಲಾ ಬಗೆಯ ಬರಹಗಳಿಗೂ ಸ್ಥಳಾವಕಾಶ ನೀಡಿದ್ದು ವಿಶೇಷ.

ಇಂಡಿಯಾನ ಫೋಕ್‌ಲೋರ್ Indian Folklore

ಇದು ಹೂಸಿಯರ್ ಫೋಕ್‌ಲೋರ್ ಸೊಸ್ಯಾಟಿಯ ನಿಯತಕಾಲಿಕೆ. ವರ್ಷದಲ್ಲಿ ಎರಡು ಬಾರಿ ನಿಯತವಾಗಿ ಪ್ರಕಟಗೊಳ್ಳುತ್ತದೆ. ೧೯೬೮ ರಲ್ಲಿ ಇದರ ಮೊದಲ ಸಂಚಿಕೆ ಪ್ರಕಟಗೊಂಡಿದೆ. ಪ್ರಸಿದ್ಧ ವಿದ್ವಾಂಸೆ ಲಿಂಡಾ ಡೇಗ್ ಈ ಪತ್ರಿಕೆಯ ಸಂಪಾದಕರು. ಸಲಹಾ ಸಮಿತಿಯಲ್ಲೂ ಪ್ರತಿಷ್ಠಿತ

ವಿದ್ವಾಂಸ ತಂಡವೆ ಇತ್ತು. ರಿಚರ್ಡ್ ಎಂ. ಡಾರ್ಸನ್, ಹೆನ್ರೀ ಎಚ್. ಗ್ಲಾಸೀ, ವಾರನ್ .ಇ. ರಾಬರ್ಟ್ಸ್, ಥಾಮಸ್ .ಎ. ಸೆಬಿಯಾಕ್ ಅವರುಗಳು ಸಲಹೆಗಾರರಾಗಿದ್ದರು. ಇಂಡಿಯಾನ ಮತ್ತು ನೆರೆಯ ರಾಜ್ಯಗಳ ಜನಪದ ಸಾಮಗ್ರಿ ಮತ್ತು ಅದರ ಅಧ್ಯಯನಕ್ಕೆ ಈ ಪತ್ರಿಕೆ ಹೆಚ್ಚು ಆದ್ಯತೆ ನೀಡಿದ್ದು, ಜಾನಪದ ಮತ್ತು ಜನಪದ ಜೀವನದ ವಿವಿಧ ಮಗ್ಗಲುಗಳನ್ನು ಕುರಿತ ಲೇಖನಗಳಿಗೆ ಸ್ಥಳ ನೀಡಿದೆ. ಹೊಸ ಹೊಸ ಸಂಶೋಧನೆ ಮತ್ತು ಸಂಗ್ರಹಣೆಗಳನ್ನು ಮೇಲಿಂದ ಮೇಲೆ ಪ್ರಕಟಿಸುತ್ತಾ ಬಂದಿದೆ. ಪ್ರಕಟಗೊಂಡ ಬರಹಗಳು ಕೇವಲ ಗದ್ಯ ಕಥನಗಳಿಗಷ್ಟೇ ಸೀಮಿತವಾಗದೆ ಭೌತಿಕ ಸಂಸ್ಕೃತಿ, ಲಾವಣಿಗಳು, ಹಾಡುಗಳು ಗಾದೆಗಳು, ಸ್ಥಳೀಯ ಐತಿಹ್ಯಗಳನ್ನು ಕುರಿತಿರುವುದು ಗಮನಾರ್ಹ. ಇಂಡಿಯಾನ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರದ ಪ್ರಕಟಣೆ ಇದು.

ಜರ್ನಲ್ ಆಫ್ ಅಮೇರಿಕನ್ ಫೋಕ್‌ಲೋರ್ Journal of American Folklore

ಇದು ಅಮೇರಿಕೆಯ ಜಾನಪದ ಸಂಘದ ಒಂದು ತ್ರೈಮಾಸಿಕ. ೧೮೮೮ರಲ್ಲಿ ಈ ಸಂಘ ಅಸ್ತಿತ್ವಕ್ಕೆ ಬಂದಂದಿನಿಂದ ತೊಡಗಿ ಇಂದಿನವರೆಗೆ (೧೯೯೬) ಒಟ್ಟು ೧೦೯ ಸಂಪುಟಗಳು ಬೆಳಕು ಕಂಡಿವೆ. ಜಾನಪದಕ್ಕೆ ಮೀಸಲಾದ ನಿಯತಕಾಲಿಕೆ ಇದು. ಜಾನಪದ ಅಧ್ಯಯನಾಸಕ್ತರ ಕುತೂಹಲಾಸಕ್ತಿಗಳನ್ನು ತೀವ್ರವಾಗಿ ಕೆರಳಿಸುವ ವಿದ್ವತ್ ಪೂರ್ಣವಾದ ಬರಹಗಳು, ಸಂಪ್ರಬಂಧಗಳು. ಟಿಪ್ಪಣಿಗಳು ಹಾಗೂ ಟೀಕೆ- ವ್ಯಾಖ್ಯಾನಗಳು ನಿಯತವಾಗಿ ಈ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿವೆ. ಪುಸ್ತಕಾವಲೋಕನ, ವಸ್ತು ಪ್ರದರ್ಶನ, ಸಭೆ ಸಮಾರಂಭಗಳ ವರದಿ, ಧ್ವನಿ ಸುರಳಿ, ಚಲನ ಚಿತ್ರಗಳು ಹಾಗೂ ವೀಡಿಯೊ ಸುರುಳಿಗಳು ಹಾಗೂ ಮರಣ ಸುದ್ದಿ ಪ್ರಕಟಣೆಗಾಗಿ ಪ್ರತ್ಯೇಕ ವಿಭಾಗಗಳನ್ನು ಮೀಸಲಿರಿಸಿರುವ ಪ್ರತಿಷ್ಠಿತ ನಿಯತಕಾಲಿಕೆ ಇದು. ಜಾನಪದದ ವಿಶ್ವವ್ಯಾಪಕತೆಯನ್ನು ಮನಗಾಣಿಸುವ ವೃತ್ತಿನಿರತ ಜಾನಪದ ವಿದ್ವಾಂಸರ ಕಾಳಜಿಗಳು ಹಾಗೂ ಸೈದ್ಧಾಂತಿಕ ದೃಷ್ಟಿಕೋನಗಳಿಗೆ ಈ ಪತ್ರಿಕೆ ವಿಶೇಷ ಒತ್ತು ಕೊಟ್ಟಿದೆ. ಇಲ್ಲಿನ ಬರಹಗಳು ಬಹುಮಟ್ಟಿಗೆ ಪೂರಕ ಜ್ಞಾನ ಕ್ಷೇತ್ರಗಳಲ್ಲಿ ಕಂಡುಕೊಂಡ ಫಲಿತಗಳನ್ನು ಮತ್ತು ಸೈದ್ಧಾಂತಿಕ ವಿಶ್ಲೇಷಣೆಗಳನ್ನು ಪ್ರಸ್ತುತಪಡಿಸುವ ಕೆಲಸವನ್ನು ಮಾಡಿವೆ. ಸಂಪ್ರಬಂಧಗಳು ಹೆಚ್ಚು ವಿಶ್ಲೇಷಣಾತ್ಮಕವಾಗಿದ್ದು ಅತ್ಯಂತ ಸಮರ್ಥ ರೀತಿಯಲ್ಲಿ ಮಂಡನೆಗೊಂಡಿದೆ. ಟಿಪ್ಪಣಿಗಳು ಸೀಮಿತ ವ್ಯಾಪ್ತಿಯನ್ನು ಹೊಂದಿದ್ದರು. ಕೆಲವೊಮ್ಮೆ ಗಹನವಾದ ವಿಷಯಗಳ ಜಿಜ್ಞಾಸೆಗೆ ಯೋಗ್ಯ ಪ್ರೇರಣೆ, ಪ್ರಚೋದನೆ ಒದಗಿಸಲು ಸಹಕಾರಿಯಾಗಿವೆ. ಟೀಕೆ, ವ್ಯಾಖ್ಯಾನಗಳು, ನಿಯತಕಾಲಿಕೆಯ ಹಿಂದಿನ ಸಂಚಿಕೆಗಳಲ್ಲಿ ಬೆಳಕು ಕಂಡ ಬರಹಗಳ ಲೋಪದೋಷಗಳನ್ನು ಗುರುತಿಸುವ ಪ್ರತಿಪಾದಿತವಾದ ಸಂಗತಿಗಳಿಗೆ ಹೆಚ್ಚಿನ ವಿವರಗಳನ್ನು ಜೋಡಿಸುವ ಕೆಲಸವನ್ನು ಮಾಡಿವೆ, ಮಾಡುತ್ತಿವೆ.

ನ್ಯೂಯಾರ್ಕ್ ಫೋಕ್‌ಲೋರ್ New york Floklore

ಇದು ನ್ಯೂಯಾರ್ಕ್ ಫೋಕ್‌ಲೋರ್ ಸೊಸ್ಯಾಟಿಯ ನಿಯತಕಾಲಿಕೆ. ೧೯೪೫ ರಿಂದ ೧೯೪೭ರ ವರೆಗೆ 'ನ್ಯೂಯಾರ್ಕ್ ಫೋಕ್‌ಲೋರ್ ಕ್ವಾರ್ಟರ್ಲಿ' ಎಂಬ ಹೆಸರಿನಲ್ಲಿ ಪ್ರಕಟಗೊಳ್ಳುತ್ತಿತ್ತು. ಈ ಪತ್ರಿಕೆ ಪ್ರಧಾನವಾಗಿ ನ್ಯೂಯಾರ್ಕ್ ರಾಜ್ಯದ ಜನಪದ ಕಲೆಗಳು ಮತ್ತು ಜನಪದ ಜೀವನ ಕ್ಷೇತ್ರವನ್ನು ಸಾಂಸ್ಕೃತಿಕ ಸಮಾನತೆ ಮತ್ತು ಅಂತರ ಸಾಂಸ್ಕೃತಿಕ ಪ್ರಕ್ರಿಯೆಗಳ ನೆಲೆಯಲ್ಲಿ ಗ್ರಹಿಸುವ ಪ್ರಾಮಾಣಿಕ ಪ್ರಯತ್ನಗಳಿಗೆ ಮೀಸಲಾಗಿದೆ. ಕಲೆ ಕಲಾವಿದರು ವಿದ್ವಾಂಸರು ಸಂಘ ಸಂಸ್ಥೆಗಳು ಶಿಕ್ಷಣವೇತ್ತರು ಮತ್ತು ಇತರ ಪರಿಣತರ ಸಹಕಾರದಿಂದ ಜನಪದ ಕಲೆ ಮತ್ತು ಜನಪದ ಜೀವನವನ್ನು ಸಂರಕ್ಷಿಸಲು ಪೋಷಿಸಲು ಶ್ರಮಿಸುತ್ತಿರುವ ನ್ಯೂಯಾರ್ಕ್ ಫೋಕ್‌ಲೋರ್ ಸೊಸ್ಯಾಟಿಯ ಮುಖವಾಣಿಯೂ ಆಗಿದೆ. ರಾಜ್ಯವ್ಯಾಪ್ತಿಯ ಕಲಾಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಲು ವಿಚಾರ ಗೋಷ್ಠಿಗಳನ್ನು ಏರ್ಪಡಿಸಲು ಹಾಗೂ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲು ಈ ಸೊಸ್ಯಾಟಿಯ ಈ ಪತ್ರಿಕೆಯ ಮೂಲಕ ಎಲ್ಲ ನೆರವನ್ನೂ ಒದಗಿಸುತ್ತದೆ.

೧೯೪೪ರಲ್ಲಿ ಸ್ಥಾಪನೆಗೊಂಡ ನ್ಯೂಯಾರ್ಕ್ ಫೋಕ್‌ಲೋರ್ ಸೊಸ್ಯಾಟಿ ಈವರೆಗೆ ಒಟ್ಟು ೨೨ ಸಂಪುಟಗಳನ್ನು ಹೊರತಂದಿದೆ. ನ್ಯೂಯಾರ್ಕ್ ರಾಜ್ಯದ ಜಾನಪದ ಅಧ್ಯಯನಕ್ಕೆ ಇಲ್ಲಿ ಹೆಚ್ಚು ಒತ್ತು ಇದ್ದರೂ ಪ್ರಪಂಚದ ಯಾವುದೇ ಭೂಭಾಗಕ್ಕೆ ಸಂಬಂಧಿಸಿದ ಜಾನಪದ ಸಂಬಂಧಿ ಬರಹಗಳನ್ನು ಈ ಪತ್ರಿಕೆ ಆಮಂತ್ರಿಸುವುದು ಸ್ವಾಗತಾರ್ಹ, ಜಾನಪದ ಸಿದ್ಧಾಂತ ಅಧ್ಯಯನದ ವಿಧಾನಗಳು ಭೌಗೋಳಿಕತೆಗೆ ವಿಶೇಷ ಮಹತ್ವ ನೀಡಿರುವ ಪತ್ರಿಕೆ ಇದು. ಜಾನಪದದ ವರ್ಣನಾತ್ಮಕ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವುದು. ಈ ಪತ್ರಿಕೆಯ ವಿಶೇಷ. ಹೀಗಾಗಿ ಅನೇಕ ವಿವರಣಾತ್ಮಕವೂ ಮೌಲಿಕವೂ ಆದ ಬರಹಗಳು ಈ ಪತ್ರಿಕೆಯಲ್ಲಿ ಬೆಳಕು ಕಂಡಿದೆ.

ಏಷಿಯನ್ ಫೋಕ್‌ಲೋರ್ ಸ್ಟಡೀಸ್ Asian Folklore studies

ಜಪಾನಿನಿಂದ ಪ್ರಕಟವಾಗುತ್ತಿರುವ ಪ್ರಬುದ್ಧ ಲೇಖನಗಳಿರುವ ಪತ್ರಿಕೆ. ದಕ್ಷಿಣ ಏಷಿಯಾದ ಬಗ್ಗೆ ಇದರ ಸಂಚಿಕೆಗಳಲ್ಲಿ ಅಮೂಲ್ಯವಾದ ಸಂಶೋಧನಾ ಲೇಖನಗಳು ಪ್ರಕಟವಾಗುತ್ತವೆ. ಜರ್ನಲ್ ಆಫ್ ಫೋಕ್‌ಲೋರ್ ರೀಸರ್ಚ್ Journal of Folklore Research. ಇಂಡಿಯಾನ ವಿಶ್ವ ವಿದ್ಯಾಲಯದ ಜಾನಪದ ಅಧ್ಯಯನ ಸಂಸ್ಥೆಯ ನಿಯತಕಾಲಿಕೆ ಇದು. ೧೯೬೫ ರಲ್ಲಿ 'ಜರ್ನಲ್ ಆಫ್ ದಿ ಫೋಕ್‌ಲೋರ್ ಇನ್‌ಸ್ಟಿಟ್ಯೂಟ್' ಹೆಸರಿನಲ್ಲಿ ಸ್ಥಾಪನೆಗೊಂಡ ಪತ್ರಿಕೆ. ಈವರೆಗೆ ಈ ಪತ್ರಿಕೆಯ ಮೂವತ್ತು ಸಂಪುಟಗಳು ಹೊರ ಬಂದಿದೆ. ಸಂಪೂರ್ಣ ವಿದ್ವತ್ಪೂರ್ಣವಾದ ಬರಹಗಳಿಗೆ ಮೀಸಲಾದ ಈ ಪತ್ರಿಕೆ ಪ್ರಚಲಿತ ಪ್ರವೃತ್ತಿಗಳಿಗೆ ಅಂತರಾಷ್ಟ್ರೀಯ ವೇದಿಕೆಯನ್ನು ನಿರ್ಮಿಸಿದೆ. ಜಾನಪದ ಒಂದು ಅಂತರಾಷ್ಟ್ರೀಯ ಶಿಸ್ತಾಗಿ ರೂಪುಗೊಳ್ಳಲು ನೆರವಾಗುವ ದಿಸೆಯಲ್ಲಿ ಈ ನಿಯತಕಾಲಿಕೆ ಪ್ರಸಕ್ತ ಸೈದ್ಧಾಂತಿಕ ಆಸಕ್ತಿಯ ಬರಹಗಳಿಗೆ ಆದ್ಯತೆ ನೀಡುತ್ತದೆ.

ಜರ್ನಲ್ ಆಫ್ ಇಂಡಿಯನ್ ಫೋಕ್‌ಲೋರಿಸ್ಟಿಕ್ಸ್ Journal of Indian Folkloristics

ಭಾರತೀಯ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯನ್ನು ಅಂತಾರಾಷ್ಟ್ರೀಯ ಮನ್ನಣೆಯನ್ನು ದೊರಕಿಸಿಕೊಡುವ ಸದುದ್ದೇಶದಿಂದ, ಅಖಿಲ ಭಾರತ ವ್ಯಾಪ್ತಿಯುಳ್ಳ ಭಾರತೀಯ ಜಾನಪದ ತಜ್ಞರ ಒಕ್ಕೂಟ - Folklore fellows of India ಎಂಬ ಸಂಸ್ಥೆ ೧೯೭೭ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಒಕ್ಕೂಟದ ಪ್ರಥಮಾಧಿವೇಶನ ಮೈಸೂರಿನಲ್ಲಿ ೧೯೭೮ರ ನವೆಂಬರ್‌ನಲ್ಲಿ ನಡೆಯಿತು. ಈ ಸಂಸ್ಥೆಯ ಆಶ್ರಯದಲ್ಲಿ 'ಜರ್ನಲ್ ಆಫ್ ಇಂಡಿಯನ್ ಫೋಕ್‌ಲೋರಿಸ್ಟಿಕ್ಸ್' ಎಂಬ ವಿದ್ವತ್ಪತ್ರಿಕೆಯ ಪ್ರಥಮ ಸಂಚಿಕೆಯೂ ಬಿಡುಗಡೆಯಾಯಿತು. ಸದ್ಯ ಈ ಪತ್ರಿಕೆಯ ನಾಲ್ಕು ಸಂಪುಟಗಳು ಬೆಳಕು ಕಂಡಿವೆ.

ಜಾನಪದ ಜಗತ್ತು

ಶ್ರೀ. ಎಚ್.ಎಲ್. ನಾಗೇಗೌಡ ಅವರ ಪ್ರದಾನ ಸಂಪಾದಕತ್ವದಲ್ಲಿ ಕರ್ನಾಟಕ ಜಾನಪದ ಟ್ರಸ್ಟ್ ವತಿಯಿಂದ ದ್ವೈಮಾಸಿಕವಾಗಿ (೧೯೮೦) ಬೆಂಗಳೂರಿನಿಂದ ಹೊರಬರುತ್ತಿರುವ ಕನ್ನಡ ಜಾನಪದದ ನಿಯತಕಾಲಿಕೆ. ಕರ್ನಾಟಕ ಜಾನಪದದ ಎಲ್ಲಾ ಮುಖ್ಯ, ಅಮುಖ್ಯ ಪ್ರಕಾರಗಳ ಸಂಬಂಧವಾದ ಮಾಹಿತಿಯನ್ನು ಒದಗಿಸುವುದರೊಂದಿಗೆ ಆ ಸಂಬಂಧವಾದ ವಿವರಣಪೂರ್ಣವಾದ ಅಧ್ಯಯನಕ್ಕೆ ಹೆಚ್ಚು ಒತ್ತುಕೊಡುತ್ತಿರುವ ಪತ್ರಿಕೆ.

ಜಾನಪದ

ಮಾನಸಗಂಗೋತ್ರಿಯ ಕರ್ನಾಟಕ ಜಾನಪದ ಪರಿಷತ್ತು (ರಿ) ಸಂಸ್ಥೆಯ ನಿಯತಕಾಲಿಕೆ. ೧೯೬೯ ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ಪ್ರೊ. ದೇಜಗೌ ಅವರ ಪ್ರಧಾನ ಸಂಪಾದಕತ್ವದಲ್ಲಿ ಅದೇ ವರ್ಷ 'ಜಾನಪದ' ಎಂಬ ಶೀರ್ಷಿಕೆಯಲ್ಲಿ ಒಂದು ಅರ್ಧವಾರ್ಷಿಕೆಯನ್ನು ಹೊರತಂದಿತು. ಸದ್ಯ ಈ ಪತ್ರಿಕೆಯ ಒಂಬತ್ತು ಸಂಪುಟಗಳು ಲಭ್ಯ ಇವೆ. ಕರ್ನಾಟಕ ಜಾನಪದದ ವಿವಿಧ ಮಗ್ಗುಲುಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ವಿಮರ್ಶಾತ್ಮಕವಾಗಿ ಪರಿಶೀಲಿಸುವ ಪ್ರಯತ್ನ ಮಾಡಿರುವ ಬರಹಗಳನ್ನು ಆದ್ಯತೆಯ ಮೇಲೆ ಇದು ಪ್ರಕಟಿಸಿದೆ. ಹಾ.ಮಾ. ನಾಯಕ ಮತ್ತು ಜೀಶಂಪ ಅವರು ಅವರು ಈ ಪತ್ರಿಕೆಯ ಸಂಪಾದಕರಾಗಿದ್ದರು.

ಜಾನಪದ ಗಂಗೋತ್ರಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ವತಿಯಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕ. ಕನ್ನಡದ ಬಹುತೇಕ ಜಾನಪದ ವಿದ್ವಾಂಸರು ಇದರಲ್ಲಿ ಬರೆಯುತ್ತಿದ್ದಾರೆ. ಒಂದೊಂದು ಸಂಚಿಕೆಯನ್ನು ಒಬ್ಬೊಬ್ಬ ವಿದ್ವಾಂಸರು ಸಂಪಾದಿಸುತ್ತಿರುವುದರಿಂದ ಸಂಚಿಕೆಯ ವೈವಿಧ್ಯ ಹೆಚ್ಚಿದೆ.

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜಾನಪದ ವಿಭಾಗದ ಮುಖ್ಯಸ್ಥರ ಸಂಪಾದಕತ್ವದಲ್ಲಿ ಹೊರ ಬರುತ್ತಿದೆ. ಇದು ಅರ್ಧವಾರ್ಷಿಕ ಪತ್ರಿಕೆಯಾಗಿದ್ದು, ಅರ್ಥವತ್ತಾದ ಸಂಪಾದಕೀಯದೊಂದಿಗೆ ನಾಡಿನ ವಿವಿಧ ವಿದ್ವಾಂಸರ ಬರಹಗಳು ಮತ್ತು ಪ್ರಪಂಚದ ಜಾನಪದ ತಜ್ಞರ ಬರಹಗಳ ಅನುವಾದವನ್ನು ಪ್ರಕಟಿಸುವುದಲ್ಲದೆ, ಜಾನಪದ ಕಲಾವಿದರೊಡನೆ ಸಂವಾದ ಪ್ರಕ್ರಿಯೆಗಳು ಅಚ್ಚಾಗುತ್ತಿವೆ.

ದಿನ ಪತ್ರಿಕೆಗಳು, ವಾರ ಪತ್ರಿಕೆಗಳು ಮಾಸ ಪತ್ರಿಕೆಗಳು ಜಾನಪದ ಪ್ರಕಾರಗಳಂತೆ ನಮ್ಮ ಬದುಕಿನ ಒಳಸುಳಿಗಳಲ್ಲಿ ಐಕ್ಯವಾಗಿಬಿಟ್ಟಿವೆ. ಈ ಎಲ್ಲಾ ಬೆಳವಣಿಗೆಯ ಹಿನ್ನೆಲೆಯಲ್ಲಿ ಜಾನಪದ ಅಳಿವು ಉಳಿವಿನ ಪ್ರಶ್ನೆಗೆ ಪತ್ರಿಕೆಗಳ ಪಾತ್ರವೇನೆಂಬುದು ಪ್ರತಿಯೊಬ್ಬ ವಿದ್ವಾಂಸನಿಗೂ ಗೊತ್ತಾಗುವಂತದ್ದು. ಪತ್ರಿಕೋದ್ಯಮವು ಜಾನಪದವನ್ನು ಲಿಖಿತ ರೂಪದಲ್ಲಿ ಹೆಚ್ಚು ಪ್ರಚಾರ ಮಾಡುತ್ತಿರುವ ಮಾಧ್ಯಮವಾಗಿ ಕಂಡು ಬರುತ್ತದೆ.

೪.೨ ಬಾನುಲಿ ಮತ್ತು ಜಾನಪದ

ಆಕಾಶವಾಣಿಯ ಪ್ರಭಾವವು ನಮ್ಮಲ್ಲಿ ೨೦ನೇ ಶತಮಾನದ ಪೂರ್ವದಲ್ಲಿ ಹೆಚ್ಚು ಜನಪ್ರಿಯ ಮತ್ತು ಆಧುನಿಕವಾದ ಮಾಧ್ಯಮವಾಗಿತ್ತು. ಇಷ್ಟೇ ಅಲ್ಲ ಇದೊಂದು ಮಾಯಾಲೋಕವೆಂಬಂತೆ ಗೋಚರಿಸುತ್ತಿತ್ತು. ಹಿ.ಚಿ. ಬೋರಲಿಂಗಯ್ಯನವರು ಗುರುತಿಸುವಂತೆ ''ಆಕಾಶವಾಣಿ ಅತ್ಯಂತ ಜನಪ್ರಿಯ ಮಾಧ್ಯಮವಾಗಿ ಹೊರಬಂದ ಕಾಲದಲ್ಲಿ ಶಿಷ್ಟ ಸಂಗೀತದ ರಾಗ ಮತ್ತು ಅಲಾಪನೆಗಳಿಗೆ ಹೆಚ್ಚು ಬೆಲೆಕೊಟ್ಟಿತು ಎನ್ನುವುದು ಜಾನಪದ ಆಸಕ್ತರ ಅಳಲು. ಆದರೂ ಬೇರೆ ಮಾಧ್ಯಮಗಳಿಗೆ ಹೋಲಿಸಿದಾಗ ಬಾನುಲಿಯಲ್ಲಿ ಹಳ್ಳಿಯ ಹಾಡುಗಳ ಮಹಪೂರವೇ ಹರಿಯಿತು ಎನ್ನಬಹುದು. ಅಷ್ಟೆ ಅಲ್ಲದೆ ನಾಡಿನ ಹಾಗೂ ದೇಶದ ಬೇರೆ ಬೇರೆ ಭಾಗಗಳ ಜನಪದ ಸಂಗೀತವನ್ನು ನೆನಪಿನಾಳದಲ್ಲಿ ಉಳಿಯುವಂತೆ ಆಕಾಶವಾಣಿ ಬಿತ್ತರಿಸಿತ್ತು''[೩೫] ಆಕಾಶವಾಣಿ ಬಂದ ಹೊಸದರಲ್ಲಿ ಈ ಬಗೆಯ ಶಿಷ್ಟ ಸಂಗೀತದ ರಾಗ ಮತ್ತು ಆಲೋಚನೆಗಳಿಗೆ ಹೆಚ್ಚು ಬೆಲೆಕೊಟ್ಟಿತ್ತಾದರೂ ನಂತರದ ದಿನಗಳಲ್ಲಿ ಜಾನಪದ ವಿವಿಧ ಪ್ರಕಾರಗಳಾದ ಕಥೆ, ಒಗಟು, ಗಾದೆ, ವಿನೋದ ಮುಂತಾದ ಪ್ರಕಾರಗಳನ್ನು ತನ್ನ ಪ್ರಸಾರ ಕಾರ್ಯಕ್ರಮಗಳ ಮಧ್ಯೆ ಅಳವಡಿಸಿಕೊಂಡಿದ್ದರಿಂದ ಇದರ ಶ್ರೋತೃವರ್ಗದ ಕ್ಷೇತ್ರ ಇನ್ನೂ ಹೆಚ್ಚಿತು.

ಡಾ. ಬಿ. ಎಸ್. ಸ್ವಾಮಿಯವರು 'ಜಾನಪದ ಸೌರಭ'ದಲ್ಲಿ ಬಾನುಲಿ ಮತ್ತು ಜಾನಪದ ಸಂಬಂಧದ ಬಗ್ಗೆ ಈ ರೀತಿಯಾಗಿ ಹೇಳಿದ್ದಾರೆ ''ಪ್ರಪ್ರಥಮವಾಗಿ ೧೯೪೯ರಲ್ಲಿ ಗುಲ್ಬರ್ಗ

ಆಕಾಶವಾಣಿಯಲ್ಲಿ "ನುಡಿಸೊಗಡು" ಎಂಬ ಶೀರ್ಷಿಕೆಯಲ್ಲಿ ಜನಪದ ಕತೆಗಳನ್ನು ಅಳವಡಿಸಿದುದರ ಹೆಮ್ಮೆ ನನಗಿದೆ. ಕತೆಗಳನ್ನು ಕೇಳಿದ ಶ್ರೋತೃಗಳು ವಾರಕ್ಕೆ ಹತ್ತಿಪ್ಪತ್ತು ಮೆಚ್ಚುಗೆ ಪತ್ರಗಳನ್ನು ಬರೆಯುತ್ತಿದ್ದರು. ಕತೆ ನೇರ ಗದ್ಯ, ೧೦-೧೫ ನಿಮಿಷಗಳ ಅವಧಿ. ಕೆಲವೊಮ್ಮೆ ೫-೬ ನಿಮಿಷಗಳಲ್ಲೂ ಮುಗಿಸಿದ್ದಾರೆ. ಕತೆಯು ಉದ್ದ ಹನುಮಂತನ ಬಾಲದಂತೆ ಬರೆದರೆ ಶ್ರೋತೃಗಳು ಜ್ಞಾಪಕ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಮನಸ್ಸು ಅತ್ತಿತ್ತ ಹೋದರೂ ರಸಭಂಗವಾಗಿ ಕತೆಯು ಅರ್ಧವಾಗದೆ ಉಳಿಯುತ್ತದೆ. ಇದರ ಪ್ರಯೋಗದಿಂದ ಒಳ್ಳೆಯ ಪ್ರತಿಕ್ರಿಯೆ ಶ್ರೋತೃಗಳಿಂದ, ಜಾನಪದ ವಿದ್ವಾಂಸರಿಂದ, ಜಾನಪದ ಕಲಾವಿದರಿಂದ ಬಂದಿದ್ದು ಮತ್ತಷ್ಟು ಸಂತಸ ತಂದಿತು. ವಿದ್ವಾಂಸರಿಂದ, ಜಾನಪದ ಕಲಾವಿದರಿಂದ ಬಂದಿದ್ದು ಮತ್ತಷ್ಟು ಸಂತಸ ತಂದಿತು. ಹೊಸಕತೆಗಳಿಗೆ, ಪ್ರಕಟವಾಗದ, ಹೆಚ್ಚಿಗೆ ಜನರು ಬಯಸುವ ನೀತಿಯ, ಹಾಸ್ಯ ಕತೆಗಳನ್ನು ಪ್ರಸಾರ ಮಾಡಲಾಯಿತು. ಬೈಗುಳ, ಕೆಟ್ಟಮಾತುಗಳು, ಜನರಿಗೆ ಮನನೋಯಿಸುವಂಥ ಪ್ರಸಂಗ ತೆಗೆದು ಸುಂದರ ಕತೆಗಳನ್ನು ಅಳವಡಿಸುವಾಗ, ಕತೆಗಾರನಿಗೆ ಎಲ್ಲಾ ಹೇಳಿ ಒಂದು ರೂಪ ಕೊಡುವುದು ಕಷ್ಟವೇ ಆಯಿತು. ಕೆಲವರು ಬರೆದುಕೊಂಡು, ಗಟ್ಟಿಮಾಡಿಕೊಂಡು ಬಂದು ಹೇಳಿದಾಗ "ಇದು ಜನಪದ ಕತೆ ಹೇಳುವ ದಾಟಿಯಲ್ಲ, ನೀವು ಹೇಳುವಂತೆ ಹೇಳಿ, ಪುಸ್ತಕದ ಭಾಷೆ ಬೇಡ" ಎಂದು ಹೇಳಿದ ಪ್ರಸಂಗಗಳು ಉಂಟು. ಕೆಲವರು ಆಡುಭಾಷೆಯಲ್ಲಿ, ಸೊಗಡು ತುಂಬಿದ ಭಾಷೆಯಲ್ಲೇ ನಿವೇದಿಸಿದರು.

ಜನಪದ ಕತೆಗಳನ್ನು ಆಧರಿಸಿ ರೂಪಿತವಾದ ನಾಟಕಗಳು ಮತ್ತು ರೂಪಕಗಳನ್ನು ಪ್ರಸಾರ ಮಾಡಿದೆ. ಅವು ತುಂಬ ಜನಪ್ರಿಯವಾದುವು. ಮತ್ತೆ ಪ್ರಸಾರ ಮಾಡಿ ಎಂಬ ಹಲವಾರು ಪತ್ರಗಳು ಬರಲಾರಂಭಿಸಿದವು. ಹೊಗೆಸೊಪ್ಪಿನ ಕತೆ, ಅಂಬುಗರ ಚೌಡಯ್ಯ, ದಾಸಯ್ಯ, ದಡ್ಡಣ್ಣ, ಮಂಗಣ್ಣ, ಅತ್ತೆ - ಸೊಸೆ ಕತೆಗಳು, ಉಪಕತೆಗಳು ನಾಟಕ ರೂಪ ಶ್ರೋತೃಗಳಿಂದ ಮೆಚ್ಚುಗೆ ಪಡೆದವು. ಹಾಸ್ಯ ಕತೆಗಳು ನಿಜ ಜೀವನಕ್ಕೆ ಹತ್ತಿರವಾದ ಕತೆಗಳು, ಜನರ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಯಾವ ಅನುಮಾನವಿಲ್ಲ. ಈ ದೃಷ್ಟಿಯಿಂದ ಜನಪದ ಕತೆಗಳನ್ನು ಜನರಿಗೆ ಪರಿಚಯ ಮಾಡುಕೊಡುವುದರಲ್ಲಿ ಬಾನುಲಿಯ ಪಾತ್ರ ಹಿರಿದಾದುದು ಎಂಬುದು ನನ್ನ ಅಭಿಪ್ರಾಯ[೩೫.೧] ಆಕಾಶವಾಣಿ ಕೇಂದ್ರಗಳಲ್ಲಿ ಇಂತಹ ಜಾನಪದ ವಿದ್ವಾಂಸರು ಕಾರ್ಯನಿರ್ವಹಿಸಿದರೆ ಜಾನಪದವನ್ನು ಇನ್ನು ಹೆಚ್ಚು ವೈಚಾರಿಕವಾಗಿ ಬಾನುಲಿಯಲ್ಲಿ ತರಬಹುದು.

ಒಂದು ರೀತಿಯಲ್ಲಿ ಈ ಪ್ರಕ್ರಿಯೆ ಕೊಳ್ಳುಕೊಡುಗೆ ಸಂಬಂಧವುಳ್ಳದ್ದಾಗಿದೆ. ಜಾನಪದವು ಬಾನುಲಿಯ ಶ್ರೋತೃವರ್ಗವನ್ನು ಹೆಚ್ಚುಸುವಲ್ಲಿ ಸಹಕಾರಿಯಾದರೆ ಜಾನಪದವು ಎಲ್ಲಾ ವರ್ಗದ ಜನರನ್ನೂ ತಲುಪುವಂತೆ ಬಾನುಲಿಯು ಸಹಕಾರಿಯಾಗಿದೆ. ಬಾನುಲಿಯ ಪ್ರಸಾರ ಕ್ಷೇತ್ರವು ವಿಸ್ತಾರವಾದಂತೆ ಆಯಾ ಪ್ರದೇಶಗಳ ಜಾನಪದ ಕಲೆಗಳೊಂದಿಗೆ ಹೆಚ್ಚಿನ ಅವಕಾಶ ದೊರೆಯಿತು. ಮನೆಯಲ್ಲಿಯೇ ಕುಳಿತು ದೂರದ ಅಪರಿಚಿತ ಪ್ರದೇಶವೊಂದರ ಜಾನಪದ ಪರಂಪರೆಯನ್ನು ಸಂಗೀತ,

ಆಟ, ಮನರಂಜನೆಯು ಮುಖಾಂತರ ಅವರ ಪರಿಚಯ ಮಾಡಿಕೊಂಡು ಆನಂದಿಸಲು ಸಾಧ್ಯವಾಯಿತು. ಹೀಗೆ ಬಾನುಲಿಯಲ್ಲಿ ಜಾನಪದವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದೆ. ಇತ್ತೀಚೆಗೆ ಎಫ್. ಎಮ್. ಮೆಟ್ರೊ ಚಾನಲ್‌ಗಳಲ್ಲಿ ನಿರೂಪಕರಂತೂ ಸವಾಲ್ - ಜವಾಬ್‌ಗಳ ನಿರೂಪಣಾ ಶೈಲಿಯಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಾರೆ.

೪.೩ ಜನಪದ ರಂಗಭೂಮಿ ಮತ್ತು ಹೊಸ ಸಾಧ್ಯತೆಗಳು

ಮಾನವನ ಮೆದುಳು ವಿಕಸನಗೊಂಡಂತೆಲ್ಲ ಮನಸ್ಸು ಕ್ರಿಯಾಶೀಲವಾಗತೊಡಗಿತು. ದಿನದ ಸಮಯವನ್ನು ದುಡಿಯುವುದರಲ್ಲಿ ಕಳೆದರೂ ಬೇಸರಿಕೆಯನ್ನು ನೀಗಿಸಿಕೊಳ್ಳಲು ಹಲವು ಮಾರ್ಗಗಳನ್ನು ಅನ್ವೇಷಿಸತೊಡಗಿದ. ಸೃಷ್ಟಿಯ ವೈವಿಧ್ಯತೆ ಅವನ ಮನಸ್ಸು ಕಲಕಿದೆ. ಬಳುಕುವ ಲತೆಯನ್ನು, ಈಜುವ ಮೀನನ್ನು ಹಾರುವ ಹಕ್ಕಿಯನ್ನು ನರ್ತಿಸುವ ನವಿಲನ್ನು ಕಂಡ ಮನುಷ್ಯನಿಗೆ ತಾನು ಅದೇ ರೀತಿ ಅನುಕರಿಸತೊಡಗಿದ. ಅದರ ಫಲವಾಗಿಯೇ ವಿಮಾನ, ಹಡಗು, ನಟನೆ ಮುಂತಾದವನ್ನು ಜೀವನದಲ್ಲಿ ಕಂಡುಕೊಂಡ. ಕೆಲವೊಂದನ್ನು ತನ್ನ ಸುಲಭ ಜೀವನಕ್ಕೆ ಉಪಯೋಗವಾಗುವಂತಹ ಯಂತ್ರ ಮತ್ತು ತಂತ್ರಜ್ಞಾನಗಳನ್ನು ಕಂಡುಕೊಂಡಿದ್ದರೆ ಬೇಸರವನ್ನು ಕಳೆಯಲು ಜೀವನದಲ್ಲಿ ಮನರಂಜನೆಯನ್ನು ಪಡೆಯಲು ಉತ್ಸವ, ಜಾತ್ರೆ, ಕುಣಿತ, ಆಟಗಳು, ನೃತ್ಯ, ನಾಟಕ ಕಲೆಗಳು ಒದಗಿ ಬಂದವು. ನಮ್ಮ ಜನಪದ ರಂಗಭೂಮಿಯು ಇಂತದ್ದರ ಅನ್ವೇಷಣೆಯ ಫಲ.

“ಮನುಷ್ಯನಿಗೆ ಕಲೆಯ ಬಗೆಗೆ ಆಸಕ್ತಿ ಮೂಡಿದಾಗ ಹುಟ್ಟಿದ್ದು ಜನಪದ ಹಾಡು, ಕುಣಿತಗಳು ಮೇಳವಿಸಿದಾಗ ಜನಪದ ರಂಗಭೂಮಿ ಪ್ರಾರಂಭವಾಯಿತು ಎನ್ನುತ್ತಾರೆ. ದೈವಾರಾದನೆ ಜನಪದ ರಂಗಭೂಮಿಯ ಹುಟ್ಟಿಗೆ ಪ್ರೇರಣೆ ಎನ್ನುವುದು ಸಾಮಾನ್ಯ ನಂಬಿಕೆ.”[೩೬] ಜನಪದ ಬದುಕಿನ ನಂಬಿಕೆಯಲ್ಲಿ ದೈವಾರಾಧನೆಗೆ ಸ್ಥಾನವಿರುವುದರಿಂದ, ಎಲ್ಲದರಂತೆ ಕಲೆಯನ್ನು ದೇವರಿಗೆ ಕಲ್ಪಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಕಲೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳೂ ದೇವರ ಸಮಕ್ಷಮದಲ್ಲಿ ನಡೆಯುವುದು ರೂಢಿಯಾಗಿದೆ.[೩೭] ಮನುಷ್ಯ ಪ್ರಕೃತಿಯಲ್ಲಿ ಅಸಾಮಾನ್ಯ ಶಕ್ತಿಯಿದೆ ಎಂದು ನಂಬಿದವ. ಅವನ ಆರಾಧನೆ ಇತರರಿಗೆ ಕಂಟಕವಾಗುತ್ತಿರಲಿಲ್ಲ. ನಿಷ್ಕಲ್ಮಷವಾದ ಮನಸ್ಸೇ ತಪಸ್ಸು ಆಗುತ್ತಿತ್ತು.

ಜನಪದ ರಂಗಭೂಮಿಯು ಇಂದು ಬದಲಾವಣೆಗೆ ಒಳಪಡುತ್ತಿದೆ. ಯಾಕೆಂದರೆ ಯಾವುದೇ ಕಲೆ ಸಂಪೂರ್ಣ ಹಳೆಯರೂಪದಲ್ಲೆ ಉಳಿಯುವುದು ಸಾಧ್ಯವಿಲ್ಲ. ಅದು ಸಾಧ್ಯವಾದಷ್ಟು ಆಧುನಿಕತೆಗೆ ತೆರೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಜನಪದ ರಂಗಭೂಮಿಯು ಹೊರತಾಗಿಲ್ಲ. ಆಧುನಿಕತೆಗೆ ಒಗ್ಗಿಸಿಕೊಳ್ಳುವಾಗ ಬದಲಾವಣೆ ಸಹಜ. ಈ ಬದಲಾವಣೆಯೆಂಬುದು ಪರಂಪರೆಯನ್ನು ಮಡಿಲಲ್ಲಿ ಇಟ್ಟುಕೊಂಡು ಸಾಗಬೇಕಾಗುತ್ತದೆ ಸಂಪ್ರದಾಯವನೆಲ್ಲ. ಒಂದು ವೇಳೆ ಸಂಪ್ರದಾಯ ಬದಲಾಣೆಯಾದರೆ

ಮೂಲವೇ ಕಳಚಿ ಹೋಗುತ್ತದೆ ಎಂಬ ಆತಂಕ ತರವಲ್ಲ. ಯಾವತ್ತು ಪರಂಪರೆಗೆ ಗಟ್ಟಿತನವಿರುತ್ತದೆ. ಈ ಮಾತು ಸಂಪ್ರದಾಯಕ್ಕೆ ಹೇಳಲು ಬರುವುದಿಲ್ಲ "ಜನಪದ ರಂಗಕಲೆಗಳು. ಆಧುನಿಕ ಅಗತ್ಯಕ್ಕೆ ತಕ್ಕಂತೆ ಮೌಖಿಕ ಪರಂಪರೆಯಲ್ಲಿ ತನ್ನ ಅಸ್ತಿತ್ವ ಸಂಸ್ಥಾಪಿಸಿಕೊಳ್ಳುವಾಗ ಹಾಗೂ ಈ ಕಲೆಗಳು ಮ್ಯೂಜಿಯಂಗಳ ಆಚೆ ಜನರ ಮಧ್ಯದಲ್ಲಿ ಬೆಳೆಯುವ ಅಗತ್ಯವಿದೆ''.[೩೭] ಎಂಬ ಡಾ॥ ಪ್ರಕಾಶ್ ಗರೂಡರ (ಗೊಂಬೆ ರಂಗಭೂಮಿ ಅಭಿವೃದ್ಧಿ ಕೇಂದ್ರ, ನಿರ್ದೇಶಕರು ಧಾರವಾಡ) ಮಾತು ಮಾತಾಗಿ ಉಳಿಯದೆ ಸ್ವತಃ ಅವರ ನಿರ್ದೇಶನದಲ್ಲಿ 'ಛಾಯಾಚಲನೆ' ಎಂಬ ತಂಡ ಕಟ್ಟಿಕೊಂಡು ಜನಪದ ರಂಗಭೂಮಿ ಕಲೆಯಾದ 'ತೊಗಲು ಗೊಂಬೆ'ಯನ್ನು ಆಧುನೀಕರಣಕ್ಕೆ ಸಜ್ಜುಗೊಳಿಸಿ ಪ್ರದರ್ಶನವನ್ನು ನೀಡುತ್ತಿದ್ದಾರೆ. ಇನ್ನು ಯಕ್ಷಗಾನದಂತಹ ಕಲೆಗಳ ವೈವಿಧ್ಯತೆ ಶಿವರಾಮಕಾರಂತರಂತವರಿಂದ ದೇಶವಿದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಜನಪದ ರಂಗಭೂಮಿಯಲ್ಲಿ ಪ್ರವರ್ತನಗೊಳ್ಳುವ ನಾಟಕಗಳ ಕಥಾವಸ್ತು ಜನಪದ ಕಲ್ಪನೆಯಲ್ಲಿ ಸೃಷ್ಟಿಯಾದುದು. ಈಗ ಪ್ರಚಾರದಲ್ಲಿರುವ ರಾಮಾಯಣ ಮಹಾಭಾರತ, ಭಾಗವತ, ಪುರಾಣಗಳಿಗೆ ಅನೇಕ ಕಥಾನಕಗಳಿಗೆ ಜನಪದ ಕಲ್ಪನೆಯೇ ಮೂಲ. ಇದರ ಜೊತೆಗೆ ಹಳ್ಳಿಗರಲ್ಲೆ ಹುಟ್ಟಿದ ಕಥೆಗಳೂ ಪ್ರದರ್ಶನಗೊಂಡಿವೆ. ಕರಿಬಂಟನ ಕಥೆ, ಚೋರ ಕಥೆ, ಚಂದ್ರಹಾಸನ ಕಥೆ, ಜೋಕುಮಾರ ಮುಂತಾದವು ಜನಪದ ರಂಗಭೂಮಿಯ ಕೊಡುಗೆಗಳಾಗಿವೆ.[೩೮] ಆದರೆ ಇಂದು ಜನಪದ ರಂಗಭೂಮಿ ಕಲೆಗಳ ವಸ್ತು ಬೇರೆಯಾಗಿದೆ. ಪರಿಸರ ಸಂರಕ್ಷಣೆ, ಸಾಮಾಜಿಕ ವ್ಯವಸ್ಥೆ ಸಂತಾನ ನಿಯಂತ್ರಣ, ಸಾಕ್ಷರತಾ ಆಂದೋಲನ, ಸಾಮುದಾಯಿಕ ಬದುಕಿನ ಅರ್ಥ, ಇತಿಹಾಸ ಪುರುಷರ ಯುದ್ಧ ಹೋರಾಟ ಸಾಧನೆಗಳು, ಗಾಂಧೀಜಿಯ ಸತ್ಯಾಗ್ರಹ ಇಂತಹ ವೈವಿಧ್ಯಮಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಸಮಾಕಾಲೀನ ಅಭಿರುಚಿಗಳಿಗೆ ತಕ್ಕಂತೆ ಪ್ರದರ್ಶನ ನೀಡಲು ಜನಪದ ರಂಗಭೂಮಿಯು ಸಿದ್ಧವಾಗಿದೆ.

'ರಾಮಾಯಣ', 'ಮಹಾಭಾರತ'ಗಳ ಭಾರವನ್ನು ಕಳೆದುಕೊಂಡು ಆಧುನಿಕ ಸಂದರ್ಭಕ್ಕೆ ಹೊಂದಿಕೊಳ್ಳುವ ಸಾಮಾಜಿಕ, ಮಾನವೀಯ ಸಂಬಂಧಗಳಂತಹ ವಿಷಯಗಳನ್ನು ಆಯ್ಕೆಮಾಡಿಕೊಂಡು ಜನಪದ ರಂಗಭೂಮಿ ಮುಂದಿನ ಪೀಳಿಗೆ ಮುಂದೆ ನಿಲ್ಲಿಸತೊಡಗಿ, ಎಲ್ಲಾ ಕಾಲಕ್ಕೂ ಬದುಕಿನ ನೇರ ಉತ್ಪನ್ನವಾದ ಹಾಗೂ ಪರಂಪರೆಯಿಂದ ಅದನ್ನು ಪ್ರತಿಪಾದಿಸುತ್ತಾ ಬಂದ ಜನಪದ ಪ್ರಕಾರಗಳನ್ನು ಜನಸಾಮಾನ್ಯರ ವಿಚಾರ ವರ್ತಮಾನದೊಂದಿಗೆ ಸಂಗತಗೊಳಿಸುವ ಹಾಗೂ ಆಯಾ ಜನಪದ ಪ್ರಕಾರಗಳ ಆಕೃತಿ (Form) ಹಾಗೂ ತಂತ್ರಗಳಲ್ಲಿ ಬದಲಾವಣೆ ತಾರದೆ ಕಾರ್ಯ (Function) ದಲ್ಲಿ ಮಾತ್ರ ಬದಲಾವಣೆ ತರುವ ಮೂಲಕ ಆಧುನಿಕ ಪ್ರಗತಿಕಾರ್ಯದಲ್ಲಿ ಬಳಸಿಕೊಳ್ಳುವುದು ಜಾನಪದ ವಿದ್ವಾಂಸರ ಕಲಾವಿಮರ್ಶಕರ ಕರ್ತವ್ಯವೂ ಹೌದು. ಹೀಗೆ ಮಾಡದೆ ಜನಪದ ಕಲೆಗಳನ್ನು ಯಥಾಸ್ಥಿತಿಯಲ್ಲಿ ಉಳಿಸಬೇಕೆನ್ನುವ ಹಟತೋರಿದಾಗ ಕೆಲವೊಮ್ಮೆ ಚಲನಶೀಲ ಸಮಾಜದಲ್ಲಿ ಅವು ಅಪ್ರಸ್ತುತವಾಗುವ, ಯಾಂತ್ರಿಕವಾಗುವ ಅನ್ಯತಾಭಾವ (Alienation) ಪಡೆದುಕೊಳ್ಳುವ ಸಾಧ್ಯತೆ ಇದೆ[೩೯].

ಆದ್ದರಿಂದ ಯಾವುದೇ ಕಲೆಯನ್ನು ಆಧುನಿಕತೆಗೆ ಹೊಂದಿಸಿಕೊಳ್ಳುವಾಗ ಪರಿವರ್ತನೆ ಅನಿವಾರ್ಯ. ಆದರೇ ಈ ಪರಿವರ್ತನೆ ಎಂಬುದು ಯಾವುದೇ ಕಲೆಯಲ್ಲಿರುವ ಅಂತಸತ್ವವನ್ನು (ಮೂಲಧಾತು) ಹೆಚ್ಚಿಸುವ ಗುಣಹೊಂದಿರಬೇಕೆ ಆಗಿರಲಿ ವಿನಾಶದಂಚಿಗೆ ಕೊಂಡೊಯ್ಯಬಾರದು. ಈ ಎಚ್ಚರಿಕೆ ಜಾನಪದ ವಿದ್ವಾಂಸರಲ್ಲಿ ಕಲಾವಿಮರ್ಶಕರಲ್ಲಿ ಸದಾ ಜಾಗ್ರತವಾಗಿರಬೇಕು. ಆಗ ಮಾತ್ರ ಯಾವುದೇ ಕಲೆ ಎಷ್ಟೇ ಪರಿವರ್ತನೆಗೆ ಒಳಪಡದಿರುವ ಪರಂಪರೆಯನ್ನು ಕಳೆದುಕೊಳ್ಳುವುದಿಲ್ಲ.

ಕನ್ನಡ ಜನಪದ ರಂಗಭೂಮಿಗೆ ಸಂಬಂಧಪಟ್ಟಂತೆ ಹಲವು ಸ್ಥಿತ್ಯಂತರಗಳು ಆಗಿರುವುದು ಸಹಜ. ಯಕ್ಷಗಾನ, ತೊಗಲು ಗೊಂಬೆಯಾಟ ಮುಂತಾದ ಪರಂಪರೆಯ ಪಳೆಯುಳಿಕೆಯಾಗಿ ಉಳಿದು ಬಂದ ಕಲೆಗಳು ಆಧುನಿಕತೆಯಲ್ಲಿ ತನ್ನ ಅಂತಸತ್ವವನ್ನು ಉಳಿಸಿಕೊಳ್ಳುವಲ್ಲಿ ಹೊಸತನವನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಈ ಕಲೆಗಳನ್ನು ಆಧುನಿಕತೆಗೆ ತೊಡಗಿಸುವ ಹಾದಿಯನ್ನು ಹಿಡಿದ ವಿದ್ವಾಂಸರು ಸ್ವಲ್ಪ ಮಟ್ಟಿನ ಯಶಸ್ಸು ಕಂಡಿದ್ದಾರೆ, ಇಂತಹದೊಂದು ಮಹತ್ವದ ಕೆಲಸ ಕನ್ನಡಕ್ಕೆ ವಿಶಿಷ್ಟ ಪ್ರಯೋಗವು ಹೌದು. ಈ ರೀತಿ ಬದಲಾವಣೆಗೆ ಒಳಪಟ್ಟ ಒಂದೆರಡು ಕಲೆಗಳನ್ನು ನೋಡುವುದು ಅವಶ್ಯಕ.

ತೊಗಲುಗೊಂಬೆ ಆಟ

ತೊಗಲುಗೊಂಬೆ ಆಟವನ್ನು ಆಡಿಸುವುದು ಸಾಮಾನ್ಯವಾಗಿ ಕಿಳ್ಳಿಕ್ಯಾತರು. ಉತ್ತರ ಕರ್ನಾಟಕದಲ್ಲಿ ಇವರಿಗೆ 'ಕಟಬ' ಎಂತಲೂ ಕರೆಯುತ್ತಾರೆ. ಈ ಕಿಳ್ಳಿಕ್ಯಾತರು ಅಥವಾ ಕಟಬರು ಮಹಾರಾಷ್ಟ್ರ ಮೂಲದವರೆಂದು ಹೇಳುತ್ತಾರೆ. 'ತೊಗಲು ಆಟಕ್ಕೆ ಮೂಲವಾಗಿರುವ ಗೊಂಬೆಗಳನ್ನು ಚಿಗರೆ ಅಥವಾ ಆಡಿನ ಚರ್ಮದಿಂದ ತಯಾರಿಸಲಾಗುತ್ತದೆ. ಈ ಚರ್ಮವನ್ನು ಹದವಾಗಿ ತಿಕ್ಕಿ ಪಾರದರ್ಶಕ ಮಾಡಲಾಗುತ್ತದೆ. ಅವುಗಳನ್ನು ಮನಷ್ಯ ಆಕೃತಿಗಳಿಗೆ ಕತರಿಸಿಕೊಳ್ಳಲಾಗುತ್ತದೆ. ಒಂದೊಂದು ಗೊಂಬೆ ಸುಮಾರು ಎರಡು ಅಡಿಯಷ್ಟಿರುತ್ತವೆ. ಆಳೆತ್ತರದ ಗೊಂಬೆಯನ್ನು ನಿರ್ಮಿಸುವುದಿದೆ. ಇವುಗಳಿಗೆ ಬಣ್ಣ ಕೊಟ್ಟು ಒಂದೊಂದು ಪಾತ್ರವಾಗಿಸುತ್ತಾರೆ. ಇವರು ಇಂದಿಗೂ ಪೌರಾಣಿಕ ನಾಟಕಗಳನ್ನು ಹೆಚ್ಚಾಗಿ ಆಡುವುದರಿಂದ ಪೌರಾಣಿಕ ರೀತಿಯಲ್ಲಿ ಗೊಂಬೆಗಳಿಗೆ ಬಣ್ಣ ಕೊಡಲಾಗುತ್ತದೆ. ಉಡುಗೆ ತೊಡುಗೆ ಮುಂತಾಗಿ ವೇಷಗಾರಿಕೆಯಲ್ಲಿ ಬಣ್ಣದ ಮುಖಾಂತರವೇ ಕಟ್ಟಿಗೆಯಿಂದ ಮಾಡಲ್ಪಟ್ಟಿರುವ ಸೂತ್ರದ ಗೊಂಬೆಯ ಕೈಕಾಲುಗಳಿಗೂ ದಾರದಿಂದ ಕಟ್ಟಲಾಗುತ್ತದೆ. ಗೊಂಬೆಯ ಮುಖ್ಯ ಶರೀರದ ಉದ್ದಗಲಕ್ಕೂ ಆಧಾರವಾಗಿ ಬಿದಿರಿನ ಕಡ್ಡಿಗಳಿರುತ್ತವೆ. ಕಲಾವಿದನಿಗೆ ಹಿಡಿಯುಲು ಅನುಕೂಲವಾಗುವಂತೆ ಗೊಂಬೆಯ ತಳಭಾಗದಲ್ಲಿ ಬಿದಿರು ಹೆಚ್ಚಿಗೆ ಹಾಯ್ದಿರುತ್ತದೆ."[೪೦]

ಪ್ರಾಚೀನವಾದ ಇಂಥದೊಂದು ಕಲೆಯನ್ನು ಆಧುನಿಕತೆಗೆ ತಂದು ಚಾಲನೆ ನೀಡಿ ದೇಶಾದ್ಯಂತ ತಿರುಗಾಡುತ್ತಿರುವ ಈ ಗೊಂಬೆ ಮನೆ ನಿರ್ದೇಶಕರಾದ ಡಾ॥ ಪ್ರಕಾಶ ಗರೂಡರವರು'ಛಾಯಾಚಲನೆ'

[illegible]

[illegible]

[illegible]

[illegible]

ಯೆಂಬ ಹೆಸರಿನಲ್ಲಿ ತೊಗಲುಗೊಂಬೆ ಆಟವನ್ನು ನವೀಕರಿಸಿ ಕಲಾವಿದರನ್ನು ಕಟ್ಟಿಕೊಂಡು ರಾಜ್ಯದಾದ್ಯಂತ ಪ್ರದರ್ಶನ ಕೊಡುತ್ತಿದೆ. ಇವರು ಪ್ರದರ್ಶಿಸಬಹುದಾದ ಸ್ಥಳಗಳೆಂದರೆ ಶಾಲಾ ಕಾಲೇಜುಗಳು, ಸಾಂಸ್ಕೃತಿಕ ಕೇಂದ್ರಗಳು. ಸಂಘ ಸಂಸ್ಥೆಗಳ ಆಶ್ರಯದಲ್ಲಿ ಪ್ರದರ್ಶನ ನೀಡುತ್ತಾರೆ. ಇವರ ಯೋಜನೆ ಮತ್ತು ಪ್ರದರ್ಶನಕ್ಕೆ ಆಯ್ದುಕೊಂಡ ವಿಷಯಗಳನ್ನು ಕೆಳಕಂಡಂತೆ ಕಾಣಬಹುದು.

ಸಾಂಸ್ಕೃತಿಕ ಲೋಕದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನಪಡೆದಿರುವ 'ಗೊಂಬೆಮನೆ' ಯು ಧಾರವಾಡ ಶಹರವನ್ನು ಕೇಂದ್ರವಾಗಿಟ್ಟುಕೊಂಡು, ನಶಿಸಿಹೋಗುತ್ತಿರುವ ಗೊಂಬೆ ಆಟಗಳ ವಿವಿಧ ಮಾದರಿಗಳನ್ನು ಶಾಸ್ತ್ರೀಯವಾಗಿ, ಪ್ರಾಯೋಗಿಕವಾಗಿ ಅಭ್ಯಸಿಸಿ, ಗೊಂಬೆ ಆಟದ ರಂಗಭೂಮಿಯನ್ನು ಸಮಾಕಾಲೀನ ಅಗತ್ಯಕ್ಕೆ ತಕ್ಕಂತೆ ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವ ಉದ್ದೇಶವನ್ನು ಗೊಂಬೆಮನೆ ಹೊಂದಿದೆ. ಗೊಂಬೆ ಆಟದಂತಹ ಜನಪದ ರಂಗಕಲೆಗಳು ಆಧುನಿಕ ಅಗತ್ಯಕ್ಕೆ ತಕ್ಕಂತೆ ಮೌಖಿಕ ಪರಂಪರೆಯಲ್ಲಿ ತನ್ನ ಅಸ್ತಿತ್ವ ಸಂಗೋಪಿಸಿಕೊಳ್ಳುವ ಹಾಗೂ ಈ ಕಲೆಗಳು ಮ್ಯೂಜಿಯಂಗಳ ಆಚೆ ಜನರ ಮಧ್ಯದಲ್ಲಿ ಬೆಳೆಯುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಗೊಂಬೆಮನೆ ಗೊಂಬೆ ಆಟದ ರಂಗಭೂಮಿಯನ್ನು ಗಂಭೀರವಾಗಿ ಸ್ವೀಕರಿಸುತ್ತದೆ.

ಕಿಳ್ಳೆಕ್ಯಾತರಾಟ ಎಂದೇ ಪ್ರಚಲಿತವಿರುವ ಕರ್ನಾಟಕ ಜನಪದ ತೊಗಲುಗೊಂಬೆಯಾಟದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಸಮಾಕಾಲೀನ ಪ್ರೇಕ್ಷಕರನ್ನು ಅದರಲ್ಲಿಯೂ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಆಧುನಿಕ ತೊಗಲು ಆಟಗಳನ್ನು ಸಿದ್ಧಪಡಿಸಿ ಕರ್ನಾಟಕದಾದ್ಯಂತ ತಿರುಗಾಡಿ ಪ್ರದರ್ಶನ ಕೊಡುವುದು 'ಛಾಯಾಚಲನೆ' ಉದ್ದೇಶವಾಗಿದೆ.

'ಸಮಾಕಾಲಿನ ಮಕ್ಕಳ ರಂಗಭೂಮಿಯುಲ್ಲಿ ಹಲವಾರು ವಿಭಿನ್ನಪ್ರಯೋಗಗಳು ಪ್ರದರ್ಶನವನ್ನೊಳಗೊಂಡ ರೆಪರ್ಟರಿಗಳು ಬೆಳೆಯುತ್ತಿದ್ದರೂ. ಮಕ್ಕಳ ರಂಗಭೂಮಿಯ ಬೆಳವಣಿಗೆಗೆ ಪ್ರಮುಖ ಆಯಾಮವಾಗಬಲ್ಲಂತಹ ಗೊಂಬೆ ಆಟದಂತಹ ರಂಗಕಲೆಗಳ ರೆಪರ್ಟರಿ ನಮ್ಮ ನಾಡಿನಲ್ಲಿ ಇಲ್ಲದಿರುವುದು ಒಂದು ಕೊರತೆಯೇ ಸರಿ. ಆ ಕೊರತೆಯನ್ನು ತುಂಬಿ ಕೊಡುವ ಪ್ರಯತ್ನವನ್ನು ಗೊಂಬೆಮನೆ ಆಧುನಿಕ ಕಿಳ್ಳೆಕ್ಯಾತರಾಟ ಯೋಜನೆಯಾದ 'ಛಾಯಾಚಲನೆ' ಮಾಡುತ್ತದೆ. ಈ ಯೋಜನೆಯ ಮೊದಲ ಹಂತವಾಗಿ ಕಳೆದ ಐದು ವರ್ಷಗಳಿಂದ ತೊಗಲುಗೊಂಬೆ ಆಟದಲ್ಲಿ ವಿನೂತನ ಪ್ರಯೋಗ ನಡೆಸಿ ಮೂರು ಸಮಕಾಲೀನ ಆಧುನಿಕ ತೊಗಲುಗೊಂಬೆ ಆಟಗಳನ್ನು ಸಿದ್ಧಪಡಿಸಿದ್ದಾರೆ. (ಅವುಗಳನ್ನು ಮುಂದೆ ಕೂಲಂಕಶವಾಗಿ ನೋಡಬಹುದು) ಪೂರ್ಣಾವಧಿ ವೇತನ ಪಡೆಯುತ್ತಿರುವ ಹತ್ತು ಜನ ಕಲಾವಿದರು ಕಳೆದ ವರ್ಷ (೨೦೦೦) ಕರ್ನಾಟಕದಾದ್ಯಂತ ಹಾಗೂ ಕರ್ನಾಟಕದ ಆಚೆಗೂ ತಿರುಗಾಡಿ ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಹಾಗೂ ಸಾಂಸ್ಕೃತಿಕ ಸಂಘಟನೆಗಳ

ಆಶ್ರಯದಲ್ಲಿ ಈ ಮೂರು ಗೊಂಬೆ ಆಟಗಳು ನೂರಾ ಇಪ್ಪತ್ತಕ್ಕೂ ಹೆಚ್ಚು ಪ್ರಯೋಗ ಕಂಡಿದೆ. ಹಾಗೂ ಹತ್ತು ತೊಗಲುಗೊಂಬೆ ಆಟದ ಕಾರ್ಯಗಾರವನ್ನು ನಡಸಿ ಕೊಟ್ಟಿದ್ದಾರೆ. ಈ ಯೋಜನೆಯ ಜೊತೆಗೆ ಮಕ್ಕಳಿಗೆ ಹಾಗೂ ದೊಡ್ಡವರಿಗೆ ತೊಗಲುಗೊಂಬೆಯಾಟದ ಪ್ರಾತ್ಯಕ್ಷಿಕೆ ಕಾರ್ಯಗಾರವನ್ನು ಸಹ ಈ ತಂಡ ನಡೆಸಿಕೊಡುತ್ತದೆ. ಕನಿಷ್ಟ ಮೂರು ದಿನಗಳಿಂದ ಹಿಡಿದು ಗರಿಷ್ಟ ಮೂರುವಾರಗಳ ತನಕ ಈ ಕಾರ್ಯಗಾರವನ್ನು ನಡೆಸಿಕೊಡುತ್ತದೆ. ಗೊಂಬೆ ಆಟದ ನಾಟಕ ರಚನೆ ಗೊಂಬೆಗಳ ವಿನ್ಯಾಸ ಗೊಂಬೆಗಳನ್ನು ಆಡಿಸುವ ಬಗ್ಗೆ ಈ ಕಾರ್ಯಗಾರದಲ್ಲಿ ಪ್ರಾಥಮಿಕ ತರಬೇತಿ ನೀಡಲಾಗುತ್ತದೆ. ತನ್ನ ಹಲವಾರು ಇತಿಮಿತಿಗಳ ಮಧ್ಯೆಯೂ ರೂಪುಗೊಳ್ಳುತ್ತಿರುವ ಈ ತಂಡ ನಮ್ಮ ನಾಡಿನಲ್ಲೇ ಪ್ರಪ್ರಥಮವಾಗಿ ಗೊಂಬೆ ಆಟದಂತಹ ರಂಗಕಲೆಯ ಆಧುನಿಕ ರೆಪರ್ಟರಿ ಪರಿಕಲ್ಪನೆಯ ತಂಡವಾಗಿದೆ.[೪೧] ಇಂತಹ ಕಾರ್ಯಗಾರವನ್ನು ಏರ್ಪಡಿಸುವುದರಿಂದ ವಿದ್ವಾಂಸರಿಗೆ ಆಸಕ್ತಿ ಹುಟ್ಟಿ, ಇವುಗಳು ವಿವಿಧ ಪ್ರಯೋಗಗಳನ್ನು, ಇನ್ನಿತರ ಜನಪದಕತೆಗಳಲ್ಲಿ ತಂದು ಅವುಗಳನ್ನು ಆಧುನಿಕತೆಗೆ ಪ್ರಸ್ತುತ ಪಡಿಸಲು ಪ್ರೇರಣೆ ನೀಡಿದಂತಾಗುತ್ತದೆ.

'ಛಾಯಾಚಲನೆ' ತಂಡವು ಹತ್ತು ಜನ ಕಲಾವಿದರನ್ನು ಹೊಂದಿದ್ದು. ಪ್ರಸ್ತುತದಲ್ಲಿ ಮೂರು ಸಮಕಾಲೀನ ವಿಷಯಗಳನ್ನು ಆಯ್ಕೆಮಾಡಿಕೊಂಡು; ಆಯಾವಿಷಯಕ್ಕೆ ಸಂಬಂಧಪಟ್ಟಂತೆ ಗೊಂಬೆಗಳನ್ನು ತಯಾರುಮಾಡಿಕೊಂಡು ಶಾಲಾ ಕಾಲೇಜುಗಳಲ್ಲಿ ಪ್ರದರ್ಶನ ನೀಡುತ್ತವೆ. ಅವುಗಳನ್ನು ಕೆಳಕಂಡಂತೆ ನೋಡಬಹುದು.

೧. ಕೆಂಪುಹೂ (ಅವಧಿ ೨೫ ನಿಮಿಷ)

ಬೀದಿ ನಾಟಕಗಳ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡು ಸಾಮಾಜಿಕ ಅನಿಷ್ಟಗಳನ್ನು ಕಟುವಾಗಿ ಟೀಕಿಸಿದ ಎಡಪಂಥೀಯ ರಂಗಕರ್ಮಿ ಸಪ್ದರ್ ಹಶ್ಮಿ ಅವರ ಕಿರುನಾಟಕ 'ರೆಡ್‌ಪ್ಲವರ್' ನ್ನು ಗೊಂಬೆ ಅಟಕ್ಕೆ ಅಳವಡಿಸುವ ಪ್ರಯತ್ನ ಮಾಡಲಾಗಿದೆ. ಕನ್ನಡಕ್ಕೆ ನಟರಾಜ ಹೊನ್ನವಳ್ಳಿ ಅನುವಾದಿಸಿದ್ದಾರೆ. ಕೆಂಪು ಹೂ ಸೂರ್ಯನ ಆಪ್ತ ಗೆಳತಿ. ಅದೇ ಈ ಗೊಂಬೆ ಆಟದ ಕೇಂದ್ರ ಬಿಂದು. ಹೂ ಮತ್ತು ಸೂರ್ಯ ದಿನನಿತ್ಯ ಬಳಿಗ್ಗೆ ಬೇಟಿಯಾಗಿ ಮಾತಾನಾಡುವುದು ರೂಢಿ. ಒಂದು ದಿನ ಅನಿರೀಕ್ಷಿತವಾಗಿ ಕೆಂಪು ಹೂವಿನ ಕುತ್ತಿಗೆಯಲ್ಲಿ ಒಂದು ಸಣ್ಣ ಹುಳು ಸೇರಿಕೊಂಡು ಅದಕ್ಕೆ ನೋವನ್ನುಂಟು ಮಾಡುತ್ತದೆ. ಹೀಗಾಗಿ ಕೆಂಪುಹೂವಿಗೆ ಮಾತಾನಾಡಲು ಶಕ್ತಿ ಇಲ್ಲದ್ದರಿಂದ ಸೂರ್ಯನಿಗೆ ಬೇಸರವಾಗುತ್ತದೆ. ಗಾಳಿ ಬೀಸುವುದಿಲ್ಲ. ಮೋಡ ಚದುರುವುದಿಲ್ಲ. ಕೋಳಿ ಕೂಗುವುದಿಲ್ಲ. ಹಾಗೆ ಪರಿಸರದ ಕ್ರಿಯೆ ಎಲ್ಲವೂ ಸ್ಥಗಿತ. ಕೊನೆಗೆ ಒಂದು ಕಪ್ಪೆ ಕೋಳಿಗೆ ಆ ಹುಳುವನ್ನು ತನ್ನ ಕೊಕ್ಕಿನಿಂದ ತೆಗೆಯಲು ಹೇಳುತ್ತದೆ. ಕೋಳಿ ಕೆಂದು ಹೂವಿನ ಕುತ್ತಿಗೆಯಲ್ಲಿದ್ದ ಹುಳುವನ್ನು ತೆಗೆಯುತ್ತದೆ. ಕೆಂಪು ಹೂ ಮೊದಲಿನಂತಾಗುತ್ತದೆ. ಸೂರ್ಯ ಬೆಳಗುತ್ತಾನೆ. ಗಾಳಿ ಬೀಸುತ್ತದೆ. ಕೋಳಿ ಕೂಗುತ್ತದೆ. ಒಂದು

[illegible]

[illegible]

[illegible]

[illegible]

[illegible]

ಸಣ್ಣ ತಪ್ಪಿನಿಂದ ಸ್ಥಗಿತ ಗೊಂಡಿದ್ದ ಸೃಷ್ಟಿಯ ಎಲ್ಲಾ ಕ್ರಿಯೆಗಳು ಮತ್ತೆ ಚೈತನ್ಯ ಪಡೆಯುತ್ತವೆ. ಸಾಮುದಾಯಿಕ ಬದುಕಿನ ಮಹತ್ವವನ್ನು ಈ ಚಿಕ್ಕ ಕಥೆಯಲ್ಲಿ ಸರಳವಾಗಿ ಮಕ್ಕಳಿಗೆ ಇಷ್ಟವಾಗುವ ಹಾಗೆ ಪಶ್ಮಿಯವರು ರಚಿಸಿದ್ದಾರೆ. ಇದರಲ್ಲಿ ಬರುವ ಸೂರ್ಯ, ಗಾಳಿ, ಮೋಡ ಮುಂತಾದ ಪಾತ್ರಗಳು ಗೊಂಬೆ ಆಟಕ್ಕೆ ಹತ್ತಿರವಾಗುತ್ತವೆ. ಈ ಪ್ರದರ್ಶನವು ನೋಡುಗರನ್ನು ಸಾಮಾಜಿಕ ನೋವಿನ ಚಿಂತನೆಗೆ ಹಚ್ಚುತ್ತದೆ. ಅಂತಹ ಅದ್ಭುತವಾದ ಶಕ್ತಿ ಈ ತೊಗಲು ಗೊಂಬೆ ಆಟದಲ್ಲಿ ತೋರಿಸಿದ್ದಾರೆ.

೨. ಗಾರ್ದಭ ಮನುಷ ಪ್ರಹಸನ (ಅವಧಿ ೬೦ ನಿಮಿಷ)

ಮಧ್ಯ ಏಷಿಯಾ ಜನಪದ ಕಥೆಯನ್ನು ಹೊನ್ನವಳ್ಳಿಯವರು ಚಿಕ್ಕ ನಾಟಕ ರೂಪದಲ್ಲಿ ಕನ್ನಡಕ್ಕೆ ತಂದಿದ್ದಾರೆ. ಗೊಂಬೆಗಳ ವಿನ್ಯಾಸವನ್ನು ಅಜಿತರಾವ್ ಮುಂಬಯಿ ಸಂಯೋಜಿಸಿದ್ದು ಡಾ।। ಪ್ರಕಾಶ್ ಗರೂಡರವರು ಇದಕ್ಕೊಂದು ರಂಗ ಪರಿಕಲ್ಪನೆಯನ್ನು ಕೊಟ್ಟಿದ್ದಾರೆ. ಈ ತೊಗಲುಗೊಂಬೆ ಆಟವು ಕರ್ನಾಟಕ ಪಾರಂಪರಿಕ ತೊಗಲುಗೊಂಬೆ ಆಟಗಾರರು ಆಧುನಿಕ ಚಿತ್ರಕಲಾವಿದರ ಸಹಯೋಗದಲ್ಲಿ ಸಿದ್ಧಗೊಂಡಿದೆ. ಪಾರಂಪರಿಕ ತೊಗಲುಗೊಂಬೆಗಳ ವಿನ್ಯಾಸದ ಜೊತೆಗೆ ಕರ್ಟೂನ್ ಚಿತ್ರಕಲೆ. ಮೊಗಲ್ ಮಿನಿಯೇಚರ್ ಚಿತ್ರಕಲೆ ಇವುಗಳ ವಿನ್ಯಾಸ ವರ್ಣಗಳನ್ನು ಮೇಳೈಸಿದ ಒಂದು ತಾಸಿನ ಈ ಕಥೆಗೆ ೩೫ ಗೊಂಬೆಗಳನ್ನು ರಚಿಸಲಾಗಿದೆ. ಕಥೆಯ ನಿರೂಪಣೆ, ದೃಶ್ಯೀಕರಣ, ಸಂಗೀತ ಬೆಳಕಿನ ವಿನ್ಯಾಸ ಈ ಅಂಶಗಳಲ್ಲಿ ಹೊಸಪ್ರಯೋಗ ಮಾಡಲಾಗಿದೆ. ಸಂತಾನ ಭಾಗ್ಯವಿಲ್ಲದ ಅಗಸ ಮುಲ್ಲಾನಿಗೆ ಸಾಕಿದ ಕತ್ತೆ 'ಆಳೂ' ಆಗಿದೆ 'ಮಗ' ನೂ ಆಗಿದೆ. ಪಂಡಿತೋತ್ತಮ ಮೌಲಿಯ ಮಾತಿಗೆ ಮರುಳಾದ ಅಗಸ ಕತ್ತೆಯನ್ನು 'ಮನುಷ್ಯನನ್ನಾಗಿ ಮಾಡಲು ಶಕ್ಯವಿದೆ ಎಂದು ನಂಬಿ ಮೌಲಿಗೆ ಕತ್ತೆಯನ್ನು ಜೊತೆಗೆ ಕೈತುಂಬ ಹಣವನ್ನು ತೆತ್ತು ಬರುತ್ತಾನೆ. ಆರು ತಿಂಗಳು ಕಳೆದ ಮೇಲೆ ಅಗಸ ಮತ್ತು ಹೆಂಡತಿ ಇಬ್ಬರು ಆಸೆಯಿಂದ ಮೌಲಿಯನ್ನು ಹೋಗಿ ಕಾಣುತ್ತಾರೆ. ತನ್ನಿಂದಾಗಿ "ಮನುಷ್ಯ" ನಾಗಿರುವ ಆ ಕತ್ತೆ ಈಗ ವಾರಣಾಸಿಯ ನ್ಯಾಯಾಲಯದಲ್ಲಿ 'ಖಾಜಿ' ಆಗಿದ್ದಾನೆಂದು ಮೌಲಿ ಹೇಳಿದ್ದನ್ನು ನಂಬಿ ದಂಪತಿಗಳು ಕಂಡರಿಯದ ಆ ಪಟ್ಟಣಕ್ಕೆ 'ಮಗ' ನನ್ನು ಕಾಣಲು ಧಾವಿಸುತ್ತಾರೆ. ಅವರ 'ಕತ್ತೆ' ಅಲ್ಲಿ ನ್ಯಾಯಧೀಶನಾಗಿದ್ದಾನೆ! ನ್ಯಾಯಧೀಶನಾಗಿ ಇವರನ್ನು ಹೇಗೆ ಕಂಡ? 'ಮನುಷ್ಯ' ರೂಪಿ ಕತ್ತೆ, 'ಕತ್ತೆ' ರೂಪಿ ಮನುಷ್ಯನಿಂದ ನಾವು ಕಲಿಯುವ ಪಾಠವೇನು? ಇದು ಈ ಗೊಂಬೆ ಆಟದ ಕುತೂಹಲಕಾರಿ ಕಥೆ. ಪ್ರಹಸನ ಮಾದರಿಯ ಈ ಆಟದಲ್ಲಿ ಬರುವ ಅನಿರೀಕ್ಷಿತ ಘಟನೆಗಳು ಮಕ್ಕಳಿಗೆ ಆಪ್ಯಾಯವಾದರೆ, ಪ್ರಬುದ್ಧ ಪ್ರೇಕ್ಷಕರನ್ನು ಸಮಾಕಾಲೀನ ವ್ಯಾಖ್ಯಾನದೊಂದಿಗೆ ಚಿಂತನೆಗೆ ಹಚ್ಚುತ್ತದೆ.

ಹಕ್ಕಿ ಹಾಡು (ಅವಧಿ ೩೫ ನಿಮಿಷ)

'ದಿ ಎಂಪರರ್ಸ್ ನೈಟಿಂಗೇಲ್' ನ್ನು ಕನ್ನಡಕ್ಕೆ ವೈದೇಹಿ ತಂದಿದ್ದಾರೆ. ನಟರಾಜ ಹೊನ್ನವಳ್ಳಿ

[illegible]

ರಂಗಪರಿಕಲ್ಪನೆ ನೀಡಿದ್ದಾರೆ.ಸಂಗೀತ ಪ್ರಧಾನವಾದ ಈ ತೊಗಲಗೊಂಬೆ ಆಟಕ್ಕೆ ಬಿ.ವಿ. ಕಾರಂತರು ಸಂಗೀತ ಸಂಯೋಜಿಸಿದ್ದಾರೆ. ಪಾರಂಪರಿಕ ತೊಗಲುಗೊಂಬೆ ಆಟಗಳಿಗಿಂತ ತೀರ ಭಿನ್ನವಾಗಿ ಗೊಂಬೆಗಳನ್ನು ಈ ಆಟಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಗೊಂಬೆಗಳ ವರ್ಣವಿನ್ಯಾಸದಲ್ಲಿ ವಿವಿಧ ಛಾಯೆಗಳನ್ನು ಬಳಸಿ ಬೆಳಕಿನ ವಿನ್ಯಾಸದಿಂದ ಕಥೆಯ ಮೂಡ್ ಹಿಡಿಯಲು ಆಟದಲ್ಲಿ ಪ್ರಯತ್ನಿಸಲಾಗಿದೆ. ಇಲ್ಲಿ ಬರುವ ಕಾಡಿನ ಮೈನಾಹಕ್ಕಿ ಮತ್ತು ಅದರ ಹಾಡು, ಪ್ರಕೃತಿಯ ಸಹಜ ಜೀವಂತಿಕೆಯ ಸಂಕೇತವಾದರೆ, ಬಂಗಾರದ ಯಂತ್ರ ಹಕ್ಕಿ ಮತ್ತು ಅದರ ಕೃತ್ರಿಮಹಾಡು ಯಂತ್ರಯುಗದ ಅಸಹಜತೆಯ ಸಂಕೇತವಾಗುತ್ತದೆ. ಈ ಆಟದಲ್ಲಿ ಬರುವ ರಾಜ ಮೈನಾಹಕ್ಕಿಯ ಜೀವಂತ ಹಾಡಿನಿಂದ ಪಡೆಯುವ ಅಲೌಖಿಕ ಅನುಭವ ಅನನ್ಯವಾದುದು. ಸರಳವಾದ ಈ ಕಥೆಯನ್ನು ಗೀತ ನಾಟಕದ ರೂಪದಲ್ಲಿ ಮಕ್ಕಳಿಗಾಗಿ ರಚಿಸಲಾಗಿದೆ[೪೨] ಪರಂಪರೆಯಿಂದ ಬಂದ ಜನಪದ ರಂಗಭೂಮಿ ಕಲೆಯಾದ ತೊಗಲು ಗೊಂಬೆ ಆಟವನ್ನು ಆಧುನಿಕತೆಗೆ ಒಗ್ಗಿಸಿಕೊಂಡು ಅದೇ ಜೀವನಾಧಾರವಾಗಿ ಮಾಡಿಕೊಂಡ ಈ ರಂಗತಂಡವು ಜಾನಪದ ಕಲೆಗಳನ್ನು ಬದುಕಿಸುವುದರೊಂದಿಗೆ ಈ ಜಾನಪದ ರಂಗಕಲೆಯೂ ಈ ರಂಗತಂಡವನ್ನು ಬದುಕಿಸುತ್ತದೆ. ಯಾವುದೇ ಜಾನಪದಕ್ಕೆ ಇಂತಹದೊಂದು ಶಕ್ತಿ ಇರುತ್ತದೆ. ಇದನ್ನು ಸಾರಥಿಯಾದವನು ಸಮರ್ಥವಾಗಿ ಬಳಸಿಕೊಳ್ಳಬೇಕಷ್ಟೆ.

ತೊಗಲುಗೊಂಬೆ ಆಟಕ್ಕೆ ಹೊಸ ಆಯಾಮವನ್ನು ನೀಡಿದ ಬೆಳಗಲ್ಲು ವೀರಣ್ಣನವರು. ಇವರು ಸ್ವತಃ ಕಿಳ್ಳೆಕ್ಯಾತರ ಮನೆತನದವರು. ತನ್ನ ಮನೆತನದ ಪರಂಪರೆಯಿಂದ ಬಂದ ಕಲೆಯನ್ನು ಸಮಕಾಲೀನತೆಗೆ ತರುವುದರಲ್ಲಿ ಯಶಸ್ವಿಯಾಗಿದ್ದಾರೆ. ಇಂದು ಅವರ ಕುಟುಂಬವೇ ಸಂಪೂರ್ಣ ತೊಗಲು ಗೊಂಬೆ ಆಟದಲ್ಲಿ ಕ್ರಿಯಾಶೀಲವಾಗಿದೆ. ಇವರು ಮೊದ ಮೊದಲು ರಾಮಾಯಣ ಮಹಾಭಾರತ ಕಥಾ ಪ್ರಸಂಗಗಳನ್ನು ಇಟ್ಟುಕೊಂಡು ಮಾಡಿದರೂ ಸಹ "ಇಷ್ಟರಿಂದಲೇ ತೃಪ್ತರಾಗದ ವೀರಣ್ಣನವರಿಗೆ ಹೊಸತನ್ನು ಮಾಡಿತೋರಿಸುವ ತವಕ ಉಂಟಾಯಿತು. ಬರೀ ರಾಮಾಯಣ ಮಹಾಭಾರತ ಆಡಿದರೆ ಸಾಕೆ? ಅಧುನಿಕ ಇತಿಹಾಸಕ್ಕೆ ಸ್ಪಂದಿಸಬೇಡವೇ ಎಂದು ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನು ತೊಗಲು ಗೊಂಬೆಯಾಟದಲ್ಲಿ ಪ್ರಚುರಪಡಿಸಿದರೆ ಹೇಗಿರುತ್ತದೆ ಎಂದು ತಲೆಯಲ್ಲಿ ವಿಚಾರ ಸುಳಿದಿದ್ದೇ ತಡ ಸಂಗೀತ ನಾಟಕ ಅಕಾಡಮಿಗೆ ಧನ ಸಹಾಯ ಕೋರಿ ಅರ್ಜಿಸಲ್ಲಿಸಿದರು. ಅಂದಿನ ಅಧ್ಯಕ್ಷ ಗಿರೀಶ್ ಕಾರ್ನಾಡರು ಹತ್ತುಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರು. ಅಲ್ಲಿಲ್ಲಿ ಧನಸಂಗ್ರಹಿಸಿ ಇನ್ನು ಹತ್ತು ಸಾವಿರ ರೂಪಾಯಿ ಸೇರಿಸಿ ಗೊಂಬೆಗಳನ್ನು ನಿರ್ಮಿಸಿಕೊಂಡರು. ಗೊಂಬೆಗಳನ್ನು ಸಿದ್ಧ ಪಡಿಸಿದ್ದಾಯಿತು. ಇನ್ನೂ ಕಥೆ, ಸಂಭಾಷಣೆ, ನೂರು ವರ್ಷದ ಸ್ವಾತಂತ್ರ್ಯ ಸಂಗ್ರಾಮವನ್ನು ಸಿಪಾಯಿದಂಗೆಯಿಂದ ಆರಂಭಿಸಿ 'ಝಾನ್ಸಿ'ವರೆಗೆ ಹೊರ ಹೊಮ್ಮಿತು. ಆದರೆ ಬರಿ ಹಾಡಿ ಹೇಳಿದರಾಯಿತೆ ದೃಶ್ಯ ಮಾಧ್ಯಮವಲ್ಲವೇ? ಹಾಡಿನ ಅವಧಿಯವರೆಗೆ ಅದಕೊಪ್ಪುವ ಬೊಂಬೆ ತೋರಿಸಬೇಕು ಎಂದಿನಿಂದಲೂ ಬೊಂಬೆತಯಾರಿಕೆಗೆ ಚಿತ್ರ ಬಿಡಿಸಿಕೊಡುವುದು ಸಂಡೂರಿನ ಕಾಳೆ ಮಾಸ್ತರಿಗೆ ಇದೊಂದು ಆಹ್ವಾನವಾಯಿತು. ಹಾಡಿನಲ್ಲಿ

[illegible]

[illegible]

[illegible]

ವರ್ಣಿತವಾದ ಫಿರಂಗಿ ಮುಖ ಹೋಲುವ, ಹದ್ದಿನಂತೆ ಒಂದು ಭಯಾನಕ ಕಾಲ್ಪನಿಕ ಹಕ್ಕಿಯಚಿತ್ರ ಬಿಡಿಸಿಕೊಟ್ಟರು. ಪ್ರದರ್ಶನಕ್ಕೆ ಕಳೆಕಟ್ಟಲು ಝಾನ್ಸಿರಾಣಿ ಲಕ್ಷ್ಮೀಬಾಯಿ ಸಾವಿನ ತನಕ ರೂಪಿಸಿಕೊಂಡರು. ಮುಂದೆ ತಮ್ಮ ಒಡನಾಡಿ ಸಾಹಿತಿ ಕಲಾವಿದ ವೈ. ರಾಘವೇಂದ್ರರಾವ್ ಅವರನ್ನು ನಾಟಕ ರಚಿಸಲು ಕೇಳಿಕೊಂಡರು ಅವರು ಒಂದು ದಿನ ಇದ್ದಕ್ಕಿದಂತೆ ದವಳಗಿರಿ ಹಿಮಾಲಯದಿಂದ ಕಥೆ ಅರಂಭಿಸಿ ಆ ಕಲ್ಪನೆಯ ಬೆನ್ನೇರಿ ಹಾಡು ಮೂಡಿ ಬಂದು ಭಾವಪೂರ್ಣ ನಾಟಕ ರಚಿಸಿಕೊಟ್ಟರು. ಈ ಸ್ವಾತಂತ್ರ್ಯ ಸಂಗ್ರಾಮ ತೊಗಲು ಆಟ ಬಳ್ಳಾರಿಯಲ್ಲಿ ಫೆಬ್ರವರಿ ೧೦, ೧೯೬೦ ರಂದು ಆರಂಭಗೊಂಡು ಕರ್ನಾಟಕ, ಕೇರಳ, ತಮಿಳುನಾಡು, ದಿಲ್ಲಿ ಎಲ್ಲೆಲ್ಲೂ ಪ್ರದರ್ಶನ ನಡೆಯಿತು."[೪೩] ಇವರು ಮತ್ತೆ ಮುಂದುವರೆದು ಗಾಂಧೀಜಿಯ ಸತ್ಯಾಗ್ರಹ ಪ್ರಸಂಗ, ಪ್ರವಾದಿ ಬಸವೇಶ್ವರ ತೊಗಲುಗೊಂಬೆ ಆಟ ಮುಂತಾದ ಇತಿಹಾಸಕ್ಕೆ ಸಂಬಂಧಿಸಿದಂತೆ ತೊಗಲುಗೊಂಬೆ ಆಟವನ್ನು ಸಿದ್ಧಮಾಡಿಕೊಂಡಿದ್ದಾರೆ. ಈ ಕಲಾ ತಂಡವು ದೇಶದಾದ್ಯಂತ ವಿವಿಧ ಪ್ರದರ್ಶನಗಳನ್ನು ನೀಡಿದೆ.

ತೊಗಲು ಗೊಂಬೆ ಆಟವು ಭೂತಕಾಲದಲ್ಲಿ ಕೇವಲ ರಾಮಾಯಣ, ಮಹಾಭಾರತ ಪ್ರಸಂಗಗಳನ್ನು ಆಡುವುದರಿಂದ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿ ತಲುಪಿತ್ತು. ಆದರೆ ಇಂತಹ ಜಾನಪದ ತಜ್ಞರಿಂದ ತೊಗಲುಗೊಂಬೆ ಆಟದ ಆ ಕೃತಿಗೆ ಯಾವುದೇ ರೀತಿಯ ಊನ ತಾರದೆ ಕೇವಲ ಕಥಾ ವಸ್ತುವಿನಲ್ಲಿ ಬದಲಾವಣೆ ತಂದು ಸಮಕಾಲೀನತಗೆ ಹೆಚ್ಚು ಒತ್ತುಕೊಟ್ಟಿದ್ದರಿಂದ ಈ ಕಲೆಯು ಇಂದು ಹೆಚ್ಚು ಮೌಲ್ಯಯುತವಾಗಿ ಪ್ರದರ್ಶನ ಕಾಣುತ್ತದೆ. ಅಷ್ಟೇ ಅಲ್ಲ ಇದನ್ನು ನಂಬಿದವರನ್ನು ಆರ್ಥಿಕ ಪರಿಸ್ಥಿತಿಯಲ್ಲಿ ಸದೃಢರನ್ನಾಗಿಯೂ ಮಾಡಿದೆ.

ಯಕ್ಷಗಾನ

ಯಕ್ಷಗಾನ ಕರ್ನಾಟಕದಲ್ಲಿ ಪ್ರಭಾವಯುತವಾದ ಜನಪದರಂಗಕಲೆ. ಇದು ದಕ್ಷಿಣ ಕನ್ನಡ ಮತ್ತು ಕರಾವಳಿಯ ತೀರಪ್ರದೇಶಗಳಲ್ಲಿ ಇದರ ಮೂಲ ನೆಲೆ. ಇಂದು ನಾಡಿನ ಹಲವು ವಿದ್ವಾಂಸರಿಂದ ಈ ಕಲೆ ಬಹಳಷ್ಟು ಬದಲಾವಣೆಗೆ ಒಳಪಟ್ಟಿದೆ. ಬದಲಾವಣೆಗೆ ಒಳಪಟ್ಟಿದ್ದರಿಂದಲೇ ದೇಶ ವಿದೇಶಗಳಲ್ಲಿ ಈ ಕಲೆ ಹೆಚ್ಚು ಪ್ರಭಾವಯುತವಾಗಿ ಬೆಳೆದಿದೆ. ಇದಕ್ಕೆ ಪ್ರಮುಖ ಕಾರಣ ಡಾ।। ಶಿವರಾಮಕಾರಂತರು. ಇವರು ಸಾಂಪ್ರದಾಯಿಕ ಕಲೆಯನ್ನು ಬಂಧನಗಳಿಂದ ಬಿಡಿಸಿ ಭಾವಾಭಿನಯದ ಮೂಲಕ ಯಕ್ಷಗಾನದಲ್ಲಿ ಹೊಸ ಪ್ರಯೋಗವನ್ನು ಮಾಡಿದರು. "ಅಷ್ಟೆಲ್ಲಾ ನೃತ್ಯಗೀತೆ, ವರ್ಣ ವೇಷ ವೈಭವವನ್ನು ಹೊಂದಿಯೂ ಪಾತ್ರಗಳು ಅಲ್ಲಿಯೇ ಕಲ್ಪಿಸಿ ಆಡುತ್ತಿದ್ದ ಮಾತಿನ ಪುಟ್ಟ ಚೌಕಟ್ಟಿನಲ್ಲಿ ನಿಲುಕಿ ನರಳುತ್ತಿದ್ದ ಯಕ್ಷಗಾನಕ್ಕೆ ಬೇರೆಯೇ ಸ್ವರೂಪ ಕೊಟ್ಟು, ಮಾತಿನ ಸಂಕೋಲೆಯಿಂದ ಅದನ್ನು ಬಿಡುಗಡೆ ಮಾಡಿ ನೃತ್ಯ -ಗೀತ- ಅಭಿನಯಗಳಿಗೆ ಹೆಚ್ಚಿನ ಪ್ರಾಧಾನ್ಯಕೊಟ್ಟು ಅದನ್ನು 'ಬ್ಯಾಲೆ'ಯಾಗಿ ಪರಿವರ್ತಿಸುವ ಪ್ರಯೋಗ ಮಾಡಿದವರು ಶಿವರಾಮಕಾರಂತರು. ಕನ್ನಡ ಅರಿಯದ ಬೇರೆ ಭಾಷೆಯವರಿಗೂ ಇಂತಹದೊಂದು ಪ್ರಯೋಗ ಯಕ್ಷಗಾನದ ಹಿರಿಮೆ ಗರಿಮೆಗಳ

[illegible]

[illegible]

[illegible]

[illegible]

ಪರಿಚಯ ಮಾಡಿಕೊಡುವಲ್ಲಿ ನಿಜವಾದ ಯಶಸ್ಸನ್ನು ಗಳಿಸಿತು. ಪ್ರದರ್ಶನದ ಕಾಲಪ್ರಮಾಣವನ್ನು ಎರಡೂ - ಎರಡೂವರೆ ಗಂಟೆ ಅವಧಿಗೆ ಇಳಿಸಿ. ಪಾತ್ರಗಳ ಅಭಿನಯವನ್ನು ಬೆಳಗಿಸಿ ಹಿಮ್ಮೇಳಕ್ಕೆ ಸ್ಯಾಕ್ಸೊಫೋನ್, ಕ್ಲಾರಿಯೋನೆಟ್ ಹಾಗೂ ಪಿಟೀಲುಗಳನ್ನು ಅಳವಡಿಸಿ ಒಂದಲ್ಲಾ ಮೂರು ಮದ್ದಳೆಗಳನ್ನು ನಿಯೋಜಿಸಿದರೂ ಭಾಗವತನ ಗೀತಾರ್ಥಕ್ಕೆ ಭಂಗಬಾರದಂತೆ ಎಚ್ಚರ ವಹಿಸಿ ನೃತ್ಯಗಳನ್ನು ಬೇರ್ಪಡಿಸಿ, ಪಾತ್ರಗಳ ಮಾತನ್ನು ಬುಡಮಟ್ಟ ಕತ್ತರಿಸಿ ಅವರು ೧೯೬೨ ರಿಂದ ಈಚಿನ ವರ್ಷಗಳಲ್ಲಿ ಭೀಷ್ಮ ವಿಜಯ, ಅಭಿಮನ್ಯು, ಸೈಂಧವ ವಧೆ ಬಬ್ರುವಾಹನ ಕಾಳಗ ಹಾಗೂ ರತಿಕಲ್ಯಾಣ ಬ್ಯಾಲೆಗಳನ್ನು, ಮಂಗಳೂರು, ಬೆಂಗಳೂರು, ಧಾರವಾಡ ಮುಂಬೈಗಳಲ್ಲಿ ಪ್ರಯೋಗಿಸಿದ್ದು ಕ್ರಾಂತಿಕಾರಿಯೇ ಆಯಿತು."[೪೪] ಇಷ್ಟೆ ಅಲ್ಲದೆ ಕಾರಂತರು ಯಕ್ಷಗಾನ ತಂಡವನ್ನು ಕಟ್ಟಿಕೊಂಡು ದೇಶವಿದೇಶಗಳನ್ನೆಲ್ಲಾ ಸುತ್ತಾಡಿದರು. ಇಳಿ ವಯಸ್ಸಿನಲ್ಲೂ ಇವರ ಬತ್ತದ ಸ್ಫೂರ್ತಿಸೆಲೆ ಅದ್ಭುತವಾದುದು.

ಯಕ್ಷಗಾನದಲ್ಲಿ ಇತ್ತೀಚೆಗೆ ಹೊಸಹೊಸ ಪ್ರಯೋಗಗಳು ಆಗುತ್ತವೆ 'ವಸ್ತು' ಸಹ ಬೇರೆಯದೇ ಆಗಿದೆ. ಸಂವಹನಶೀಲವಾದ ಯಕ್ಷಗಾನದಿಂದ ಕುಟುಂಬ ಯೋಜನೆ, ಅಕ್ಷರ ವಿಮೋಚನೆ, ಪರಿಸರ ಸಂರಕ್ಷಣೆ, ಸಮುದಾಯದ ಸೇವೆ, ಇವೇ ಮುಂತಾದ ಸಂದೇಶಗಳನ್ನು ಜನ ಸಾಮಾನ್ಯರಿಗೆ ತಿಳಿಸಲು ಯಕ್ಷಗಾನದಂತಹ ಕಲೆಯನ್ನು ಮಾಧ್ಯಮವಾಗಿ ಬಳಸಿಕೊಳ್ಳುತ್ತಿದ್ದಾರೆ. ಬಿಳಿಮಲೆಯವರು ಇದರ ಬದಲಾವಣೆಯನ್ನು ಕುರಿತು."ಕಲಾ ವಿಮರ್ಶೆಯೊಂದರ ಶಿಥಿಲೀಕರಣ ಮತ್ತು ಪುನರ್ ಹೊಂದಾವಣಿಕೆಯ ಪ್ರಯತ್ನ' ಎಂದಿದ್ದಾರೆ.

"ಆಧುನಿಕ ವಸ್ತುವನ್ನು ಬಳಸಿ ಸಂಪ್ರದಾಯಿಕ ಯಕ್ಷಗಾನದ ಅಚ್ಚಿನೊಳಗೆ ಎರಕಹೊಯ್ದ ಅನೇಕ ಯಕ್ಷಗಾನ ಪ್ರಯೋಗಗಳು ಕರಾವಳಿಯಲ್ಲಿ ನಡೆದಿವೆ.

೧. ಜಪಾನೀ ಕೃಷಿ ವಿಜಯ	-	ಶಿವಶಂಕರಶಾಸ್ತ್ರಿ ಪುಣಚ.
೨. ನಿಸರ್ಗಸಂಧಾನ	-	ಹೊಸ್ತೋಟ ಮಂಜುನಾಥ ಭಾಗವತ.
೩. ಕುಟುಂಬ ಕಲ್ಯಾಣ	-	ಯಕ್ಷಗಾನ ರಾತ್ರಿ ಶಾಲೆ ಮುಂಬಯಿ
೪. ಮೋಹಿನಿ ಚರಿತೆ	-	(ತಂಬಾಕಿನ ವಿಚಾರ)
೫. ಪಲಾಂಡ ಚರಿತೆ	-	(ನೀರುಳ್ಳಿಯ ವಿಚಾರ)
೬. ಅಕ್ಷರ ವಿಮೋಚನೆ	-	ವಿದ್ವಾನ್ ರಾಮಚಂದ್ರ ಉಚ್ಚಿಲ್
೭. ವೃಕ್ಷರಕ್ಷಣ	-	ಅಮೃತಸೋಮೇಶ್ವರ
೮. ಅಕ್ಷರ ವಿಜಯ	-	ಗುರುಗಂಗಯ್ಯ ಬಲ್ಲಾಳ
೯. ಸಾಕ್ಷರತಾವಿಕಾಸ	-	ಅನಂತರಾಮ ಬಂಗಾಡಿ
೧೦. ಅಕ್ಷರ ಕುಮಾರ ವಿಜಯ	-	ಪಾಲ್ತಾಡಿ ರಾಮಕೃಷ್ಣಚಾರ್
೧೧. ಸಾಕ್ಷರತ ವಿಜಯ	-	ಎಲಿಕುಳಿ ಗೋವಿಂದಭಟ್
೧೨. ಘೋರ ಮಾರಕ	-	ಅಮೃತ ಸೋಮೇಶ್ವರ

ಆಧುನಿಕ ವಿಚಾರಗಳಿಗೆ ಪುರಾಣದ ಮಾರುವೇಶ ತೊಡಿಸಿ ಮೇಲೆ ಹೇಳಿದ ಸಾಮಾಜಿಕ ಪ್ರಸಂಗಗಳ ಪ್ರಯೋಗ ಒಂದು ಬಗೆಯಾದರೆ, ಪೌರಾಣಿಕ ಪ್ರಸಂಗಗಳ ಒಳಗೆ ವಸ್ತುವಿನ ನಿರ್ವಹಣೆಯಲ್ಲಿ ಹೊಸ ತಿರುವನ್ನು ತಂದು ಪ್ರೇಕ್ಷಕರಲ್ಲಿ ಸಾಮಾಜಿಕ ಎಚ್ಚರವನ್ನು ತರಬಹುದು. ಇಂತಹ ಪ್ರಯೋಗಗಳು ಸಾಕಷ್ಟು ನಡೆದಿವೆ."[೪೫] ಬೆಂಗಳೂರಂಥ ಮಹಾನಗರಗಳಲ್ಲಿ ಯಕ್ಷಗಾನ, ವೀರಗಾಸೆ ಮುಂತಾದ ಜಾನಪದ ಕಲೆಗಳನ್ನು ಮಹಿಳೆಯರು ತರಬೇತಿ ಪಡೆದು ಸಾಂಸ್ಕೃತಿಕ ದಿನಾಚರಣೆಗಳಲ್ಲಿ, ಕಾಲೇಜು, ಸ್ಕೂಲ್‌ಡೇಗಳಲ್ಲಿ ಪ್ರದರ್ಶನವನ್ನು ನೀಡುತ್ತಿದ್ದಾರೆ. 'ಸ್ನೇಹಕಲಾ ಯಕ್ಷಗಾನ ತಂಡ ವಿಜಯನಗರ' ಈ ತಂಡವು ಸಂಪೂರ್ಣವಾಗಿ ಮಹಿಳೆಯರಿಂದಲೇ ಕೂಡಿದ್ದು 'ದುಶ್ಯಾಸನವಧೆ', 'ಕರ್ಣಾವಸಾನ' ಮುಂತಾದ ಯಕ್ಷಗಾನ ಪ್ರಸಂಗಗಳನ್ನು ಬೆಂಗಳೂರಿನಲ್ಲಿ ನೀಡುತ್ತಾ ಬಂದಿದೆ.

ಪೋಲಿಯೋ ಹನಿಹಾಕಿಸುವ ಅಗತ್ಯವನ್ನು ಯಕ್ಷಗಾನದ ಮೂಲಕ ಜನಸಾಮಾನ್ಯರಿಗೆ ತಿಳಿಹೇಳುವ ಪ್ರಯತ್ನವನ್ನು ಬೆಂಗಳೂರಿನ 'ಯಕ್ಷದೇಗುಲ' ತಂಡ ಜಿಲ್ಲೆಯ ವಿವಿಧೆಡೆಗಳಲ್ಲಿ ಹಮ್ಮಿಕೊಂಡಿದೆ. ತುಮಕೂರು ಜಿಲ್ಲೆಯ ಬುಗುಡನಹಳ್ಳಿ, ಬೆಳ್ಳಾವಿ, ಸ್ವಂದೇನಹಳ್ಳಿ, ಬೆಳಗುಂಬ, ಹೊನ್ನುಡಿಕೆ ಹಾಗೂ ನಾಗವಲ್ಲಿಗಳಲ್ಲಿ ಜಿಲ್ಲಾ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಪಲ್ಸ್‌ಪೋಲಿಯೋ ಮಹತ್ವವನ್ನು ತಿಳಿಸುವ 'ಇಳೆಯಣ್ಣನ ಕಥೆ' ಎಂಬ ಯಕ್ಷಗಾನವನ್ನು ಯಕ್ಷದೇಗುಲ ತಂಡ ಪ್ರದರ್ಶಿಸುತ್ತಿದೆ. ರಾಜ್ಯಾದ್ಯಂತ ೨೦೦ ಕ್ಕೂ ಹೆಚ್ಚು ಪ್ರದರ್ಶನಗಳೊಂದಿಗೆ ಏಯ್ಡ್ಸ್, ಗ್ರಾಮೀಣ ಅಭಿವೃದ್ಧಿ, ಕುಟುಂಬ ಯೋಜನೆ, ಮುಂತಾದ ಹತ್ತು ಹಲವು ಸಾಮಾಜಿಕ ಪ್ರಜ್ಞೆ ಮೂಡಿಸುವ ಯಕ್ಷಗಾನವನ್ನು ತಂಡ ಪ್ರದರ್ಶಿಸಿದೆ, ಯಕ್ಷಗಾನದ ವಿಶಿಷ್ಟ ವೇಷ ಪ್ರಸಾದನ ಇಲ್ಲಿ ಬರುವ ರಸಭರಿತ ಕ್ರಿಯಾತ್ಮಕ ಹಾಸ್ಯ ಸಂಭಾಷಣೆ ಹಾಡು ಕುಣಿತಗಳಿಂದಾಗಿ ಯಕ್ಷಗಾನಕ್ಕೆ ಅದರದೇ ಪ್ರೇಕ್ಷಕರಿಲ್ಲದ ಸ್ಥಳದಲ್ಲೂ ಜನರನ್ನು ಆಕರ್ಷಿಸಬಲ್ಲ ಸಾಮರ್ಥ್ಯವಿದೆ. ಈ ಪ್ರಯೋಗ ನೋಡುವವರಿಗೆ ಸಾಕ್ಷರತೆಯ ಜೊತೆ ಸಮಕಾಲೀನ ಸಮಸ್ಯೆಗಳನ್ನು ವಿವರಿಸಿ ಪೋಲಿಯೋ ಕುರಿತು ಮನಮುಟ್ಟುವಂತೆ ನಿರ್ದೇಶಿಸಲಾಗಿದೆ. ಇದರಲ್ಲಿ ಜನರಿಗೆ ತಿಳಿಸಬೇಕಾದ ವಿಷಯಗಳನ್ನು 'ಇಳೆಯಣ್ಣನ ಕಥೆಯ' ಪಾತ್ರಗಳಾಗಿ ಬಂದ ಅಕ್ಷರ, ನಿರಕ್ಷರ ಹಾಗೂ ಹಿಮ್ಮೇಳದ ಕಲಾವಿದರು ನಿರೂಪಿಸಿದ್ದಾರೆ.

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ವಿಶಿಷ್ಟ ಪ್ರಯೋಗವನ್ನು ನೀಡಿದ ರಂಗ ತಜ್ಞ ನಿರ್ದೇಶಕ, ರಚನೆಗಾರ ಜಯತೀರ್ಥರವರು ಸುಮಾರು ೨೬೯ ಗಾದೆಗಳಲ್ಲಿ ಮತ್ತು ಮೂರು ಜನ ಪದಕತೆಗಳನ್ನು ಒಳಗೊಂಡಿರುವ 'ಹೆಬ್ಬಾಲ' ಎಂಬ ನಾಟಕವನ್ನು ಗುಬ್ಬಿವೀರಣ್ಣ ಕಲಾಕ್ಷೇತ್ರದಲ್ಲಿ ಪ್ರದರ್ಶನ ನೀಡಿದ್ದು ಮರೆಯಲು ಸಾಧ್ಯವಿಲ್ಲ.[೪೬]

ಹೀಗೆ ಜಾನಪದ ರಂಗಕಲೆಗಳು ಅಧುನಿಕತೆಯನ್ನು ತನ್ನೊಳಗೆ ತಂದುಕೊಂಡು ಪ್ರಸ್ತುತತೆಗೆ

[illegible]

[illegible]

[illegible]

[illegible]

ಹೆಚ್ಚು ಕ್ರಿಯಾಶೀಲವಾಗತೊಡಗಿದೆ. ಯಾವುದೇ ಒಂದು ಕಲೆಯು ಜೀವಂತಿಕೆಯನ್ನು ಪಡೆಯಬೇಕಾದರೆ ಅದರಲ್ಲಿ ಬದಲಾವಣೆ ಆರೋಗ್ಯಕರವಾದ ಬದಲಾವಣೆ ತರುವುದು ಪ್ರತಿಯೊಬ್ಬ ಜಾನಪದ ತಜ್ಞನ ಕರ್ತವ್ಯ. ಯಾವುದೇ ಕಥೆಯಾಗಲಿ ಕಾಲಕ್ಕೆ ತಕ್ಕಂತೆ ಹೊಸ ಹೊಸ ಪ್ರಯೋಗಗಳಿಗೆ ಮೈಯೊಡ್ಡಿದಾಗ ಆ ಕಲೆಯು ಪ್ರತಿಯೊಂದು ಯುಗದಲ್ಲಿಯೂ ಜೀವಂತಿಕೆ ಪಡೆದುಕೊಳ್ಳುತ್ತಾ, ಮುಂದಿನ ಪೀಳಿಗೆಗೆ ವರ್ಗಾವಣೆಗೊಳ್ಳುತ್ತಾ ಬರುತ್ತದೆ. ಈ ಪ್ರಕ್ರಿಯೆ ಪ್ರತಿಯೊಂದು ಕಲೆಯ ನಿರಂತರತೆಯನ್ನು ಸಾರುತ್ತದೆ.

೪.೪ ಸಿನಿಮಾ ಮತ್ತು ಜಾನಪದ ಪರಿಕಲ್ಪನೆ

ಸಿನಿಮಾ ಮಾಧ್ಯಮವು ಆಧುನಿಕ ಜಗತ್ತಿನ ಅದ್ಭುತಮಾಯಾ ಲೋಕ. ಈ ಮಾಯಾ ಲೋಕಕ್ಕೆ ಒಳಪಡದ ವಿಷಯಗಳಿಲ್ಲ. ಬಡತನ, ಸಿರಿತನ, ಜೀವನವಿಧಾನ, ಪ್ರೀತಿ - ಪ್ರೇಮ, ಸಂಸಾರ, ನಿರಂಕುಶ ಅಧಿಕಾರದ ದೌರ್ಜನ್ಯ, ಸಾಮಾಜಿಕ ಸಂಬಂಧಗಳು, ಬಂಧನಗಳು, ಸಂಗೀತ, ನೈತಿಕ ಮೌಲ್ಯ, ಹೋರಾಟ, ಅತಿಮಾನುಷ ಕಲ್ಪನೆ, ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಚಿಂತನೆ, ಪೌರಾಣಿಕ, ಸಾಮಾಜಿಕ, ಜಾನಪದ, ಮುಂತಾದ ಎಲ್ಲಾ ವಿಷಯಗಳನ್ನು ಇದು ಅವರಿಸಿಕೊಂಡಿದೆ. "ಸಿನಿಮಾ ಇಂದಿಗೂ ನನಗೆ ಜಗತ್ತಿನ ಒಂದು ಅದ್ಭುತವಾಗಿಯೇ ಕಾಣುತ್ತದೆ. ಬಡತನ, ಗೊಂದಲ, ಅಸಾಹಯಕತೆಗಳು ತುಂಬಿರುವ ಸಮಾಜದ ಕೋಟ್ಯಾಂತರ ಕನಸು ಇದಾಗಿರುವುದರಿಂದ ತಮ್ಮಲ್ಲಿ ಹುಳುಕುಗಳನ್ನು ಸಂಕಷ್ಟಗಳನ್ನು ಮರೆಮಾಚುವ ಅವ್ಯಕ್ತ ನಿಗೂಢ ಸೆಲೆಯನ್ನು ಈ ಜನ ಇದರಲ್ಲಿ ಕಂಡುಕೊಂಡಿರುವುದರಿಂದ ಈ ಮಾಧ್ಯಮದ ಶಕ್ತಿ ಸ್ವರೂಪವನ್ನು ನನ್ನಲ್ಲೇ ನಾನು ಚಿಂತಿಸಿರುತ್ತೇನೆ. ದೇಶದ ನಿರ್ಗತಿಕರ, ಸೋಮಾರಿಗಳ, ನಿರುದ್ಯೋಗಿಗಳ, ಹಗಲುಗನಸು ಕಾಣುವವರ ಸರ್ವಸ್ವವೂ ಈ ಸಿನಮಾದಲ್ಲಿ ಅಡಗಿದೆ"[೪೬] ಮನುಷ್ಯನ ಮನರಂಜನೆ ಅಂಶದ ಶೇಕಡ ಎಪ್ಪತ್ತು ಭಾಗವನ್ನು ಆವರಿಸಿರುವ ಈ ಮಾಧ್ಯಮವು ಎಷ್ಟೋ ಜನರ ಜೀವನಕ್ಕೆ ಆದರ್ಶಪ್ರಾಯವಾಗಿದೆ. ಎಷ್ಟೋ ಜನ ನಿರುದ್ಯೋಗಿಗಳಿಗೆ ಆಶ್ರಯತಾಣವಾಗಿದೆ. ತಮ್ಮ ತಮ್ಮ ವೈಯಕ್ತಿಕ ಪ್ರತಿಭೆಗಳಿಗನುಗುಣವಾಗಿ ಇಲ್ಲಿ ನೆಲೆಯನ್ನು ಕಂಡುಕೊಂಡಿದ್ದಾರೆ. ಇದು ಬಣ್ಣದ ಲೋಕವೇ ಆದರೂ ಶ್ರಮ ಸಂಸ್ಕೃತಿಯೇ ಇದರ ಪ್ರಧಾನ ಲಕ್ಷಣ.

ಕನ್ನಡ ಸಿನಿಮಾ ಜಗತ್ತು ಪ್ರಾರಂಭವಾದುದೇ ಪೌರಾಣಿಕ ಮತ್ತು ಜಾನಪದ ಕಥಾವಸ್ತುಗಳ ರಂಗಭೂಮಿನೆಲೆಯಿಂದ. ೨೦ನೇ ಶತಮಾನದ ಪೂರ್ವದಲ್ಲಿ ಕಂಪನಿ ನಾಟಕಗಳು ನೆಲಕಚ್ಚುವ ಸಮಯದಲ್ಲಿ ಸಿನಿಮಾ ಮಾಧ್ಯಮಕ್ಕೆ ಹೆಚ್ಚು ಮಹತ್ವ ಒದಗಿ ಬಂತು. ಈ ಮಾಧ್ಯಮವು ಇಂದು ಎಲ್ಲವನ್ನು ಸಗುಣವಾಗಿ ನುಂಗುವ ಚೈತನ್ಯ ಪಡೆದುಕೊಂಡಿದೆ. ಜನಪದ ಮತ್ತು ಸಿನಿಮಾ ಇವೆರಡು ಬೇರೆ ಬೇರೆ ವಿಷಯಗಳೇ ಆದರೂ ಕನ್ನಡದ ಮಟ್ಟಿಗೆ ಹೇಳುವುದಾದರೆ ಸಿನಿಮಾ ಮಾಧ್ಯಮವನ್ನು ಕೈಹಿಡಿದು ಬೆಳೆಸಿದ್ದೇ ಪೌರಾಣಿಕ ಮತ್ತು ಜಾನಪದ ನಾಟಕಗಳು. ೨೦ನೇ ಶತಮಾನದ ಪೂರ್ವದಲ್ಲಿ

ಚಲನಚಿತ್ರ ಕ್ಷೇತ್ರವು ಆಗತಾನೇ ಮೂಕಿಚಿತ್ರಗಳ ಮೂಲಕ ಭಾರತಕ್ಕೆ ಪ್ರವೇಶ ಮಾಡಿತು. 'ಅಲಂಆರ' ೧೯೩೧ ಹಿಂದಿ ಮೊದಲ ಮೂಕಿ ಚಿತ್ರವಾದರೆ, ಕನ್ನಡದಲ್ಲಿ 'ವಸಂತ ಸೇನ' (೧೯೨೯) ಮೊದಲ ಮೂಕಿಚಿತ್ರ ಪ್ರಾರಂಭವಾಯಿತು. ಆರಂಭದಲ್ಲಿ ಪೌರಾಣಿಕ ಮತ್ತು ಜಾನಪದ ಕಥೆಗಳನ್ನು ಆಧರಿಸಿ ಆಡುತ್ತಿದ್ದ ನಾಟಕಗಳನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸಿಕೊಂಡರು. "ಈ ಘಟ್ಟದಲ್ಲಿ ಗುಬ್ಬಿ ವೀರಣ್ಣನವರು ಸಲ್ಲಿಸಿದ ಸೇವೆ ಸ್ಮರಣೀಯ. ವಾಕ್ಚಿತ್ರ ಆರಂಭ ವರ್ಷದ ಮುಂದಿನ ಏಳುವರ್ಷಗಳ ಕಾಲಾವಧಿಯಲ್ಲಿ ತಯಾರಾದ ೧೪ ಚಿತ್ರಗಳಲ್ಲಿ ಗುಬ್ಬಿ ವೀರಣ್ಣನವರು ತಯಾರಿಸಿದ ಚಿತ್ರಗಳೇ ನಾಲ್ಕು ೧೯೩೪ ರಲ್ಲಿ ಕನ್ನಡದ ಮೊದಲ ವಾಕ್ಚಿತ್ರಗಳು (ಸತಿ ಸುಲೋಚನ, ಭಕ್ತ ದ್ರುವ) ಬಿಡುಗಡೆಯಾದನಂತರ ಮರು ವರ್ಷವೇ ಗುಬ್ಬಿ ವೀರಣ್ಣನವರು ಶಕುಂತಲಾ ಫಿಲಿಂಸ್ ಲಾಂಛನದಲ್ಲಿ ತಾವು ರಂಗಭೂಮಿಯಲ್ಲಿ ಪ್ರದರ್ಶಿಸುತ್ತಿದ್ದ ಜನಪ್ರಿಯ ಜಾನಪದ ನಾಟಕ 'ಸದಾರಮೆ'ಯನ್ನು ವಾಕ್ಚಿತ್ರವನ್ನಾಗಿಸಿ ತಾವೂ ಅಭಿನಯಿಸಿದರು"[೪೮] ಕನ್ನಡ ಭಾಷೆಯಲ್ಲಿ ಸಿದ್ದವಾಗುತ್ತಿದ್ದ ಚಿತ್ರಗಳಲ್ಲಿ ಪೌರಾಣಿಕ ಇಲ್ಲವೇ ಜನಪದ ಕತೆಗಳು[೪೯] ನಂತರ ಸಾಮಾಜಿಕ ಚಿತ್ರಗಳಲ್ಲಿ, ಜಾನಪದ ದೃಶ್ಯಕಲೆಗಳನ್ನು, ಪ್ರಾದೇಶಿಕ ಭಿನ್ನತೆಗಳಿರುವ ಆಟಗಳನ್ನು ಆಚಾರ, ವಿಚಾರಗಳ, ವೈಶಿಷ್ಟ್ಯವನ್ನು ಬಳಸಿಕೊಂಡಂತೆ ಇಂದಿನವರೆಗೂ ಸಾಗುತ್ತಿವೆ. "ಈ ಮಾಧ್ಯಮವಂತೂ ಜನಪದ ಕತೆ, ಗೀತೆ, ನಾಟಕ ಪ್ರಾದೇಶಿಕ ಕಲೆಗಳನ್ನು ಮಾಂತ್ರಿಕ ಪರಿಭಾಷೆಯಲ್ಲಿ ಸಂಯೋಜಿಸಿ ದೃಶ್ಯ ಮಾಧ್ಯಮದಲ್ಲಿ ಹೇಳಿಕೊಡುತ್ತಾ ಹಳೆಯ ಎಲ್ಲಾ ಜನಪದ ಪ್ರಕಾರಗಳನ್ನು ತನ್ನೊಳಗೆ ಸೇರಿಸಿಕೊಂಡುಬಿಟ್ಟಿದೆ. ಆದ್ದರಿಂದಲೇ ಸಿನಿಮಾದ ಕಲೆ ಬರೆದವರಿಗೂ ಅದನ್ನು ನಿರ್ದೇಶಿಸಿದವರಿಗೂ ನಟರಿಗೂ ಪ್ರೇಕ್ಷಕರಿಗೂ ಅದನ್ನು ಸಂಕಲಿಸಿದವರಿಗೂ, ಸಂಗೀತಗಾರರಿಗೂ, ಹಾಡುಗಾರರಿಗೂ, ಸಂಬಂಧವೇ ಇಲ್ಲದಂತೆ ಒಂದು ಜನಪದ ಕತೆಯ ಸಂದರ್ಭದಂತೆಯೇ ಅನಾಮಧೇಯತೆಯ ಸ್ವಭಾವದಲ್ಲೇ ಕತ್ತಲಲ್ಲೆ ಎಲ್ಲವೂ ನಡೆದು ಹೋಗುತ್ತದೆ. ಬಹುಪಾಲು ಎಲ್ಲಾ ಆಧುನಿಕ ಮಾಧ್ಯಮಗಳಲ್ಲೂ ನಮ್ಮ ಪ್ರಾಚೀನ ಕಾಲದ ಜಾನಪದದ ಮಾಧ್ಯಮಗಳ ಮೂಲ ಗುಣವಿದೆ. ಆದರೆ ಅವುಗಳ ಕ್ರಿಯೆ, ಉದ್ದೇಶ, ತಂತ್ರ ಹಾಗೂ ಅಭಿವ್ಯಕ್ತಿಯಲ್ಲಿ ಪುನರ್‌ಸೃಷ್ಟಿಯಲ್ಲಿ ಮಾತ್ರ ವ್ಯತ್ಯಾಸವಿದೆ. ವೈಜ್ಞಾನಿಕ ಆವಿಷ್ಕಾರಗಳಲ್ಲೂ ಜನಪದೀಯ ಅಂಶಗಳಿವೆ ಎಂಬುದಕ್ಕೆ ನಾನು ಸಿನಿಮಾಗಳಲ್ಲಿನ ಗ್ರಾಫಿಕ್ ತಂತ್ರವನ್ನು ಉದಾಹರಿಸಬಯಸುತ್ತೇನೆ, ಹಿಂದಿನ ಮಂತ್ರವಾದಿ ಹಾಗೂ ರಾಕ್ಷಸರು ರಾಜಕುಮಾರರ ಕಥೆಗಳನ್ನು ಜನಪದ ಕತೆಗಳ ಪಟ್ಟಿಗೆ ಸೇರಿಸಿದರು. ಇಂದಿನ ಕೆಲವು ಸಿನಿಮಾಗಳಲ್ಲಿ ವಿಶೇಷವಾಗಿ "ಟರ್ಮಿನೇಟರ್" ಮುಂತಾದ ಆಂಗ್ಲ ಚಿತ್ರಗಳಲ್ಲಿ ಬಳಕೆಯಾಗುವ ಗ್ರಾಫಿಕ್ ತಂತ್ರವೂ ಜನಪದ ಕತೆಗಳ ರಮ್ಯತೆ, ಅತಿಮಾನವತೆ ಮತ್ತು ಅದ್ಭುತಗಳನ್ನು ಸಾಧಿಸುತ್ತದೆ. ಜನಪದ ಕತೆಗಳಲ್ಲಿ ಮನುಷ್ಯ ಪ್ರಾಣಿಯಾದಂತೆ, ಪ್ರಾಣಿ ಮನುಷ್ಯನಾದಂತೆ ಈ ಸಿನಿಮಾಗಳಲ್ಲೂ ಆಗುತ್ತಾರೆ. ಅಲ್ಲಿ ಮಂತ್ರದಂಡದಿಂದ ಆಗುತ್ತಾರೆ. ಮನುಷ್ಯನ ಕೈ ಖಡ್ಗವಾಗುತ್ತದೆ. ಹೆಣ್ಣು ಸೀರೆಯಷ್ಟೇ ಆಗುತ್ತದೆ. ವ್ಯಕ್ತಿಗಳು ಹಾರಾಡುತ್ತಾರೆ. ಇವೆಲ್ಲ ಜನಪದ ಕಲ್ಪನೆಗಳು. ಅವೆಲ್ಲಾ ಸಾಧ್ಯವಾಗುತ್ತಿರುವುದು ವಿಜ್ಞಾನ ತಂತ್ರಜ್ಞಾನಗಳ ಬಳಕೆಯಿಂದ ಹೀಗಾಗಿ ಸಿನಿಮಾ ಲಿಖಿತ ಜಾನಪದವಷ್ಟೆ ಅಲ್ಲ. ಅದು ವೈಜ್ಞಾನಿಕ ಜಾನಪದವಾಗುತ್ತದೆ."[೫೦]

[illegible]

ಸಿನಿಮಾ ಮತ್ತು ಜಾನಪದಕ್ಕೆ ಇರುವ ಸಂಬಂಧವನ್ನು ಕೆಳಕಂಡಂತೆ ವಿಭಾಗಿಸಿಕೊಂಡು ಅಧ್ಯಯನ ನಡೆಸಲಾಗಿದೆ.

೪.೪.೧. ಜಾನಪದ ಕಥಾವಸ್ತುವನ್ನು ಹೊಂದಿದ ಚಲನ ಚಿತ್ರಗಳು.

೪.೪.೨. ಚಲನಚಿತ್ರದಲ್ಲಿ ಜಾನಪದ ಕಲಾಮಾಧ್ಯಮಗಳ ಬಳಕೆ.

೪.೪.೩. ಚಲನ ಚಿತ್ರಗಳಲ್ಲಿ ಜನಪದ ಭಾಷೆ.

೪.೪.೧. ಜಾನಪದ ಕಥಾವಸ್ತುವನ್ನು ಹೊಂದಿದ ಚಲನಚಿತ್ರಗಳು

ಮನರಂಜನೆಗೆ ಕಂಪನಿ ನಾಟಕಗಳೇ ಗತಿಯಾಗಿದ್ದ ಕಾಲದಲ್ಲಿ ಚರ್ವಿತ ಚರ್ವಣವುಳ್ಳ ನಾಟಕಗಳನ್ನು ನೋಡಿ ಜನರಿಗೂ ಹೊಸತನ್ನು ಬರಮಾಡಿಕೊಳ್ಳುವ ತವಕವಿತ್ತು. ಇಂತಹ ಸಾಂದರ್ಭಿಕ ಸಮಯದಲ್ಲಿ ಅನಿವಾರ್ಯವೆಂಬಂತೆ ಚಲನಚಿತ್ರಗಳು ಹೆಚ್ಚು ಆಕರ್ಷಣೀಯವಾದವು. ಆದ್ದರಿಂದಲೇ ಆರಂಭದಿಂದ ಇಂದಿನವರೆಗೂ ಅವುಗಳ ದೊಡ್ಡದೊಂದು ಪಟ್ಟಿಯೇ ಇದೆ. ಮೊದಲು ಜಾನಪದ ಕತೆಯನ್ನು ಆಧರಿಸಿ ಮಾಡಿದ ಚಲನಚಿತ್ರವೆಂದರೆ ಸದಾರಮೆ (೧೯೩೫) ನಾಗಕನ್ನಿಕಾ(೧೯೪೯),ಗುಣಸಾಗರಿ(೧೯೫೩), ಜಗನ್ಮೋಹಿನಿ (೧೯೫೧), ರಾಜಲಕ್ಷ್ಮಿ (೧೯೫೪), ಸೋದರಿ (೧೯೫೫), ಗುರುಶಿಷ್ಯರು (೧೯೮೧), ಬಾಲನಾಗಮ್ಮ, ಬೆಳ್ಳಿನಾಗ, ನಾಗಿನಿ, ಅರಣ್ಯದಲ್ಲಿ ಅಭಿಮನ್ಯು, ಗರುಡರೇಖೆ, ನಾಗಪೂಜೆ, ನಾಗಮಂಡಲ (೧೯೯೬) ನಾಗದೇವತೆ (೨೦೦೧) ಪ್ರಚಂಡಕುಳ್ಳ, ಗ್ರಾಮದೇವತೆ (೨೦೦೨) ಕಡ್ಲೀಮಟ್ಟಿ ಸ್ಟೇಷನ್ ಮಾಸ್ಟರ್ ಮುಂತಾದ ಚಲನಚಿತ್ರಗಳು ತೆರೆಯ ಮೇಲೆ ಬರತೊಡಗಿದವು.

'ಕನ್ನಡದ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಪ್ರಾರಂಭದಲ್ಲಿ ಪೌರಾಣಿಕ ಅಥವಾ ಜಾನಪದ ವಸ್ತುವನ್ನುಳ್ಳ ಕಥೆಗಳು ಚಲನಚಿತ್ರಗಳಾಗಿ ಬಂದವು. ಫ್ಯಾಂಟಸಿಯನ್ನು ಹಾಗೂ ಹಿರೋಯಿಸಂನ್ನೇ ಪ್ರಮುಖವನ್ನಾಗಿಸಿಕೊಂಡ ಈ ಚಿತ್ರಗಳು ಜನಪದರ ಮೇಲೆ ತೀವ್ರ ಪರಿಣಾಮವನ್ನು ಬೀರಿದವು. ತಾವು ಪುರಾಣದಿಂದ ತಿಳಿದುಕೊಂಡ ದೇವಾನುದೇವತೆಗಳು, ಯಕ್ಷ ಕಿನ್ನರ ಕಿಂಪುರುಷರು ಕನಸಿನೋಪಾದಿಯಲ್ಲಿ ತಮ್ಮ ಕಣ್ಮುಂದೆ ಪ್ರತ್ಯಕ್ಷವಾಗುವ, ಅಂತರ್ಧಾನರಾಗುವ, ವರ ನೀಡುವ, ಭಕ್ತರನ್ನು ಪರೀಕ್ಷಿಸುವ, ಪವಾಡ ನಡೆಸುವ ಮುಂತಾದ ದೃಶ್ಯಗಳು - ತಮ್ಮ ಕಣ್ಣನ್ನು ತಾವೇ ನಂಬುವಂತೆ ಮಾಡಿದವು. ತೆರೆದ ಕಣ್ಣನ್ನು ಮುಚ್ಚದ ಹಾಗೆ ನೋಡುವಂತೆ ಮಾಡಿದ ಚಲನಚಿತ್ರಗಳು ತಂತ್ರ ಹಾಗೂ ಕಥೆಗಳ ಕಾರಣಕ್ಕಾಗಿ ತುಂಬಾ ಜನಪ್ರಿಯವಾದವು. ಹಳ್ಳಿಯ ಜನಪದರು ತಾವು ಕೇಳಿದ ಕಥೆಗಳ ಪಾತ್ರಗಳು ಜೀವ ತಳೆದು ತಮ್ಮೆದುರು ಬಂದು ನಟಿಸುವ ದೃಶ್ಯಗಳನ್ನು ಕಂಡು ಕಾಲ್ಪನಿಕವಾದರೂ ವಾಸ್ತವವೆಂಬ ನಂಬಿಕೆಯ ಹಂತವನ್ನು ತಲುಪಿದರು. ರಜತ ಪರದೆಯ ಮೇಲೆ ಮೂಡಿ ಬಂದ ದೇವತೆಗಳನ್ನು ಕಂಡಾಕ್ಷಣವೆ ಎದ್ದು ಕೈಮುಗಿದು ಕುಳಿತುಕೊಳ್ಳುವಷ್ಟು ತನ್ಮಯತೆಯ

[illegible]

[illegible]

[illegible]

[illegible]

[illegible]

ಪರಿಣಾಮವನ್ನು ಈ ಚಲನಚಿತ್ರ ಬೀರಿತು. ಬಹುಮುಖ್ಯವಾಗಿ ತಂತ್ರದ ದೃಷ್ಟಿ ಚಲನಚಿತ್ರ ವಿಸ್ಮಯವನ್ನು ಜನಪದರಲ್ಲಿ ಉಂಟು ಮಾಡಿದರೂ ಪ್ರೀತಿ ಮತ್ತು ಭಕ್ತಿಯನ್ನು ಗಳಿಸಲು ಕಾರಣ, ಈ ಮಾಧ್ಯಮದ ಜನ ಜನಪದ ಕತೆಗಳನ್ನು ಹಾಗೂ ಪೌರಾಣಿಕ ಕಥೆಗಳನ್ನು ತಮ್ಮ ಚಿತ್ರಗಳ ವಸ್ತುವನ್ನಾಗಿಸಿಕೊಂಡಿದ್ದಾರೆ. ಗುಬ್ಬಿವೀರಣ್ಣನವರು ಶಕುಂತಲಾ ಫಿಲಿಂಸ್ ಲಾಂಛನದಲ್ಲಿ ತಾವು ರಂಗಭೂಮಿಯಲ್ಲಿ ಪ್ರದರ್ಶಿಸಿದ್ದ ಜನಪ್ರಿಯ ಜಾನಪದ ನಾಟಕ 'ಸದಾರಮೆ' ಯನ್ನು ವಾಕ್ಚಿತ್ರವನ್ನಾಗಿಸಿ ತಾವೂ ಅಭಿನಯಿಸಿದರು. ಸುಂದರ ರಾಜಕುಮಾರಿಯರು ಚತುರ ಕಳ್ಳರುಗಳ ಕತೆಯಾದ ಸದಾರಮೆಯನ್ನು ಬರೆದ ನಾಟಕಕಾರ ಯಾರೆಂಬುದು ತಿಳಿದಿಲ್ಲ. ಮೂಲ ಮಾರಾಠಿಯಿಂದ ಬಂದುದು ಎಂದು ಹೇಳಿದ 'ಸದಾರಮೆ' ಯನ್ನು ವೀರಪ್ಪಶಾಸ್ತ್ರಿ ಎಂಬುವವರು ಗುಬ್ಬಿ ಕಂಪನಿಗಾಗಿ ಬರೆದು ನಾಟಕಕ್ಕೆ ಅಳವಡಿಸಿದರು ಎನ್ನಲಾಗಿದೆ."[೫೧]

"ಡಿ. ಶಂಕರ್ ಸಿಂಗ್ ಮತ್ತು ವಿಠಲಾಚಾರ್ಯರು ೧೯೪೯ರಲ್ಲಿ 'ನಾಗಕನ್ನಿಕಾ' ಜನಪದ ಚಿತ್ರ ತಯಾರಿಸಿದರು. ಒಬ್ಬ ಮಾಂತ್ರಿಕ ಹಾಗೂ ಆತನ ಅಲೌಕಿಕ ಶಕ್ತಿಗಳ ಸುತ್ತಾ ಹೆಣೆದ ಕತೆ. ಸುಂದರ ತರುಣಿಯರು ಸರ್ಪಗಳಾಗುವುದು. ಋಷಿಗಳು ಕಲ್ಲಾಗುವುದು"[೫೨] ಜೋಡಿಹಾವುಗಳಲ್ಲಿ ಒಂದನ್ನು ಕೊಲ್ಲುವುದರಿಂದ ಸೇಡು ತೀರಿಸಿಕೊಳ್ಳುವುದಕ್ಕೆ ಹೊಂಚು ಹಾಕುವುದು. ಹಾವೊಂದು ತನ್ನ ಕಾಮನೆಯನ್ನು ತೀರಿಸಿಕೊಳ್ಳಲು ಜನಪದ ಕಥೆಗಳಲ್ಲಿ ಬರುವ ಸಾಮಾನ್ಯ ಕಥೆಗಳಾಗಿವೆ. ಮಾಯಾವಿಯು, ದೆವ್ವ ಮತ್ತು ಬೇತಾಳಗಳ ಜೊತೆ ಸಲೀಸಾಗಿ ಮಾತನಾಡುವುದು. ಬೇತಾಳಗಳನ್ನು ತನ್ನ ಕಾರ್ಯಸಾಧನೆಗೆ ಬಳಸಿಕೊಳ್ಳುವುದು. ಈ ಎಲ್ಲಾ ಜಾನಪದ ಕಥೆಗಳನ್ನು ಆಧುನಿಕ ತಂತ್ರಜ್ಞಾನಗಳಿಂದ ಸಿನಿಮಾ ಮಾಧ್ಯಮದಲ್ಲಿ ಅಳವಡಿಸಿಕೊಳ್ಳಲಾಗಿದೆ. "ಅದ್ಭುತ ಕಥೆಗಳು ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ನಡೆಯುತ್ತದೆ. ಪಾತ್ರಗಳಿಗೆ ಹೆಸರಿರುವುದಿಲ್ಲ. ಒಬ್ಬ ರಾಜ ಒಬ್ಬಳೇ ರಾಣಿ ಅಂತ ಕಥೆಯಲ್ಲಿ ನಿರ್ದೇಶನವಿರುತ್ತದೆ. ಇವುಗಳ ಅತಿಮಾನುಷ ಸತ್ವಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಂದರೆ ಕಿನ್ನರ, ಯಕ್ಷ, ಗಂಧರ್ವ, ರಾಕ್ಷಸರು, ವಿದ್ಯಾಧರರು, ಸರ್ಪಗಳು, ಅಪ್ಸರೆ, ಭೂತ, ಪಿಶಾಚಿಗಳು ಗಾಳಿಯಲ್ಲಿ ಹಾರಾಡುವುದು, ಅದೃಶ್ಯರಾಗುವುದು, ರೂಪ ಬದಲಾಯಿಸುವುದು, ರಾತ್ರಿ ಸಂಚಾರ, ಮುಂತಾದುವುಗಳು. ಅದ್ಭುತ ಕಥೆಯ ಪ್ರಮುಖ ಗುಣಗಳೆಂದರೆ ರಂಜಕತೆ, ಸಾಹಸ, ಭಾವುಕತೆ, ಪ್ಯಾಂಟಸಿಗಳು.[೫೩]

ನಾಗಮಂಡಲ,ಸಂಗ್ಯಾಬಾಳ್ಯಾ, ಕಡ್ಲೀಮಟ್ಟಿ ಸ್ಟೇಷನ್ ಮಾಸ್ಟರ್. ಇವು ಸಂಪೂರ್ಣವಾಗಿ ಜನಪದ ಕಥೆಗಳು. ಇವು ಸಹ ಚಲನಚಿತ್ರಗಳಾಗಿ ಮೂಡಿಬಂದವು. ಜನಪದ ಕಥೆಯನ್ನು ನಾಟಕವಾಗಿ ಹೆಣೆದ ಕಾರ್ನಾಡರ ನಾಗಮಂಡಲ ಟಿ. ಎಸ್. ನಾಗಾಭರಣ ನಿರ್ದೇಶನದಲ್ಲಿ ಅದ್ಭುತ ಯಶಸ್ಸು ಗಳಿಸಿತು. ಬಿಡುಗಡೆಯಾದ ಆ ವರ್ಷದಲ್ಲಿ (೧೯೯೭) ಎಲ್ಲಾ ಪ್ರಶಸ್ತಿಗಳನ್ನು ಪಡೆದುಕೊಂಡಿತು. "ಹೆಣ್ಣಿನ ಅಂತರಾಳವನ್ನು ಅರಿಯದ ಕಾಮುಕತೆಗೆ ಅವಸರಪಡುವ ಗಂಡು, ಪ್ರೀತಿ ಅರಳುವುದಕ್ಕಿಂತ ಮುಂಚೆ ಬಲಾತ್ಕಾರವನ್ನು ಇಷ್ಟಪಡದ ಸೂಕ್ಷ್ಮ ಮನಸ್ಸಿನ ಹೆಣ್ಣು. ಈ ಜೋಡಿ ಸೇರಿ ದಾಂಪತ್ಯ

ಜೀವನವನ್ನು ಸವಿಯುವುದರಲ್ಲಿ ವಿಫಲರಾಗಿ, ಅನ್ಯಮಾರ್ಗಗಳನ್ನು ಹುಡುಕುವಾಗ ಇದಕ್ಕೆ ಪರಿಹಾರವೆಂಬಂತೆ ಮನುಷ್ಯ ರೂಪದಲ್ಲಿ ಸರ್ಪವು ಹೆಣ್ಣಿನ ಕಾಮನೆಯನ್ನು ಇಂಗಿಸುವುದು." ಈ ಜನಪದ ಕಥೆಯ ಎಳೆಯನ್ನು ಹಿಡಿದು ಚಲನಚಿತ್ರವನ್ನಾಗಿಸಿ, ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಮನುಷ್ಯ ಮತ್ತು ಸರ್ಪಸಂಬಂಧದ ಆಶಯಗಳು ಜನಪದ ಕತೆಗಳಲ್ಲಿ ಹೇರಳವಾಗಿ ದೊರೆಯುತ್ತವೆ.

"ಕಡ್ಲೀಮಟ್ಟಿ ಕಾಶೀಬಾಯಿ ಸ್ವಾತಂತ್ರ್ಯ ಪೂರ್ವದ ಸತ್ಯಕಥೆ. ಉತ್ತರ ಕರ್ನಾಟಕದ್ದು. ಕಡ್ಲೀಮಟ್ಟಿಯ ರೈಲ್ವೆ ಸ್ಟೇಷನ್ ಹಳ್ಳಿಯ ಮನೆಗಳಿಗಿಂತ ತುಂಬ ದೂರದಲ್ಲಿದ್ದು, ಸಂಜೆ ಟ್ರೈನ್ ತಪ್ಪಿಸಿಕೊಂಡು, ಟ್ರೈನ್‌ನಿಂದ ಒಂದು ಹಳ್ಳಿಗೆ ಹೋಗಬೇಕಾದ ಹೆಣ್ಣುಮಗಳನ್ನು ಬಲಾತ್ಕರಿಸುತ್ತಿದ್ದ ವಿಕೃತಕಾಮಿ ಸ್ಟೇಷನ್ ಮಾಸ್ಟರ್ ಮತ್ತು ಆತನ ಆಕ್ರಮಣದಿಂದ ತನ್ನ ಶೀಲವನ್ನು ರಕ್ಷಿಸಿಕೊಳ್ಳಲು ಮಗುವನ್ನು ಬಲಿಕೊಡುವ ಕಾಶೀಬಾಯಿ ಕಥೆಯ ಪ್ರಧಾನ ಪಾತ್ರಗಳು. ಹಳೆಯದಾದ ಈ ಘಟನೆ ಜನರ ಬಾಯಲ್ಲಿ ಹರಿದು ಜನಪದ ಕಥೆಯಾಗಿದೆ. ಹಲವು ಪಾತ್ರಗಳ ವೈಭವೀಕರಣ ದೇವರೂ ದೆವ್ವ ಇವೆಲ್ಲಾ ಜಾನಪದದಲ್ಲಿ ಸಾಮಾನ್ಯ."[೫೪]

ಹೀಗೆ ಜನಪದ ಕಥೆಗಳನ್ನು ಮೂಲವಾಗಿಟ್ಟುಕೊಂಡು 'ಸದಾರಮೆ' (೧೯೩೫) ಯಿಂದ 'ಗ್ರಾಮದೇವತೆ' (೨೦೦೨) ವರೆಗೆ ಜನಪದ ಕಥೆಗಳನ್ನು ಆಧರಿಸಿ ಚಲನಚಿತ್ರಗಳಾಗಿವೆ. ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಜನಪದರ ಅಂತರಂಗದಿಂದ ಬಂದ ಜನಪದ ಸಾಹಿತ್ಯದ ವಿವಿಧ ಮಜಲುಗಳನ್ನು ಸಮರ್ಥವಾಗಿ ಬಳಸಿಕೊಂಡ ನಾಟಕ ಕಂಪನಿಗಳು ಅವುಗಳನ್ನು ಚಲನಚಿತ್ರಗಳನ್ನಾಗಿಸಿದವು. ಇದೇ ಮಾದರಿ ಮುಂದುವರೆಯುತ್ತಾ ಇಂದಿನವರೆಗೂ ನಡೆದುಬಂದಿದೆ. "ಜನಪದ ಕಲೆ ಒಂದು ಜೀವಂತ ಕಲೆ. ರಂಜಕತೆ, ಗ್ರಾಮಸೊಗಸು, ನಾಟಕ ಶೈಲಿ, ಮಾನವೀಯ ಭಾವನೆಗಳಿಂದ ಕೂಡಿಬರುತ್ತದೆ. ಜನಸಾಮಾನ್ಯರ ಆಚಾರ, ವಿಚಾರ, ನಂಬಿಕೆ, ನಡಾವಳಿಕೆ, ವಿವೇಕ, ಮಾಟ, ಮಂತ್ರ, ರಮ್ಯ, ಸಾಹಸ, ಕಾಲ್ಪನಿಕತೆ ಅದೃಷ್ಟ ಅದ್ಭುತ ಅಲೌಖಿಕತೆಯ ವಾತಾವರಣ ತುಂಬಿಕೊಳ್ಳುತ್ತದೆ. ಅನಕ್ಷರಸ್ಥರಿಗೆ ದುಃಖೋಪ ಶಮನ ಹಾಗೂ ಶಿಕ್ಷಣ ನೀಡುವ ಪ್ರಮುಖ ಸಾಧನೆ ಈ ಜನಪದ ಕಥೆ."[೫೫] ಹೀಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಸ್ಮರಣಶಕ್ತಿಯನ್ನೂ, ಜ್ಞಾನ ಗಂಗೆಯನ್ನು ಸಿನಿಮಾ ಮಾಧ್ಯಮವು ತನ್ನ ತಾಂತ್ರಿಕತೆಯಿಂದ ಹೊಸಪೀಳಿಗೆಗೆ ಪರಿಚಯಿಸುತ್ತಿದೆ. ಆಧುನಿಕ ಹೊಸ ಹೊಸ ತಂತ್ರಗಳು ಜಾನಪದವನ್ನು ವಿವಿಧ ರೀತಿಯಲ್ಲಿ ದುಡಿಸಿಕೊಳ್ಳುತ್ತವೆ. ಜನಪದ ಕಥೆಗಳನ್ನು ಚಲನಚಿತ್ರ ಮಾಧ್ಯಮಕ್ಕೆ ತಂದಿದ್ದರ ಔಚಿತ್ಯದ ಹಿಂದೆ ಪ್ರೇಕ್ಷಕರ ಮನೋಭಿಲಾಷೆ ಪ್ರಬಲವಾದ ಕಾರಣವಾಗಿದೆ.

೪.೪.೨. ಚಲನ ಚಿತ್ರಗಳಲ್ಲಿ ಜನಪದ ಕಲಾಮಾಧ್ಯಮಗಳ ಬಳಕೆ

ಕಲಾತ್ಮಕತೆಯಿಂದ ಕಮರ್ಷಿಯಲ್ ಆಗುತ್ತಿರುವ ಚಲನಚಿತ್ರ ಮಾಧ್ಯಮವು ಆರಂಭದಿಂದ ಇಂದಿನವರೆಗೂ ಶಾಬ್ದಿಕ ಜಾನಪದ, ಅಶಾಬ್ದಿಕ ಜಾನಪದ ಸಾಹಿತ್ಯಪ್ರಕಾರ ಮತ್ತು ಕಲಾಪ್ರಕಾರಗಳನ್ನು

[illegible]

ಬಳಸಿಕೊಂಡಿದೆ. ಸಮಯ ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ವೀರಗಾಸೆ ಕುಣಿತ, ಕರಡಿ ಮಜಲು, ಮರಗೋಲು ಕುಣಿತ, ಯಕ್ಷಗಾನ ಪ್ರಸಂಗ ಮುಂತಾದ ಕಲೆಗಳನ್ನು ಪರಿಪೂರ್ಣವಲ್ಲದಿದ್ದರೂ ಸಂಧರ್ಬೋಚಿತವಾಗಿ ಬಳಸಿಕೊಳ್ಳುವ ಪರಿಪಾಟಲು ನಡೆದು ಬಂದಿದೆ. ೧೯೬೪ರಲ್ಲಿ ಬಿಡುಗಡೆಯಾದ 'ನಾಂದಿ' ಚಿತ್ರದಲ್ಲಿ 'ಗೋವಿನಹಾಡು'ನ್ನು ಬಳಸಿಕೊಂಡಿದ್ದಾರೆ. ನಾಯಕ ನಟ ರಾಜುಕುಮಾರ್ ಸ್ಕೂಲಿನ ಉಪಾಧ್ಯಾಯರಾಗಿರುತ್ತಾರೆ. ಸ್ಕೂಲ್‌ಡೇ ಸಂದರ್ಭದಲ್ಲಿ ಈ ಹಾಡಿನಲ್ಲಿ ಮಕ್ಕಳನ್ನು ಅಭಿನಯ ಮಾಡಿಸುವುದರ ಮುಂಖಾಂತರ ಗೋವಿನ ಹಾಡನ್ನು ಸಿನಿಮಾದಲ್ಲಿ ಪ್ರಯೋಗಿಸುತ್ತಾರೆ. ಈ ಹಾಡಿನಲ್ಲಿ ಬರುವ ವಿವಿಧ ಪ್ರಾಣಿಗಳ ವೇಷವನ್ನು ಮಕ್ಕಳಿಗೆ ಹಾಕಿಸಿದ್ದಾರೆ. ಗೋವು ತನ್ನ ಕಂದನ ನೆನೆದು ಹಾಲು ಕೊಡಲು ದೊಡ್ಡಿಗೆ ಬರುವಾಗ ಮಧ್ಯೆ ಹುಲಿ ತಡೆದು ತಿನ್ನಲು ಪ್ರಯತ್ನಿಸುವುದು, ನಂತರ ಭಾಷೆಕೊಟ್ಟು ದೊಡ್ಡಿಗೆ ಬಂದು ಕಂದನಿಗೆ ಹಾಲು ಕೊಟ್ಟು ಬುದ್ದಿ ಮಾತು ಹೇಳಿ ನಂತರ ಕೊಟ್ಟ ಭಾಷೆಗೆ ತಪ್ಪಿನಡೆಯಲಾರನೆಂದು ಹುಲಿಯ ಹತ್ತಿರ ಹೋಗಿ ನಿಂತಾಗ ಹುಲಿಯು ಇದರ ಪ್ರಮಾಣಿಕತೆಯನ್ನು ಅರಿತು ತಿನ್ನದೇ ಬಿಡುವುದು. ಇದನ್ನು ಮನೋಜ್ಞವಾಗಿ ಜನಪದ ಗೀತೆ ಮತ್ತು ದೃಶ್ಯವನ್ನು ಚಲನಚಿತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಜನುಮದ ಜೋಡಿಯಂತೂ ಸಂಪೂರ್ಣ ಗ್ರಾಮೀಣ ಜೀವನ ಪದ್ಧತಿಯನ್ನು ಕಂಡರಿಸಿದೆ. ಜಾತ್ರೆ, ಜಾತ್ರೆಯಲ್ಲಿ ವಿವಿಧ ರೀತಿಯ ಆಟಗಳು, ಮುಂತಾದ ಸನ್ನಿವೇಶಗಳನ್ನು ಕಾಣಬಹುದು."ಕೋರಣ್ಯ ನೀಡವ್ವ ಕೋಡಗಲ್ಲ ಮಾದೇವನಿಗೆ" ಎಂಬ ಜನಪದ ಗೀತೆ ಮಾತ್ರ ಜನಮನದಲ್ಲಿ ಗುನುಗುವಂತೆ ಮಾಡಿರುವ ಈ ಚಲನಚಿತ್ರ ಹಳ್ಳಿಯ ಚಿತ್ರಣವನ್ನು ಸಮಗ್ರವಾಗಿ ಹಿಡಿದಿಟ್ಟಿದೆ. 'ಹಳ್ಳಿಯ ಕಥಾವಸ್ತುವನ್ನು ಹೊಂದಿದ ಸಾಮಾಜಿಕ ಚಿತ್ರ ಹಳ್ಳಿಯ ಬದುಕನ್ನು ಯಥಾವತ್ತಾಗಿ ಚಿತ್ರೀಕರಿಸುವ ಮೂಲಕ ಸಾರ್ವತ್ರಿಕ ಜನಪದ ಬದುಕಿನ ವಿಷಯ ಗ್ರಹಿಕೆಗೆ ಪೂರಕವಾಗಿ ಕಾರ್ಯನಿರ್ವಹಿಸಿತು. ಇದರೊಂದಿಗೆ ಜನಪದ ಸಂಗೀತದ ಹಿನ್ನೆಲೆಯನ್ನು ಇರಿಸಿಕೊಂಡು ಹೆಚ್ಚುಗಾರಿಕೆಯನ್ನು ಪಡೆಯಿತು. ಚಲನಚಿತ್ರ ಏಕಕಾಲಕ್ಕೆ ದೃಕ್- ಶ್ರವಣ ಪರಿಣಾಮವನ್ನು ಉಂಟುಮಾಡುವುದರೊಂದಿಗೆ ಜನಪದರ ಬದುಕನ್ನು ಪ್ರತಿಬಿಂಬಿಸುವ ಮೂಲಕವೂ ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳುತ್ತಾ ಸಾಗಿತು. ಗ್ರಾಮೀಣ ಸಂಭಾಷಣಾ ಶೈಲಿಯನ್ನು ಕೆಲವು ಪಾತ್ರಗಳು ಅಳವಡಿಸಿಕೊಳ್ಳುವಂತೆ ಮಾಡಿ ಆ ಭಾಷಾಶೈಲಿಯಲ್ಲಿ ದಾಖಲಾತಿಯಾಗುವಂತೆ ಆಯಿತಾದರೂ ಅಧ್ಯಯನ ಪೂರ್ಣತೆಯನ್ನು ಇದು ಸಾಧಿಸಲಿಲ್ಲ. ಈ ನಡುವೆ ಕೆಲವು ಚಿತ್ರಗಳಲ್ಲಿ ಜನಪದ ಕಲೆಗಳ ಪ್ರದರ್ಶನವನ್ನು ದಾಖಲಿಸಿದ್ದಾರೆ. ಕಥೆಯಲ್ಲಿ ಜಾತ್ರೆ ಪ್ರಸಂಗದ ಪ್ರಸ್ತಾಪವಿದ್ದಾಗ ನಿಜವಾಗಿಯೂ ಕೆಲವು ಜಾತ್ರೆ, ಸಂತೆಗಳಿಗೆ ಚಿತ್ರೀಕರಣ ಘಟಕಗಳು ಬೇಟಿನೀಡಿ ಚಿತ್ರೀಕರಣ (ಹೊರಾಂಗಣ) ನಡೆಸಿರುವುದು ಉಂಟು. ಕಥಾ ನಿರೂಪಣಾ ಶೈಲಿಯಲ್ಲಿ ನೈಜತೆಯನ್ನು ಕಾಯ್ದುಕೊಳ್ಳಲು ಈ ರೀತಿಯ ಕೆಲವು ಪ್ರಯತ್ನಗಳು ಸಾಗಿವೆ. ಶುದ್ಧ ಗ್ರಾಮೀಣ ಕಥಾವಸ್ತುವಿದ್ದ 'ಕೂಡಿಬಾಳಿದರೆ ಸ್ವರ್ಗಸುಖ' ಎಂಬ ಚಿತ್ರದಲ್ಲಿ ಇರುವ ಸೋಮನಕುಣಿತ ಹಾಗೂ ಶಿವರಾತ್ರಿ ಸಂದರ್ಭದಲ್ಲಿ ನಡೆಯುವ ವೀರಗಾಸೆ ಕುಣಿತ ಹಾಗೂ ನಂದಿಧ್ವಜದ ಕುಣಿತವನ್ನು ಚಿತ್ರೀಕರಿಸಲಾಗಿದೆ.

[illegible]

ಅನೇಕ ಜನಪದ ಸಂಪ್ರದಾಯ, ಆಚರಣೆ, ನಂಬಿಕೆಗಳು ಹಾಗೂ ಐತಿಹ್ಯಗಳೂ ಕೂಡ ಈ ರೀತಿಯಾಗಿ ಜನಪದ ಕಲಾಮಾಧ್ಯಮಗಳನ್ನು ಕ್ವಚಿತ್ತಾಗಿ ಬಳಸಿಕೊಳ್ಳುತ್ತಿರುವ ಚಲನಚಿತ್ರಗಳು ಬಹಳಷ್ಟು ಇವೆ. ಈ ಮಾಧ್ಯಮದಲ್ಲಿ ಕ್ವಚಿತ್ತಾಗಿ ಬಳಸುವ ಜಾನಪದದ ಬಗ್ಗೆ ಜಾನಪದ ವಿದ್ವಾಂಸರಲ್ಲಿ ಏನೇ ತಕರಾರು ಇದ್ದರೂ ಯಾವುದೇ ಮೂಲೆಯಲ್ಲಿ ಸೀಮಿತವಾಗಬೇಕಿದ್ದ ವಿಭಿನ್ನ ಬಗೆಯ ಜಾನಪದ ಕಲೆಗಳನ್ನು ಸಿನಿಮಾದಂತಹ ಮುಖ್ಯವಾಹಿನಿಯ ಮಾಧ್ಯಮದಲ್ಲಿ ತರವುದು ಮುಖ್ಯ ಪ್ರಯತ್ನವೇ ಸರಿ.

೪.೪.೩. ಚಲನ ಚಿತ್ರಗಳಲ್ಲಿ ಜನಪದ ಭಾಷೆ

ಭಾಷೆಗೂ ಪ್ರದೇಶಕ್ಕೂ ಕರುಳುಬಳ್ಳಿಯ ಸಂಬಂಧ ಇದೆ. ಪ್ರಾದೇಶಿಕವಾಗಿ ಭಿನ್ನವಾದಂತೆಲ್ಲ. ಭಾಷೆಯಲ್ಲಿ ಪ್ರಬೇಧಗಳು ಹೆಚ್ಚಾಗುತ್ತವೆ. ಈ ಪ್ರಬೇಧಗಳು ಬರವಣಿಗೆಯಲ್ಲಿ ಪ್ರಮಾಣೀಕರಣವನ್ನು ಅನುಕರಿಸಿದರೂ, ಆಡು ಮಾತಿನಲ್ಲಿ ವಿಭಿನ್ನ ಪ್ರಬೇಧಗಳಾಗಿಯೇ ಉಳಿದಿವೆ. ಸಾಮಾನ್ಯವಾಗಿ ಅಕ್ಷರಸ್ಥರು ಮತ್ತು ನಗರದಲ್ಲಿ ವಾಸಿಸುವ ಜನರಾಡುವ ಭಾಷೆಯು ಶಿಷ್ಟೀಕರಣಗೊಂಡಿರುತ್ತದೆ. ಈ ರೀತಿಯ ಪೂರ್ಣಪ್ರಮಾಣದ ಪ್ರಾದೇಶಿಕ ಭಾಷೆಯೊಂದನ್ನು ಕಾಣಲು ಸಾಧ್ಯವಿಲ್ಲ. ಇದೇ ವರ್ಗೀಕರಣವನ್ನು ಸಿನಿಮಾಗಳಲ್ಲೂ ಕಾಣಬಹುದು. ಆರಂಭದ ಸಿನಿಮಾಗಳಲ್ಲಿ ಸಾಹಿತ್ಯಿಕ ಭಾಷೆಯನ್ನು ಹೆಚ್ಚಾಗಿ ಬಳಕೆಗೊಳ್ಳುತ್ತಿತ್ತು. ಒಂದು ರೀತಿ ನಾಟಕೀಯ ಶೈಲಿಯಲ್ಲಿ ಕಥೆ ಮತ್ತು ಸಂಭಾಷಣೆಗಳಿರುತ್ತಿದ್ದವು. ಆದರೆ ಈ ಮಾಧ್ಯಮ ಬೆಳೆಯುತ್ತಾ ಈ ಮಾದರಿ ಕಣ್ಮರೆಯಾಗಿ ಚಿತ್ರಕಥೆ ಪ್ರಾದೇಶಿಕತೆಯನ್ನು ಆಧರಿಸಿ ಸಂಭಾಷಣೆಯ ಭಾಷೆ ನಿರೂಪಣೆಗೊಂಡಿರುತ್ತದೆ. 'ಮುತ್ತಿನ ಹಾರ' ಚಿತ್ರದಲ್ಲಿ ಕೊಡಗು ಕನ್ನಡವನ್ನು ಕಂಡರೆ.'ಹುಲಿಯಾ' ಚಿತ್ರದಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನು ಕಾಣಬಹುದು. ಬರಗೂರು ರಾಮಚಂದ್ರಪ್ಪರವರ ಸಂಭಾಷಣೆಯ ಚಿತ್ರಗಳಲ್ಲಿ (ಜನುಮದ ಜೋಡಿ, ನಮ್ಮೂರ ಹುಡ್ಗ, ಹಗಲು ವೇಷ ಮುಂತಾದ) ತುಮಕೂರು ಜಿಲ್ಲೆಯ ಭಾಷಾ ವಿವಿಧ್ಯವನ್ನು ಕಾಣಬಹುದು. ಪುನಿತ್ ರಾಜ್‌ಕುಮಾರ್ ಅಭಿನಯದ 'ಅಭಿ' ಚಿತ್ರದಲ್ಲಿ ಧಾರವಾಡ ಕನ್ನಡ ಮತ್ತು ಬೆಂಗಳೂರು ಕನ್ನಡ ಭಾಷಾಮಿಶ್ರಣವನ್ನು ಕಾಣಬಹುದು. ಕೆಲವೊಂದು ಚಲನಚಿತ್ರಗಳು ಗ್ರಾಮೀಣ ಭಾಷಾಶೈಲಿಯನ್ನು ಯಥಾವತ್ತಾಗಿ ಬಳಸಿಕೊಂಡರೆ ಮತ್ತೆ ಕೆಲವುಚಿತ್ರಗಳಲ್ಲಿ ಹಳ್ಳಿ ಪಾತ್ರಗಳನ್ನೊಳಗೊಂಡ ಪಾತ್ರಗಳು ಮಾತ್ರ ಗ್ರಾಮೀಣ ಭಾಷೆಯನ್ನು ಆಡುತ್ತಿರುತ್ತವೆ. ಉದಾಹರಣೆ 'ಬಂಗಾರ ಪಂಜರ'ದಲ್ಲಿ ಡಾ. ರಾಜಕುಮಾರ್ ಆಡುವ ಭಾಷೆ ಅಪ್ಪಟ ಗ್ರಾಮೀಣವಾದದ್ದು. ಚಲನಚಿತ್ರಗಳಲ್ಲಿ ಬಳಕೆಗೊಂಡ ಜನಪದ ಭಾಷೆಯನ್ನು ಗುರುತಿಸುತ್ತಾ ಹೋದಂತೆಲ್ಲ ಇದೊಂದು ಮಹಾಪ್ರಬಂಧದ ಸಂಶೋಧನೆಯ ವಿಷಯುವಾಗುತ್ತದೆ. ಅಷ್ಟು ಬೃಹದಾಕಾರವಾಗಿ ಚಲನಚಿತ್ರ ಮಾಧ್ಯಮ ಜನಪದ ಭಾಷೆಯನ್ನು ಬಳಸಿಕೊಂಡಿದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಜಾನಪದವು ಚಲನಚಿತ್ರ ಮಾಧ್ಯಮದಲ್ಲಿ ಎಷ್ಟರ

ಮಟ್ಟಿಗೆ ಬೆಳೆಯುತ್ತಿದೆ ಎಂಬುದನ್ನು ಜಾನಪದ ವಿದ್ವಾಂಸರೇ ನಿರ್ಧರಿಸಬೇಕು. "ನನ್ನ ಅಭಿಪ್ರಾಯದಲ್ಲಿ ಈಗ ಶಿಷ್ಟವೆಂದು ಕರೆಸಿಕೊಳ್ಳುತ್ತಿರುವ ಭರತನಾಟ್ಯ ಕಲೆಗಳನ್ನು , ರಂಗಭೂಮಿಯ ಪ್ರಯೋಗಗಳನ್ನು ಅಷ್ಟೇಕೆ ಸಿನಿಮಾಕಲೆಯನ್ನು 'ಲಿಖಿತ' ಜಾನಪದ ಎಂದು ಕರೆಯಬಹುದಾಗಿದೆ. ಇವೆಲ್ಲವೂ ಜಾನಪದ ಮೂಲಾಂಶಗಳನ್ನು ಪಡೆದಿವೆ. ಜನಪದ ಕಲೆಗಳಲ್ಲಿ ಶ್ರಮ ಮತ್ತು ಸೃಜನಶೀಲತೆ ಎರಡೂ ನೆಲೆಗಳೂ ಇರುತ್ತವೆ. ಜನಪದ ಕಲೆಗಳು ಪ್ರಧಾನವಾಗಿ ಮೌಖಿಕ ನಿದರ್ಶನಗಳಿಗೆ ಒಳಪಟ್ಟಿರುತ್ತವೆ. ಅಲ್ಲದೆ ಸಮೂಹದ ತೊಡಗುವಿಕೆಯಿಂದ ರೂಪುಗೊಳ್ಳುತ್ತವೆ. ಲಿಖಿತ ಕವಿತೆ, ಕಥೆಗಳಂತೆ ಏಕವ್ಯಕ್ತಿ ಸೃಷ್ಟಿಯಾಗಿರುವುದಿಲ್ಲ, ಆದರೆ ಪ್ರಧಾನ ನಿಯಂತ್ರಕ ಅಥವಾ ನಿಯಂತ್ರಕಿ ಈ ಸೃಷ್ಟಿಸ್ವರೂಪದ ಭಾಗವಾಗಿರುತ್ತಾರೆ. ಜಾನಪದ ಕಲೆಗಳ ರೂಪಧಾರಣಾ ಪ್ರಕ್ರಿಯೆ ಈ ಪ್ರಧಾನ ಅಂಶಗಳನ್ನು ಆಧುನಿಕ ಸಿನಿಮಾ ಸೃಷ್ಟಿಯಲ್ಲಿ ಕಾಣಬಹುದು. ಸಿನಿಮಾದಲ್ಲಿ ಮೌಖಿಕ ಪರಂಪರೆಯದೇ ಮೇಲುಗೈ. ಚಿತ್ರಕಥೆ ಸಂಭಾಷಣೆ ಸಿದ್ಧವಾದ ಮೇಲೆ ಅದನ್ನು ಬಯಲಾಟದಲ್ಲಿ ಹೇಳಿಕೊಟ್ಟಂತೆಯೇ ಹೇಳಿಕೊಡಲಾಗುತ್ತದೆ. ಸಿನಿಮಾ ಸಮೂಹದ ಕ್ರಿಯಾತ್ಮಕ ತೊಡಗುವಿಕೆಯಿಂದ ರೂಪುಗೊಳ್ಳುವ ಕಲೆ. ಇಲ್ಲಿ ಶ್ರಮಜೀವಿಗಳು ಇರುತ್ತಾರೆ. (ಲೈಟ್ ಬಾಯ್ ಇತ್ಯಾದಿ) ಶ್ರಮ ಮತ್ತು ಸೃಜನಶೀಲತೆ ಒಟ್ಟೊಟ್ಟಿಗೆ ಸಾಧ್ಯವಾಗುತ್ತದೆ".[೫೬] ಆದ್ದರಿಂದ ಸಿನಿಮಾ ಸಹ ಒಂದು ಜನಪದ ಕಲೆ ಎನ್ನುವ ಮಟ್ಟಕ್ಕೆ ಬೆಳೆದಿದೆ ಕನ್ನಡ ಜಾನಪದ ಚಿಂತನೆ. ಆಧುನಿಕತೆಯಲ್ಲಿ ಜಾನಪದವು ವಿವಿಧ ಮುಖಗಳಲ್ಲಿ ಯಾವ ರೀತಿಯಲ್ಲಿ ಹೊರಹೊಮ್ಮುತ್ತದೆ ಎಂಬುದನ್ನು ಜಾನಪದ ವಿದ್ವಾಂಸರು ಗುರುತಿಸುವುದು ಕರ್ತವ್ಯವೂ ಆಗಿದೆ.

೪.೫. ದೂರದರ್ಶನದಲ್ಲಿ ಜಾನಪದ

ದೃಶ್ಯ ಮಾಧ್ಯಮದಲ್ಲಿ ಬಹುಬೇಗ ಜನರನ್ನು ಆಕರ್ಷಿಸುವ ಮಾಧ್ಯಮವೆಂದರೆ ದೂರದರ್ಶನ. ಇದು ಅಕ್ಷರಸ್ಥರು ಅನಕ್ಷರಸ್ಥರು ಎನ್ನದೇ ತಲುಪುವ ಮಾಧ್ಯಮವಾಗಿದೆ. ಇದು ಮನಸ್ಸನ್ನು ಸೆರೆಹಿಡಿಯುವಲ್ಲಿ ಶಕ್ತಿಯುತ ಮಾಧ್ಯಮವಾಗಿದ್ದು, ಇದರ ಬಳಕೆಯ ವಿಧಾನವು ಸುಲಭಗ್ರಾಹ್ಯವಾಗಿರುವುದರಿಂದ ನಗರ ಹಳ್ಳಿಯೆನ್ನದೇ ಎಲ್ಲಾ ಪ್ರದೇಶದ ಜನರನ್ನು ತಲುಪುತ್ತಿದೆ. ಆಕಾಶವಾಣಿ ಶ್ರವ್ಯ ಮಾಧ್ಯಮವಾದರೆ, ಪತ್ರಿಕೆಗಳು ದೃಶ್ಯಮಾಧ್ಯಮ ಈ ಎರಡೂ ಅನುಕೂಲಗಳನ್ನು ಏಕಕಾಲದಲ್ಲಿ ಕಟ್ಟಿಕೊಡುವ ಮಾಧ್ಯಮವೆಂದರೆ ದೂರದರ್ಶನ.

"ದೂರದರ್ಶನ ಇವತ್ತಿನ ಜನಪ್ರಿಯ ಮಾಧ್ಯಮಗಳಲ್ಲಿ ಒಂದು. ಸಮಾಜದ ಎಲ್ಲಾ ವರ್ಗದ ಜನರ ಮೇಲೂ ಪ್ರಭಾವ ಬೀರವಲ್ಲಿ ಏಕಮಾತ್ರ ಮಾಧ್ಯಮ. ಪತ್ರಿಕೆಗಳು, ವಿದ್ಯಾವಂತರಿಗಷ್ಟೇ ಮೀಸಲು. ಆಕಾಶವಾಣಿ ಕೇವಲ ಶ್ರವ್ಯ ಮಾಧ್ಯಮ. ದೂರದರ್ಶನ ತನ್ನ ಶ್ರವ್ಯ ದೃಶ್ಯ ಹಾಗೂ ಬಣ್ಣದ ಮೂಲಕ ತುಂಬಿಕೊಡುವ ಶಕ್ತಿಯುಳ್ಳದ್ದು. ಶಿಶುವಿನಿಂದ ವೃದ್ಧರವರೆಗೆ, ಶ್ರೀಸಾಮಾನ್ಯನಿಂದ ಶ್ರೀಮಂತರವರೆಗೆ, ನಿರಕ್ಷಕನಿಂದ ದೊಡ್ಡ ವಿದ್ವಾಂಸನವರೆಗೆ ಎಲ್ಲರನ್ನು ಆಕರ್ಷಿಸುವ ಮರುಳು

[illegible]

ಗೊಳಿಸುವ ಈ ಮಾಧ್ಯಮದ ಜವಾಬ್ದಾರಿ ಹೆಚ್ಚು. ಚಲನಚಿತ್ರ ಮಾಧ್ಯಮವು ಎಲ್ಲಾ ವರ್ಗದ ಪ್ರೇಕ್ಷರನ್ನು ಮನತಣಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬ ಪ್ರೇಕ್ಷಕನ ಮನೋಭಿಲಾಷೆಗಳಿಗೆ ತಕ್ಕಂತೆ ಸಿನಿಮಾ ಒಂದನ್ನು ನಿರ್ಮಿಸಲು ಸಾಧ್ಯವಿಲ್ಲ. ಎಲ್ಲಾ ದೃಶ್ಯ-ಘಟನಾವಳಿಗಳನ್ನು ಎಲ್ಲಾ ಪ್ರೇಕ್ಷಕರು ಸಮಾನ ಮನೋಭಾವದಲ್ಲಿ ಸ್ವೀಕರಿಸಲು ಸಾಧ್ಯವಿಲ್ಲ. ಆದರೆ ದೂರದರ್ಶನ ಎಲ್ಲಾ ಬಗೆಯ ಪ್ರೇಕ್ಷಕ ವರ್ಗವನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗುತ್ತಿದೆ.

ಈ ಮಾಧ್ಯಮದಲ್ಲಿ ಮಕ್ಕಳಿಗೆ ಕುತೂಹಲ ಕೆರಳಿಸುವ ಸನ್ನಿವೇಶಗಳಿದ್ದರೆ, ಗೃಹಿಣಿಯರಿಗೆ ಸಂಸಾರ ಹಾಗುಹೋಗುಗಳು, ಬದುಕಿನೊಂದಿಗೆ ನಿಕಟಸಂಪರ್ಕ ಇಟ್ಟುಕೊಂಡಿರುವಂಥ ಕಾರ್ಯಕ್ರಮಗಳು ಇರುತ್ತವೆ. ಒಳಿತು ಕೆಡುಕುಗಳ ಅನ್ವೇಷಣೆ, ಮಹಿಳೆಯ ಮೇಲೆ ಆಗುತ್ತಿರುವ ದೌರ್ಜನ್ಯ, ದೇಶವಿದೇಶಗಳ ಸಮಾಚಾರ ಯುದ್ಧ, ಶಾಂತಿ, ಅನ್ಯಾಯ ಅಕ್ರಮಗಳೆಲ್ಲವೂ ಎಳೆಎಳೆಯಾಗಿ ಪ್ರೇಕ್ಷಕರ ಮುಂದೆ ಬರುತ್ತವೆ. ಈ ಎಲ್ಲಾ ಅಂಶಗಳೂ ಒಬ್ಬೊಬ್ಬರಿಗೂ ಒಂದೊಂದು ರೀತಿಯಲ್ಲಿ ಪ್ರಿಯವಾಗಿರಬಹುದು. ಆದ್ದರಿಂದಲೇ ಇದು ಎಲ್ಲಾ ವರ್ಗದ ಪ್ರೇಕ್ಷಕರನ್ನು ಮನತಣಿಸುವ ಮಾಧ್ಯಮವಾಗಿದೆ. "ವಾಲ್ಟರ್ ಕಾಂಕೈಟ್ ಹೇಳುವಂತೆ ಇಂದಿನ ದಿನಗಳಲ್ಲಿ ಪತ್ರಿಕೆ, ರೇಡಿಯೋ ಫಿಲ್ಮ್ ಇನ್ನಾವುದೇ ಮಾಧ್ಯಮಕ್ಕಿಂತ ದೂರದರ್ಶನ ಪರಿಣಾಮಕಾರಿ! ಕಾರಣ ಇದು ತೀರ ಪ್ರಸ್ತುತವಾದುದು, ಆಪ್ತವಾದುದು, ಹಾಗೂ ಮುಖ್ಯವಾಗಿ ಬಳಕೆಗೊಳ್ಳುವಂಥದ್ದು. ಇದು ವೀಕ್ಷಕರನ್ನು ತುಂಬ ಹತ್ತಿರದಿಂದ ಸೆಳೆದುಕೊಳ್ಳುವುದಲ್ಲದೆ, ಕಡಿಮೆ ಔಪಚಾರಿಕವಾಗಿರುತ್ತದೆ. ಅಲ್ಲದೆ ಇದು ವೀಕ್ಷಕರ ಗ್ರಹಣ ಸಾಮರ್ಥ್ಯವನ್ನು ಕುದುರಿಸುತ್ತದೆ. ಗರ್ಬರ್ ಹೇಳುವಂತೆ ಅದು ಸಾಮಾಜಿಕ, ಸಾಂಸ್ಕೃತಿಕ, ನಂಬಿಕೆಗಳ ಮೇಲೆ ಗಾಢ ಪರಿಣಾಮ ಬೀರುತ್ತದೆ. ದೂರದರ್ಶನದ ನಾಟೀಕರಣ ಗುಣದಿಂದ ತಿಳಿಯುವುದು ಏನೆಂದರೆ ಧರ್ಮದ ಹಾಗೆ ಅದೊಂದು ಆಚರಣೆಯೇ ಆಗಿರುವುದು. ಸಮಾಜ ನಿಯಂತ್ರಣದಂತೆಯೇ ಸಂಸ್ಕೃತಿ ವೈಭವೀಕರಣವೂ ಅದರ ಗುರಿ ಆಶರ್ಯಗಳಲ್ಲೊಂದು ದೇಶ ವಿದೇಶಗಳ ರಾಜಕೀಯ ಪರಿಸ್ಥಿತಿಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ, ಹೆಣ್ಣಿನ ತುಮುಲಗಳಿಗೆ, ಮಕ್ಕಳ ಮನರಂಜನೆಗೆ, ಮೂರ್ಖರಿಗೆ, ಕಾಲಹರಣ ಮಾಡುವುದಕ್ಕೆ ಎಲ್ಲಾ ಬಗೆಯ ಮೌಲ್ಯಗಳಿಗೂ ದನಿಯಾಗಿ ದೂರದರ್ಶನ ಕಾಣುತ್ತಿದೆ. ಇಂದು ಜೀವನದ ಪ್ರತಿಬಿಂಬವಾಗುತ್ತಿರುವ ದೂರದರ್ಶನದಲ್ಲಿ ಪಳೆಯುಳಿಕೆ ಬಂಧವಾಗಿರುವ ಜಾನಪದವನ್ನು ಹೇಗೆ ತನ್ನ ಇತಿ ಮಿತಿಯಲ್ಲಿ ಪ್ರದರ್ಶಿಸುತ್ತದೆ ಎಂಬುದು ಕುತೂಹಲ ಕೆರಳಿಸುವ ವಿಷಯ. ದೂರದರ್ಶನದಲ್ಲಿರುವ ಜಾನಪದದ ಇರುವಿಕೆಯನ್ನು ಗುರುತಿಸಲು ಕೆಳಗಿನಂತೆ ವಿಭಾಗಿಸಿಕೊಂಡು ಅಧ್ಯಯನ ನಡೆಸಲಾಗಿದೆ.

೪.೫.೧. ಕಾರ್ಟೂನ್ ಚಿತ್ರಗಳು

೪.೫.೨. ಜಾಹೀರಾತು

೪.೫.೩. ಧಾರವಾಹಿ ಕಥೆಗಳ ಹಿನ್ನೆಲೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು.

[illegible]

[illegible]

[illegible]

[illegible]

೪.೫.೧. ಕಾರ್ಟೂನ್ ಚಿತ್ರಗಳು

ದೂರದರ್ಶನದಲ್ಲಿ ಮಕ್ಕಳನ್ನು ಬಹುಬೇಗ ಆಕರ್ಷಿಸುವ ಕಾರ್ಯಕ್ರಮವೆಂದರೆ ಕಾರ್ಟೂನ್ ಅನಿಮೇಷನ್ ಚಿತ್ರ. ಈ ಅನಿಮೇಷನ್ ತಂತ್ರವೂ ವ್ಯಂಗ್ಯಚಿತ್ರಗಳನ್ನು ಒಳಗೊಂಡಿರುತ್ತದೆ. ಕಂತುಗಳ ರೂಪದಲ್ಲಿ ಬರುವ ಈ ಕಾರ್ಯಕ್ರಮ ಜನಪದ ಕಥೆಗಳನ್ನು ಇಲ್ಲವೆ ಪುರಾಣಕಥೆಗಳನ್ನು ಆಧರಿಸಿ ತಯಾರಾಗಿರುತ್ತವೆ. ಇಲ್ಲಿ ಬರುವ ಪ್ರಾಣಿ ಮತ್ತು ಮನುಷ್ಯರ ಸಂಬಂಧಗಳು ಸಾಮಾನ್ಯವಾಗಿರುತ್ತವೆ. ಇಲ್ಲಿ ಪಶುಗಳು ಮಾತನಾಡಬಲ್ಲವು. ಪಕ್ಷಿಗಳು ಸಂದೇಶವನ್ನು ತಲುಪಿಸಬಲ್ಲವು. ಹುಲಿ, ಕರಡಿ, ಮನುಷ್ಯ ಜೊತೆ ಜೊತೆಯಾಗಿ ಬದುಕ ಬಲ್ಲವು. ಕಥಾನಾಯಕ ಅಥವಾ ಕಥಾನಾಯಕಿಗೆ ಸೇವಕರಾಗಿಯೂ ಕೆಲಸವನ್ನು ಮಾಡಬಲ್ಲವು. ಇವುಗಳು ಒಂದೇ ನೆಗೆತಕ್ಕೆ ಪಾತಾಳವನ್ನು ಸೇರಬಲ್ಲವು. ಹಾಗೇ ಸೌರಮಂಡಲದಲ್ಲಿ ಯಾವುದೇ ಆಧಾರವಿಲ್ಲದೆ ಸುತ್ತಾಡಬಲ್ಲವು. ಡೈನೋಸಾರ್ ಪ್ರಾಣಿ ಇಲ್ಲಿ ಸೀಮೆಯಾಗಬಲ್ಲದು. ಕಿನ್ನರ ಕಿಂಪುರುಷರು ಬೇಕಾದ ಅವತಾರಗಳನ್ನು ಪಡೆಯಬಲ್ಲರು. ಇವೆಲ್ಲ ಸಾಧ್ಯವಾಗುವುದು ಜನಪದ ಕಥೆಗಳ ಲೋಕದಲ್ಲಿ ಮಾತ್ರ. ಇಂತಹ ತಂತ್ರಗಾರಿಕೆಯನ್ನು ಕಾರ್ಟೂನ್ ಅನಿಮೇಷನ್ ತಂತ್ರ ಶಕ್ತಿಯುತವಾಗಿ ಬಳಸಿಕೊಂಡಿದೆ. ದೂರದರ್ಶನದಲ್ಲಿ ಅನಿಮೇಶನ್ ಚಿತ್ರಗಳಿಗೆ ಪ್ರತ್ಯೇಕ ಚಾನಲ್‌ಗಳೇ ಇವೆ.

೪.೫.೨. ಜಾಹೀರಾತು

ಯಾವುದೇ ಒಂದು ವಸ್ತುವಿಗೆ ಅಧಿಕ ಬೇಡಿಕೆ ಉಂಟಾಗಬೇಕೆಂದರೆ 'ಪ್ರಚಾರ' ಬಹಳ ಪ್ರಮುಖ ಪಾತ್ರವಹಿಸುತ್ತದೆ. ಇದನ್ನು ಜಾಹೀರಾತು ಎಂದು ಕರೆಯುಬಹುದು. ಈ ಜಾಹೀರಾತುಗಳು, ಕೊಂಡುಕೊಳ್ಳುವವನ ಮನಸ್ಸನ್ನು ಉದ್ರೇಕಿಸುತ್ತವೆ. ಜನಪ್ರಿಯ ವ್ಯಕ್ತಿಗಳನ್ನು ಸಿನಿಮಾ ನಟನಟಿಯರನ್ನು ಕ್ರಿಕೆಟ್ ದಾಂಡಿಗರನ್ನೊ ಇಲ್ಲವೇ ಮಾಡೆಲ್ಸ್‌ಗಳನ್ನು ಇಟ್ಟುಕೊಂಡು ಜಾಹೀರಾತುಗಳು ತಯಾರಾಗಿರುತ್ತವೆ. ಇವುಗಳ ಪ್ರಮುಖ ಗುರಿಯೆಂದರೆ ಕೊಂಡುಕೊಳ್ಳುವ ಗಿರಾಕಿಯ ಮನಸ್ಸನ್ನು ಪ್ರಚೋದಿಸುವುದು. ಇಂತಹ ಬಹುವ್ಯಾಪಕವಾದ ವಾಣಿಜ್ಯ ಕ್ಷೇತ್ರವು ಜಾನಪದವನ್ನು ಕ್ವಚಿತ್ತಾಗಿ ಬಳಸಿಕೊಂಡಿವೆ. ಸ್ಪೈಸ್ ಮೊಬೈಲ್ ತನ್ನ ಜಾಹೀರಾತುಗಾಗಿ ಯಕ್ಷಗಾನವನ್ನು ಬಳಸಿಕೊಂಡಿದೆ. ಯಕ್ಷಗಾನ ವೇಷಹಾಕಿದವನು ಅಟ್ಟದ ಮೇಲೆ ಕುಣಿಯುತ್ತಲೇ ಹಿಂದಕ್ಕೆ ತಿರುಗಿ ಮೊಬೈಲ್‌ನಲ್ಲಿ ಮಾತನಾಡುವುದು. ವಿದೇಶದಲ್ಲಿ ವಿದೇಶಿ ಮಹಿಳೆಯೊಂದಿಗೆ ಜೀಪಿನಲ್ಲಿ ಹೋಗುವಾಗ ಯಕ್ಷಗಾನ ವೇಷವನ್ನು ತೊಟ್ಟು ಸ್ಪೈಸ್‌ನ ಮುಖಾಂತರ ಮಾತಾನಾಡುವುದು. ಮತ್ತು ರಾಜರಾಣಿಯರ ಒಬ್ಬನೇ ಮಗ ಆಯೋಡಿನ್ ಅಂಶದಿಂದ ಕೊರಗುವುದು. ಆನಂತರ ಅಯೋಡಿನ್‌ಯುಕ್ತವಾದ ಉಪ್ಪನ್ನು ಸೇವಿಸುವುದರಿಂದ ಖಾಯಿಲೆಯಿಂದ ಗುಣಮುಖನಾಗುವುದು. ಇದನ್ನು ಸೂತ್ರದ ಗೊಂಬೆಯ ಮುಖಾಂತರ ಕಟ್ಟಿಕೊಟ್ಟಿದ್ದಾರೆ. ಈ ಜಾನಪದ ಕಲೆಗಳನ್ನು ಜಾಹೀರಾತುಗಳಲ್ಲಿ ಯಾಕಾಗಿ ಬಳಸಿಕೊಳ್ಳುತ್ತಿದ್ದರೆ ಎನ್ನುವುದು ಕುತೂಹಲಕಾರಿಯಾದುದು. "ಪರಂಪರಗತವಾಗಿ ಬಂದ ಯಕ್ಷಗಾನದಂತಹ ಜನಪದ ಮಾಧ್ಯಮಗಳಿಗೆ ಚಲನಚಿತ್ರ, ದೂರದರ್ಶನ, ಪತ್ರಿಕೆ ಮುಂತಾದ ಶಿಷ್ಟ

ಸಮಾಹದ ಮಾಧ್ಯಮಗಳಿಗಿಂತ ಹೆಚ್ಚು ಸಂವಹನ ಸಾಮರ್ಥ್ಯವಿದೆ. ಜನಪದ ಮಾಧ್ಯಮದಲ್ಲಿ ಕಲಾವಿದ ಮತ್ತು ಪೇಕ್ಷಕರ ನಡುವೆ ತತ್‌ಕ್ಷಣದ ಸಾಮೀಪ್ಯಸಂಬಂಧ ಏರ್ಪಡುತ್ತದೆ. ಈ ಮಾಧ್ಯಮವು ಭಾಷೆಯನ್ನು ಮೀರಿ ತನ್ನ ಗುರಿಯನ್ನು ತಲುಪುತ್ತದೆ. ಮಾತು ಕ್ರಿಯೆ ಸಂಕೇತಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಜನಪದ ಸಮೂಹ ಮಾಧ್ಯಮಗಳು ನಿರಕ್ಷರರಿಗೂ ತನ್ನ ಸಂದೇಶವನ್ನು ಯಶಸ್ವಿಯಾಗಿ ದಾಟಿಸಬಲ್ಲದು. ಸಮುದಾಯದ ನಡುವೆ ಕ್ಷಣಕ್ಷಣವೂ ಪುನರ್ ಸೃಷ್ಟಿಯಾಗುತ್ತಾ ಹೋಗುವ ಜಾನಪದವು ಸಮೂಹ ಸಂಸ್ಕೃತಿ (Mass culture) ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಹೀಗೆ ಸಮಾಜದಲ್ಲಿ ಹೊಸ ಆಶೋತ್ತರಗಳನ್ನು ಬಿಂಬಿಸುವ ನೂತನ ಸಮಾಜ ನಿರ್ಮಾಣ ಮಾಡುವಲ್ಲಿ ಯಕ್ಷಗಾನದಂತಹ ಜನಪದ ಮಾಧ್ಯಮಗಳ ಪಾತ್ರ ಗಮನಾರ್ಹವಾದುದು. ಇಂತಹ ಜನಪದ ಮಾಧ್ಯಮಗಳ ಪ್ರಯೋಜನವನ್ನು ವಿದ್ವಾಂಸರು ಗುರುತಿಸಿದ್ದಾರೆ.

೧. ಪರಂಪರಾಗತವಾದ ಜನಪದ ಮಾಧ್ಯಮವು ಜನತೆಯೊಂದಿಗೆ ನಿಕಟ ಸಂಪರ್ಕ ಪಡೆದಿದ್ದು ಅವರ ವೈಚಾರಿಕತೆಗಿಂತ ಅವರ ಭಾವಪರವಶತೆಯನ್ನು ಅವು ಸೆಳೆಯುತ್ತವೆ.
೨. ಅನೇಕ ವಿಧವಾದ ಮಾಧ್ಯಮಗಳಿದ್ದು ಅವು ಅನಂತ ಭಾವನೆಗಳಿಗೆ ಹೊಂದುವ ಹಾಗೆ ಅವು ಪ್ರಸರಣ ಮಾಡುತ್ತವೆ.
೩. ಅವು ಸರಳ ಸಹಜ ನಿರೂಪಣೆಯಾಗಿ ಎಲ್ಲರಿಗೂ ಅರ್ಥವಾಗುತ್ತವೆ.
೪. ಅವು ಎಲ್ಲಾ ವಯೋಮಾನದವರಿಗೂ ಒಪ್ಪಿತವಾಗುವ ಮನರಂಜನೆಯ ಸಾಧನಗಳಾಗಿರುತ್ತವೆ.

ಯಕ್ಷಗಾನದಂತಹ ಬ್ರಾಮಕ (Fantacy) ಧಾರ್ಮಿಕ ಪ್ರದರ್ಶಕ ಕಲೆಗಳ ಮೂಲಕ ಇಂದಿನ ಜನಪದಮೌಲ್ಯ ಹಾಗೂ ಯುಗಧರ್ಮಗಳನ್ನು ಬಿಂಬಿಸುವ ತಾರ್ಕಿಕ ವಿಚಾರಗಳಲ್ಲಿ ಹೇಳುವ ಬಗ್ಗೆ ಸಂಪ್ರದಾಯಶೀಲ ಕಲಾವಿಮರ್ಶಕ ಆಕ್ಷೇಪ ಎತ್ತಬಹುದು. ಆದರೆ ಜಾಹೀರಾತುಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತಿರುವ ಜಾನಪದ ವಿವಿಧ ಮುಖಗಳನ್ನು ಕಡೆಗಣಿಸಲು ಸಾದ್ಯವಿಲ್ಲ. ಬದಲಾವಣೆಗೆ ಒಳಪಟ್ಟಂತಹ ಜಾನಪದ ಕಲೆಗಳು ಅಭಿವೃದ್ಧಿ ಬೆಳವಣಿಗೆಯ ವಿಭಿನ್ನ ಮುಖಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ.

೪.೫.೩. ಧಾರಾವಾಹಿ ಕಥೆಗಳು-ಹಿನ್ನೆಲೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕಾಯಕ್ರಮಗಳು

ದೂರದರ್ಶನದಲ್ಲಿ ಮಹಿಳೆಯರ ಮನಸ್ಸನ್ನು ಬಹಳಷ್ಟು ಆಕರ್ಷಸುತ್ತಿರುವ ಕಾರ್ಯಕ್ರಮವೆಂದರೆ ಧಾರಾವಾಹಿಗಳು. ಪ್ರಸ್ತುತ ಪರಿಸ್ಥಿತಿಗಳಿಗೆ ಕೈಗನ್ನಡಿಯಂತೆ ಇರುವ ಮತ್ತು ಉತ್ತಮ ಸಾಮಾಜಿಕ ಬೆಳವಣಿಗೆಗೆ ಒಂದು ಶಕ್ತಿಶಾಲಿಯಾಗಿರುವ ಈ ಧಾರಾವಾಹಿಗಳು ಎಲ್ಲಾ ವಿಧದಲ್ಲೂ ಹಿಡಿತವನ್ನು ಸಾಧಿಸಿವೆ. ಚಿತ್ರಕಥೆಯಾಗಲಿ, ಸಂಭಾಷಣೆಯಾಗಲಿ, ದೃಶ್ಯ ಜೋಡಣೆಯಾಗಲಿ ಅತ್ಯುತ್ತಮವಾಗಿ ಮೂಡಿಬರುತ್ತವೆ. ಇವು ಸಾಮಾನ್ಯವಾಗಿ ಸಂಸಾರದ ಸುತ್ತ ಮತ್ತು ಮಧ್ಯಮವರ್ಗದ ಸಮಸ್ಯೆಗಳನ್ನೇ

ಮೂಲವಾಗಿಟ್ಟು ಕೊಂಡು ಕಥೆ ಎಣೆಯಲ್ಪಟ್ಟಿರುತ್ತವೆ. ಜನಪದರ ಸಾಮಾನ್ಯ ಸಮಸ್ಯೆಗಳೇ ಇಲ್ಲಿಯ ಪ್ರಧಾನ ಅಂಶ. ಅವು ನಗರ ಸಮೂಹವಾಗಿರಬಹುದು. ಇಲ್ಲವೇ ಹಳ್ಳಿಯ ವಾತಾವರಣ ಇರಬಹುದು ಒಟ್ಟಿನಲ್ಲಿ ಅವು ನಿತ್ಯ ಜೀವನದ ಪ್ರತಿಬಿಂಬವಾಗಿರುತ್ತವೆ.

ಹಿಂದಿಯಲ್ಲಿ ಬರುವ ಧಾರಾವಾಹಿಗಳಾದ ಚಕುಲಕಬೂಂಬ, ಶಕ್ತಿಮಾನ್ ಮುಂತಾದ ಕಥೆಗಳು ಸಂಪೂರ್ಣವಾಗಿ ಜನಪದ ಕತೆಗಳ ಹಿನ್ನೆಲೆಯಲ್ಲಿಯೇ ತಯಾರು ಆದಂತವು. ಇಲ್ಲಿ ಫ್ಯಾಂಟಸಿ ಕಲ್ಪನೆಯೇ ಪ್ರಧಾನವಾಗಿರುತ್ತವೆ. ''ಮನರಂಜನೆಯ ದೃಷ್ಟಿಯಲ್ಲಿ ನೋಡುವುದಾದರೆ ಈ ಮಾಧ್ಯಮದಲ್ಲಿ ಜನಪದ ಮೂಲಗಳನ್ನು ಧಾರಳವಾಗಿ ಬಳಸಲಾಗಿದೆ. ವಿಕ್ರಮಔರ್ ಬೇತಾಳ್ ಸರಣಿ ಸಾಧಿಸಿದ ಜನಪ್ರಿಯತೆ ಅಪಾರ. ಬೇತಾಳ್ ಪಂಚವಿಂಶತಿ ಕಥೆಗಳನ್ನು ಆಧರಿಸಿ ಇದನ್ನು ತಯಾರಿಸಲಾಗಿತ್ತು. ಅಲ್ಲಿನ ಅದ್ಭುತ ಕಲ್ಪಕತೆಗಳ ಸಾಧ್ಯತೆಗಳನ್ನು ಚೆನ್ನಾಗಿ ದುಡಿಸಿಕೊಳ್ಳಲಾಗಿತ್ತು. ಹಾಗೆಯೇ ಸಿಂಡ್ರೆಲಾ, ಸ್ನೋ ವೈಟ್ ಕಥೆಗಳು ಮುಂತಾದವನ್ನು ಗಮನಿಸಬಹುದು. ನಟ ಕಟ್ ದುನೀಯಾ ಎಂಬ ಮಕ್ಕಳ ಕಾರ್ಯಕ್ರಮದಲ್ಲಿ 'ಗ್ಲೌಸ್ ಪಪೆಟ್' ತಂತ್ರವನ್ನು ಬಹಳ ಚೆನ್ನಾಗಿ ಬಳಸಿದ್ದಿದೆ. ಅಲ್ಲದೆ ಏಕ್‌ಕಹಾನಿ ಹಾಗೂ ಕಥಾಸಾಗರ್ ಮಾಲಿಕೆಗಳಲ್ಲಿ ಅನೇಕ ಜನಪದ ಕತೆಗಳನ್ನು ಪ್ರಸ್ತುತ ಗೊಳಿಸಲಾಗಿತ್ತು. ಇವನ್ನೆಲ್ಲ ಶುದ್ಧ ಜಾನಪದ ಎನ್ನಲಾಗದಿದ್ದರೂ ಅವುಗಳ ಆಧಾರದಿಂದ ಸಾಧಿಸಿದ ಪರಿಣಾಮ ಅದ್ಭುತವಾದದು. ಜಾನಪದ ವಿವಿಧ ಪ್ರಕಾರಗಳಾದ ಕಥೆ, ಒಗಟು, ಪುರಾಣ, ಐತಿಹ್ಯ. ಜನಪದ ವೈದ್ಯ, ಅಡಿಗೆ, ಕ್ರೀಡೆ, ನಂಬಿಕೆ, ಜನಪದ ಕಲೆ, ಜನಪದ ರಂಗಭೂಮಿ ಮತ್ತು ಸಂಪ್ರದಾಯ ಆಚರಣೆಗಳನ್ನು ಇವುಗಳನ್ನು ಅಲ್ಲಲ್ಲಿ ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗುತ್ತಿದೆ.

ಗ್ರಾಮೀಣ ಮತ್ತು ನಗರ ಸಮುದಾಯಗಳ ವಠಾರಗಳಲ್ಲಿ ಜನಪದ ಕಥೆಗಳ ರೂಪಕಗಳಂತೆ ಧಾರಾವಾಹಿಯ ಕಥೆಗಳನ್ನು ತಮ್ಮ ಬಿಡುವಿನ ಸಂದರ್ಭದಲ್ಲಿ ಚರ್ಚಿಸುವುದುಂಟು. ಈ ಮಾದರಿಯು ಜನಪದ ಕಥೆಗಳಾಗಿ ರೂಪುಗೊಳ್ಳುವ ಸಂದರ್ಭವಾಗಿರುತ್ತವೆ. ಈ ಧಾರಾವಾಹಿ ಕಥೆಗಳೇ ಜನಪದ ಕಥೆಗಳಂತೆ ಜನರ ಮನದಲ್ಲಿರುತ್ತವೆ. ಮುಗಿದು ಹೋಗಿರುವ ಧಾರಾವಾಹಿಯ ಕಥೆಗಳನ್ನು ಮತ್ತೆ ಮತ್ತೆ ಮೆಲುಕು ಹಾಕುವುದರಿಂದ ಇವು ಸಂಪೂರ್ಣವಾಗಿ ಜನಪದ ಕಥೆಗಳಂತೆಯೇ ಮಾರ್ಪಟ್ಟಿರುತ್ತವೆ. ದೂರದರ್ಶನದಲ್ಲಿ ಬರುವ ಧಾರಾವಾಹಿಯ ಕಥೆಗಳು ಜನಪ್ರಿಯತೆಗಾಗಿ ವಿಭಿನ್ನ ಬಗೆಯಲ್ಲಿ ಹೆಣೆದಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ಹಬ್ಬ, ಜಾತ್ರೆ, ಜಾತ್ರೆಗಳ ಸಮಯದಲ್ಲಿ ಜರುಗುವ ವಿವಿಧ ಜನಪದ ಕಲೆಗಳು, ಪಂಚಾಯಿತಿಗಳು, ವಿಭಿನ್ನ ನೆಲೆಗಳ ಜೀವನ ವಿಧಾನಗಳು, ಕಸುಬುಗಳು, ಯಜಮಾನಿಕೆ, ಶೋಷಣೆ, ವೈರತ್ವ, ಧಾರ್ಷ್ಟ್ಯ, ಕ್ರೌರ್ಯ ಮುಂತಾದ ಎಲ್ಲಾ ಬಗೆಯ ದಿನಚರಿಗಳನ್ನು ಧಾರಾವಾಹಿಗಳು ಕಟ್ಟಿಕೊಡುತ್ತವೆ. ಇವೆಲ್ಲವುಗಳ ಹಿಂದೆ ಜಾನಪದ ಪ್ರಭಾವವಿದೆ ಎಂಬುದನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಚಲನಚಿತ್ರಗಳ ಗುನುಗುವಿಕೆ ಸಿನಿಮಾಕಥೆಗಳು ಮತ್ತು ಧಾರಾವಾಹಿ ಕಥೆಗಳ ಮರು ಹೇಳುವಿಕೆಯ ವಿವಿಧ ಮಾದರಿಗಳು ಜಾನಪದದ ವಿಭಿನ್ನ ಮಜಲುಗಳನ್ನು ಮರು ರೂಪಿಸುತ್ತವೆ.

ದೂರದರ್ಶನದಲ್ಲಿ ವಿಶೇಷವಾಗಿ ಹಬ್ಬ, ಜಾತ್ರೆ, ಕಂಬಳ ಅಂತಹ ಜನಪದ ಆಟಗಳನ್ನೂ, ಜನಪದ ನೃತ್ಯ ಮತ್ತು ಗೀತೆಗಳನ್ನು, ಹಾಲುಗಂಬ, ಗಂಗೆಭಾಷೆಯಂತಹ ಆಚರಣೆಗಳನ್ನು ಸಮರ್ಥವಾಗಿ ಹಿಡಿದು ಜನಮುಖಿಯಾಗಿಸುತ್ತವೆ. ಚಂದನ ಚಾನಲ್‌ನಲ್ಲಿ ಮತ್ತೆ ಮತ್ತೆ ಪ್ರಸಾರವಾಗುವ ಟಿಂಗರ ಬುಡ್ಡಣ್ಣ ಅಂತಹ ನಾಟಕಗಳು, ಬೀದಿನಾಟಕಗಳು ಅದ್ಭುತವಾಗಿ ಮೂಡಿಬರುತ್ತಿವೆ. ದೆಹಲಿಯ ದೂರದರ್ಶನದಲ್ಲಿ ಆಗಾಗ್ಗೆ ಕೆಲವು ರಾಜ್ಯಗಳ ಜನಪದ ಕಲೆಗಳೂ ಹಾಗೂ ಆದಿವಾಸಿಗಳ ಬಗೆಗಿನ ಸಾಕ್ಷ್ಯಚಿತ್ರಗಳು ಪ್ರಸಾರವಾಗುತ್ತವೆ. ನಾನು ಕಂಡ ಹಾಗೆ ಪೂರ್ವ ರಾಜ್ಯಗಳ ಅಂದರೆ ಅಸ್ಸಾಂ, ಮೇಘಾಲಯ, ತ್ರಿಪುರಾ ಹಾಗೂ ನಾಗಲ್ಯಾಂಡಿನ ಬಗೆಗೆ ಅಪೂರ್ವವಾದ ಚಿತ್ರಮಾಲಿಕೆಗಳು ಪ್ರಸಾರವಾದವು. ಇವೆಲ್ಲ ದೆಹಲಿಯ ಕೇಂದ್ರದ ಕಾರ್ಯಕ್ರಮಗಳೇ ಇಲ್ಲವೆ ಆಯಾರಾಜ್ಯಗಳ ದೂರದರ್ಶನ ಕೇಂದ್ರಗಳ ನಿರ್ಮಾಣವೋ ಗೊತ್ತಿಲ್ಲ. ಆದರೆ ಒಟ್ಟಾರೆ ಈ ಕಾರ್ಯಕ್ರಮಗಳು ಆಯಾ ರಾಜ್ಯದ ಜಾನಪದ ಸಂಸ್ಕೃತಿಯ ಬಗ್ಗೆ ಆಸಕ್ತಿ ಹುಟ್ಟಿಸುವ ಮಟ್ಟಿಗೆ ಚೆನ್ನಾಗಿ ಇದ್ದವು. ಇನ್ನು ಆಗಿಂದಾಗ್ಗೆ ಔಷಧಿ ಚಿಕಿತ್ಸೆಗಳ ಬಗೆಗೆ ಮೂಡಿಬರುವ ಕಾರ್ಯಕ್ರಮಗಳ ಗೆಡ್ಡೆಗೆಣಸು, ಮೂಲಿಕೆಗಿಡಗಳ ಮಹತ್ವವನ್ನು ಹೇಳುವಂತವೂ ಆಗಿರುತ್ತದೆ. ಬುಡಕಟ್ಟು ಜನಾಂಗದವರನ್ನು ಕುರಿತ ರೂಪಕಗಳೋ ಸ್ಥಿರ ಚಿತ್ರಗಳೋ ಸಾಕ್ಷರೂಪಕಗಳೋ ಪ್ರಸಾರವಾಗುತ್ತಲೇ ಇರುತ್ತವೆ.

ನಮ್ಮಲ್ಲಿ ಸಮೂಹ ಮಾಧ್ಯಮಗಳಿಂದ ಜಾನಪದಕ್ಕೆ ಆಗಬಹುದಾದ ಮುಖ್ಯ ಉಪಯೋಗಳೆಂದರೆ ರಫ್ತು ಮಾರುಕಟ್ಟೆ, ಈ ದಿಸೆಯಲ್ಲಿ ನಮ್ಮಲ್ಲಿ ಆದ ಪ್ರಯತ್ನಗಳು ಬಲು ಕಡಿಮೆ. ವಿದೇಶಗಳಲ್ಲಿ ಭಾರತದ ಜಾನಪದಗಳ ಬಗ್ಗೆ ಒಂದು ರೀತಿಯ ಹುಚ್ಚು ಇದೆ. ೧೯೩೦ ರಲ್ಲಿ ದಶಕದಲ್ಲಿ ಅಮೇರಿಕಾದ ಗ್ರಾಮಫೋನ್ ಕಂಪನಿಯೊಂದು ಭಾರತದ ಜನಪದ ಹಾಡುಗಳ ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿತ್ತು. ೩೦-೪೦ ದಶಕದಲ್ಲಿ ಅಸ್ಸಾಂ, ಉತ್ತರಪ್ರದೇಶ, ಅಂಡಮಾನ್ ರಾಜ್ಯಗಳ ಜನಪದ ಗೀತೆಗಳ ರೆಕಾರ್ಡ್‌ಗಳನ್ನು ಅಮೇರಿಕಾದ ಬ್ಯೂರೋ ಆಫ್ ಎಥ್ನಾಲಜಿ ಬಿಡುಗಡೆ ಮಾಡಿದೆ. ಹೀಗೆ ಭಾರತದ ಜನಪದ ಗೀತಗಳಿಗೆ ಇರುವ ಬೇಡಿಕೆಯನ್ನು ಒಂದು ರಾಷ್ಟ್ರೀಯ ರೆಕಾರ್ಡಿಂಗ್ ಕಂಪನಿಗಳು, ಕೋಟಿಗಟ್ಟಲೆ ಹಣವನ್ನು ಸಂಪಾದಿಸುತ್ತಿವೆ. ನಮ್ಮ ಜನಪದ ಸಾಹಿತ್ಯ ಅಥವಾ ಸಂಗೀತ-ನಾಟಕ ಅಕಾಡಮಿಗಳು ಅಥವಾ ಆಕಾಶವಾಣಿಗಳು ಬಹು ವಿಸ್ತಾರವಾದ ವಿದೇಶಿ ಮಾರುಕಟ್ಟೆಯತ್ತ ನೋಡಬಹುದು. ಸಮೂಹ ಮಾಧ್ಯಮಗಳಿಂದ ಜಾನಪದಕ್ಕೆ ಆಗುವ ಉಪಯೋಗಗಳು ಇಷ್ಟು ಅಂದ ಮಾತ್ರಕ್ಕೆ ಮಾಧ್ಯಮಗಳು ಸರ್ವರೋಗ ನಿವಾರಣೆಯಂತಹ ಮಾಧ್ಯಮಗಳೇನು ಅಲ್ಲ ಅಥವಾ ಸಮೂಹ ಮಾಧ್ಯಮಗಳು ಜಾನಪದ ಅಂತಸ್ಸತ್ವವನ್ನು ಅಳಿಸಿ ಹಾಕಿಬಿಡುತ್ತವೆ ಎಂಬ ಭಯವೂ ಸಲ್ಲದು ವ್ಯಕ್ತಿಗಳ ನಡುವಿನ ಸಂಪರ್ಕ ಮತ್ತು ಆತ್ಮೀಯತೆಯ ಕೊರತೆಗಳು ಸಮೂಹ ಮಾಧ್ಯಮಗಳನ್ನು ಪ್ರಭಾವಕಾರಿ ಮಾಧ್ಯಮಗಳನ್ನಾಗಿ ಮಾಡಿವೆ. ಈ ಮಾಧ್ಯಮಗಳು ಸಂದೇಶವನ್ನು ಭೌಗೋಳಿಕವಾಗಿ ಹರಡಬಲ್ಲವೇ ಹೊರತು, ಸಂದೇಶವನ್ನು ಒಪ್ಪುವಂತೆ ಮಾಡಲು ಅಥವಾ ಮಣಿಯುವಂತೆ ಮಾಡಲೂ ಸಾಧ್ಯವಿಲ್ಲ. ಹೀಗಾಗಿ ವ್ಯಕ್ತಿಗತ ಸಂಪರ್ಕ ಸಾಧ್ಯತೆಯಿಂದ ಜಾನಪದ ಎಂದಿಗೂ ಜೀವಂತವಾಗಿಯೇ ಉಳಿದಿರುತ್ತದೆ. ಸಮೂಹ ಮಾಧ್ಯಮಗಳು ಜಾನಪದವನ್ನು ನುಂಗಿ ಹಾಕುತ್ತವೆ ಎಂಬ ಭಯವೇನೂ ಬೇಕಾಗಿಲ್ಲ. ಸಿನಿಮಾ ಟೆಲಿವಿಷನ್ ಮತ್ತು

ರೇಡಿಯೋಗಳು ಬೃಹದಾಕಾರವಾಗಿ ಬೆಳೆದಿರುವ ಅಮೇರಿಕ ಇಂಗ್ಲೆಂಡ್‌ಗಳಂತಹ ಪಾಶ್ಚಿಮಾತ್ಯ ದೇಶಗಳಲ್ಲಿರುವ ಇಂದಿಗೂ ನಾಟಕ ಹಾಡುಗಳು ಜನಪ್ರಿಯವಾಗಿರಲು ಕಾರಣ ಸಹ ಇದೆ ಆಗಿದೆ. ಜಾನಪದದ ರೀತಿ ಬದಲಾಗುತ್ತಾ ಹೋಗಬಹುದು. ಆದರೆ ಜಾನಪದ ಉಳಿದೇ ತೀರುತ್ತದೆ. ಜೊತೆಗೆ ಜಾನಪದವನ್ನು ವಿಸ್ತೃತಗೊಳಿಸುವ ಶಕ್ತಿ ಸಮೂಹ ಮಾಧ್ಯಮಗಳಿಗಿದೆ.

ಕೊನೆ ಟಿಪ್ಪಣಿ

೧. ಸಂಕ್ಷಿಪ್ತ ಕನ್ನಡ ನಿಘಂಟು
೨. ಎ. ಕೆ. ರಾಮಾನುಜನ್, ಗೋಡೆಗಳಿಗೆ ಇದನ್ನು ಹೇಳಿ. ಪುಟ ೨.
೩. ಎನ್. ಕೆ. ಮೋಹನ 'ಕರ್ನಾಟಕ ಜಾನಪದ', ಪುಟ. ೧೮೯.
೪. ಲೇ. ರಾಜೇಶ್ ರೈ ಚಟ್ಲೆ, ಜನವರಿ, ೨೦೦೩, ಪ್ರಜಾವಾಣಿ ದಿನ ಪತ್ರಿಕೆ.
೫. ಪ್ರಕಾಶ್ ಕುಗ್ವೆ 'ಸುಧಾ ಪತ್ರಿಕೆ' ೧೫ನೇ ನವಂಬರ್, ಪುಟ ೪೭.
೬. ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆ ೧೩, ಫೆಬ್ರವರಿ, ೨೦೦೩.
೭. ನಾಡಿಗ ಕೃಷ್ಣಮೂರ್ತಿ 'ಭಾರತೀಯ ಪತ್ರಿಕೋದ್ಯಮ' ಪುಟ ೧೧.
೮. ಅದೇ ಪುಟ ೩.
೯. ಅದೇ ಪುಟ ೩.
೧೦. ಪ್ರೊ. ಡಿ. ಲಿಂಗಯ್ಯ ಡಾ. ಕೆ. ಆರ್. ಸಂಧ್ಯಾರೆಡ್ಡಿ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ ೭.
೧೧. ಬರಗೂರು ರಾಮಚಂದ್ರಪ್ಪ, ೧೧ನೇ ಆಗಸ್ಟ್, ಪ್ರಜಾವಾಣಿ ದಿನ ಪತ್ರಿಕೆ.
೧೨. ರಾಜೇಶ್ ರೈ ಚಟ್ಲೆ 'ಪ್ರಜಾವಾಣಿ ದಿನ ಪತ್ರಿಕೆ', ೧೯.೧.೨೦೦೩
೧೩. ಬಸವರಾಜ ವೀ. ಮೂಲಿಮನಿ, ಪ್ರಜಾವಾಣಿ, ೨೮.೧೦.೨೦೦೩
೧೪. ರಾಜೇಶ್ ಮುಂಡಿಗೇಸರ, ಪ್ರಜಾವಾಣಿ ಮೆಟ್ರೊ, ಬೆಂಗಳೂರು ೩.೨೯.೦೩
೧೫. ಸಂ. ಎಸ್. ಕೆ. ಕರೀಂಖಾನ್, 'ಜಾನಪದ ಮತ್ತು ಸಮೂಹ ಮಾಧ್ಯಮ' ಪುಟ. ೬೮.
೧೬. ಡಾ. ಜೀ. ಶಂ. ಪರಮಶಿವಯ್ಯ, 'ಜನಪದ ಸಾಹಿತ್ಯ ಸಮೀಕ್ಷೆ' ಪುಟ ೩೪.
೧೭. ಸಂ. ಚಂದ್ರಶೇಖರ ಕಂಬಾರ ಕನ್ನಡ ಜಾನಪದ ವಿಶ್ವಕೋಶ, ಪುಟ ೧೮೦೧
೧೮. ಸಂ. ಎಂ. ಎನ್. ಸುಂಕಾಪುರ, ಜಾನಪದ ಸಾಹಿತ್ಯ ದರ್ಶನ, ಪುಟ ೧೩೫.
೧೯. ಬಸವರಾಜ ನೆಲ್ಲೀಸರ, ಜಾನಪದ ಜಿಜ್ಞಾಸೆ, ಪುಟ ೫೫.
೨೦. ಅದೇ ಪು. ೫೧.
೨೧. ಪ್ರಜಾವಾಣಿ ದಿನ ಪತ್ರಿಕೆ, ೨೪.೩.೩೦೦೩
೨೨. ಪ್ರಜಾವಾಣಿ ದಿನ ಪತ್ರಿಕೆ, ೧೧.೩.೨೦೦೩
೨೩. ಅದೇ. ೩೦.೩.೨೦೦೩
೨೪. ಲೇ. ಚಂದ್ರಕಾಂತ ಕರದಹಳ್ಳಿ, ಪ್ರಜಾವಾಣಿ, ೩.೮.೨೦೦೩
೨೫. ಕಿಶನ್‌ರಾವ್ ಕುಲಕರ್ಣಿ, ಪ್ರಜಾವಾಣಿ, ೯.೮.೨೦೦೧.
೨೬. ಬಿ.ಎಸ್. ಸೋಮಶೇಖರ್, ಪ್ರಜಾವಾಣಿ, ೫.೬.೨೦೦೩
೨೭. ಲೀ. ಬಿ. ಟಿ. ಜಾಹ್ನವಿ, ಅದೇ, ೨೨.೬.೨೦೦೩
೨೮. ಸತ್ಯಕಲಾಧ್ವನಿ ಅದೇ, ೩.೯.೨.೦೩
೨೯. ಟೈಮ್ಸ್ ಆಫ್ ಇಂಡಿಯಾ, ೨೩.೨.೦೩
೩೦. ಡೆಕ್ಕನ್ ಹೆರಾಲ್ಡ್, ೯.೩.೨೦೦೩
೩೧. ಎಚ್. ಜೆ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ ೪೭೬.
೩೨. ಅದೇ ಪು. ೨೭೯
೩೩. ಅದೇ ಪು. ೪೭೭.
೩೪. ಅದೇ ಪು. ೧೨.

೩೫ ಅದೇ ಪು. ೨೨೦.
೩೫.೧. ಹಿ.ಚಿ. ಬೋರಲಿಂಗಯ್ಯ 'ಕಾಡು ಕಾಂಕ್ರಿಟ್ ಮತ್ತು ಜಾನಪದ', ಪು. ೧೦೯.
೩೬. ಪ್ರೊ. ಡಿ. ಲಿಂಗಯ್ಯ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪು. ೯೨.
೩೭. ಡಾ. ಪ್ರಕಾಶ ಗರೂಡ, ಛಾಯಾಚಲನೆ ಪ್ರಣಾಳಿಕೆ ಪತ್ರ.
೩೮. ಪ್ರೊ. ಡಿ. ಲಿಂಗಯ್ಯ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ. ೯೧.
೩೯. ಪ್ರೊ. ಎ. ವಿ. ನಾವಡ, ಒಂದು ಸೊಲ್ಲು ನೂರು ಸ್ವರ, ಪುಟ. ೧೬೧.
೪೦. ಸಂ. ಎಚ್. ಜೆ. ಲಕ್ಕಪ್ಪಗೌಡ, ಜಾನಪದ ಕೈಪಿಡಿ, ಪುಟ ೧೦೧.
೪೧. ಗೊಂಬೆ ರಂಗಭೂಮಿ ಅಭಿವೃದ್ಧಿ ಕೇಂದ್ರ, ಛಾಯಾಚಲನೆ ಪ್ರಣಾಳಿಕೆ ಪತ್ರ.
೪೨. ಅದೇ.
೪೩. ಸಂ. ಮಂಜುನಾಥ ಬೇವಿನಕಟ್ಟೆ, ಜಾನಪದ ಕರ್ನಾಟಕ, ಅರ್ಧವಾರ್ಷಿಕ ಪತ್ರಿಕೆ. ಪುಟ. ೭೯.
೪೪. ಡಾ. ಎಚ್. ಕೆ. ರಂಗನಾಥ್, ಕರ್ನಾಟಕ ರಂಗಭೂಮಿ, ಪುಟ ೯೩.
೪೫. ಪ್ರೊ. ಎ. ವಿ. ನಾವಡ ಒಂದು ಸೊಲ್ಲು ನೂರು ಸ್ವರ, ಪುಟ. ೧೯೩.
೪೬. ಪ್ರಜಾವಾಣಿ ದಿನ ಪತ್ರಿಕೆ, ೨೫.೫.೨೦೦೩
೪೭. ಗಂಗಾಧರ ಮೊದಲಿಯಾರ್, ಕನ್ನಡ ಸಿನಿಮಾ ಇತಿಹಾಸದ ಪುಟಗಳಲ್ಲಿ, ಪುಟ ೧.
೪೮. ಅದೇ. ಪುಟ ೪೨.
೪೯. ಅದೇ. ಪುಟ ೫೪.
೫೦. ಬರಗೂರು ರಾಮಚಂದ್ರಪ್ಪ, ವೈಜ್ಞಾನಿಕ ಜಾನಪದ, ಪ್ರಜಾವಾಣಿ ದಿನ ಪತ್ರಿಕೆ, ೧೧.೮.೦೩.
೫೧. ಗಂಗಾಧರ್ ಮೊದಲಿಯಾರ್, ಕನ್ನಡ ಸಿನಿಮಾ ಇತಿಹಾಸ ಪುಟಗಳಲ್ಲಿ, ಪುಟ ೪೩.
೫೨. ಅದೇ. ಪುಟ ೬೮.
೫೩. ಡಾ. ಬಿ. ಎಸ್. ಸ್ವಾಮಿ, ಜಾನಪದ ಸೌರಭ, ಪುಟ ೬೩.
೫೪. ವಿಜಯ ಕರ್ನಾಟಕ ದಿನ ಪತ್ರಿಕೆ, ೧೯.೧೧.೨೦೦೦.
೫೫. ಡಾ. ಬಿ. ಎಸ್. ಸ್ವಾಮಿ, ಜಾನಪದ ಸೌರಭ, ಪುಟ ೫೩.
೫೬. ಬರಗೂರು ರಾಮಚಂದ್ರಪ್ಪ, ವೈಜ್ಞಾನಿಕ ಜಾನಪದ, ಪ್ರಜಾವಾಣಿ ಪತ್ರಿಕೆ, ೧೧.೮.೨೦೦೩.

ಅಧ್ಯಾಯ - ೫

ವಾಹನ ಜಾನಪದ

ವಾಹನ ಜಾನಪದ

ಮಾನವನ ಜೀವನಾವಶ್ಯಕಗಳಲ್ಲಿ ಒಂದಾಗಿ ರೂಪುಗೊಳ್ಳುತ್ತಿರುವ ವಾಹನವು ಸಮಾಜದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಹಿಂದೆ ಮನುಷ್ಯನಿಗೆ ಎತ್ತಿನಗಾಡಿ ಸಾಕುಪ್ರಾಣಿಗಳು ಎಷ್ಟು ಅವಶ್ಯಕ ಎನಿಸಿತ್ತೋ ಅಷ್ಟೇ ಅವಶ್ಯಕವಾಗಿದೆ ಇಂದು ವಾಹನ. ನಗರ ಪ್ರದೇಶಗಳಲ್ಲಿ ಇದರ ತೀವ್ರತೆ ಇನ್ನೂ ಹೆಚ್ಚು. ವೈಯಕ್ತಿಕ ವಾಹನ ಇಲ್ಲದವನು ಹೆಚ್ಚು ದುಡಿಯಲಾರ ಎಂಬ ಮನೋಭಾವ ಬೆಳೆದಿದೆ. ಇವತ್ತು ವಾಹನ ಹೊಂದಿರುವುದು ಅಂತಸ್ತಿನ ಪ್ರಶ್ನೆಯಾಗಿದೆ. ಹಳ್ಳಿಯ ವಾತಾವರಣದಲ್ಲಿ ಟ್ರಾಕ್ಟರ್, ಸೈಕಲ್, ಮೋಟಾರ್‌ಸೈಕಲ್, ಹೆಚ್ಚು ಬಳಕೆಯಲ್ಲಿದ್ದರೆ, ನಗರ ಪ್ರದೇಶಗಳಲ್ಲಿ ಕಾರು, ಜೀಪು, ಆಟೋ, ಬಸ್ಸು, ಲಾರಿ, ಟೆಂಪೋ, ಸರಕುಸಾಗಾಣಿಕೆ ವಾಹನ ಮುಂತಾದವುಗಳನ್ನು ಕಾಣಬಹುದು. ವಾಹನವು ಇಂದು ಜೀವನದ ಒಂದು ಅವಶ್ಯಕ ಎಂಬಂತೆ ಪ್ರತಿಬಿಂಬಿತವಾಗಿದೆ. ಇಂತಹ ಜೀವನಾವಶ್ಯಕ ವಸ್ತುವಾಗುತ್ತಿರುವ ವಾಹನದ ಬಗ್ಗೆ ಜನಪದರಲ್ಲಿ ತಮ್ಮದೇ ಆದ ವಿಶಿಷ್ಟ ಮನೋಭಾವನೆ ಬೆಳೆದು ಬಂದಿದೆ. ಹಿಂದೆ ಎತ್ತು, ಗಾಡಿ, ಸಾಕು ಪ್ರಾಣಿಗಳ ಮೇಲಿದ್ದ ಭಾವ- ಸಂಭಾವನೆ ವಾಹನಗಳ ಕಡೆ ತಿರುಗಿದೆ.

“ಪ್ರಾಣಿ ಮತ್ತು ಮನುಷ್ಯನ ಸಂಬಂಧವನ್ನು ಪುರಾಣ ಕಾಲದಿಂದಲೂ ಕಾಣಬಹುದು. ರೈತರು ತಮ್ಮ ದನಕರುಗಳು ಸತ್ತಾಗ, ಮನುಷ್ಯ ಸತ್ತಷ್ಟೆ ದುಃಖಪಡುತ್ತಾರೆ. ಹೀಗಾಗಿ ಜನಪದರು ಪ್ರಾಣಿಗಳೊಂದಿಗೆ ಇರಿಸಿಕೊಂಡಿರುವ ಸಂಬಂಧ ಜೀವಪರವಾಗಿದೆ. ಅನೇಕ ಪ್ರಾಣಿಗಳನ್ನು ಅವರು ದೇವತೆಗಳ ರೂಪದಲ್ಲಿ ಕಾಣುತ್ತಾರೆ. ತೆಂಗನ್ನು ಕಲ್ಪವೃಕ್ಷವೆಂದು ಕರೆದರೆ, ಗೋವನ್ನು ಕಾಮಧೇನುವೆಂದು ಕರೆಯುತ್ತಾರೆ. ಎತ್ತುಗಳನ್ನು ನಂದಿಯ ಅವತಾರವೆಂದು ನಂಬುತ್ತಾರೆ. ಹುಲಿಗಳು - ಕುದುರೆಗಳು ಗ್ರಾಮ ದೇವತೆಗಳ ವಾಹನಗಳಾಗಿವೆ. ಗೂಳಿಯನ್ನು ದೇವರಿಗೆ ಬಿಟ್ಟು ಪೂಜಿಸುತ್ತಾರೆ. ಹಾವನ್ನು ಪೂಜಿಸಲು ನಾಗರ ಪಂಚಮಿ ಹಬ್ಬವೇ ಇದೆ. ನಾಯಿ ಮಲ್ಲಯ್ಯನಾಗಿ, ಮಂಗ ಹನುಮಂತನಾಗಿ ಹಂದಿ ವಿಷ್ಣುವಾಗಿ ಕಾಣಿಸಿಕೊಳ್ಳುತ್ತದೆ. ನವನಾಗರಿಕರಿಂದ ತಿರಸ್ಕರಿಸಲ್ಪಟ್ಟ ಪ್ರಾಣಿಗಳು ಜನಪದರಿಗೆ ಪೂಜ್ಯವಾಗಿ ಕಾಣುತ್ತವೆ. ಇದೇ ರೀತಿಯ ಭಾವ - ಪೂಜ್ಯಾತ್ಮಕ ಅಂಶವು ವಾಹನಗಳ ವಿಚಾರದಲ್ಲಿ ಇತ್ತೀಚೆಗೆ ಹೊರಳತೊಡಗಿದೆ. ವಾಹನಗಳಿಗೆ ಸಂಬಂಧ ಪಟ್ಟಂತೆ ಎಲ್ಲಾ ಸಾಮಗ್ರಿಗಳನ್ನು ಕಲೆಹಾಕಿ ಮಾನವನ ಸಾಂಸ್ಕೃತಿಕ - ಕ್ರಿಯಾತ್ಮಕ ಬದುಕಿಗೆ ಎಷ್ಟರ ಮಟ್ಟಿನ ಸಂಬಂಧ ಭಾವಗಳು ಹಂಚಿಕೊಂಡಿವೆ

[illegible]

[illegible]

[illegible]

ಎಂಬುದನ್ನು ಅಧ್ಯಯನ ಮಾಡುವುದೆ ವಾಹನ ಜಾನಪದ. ಈ ಅಧ್ಯಯನದ ವಿಷಯವು 'ವಿಷಯನಿಷ್ಠ ಜಾನಪದ' ವ್ಯಾಪ್ತಿಯಲ್ಲಿ ಬರುತ್ತದೆ. ''ಆಧುನಿಕ ಜಾನಪದದ ವ್ಯಾಪ್ತಿಯಲ್ಲಿ ಸೇರುವ ವಾಹನ ಜಾನಪದದ ಅಧ್ಯಯನ ಸಾಕಷ್ಟು ಸ್ವಾರಸ್ಯಕರವೂ ಕುತೂಹಲಕಾರಿಯೂ ಆಗಿದೆ. ಯಾಂತ್ರಿಕ ಇಂಜನ್ನಿನಿಂದ ನಡೆಯುವ ವಾಹನಗಳ ವ್ಯವಸ್ಥೆ ನಗರ ಜೀವನದ ಅವಿಭಾಜ್ಯ ಅಂಗ. ವಿವಿಧ ರೀತಿಯ ವಾಹನಗಳು, ಇವುಗಳ ಚಾಲಕ ವರ್ಗ, ಇವುಗಳನ್ನೆಲ್ಲ ನಿಯಂತ್ರಿಸುವ ಆಡಳಿತ, ರಸ್ತೆ ವ್ಯವಸ್ಥೆ ಇದೆಲ್ಲವೂ ಕೂಡಿ ವಾಹನಗಳಿಗೆ ಸಂಬಂಧಿಸಿದ ಬಂದು ವಿಶಿಷ್ಟ ಸಂಸ್ಕೃತಿ ರೂಪುಗೊಂಡಿದೆ. ಇಲ್ಲಿಗೇ ವಿಶಿಷ್ಟವಾದ ಅಭಿವ್ಯಕ್ತಿಗಳೂ ಇವೆ.[೨] ವಾಹನಗಳ ಸ್ವರೂಪ. ಇದರ ಬಗ್ಗೆ ಮನುಷ್ಯ ತಾಳಿರುವ ಧಾರ್ಮಿಕತೆ, ನಿರ್ವಹಣೆ, ಮಾನವನ ಬದುಕಿನೊಡನೆ ಇರುವ ಸಂಬಂಧ ಸಾಧ್ಯತೆಗಳು ಮತ್ತು ಇವುಗಳಿಂದ ಹುಟ್ಟಬಹುದಾದ ಅಭಿವ್ಯಕ್ತಿ ಸಾಧ್ಯತೆಗಳು - ಈ ಎಲ್ಲವನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡುವುದೇ ವಾಹನ ಜಾನಪದ. ವಾಹನ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ವಿಭಾಗಿಸಿ ಅಧ್ಯಯನ ನಡೆಸಲಾಗಿದೆ.

೫.೧ ಸಂಕೇತಗಳು ಮತ್ತು ಸಂಜ್ಞೆಗಳು

೫.೨ ವಾಹನ ಮೈಮೇಲಿನ ಬರಹಗಳು

- ಅ) ದೇವರ ನಾಮಗಳು
- ಆ) ರಾಷ್ಟ್ರೀಯ ಘೋಷಣಾ ವಾಕ್ಯಗಳು.
- ಇ) ಎಚ್ಚರಿಕೆಯ ನುಡಿಗಳು
- ಈ) ನೀತಿ ವಾಕ್ಯಗಳು
- ಉ) ಧನ್ಯವಾದ ನುಡಿಗಳು
- ಊ) ಕಾರ್ಯಸೂಚನಾ ವಾಕ್ಯಗಳು
- ಋ) ಲೇಖಕರ ನುಡಿಮುತ್ತುಗಳು
- ಎ) ವಾಹನ ಸಾಹಿತ್ಯ

೫.೩ ವಾಹನಗಳ ಮೇಲಿನ ಧಾರ್ಮಿಕ ನಂಬಿಕೆಗಳು ಮತ್ತು ಅಲಂಕಾರಗಳು

೫.೪ ಚಾಲಕ- ನಿರ್ವಾಹಕ - ಕ್ಲೀನರ್‌ಗೆ ಸಂಬಂಧಿಸಿದ ಮಿತ್‌ಗಳು

೫.೧ ಸಂಕೇತ ಮತ್ತು ಸಂಜ್ಞೆಗಳು

ಈ ರೂಪವು ಆರ್. ಎಸ್. ಬಾಗ್ಸ್ ವರ್ಗೀಕರಣದ ಭಾಷಿಕ ಬಗೆಗಳಲ್ಲಿ ಬರುತ್ತವೆ. ''ಸಂಕೇತ

ಮತ್ತು ಸಂಜ್ಞೆಗಳು ಮಾತುಗಳನ್ನು ಮೀರಿ ವ್ಯವಹರಿಸುವ ಒಂದು ಕಲಾವಿಜ್ಞಾನವಾಗಿದೆ. ಸಂಕೇತಗಳನ್ನು ಕುರಿತ ವೈಜ್ಞಾನಿಕ ಅಧ್ಯಯನವೇ ಸಂಕೇತ ವಿಜ್ಞಾನ. ಸಂಕೇತಗಳ ವಿವರಣೆ ಹಾಗೂ ಅವುಗಳ ಬಳಕೆಯ ನಿಯಮಗಳ ನಿರೂಪಣೆ ಸಂಕೇತ ವಿಜ್ಞಾನದ ವಸ್ತುವಾಗಿದೆ. ಮನುಷ್ಯರ ನಡುವೆ ಸಂವಹನವನ್ನು ಕುರಿತು ಮಾತನಾಡುವಾಗ ನಾವು ಸಂಕೇತ ಎನ್ನುವ ಪದವನ್ನು ಬಳಸುತ್ತೇವೆ. ಸಂವಹನದಲ್ಲಿ ಮಾತನಾಡುವ ಹಾಗೂ ಕೇಳುವವರ ನಡುವೆ ಸಂವಹನದ ಸಂದರ್ಭದಲ್ಲಿ ಅರ್ಥದ ವಿನಿಮಯ ಏರ್ಪಡುತ್ತದೆ. ಈ ಅರ್ಥವನ್ನು ಅಭಿವ್ಯಕ್ತಿಗೊಳಿಸುವ ರೂಪವನ್ನು ಸಂಕೇತಕ (ಸಿಗ್ನಿಪಯರ್) ಎಂದು ಕರೆಯುತ್ತಾರೆ. ಈ ಮೂಲಕ ಅಭಿವ್ಯಕ್ತಗೊಳಿಸುವ ಅರ್ಥವನ್ನು ಸಂಕೇತಿಕ (ಸಿಗ್ನಿಫೈಡ್) ಸಂಬಂಧಗಳನ್ನು ಸಂಕೇತ ವಿಜ್ಞಾನ ಪರಿಶೀಲಿಸುತ್ತದೆ. ಮೌಖಿಕ ಸಂಕೇತಗಳು ಅಂದರೆ ಭಾಷಿಕ ಮೂಲಕ ಸಂಕೇತಗಳು ಭಾಷಾವಿಜ್ಞಾನದಲ್ಲಿ ಅಧ್ಯಯನಕ್ಕೆ ಒಳಗಾಗುತ್ತವೆ. ಸಂವಹನದ ಸಂದರ್ಭದಲ್ಲಿ ಯಾರು ಏನನ್ನು ಯಾರಿಗೆ ತಿಳಿಸಬೇಕೆಂಬ ವಿಷಯಗಳು ಮುಂಚಿತವಾಗಿಯೇ ನಿರ್ಧಾರಿತವಾಗಿರುವುದರಿಂದ ಅವುಗಳ ಅಧ್ಯಯನ ಸಾಧ್ಯವಾಗುತ್ತದೆ.[೩]

ಸಂಕೇತವನ್ನು ಪತ್ತೆ ಮಾಡುವಾಗ ಅವಲೋಕನ ಮಾಡುವವನಿಗೆ ಸಂಕೇತಕ್ಕೆ ಸಂಬಂಧಿಸಿದಂತೆ ಪೂರ್ವ ಜ್ಞಾನ ಇರಬೇಕಾಗುತ್ತದೆ. ಇದು ಜನಪದರಲ್ಲೂ ಕಾಣಬಹುದು. ಕೇವಲ ಕೈ ಕಣ್ಣು ಸಂಜ್ಞೆಗಳ ಮುಂಖಾಂತರವೇ ಅರ್ಥಮಾಡಿಕೊಳ್ಳುವ ಅನೇಕ ಅರ್ಥಗಳಿವೆ. ಮುಂದೆ ಹೋಗುತ್ತಿರುವ ವ್ಯಕ್ತಿಯನ್ನು ಚಪ್ಪಾಳೆತಟ್ಟಿ ಬಲ ಅಂಗೈಯನ್ನು ನಿಂತ ಭಂಗಿಯಲ್ಲಿ ತೋರಿಸಿದಾಗ ವ್ಯಕ್ತಿ ನಿಲ್ಲುತ್ತಾನೆ. ಇದನ್ನು ಸಂಜ್ಞೆ ಎಂತಲೂ, ನಿಂತ ವ್ಯಕ್ತಿಯನ್ನು ಗೊತ್ತಿರುವ ಸ್ಥಳವೊಂದಕ್ಕೆ ಬರುವಂತೆ ತೋರಿಸುವ ಕ್ರಿಯೆಗೆ ಸಂಕೇತವೆಂತಲೂ ಕರೆಯಬಹುದು. ಇದು ಜನರಿಂದ ಜನರಿಗೆ ಮೌಖಿಕವಾಗಿ ಹರಿದು ಬಂದಿದೆ. ಇಂತಹ ಸಂಜ್ಞೆ ಮತ್ತು ಸಂಕೇತಗಳು ವಾಹನ ಜಾನಪದದಲ್ಲಿ ಅತ್ಯವಶ್ಯಕವಾಗಿ ಬಳಕೆಯಾಗುತ್ತವೆ. ವಾಹನಗಳು ಚಲಿಸುವಾಗ ಸಂಕೇತ ಸಂಜ್ಞೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಾಹನ ಜಾನಪದದಲ್ಲಿ ಇವುಗಳನ್ನು ಕೆಳಕಂಡಂತೆ ನೋಡಬಹುದು.

೧. ಕಡ್ಡಾಯದ ಸಂಕೇತಗಳು
೨. ಎಚ್ಚರಿಕೆಯ ಸಂಕೇತಗಳು
೩. ತಿಳುವಳಿಕೆಯ ಚಿನ್ಹೆಗಳು.

ವಾಹನವನ್ನು ಚಾಲನೆ ಮಾಡುವ ಪ್ರತಿಯೊಬ್ಬ ಚಾಲಕನು ಸಂಕೇತ ಮತ್ತು ಸಂಜ್ಞೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಪ್ರತಿಯೊಬ್ಬ ಚಾಲಕನಲ್ಲೂ ಈ ಸಂಕೇತಗಳು ಸುಪ್ತ ಚೇತನದಲ್ಲಿರುತ್ತವೆ. ನಂತರ ಅವುಗಳ ಪ್ರತ್ಯಕ್ಷತೆಯಿಂದ ಜಾಗೃತ ಪ್ರಜ್ಞೆ ಜಾಗೃತವಾಗುತ್ತದೆ. ಈ

[illegible]

[illegible]

[illegible]

[illegible]

ಜಾಗೃತ ಪ್ರಜ್ಞೆಯು ಅನುಭವ ಮತ್ತು ವರ್ತನೆಯ ಒಂದು ಉತ್ಪತ್ತಿ. ಇದು ವ್ಯಕ್ತಿಗೆ 'ಸ್ವ'ದ ಅನುಭವವನ್ನು ಒದಗಿಸುತ್ತದೆ. ಅಂದರೆ ತಾನು ಯಾರು? ತಾನು ಮಾಡುತ್ತಿರುವ ಕೆಲಸವೇನು? ತತ್‌ಕ್ಷಣದಲ್ಲಿ ಈಗೇನು ಮಾಡಬೇಕು? ಎಂಬುದನ್ನು ತಿಳಿಸುತ್ತದೆ. ವ್ಯಕ್ತಿಯ ಸ್ವಂತತೆ ಮತ್ತು ಬಾಹ್ಯ ಚಟುವಟಿಕೆಗಳನ್ನು ಸಂಯೋಜಿಸುವ ಮತ್ತು ನಿಯಂತ್ರಿಸುವ ಕೆಲಸ ಜಾಗೃತ ಪ್ರಜ್ಞೆಯದು.

ವಾಹನಗಳನ್ನು ಚಾಲಕರು ರಸ್ತೆಯ ಮೇಲೆ ಚಲಿಸಿಕೊಂಡು ಹೋಗುತ್ತಿರುವಾಗ ಅವರಲ್ಲಿ ಕೆಲವೊಂದು ಸಂಜ್ಞೆಗಳು ಚಾಲ್ತಿ ಇವೆ. ಈ ಸಂಜ್ಞೆಗಳು ಸಂಪೂರ್ಣವಾಗಿ ಮೌಖಿಕ ರೂಪದಲ್ಲಿ ಒಬ್ಬರಿಂದ ಒಬ್ಬರಿಗೆ ಹರಿದು ಬಂದಿರುತ್ತವೆ. ಈ ಸಂಜ್ಞೆಗಳನ್ನು ಪರಿಪೂರ್ಣವಾಗಿ ತಿಳಿದುಕೊಂಡಿದ್ದಾಗ ಮಾತ್ರ ಪರಿಪೂರ್ಣ ಚಾಲಕನಾಗಲು ಸಾಧ್ಯ. ಈ ಸಂಜ್ಞೆಗಳು ಸಂಪೂರ್ಣವಾಗಿ ಮೌಖಿಕರೂಪದಲ್ಲಿ ಹರಿದು ಬಂದಿದ್ದರೂ ಇತ್ತೀಚೆಗೆ ವಾಹನ ತರಬೇತಿ ಶಾಲೆಗಳಲ್ಲಿ ಲಿಖಿತರೂಪವನ್ನು ಪಡೆದುಕೊಳ್ಳುತ್ತವೆ. ಅಂದರೆ ಮೌಖಿಕವಾಗಿ ಹರಿದು ಬರುತ್ತಿರುವ ಜ್ಞಾನವನ್ನು ದಾಖಲೆ ರೂಪದಲ್ಲಿ ಹಿಡಿದಿಟ್ಟು ವಾಹನ ತರಬೇತಿ ಶಾಲೆಗಳಲ್ಲಿ ತರಬೇತಿಗಳನ್ನು ನೀಡುತ್ತಾರೆ. ಆದರೂ ಸಹ ಇಂತಹ ತರಬೇತಿ ಶಾಲೆಗಳಲ್ಲಿ ಕಲಿಯುವರ ಸಂಖ್ಯೆ ತುಂಬ ವಿರಳ. ಇದು ಪಟ್ಟಣ ಪ್ರದೇಶದಲ್ಲಿ ಮಾತ್ರ ಕಾಣಬಹುದು. ಸಾಮಾನ್ಯವಾಗಿ ಈ ವಿದ್ಯೆ ಬಹುಪಾಲು ಒಬ್ಬರಿಂದ ಒಬ್ಬರು ಮೌಖಿಕವಾಗಿ ಕಲಿತಿರುತ್ತಾರೆ. ಇಂತಹ ಸಮಯದಲ್ಲಿ ಸಂಜ್ಞೆಗಳು ಸಹ ತಾವಾಗಿ ತಾವು ರೂಢಿಗತವಾಗಿ ಕಾರ್ಯಗತವಾಗುತ್ತವೆ.

ಇಂತಹ ಸಂಜ್ಞೆಗಳನ್ನು ಕೆಳಕಂಡ ರೀತಿಯಲ್ಲಿ ಸೂಚಿಸಬಹುದು.

೧. ರಾತ್ರಿಯ ವೇಳೆ ಎದುರು ಬರುವ ವಾಹನವು ಸಮೀಪವಾಗುತ್ತಿದಂತೆ ಬೆಳಕನ್ನು ಕಡಿಮೆಗೊಳಿಸುತ್ತಾರೆ.

೨. ವಾಹನಗಳನ್ನು ಬಲಭಾಗಕ್ಕೆ ತಿರುಗಿಸಬೇಕಾದಾಗ ಬಲಹಸ್ತವನ್ನು ಹೊರಚಾಚಿ ವಾಹನದ ಬಲಗಡೆ ಹಸ್ತವನ್ನು ಮುಂದಕ್ಕೆ ತೋರಿಸುತ್ತಾರೆ.

೩. ವಾಹನವನ್ನು ಚಾಲನೆ ಮಾಡಿ ರಸ್ತೆಗೆ ಬರುವಾಗ ಹಿಂದೆ ವಾಹನ ಬರುವುದನ್ನು ಖಚಿತಪಡಿಸಿಕೊಂಡು ರಸ್ತೆಗೆ ವಾಹನ ತರುತ್ತಾರೆ. ಒಂದು ವೇಳೆ ಯಾವುದಾದರೂ ವಾಹನವೂ ಸಮೀಪ ದೂರದಲ್ಲಿ ಬರುತ್ತಿರುವಾಗ ಬಲಗೈಯನ್ನು ಹೊರಚಾಚಿ ಬೆರಳುಗಳನ್ನು ಪೂಂ ಮಾಡುತ್ತಾರೆ.

೪. ಮುಂದೆ ಚಲಿಸುವ ವಾಹನವನ್ನು ಹಿಂದಕ್ಕೆ ಹಾಕುವಾಗ ಬಲಗಡೆಯಿಂದ ಓವರ್‌ಟೇಕ್ ಮಾಡಬೇಕು ಆಗ ಶಬ್ದ (Horn) ಮಾಡುವುದು ಇಲ್ಲವೇ ರಾತ್ರಿಯಾದರೆ ಬೆಳಕನ್ನು ಹಾಯಿಸಿ ಆಫ್ ಮಾಡುತ್ತಾರೆ.

೫. ಮುಖ್ಯರಸ್ತೆಯಲ್ಲಿ ಹೋಗುವಾಗ ಮತ್ತೊಂದು ವಾಹನವು ಮುಖ್ಯರಸ್ತೆಯ ಲೈನಿನಿಂದ ಅಥವಾ ಅಡ್ಡರಸ್ತೆಯಿಂದ ಪ್ರವೇಶಿಸುವುದು ಕಾಣಿಸುತ್ತದೆ. ಆ ಸಂದರ್ಭದಲ್ಲಿ ಮುಖ್ಯ ರಸ್ತೆ ವಾಹನವು ಮುಂದೆ ಹೋಗಲು ಬಿಡುತ್ತಾರೆ.

೬. ಬಲಗಡೆ ತಿರುಗುವಾಗ ಬಲಲೈನಿನ ಕೊನೆಯಲ್ಲಿ ಇರುತ್ತಾರೆ.

೭. ಮುಂದಿನ ದಾರಿ ಸರಿಯಾಗಿ ಕಾಣದೇ ಇರುವಾಗ ಓವರ್‌ಟೇಕ್ ಮಾಡುವುದಿಲ್ಲ.

೮. ತಿರುವುಗಳಲ್ಲಿ ವಾಹನಗಳನ್ನು ಹಿಂದಕ್ಕೆ ತಿರುಗಿಸುವುದಿಲ್ಲ.

೯. ವಾಹನವು ಚಲಿಸುತ್ತಿರುವಾಗ ತಕ್ಷಣ ನಿಲ್ಲಿಸಬೇಕಾದ ಪ್ರಮೇಯ ಬಂದಲ್ಲಿ ಬಲತೋಳನ್ನು ನೆಟ್ಟಗೆ ಮಾಡಿ ಹಸ್ತದಿಂದ ಮುಂದಕ್ಕೆ ತೋರಿಸುತ್ತಾರೆ.

೧೦. ವಾಹನವನ್ನು ನಿಲುಗಡೆ ಮಾಡುವಾಗ ಯಂತ್ರವನ್ನು ನಿಲ್ಲಿಸಿ ಜ್ವಲನ (ಇಗ್ನಿಷನ್) ಬೀಗ ಹಾಕುತ್ತಾರೆ.

೧೧. ಮೆರವಣಿಗೆ ಹೋಗುತ್ತಿರುವಾಗ ಅಥವಾ ಜನಸಂದಣಿಯಲ್ಲಿ ಅಥವಾ ಕಾಮಗಾರಿ ಕೆಲಸ ನಡೆಯುತ್ತಿರುವಾಗ ವಾಹನಗಳನ್ನು ನಿಧಾನವಾಗಿ ಮುಂದುವರೆಸುತ್ತಾರೆ.

೧೨. ತುರ್ತುವಾಹನಗಳಿಗೆ ಮುಕ್ತವಾಗಿ ಹೋಗಲು ಅವಕಾಶ ಮಾಡಿಕೊಡುತ್ತಾರೆ.

೧೩. ಜೆಲ್ಲಿ ಮರಳು ಅಥವಾ ಇನ್ನಾವುದೇ ಜಾರುವ ವಸ್ತುವಿದ್ದಾಗ ವಾಹನಗಳ ವೇಗವನ್ನು ಕಡಿಮೆ ಮಾಡಿಕೊಂಡು ಹೋಗುತ್ತಾರೆ.

೧೪. ಶಿಫಾರಸ್ಸು ಮಾಡಿದ ಮಿತವಾದ ಸಮನಾದ ವೇಗದಲ್ಲಿ ಚಲಿಸುವಾಗ ಇಂಧನ ಉಳಿತಾಯವಾಗುತ್ತದೆ ಎಂಬ ಪ್ರಜ್ಞೆ ಚಾಲಕರಿಗೆ ಇರುತ್ತದೆ.

೧೫. ಸೂಚಕ ದೀಪದಲ್ಲಿ ಹಳದಿ ಬಣ್ಣದ ದೀಪವು ಪದೇ ಪದೇ ಬೆಳಗುತ್ತಿದ್ದರೆ ವೇಗವನ್ನು ಕಡಿಮೆ ಮಾಡಿಕೊಂಡು ಹೋಗುತ್ತಾರೆ.

೧೬. ಒಂದು ವೃತ್ತಕ್ಕೆ ಸಮೀಪಿಸಿ ಅಲ್ಲಿಂದ ತಿರುಗಿ ಹೋಗುವಾಗ ಬಲಬದಿಯಿಂದ ಬರುವ ವಾಹನಗಳಿಗೆ ಮೊದಲ ಆದ್ಯತೆಯನ್ನು ಕೊಡುತ್ತಾರೆ.

೧೭. ಸೂಚಕದ ಹತ್ತಿರ ರಸ್ತೆಯ ಮೇಲೆ ಬಣ್ಣದಿಂದ ರೇಖೆಯನ್ನು ಬಳಿದಿರುವುದರ ಹಿಂದೆ ವಾಹನಗಳನ್ನು ನಿಲ್ಲಿಸುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ಸಂಜ್ಞೆಗಳು ಒಬ್ಬರಿಂದ ಮತ್ತೊಬ್ಬರಿಗೆ ಮೌಖಿಕವಾಗಿ ಹರಿದು ಬಂದಿದ್ದರೂ ಇತ್ತೀಚೆಗೆ ವಾಹನ ಕಲಿಕೆ ತರಬೇತಿ ಶಾಲೆಗಳಲ್ಲಿ ಇಂತಹ ಎಲ್ಲಾ ಮೌಖಿಕ ನಿಯಮಗಳನ್ನು ಲಿಖಿತ ರೂಪದಲ್ಲಿ ತರಬೇತಿ ಹೊಂದಿದ ಚಾಲಕರಿಗೆ ನೀಡುತ್ತಾರೆ.

[illegible]

೫.೨ ವಾಹನ ಮೈಮೇಲಿನ ಬರಹಗಳು

ಈ ಬರಹಗಳು ಸಂಸ್ಕೃತಿ ವಾಹಕಗಳಾಗಿರುತ್ತವೆ. ಮನುಷ್ಯನಲ್ಲಿರುವ ಅದಮ್ಯವಾದ ಚೈತನ್ಯವನ್ನು ನೆನಪಿಸುವಲ್ಲಿ ಮತ್ತು ಸಾಮಾಜಿಕ ಮೌಲ್ಯಗಳನ್ನು ಮರುಚಿಂತಿಸುವಲ್ಲಿ ಬರಹಗಳು ಬಹಳಷ್ಟು ಸಹಾಯಕಾರಿ. ಕೆಲವೊಂದು ಬರಹಗಳು ದೇಶಭಕ್ತಿಯನ್ನು ಪ್ರತಿಬಿಂಬಿಸುವಂತಿದ್ದರೆ, ಕೆಲವು ಭಗ್ನ ಪ್ರೇಮಿಗಳ ಮಾತುಗಳು, ಹಿತವಚನಗಳು, ದೇವರ ನಾಮ, ತಂದೆ ತಾಯಿಯವರ ಬಗ್ಗೆ ಪ್ರೀತಿ, ಮಮಕಾರ, ಬುದ್ಧಿವಾದ, ನೀತಿವಾಕ್ಯ, ಪ್ರಯಾಣದ ಎಚ್ಚರಿಕೆ ಬರಹಗಳನ್ನು ಕಾಣಬಹುದು. ಇಷ್ಟೇ ಅಲ್ಲದೆ ಪ್ರಕೃತಿ ಸೌಂದರ್ಯ, ಚಿತ್ರ ನಟನಟಿಯರ ಮುಖಚಿತ್ರಗಳು, ಚಿತ್ರದ ಹೆಸರುಗಳು, ಹೆಡೆಬಿಚ್ಚಿದ ಹಾವಿನ ಚಿತ್ರ, ಸಿಂಹ, ರಾಷ್ಟ್ರಧ್ವಜ, ಸುಂದರವಾದ ಹೆಣ್ಣಿನ ಮುಖ ಚಿತ್ರ, ಆಟೋ ಮತ್ತು ಇತರ ವಾಹನಗಳಲ್ಲಿ ಕಾಣಬಹುದು. ಲಾರಿ, ಟ್ರಾವೆಲ್ಸ್ ಮುಂತಾದ ಬಾರಿ ವಾಹನಗಳ ಮೇಲೆ ಡಾಲ್ಫಿನ್, ಮೀನು, ಬೆಟ್ಟ ಹೊತ್ತುಕೊಂಡು ಹೋಗುತ್ತಿರುವ ಆಂಜನೇಯ, ಮೆಕ್ಕ, ಮಸೀದಿ ಚಿತ್ರಗಳನ್ನು ಕಾಣಬಹುದು. ಬಸ್ಸಿನ ಒಳಗಡೆ ಇರುವ ಬರಹಗಳು ಜನರ ನಡಾವಳಿಕೆಗೆ ಸಂಬಂಧಪಟ್ಟ ಬರಹಗಳು, ಪ್ರಸಿದ್ಧ ನಾಣ್ನುಡಿಗಳು, ಕವಿಗಳ ಪ್ರಸಿದ್ಧವಾದ ವ್ಯಾಖ್ಯೆಗಳು, ಕೆಲವು ಸೂಚನೆಗಳು ಮುಂತಾದ ಬರಹಗಳನ್ನು ಕಾಣಬಹುದು. ಮಂಡ್ಯ ಸುತ್ತಮುತ್ತ ಪ್ರದೇಶದಲ್ಲಿ ಎತ್ತಿನ ಗಾಡಿಗಳ ಮೇಲೆ ಅಂಬರೀಶ್, ಡಾ॥ ರಾಜಕುಮಾರ್, ಚಿತ್ರಗಳೊಂದಿಗೆ ಗಾಡಿ ಹೊಡೆಯುವ ಯಜಮಾನ, ಪ್ರಕೃತಿ ಸೌಂದರ್ಯ, ನೈಸರ್ಗಿಕವಾಗಿ ಝರಿ ಮೂಲಕ ಹರಿದು ಬರುತ್ತಿರುವ ನೀರು ಮುಂತಾದ ಬಗೆ ಬಗೆಯ ಚಿತ್ರಗಳನ್ನು ಕಾಣಬಹುದು.

ಇಂತಹ ಎಲ್ಲಾ ರೀತಿಯ ಬರಹ ಮತ್ತು ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿ ನೋಡಿದಾಗ ಅದ್ಭುತವಾದ ವಾದಸರಣಿಯನ್ನೆ ಮಂಡಿಸಬಹುದು. ಇಂತಹವುಗಳು ಕಳೆದುಹೋಗುತ್ತಿರುವ ಭಾವನೆಗಳನ್ನು ಎಚ್ಚರಗೊಳಿಸುವ ನಿಟ್ಟಿನಲ್ಲಿ, ಮರೆಯಬಾರದ್ದನ್ನು ಮತ್ತೆ ಮತ್ತೆ ನೆನಪಿಸುವುದನ್ನು ಅಂತರಾಳದಲ್ಲಿ ಇರಿಸಿಕೊಂಡಿರುತ್ತವೆ. ಮನುಷ್ಯ ಕಳೆದುಕೊಳ್ಳುತ್ತಿರುವ ಮಮತೆ, ಪ್ರೀತಿ, ಅಂತಃಕರಣ, ಮಾನವೀಯತೆ, ಕಾಡುವ ಅನಾಥ ಪ್ರಜ್ಞೆ, ಮುಂತಾದ ಮಾನವಿಕ ಲಕ್ಷಣಗಳನ್ನು ಮತ್ತೆ ಮತ್ತೆ ತುಂಬಿಕೊಡುವಲ್ಲಿ ಸಹಕಾರಿಯಾಗಿವೆ. ಇಂತಹ ಬರಹ ಮತ್ತು ಚಿತ್ರಗಳು ಮನಪಟಲದ ಹಿಂದೆ ಸುಪ್ತವಾಗಿ ಕೆಲಸಮಾಡುತ್ತಿರುತ್ತವೆ. ಯಾಂತ್ರಿಕ ಜೀವನದಿಂದ ಬೇಸತ್ತ ಮನುಷ್ಯನ ಮನಸ್ಸುಗಳಿಗೆ ಇಂತಹ ಬರಹಗಳು ಮತ್ತು ಚಿತ್ರಗಳು ಸ್ವಲ್ಪಮಟ್ಟಿನ ಮುದ ನೀಡುತ್ತವೆ. ಅವುಗಳನ್ನು ಕೆಳಕಂಡಂತೆ ಕಾಣಬಹುದು.

ಅ) ದೇವರ ನಾಮಗಳು

ಸಾಮಾನ್ಯವಾಗಿ ಪ್ರತಿಯೊಂದು ವಾಹನದ ಮೇಲೂ ದೇವರನಾಮಗಳು ಇರುವುದನ್ನು

ಕಾಣಬಹುದು. ಮನುಷ್ಯ ವಾಹನಗಳನ್ನು ನಿರ್ಜೀವಯಂತ್ರ ಎಂದು ತಿಳಿದಿಲ್ಲ. ಅದು ಸಹ ನಮ್ಮ ನಡುವೆಯ ಒಬ್ಬ ಸದಸ್ಯನಂತೆ ತಿಳಿದು ಅದಕ್ಕೊಂದು ದೇವರ ನಾಮವನ್ನು ಸೂಚಿಸುವುದರಿಂದ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಗೌರವಸ್ಥಾನವನ್ನು ನೀಡುತ್ತೇವೆ. ಅದರಿಂದ ಜಡವಾಗಬೇಕಾಗಿದ್ದ ಯಂತ್ರ ಈ ಮೂಲಕ ಚೇತನವನ್ನು ಆರೋಪಿಸಿಕೊಳ್ಳುತ್ತದೆ. ವಾಹನಗಳ ಮೇಲಿರುವ ದೇವರ ಹೆಸರುಗಳಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಕಾಣಬಹುದು. ಕುಲದೇವತೆ, ಗ್ರಾಮದೇವತೆ ಮನೆದೇವರುಗಳಲ್ಲದೆ ಪ್ರಾದೇಶಿಕವಾಗಿ ತುಂಬ ಪ್ರಸಿದ್ಧಿ ಪಡೆದಿರುವ ದೇವರು - ದೇವತೆಗಳ ಹೆಸರನ್ನು ಇಡುತ್ತಾರೆ. ಉದಾ. ಕೊಲ್ಲೂರು ಮೂಕಾಂಬಿಕಾ, ಶ್ರೀ ಮಂಜುನಾಥ, ಮಾರಿಕಾಂಬ ಶ್ರೀ ಮಂತ್ರಾಲಯ ಮುಂತಾದವು.

೧) ಮೂಗೂರು ತಿಬ್ಬಾದೇವಿ, ಕೆಂಪಮ್ಮ, ಮಾರಿಯಮ್ಮ ಕರುಮಾರಿಯಮ್ಮ, ಏಳುಬೆಟ್ಟದ ತಾಯಿ ಕೊಲ್ಲಾಪುರದಮ್ಮ, ಮಾರಿಕಾಂಬ, ಸರ್ಕಲ್ ಮಾರಮ್ಮ, ಚಾಮುಂಡೇಶ್ವರಿ, ಅಣ್ಣಮ್ಮ, ಬನಶಂಕರಿ, ರೇಣುಕಾದೇವಿ ಇತ್ಯಾದಿ ಸಂಪೂರ್ಣವಾಗಿ ಗ್ರಾಮದೇವತೆಗಳಾಗಿದ್ದು ಕೆಲವರಿಗೆ ಇವು ಮನೆದೇವತೆಗಳಾಗಿರುತ್ತವೆ. ಕೆಲವರಿಗೆ ದೇವರ ಹೆಸರಿನಲ್ಲಿ ಒಳ್ಳೆಯದಾಗಿದ್ದರೆ ಆಯಾದೇವತೆಯ ಹೆಸರನ್ನೇ ಇಡುತ್ತಾರೆ. ಮತ್ತೆ ಕೆಲವು ವಾಹನದ ಮೇಲೆ ಬರೆಸುವ ದೇವರ ಹೆಸರುಗಳಿಗೆ ಅದರದೇ ಆದ ಕಾರಣಗಳಿರುತ್ತವೆ. ಆ ಕಾರಣಗಳು ದಾಖಲೆ ಮಾಡುವಷ್ಟು ಸ್ವಾರಸ್ಯಕರವಾಗಿರುತ್ತವೆ. ಮೇಲ್ಕಂಡ ಹೆಸರುಗಳನ್ನು ಸಾಮಾನ್ಯವಾಗಿ ಕೆಳವರ್ಗದ ಇಲ್ಲವೇ ಹಿಂದುಳಿದ ಜನಾಂಗದ ಬಡವರು ಇಂತಹ ಹೆಸರುಗಳನ್ನು ವಾಹನದ ಮೇಲೆ ಬರೆಸುವುದನ್ನು ಕಾಣಬಹುದು.

ವಿಘ್ನೇಶ್ವರ, ಬಸವೇಶ್ವರ, ತಿರುಪತಿ, ರಾಘವೇಂದ್ರ, ಶ್ರೀವೆಂಕಟೇಶ್ವರ ಪ್ರಸನ್ನ, ಧರ್ಮಸ್ಥಳ ಶ್ರೀ ಮಂಜುನಾಥ, ಗುರುರಾಯ ಮುಂತಾದ ಹೆಸರುಗಳು ಜನಾಂಗೀಯ ಮತ್ತು ಪ್ರಾದೇಶಿಕ ಎಲ್ಲೆಯನ್ನು ಮೀರಿ ಇಟ್ಟಂತಹ ಹೆಸರುಗಳು. ಇವೆಲ್ಲ ಶಿಷ್ಟ ಪರಂಪರೆಯುಳ್ಳ ದೇವರುಗಳಾಗಿರುವುದರಿಂದ ಇವುಗಳನ್ನು ಸಾಮಾನ್ಯವಾಗಿ ಮೇಲ್ಜಾತಿ ಬಡವರು ವಾಹನಗಳ ಮೇಲೆ ಬರೆಸುವುದನ್ನು ಕಾಣಬಹುದು. ಆದರೆ ಇದಕ್ಕೆ ಅಪವಾದಗಳು ಉಂಟು, ಇದೇ ಅಂತಿಮವಲ್ಲ. ಸಾಮಾನ್ಯವಾಗಿ ಆಟೋ, ಲಾರಿ ಇಂಥವುಗಳ ಮೇಲೆಯೇ ಹೆಸರು ಬರೆಯಿಸುವ ರೂಢಿ ಇರುವುದು. ಒಂದೊಂದು ಕಾಲಘಟ್ಟದಲ್ಲಿ ಬಳಕೆಯಾಗುವ ಹೆಸರುಗಳಲ್ಲಿ ವ್ಯಾತ್ಯಾಸವಿದೆ. ಮೊದಮೊದಲಲ್ಲಿ ಅಪ್ಪಟ ದೇವರುಗಳ ಹೆಸರನ್ನು ಬಳಸುವ ರೂಢಿ ಇದ್ದಿತು. ಕಾಲಾನಂತರ ರಾಘವೇಂದ್ರ, ಸತ್ಯಸಾಯಿ ಮೊದಲಾದ ಹೊಸ ದೇವರುಗಳ ಹೆಸರು ಕಾಣತೊಡಗಿದವು. ಒಂದು ಕಾಲಘಟ್ಟದಲ್ಲಿ ಸಿನಿಮಾಗಳ ಹೆಸರಿಡುವುದೇ ಜನಪ್ರಿಯವಾಗಿತ್ತು. ಆನಂತರ ಮನೆಯ ಮಕ್ಕಳ ಹೆಸರುಗಳನ್ನಿಡುವುದು ರೂಢಿಗೆ ಬಂತು. ಚಿತ್ರವಿಚಿತ್ರ ಹೆಸರುಗಳನ್ನಿಡುವ ಪರಂಪರೆಯು ಆರಂಭವಾಯಿತು. ಹೀಗೆ ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ವಿವಿಧ ಪರಂಪರೆಯಿದ್ದು ಅದು ಮೂಲತಃ ಒಬ್ಬ ವ್ಯಕ್ತಿಯಿಂದ ಆರಂಭವಾದರೂ ಇತರರರೂ ಅನುಕರಿಸುವಷ್ಟು ಆಕರ್ಷಕವಾದಾಗ

[illegible]

[illegible]

[illegible]

ಅದು ಬೇಗನೆ ಹರಡಿಕೊಳ್ಳುತ್ತದೆ. ಅನುಕರಣೆ ಕೆಲವು ಕಾಲ ಯಥಾವತ್ತಾಗಿದ್ದರೂ ಕ್ರಮೇಣ ಪಾಠಾಂತರಗಳು ತಲೆದೋರುತ್ತವೆ. ಇನ್ನೊಂದು ಆಕರ್ಷಣೆ ಉದ್ಭವಿಸುವವರೆಗೂ ಹಳೆಯದೇ ಮುಂದುವರೆಯುತ್ತಿರುತ್ತದೆ. ಹೊಸದು ರೂಢಿಗೊಳ್ಳುತ್ತಿದ್ದಂತೆ ಹಳೆಯದು ಮರೆಯಾಗುತ್ತಾ ಹೋಗುತ್ತದೆ. ವಾಹನಗಳ ಹೆಸರುಗಳು ಇಂಥ ಅಭ್ಯಾಸಕ್ಕೆ ಉತ್ತಮ ಮಾಹಿತಿ ಒದಗಿಸುತ್ತವೆ[೪].

ದೇವತಾ ಮನುಷ್ಯ, ಆಟೋರಾಜ, ಕಾಡಿನರಾಜ, ಬಂಗಾರದ ಮನುಷ್ಯ, ನಾಗ ಕಾಳ ಭೈರವ, ಮುಂತಾದ ಸಿನಿಮಾಗಳ ಹೆಸರುಗಳನ್ನು ಕಾಣಬಹುದು. ಸಿನಿಮಾ ಹೆಸರಿನ ಬರವಣಿಗೆಗಳಿಗೆ ಒಂದೊಂದು ಐತಿಹ್ಯಗಳೇ ಇರುತ್ತವೆ. ಯಾವುದೇ ಒಂದು ಸಿನಿಮಾ ಚಾಲಕನ ಮನಸ್ಸಿನ ಮೇಲೆ ಪ್ರಭಾವ ಬೀರಿ ಅದರಿಂದ ಸ್ಫೂರ್ತಿ ಪಡೆದು ತನ್ನ ಜೀವನವನ್ನು ಉತ್ತಮ ರೀತಿಯಲ್ಲಿ ಸಾಗಿಸುವುದಕ್ಕೆ ಕಾರಣವೂ ಆಗಿರಬಹುದು. ಆದರಿಂದ ಅಂತಹ ಸಿನಿಮಾ ಹೆಸರುಗಳನ್ನು ತಮ್ಮ ವಾಹನಗಳ ಮೇಲೆ ಹೆಸರು ಬರೆಸುವುದುಂಟು.

ಸಾಮಾನ್ಯವಾಗಿ ಆಟೋ ಚಾಲಕರಲ್ಲಿ 'ಶಂಕರ್‌ನಾಗ್ ಸಂಘ'ಗಳು ಹೆಚ್ಚಾಗಿ ಇರುವುದನ್ನು ಕಾಣಬಹುದು. ಶಂಕರನಾಗ್‌ರವರು ಚಾಲಕ ವೃತ್ತಿಯನ್ನು ಮುಖ್ಯಪಾತ್ರವನ್ನಾಗಿಸಿಕೊಂಡು ಮಾಡಿದ ಚಲನ ಚಿತ್ರಗಳು ಹೆಚ್ಚು ಪ್ರಬಾವ ಬೀರಿರುವುದರಿಂದ ಅವರು ನಟಿಸಿದ ಚಲನಚಿತ್ರಗಳ ಹೆಸರುಗಳನ್ನು ಇಟ್ಟಿರುವುದನ್ನು ಕಾಣಬಹುದು. ಶಂಕರ್‌ನಾಗ್ ಅಕಾಲಮೃತ್ಯುವಿಗೆ ತುತ್ತಾದಾಗಿನಿಂದ ಅವರ ಹೆಸರಿನಲ್ಲಿ 'ಸಂಘ'ಗಳು ಹುಟ್ಟಿಕೊಂಡವು. ಈ ಸಾಲಿನಲ್ಲೆ ಡಾ॥ ರಾಜ್, ವಿಷ್ಣು, ಅಂಬರೀಶ್ ಮುಂತಾದ ನಾಯಕ ನಟರ ಹೆಸರುಗಳನ್ನು ಕಾಣಬಹುದು. ಇಷ್ಟೆ ಅಲ್ಲದೆ ಹಿಂದಿ ಚಲನಚಿತ್ರ ನಾಯಕ ನಟರು ಮತ್ತು ಕನ್ನಡ ನಾಯಕ ನಟರ ಮುಖಚಿತ್ರಗಳನ್ನು, ಇಲ್ಲವೇ ದುಃಖಭರಿತವಾದ ಸ್ತ್ರೀಮುಖವನ್ನೋ ಬಿಡಿಸಿರುವುದನ್ನು ಕಾಣಬಹುದು. ಟ್ರಾವಲ್ಸ್‌ಗಳ ಹಿಂದೆ ವಿಧಾನಸೌಧ, ಪಾರ್ಲಿಮೆಂಟ್, ಮೆಕ್ಕಾ ಮಸೀದಿ, ಪ್ರಕೃತಿಯ ರಮಣೀಯವಾದ ದೃಶ್ಯ, ಚಿಕ್ಕಪುಟ್ಟ ಮಕ್ಕಳು ಆಡುವ ದೃಶ್ಯ ಮುಂತಾದ ಚಿತ್ರಗಳನ್ನು ಕಾಣಬಹುದು. ಟ್ರಾವಲ್ಸ್ ಬಸ್ಸುಗಳ ಎಡಬಲಗಳ ಮೇಲೆ ಸಮುದ್ರದಲ್ಲಿ ಲೀಲಾಜಾಲವಾಗಿ ಈಜಾಡುತ್ತಿರುವ ಡಾಲ್ಫಿನ್, ಬೆಟ್ಟ ಕಾಡುಗಳ ಮಧ್ಯೆ ಝರಿಯಿಂದ ನೀರು ಹರಿದು ಬರುತ್ತಿರುವ ದೃಶ್ಯ, ಕುದುರೆಗಳ ಕೆನೆತ ಹಾವಿನ ತಲೆಯ ಭಾಗ ಮತ್ತು ಓಟ ಮುಂತಾದ ದೃಶ್ಯಗಳನ್ನು ಕಾಣಬಹುದು.

ಆ) ರಾಷ್ಟ್ರೀಯ ಘೋಷಣಾ ವಾಕ್ಯಗಳು

ಇಲ್ಲಿ ಸಂಯುಕ್ತ ವ್ಯವಸ್ಥೆಯನ್ನು ಪ್ರತಿಬಿಂಬಿಸುವಂತಹ, ರಾಷ್ಟ್ರೀಯ ಭಾವೈಕ್ಯತೆಯನ್ನು ಸೂಚಿಸುವ ರಾಷ್ಟ್ರೀಯ ಮೌಲ್ಯಗಳನ್ನು ಸಾರುವ, ಪ್ರಜಾಪ್ರಭುತ್ವದ ಪ್ರತಿನುಡಿಗಳ ಮಾದರಿಯಲ್ಲಿ ಬರಹಗಳಿರುತ್ತವೆ. ಈ ವಾಹನಗಳು ರಾಷ್ಟ್ರದಾದ್ಯಂತ ಸಂಚರಿಸುವುದರಿಂದ ರಾಷ್ಟ್ರೀಯತೆಯನ್ನು ಪ್ರತಿಬಿಂಬಿಸುವ ಬರಹಗಳೇ ಇರುತ್ತವೆ. ಈ ಬರಹಗಳಿಗೆ ರಾಷ್ಟ್ರಭಾಷೆಯಾದ ಹಿಂದಿ ಇಲ್ಲವೇ ಜಾಗತಿಕ ಭಾಷೆಯಾದ

ಇಂಗ್ಲೀಷ್‌ನ್ನು ಹೆಚ್ಚು ಬಳಸುತ್ತಾರೆ. ಇವೆರಡು ಭಾಷೆಗಳು ಭಾರತದಲ್ಲಿ ಬಹುಜನವನ್ನು ತಲುಪುವ ಮಾಧ್ಯಮಗಳಾಗಿವೆ. ಅಂತಹ ಬರಹಗಳನ್ನು ಕೆಳಕಂಡಂತೆ ಕಾಣಬಹುದು.

- ವಿವಿಧತೆಯಲ್ಲಿ ಏಕತೆ
- ಮೇರಾ ಭಾರತ್ ಮಹಾನ್
- ಇಂಧನ ಉಳಿಸಿ ದೇಶ ಉಳಿಸಿ
- One United Save Two United Produse.
- Save Todays for save future
- Stop Child labors
- We two ours two
- We two ours one, save oil
- Life is drama man is actor
- Jai Hind

ಇಲ್ಲಿ ತ್ರಿವರ್ಣ ಧ್ವಜ, ಕುಟುಂಬ ಯೋಜನೆಯ ಚಿನ್ಹೆ, ಕೈಮುಗಿಯುತ್ತಿರುವ ಹೆಣ್ಣು ಮುಂತಾದ ಚಿತ್ರಗಳು ಇರುತ್ತವೆ. "ಧನ್ಯವಾದವನ್ನು ಕೈಮುಗಿದ ಹೆಣ್ಣಿನ ಅಥವಾ ಹಸ್ತಲಾಘವ ಚಿತ್ರದ ಮೂಲಕ ಸೂಚಿಸುತ್ತಾರೆ. ಕೆಂಪು ತ್ರಿಕೋನ ಮತ್ತು ಕುಟುಂಬ ಯೋಜನೆಯ ಕುಟುಂಬದ ಚಿತ್ರವಿರುತ್ತದೆ"[೫೫].

೩) ಎಚ್ಚರಿಕೆಯ ನುಡಿಗಳು

ಸಾಮಾನ್ಯವಾಗಿ ಪ್ರತಿಯೊಂದು ವಾಹನಗಳಲ್ಲೂ ಎಚ್ಚರಿಕೆಯ ನುಡಿಗಳು ಇರುವುದನ್ನು ಕಾಣಬಹುದು. ಇವು ಕಡ್ಡಾಯ ಎನ್ನುವ ರೀತಿಯಲ್ಲಿರುತ್ತವೆ. ಚಾಲಕರು ಸದಾ ಎಚ್ಚರಿಕೆಯಿಂದ ಇರಲು ಸಾಧ್ಯವಿಲ್ಲ. ಆದ್ದರಿಂದ ಈ ಬರಹಗಳು ಓದುವುದರಿಂದ ಮಾನಸಿಕವಾಗಿ ಎಚ್ಚೆತ್ತು ವಾಹನಗಳನ್ನು ಓಡಿಸುತ್ತಾರೆ. ಇವು ಸರಕು ಸಾಗಾಣಿಕಾ ವಾಹನಗಳಲ್ಲಿ ಹೆಚ್ಚು ಕಂಡುಬರುತ್ತವೆ.

- Wait for side
- Use dipper at night time
- Keep distance
- Sound Horn / Please Horn
- Blow Horn.

[illegible]

[illegible]

[illegible]

[illegible]

[illegible]

[illegible]

ಬಸ್ಸುಗಳಲ್ಲಿ ಕಾಣುವ ಬರಹಗಳು

* ಟಿಕೇಟ್ ರಹಿತ ಪ್ರಯಾಣ ೫೦೦ ರೂ. ದಂಡಕ್ಕೆ ಕಾರಣ
* ಭಿತ್ತಿ ಪತ್ರಗಳನ್ನು ಅಂಟಿಸಬಾರದು
* ನಿರ್ಲಕ್ಷತೆಯಿಂದ ವಾಹನ ಚಾಲನೆ ಮಾಡಬೇಡಿ
* ತಕ್ಷಣದ ತಿರುವು ಜೀವನದ ಮರೆವು
* ಲೈಟಿಲ್ಲದ ಸಂಚಾರ ಜೀವನಕ್ಕೆ ಸಂಚಕಾರ
* ಅತಿವೇಗದ ಚಾಲನೆ ಮಾಡುವಾಗ ಹಳದಿಪಟ್ಟಿ ದಾಟಬೇಡಿ
* ವೇಗಕ್ಕೆ ಒತ್ತಾಯ ಜೀವಕ್ಕೆ ಮುಕ್ತಾಯ
* ವಾಹನ ಚಾಲನೆ ಮಾಡುವಾಗ ಹಳದಿಪಟ್ಟಿ ದಾಟಬೇಡಿ
* ಅತಿವೇಗ ತಿಥಿಬೇಗ
* ಅಕ್ಕಪಕ್ಕದ ಆಕರ್ಷಣೆ ಅಪಘಾತಕ್ಕೆ ಹೊಣೆ
* ನಿಲ್ಲುವ ರೇಖೆ ಜೀವನದ ರೇಖೆ
* ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ
* ಶಬ್ಧ ಮಾಡಿ ದಾರಿಕೇಳಿ
* ಧ್ವನಿಮಾಡಿ ದಾರಿಕೇಳಿ

ನೀತಿವಾಕ್ಯಗಳು

* ತಾಯಿಯೇ ದೇವರು
* ತಾಯಿಯ ಆಶೀರ್ವಾದ
* ಅನೇಕತೆಯಲ್ಲಿ ಏಕತೆ
* ಮಾನವ ಧರ್ಮಕ್ಕೆ ಜಯವಾಗಲಿ
* ಧರ್ಮದಿಂದಲೇ ವಿಶ್ವಕ್ಕೆ ಶಾಂತಿ
* ವಾಹನ ಬಿಟ್ಟರೆ ಹೊಗೆ ನೀನು ಬಿಡುವೆ ಪ್ರಾಣ
* ಸಾರ್ವಜನಿಕ ವಾಹನ ಬಳಸಿ ವಾಯು ಮಾಲಿನ್ಯದಿಂದ ಪ್ರಾಣ ಉಳಿಸಿ
* ಮನೆಗೊಂದು ಮಗು ದೇಶಕ್ಕೆ ನಗು
* ಸಹಕರಿಸಿ ಎಲ್ಲರೂ ಮಾಲಿನ್ಯ ನಿರ್ಮೂಲನ ಕರೆಗೆ. ಬೆಂಗಳೂರನ್ನು ಮಾಡೋಣ ಸ್ವರ್ಗದಂತೆ ಧರೆಗೆ

* ವಾಹನ ಚಾಲನೆಯ ನಿಯಮವನ್ನು ಪಾಲಿಸಿ ಅಪಘಾತವನ್ನು ತಪ್ಪಿಸಿ
* ಕುಡಿದು ವಾಹನ ಚಾಲನೆ ಅಪಘಾತದ ಸೂಚನೆ
* ಪ್ರಾಣಕ್ಕಿಂತ ಅಮೂಲ್ಯ ಮತ್ತೊಂದಿಲ್ಲ
* ವೇಗವೇ ಮರಣ ನಿಧಾನವೇ ಜೀವನ
* ನೀವು ವಾಹನ ಚಾಲನೆ ಮಾಡುವಾಗ ಪ್ರಯಾಣಿಕರ ಜೀವ ನಿಮ್ಮ ಕೈಯಲ್ಲಿರುತ್ತದೆ ಎಂಬುದನ್ನು ಮರೆಯದಿರಿ. ಅವರು ನಿಮ್ಮ ಮಿತ್ರರು
* ತನಿಖಾಧಿಕಾರಿಗಳೊಂದಿಗೆ ಸಹಕರಿಸಿ
* ಕರ್ತವ್ಯ ನಿರ್ವಹಿಸಲು ಸಹಕರಿಸಿ
* ಟಿಕೇಟ್ ಒತ್ತಾಯಿಸಿ ಪಡೆದುಕೊಳ್ಳಿ. ದಂಡದ ಶಿಕ್ಷೆಯಿಂದ ತಪ್ಪಿಸಿಕೊಳ್ಳಿ.
* ಕದ್ದು ಪ್ರಯಾಣ ಬೇಡ ಅಣ್ಣ. ಬುದ್ದಿ ಇರುವ ಮನುಜ ನೀ ತಿಳಿಯಣ್ಣ

ಧನ್ಯವಾದ ನುಡಿಗಳು

* ನಮಸ್ತೆ
* ಪುನಃ ಭೇಟಿ ಆಗೋಣ
* ಟಾಟಾ
* Tank You, Tank Q
* Tank u, ok TaTa

ಕಾರ್ಯಸೂಚನ ವಾಕ್ಯಗಳು

ಇಂತಹ ಬರಹಗಳು ಪ್ರಾದೇಶಿಕತೆಯಲ್ಲಿ ಭಿನ್ನತೆ ಇದೆ.

ಓ ಮಲ್ಲಿಗೆ
ನೀ ಎಲ್ಲಿಗೆ
ನಾ ಕೋಳಿಗೆ - ಟೆಂಪೋ - ಶಿರಾ

ಓ ಮಲ್ಲಿಗೆ
ನೀ ಎಲ್ಲಿಗೆ
ನಾ ದ್ರಾಕ್ಷಿಗೆ - ಟೆಂಪೋ - ದೊಡ್ಡಬಳ್ಳಾಪುರ

ಓ ಮಲ್ಲಿಗೆ
ನೀ ಎಲ್ಲಿಗೆ
ನಾ ತೋಟಕೆ - ಟ್ರಾಕ್ಟರಿ - ಶಿರಾ

ಲೇಖಕರ ನುಡಿಗಳು

ಇವುಗಳನ್ನು ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಕಾಣಬಹುದು. ಇಲ್ಲಿ ಲೇಖಕರ ಹಿತನುಡಿಗಳು ಮತ್ತು ಧರ್ಮಗ್ರಂಥಗಳ ಸೂಕ್ತಿಗಳ ಬರಹಗಳಿರುತ್ತವೆ.

* ಮಾನವ ಕುಲ ತಾನೊಂದೇ ವಲಂ - ಪಂಪ
* ಕಾಯಕವೇ ಕೈಲಾಸ - ಬಸವಣ್ಣ
* ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ - ಕುವೆಂಪು
* ದೇವನೊಬ್ಬ ನಾಮ ಹಲವು - ಬಸವಣ್ಣ
* ಈಸಬೇಕು ಇದ್ದು ಜೈಸಬೇಕು - ಪುರಂದರದಾಸ
* ಅಲ್ಲಾಹನು ಸತ್ಕರ್ಮಿಗಳನ್ನು ಪ್ರೀತಿಸುತ್ತಾನೆ - ಪೈಗಂಬರ್

ಆಟೋ ಸಾಹಿತ್ಯ

ಆಟೋಗಳ ಮೇಲಿನ ಬರಹಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವಷ್ಟು ವೈವಿಧ್ಯಮಯವಾದ, ಕಾವ್ಯಾತ್ಮಕವಾದ ಶೈಲಿಯಲ್ಲಿರುತ್ತವೆ. ಈ ಬರಹಗಳ ಹಿಂದೆ ಆಳವಾದ ಅನುಭವಗಳನ್ನು ಅಧ್ಯಯನ ಮಾಡುವಷ್ಟು ಕುತೂಹಲಕಾರಿಯಾಗಿರುತ್ತವೆ. ಕೆಲವು ಅದ್ಭುತವಾದ ಅನುಭವಜನ್ಯ ಬರಹಗಳಿರುತ್ತವೆ. ಕೆಲವು ಚೇಷ್ಟೆ ಬರಹಗಳೂ ಇರುತ್ತವೆ. ಆಯಾ ಚಾಲಕರ ವಯೋ - ಮನಸ್ಸುಗನುಗುಣವಾಗಿ ಬರಹಗಳನ್ನು ಕಾಣಬಹುದು. ಹಿಂದೆ ಸಿನಿಮಾ ಹೆಸರುಗಳನ್ನು ಸ್ವಯಂ ಪೂರಿತವಾಗಿ ಬರೆಯಿಸುತ್ತಿದ್ದನ್ನು ಕಾಣಬಹುದು. ಆದರೆ ಇತ್ತೀಚೆಗೆ ಆಟೋಗಳ ಮೇಲೆ ಜಾಹೀರಾತಿಗಾಗಿ ಸಿನಿಮಾ ಹೆಸರನ್ನು ನಿರ್ಮಾಪಕರು ಬರೆಸುತ್ತಾರೆ. ಜನಪ್ರಿಯ ಸಿನಿಮಾ ಹಾಡುಗಳ ಪಲ್ಲವಿಗಳು ಇರುತ್ತವೆ.

* ಮುತ್ತು ಕೊಡುವಳು ಬಂದಾಗ ತುತ್ತು ಕೊಟ್ಟೋಳ ಮರಿಬೇಡ
* ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ
* ನನ್ನವರು ಯಾರು ಇಲ್ಲ ಯಾರಿಗೆ ಯಾರು ಇಲ್ಲ ಪ್ರೀತಿ ವಾತ್ಸಲ್ಯಕ್ಕೆ ಅರ್ಥವೆ ಇಲ್ಲ
* ನಗುವಾಗ ನೆಂಟರೆಲ್ಲಾ, ಅಳುವಾಗ ಯಾರು ಇಲ್ಲಾ
* ನಿನ್ನೆ ನನ್ನವಳು ಇಂದು ನಿನ್ನವಳು ನಾಳೆ?
* ಇವತ್ತು ಡಾರ್ಲಿಂಗ್ ಅಂತಾರೆ, ನಾಳೆ ಬ್ರದರ್ ಅಂತಾರೆ - ಇದೇ ಹುಡಿಗಿಯರ ಜಗತ್ತು ಗುರು

* ಪ್ರೀತಿಸ್ಬೇಡ್ವೆ! ಮೋಸ ಮಾಡ್ಬಿಡ್ತಾರೆ
* ತಾಯಿಯಿಂದ ಜನನ, ಪ್ರೇಯಸಿಯಿಂದ ಮರಣ
* ಡೋಂಟ್ ವರಿ ಎನ್ನಬೇಡಾ, ಟೈಮ್ ವೇಸ್ಟ್ ಮಾಡಬೇಡ, ಲವ್ ಮಾಡಿ ಕೆಡಬೇಡ
* ಅತಿವೇಗ ತಿಥಿ ಬೇಗ
* ಲೈಫ್ ಈಸ್ ಲೈಕ್ ಎ ಐಸ್ ಕ್ರೀಂ. ಹ್ಯಾವ್ ಇಟ್ ಬೀಫೋರ್ ಮೆಲ್ಟ್ಸ್
* ಅಯ್ಯೋ ಗುದ್ಬೇಡಾ ಗುರು! ದೂರ ನಿಂತಕ್ಕೊ
* ನೋ ಟಚಿಂಗ್ ಪ್ಲೀಸ್
* ಮುತ್ತಿಡ್‌ಬೇಡ್ವೋ ಮಂಗ
* ಬರಹಗಳಲ್ಲದೆ ಆಟೋಗಳಲ್ಲಿ ಪ್ರಕೃತಿ ಸೌಂದರ್ಯ, ಸಿನಿಮಾ ನಟನಟಿಯರ ಮುಖಚಿತ್ರಗಳು, ಚಿತ್ರದ ಹೆಸರು ಮತ್ತು ದೇವರ ಹೆಸರುಗಳನ್ನು ಹೊಂದಿರುತ್ತವೆ. ತಮಗೆ ಇಷ್ಟವಾದವರ ಹೆಸರೋ, ಇಲ್ಲವೇ ತಮ್ಮನ್ನೇ ಇಷ್ಟಪಡುವವರ ಹೆಸರೋ ಬರೆಸಿರುವುದುಂಟು ಅದನ್ನು ಹಾಯ್ ಶಿವು, ಹಲೋ ವಿಜಯ್ ಹಾಯ್ ಪಿಂಟು! ಎಂದು ಬರೆಯಿಸಿ, ನಾವು ಸಹ ಅಪರಿಚಿತ ಹೆಸರಿಗೆ ಮನದಲ್ಲೇ ಹಾಯ್ ಹೇಳುವಂತೆ ಮಾಡುವ ಆಟೋಗಳಿವೆ. ಚಿನ್ನು, ಪಾಪು ಅಂತ ಮುದ್ದಿನ ಹೆಸರುಗಳೂ, ಟಾಮಿ, ಜಿಮ್ಮಿ ಅಂತ ಮುದ್ದಿನ ನಾಯಿಯ ಹೆಸರುಗಳೂ ಸಿಗಬಹುದು.[೬]
* ಮುತ್ತು ಕಳೆದರೆ ಸಿಕ್ಕೀತು ಹೊತ್ತು ಕಳೆದರೆ ಸಿಕ್ಕೀತೆ.
* ಕಲಿಯೋಕೆ ಕೋಟಿ ಭಾಷೆ ಆಡೋಕೆ ಒಂದೇ ಭಾಷೆ.
* ನೀ ಮುಟ್ಟಿದರೆ ನಾನ್‌ತಟ್ಟೇನಿ!
* ಛೀ ತುಂಟಿ.
* ರಸ್ತೆ ರಾಜ.
* ಸಾಗರದಷ್ಟು ನೋವು ಕೊಡುವದಕ್ಕಿಂತ ಸಾಸಿವೆಯಷ್ಟು ಪ್ರೀತಿಸು.
* ನಾನು ನಾನೇ ನನ್ನ ನಂಬಿದವಳು ನೀನೆ.
* ಮಾಲಿನ್ಯ ನಿವಾರಣೆಯ ಗುರು ಸರ್ವರ ಆಗೋಗ್ಯಕ್ಕೆ ರಹದಾರಿ.
* ನಿಯಮಿತ ವಾಹನ ತಪಾಸಣೆ ತಪ್ಪಿಸುವುದು ಆರೋಗ್ಯದ ಬವಣೆ
* ಹೃದಯ ಜಾರಿತು ಪ್ರೀತಿ ಉಳಿಯಿತು.

ಇಂತಹ ಬರಹಗಳ ಸಂಖ್ಯೆ ಸಾಕಷ್ಟಿದೆ. ಇವು ಯಾರ ಮನಸನ್ನೊ ತಲುಪುವ ಅಂತರಾಳವನ್ನು ಕಲಕುವ ಮೃಗೀಯತೆಯನ್ನು ಮಾನವೀಯತೆಗೆ ತರುವ ಸಂಸ್ಕೃತಿ ವಾಹಕಗಳಾಗಿರುತ್ತವೆ.

ಒಟ್ಟಿನಲ್ಲಿ ಇಂತಹ ಬರವಣಿಗೆಗಳನ್ನು ಹೊತ್ತ ವಾಹನಗಳು ಮತ್ತೆ ಮತ್ತೆ ಕಣ್ಣಮುಂದೆ ಹಾಯ್ದು ಹೋಗುವುದರಿಂದ ಸ್ವಲ್ಪಸಮಯ ಆಲೋಚನೆಗೆ ಕಾರಣವಾಗುವಷ್ಟು ಪ್ರಭಾವಯುತವಾಗಿರುತ್ತವೆ.

೫.೩ ವಾಹನಗಳ ಮೇಲಿನ ಧಾರ್ಮಿಕ ನಂಬಿಕೆಗಳು ಮತ್ತು ಅಲಂಕಾರಗಳು[2]

ಭಯದ ಮೂಲವೇ ದೇವರ ಮೇಲಿನ ನಂಬಿಕೆ. ಮನುಷ್ಯನಿಗೆ ತನ್ನ ಅಸ್ತಿತ್ವ ಅತಂತ್ರ ಎನಿಸಿದಾಗ ಮಾನಸಿಕವಾಗಿ ಪರಾವಲಂಬಿ ಆಗುವುದು ಸಹಜ. ತನಗಿಂತ ಬೇರೆಯದೇ ಆದ ಶಕ್ತಿ ಇದೆ. ಅದು ಅಗೋಚರ ಎಂದು ನಂಬಿ ಅದಕ್ಕೆ ಶರಣಾಗತನಾಗಿ ಅದರ ನೆರಳಡಿಯಲ್ಲಿ ಬದುಕು ಸಾಗಿಸುತ್ತಾನೆ. ಮನುಷ್ಯ ಮತ್ತು ವಾಹನ ಧಾರ್ಮಿಕ ಸಂಬಂಧ ಇದಕ್ಕಿಂತ ಬೇರೆ ಯಾವುದೇನು ಅಲ್ಲ. "ವಾಹನ ಯಾವುದೇ ಆಗಿರಲಿ - ಖಾಸಗಿ / ಸರ್ಕಾರಿ / ಸ್ವಂತ / ಬಾಡಿಗೆ ವಾಹನದ ಬಗ್ಗೆ ಪೂಜ್ಯ ಭಾವನೆಯಿರುವುದು ನಮ್ಮ ಸಂಸ್ಕೃತಿಯಲ್ಲಿ ಗಮನಿಸಬೇಕಾದ ಅಂಶ. ಬಹುಶಃ ವಾಹನಗಳ ಚಾಲನೆಯಲ್ಲಿ ಅಪಘಾತದ ಸುಪ್ತಭಯವಿರುವುದೇ ವಾಹನಗಳನ್ನು ಕುರಿತ ವಿಶೇಷ ಭಯಭಕ್ತಿಗೆ ಕಾರಣ. ಭಕ್ತಿಭಾವಗಳು ವ್ಯಕ್ತವಾಗುವ ಬಗೆ ಹಾಗೂ ಸಂಬಂಧಪಟ್ಟ ಆಚರಣೆ. ಪೂಜೆ, ವಿಧಿನಿಷೇಧಗಳನ್ನು ವಾಹನ ಜಾನಪದ ಒಳಗೊಳ್ಳುತ್ತದೆ. ಯಾವುದೇ ಜಾತಿ ಧರ್ಮದ ಚಾಲಕನಿರಲಿ ವಾಹನವನ್ನು ಅಂದು ಮೊದಲಬಾರಿಗೆ ಚಲಿಸುವ ಮೊದಲು ಮನಸ್ಸಿನಲ್ಲಿ ತನ್ನ ದೇವರನ್ನು ನೆನೆಯುತ್ತಾನೆ. ದೇವರ ಚಿತ್ರಪಟವನ್ನು ಹೂವು ಅಗರಬತ್ತಿಗಳಿಂದ ಪೂಜಿಸುತ್ತಾನೆ. ಇಲ್ಲಿ ದೇವರ ಫೋಟೊ ಮಾತ್ರವೇ ಪೂಜಿಸಲ್ಪಡುವುದಿಲ್ಲ. ಪ್ರತಿಯೊಂದು ವಾಹನದಲ್ಲಿಯೂ ಪೂಜಾರ್ಹವಾದ ಕೆಲವು ಭಾಗಗಳಿವೆ. ಸ್ಟಿಯರಿಂಗ್, ಇಂಜಿನ್ ಮುಂಭಾಗದ ಚಕ್ರಗಳು ಇತ್ಯಾದಿ ಹೀಗೆ ಪೂಜಿಸಲ್ಪಡುವ ಭಾಗವನ್ನು ಕಾಲಿನಿಂದ ತುಳಿಯುವುದಾಗಲೀ, ಅಗೌರವಿಸುವುದಾಗಲೀ ನಿಷಿದ್ಧ. ವಾಹನದ ಚಾಲಕರಿಗೆ ಪೂಜ್ಯವಾದ ವಸ್ತುಗಳನ್ನು ಇತರರೂ, ಹಾಗೆಯೇ ಭಾವಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಹೊಸ ವಾಹನವನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಪೂಜೆಮಾಡಿಸಿಕೊಂಡು ಬರುತ್ತಾರೆ. ಅದೊಂದು ದೊಡ್ಡ ಸಮಾರಂಭವೇ ಆಗಬಹುದು. ಈ ವಿಷಯದಲ್ಲಿ ಕೆಲವು ದೇವರುಗಳಿಗೆ ಮತ್ತು ಕೆಲವು ದೇವಸ್ಥಾನಗಳಿಗೆ ವಿಶೇಷ ಪ್ರಾಮುಖ್ಯತೆ ಬಂದಿರುತ್ತದೆ. ಉದಾಹರಣೆಗೆ ಬೆಂಗಳೂರಿನಲ್ಲಿ ಕಸ್ತೂರಿಬಾ ರಸ್ತೆಯಲ್ಲಿರುವ 'ಅರ್ಕಗಣಪತಿ' ಗುಡಿಯಲ್ಲಿಯೇ ಎಲ್ಲರೂ ತಮ್ಮ ವಾಹನವನ್ನು ಪೂಜಿಸಿಕೊಂಡು ಬರುವುದು ರೂಢಿ. ಆಯುಧ ಪೂಜೆಯಂದು ನಡೆಸುವ ವಾಹನ ಪೂಜೆಗಳು ತುಂಬಾ ವಿಜೃಂಭಣೆಯಿಂದ ಕೂಡಿರುತ್ತದೆ. ಇಲ್ಲಿ ಧಾರ್ಮಿಕ ಬೇಧಗಳು ಅಳಸಿಹೋಗುವುದನ್ನು ಗಮನಿಸಬೇಕು. ವಾಹನಗಳ ಸಂಬಂಧವಾಗಿ ನಡೆಯುವ ಇನ್ನೊಂದು ವಿಶೇಷ ಪೂಜೆಯೆಂದರೆ ಪದೇ ಪದೇ ಅಪಘಾತವಾಗುತ್ತಿದ್ದಲ್ಲಿ ದೇವರಿಗೆ ಹರಸಿಕೊಂಡು ಹರಕೆ ಸಲ್ಲಿಸುವ ಪೂಜೆ, ಖಾಸಗಿ ವಾಹನಗಳಾದಲ್ಲಿ ಅವರವರ ಮನೆ ದೇವರಿಗೆ ಇಂಥ ಹರಕೆ ಪೂಜೆಗಳು ಸಲ್ಲುತ್ತವೆ.

ವಾಹನಗಳ ಒಳಭಾಗದಲ್ಲಿ ದೇವರ ಚಿತ್ರಪಟಗಳು ಇದ್ದೇ ಇರುತ್ತವೆ. ಮೊದಮೊದಲು ಪೌರಾಣಿಕ ದೇವರುಗಳ ಚಿತ್ರಪಟಗಳು ಮಾತ್ರ ಇರುತ್ತಿದ್ದವು. ಅನಂತರ ಸಾಯಿಬಾಬಾ, ರಾಘವೇಂದ್ರ,

[illegible]

ಮೊದಲಾದ ಹೊಸ ದೇವರುಗಳ ಚಿತ್ರ ಕಂಡುಬರತೊಡಗಿತು. ಸಾಮಾನ್ಯವಾಗಿ ಸರ್ಕಾರಿ ಮಾಲೀಕತ್ವದ ವಾಹನಗಳಲ್ಲಿ ಒಂದು ಮುಖ್ಯ ವ್ಯತ್ಯಾಸವನ್ನು ಗಮನಿಸಬಹುದು. ಉದಾಹರಣೆಗೆ ಬಿ.ಟಿ.ಎಸ್. ಅಥವಾ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಇಲ್ಲಿ ಒಂದೇ ಬಸ್ಸನ್ನು ವಿವಿಧ ಧರ್ಮ ಜಾತಿ ಮತಗಳ ಚಾಲಕರು ಓಡಿಸುವುದರಿಂದ ಎಲ್ಲಾ ಧರ್ಮಗಳಿಗೂ ಪ್ರಾತಿನಿಧ್ಯ ನೀಡಲಾಗುತ್ತದೆ. ವಿವಿಧ ಧರ್ಮಗಳ ದೇವರುಗಳನ್ನೊಳಗೊಂಡ ಚಿತ್ರಪಟಗಳು ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತವೆ. ಚಿತ್ರಪಟಗಳ ವಿನ್ಯಾಸ ಮತ್ತು ದೇವರುಗಳ ಸ್ಥಾನಮಾನ ಕಾಲಕಾಲಕ್ಕೆ ಬದಲಾಗುವುದನ್ನು ಕಾಣಬಹುದು. ಇದಕ್ಕೆ ಒಂದು ಉದಾಹರಣೆ ಹೂವಿನಾಕಾರದ ಒಂದು ಸ್ಟಿಕರ್‌ನ ಮಧ್ಯಭಾಗದಲ್ಲಿ ಪುಟ್ಟಪರ್ತಿ ಸಾಯಿಬಾಬಾ ಚಿತ್ರವಿದ್ದು ಸುತ್ತಲಿನ ದಳಗಳಲ್ಲಿ ಬೇರೆ ಬೇರೆ ಧರ್ಮಗಳ ಧಾರ್ಮಿಕ ಚಿಹ್ನೆಗಳಿರುವುದು ದಟ್ಟವಾಗಿ ರೂಡಿಯಲ್ಲಿವೆ. ವಾಹನಗಳಿಗೆ ಇಡುವ ಹೆಸರಿನಲ್ಲಿ ಹಾಗೂ ವಾಹನಗಳ ಮೇಲೆ ಅಲಂಕಾರಿಕವಾಗಿ ಬರೆಸುವ ಚಿತ್ರಗಳಲ್ಲಿ ಇದನ್ನು ಗುರುತಿಸಬಹುದು. ವೆಂಕಟೇಶ್ವರನ ನಾಮ, ತ್ರಿಶೂಲ, ಕಳಸ, ಕಮಲ, ಆನೆ, ನಂದಿ, ಚಂದ್ರ ಮತ್ತು ನಕ್ಷತ್ರ, ಶಿಲುಬೆ, ಓಂ ಇತ್ಯಾದಿ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತದೆ.

ವಾಹನಗಳ ಅಲಂಕಾರಗಳು

ವಾಹನಗಳ ಅಲಂಕಾರದ ರೀತಿನೀತಿಗಳೂ ವಿಶಿಷ್ಟ. ವಾಹನದ ಒಳಭಾಗದ ಅಲಂಕಾರವೇ ಒಂದು ರೀತಿ. ಹೊರಭಾಗದ ಇನ್ನೊಂದು ರೀತಿ ಬೇರೆ ಬೇರೆ ವಾಹನಗಳ ಅಲಂಕಾರದ ರೀತಿ ಬೇರೆ ಬೇರೆಯಾಗಿರುತ್ತದೆ. ವಾಹನಗಳ ಅಲಂಕರಣದ ಅಧ್ಯಯನ ಒಂದು ಜನವರ್ಗದ ಅಭಿರುಚಿ, ಸಾಂಸ್ಕೃತಿಕ ಹಿನ್ನೆಲೆಗಳನ್ನು ತಿಳಿಸಬಲ್ಲದು.

ಆಟೋಗಳವರು ತಮ್ಮ ವಾಹನದ ಮುಂದಿನ ಬಲಭಾಗದಲ್ಲಿ ಚಿತ್ರಗಳನ್ನು ಬರೆಸುವುದು ರೂಢಿ. ಹೀಗೆ ಬಹುವಾಗಿ ಕಂಡುಬರುವ ಚಿತ್ರಗಳೆಂದರೆ ಗುಲಾಬಿ ಹೂ, ಹೂಗೊಂಚಲು, ಹೂವಿನ ಹಾರ ನವಿಲು ಗರಿ ಮತ್ತು ಕೊಳಲು, ಬಾಲಕೃಷ್ಣನ ಮುಖ ಮತ್ತು ಕೊಳಲು, ನವಿಲು, ಗಿಳಿ, ಬಾಲಕ್ರಿಸ್ತ, ಹುಲಿ-ಸಿಂಹ-ಚಿರತೆ ಮೊದಲಾದ ಕಾಡು ಪ್ರಾಣಿಗಳು, ಇತ್ತೀಚೆಗೆ ಹೆಣ್ಣಿನ ಮುಖ ಸಿನಿಮಾ ತಾರೆಯರ ಮುಖಗಳೂ ಕಂಡುಬರುತ್ತವೆ. ಶಾಂತಿದೂತ ಬಿಳಿಯ ಪಾರಿವಾಳದ ಚಿತ್ರವೂ ಕಂಡು ಬರುತ್ತಿರುವುದು ಗಮನಿಸಬೇಕಾದ ಅಂಶ. ಆಟೋಗಳ ಹಿಂಭಾಗದ ಕಿಟಕಿ ಪ್ರದೇಶಕ್ಕೆ ನಿಸರ್ಗ ದೃಶ್ಯದ ಚಿತ್ರ ಬರೆಯಿಸಿರುತ್ತಾರೆ. ಈ ನಿಸರ್ಗ ಚಿತ್ರ ಬಹುತೇಕವಾಗಿ ಎರಡು ತೆಂಗಿನಮರ, ಹರಿಯುವ ನದಿ, ತೇಲುವ ದೋಣಿ, ಮುಳುಗುವ ಸೂರ್ಯ, ಒಂದು ಪುಟ್ಟ ಮನೆ ಆಗಿರುತ್ತವೆ. ದಾರಿಗಳ ಮೇಲೆ ಕಂಡುಬರುವ ಚಿತ್ರಕಲೆ ವೈವಿಧ್ಯಪೂರ್ಣ, ಸಾಮಾನ್ಯವಾಗಿ ಹಿಂಭಾಗದಲ್ಲಿ ಚಿತ್ರ ಬರೆಸಿರುತ್ತಾರೆ. ಇಲ್ಲಿ ಕಂಡು ಬರುವ ಚಿತ್ರಗಳು ಹೀಗಿವೆ. ಆಚೆಈಚೆ ಅಲಂಕೃತ ಬಸವಗಳು ಮಧ್ಯ ಕಮಲದ ಮೇಲೆ ಕಳಸ, ಆಚೆಈಚೆ, ಗಿಳಿಗಳು ಆನೆಗಳು, ಗರ್ಜಿಸುತ್ತಿರುವ ಸಿಂಹಗಳು, ನವಿಲುಗಳು, ಕೊಕ್ಕಿನಲ್ಲಿ ಹಾರ ಹಿಡಿದ ಪಕ್ಷಿಗಳು ಇತ್ಯಾದಿಯಿದ್ದು ಮಧ್ಯಭಾಗದ ಶಿವಲಿಂಗವಿರಬಹುದು. ವೆಂಕಟೇಶ್ವರನ

ಮೂರುನಾಮ, ತ್ರಿಶೂಲ, ಓಂ ಮೊದಲಾದ ಧಾರ್ಮಿಕ ಚಿನ್ಹೆಗಳು ಇರುತ್ತವೆ ಅಥವಾ ಸಾರಿಗೆ ನಿಯಂತ್ರಣ ದೀಪದ ಬಣ್ಣಗಳ ವೃತ್ತಗಳಿಂದಲೇ ಹಿಂಭಾಗ ಅಲಂಕೃತಗೊಂಡಿರುತ್ತದೆ. ಮುಂಭಾಗದಲ್ಲಿ ಎರಡು ಕಣ್ಣುಗಳು ಮಧ್ಯೆ ಸೂರ್ಯ ಇರುವಂತಹ ಚಿತ್ರವೂ ಬಹುತೇಕ ಕಾಣುತ್ತದೆ. ಆಟೋಗಳ ಒಳಭಾಗದಲ್ಲಿ ಸಾಮಾನ್ಯವಾಗಿ ಚಿತ್ರತಾರೆಯರ ಇಲ್ಲವೇ ಮುದ್ದು ಮಕ್ಕಳ ಚಿತ್ರಗಳಿರುತ್ತವೆ. ಸಿನಿಮಾ ತಾರೆಯರ ಚಿತ್ರಗಳ ವಿಷಯದಲ್ಲಿ ಗಮನಿಸಬಹುದಾದ ಒಂದು ಅಂಶವೆಂದರೆ ಇಲ್ಲಿ ವೈಯಕ್ತಿಕ ಮೆಚ್ಚುಗೆಗಿಂತ ಆಯಾಕಾಲದ ಜನಪ್ರಿಯತೆಯ ಅಂಶವೇ ಹೆಚ್ಚು ಪ್ರಭಾವ ಬೀರಿರುತ್ತವೆ. ಹೀಗಾಗಿ ಚಿತ್ರತಾರೆಯರ ಮುಖಗಳು ಬದಲಾಗುತ್ತಲೇ ಇರುತ್ತವೆ.

ಸನ್ನೆಗಳು ಪದಚಮತಾರ್ಕಗಳು, ಪ್ರಾಸ ಪದ್ಯಗಳು, ಶಿಶುಪ್ರಾಸಗಳು, ಗಾದೆಗಳು ಹೀಗೆ ಇನ್ನು ಅನೇಕ ಪ್ರಕಾರಗಳನ್ನು ವಾಹನ ಜಾನಪದದಲ್ಲಿ ಗುರುತಿಸಬಹುದು. ಅಂಥವುಗಳ ಸಂಗ್ರಹಕಾರ್ಯ ಆರಂಭವಾದಾಗ ಜಾನಪದದ ಬಗ್ಗೆ ನಮಗಿರುವ ಸಾಂಪ್ರದಾಯಿಕ ಪರಿಕಲ್ಪನೆಯನ್ನು ದಾಟಿದ ಹೊಸ ಪ್ರಕಾರಗಳೂ ಹಾಗೂ ಮಾಹಿತಿಗಳೂ ಖಂಡಿತ ಸಿಗುತ್ತವೆ. ವಾಹನಗಳ ವಿಧ, ಪ್ರದೇಶ ಸಂಸ್ಕೃತಿ ಭಾಷೆಗೆ ಅನುಗುಣವಾಗಿ ವ್ಯತ್ಯಾಸಗಳಿರುವುದನ್ನು ಗಮನಿಸಿ ಸಂಗ್ರಹ ಕಾರ್ಯ ನಡೆಯಬೇಕಾಗುತ್ತದೆ. ಉದಾಹರಣೆಗೆ ಶೈಲಿಗೆ ಸಂಬಂಧಿಸಿದಂತೆಯೇ ವಿಪುಲ ಜಾನಪದವಿದೆ. ಅದನ್ನು ರೈಲು ಜಾನಪದ ಎಂದು ಕರೆಯಬಹುದು. ಬಹಳಷ್ಟು ತಮಾಷೆ (Joke)ಗಳು ರೈಲಿಗೆ ಸಂಬಂಧಿಸಿದಂತೆ ಇವೆ. ಸರ್ಕಾರಿ ಮತ್ತು ಖಾಸಗಿ ವಾಹನಗಳು ಆಟೋ, ಲಾರಿಗಳದ್ದು ಒಂದು ರೀತಿಯಾದರೆ, ಕಾರುಗಳದ್ದೇ ಒಂದು ರೀತಿ. ಒಟ್ಟಿನಲ್ಲಿ ಸಂಗ್ರಹಕಾರ್ಯ ಈಗ ವ್ಯಾಪಕವಾಗಿ ನಡೆಯಬೇಕಾಗಿದ್ದು ಆನಂತರ ವಿಶ್ಲೇಷತ್ಮಾಕ ಅಧ್ಯಯವನ್ನು ನಡೆಸಬಹುದು.

೫.೪ ಚಾಲಕ-ನಿರ್ವಾಹಕ-ಕ್ಲೀನರ್‌ಗಳಿಗೆ ಸಂಬಧಪಟ್ಟ ಮಿತ್‌ಗಳು

ವಾಹನ ಜಾನಪದದ ಬಹುಮುಖ್ಯ ಪ್ರಕಾರ ಕಥೆಗಳದ್ದು. ಈ ಕಥೆಗಳಲ್ಲಿ ಅನೇಕ ವಿಧಗಳಿವೆ. ಇವು ಸಾಂಪ್ರದಾಯಿಕ ಅರ್ಥದ ಕಥೆಗಳಲ್ಲಿ ಕಥೆ ಅನ್ನುವುದಕ್ಕಿಂತ 'ಪ್ರಸಂಗ' ಎಂಬ ಪದ ಹೆಚ್ಚು ಸೂಕ್ತವೇನೋ. ವಾಹನ ಚಾಲಕರು ತಮ್ಮ ಡ್ರೈವಿಂಗ್ ಕೌಶಲ್ಯ ಮತ್ತು ಅಪಘಾತಗಳನ್ನು ತಪ್ಪಿಸಿದ ಬಗೆ ಇತ್ಯಾದಿಗಳನ್ನು ಕುರಿತಾಗಿ ಪ್ರಸಂಗಗಳನ್ನು ಕುರಿತು ಹೇಳಬಹುದು. ಇದೇ ರೀತಿಯ ಪ್ರಸಂಗಗಳನ್ನು ಪ್ರಯಾಣಿಕರು ಹೇಳಬಹುದು. ಜೊತೆಗೆ ಒರಟು ಡ್ರೈವಿಂಗ್, ಟಿಕೆಟ್ ಕೊಡದ ಕಂಡಕ್ಟರ್, ಡ್ರೈವರ್ ಹಾಗೂ ಕಂಡಕ್ಟರ್‌ಗಳ ಪ್ರಶಂಸನೀಯ ನಡವಳಿಕೆ ಅಥವಾ ಅಸಭ್ಯ ನಡವಳಿಕೆಗಳನ್ನು ಕುರಿತ ಪ್ರಸಂಗಗಳನ್ನು ಪ್ರಯಾಣಿಕರು ಹೇಳಬಹುದು. ಚಾಲಕರ ಪಾನಮತ್ತತೆ, ಪಾನಮತ್ತರಾಗಿದ್ದಾಗ ಮಾಡಿದ ಅಪಘಾತಗಳು, ಅಪಘಾತ ಪ್ರವೃತ್ತಿ ಇತ್ಯಾದಿ ಕುರಿತ ಕಥೆಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಒಂದೊಂದು ರಾಜ್ಯದ ಸಾರಿಗೆ ವ್ಯವಸ್ಥೆಯ ರೀತಿನೀತಿಗಳನ್ನು ಕುರಿತ ಕಥೆಗಳು ಇರುತ್ತವೆ. ಈ ಕಥೆ ಅಥವಾ ಪ್ರಸಂಗಗಳು ಬಹುತೇಕ ಒಂದು ಘಟನೆಯನ್ನು ಮಾತ್ರ ಒಳಗೊಂಡಿರುತ್ತದೆ. ಇವುಗಳ ಆಯುಸ್ಸು ತೀರಾ ಕ್ಷಣಿಕವಿರಬಹುದು. ತಮ್ಮ ಪರಿಚಿತ ವಲಯಗಳಲ್ಲಿ ಹೇಳಿ ಮುಗಿದ ನಂತರ

ಮರೆಯಾಗಬಹುದು. ಇನ್ನೂ ಕೆಲವು ದೀರ್ಘ ಕಾಲ ಉಳಿಯುತ್ತವೆ. ಉದಾಹರಣೆಗೆ ಭಾರೀ ಅಪಘಾತದ ಪ್ರಸಂಗಗಳು ಗಮನಾರ್ಹ. ಅಪಘಾತಗಳು ಸಂಭವಿಸಿದಾಗ ಹಳೆಯ ಅಪಘಾತಗಳ ನೆನೆಪು ಬರಬಹುದು. ಈ ಕಥೆಗಳು ವಾಹನ ವ್ಯವಸ್ಥೆಯ ಬಗ್ಗೆ, ಪ್ರಯಾಣಿಕ - ವಾಹನ ಸಂಬಂಧಗಳ ಬಗ್ಗೆ, ಮನೋವೃತ್ತಿಗಳ ಬಗ್ಗೆ ಮಾಹಿತಿ ನೀಡುತ್ತವೆ. ಈ ವಿಷಯ ಕುರಿತಂತೆ ಒಂದೆರಡು ಇಲ್ಲಿವೆ; ವಾಹನ ಚಾಲಕರು ಅಶ್ಲೀಲವಾಗಿ ಮಾತಾಡುತ್ತಾರೆ. ಅವರು ವಾಹನದ ಭಾಗಗಳ ಹೆಸರುಗಳನ್ನು ಎರಡು ಅರ್ಥದಲ್ಲಿ ಬಳಸಿ ಮಜಾ ತೆಗೆದುಕೊಳ್ಳುವ ಪ್ರವೃತ್ತಿಯವರು ಎಂಬುದು ಒಂದು ಅಭಿಪ್ರಾಯ. ಅಂಥ ಕೆಲವು ಪ್ರಸಂಗಗಳನ್ನು ಬಿ.ಟಿ.ಎಸ್. ಪ್ರಯಾಣಿಕರೊಬ್ಬರು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

೧. ಒಬ್ಬಳು ಲೇಡಿ ಬಸ್ ಹತ್ತಿದ್ಲು, ಡ್ರೈವರ್ ಸಡನ್ ಆಗಿ ಬ್ರೇಕ್ ಹಾಕಿದಾ ಅವಳು ಮುಂದಕ್ಕೆ ಮುಗ್ಗುರಿಸೋಥರಾ ಆಗಿ ಅವನ ಕಡೆ ನೋಡಿದ್ರೆ ಹಿಡ್ಕೊಳಮ್ಮಾ ರಾಡ್‌ನ, ನಿನ್ಮುಂದೇನೇ ಇಲ್ವಾ ಇಷ್ಟುದ್ದಕ್ಕೂ ಅಂದೆ.

೨. ಆ ಡ್ರೈವರ್ ನಂಗೊಂದ್ ಸ್ವಲ್ಪ ಕ್ಲೋಸ್. ಒಂದಿನ ಹೀಗೇ ಮುಂದಿನ ಸೀಟ್ನಲ್ಲಿ ಕೂತು ತೂಕಡಿಸ್ತ ಇದ್ದೆ. ಡ್ರೈವರ್ ಸಡನ್‌ಆಗಿ ಬ್ರೇಕ್ ಹಾಕ್ದ. ಮುಗ್ಗುರಿಸಿದೆ. ಏನಯ್ಯ ಸರಿಯಾಗಿ ಹಾಕಕ್ಕಾಗಲ್ವೇನಯ್ಯ ಅಂದೆ. 'ಅದೇ ಸಾರ್ ನಾನು ಹೇಳ್ತಾನೇ ಇರ್ತೀನಿ ಏನಾದ್ರೂ ಸಿಕ್ರೆ ಹಾರನ್ ಒತ್ತು ಅಂತ. 'ಹಾರನ್' ಒತ್ತಕ್ಕೂ ಇವ್ನೀಗೆ ಭಯ" ಅಂತ ಕಂಡಕ್ಟರ್ ಹೇಳಿದ. ಆ ಡ್ರೈವರ್‌ಗಳ್ದೂ ಕಂಡಕ್ಟರ್‌ಗಳ್ದೂ ಒಂದು ಅಡ್ಜಸ್ಟ್‌ಮೆಂಟ್. ಯಾರಾದ್ರೂ ಚೆನ್ನಾಗಿರೋ ಹೆಂಗ್ಸು ಬಸ್ ಹತ್ತೋವಾಗ್ಲೇ ಇವ್ನು ಕಣ್ ಹೊಡೆದಿರುತ್ತಾನೆ. ಇವ್ನು ಅವಳಿಗೆ ಟಿಕೆಟ್ ಕೊಡುವಾಗ ಮಿರರ್‌ನಲ್ಲಿ ನೋಡಕೊಂಡಿದ್ದು ಡ್ರೈವರ್ ಸರಿಯಾಗಿ ಬ್ರೇಕ್ ಹಾಕ್ತಾನೆ. ಅವಳು ಸೀದಾ ಕಂಡಕ್ಟರ್ ಮೇಲೆ ಬೀಳೋ ಹಾಗೆ..... ಎಂದು ಮೇಲೆ ತಿಳಿಸಿದ ಪ್ರಸಂಗಕ್ಕೆ ನಿರೂಪಕರು ಸೇರಿಸಿ ಹೇಳಿದರು. ವಾಹನ ಚಾಲಕ ಮತ್ತು ಕಂಡಕ್ಟರ್ ಹಾಗೂ ಇದಕ್ಕೆ ಸಂಬಂಧಪಟ್ಟ ನೌಕರರು ವಾಹನದ ಪರಿಭಾಷೆಯನ್ನು ಹೆಣ್ಣಿಗೆ ಅನ್ವಯಿಸಿ ಬಳಸುವುದೇ ಒಂದು ಸಂಪ್ರದಾಯವಿದೆ. ಇದು ಈ ಉದ್ಯೋಗಿ ವರ್ಗದವರಿಗೆಲ್ಲಾ ಕೇಳಿದ ಕೂಡಲೇ ಅರ್ಥವಾಗುತ್ತದೆ. ಈ ಪರಿಭಾಷೆಯ ಕೆಲವು ಉದಾಹರಣೆಗಳು - ಹಾರನ್ ಮತ್ತು ಹೆಡ್‌ಲೈಟ್ಸ್ - ಸ್ತನ; ಓಲ್ಡ್‌ಮಾಡಲ್ - ಮುದುಕಿ. ಗ್ಯಾರೇಜಿಗೆ ಬಿಡುವುದು - ಹೆಂಡತಿಯನ್ನು ಹೆರಿಗೆಗೆ ಕಳಿಸಿರುವುದು, ಗಾಡಿ - ಸೂಳೆ. ಇತ್ಯಾದಿ ಬಹುತೇಕ ರಸಪ್ರಸಂಗಗಳ ಮತ್ತು ಹಾಸ್ಯಪ್ರಸಂಗಗಳ ವಸ್ತು ಹಾಗೂ ಗುರಿ ಹೆಣ್ಣೇ ಆಗಿರುವುದು ಗಮನಾರ್ಹ.

ಇಂಥ ಒಂದೆರಡು ಉದಾಹರಣೆಗಳು - ಒಬ್ಬ ಆಂಗ್ಲೋ ಇಂಡಿಯನ್‌ಲೇಡಿ ಬಸ್ ಹತ್ತಿದಲ್ಲಿ "ಕಂಡಕ್ಟರ್ ಡಸ್‌ದಿಸ್ ಗೋಸ್ ಟು ಸಿಂಗಾ ಇನ್‌ಪಾಳ್ಯ (ಸಿಂಗಯ್ಯನ ಪಾಳ್ಯ) ಅಂತಕೇಳಿದ್ಲು. ಆಗ ಕಂಡಕ್ಟರ್ ಏನ್ ಹೇಳ್ದಾ ನೋ ಮೇಡ್‌ಂ ದಿಸ್ ಬಸ್ ಗೋಸ್ ಟು ಸಿಂಗಾಔಟ್‌ಪಾಳ್ಯ!

ಆಯಮ್ಮ ಆಗಷ್ಟೆ ಡ್ರೈವಿಂಗ್ ಕಲ್ತಿದ್ಲು. ಆಕ್ಸಿಡೆಂಟ್ ಆಯ್ತು. ಕೂದಲೂ ಕೊಂಕಿರಲಿಲ್ಲ. ಆದ್ರೆ ಕಾರಿಗೆ ೫-೬ ಸಾವಿರ ರೂ ನಷ್ಟ ಹಾನಿಯಾಯಿತು. ಗ್ಯಾರೇಜ್‌ಗೆ ತಳ್ಳಿದ್ಲು. ರಿಪೇರಿ ಆಯ್ತು. ವಾರದ ಬಳಿಕ ಕಾರು ತಗೊಂಡು ಹೋದ್ಲು... ಹತ್ತು ನಿಮಿಷದಲ್ಲಿ ಕಾರಿನ ಪಂಕ್ಚರ್ ಆದ ಚಕ್ರವೊಂದನ್ನು ಎತ್ತಿಸಿಕೊಂಡು ಅದೇ ಗ್ಯಾರೇಜ್‌ಗೆ ಬಂದ್ಲು, ಗ್ಯಾರೇಜ್‌ನವನು "ಏನಮ್ಮ ಈ ಬಾರಿಯ ಆಕ್ಸಿಡೆಂಟ್‌ನಲ್ಲಿ ಇದೊಂದೇನಾ ಉಳಿದದ್ದು? ಅಂತ ಕೇಳಿದ!

ಈ ರೀತಿಯ ಪ್ರವೃತ್ತಿ ಎಲ್ಲ ವರ್ಗದ ಹಾಗೂ ಎಲ್ಲ ದೇಶದ ಜನರಲ್ಲಿಯೂ ಇರುವುದೆ? ಇದು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವೆ? ಇಂಥ ಮನೋಧರ್ಮವನ್ನು ಪ್ರಭಾವಿಸುವ ಅಂಶಗಳು ಯಾವುವು? ಮುಂತಾದ ಅಂಶಗಳ ಅಧ್ಯಯನಕ್ಕೆ ಇಂತಹ ಪ್ರಸಂಗಗಳು ಸಾಮಗ್ರಿ ಒದಗಿಸುತ್ತವೆ.

ವಾಹನ ವ್ಯವಸ್ಥೆಯ ಮೂಲಕ ಒಂದು ಸಂಸ್ಕೃತಿಯಲ್ಲಿ ಅನೇಕ ನುಡಿಗಟ್ಟುಗಳ ಸೇರ್ಪಡೆಯಾಗಬಹುದು. ಸೂಪರ್‌ಜೆಟ್, ಎತ್ತಿನಗಾಡಿ, ಎಕ್ಸ್‌ಪ್ರೆಸ್, ಶಟ್ಲ್ ಏರೋಪ್ಲೇನ್ ಇತ್ಯಾದಿ ಪದಗಳು ಬದುಕಿನ ಇತರ ಸಂದರ್ಭಗಳ ವೇಗವನ್ನು ಹೋಲಿಸುವುದಕ್ಕೆ ಬಳಕೆಯಾಗುತ್ತವೆ. ರೈಲು, ರೈಲುಬಿಡು, ಹಳಿತಪ್ಪಿ ಮಾತಾಡು, ಟ್ರೈನ್‌ಹೋದ ಮೇಲೆ ಟಿಕೆಟ್ ಸಿಗೋಲ್ಲ, ಮಿಸ್ಡ್ ದಿ ಟ್ರೈನ್, ನಾನ್‌ಸ್ಟಾಪ್, ಮುಂತಾದ ಅನೇಕ ಪದಗಳು ವಿಶೇಷ ಅರ್ಥದಲ್ಲಿ ಬಳಕೆಯಾಗುವುದು ರೂಢಿಯಾಗಿ ಬಿಟ್ಟಿದೆ. ಇದೇ ರೀತಿ ಚಾಲಕ ವರ್ಗದವರೇ ಕೆಲವು ನುಡಿಗಟ್ಟುಗಳನ್ನು ಜಾರಿಗೆ ತರುತ್ತಾರೆ. ಬಸ್ಸಿಗೆ ಹಸು ಅಥವಾ ಎತ್ತು ಅಡ್ಡ ಬಂದರೆ ಬ್ರೇಕ್ ಇನ್ಸ್‌ಪೆಕ್ಟರ್ ಅನ್ನುತ್ತಾರೆ. ಕಡಿದಾದ, ಕಿರಿದಾದ ರಸ್ತೆಗಳಿಗೆ ಚಾಮುಂಡಿ ಘಾಟ್ ರಸ್ತೆ ಎಂದು ಹೆಸರಿಸುತ್ತಾರೆ ಇತ್ಯಾದಿ. ವಾಹನ ಜಾನಪದದಲ್ಲಿ ಬೈಗುಳಗಳೂ ಸೇರುತ್ತವೆ. ಸಾಮಾನ್ಯವಾಗಿ ಚಾಲಕರು ಬಳಸುವ ಬೈಗುಳಗಳು ಅವರಿಗೇ ವಿಶಿಷ್ಟ ಅತ್ಯಂತ ಹೊಲಸು ಮಾತುಗಳನ್ನು ಅವರು ಬಳಸುತ್ತಾರಾದರೂ 'ಮನೇಲಿ ಹೇಳಿಬಂದಿದ್ದೀಯಾ' ಎಂದು ವಾಹನಕ್ಕೆ ಅಡ್ಡವಾದವನಿಗೆ ಬಳಸುವುದು ಸಾರ್ವತ್ರಿಕ. ಇದು ಅತ್ಯಂತ ಸೌಮ್ಯರೂಪದ ಆದರೆ ತೀವ್ರ ಪರಿಣಾಮವನ್ನುಂಟುಮಾಡುವಂಥ ಬೈಗುಳ ಈ ರೀತಿಯ ವಿಶೇಷ ಬೈಗುಳಗಳನ್ನು ಕಲೆಹಾಕಿ ಅಧ್ಯಯನಿಸಬಹುದು.

<u>ಕೊನೆ ಟಿಪ್ಪಣಿ</u>

೧. ಡಾ|| ಬಸವರಾಜ ಸಬರದ 'ಬಂಡಾಯ ಕಾವ್ಯ ಮತ್ತು ಜಾನಪದ' - ಪುಟ ೬೦.
೨. ಸಂ. ಪ್ರೊ. ಡಿ. ಲಿಂಗಯ್ಯ 'ಜಾನಪದ ಸ್ವರೂಪ ಮತ್ತು ಸಾಹಿತ್ಯ' ಪುಟ ೧೧೨.
೩. ವಿಲಿಯಂ ಮಾಡ್ತ 'ಸಂಕೇತ ವಿಜ್ಞಾನ ಜಾನಪದ' - ಪುಟ ೫೨.
೪. ಸಂ. ರಂಗಾರೆಡ್ಡಿ ಕೋಡಿರಾಂಪುರ, 'ಜಾನಪದ' ೧೯೯೩ - ಪುಟ ೯೦.
೫. ಸಂ. ರಂಗಾರೆಡ್ಡಿ ಕೋಡಿರಾಂಪುರ, 'ಜಾನಪದ' ೧೯೯೩ - ಪುಟ ೬೩.
೬. ಶೈಲಜಾ ಹೂಗಾರ, ಪ್ರಜಾವಾಣಿ ದಿನ ಪತ್ರಿಕೆ, ೨೧.೯.೨೦೦೩, ಮೆಟ್ರೊವಾಣಿ.
೭. ಡಾ|| ಕೆ. ಆರ್. ಸಂಧ್ಯಾರೆಡ್ಡಿಯವರ 'ನಗರ ವಾಹನಗಳಲ್ಲಿ ಜಾನಪದ' ಎಂಬ ಲೇಖನ.

[illegible]

[illegible]

[illegible]

[illegible]

[illegible]

ಅಧ್ಯಾಯ - ೬

ಲಿಖಿತ ಜಾನಪದ

ಲಿಖಿತ ಜಾನಪದ

ಜಾನಪದದ ಇತ್ತೀಚಿನ ಸ್ಥಿತ್ಯಂತರಗಳ ಬಗ್ಗೆ ಚರ್ಚಿಸುವಾಗ ಮೌಖಿಕ ರೂಪದಲ್ಲಿರುವುದು ಮಾತ್ರ ಜಾನಪದ. ಲಿಖಿತರೂಪದಲ್ಲಿ ಇರುವುದು ಜಾನಪದವಲ್ಲ ಎಂಬ ಹಳೆಯ ಪರಿಕಲ್ಪನೆಯ ಬಗ್ಗೆ ಚಿಂತನೆಯನ್ನು ಬಿಟ್ಟು, ಆಧುನಿಕ ಜಾನಪದವು ಬದಲಾದ ಪರಿಸರದಲ್ಲಿ ಎಂತಹ ವಿಶಿಷ್ಟ ಪ್ರಕಾರಗಳಲ್ಲಿ, ಮಾದರಿಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಗುರುತಿಸುವ ಕಾರ್ಯ ಜರೂರು ಆಗಬೇಕಾಗಿದೆ. ಏಕೆಂದರೆ ಜಾನಪದದ ಬಗ್ಗೆ ೨೦ನೇ ಶತಮಾನದ ಪ್ರಾರಂಭದಲ್ಲಿದ್ದ ಆಲೋಚನೆಗಳು ಮತ್ತು ಈಗ ಇರುವ ಜಾನಪದ ಆಲೋಚನಾಕ್ರಮಗಳು ಬದಲಾಗಿವೆ. ಈ ಶತಮಾನದಲ್ಲಿ ಅನೇಕ ಜಾನಪದ ಸೃಷ್ಟಿಸುವ ಸಮುದಾಯಗಳು ಅಕ್ಷರಜ್ಞಾನಕ್ಕೆ ಇಡೀ ಬದುಕನ್ನು ತೆರೆದುಕೊಂಡಿವೆ. ಆಧುನಿಕತೆಯ ಬೆಳಕನ್ನು ಕಾಣದಂತಹ ಎಷ್ಟೋ ಬುಡಕಟ್ಟುಗಳು ಶಿಕ್ಷಣದ ಕಡೆ ಮುಖಮಾಡಿವೆ. ಇದರಿಂದಾಗಿ ಜಾನಪದ ಅಭಿವ್ಯಕ್ತಿಗೊಳ್ಳುವ ನೆಲೆಗಳು ಬದಲಾಗುತ್ತಿವೆ. ಅಲ್ಲದೆ ಬದಲಾಗಲು ಎಲ್ಲಾ ಧಾತುಗಳನ್ನು ಮಡಿಲಲ್ಲಿಟ್ಟುಕೊಂಡಿದೆ. ಹಾಗೆಂದ ಮಾತ್ರಕ್ಕೆ ಪರಂಪರಾಗತ ಮಾದರಿಗಳು ಆಧುನಿಕ ಜಾನಪದದಲ್ಲಿ ಸಿಗುವುದೇ ಇಲ್ಲ ಎಂದೇನೂ ಅರ್ಥವಲ್ಲ. ಜಾನಪದವು ಕೆಲವೊಂದು ಹಳೆಯ ಮಾದರಿಗಳ ನಾಶದೊಂದಿಗೆ ಹೊಸ ಮಾದರಿಯ ಆಲೋಚನೆಯ ಸಿದ್ಧಾಂತಗಳ ಸೃಷ್ಟಿಗೆ ತನ್ನನ್ನು ತಾನೆ ತೆರೆದುಕೊಳ್ಳುತ್ತಿದೆ.

ಯಾಂತ್ರೀಕೃತ ಜೀವನಕ್ರಮದಲ್ಲಿ ಜಾನಪದ ಅತ್ಯಂತ ಆಳದಲ್ಲಿ ವಿಭಿನ್ನ ಸ್ವರೂಪಗಳನ್ನು ಪಡೆದುಕೊಳ್ಳುತ್ತಿದೆ. ಇವತ್ತು ಹಳೆಯ ಜಾನಪದ ಪ್ರಕಾರಗಳು ನಶಿಸುತ್ತವೆ ಎಂದರೆ ಈ ಬಗೆಯ ಆಂತರಿಕ ರೂಪಾಂತರಗಳ ವಿಕಾಸಕ್ಕೆ ಒಳಗಾಗುತ್ತಿವೆ ಎಂದೇ ಅರ್ಥ. ಕರಕುಶಲ ತಾಂತ್ರಿಕ ಸಮುದಾಯಗಳು, ರೂಪಿಸಿಕೊಂಡಿದ್ದ ಜಾನಪದದಲ್ಲಿ (ವೃತ್ತಿ ಜಾನಪದ) ಪ್ರಾಚೀನ ಯುಗದ ತಂತ್ರಜ್ಞಾನವಿತ್ತು. ಆ ಬಗೆಯ ತಾಂತ್ರಿಕ ಪರಿಣಿತಿಯಿಂದ ಪರಂಪರೆಯನ್ನು ಕಟ್ಟಿಕೊಳ್ಳಲಾಗಿತ್ತು. ಹಾಗಾಗಿಯೇ ವೃತ್ತಿ ಜಾನಪದದಲ್ಲಿ ಬಹುರೂಪಗಳು ಬಹು ಕಥನಗಳು ಬೆಳೆದವು. ಕರಕುಶಲ ತಾಂತ್ರಿಕತೆಯ ಪಾರಂಪರಿಕ ಸ್ವರೂಪ ಹೊಸಯುಗದ ಚಾರಿತ್ರಿಕ ಸಾಮಾಜಿಕ ರೂಪಾಂತರಗಳ ಅನಿವಾರ್ಯತೆಗೆ ಒಳಗಾದಂತೆಲ್ಲ ತಮ್ಮ ಮೂಲ ಜಾನಪದದ ಸಂದರ್ಭದಲ್ಲಿ ಹೊಸಯುಗದ ತಾಂತ್ರಿಕತೆಯನ್ನು ಅನುಸರಿಸಲೇ ಬೇಕಾಗುತ್ತದೆ ಆ ಅಭಿಪ್ರಾಯದಲ್ಲಿ ೨ ಅಂಶಗಳನ್ನು ಸ್ಪಷ್ಟೀಕರಿಸಿಕೊಳ್ಳಬಹುದು.

೧. ಜಾನಪದವೆಂಬುದು ನಿರಂತರ ಪ್ರಕ್ರಿಯೆ

೨. ಜಾನಪದ ಪ್ರಸ್ತುತದಲ್ಲಿ ಭಿನ್ನ ಸ್ವರೂಪಗಳನ್ನು ಪಡೆಯುತ್ತಿದೆ.

ಅಂದರೆ ಜಾನಪದವೆಂದರೆ ಪರಂಪರೆಯಿಂದಲೇ ಬಂದದ್ದು, ಮೌಖಿಕವೇ ಇದರ ಪ್ರಧಾನ ಲಕ್ಷಣ, ತಲತಲಾಂತರಗಳಿಂದ ಉಳಿದುಬಂದದ್ದು. ಆದರೆ ನಿಷ್ಪ್ರಯೋಜಕ. ಕಾರಣ ಇಂದು ಜಾನಪದವು ತನ್ನ ಅಂತಸತ್ವದೊಳಗೆ ಕಾಲಕ್ಕೆ ತಕ್ಕಂತೆ ಬದಲಾವಣೆಯ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಇಲ್ಲವಾದರೆ ಕವಿರಾಜಮಾರ್ಗದಲ್ಲಿ ದೊರೆಯುವ ಹಲವು ದೇಸಿ ಜಾನಪದ ಪ್ರಕಾರಗಳು ೨೧ನೇ ಶತಮಾನದವರೆಗೂ ಬಹುಪಾಲು ಉಳಿದು ಬರುತ್ತಿರಲಿಲ್ಲ. ಹಾಗೆಯೇ ೨೦-೨೧ ಶತಮಾನದ ಅತಿನಾಗರಿಕತೆಯ ಸೋಗಿನಲ್ಲೂ ಅವು ಗಟ್ಟಿಯಾದ ಸ್ಥಾನವನ್ನು ಪಡೆದವು. ಆದರೆ ಅಭಿವ್ಯಕ್ತಿಗೊಳ್ಳುವ ನೆಲೆಗಳು ಮಾತ್ರ ಬೇರೆಯಾಗಿವೆ. ಆ ನೆಲೆಗಳ ಅನ್ವೇಷಣೆಯ ಈ ಅಧ್ಯಯನದ ಉದ್ದೇಶ.

ಇಂದು ಜಾನಪದವನ್ನು ನೋಡುವ ದೃಷ್ಟಿ ಬದಲಾಗಿದೆ. ಅನೇಕ ವಿದ್ವಾಂಸರ ಕ್ಷೇತ್ರಕಾರ್ಯ (Fieldwork) ಅಧ್ಯಯನದ ಪರಿಶ್ರಮದಿಂದಾಗಿ ಅನೇಕ ಸಿದ್ಧಾಂತಗಳು, ಹೊಸ ಹೊಸ ಪರಿಕರಗಳ ಸಹಾಯದಿಂದ ಜನಪದರ ತೆಕ್ಕೆಯೊಳಗೆ ಇರುವ ಜಾನಪದವನ್ನು ಗುರುತಿಸಿದ್ದಾರೆ. ಅದರ ಫಲವೇ ಇಂದು ಕಾರ್ಖಾನೆ ಜಾನಪದ, ಜೈಲು ಜಾನಪದ, ಗ್ರಾಮ ಜಾನಪದ, ನಗರ ಜಾನಪದ, ವಾಹನ ಜಾನಪದ, ಕಂಪ್ಯೂಟರ್ ಜಾನಪದ, ಇವೆಲ್ಲದರ ನಡುವೆ ಲಿಖಿತ ಜಾನಪದವೂ ಒಂದು. ಕನ್ನಡದಲ್ಲಿ ಈ ರೀತಿಯ ಅಧ್ಯಯನ ವಿಧಾನ ರೂಪುಗೊಂಡಿದ್ದನ್ನು ಡಾ. ಶಿವರಾಮ ಶೆಟ್ಟಿ ತಮ್ಮ 'ಸಸ್ಯ ಜಾನಪದ' ಕೃತಿಯಲ್ಲಿ ಈ ರೀತಿಯ ವಿಶ್ಲೇಷಿಸುತ್ತಾರೆ.

''ಈ ಬಗೆಯ ಅಧ್ಯಯನ ವಿಧಾನ ಕನ್ನಡದಲ್ಲಿ ರೂಪುಗೊಂಡಿದ್ದು, ವಿಷಯನಿಷ್ಠ ಜಾನಪದದ(Thematic Folklore) ಮಾದರಿಯಲ್ಲಿ, ಅಮೇರಿಕದಲ್ಲಿ ರೂಪುಗೊಂಡ ಈ ಅಧ್ಯಯನ ವಿಧಾನ (Method) ಕನ್ನಡಕ್ಕೆ ಆಮುದಿತವಾಗಿ ಹಲವು ಬಗೆಯ ಜಾನಪದಗಳ ಹುಟ್ಟಿಗೆ ಕಾರಣವಾಗಿದೆ. ವಿಷಯ ನಿಷ್ಠ ಅಧ್ಯಯನವೇ ಆಗಿರುವ ಜಾನಪದ ಅಧ್ಯಯನವು ಜಾನಪದ ಬದುಕಿನ ಮೂರ್ತ ರೂಪವನ್ನೇ ಜಾನಪದವಾಗಿ ಪರಿಭಾವಿಸುತ್ತದೆ. ಹೀಗಾಗಿ ವ್ಯಕ್ತಿ ರೂಪಗಳಲ್ಲಿ ಅದು ಭಾಷಿಕವಾಗಿರಬಹುದು, ಆಚರಣಾತ್ಮಕವಾಗಿರಬಹುದು. 'ಮಾಹಿತಿ' ಎನ್ನುವ ವಿವರಗಳ ಆಧಾರದಲ್ಲಿ 'ವಿಷಯ'ವನ್ನು ಜಾನಪದವಾಗಿ ಗುರುತಿಸಲಾಗುತ್ತದೆ[೧]. ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ಈ ರೀತಿಯ ಅಧ್ಯಯನ ಜಾನಪದ ಕನ್ನಡದಲ್ಲಿ ಪ್ರಸ್ತತದಲ್ಲಿ ಹೆಚ್ಚು ನಡೆಯುತ್ತಿದೆ. ನಿರ್ದಿಷ್ಟ ವಿಷಯ ಮತ್ತು ಜಾನಪದದ ನಡುವಿನ ಪಳೆಯುಳಿಕೆ ಸಂಬಂಧ ಹಿಂದಿನಿಂದಲೂ ಅಮೂರ್ತದಲ್ಲಿದ್ದು ಇಂದು ಮೂರ್ತಗೊಳಿಸಲಾಗುತ್ತಿದೆ. ಇದರ ವೈವಿಧ್ಯಮಯ ಹರವು ಎಂದಿಗಿಂತಲೂ ಇಂದು ಹೆಚ್ಚುತ್ತಿದೆ. ನಿರ್ದಿಷ್ಟ ಚಾರಿತ್ರಿಕ ಕಾಲಘಟ್ಟದಲ್ಲಿ ಸಂರಚನೆಗೊಂಡ ಸಾವಯವ ಸಂಬಂಧದಲ್ಲಿ ಈ ಸಂಬಂಧವನ್ನು ಗುರುತಿಸಿಕೊಂಡು ಪ್ರಸ್ತುತದಲ್ಲಿ ಇದರ ಸ್ವರೂಪ ಎಂತಹದ್ದು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ.

ಹಿಂದೆ ಜಾನಪದವು ಕೃಷಿಸಂಸ್ಕೃತಿಯ ಉತ್ಪನ್ನ. ಆದ್ದರಿಂದಲೇ ಕೃಷಿ ಮತ್ತು ಹಳ್ಳಿಗರ ಜೀವನಕ್ಕೂ ಇದಕ್ಕೂ ಅವಿನಾಭಾವ ಸಂಬಂಧವಿತ್ತು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಜಾನಪದವು ಎಲ್ಲಾ ಸಮುದಾಯಗಳಲ್ಲಿ, ಪ್ರದೇಶಗಳಲ್ಲಿ, ಪ್ರಕಾರಗಳಲ್ಲಿ ವಿಕಸತನ ಕಂಡುಕೊಂಡಿದೆ. ಹಿಂದೆ ಇದ್ದ ಪರಿಕಲ್ಪನೆಯಿಂದ ಮುಕ್ತಿ ಪಡೆದು ವೈಜ್ಞಾನಿಕ ಅಧ್ಯಯನದ ದೃಷ್ಟಿ ಇತ್ತೀಚೆಗಷ್ಟೆ ನಡೆಯುತ್ತಿದೆ. ಜಾನಪದಕ್ಕೆ ಇಂತಿಷ್ಟೆ ವಿಷಯಗಳು ಸೇರುತ್ತವೆ, ಇವು ಸೇರುವುದಿಲ್ಲ ಎಂದು ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ.

ಆಧುನಿಕತೆಯಲ್ಲಿ ಗೋಚರಿಸುವ ಜಾನಪದವನ್ನು ಅಭ್ಯಾಸ ಮಾಡುವಾಗ ಅಧ್ಯಯನದ ಅನುಕೂಲತೆಗೋಸ್ಕರ ನಮ್ಮ ನಮ್ಮ ಪರಧಿಗಳ ಮಿತಿಯಲ್ಲೆ ಅಧ್ಯಯನದ ಮಾದರಿಯನ್ನು ನಿರೂಪಿಸಿಕೊಳ್ಳಬೇಕಾಗುತ್ತದೆ. ಆಗ ನಾವು ಯಾವ ಪ್ರಕಾರದ ಜಾನಪದ ಅಧ್ಯಯನ ಮಾಡುತ್ತಿದ್ದೇವೆ ಎಂಬುದನ್ನು ಅವಲಂಬಿಸಿ ಬದಲಾಗಲೂಬಹುದು. ಈ ಅಧ್ಯಯನದ ಮಾದರಿಯ ಮೂಲಕ ಆಧುನಿಕ ಜಾನಪದ ಸ್ವರೂಪ ವ್ಯಾಪ್ತಿ ಅಧ್ಯಯನದ ವಿಧಾನಗಳು ಹಿಂದಿನ ಜಾನಪದಕ್ಕೂ ಇಂದಿನ ಜಾನಪದಕ್ಕೂ ಇರುವ ಪಳೆಯುಳಿಕೆ ತಂತುಗಳ ಸಂಬಂಧದ ಅಂಶಗಳನ್ನು ತಿಳಿಯಬಹುದು.

ಆಧುನಿಕ ಜಾನಪದ ಒಂದು ಪ್ರಕಾರವಾದ ಲಿಖಿತ ಜಾನಪದವನ್ನು ವಿವೇಚಿಸುವಾಗ ನನ್ನ ಅಧ್ಯಯನದ ಪರಿಮಿತಿಯಲ್ಲಿ ತೋರಿಸಲು ಸಾಧ್ಯ. ಮುಖ್ಯವಾಗಿ ಲಿಖಿತ ಜಾನಪದವನ್ನು ಕೆಳಗಿನಂತೆ ವಿಭಾಗಿಸಿಕೊಂಡು

೬.೧ ಜೀವನ ಮೌಲ್ಯಸಾರುವ ನೀತಿ ಬರಹಗಳು

೬.೨ ಕಾಮ - ಪ್ರೇಮ ಪ್ರಚೋದಿತ ಬರಹಗಳು

೬.೩ ಹಾಸ್ಯಕ್ಕೆ ಸಂಬಂಧಪಟ್ಟ ಬರಹಗಳು

೬.೧ ಜೀವನ ಮೌಲ್ಯ ಸಾರುವ ನೀತಿ ಬರೆಹಗಳು

ಪ್ರಾಣಿಗಳಿಗೂ ಮನುಷ್ಯರಿಗೂ ಬೇರ್ಪಡಿಸುವುದೇ ಸಂಸ್ಕೃತಿ. ಸಂಸ್ಕೃತಿ ಇಲ್ಲದಿದ್ದರೆ ಇವೆರಡರ ನಡುವೆ ಅಷ್ಟೊಂದು ವ್ಯತ್ಯಾಸ ಕಾಣುತ್ತಿರಲಿಲ್ಲ. ಸಾಹಿತ್ಯವು ಸಂಸ್ಕೃತಿಯ ಒಂದು ಅಂಗ. ಸಾಹಿತ್ಯವು ಸಾಮಾಜಿಕ ನೈತಿಕತೆಯ ಪ್ರತಿಬಿಂಬ. ಇಂತಹ ನೈತಿಕತೆಯನ್ನು ಹೊತ್ತ ಸಂದೇಶಗಳು ಜಾನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ನೀತಿ ಅಥವಾ ನೈತಿಕತೆಯ ಪ್ರಧಾನ ಅಂಶ ಜಾನಪದದಲ್ಲಿ ಕಾಣಬಹುದು. ಪ್ರಾಣಿ ರೂಪಕ ಕಥೆಗಳಲ್ಲಿ, ರಾಜಮಹಾರಾಜರ ಕಥೆಗಳಾಗಲಿ ಇವೆಲ್ಲ ಅಂತಿಮವಾಗಿ ನೀತಿಯನ್ನು ಸಾರಲು ಹುಟ್ಟಿಕೊಂಡ ರೂಪಕಗಳು, ಜಾನಪದ ಪ್ರಕಾರಗಳಾದ ಕಥೆ, ಕಥನಗೀತೆ, ಪುರಾಣ, ಲಾವಣಿಗಳು ಅರ್ಥವಂತಿಕೆಯಲ್ಲಿ ಸಮಾಜಕ್ಕೆ ಅಗತ್ಯವಾಗಿ ಸಾರುವಂತಹ ಸಾಮಾಜಿಕ

[illegible]

[illegible]

[illegible]

> [illegible]

> [illegible]

[illegible]

ನಿಷ್ಠೆ, ಒಳ್ಳೆಯತನ, ನೈತಿಕತೆ ಮೌಲ್ಯಗಳು ಇವೆಲ್ಲವುಗಳನ್ನು ರೂಪ ಕಾತ್ಮವಾಗಿ ಕಟ್ಟಿಕೊಡುತ್ತವೆ. ಜಾನಪದ ಸಾಹಿತ್ಯ ಜನರ ಬದುಕಿನ ಚರಿತ್ರೆಯನ್ನು ಹೊತ್ತಿದೆ. ಅದಕ್ಕಾಗಿ ಸಾಂಸ್ಕೃತಿಕ ಬದುಕಿನ ದಾಖಲೀಕರಣ ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ.

ಜೀವನ ಮೌಲ್ಯಗಳು ಜನಪದರ ಬದುಕಿನಲ್ಲಿಯ 'ಘಟ್ಟಗಳು'. ಜನರು ತಮ್ಮ ಜೀವನದ ಅರ್ಥವಂತಿಕೆಯನ್ನು ಸಾರ್ಥಕತೆಯನ್ನು ಇಂತಹ ಮೌಲ್ಯಗಳನ್ನಾದರಿಸಿಯೇ ಕಂಡುಕೊಳ್ಳುತ್ತಾರೆ. ಈ ಜೀವನ ಮೌಲ್ಯಗಳ ವ್ಯಾಪಕ ನಿರೂಪಣೆಯನ್ನು ಜನಪದ ಪ್ರಕಾರಗಳಾದ ಗಾದೆ, ಒಗಟು, ಒಡಪುಗಳಲ್ಲಿ ತೀರಾ ವಿರಳವಾಗಿ ಕಾಣುತ್ತೇವೆ. ಪ್ರಸ್ತುತ ಬದುಕಿಗೆ ಹೆಚ್ಚು ಹತ್ತಿರವಿರುವ ಬಯಲಾಟದ ಕಥೆಗಳಲ್ಲಿ ಮತ್ತು ಸಾಮಾಜಿಕ ಕಥನ ಕಾವ್ಯಗಳಲ್ಲಿ ಅತ್ಯಂತ ದಟ್ಟವಾಗಿ ಈ ಜೀವನ ಮೌಲ್ಯಗಳ ಪ್ರತಿಪಾದನೆ ಕಂಡು ಬರುತ್ತದೆ[೨].

ಜಾನಪದ ಪ್ರಕಾರಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳಿಗೆ ತನ್ನ ಪ್ರಾಣತೆತ್ತ ಉದಾಹರಣೆಗಳುಂಟು. ಈ ಜೀವನ ಮೌಲ್ಯಗಳು ಗಾದೆಗಳಲ್ಲಿ, ಒಗಟುಗಳಲ್ಲಿ, ಕಥೆಗಳಲ್ಲಿ, ಕಥನಗೀತೆಗಳಲ್ಲಿ ನೇರವಾಗಿಯೋ ಇಲ್ಲವೇ ಪರೋಕ್ಷವಾಗಿಯೋ ಜೀವನೋತ್ಸಾಹ ಸಾಹಸಗಾಥೆಯಲ್ಲಿ ಕಾಣಬಹುದು. ಭಾಗೀರಥಿ, ಗಾದ್ರಿಪಾಲನಾಯಕ, ಮಂಟೇಸ್ವಾಮಿ, ಜುಂಜಪ್ಪ ಇಂತಹ ಹಲವಾರು ಸಾಂಸ್ಕೃತಿಕ ನಾಯಕ ಮತ್ತು ನಾಯಕಿಯರು ಊರಿನ ಹಿತಕ್ಕಾಗಿಯೋ ಇಲ್ಲವೇ ಮನೆತನದ ಗೌರವಕ್ಕಾಗಿಯೋ ನೈತಿಕ ಮೌಲ್ಯಗಳಿಗೆ ಕುಂದುಂಟಾಗಬಾರದೆಂದು ತನ್ನ ಜೀವಗಳನ್ನೆ ತೆತ್ತ ಉದಾಹರಣೆಗಳುಂಟು. ಇಂತಹ ನೈತಿಕತೆಯನ್ನು ಸಾರುವ ಸನ್ನಿವೇಶಗಳನ್ನು ಕುರಿತು ಸ್ಮರಿಸುವ ಜನಪದರ ಬಾಯಲ್ಲಿ ಸೃಜಿಸುವ ಕಾರ್ಯನಿಂತಿಲ್ಲ. ಕಾರ್ಗಿಲ್ ಯುದ್ದದ ಬಗ್ಗೆ, ಅನಕ್ಷರತೆಯ ಬಗ್ಗೆ, ಗೋದ್ರ ರೈಲು ಹತ್ಯಾಘಟನೆ ಬಗ್ಗೆ, ರಾಮನ ಅಯೋಧ್ಯ ವಿಷಯದ ಬಗ್ಗೆ ಹೀಗೆ ಅನೇಕ ಪ್ರಮುಖ ಘಟನಾವಳಿಗಳನ್ನು ಮಾನವೀಯ ನೆಲೆಯಿಂದ ನೋಡುವ ಹಾಗೆ ಅದಕ್ಕೊಂದು ರೂಪವನ್ನು ಕೊಟ್ಟು ಕಟ್ಟಿಹಾಡುವುದನ್ನು ಪ್ರಸ್ತುತದಲ್ಲಿ ಕಾಣಬಹುದು. ಆದರೆ ಬದಲಾಗುತ್ತಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇವುಗಳ ಪರಿಣಾಮಕಾರಿ ಸೃಷ್ಟಿಕಾರ್ಯ ಕಡಿಮೆ ಇರುವುದರಿಂದ ಇವುಗಳ ನಂತರದ 'ಪೀಳಿಗೆ'ಯು ಆಧುನಿಕ ಪರಿಸರದಲ್ಲಿ ಹೊಸ ಚೈತನ್ಯ ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದು. ಆದುದರಿಂದಲೇ A Folksong is neither new nor old because it is continnually taking of new life! It is on Individual flower on common stem. ಎಂಬ ಆಂಗ್ಲವಿದ್ವಾಂಸನ ಮಾತು. ಹೆಚ್ಚು ಪ್ರಸ್ತುತ. ಅವಿದ್ಯಾವಂತರಲ್ಲಿ ಜೀವನ ಮೌಲ್ಯ ಸಾರುವ ಕಥೆ, ಒಗಟು, ಜನಪದಗೀತೆ ಇವೆಲ್ಲ ಸೃಷ್ಟಿಯಾಗುತ್ತಿದ್ದರೆ ವಿದ್ಯಾವಂತ ಸಮುದಾಯದಲ್ಲಿ ಇವುಗಳ ತಾತ್ವಿಕ ಮೌಲ್ಯಗಳನ್ನು ಸಾರುವ ಬರೆಹ (ಘೋಷಣವಾಕ್ಯಗಳ) ಹುಟ್ಟುಗಳನ್ನು ಕಾಣಬಹುದು. ಈ ಕ್ರಿಯೆ ಬದಲಾದ ಜಾನಪದದ ಕುರುಹಾಗಿ ಇರುವುದನ್ನು ಕಾಣಬಹುದು. ಇಂತಹ ಬರಹಗಳಲ್ಲಿ ಅನುಭವ ಸಾಂದ್ರತೆ ಸಂಸ್ಕೃತಿಯ ವಿಕಸನ, ವಸ್ತು ವೈವಿಧ್ಯತೆ, ವಿಚಾರ ವೈಭವ, ಬದುಕಿನ

[illegible]

ವಿಶ್ಲೇಷಣೆ ಇವುಗಳೆಲ್ಲವನ್ನು ಒಳಗೊಂಡಂತೆ ವಿದ್ಯಾವಂತ ಸಮುದಾಯಗಳಲ್ಲಿ ಸಂಸ್ಕೃತಿ ವೈವಿಧ್ಯತೆಯ ವಾಹಕಗಳಾಗಿ ಲೋಕಾನುಭದ ಸ್ಮೃತಿಗಳಾಗಿ ಜನರ ಮನದಲ್ಲಿ ಹೊಸ ನೈತಿಕತೆಗೆ ಎಡೆಮಾಡಿಕೊಡುತ್ತವೆ. ಅಕ್ಷರ ಜ್ಞಾನ ಮತ್ತು ಲಿಖಿತ ರೂಪದ ಸಂವಹನಗಳು ಆಧುನಿಕ ಲಿಖಿತ ಜಾನಪದದ ಮುಖ್ಯ ಲಕ್ಷಣಗಳು.

ಜೀವನ ಮೌಲ್ಯಸಾರುವ ಇಂತಹ ಬರೆಹಗಳಲ್ಲಿ ಅನೈತಿಕ ಅಪಮೌಲ್ಯಗಳನ್ನು ತಿದ್ದುವ, ಮಾನವ ಜೀವನದ ಶ್ರೇಷ್ಠತೆಯನ್ನು ಸಾರುವ, ಮಾನವ ಕಲ್ಯಾಣಕ್ಕೆ ಪೂರಕವಾಗುವ ಇತರರನ್ನು ತಮ್ಮಂತೆ ಪ್ರೀತಿಸುವ ಹೀಗೆ ನೈತಿಕ ಮೌಲ್ಯಗಳ ಪ್ರತಿಬಿಂಬಗಳಾಗಿ ಕೆಲಸಮಾಡುತ್ತವೆ. ಇವು ಸಂದರ್ಭೋಚಿತದಲ್ಲಿ ನುಡಿಗಟ್ಟುಗಳಾಗಿ ಸೂಕ್ತ ಸಂದರ್ಭದಲ್ಲಿ ತಾಳಿದ ಯೋಗ್ಯ ನಿರ್ಣಯಗಳು. ಇವುಗಳ ಕರ್ತೃಯಾರೆಂದು ಕೆಲವೊಂದು ಸಾರಿ ದೊರೆಯಬಹುದು. ದೊರೆಯದೇ ಇರಬಹುದು. ಈ ಬರಹಗಳು ವಿದ್ಯಾವಂತರ ಸಂವೇದನಾಶೀಲತೆಯನ್ನು ಪ್ರಚೋದಿಸುವ, ಉತ್ತಮ ಬಾಂಧವ್ಯವನ್ನು ಬೆಸೆಯುವ, ಸೃಜನಾತ್ಮಕ ವಾತಾವರಣವನ್ನು ಸೃಷ್ಟಿಸುವ ಹಾಗೆ ಅವುಗಳನ್ನು ಹೊಸ ಪೀಳಿಗೆಗೆ ವರ್ಗಾಯಿಸುವ ಜಂಗಮಶೀಲತೆಯನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡಿರುತ್ತದೆ. ಇಂತಹ ಬರಹಗಳು ಹಲವು ಸ್ಥಳಗಳಲ್ಲಿ ಇರುವುದನ್ನು ಕಾಣಬಹುದು. ಆದರೆ ಒಂದೊಂದು ಸ್ಥಳದಲ್ಲಿಯೂ ವಿಭಿನ್ನ ಬರವಣಿಗೆಗಳಿರುತ್ತವೆ. ಆ ಬರವಣಿಗೆಗಳ ಹಿಂದೆ ಆ ವಾತಾವರಣದ ಪ್ರಭಾವ ಬೀರಿರುತ್ತದೆ.

ದೇವಾಲಯಗಳಲ್ಲಿ ಬರೆದಿರುವ ಬರಹಗಳು

ಭಾರತೀಯ ಜೀವನ ಪರಂಪರೆಯಲ್ಲಿ ಧಾರ್ಮಿಕ ಬದುಕಿಗೆ ಮಹತ್ವದ ಸ್ಥಾನವಿದೆ. ನಿತ್ಯ ಬದುಕಿನ ನಿಮಿಷ ನಿಮಿಷಗಳಲ್ಲಿ ಅದರ ಅಂಶ ಇದ್ದೆ ಇರುತ್ತದೆ. ಅದು ಬದುಕಿನೊಂದಿಗೆ ಹಾಸುಹೊಕ್ಕಾಗಿ ಬೆಳೆದುಕೊಂಡು ಬಂದಿದೆ. ಸಾಹಿತ್ಯ, ಕಲೆ, ನೀತಿ ಸಂಹಿತೆ, ಧರ್ಮ ಇವೆಲ್ಲ ನಮ್ಮ ಬದುಕನ್ನು ಸಂಸ್ಕರಿಸಿ ಉದಾತ್ತಗೊಳಿಸುವ ಉದ್ದೇಶವಿಟ್ಟುಕೊಂಡು ರಚಿತವಾದುವುಗಳೇ ಭಾರತೀಯ ಜೀವನ ಪರಂಪರೆಯಲ್ಲಿ ಧರ್ಮ ಮತ್ತು ದೇವರುಗಳಿಗೆ ಮಹತ್ವದ ಸ್ಥಾನವಿದೆ. ಮನುಷ್ಯ ತನ್ನ ಸುಖಮಯವಾದ ಜೀವನ ಸಾಗಿಸಲು ವೈಜ್ಞಾನಿಕ ಸಹಾಯದಿಂದ ಎಲ್ಲಾ ಭೌತಿಕ ಅನುಕೂಲತೆಗಳನ್ನು ಪಡೆದುಕೊಂಡ ಹಾಗೆಯೇ ಅಂತರಂಗದ ಅತೃಪ್ತಿ ನಿವಾರಿಸಿಕೊಳ್ಳಲು ಧರ್ಮ ದೇವರುಗಳ ಮರೆಹೋದ. ಅವುಗಳ ಪ್ರತಿಫಲಗಳೇ ದೇವಾಲಯಗಳು. ಈ ದೇವಾಲಯಗಳಲ್ಲಿ ಭಕ್ತರಲ್ಲಿ ಭಕ್ತಿಭಾವ ತುಂಬುವಂತೆ ಪ್ರಚೋದಿತ ಬರೆಹಗಳನ್ನು ಕಾಣಬಹುದು.

* ಸ್ವಚ್ಛವಾದ ಬದುಕು ಭಗವಂತನ ಪ್ರತೀಕ.
* ನೆನೆಯದಿರಿ ನುಡಿಯುತ ಮಾನವನ ಹೆಸರ ದಿನಕ್ಕೆ ನೂರಾರುಬಾರಿ.
  ಪ್ರಾರ್ಥಿಸುತ ಆ ದೇವನ ನಾಮವ ದಿನಕ್ಕೆ ಒಂದೇ ಸಾರಿ.
  ಆ ದೇವನ ನಾಮಸ್ಮರಣೆಯೊಂದೇ ಮೋಕ್ಷಕ್ಕೆ ದಾರಿ.

[illegible]

* ನಮ್ಮೀ ನಶ್ವರ ದೇಹಗಳು ಅಗಲಿದರೂ.
  ನಮ್ಮ ಆತ್ಮಗಳೂ ಎಂದೆಂದಿಗೂ ಅಗಲುವುದಿಲ್ಲ.
* ಪ್ರೇಮ, ಧರ್ಮ, ಸತ್ಯ, ಆಚಾರದಿಂದ ವಿಶ್ವಶಾಂತಿ ಸಾಧ್ಯ.
* ಮನುಷ್ಯ ತನ್ನ ಭವಿಷ್ಯಕ್ಕೆ ತಾನೇ ಶಿಲ್ಪಿ.
* ಲಕ್ಷ್ಮಿಯಂತೆ ಧನವಿರಲಿ, ಸರಸ್ವತಿಯನತೆ ವಿದ್ಯೆಯಿರಲಿ, ಪಾರ್ವತಿಯಂತೆ ಭಕ್ತಿಯಿರಲಿ.
* ಶ್ರೀ ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸ್ತು.
* ಸೌಭಾಗ್ಯ ಜಾನಕಿರಾಧ ರೇಖಾ ಸ್ವರ್ಣಲತಾತಥಾ.
* ಪಂಚ ಕನ್ಯಾಸ್ಮರೇ ನಿತ್ಯಂ ಪರೀಕ್ಷಾಯಂ ದುಡಂದುಡಂ.
* ಕಾಯಕವೇ ಕೈಲಾಸ, ಧಯವೇ ಧರ್ಮದ ಮೂಲವಯ್ಯ
* ದೇವರ ಅಂಗರಕ್ಷಕರು
  ಜಯವಿಜಯರು.
* ಮಾನವನ ಅಂಗರಕ್ಷಕರು
  ಮಾನಮಾರ್ಯಾದೆ.
* ನಾವು 'ಗ್ರಹ'
  ಒಳಗಿರುವುದು 'ವಿಗ್ರಹ'
  ಅದರ ಮುಂದೆ ನಿಂತರೆ 'ಅನುಗ್ರಹ'
  ಮಾಡಬೇಕು ಕೊಂಚ 'ನಿಗ್ರಹ'
  ಇಲ್ಲದಿದ್ದರೆ ಜೀವನ 'ಕಾರಗೃಹ'
* ಮಾನವರಿಗೆ ಮಾಧವನು ಕೊಟ್ಟ ಮಹಾಧನ
  ತಾನಾರಿಗೂ ತಲೆತಗ್ಗಿಸದ ಗುಣ - ಮಾನ
  ಭಗವಂತನಿಗೆ ಅತ್ಯಂತ ಪ್ರಿಯವಾದ 'ಕಾಣಿಕೆ'
  ಸಹನೆ, ಸ್ಮರಣೆ, ಸ್ಮೈರಣೆ.
* ಮನೆಯಲ್ಲಿ ಸೇವಿಸುವುದು ಅನ್ನ
  ಮಂದಿರದಲ್ಲಿ ಸೇವಿಸುವುದು ಪರಮಾನ್ನ

* ಚಂದ್ರನ ಬೆಳದಿಂಗಳು ತಂಪು
  ಶ್ರೀಗಂಧ ಇನ್ನಷ್ಟು ತಂಪು
  ಸಜ್ಜನರ ಹೃದಯ ಮತ್ತಷ್ಟು ತಂಪು.

* ಒಬ್ಬರ ಮನ ನೋಯಿಸಿ
ಇನ್ನೊಬ್ಬರ ಮನೆ ಹಾಳುಮಾಡಿ
ದೇವರಿಗೆ ಕೈ ಮುಗಿದರೇನು ಫಲ?

* ಸತ್ಯಕ್ಕೆ ಎಂದೂ ಅಳಿವಿಲ್ಲ.
ಅಸತ್ಯಕ್ಕೆ ಎಂದೂ ಉಳಿವಿಲ್ಲ.
ಈ ನಂಬಿಕೆ ಇದ್ದರೆ ಕಳವಳವಿಲ್ಲ.

* ವಿದ್ಯುತ್‌ಚ್ಛಕ್ತಿಯೇ - ಭಗವಂತ
ಸ್ವಿಚ್ಚೇ ಗುರು
ಉರಿಯುವ ಬಲ್ಬುಗಳೇ ಜೀವಗಳು

* ದೇಹವೆಂಬುದು - ದೇವಸ್ಥಾನ
ಆತ್ಮ - ದೇಹದ ದೇವರು.

* ದಾಸನಾಗು ನೀ ಭವಶೀಲನಾಗು.

* ಗೊನೆಬಿಟ್ಟ ಬಾಳೆಬಾಗುತ್ತದೆ
ತೆನೆಬಿಟ್ಟ ಭತ್ತ ಬಾಗುತ್ತದೆ
ಫಲಬಿಟ್ಟ ಮಾವು ಬಾಗುತ್ತದೆ
ಏನೇನು ಇಲ್ಲದ ಈ ಡಂಭದ ದೇಹ ಬೀಗುತ್ತದೆ.

* ದೇಹವೊಂದು ಷರಟು
ದೇವನಿತ್ತ ಕೊಡುಗೆ
ಯೋಗ್ಯವಾಗಿ ಬಳಸಿದರೆ ನೂರುವರ್ಷ ಉಡುಗೆ.
ಭೋಗ್ಯವಾಗಿ ಬಳಸಿದರೆ ಬಹುಬೇಗ ಒಲೆಗೆ.

೨. ಉದ್ಯಾನವನಗಳಲ್ಲಿ.

ಪ್ರಾಸವಿರುವುದನ್ನು ಹೆಚ್ಚು ಕಾಣಬಹುದು.

೧. ಕಾಡು ಇದ್ದರೆ ನಾಡು.
೨. ಹಸಿರು ತರುವುದು ನಿಮಗೆ ಉಸಿರು.
೩. ಮರದಿಂದ ಮಳೆ, ಮಳೆಯಿಂದ ಬೆಳೆ.
೪. ನಿರ್ಮಲ ಪರಿಸರ ಸಂರಕ್ಷಣೆ, ನಮ್ಮ ನಿಮ್ಮೆಲ್ಲರ ಹೊಣೆ.
೫. ಮನೆಗೊಂದು ಮರ, ಗ್ರಾಮಕೊಂದು ವನ.

೩. ಸಿನಿಮಾ ಮಂದಿರಗಳಲ್ಲಿ

೧. ಸ್ವಚ್ಛವಾಗಿಡಿರಿ ಇದು ನಿಮ್ಮ ಮಂದಿರ.

೨. ಇಲ್ಲಿ ಉಗಳಬಾರದು.

೩. ನಾಳೆ ಬಾ.

೪. ನನ್ನನ್ನು ಉಪಯೋಗಿಸಿ.

೪. ಕಾಲೇಜ್ ಮತ್ತು ಟ್ಯೂಶನ್ ರೂಮುಗಳಲ್ಲಿ, ಹಾಸ್ಟಲ್‌ಗಳಲ್ಲಿ

೧. ನಿಶ್ಯಬ್ಧವಾಗಿರಿ.

೨. ಜ್ಞಾನದೇಗುಲವಿದು ಕೈಮುಗಿದು ಒಳಗೆ ಬಾ.

೩. ನಮಸ್ತೆ, ವಂದನೆ - ಸ್ವಾಗತ.

೪. ವಿಧ್ಯೆ ಸಾದಕನ ಸ್ವತ್ತೇ ಹೊರತು ಸೋಮಾರಿ ಸ್ವತ್ತಲ್ಲ.

೫. ಹೃದಯವೇ ಗುರು, ಕಾಲವೇ ಶಿಕ್ಷಕ, ಜೀವನವೇ ಪುಸ್ತಕ.

೬. ವಿದ್ಯಾದೇಗುಲದಿಂದ ಪ್ರಯಾಣ ಬೆಳೆಸುತ್ತಿರುವ ಜೀವ ವಿದ್ಯೆಯ ಅರ್ಥವನ್ನು ಎಂದಿಗೂ ಮರೆಯದಿರಿ.

೫. ಆಟೋಗ್ರಾಫ್‌ಗಳಲ್ಲಿ

೧. ಮಿತ್ರ ಬರೆಯುತ್ತಿರು ಅನುದಿನ ಪತ್ರ.

೨. ನಮ್ಮ ನಿಮ್ಮ ಸ್ನೇಹ ಹೂವಿನಂತೆ ಬಾಡದೇ ಬಳ್ಳಿಯಂತೆ ಹಬ್ಬಲಿ.

೩. ಬದುಕಿನ ಭವ್ಯ ಹೊತ್ತಿಗೆಯಲ್ಲಿ ನಿಮ್ಮ ಬಾಳು ಬಂಗಾರವಾಗಲಿ.

೪. ಸಾಹಿತ್ಯದ ಓದು ಜೀವನದ ಓದಾಗಲಿ.

೫. Every Succeassfull men
Behind there is women.

೬. ನಗರಗಳಲ್ಲಿ ರೋಡ್, ಕ್ರಾಸ್‌ಗಳ ಸಂಖ್ಯೆ ಮತ್ತು ಬಡಾವಣೆಗಳ ನಾಮಗಳನ್ನು ಸೂಚಿಸುವ ನಾಮಫಲಕಗಳ ಮೇಲೆ ನೈತಿಕ ಮೌಲ್ಯಸಾರುವ ಬರಹಗಳನ್ನು ಕಾಣಬಹುದು.

೧. ಕೂಡಿ ಬಾಳಿದರೆ ಸ್ವರ್ಗ ಸುಖ.

೨. ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ.

೩. ಆಚಾರವೇ ಸ್ವರ್ಗ ಅನಾಚಾರವೇ ನರಕ.

೪. ದೇಶ ಸೇವೆಯೇ ಈಶ ಸೇವೆ.

೫. ಉದ್ಯೋಂಗಂ ಸರ್ವರ ಲಕ್ಷಣಂ.

೬. ವಾಯು ಮಾಲಿನ್ಯದಲ್ಲಿ ಉಸಿರಾಟ, ಪ್ರಾಣಕ್ಕಾಗಿ ಹೋರಾಟ.

೭. ಸದ್ಗುಣವೇ ನಿಜವಾದ ಐಶ್ವರ್ಯ, ಹೆದರಿಕೆಯೇ ಹೇಡಿತನ.

೮. ಆಳಾಗಿ ದುಡಿ ಅರಸನಾಗಿ ಉಣ್ಣು.

೯. ನಿಯತ್ತೇ ದೇಶದ ಸಂಪತ್ತು.

೧೦.ಚಾಲಕನ ನಿಯತ್ತೇ ಮಾಲೀಕನ ಸಂಪತ್ತು.

ಹೀಗೆ ಜೀವನ ಮೌಲ್ಯಸಾರುವ ಬರಹಗಳು ಇತ್ತೀಚಿನ ಲಿಖಿತ ಜಾನಪದದ ಕುರುಹುಗಳಾಗಿವೆ. ಇವುಗಳಿಗೆ ಪ್ರಾಚೀನ ಜಾನಪದ ಪಳೆಯುಳಿಕೆ ಸಂಬಂಧ ಇರುವುದನ್ನು ಕಾಣಬಹುದು. ಜಾನಪದವು ಬದಲಾವಣೆಯನ್ನು ಬಯಸುತ್ತದೆ. ಈ ಬದಲಾವಣೆಯನ್ನು ಗುರುತಿಸುವಲ್ಲಿ ಸಂಶೋಧನಾಕಾರರು ಪ್ರಯತ್ನಿಸಲೇಬೇಕಾಗುತ್ತದೆ.

೬.೨ ಕಾಮ ಪ್ರೇಮ ಪ್ರಚೋದಿಹ ಬರಹಗಳು

ಸಿಗ್ಮಂಡ್‌ಪ್ರಾಯ್ಡ್ ತನ್ನ ಮನೋವಿಶ್ಲೇಷಣಾತ್ಮಕ ಸಿದ್ಧಾಂತದಲ್ಲಿ Ego, Superego, Id ಎಂಬ ಮೂರು ಪರಿಕಲ್ಪನೆಗಳನ್ನು ಸೂಚಿಸಿದ್ದಾನೆ. Ego ಮನುಷ್ಯನ ಬಾಹ್ಯ ನಡವಳಿಕೆಗಳನ್ನು ಸೂಚಿಸಿದರೆ Id ಮನುಷ್ಯನ ಹಸಿಹಸಿಯಾದ ಭಾವನೆಗಳನ್ನು ಆಸೆಗಳನ್ನು ಒಳಗೊಂಡಿರುತ್ತದೆ. ಆದರೆ ಸಮೂಹದಲ್ಲಿರುವ ಕಟ್ಟುಪಾಡು ಮತ್ತು ನೈತಿಕತೆಯ ಹೆದರಿಕೆಯಿಂದಾಗಿ Superego ಮೂಲಕ Id ನಲ್ಲಿರುವ ಆಸೆಗಳನ್ನು ಅದುಮಿ ಸಮಾಜದಲ್ಲಿ ಗಂಭೀರವಾಗಿ ನಡೆದುಕೊಂಡು ತನ್ನ Ego ಗೆ ದಕ್ಕೆ ಉಂಟಾಗದಂತೆ ಬಾಳುತ್ತಾನೆ. ಕಾಮ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಮಕ್ಕಳಿಂದ ಹಿಡಿದು ವೃದ್ದಾಪ್ಯದವರೆಗೂ ಕಾಮ ಮನುಷ್ಯನ ನಡವಳಿಕೆಗಳ ಮೇಲೆ ಪರಿಣಾಮ ಉಂಟುಮಾಡುವ ಪ್ರಬಲ ಶಕ್ತಿಯಾಗಿದೆ. ಕಾಮವನ್ನು ಹತ್ತಿಕ್ಕಿವುದು ಕಷ್ಟ, ಹತ್ತಿಕ್ಕಿದರೆ ಅದು ವಿಕಾರರೂಪಗಳನ್ನು ಪಡೆಯುತ್ತದೆ.

ಪ್ರಾಯ್ಡನ ಈ ಮನೋವಿಶ್ಲೇಷಣಾತ್ಮಕ ಸಿದ್ಧಾಂತವು ಜಗತ್ತಿನ ಚಿಂತನೆಗಳನ್ನು ಬದಲಾಯಿಸಿಬಿಟ್ಟಿತು. ಮುಖ್ಯವಾಗಿ ಮನುಷ್ಯನ ಮತ್ತು ಅವನ ವ್ಯಕ್ತಿತ್ವಕ್ಕೆ ಹೊಸ ಆಯಾಮ ದೊರಕಿಸಿತು. ಈ ಸಿದ್ಧಾಂತವನ್ನು ಹಲವಾರು ವಿದ್ವಾಂತರು ಜಾನಪದಕ್ಕೆ ಅನ್ವಯಿಸಿ ಅರ್ಥೈಸಲು ಪ್ರಯತ್ನಪಟ್ಟಿದ್ದಾರೆ. ಹಲವಾರು ಸಂಕೇತಗಳನ್ನು ಲೈಂಗಿಕ ಕ್ರಿಯೆಗಳಿಗೆ ಜನನೇಂದ್ರಿಯಗಳಿಗೆ ಅರ್ಥೈಸುವ ಪ್ರಕ್ರಿಯೆ ಜಾನಪದ ವಿದ್ವಾಂಸರಲ್ಲಿ ನಡೆದಿದೆ. ಇದು ಪಾಶ್ಚಾತ್ಯ ವಿದ್ವಾಂಸರಲ್ಲದೆ ಅನೇಕ ಕನ್ನಡನಾಡಿನ ಜಾನಪದ ವಿದ್ವಾಂಸರು ಸಹ ಜನಪದ ಕಥೆಗಳಲ್ಲಿ, ಒಗಟುಗಳಲ್ಲಿ, ಗಾದೆಗಳಲ್ಲಿ, ಪುರಾಣ, ಐತಿಹ್ಯ,

ಅಶ್ಲೀಲ ವಿನೋದಗಳು, ಸಂಪ್ರದಾಯಗಳು, ಆಟಗಳು ಮೊದಲಾದ ಜಾನಪದ ಪ್ರಕಾರಗಳಲ್ಲಿ ಈ ಸಿದ್ಧಾಂತ ಮೂಲಸತ್ವ ಹೆಕ್ಕಿ ತೆಗೆದಿದ್ದಾರೆ. ಹಾವು, ಕೋಲು, ಮರ, ಕತ್ತಿ, ಸುತ್ತಿಗೆ ಮುಂತಾದವು ಪುರುಷ ಜನನಾಂಗದ ಸಂಕೇತಗಳಾದರೆ, ಗುಹೆ, ಸೀಸೆ ಪೆಟ್ಟಿಗೆ ಬಾಗಿಲು ತೋಟ ಮುಂತಾದವು ಸ್ತ್ರೀ ಜನನೇಂದ್ರಿಯದ ಸಂಕೇತಗಳಾಗಿ ಜನಪದರಲ್ಲಿ ಬಳಕೆಯಾಗಿರುವುದನ್ನು ಗುರುತಿಸಿದ್ದಾರೆ.

ಮನೋವಿಶ್ಲೇಷಣಾ ಸಿದ್ಧಾಂತವು ಸಾಹಿತ್ಯ ಮತ್ತು ಜಾನಪದ ಕ್ಷೇತ್ರದಲ್ಲಿ ಒಂದು ಅಧ್ಯಯನ ಶಿಸ್ತಾಗಿ ಮನ್ನಣೆ ಗಳಿಸಿಕೊಂಡಿರುತ್ತದೆ. ಈ ಸಿದ್ದಾಂತದ ಬಗ್ಗೆ ಇರುವ ಪ್ರಮುಖ ಆಕ್ಷೇಪಣೆ ಎಂದರೆ ಇದು ಲೈಂಗಿಕತೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತದೆ ಎಂಬುದು. ಇದು ವಾಸ್ತವವಾದರೂ ಜಾನಪದ ಪ್ರಕಾರಗಳಲ್ಲಿ ವ್ಯಕ್ತಗೊಳ್ಳುವ ಈ ಲೈಂಗಿಕತೆಯನ್ನು ಗಮನಿಸದೆ ಇದ್ದರೆ ಅದು ಅಧ್ಯಯನಕಾರರ ತಪ್ಪಾಗುತ್ತದೆ.[೨] ಕಾಮ ಪ್ರವೃತ್ತಿಯು ಸ್ವಾರ್ಥದ ಸೀಮಿತದಿಂದ ಮೇಲಕ್ಕೆತ್ತಿ ತನ್ನಂತೆ ಇರುವ ಇತರ ಜೀವಿಗಳ ಆನಂದ ಸುಸ್ಥಿತಿಯನ್ನು ಕುರಿತು ಆಲೋಚಿಸುವಂತೆ ಅವನನ್ನು ಎಚ್ಚರಿಸುತ್ತದೆ. ಆದುದರಿಂದ ವ್ಯಕ್ತಿ ಜೀವನದ ಹಾಗೂ ಸಮಾಜ ಜೀವನದ ವಿಕಾಸಕ್ಕೆ ಮನುಷ್ಯನ ಕಾಮ ಪ್ರವೃತ್ತಿ ಸಂತೃಪ್ತಿಯಂತೆ ಪ್ರೇಮ ಪ್ರವೃತ್ತಿಯು ವಿಕಾಸವೂ ಸಹ ಅತಿಮಹತ್ವದ್ದಾಗಿದೆ.

ಹೀಗೆ ಮನುಷ್ಯನಿಗೆ ಕಾಮವು ಪ್ರತಿಯೊಂದು ಹಂತದಲ್ಲೂ ಪ್ರೇರಕ ಇಲ್ಲವೇ ಪೂರಕವಾಗಿ ಕೆಲಸ ಮಾಡುತ್ತಿರುತ್ತದೆ. ಇದೊಂದು ಸಮುದಾಯಗಳಲ್ಲೂ ಅವರವರ ಅಭಿರುಚಿ ಆಸಕ್ತಿ ಹಿನ್ನೆಲೆ ವಯಸ್ಸಿಗೆ ಅನುಗುಣವಾಗಿ ಜಾನಪದವೂ ರೂಪುಗೊಳ್ಳುವುದನ್ನು ಕಾಣಬಹುದು. “ವಯಸ್ಸಿಗೆ ಬಂದ ಅತ್ತೆಯರು (ಹುಡುಗಿ/ಹೆಂಗಸು) ಯಾವಾಗಲೂ ರಾಜರಾಣಿಯರ ರಮ್ಯಕತೆಗಳನ್ನು ಅದರಲ್ಲೂ ಗಂಧರ್ವಲೋಕದ ರಾಜಕುಮಾರ ಬಂದು ಯಾವುದೋ ಕಾಡಿನ ಗುಡಿಸಲಿನಲ್ಲಿರುವ ಅನಾಥ ತಬ್ಬಲಿ ದಿಕ್ಕಿಲ್ಲದ ಕನ್ಯೆಯನ್ನು ಪ್ರೇಮಿಸಿ ತನ್ನ ಲೋಕಕ್ಕೆ ಹಾರುವ ಕುದುರೆ ಮೇಲೆ ಕೂರಿಸಿಕೊಂಡು ಹೋರಟು ಹೋಗುವ ಕತೆಗಳನ್ನು ಹೇಳುತ್ತಿದ್ದರು. ಇನ್ನು ತಾಯಂದಿರು ನಿಜಕ್ಕೂ ಅತ್ಯಂತ ನಿರ್ಲಕ್ಷಿತರ ಹೆಣ್ಣಿನ ಸುತ್ತ ಇರುವ ಕತೆಗಳನ್ನು ಹೇಳುತ್ತಿದ್ದರು. ಪ್ರಾಣಿ ಕತೆಗಳನ್ನು, ಮೂರ್ಖರ ಕಥೆಗಳನ್ನು ನಮ್ಮ ಚಿಕ್ಕಪ್ಪಂದಿರು ಹೇಳಿಕೊಡುತ್ತಿದ್ದರು. ಪುರಾಣಗಳನ್ನು ಕೆಲವು ಆಚರಣೆಗೆ ಸಂಬಂಧಿಸಿದ ಕತೆಗಳನ್ನು ನಮ್ಮ ತಾತ ವಿಶೇಷವಾಗಿ ಹೇಳುತ್ತಿದ್ದರು[೩].

ಆಯಾ ವಯಸ್ಸಿಗೆ ಸಂಬಂಧಪಟ್ಟ, ನೈತಿಕತೆಗೆ ಸಂಬಂಧಪಟ್ಟ ವಿವಿಧ ವಿಕಾಸ ಕಥಾಮಟ್ಟುಗಳು ವಿಭಿನ್ನ ವಯಸ್ಸಿನಲ್ಲಿ ಒಡಮೂಡುತ್ತಿದ್ದವು ಎಂಬುದಕ್ಕೆ ಮೇಲಿನದೆ ಉದಾಹರಣೆ.

ಹೀಗೆ ಅದುಮಿಡಲ್ಪಟ್ಟ ವಿವಿಧ ಸಂವೇದನೆಗಳು, ಅಭಿವ್ಯಕ್ತಗೊಳ್ಳುತ್ತಿದ್ದು ಆಯಾ ವಯಸ್ಸು - ಸಾಂದರ್ಭಿಕ ನೆಲೆಗಳಿಂದ ಕೆಲವೊಂದು ಸಾರಿ ಅಭಿವ್ಯಕ್ತಿಸಲಾಗದಂತಹ ವಿಚಾರಗಳನ್ನು ಏಕಾಂತದಲ್ಲಿ ನೆನೆದು ತೃಪ್ತಿ ಪಡೆಯುತ್ತಾರೆ. ಈ ಬರೆಹಗಳ ಹಿಂದೆ ಬಗೆಹರಿಯದ ಬಯಕೆಗಳ ಅತೃಪ್ತ ಆಸೆಗಳು

ಮೂಲವಾಗಿ ಕಾರಣವಾಗುತ್ತವೆ. ಸುಪ್ತ ಮನದಾಳದಲ್ಲಿ ಬಚ್ಚಿಟ್ಟ ಭಾವನೆಗಳ ಬಿಚ್ಚು ಕ್ರಿಯೆಯ ಪ್ರತಿಬಿಂಬಗಳು ಈ ಕಾಮಪ್ರೇಮ ಪ್ರಚೋದಿಹ ಬರಹಗಳು.

ವಿದ್ಯಾರ್ಥಿಗಳಲ್ಲಿ ಕೂಗಾಟ, ಆಲಸ್ಯ, ಗುಂಪುಗುಳಿತನ ಇದ್ದರೂ ಅತೃಪ್ತಿ ನಿಜವಾಗಿ ಎದ್ದುಕಾಣುವುದು ಕಕ್ಕಸು ರೂಮುಗಳಲ್ಲಿ. ಅಲ್ಲಿ ಅವರು ನಿಜವಾದ ವ್ಯಕ್ತಿತ್ವ ಉಳ್ಳವರಾಗಿರುತ್ತಾರೆ. ಮನಬಿಚ್ಚಿ ಮಾತಾನಾಡುತ್ತಾರೆ. ಒಬ್ಬೊಬ್ಬರೂ ತಮ್ಮ ತಮ್ಮ ಅನುಭವಗಳನ್ನು ಹೇಳುತ್ತಾರೆ. ಸಲಹೆ ಕೇಳುತ್ತಾರೆ. ಪರಿಹಾರ ಹುಡುಕುತ್ತಾರೆ ಪ್ರತಿಭೆ ಅರಳಿಸುತ್ತಾರೆ. ಅವರ ಚೇಷ್ಟೆಗೆ ಗುರಿಯಾಗುವುದು. ಸ್ತ್ರೀಯರು, ಅಪ್ರಬುದ್ಧರು, ಪ್ರಬುದ್ಧರು, ಮದುವೆಯಾದವರು ಎಲ್ಲರೂ ನಿಸ್ಸಂಕೋಚವಾಗಿ ಹುಡಗಿಯರ ವಿಷಯಗಳ ಮೇಲೆ ಏನಾದರೂ ಬರೆದಿರುತ್ತಾರೆ. ಅಂದರೆ ಅತೃಪ್ತ ಮನಸ್ಸಿನವರ ಭಾವನೆಗಳು ಅರಳುವುದೇ ಇಂತಹ ಏಕಾಂತದ ವಲಯಗಳಲ್ಲಿ. ಇದು ಒಂದು ಬಗೆಯ ಜಾನಪದವನ್ನು ಹುಟ್ಟುಹಾಕುತ್ತದೆ. ಇವುಗಳನ್ನು ಕೆಳಗಿನಂತೆ ಕಾಣಬಹುದು.

೧. **ಬೆಂಚು ಮತ್ತು ಡೆಸ್ಕುಗಳ ಮೇಲೆ ಇರುವ ಬರಹಗಳು**

ಇಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಿರುವುದನ್ನು ಬರಹರೂಪಕ್ಕೆ ಇಳಿಸಿರುತ್ತಾರೆ. ತಾನು ಬಯಸಿದ ವಸ್ತುವನ್ನೋ ಹುಡಿಗಿಯನ್ನೋ ತನ್ನ ಹೆಸರಿನ ಪಕ್ಕದಲ್ಲಿ ಸೇರಿಸಿಕೊಂಡು ಬರೆದಿರುವುದು.

* ನಾನು ನಿನ್ನ

* ಸ್ನೇಹಸುಳ್ಳು, ಪ್ರೀತಿಮುಳ್ಳು

* ಹುಡಿಗಿಯ ಇನ್‌ಷಿಯಲ್ ಬರೆದು ಅದರ ಮುಂದೆ ೧೪೧ ಬರೆದಿರುವುದು

* Boy's are the worst
  Boy's are the stupids - ಏಕೆ ಹುಡಗಿ ಯಾವನಾದರೂ...?

* I hate the boy - ಹುಡಗಿಯ ಬೆಂಚ್
  without them you connot get kids.

* Suck your Dick

* Smile some one love's you
  why can't you ನಿನ್ನಕ್ಕನ್
  Fuck off.

[illegible]

* ಯಾರೋ ಮಾತು ಕೇಳಿ ಪ್ರೀತಿ ಮಾಡಿದೆ - ಲೇಡಿಸ್
  ಯಾಕೆ ಪಾಪು ಮೋಸ ಹೋದೆಯಾ ಪಾಪ! - ಹುಡುಗ
  ಇವತ್ತಿನಿಂದ ನಿನ್ನ First night ವರೆಗೂ ದಿನಗಳನ್ನು ಎಣಿಸಿಕೋ.

೨. **ಹಾಸ್ಟಲ್‌ಗಳಲ್ಲಿ**

ಸಾಮಾನ್ಯವಾಗಿ ಪಿ.ಯು.ಸಿ, ಡಿಗ್ರಿ ಕಾಲೇಜಿನ ಹಾಸ್ಟಲ್‌ಗಳಲ್ಲಿ ಕೆಳಕಂಡ ಬರೆಹಗಳನ್ನು ಕಾಣಬಹುದು.

* ಅಂದವಾದ ಹುಡಗಿಯ ಚಿತ್ರಬರೆದು ಇವಳು ನನ್ನ ಲವರ್ ಎಂದು ಬರೆದಿರುವುದು.

* ಜನಪ್ರಿಯ ಸಿನಿಮಾ ಹಾಡುಗಳನ್ನು ಅಶ್ಲೀಲಗೊಳಿಸಿ ರೂಮುಗಳ ಗೋಡೆಯ ಮೇಲೋ ಮಲಗುವ ಜಾಗದಲ್ಲೊ ಬರೆಯುವುದು.

೩. **ಕಕ್ಕಸ್ ಗೋಡೆ ಬರಹಗಳು**

ನೀರು ಹಾಕಿ
ಸ್ವಚ್ಛವಾಗಿಡಿ

ಇಂಥ ಜಾಗದಲ್ಲಿ ಕಾಮಕ್ಕೆ ಸಂಬಂಧಪಟ್ಟ ಬರೆಹಗಳು ಹೆಚ್ಚು ಇರುತ್ತವೆ.

* During 1947 India was under british but
  What is your hand? -

* ಅಕ್ಕ ಪಕ್ಕದವರನ್ನು ಅಕ್ಕ ತಂಗಿಯರೆಂದು ತಿಳಿದರೆ
  ಎನ್ನ ತುಣ್ಣೆ ತುಕ್ಕು ಹಿಡಿಯುವುದು ಸರ್ವಜ್ಞ.

* ಒಂದು ಎರಡು ನಿಗಿರಿದ ತೊರಡು
  ಮೂರು ನಾಲ್ಕು ತುಲ್ಲಿಗೆ ಹಾಕು.
  ಐದು ಆರು ಕೈಯ್ದರ್‌ಯಾರ್
  ಏಳು ಎಂಟು ತುಲ್ಲಲ್ಲಿ ಗಂಟು
  ಒಂಬತ್ತು ಹತ್ತು ಕೈದಾಟ ಮಿಗೀತು.

* ತಾನನ ತನನ ನಿಂತಿತು ಬನಾನ
  ಎತ್ತ ನಿನ್ನ ಲಂಗಾನ
  ಬಿಡುವೆ ನನ್ನ ಲಿಂಗಾನ

* ಕಂಡ ಕಂಡವರನ್ನು ಹೆಂಡತಿಯೆಂದು ತಿಳಿದರೆ
ನಿನ್ನ ತುಣ್ಣಿಗೆ ತುರಕಜ್ಜಿ ಏಳುವುದು ಸರ್ವಜ್ಞ.

* ತುಲ್ಲು ತುಲ್ಲೆಂದು ಸಾಯಬೇಡ
ಹಲ್ಲುಂಟು ತುಲ್ಲಿಗೆ ಅದು ಕಚ್ಚಿದರೆ
ತುಣ್ಣೆ ಉಣ್ಣಾಗಬಹುದು ಸರ್ವಜ್ಞ.

* ಜೀವನವೇ ಬರಡು ಅದರಲೇನಿದೆ ತೊರಡು.
ಇಲ್ಲಿ ಒಗಟುಗಳ ಬರಹಗಳು ಇರುತ್ತವೆ.

* ಎರಡು ಕೈಯಲ್ಲಿ ಎರಡು ಇಡಕೊಂಡ
ತೊಡೆ ಸಂದೀಲಿ ಜಡಾಯಸ್ದ - ಸೈಕಲ್ ತುಳಿಯುವುದು

* ಚಡ್ಡಿಯೊಳಗೆ ನಿಗಿರಿ
ಜಾಕೆಟ್ ಒಳಗೆ ಬುಗರಿ - ಅಣಬೆ.

೬.೩ **ಹಾಸ್ಯಕ್ಕೆ ಸಂಬಂಧಪಟ್ಟ ಬರಹಗಳು**

* ಇಲ್ಲಿ ಮಲಮೂತ್ರ ಮಾಡಬಾರದು
ಹಾಗಾದರೆ ಟಯಲೆಟ್ಟನ್ನು ಕಟ್ಟಿಸು

* ಇಲ್ಲಿ ಮೂತ್ರ ಮಾಡಬೇಡ ಸೂಳೆಮಗನೆ
ಬಾತ್ ರೂಂ ಕಟ್ಟಿಸು ಬೋಳಿ ಮಗನೆ.

ತೀರಪಟ್ಟಣವು ಅಲ್ಲದ ಹಳ್ಳಿಯು ಅಲ್ಲದ ತಾಲ್ಲೂಕ್ ಕೇಂದ್ರಗಳಲ್ಲಿಯೋ ಹೋಬಳಿಯಲ್ಲಿಯೋ ಫುಟಾಬಾತ್‌ಗಳಲ್ಲಿ ಟಾಕೀಸ್‌ಗಳಲ್ಲಿ ಇಂತಹ ಬರೆಹಗಳು ಹೆಚ್ಚು ಕಂಡುಬರುತ್ತವೆ. ಹದಿ ವಯಸ್ಸಿನ ಹುಡಗರು ಸಿನಿಮಾ ಹಾಡುಗಳನ್ನು ಅಶ್ಲೀಲಗೊಳಿಸಿ ಹಾಸ್ಯಮಯ ಸನ್ನಿವೇಶದಲ್ಲಿ ಇಂತಹ ಹಾಡುಗಳು ಹಾಡುತ್ತಾರೆ.

* ನಗುನಗುತಾ ನಾಬರುವೆ
ಅಗಲಿಸುತಾ ನೀ ಬರುವೆ
ಅಗಲಿಸಲು ನೀನು
ತುರುಕುವೆ ನಾನು
ಮರೆಯುವೆ ಜಗವನ್ನ.

* ಅಂಬಿಗ ನಾನಿನ್ನ ನಂಬಿದೆ
ನನಗೆ ಒಂಬತ್ತು ತಿಂಗಳು ತುಂಬಿದೆ
ಬೇಡ ಬೇಡ ಎಂದರು ದೆಂಗಿದೆ
ನನ್ನ ಪಾಟಿಚೀಲ ತುಂಬಿದೆ

* ಕುಚುಕು ಕುಚುಕು
ಮರತೊಯ್ತೆ ನಿನಗೆ ಮರಕೋತಿ ಆಟ
ಮರತೊಯ್ತೆ ನಿನಗೆ ಹಾಸ್ಟಲ್ ಊಟ.

* ದರಣಿ ಮಂಡಲ ಮಧ್ಯೆದೊಳಗೆ
ಅಮಣಿ ಸೊಂಟದ ಸ್ವಲ್ಪ ಕೆಳಗೆ
ಕರಿಯ ಹಾವು ನುಗ್ಗಿತೊಳಗೆ
ಬಿಳಿಯ ಹಾಲನು ಸುರಸಿತು.

* ಓ ಮಲ್ಲಿಗೆ ನಿನ್ನೊಂದಿಗೆ
ನಾ ಕೈಯಲೆ ಸದಾಸದಾ

* ಕೆಂಪಾದ ಕೆನ್ನೆ ನಾ
ನಿನ್ನನ್ನು ನೋಡುತ ಕುಳಿತರೆ ಪರೀಕ್ಷೆಯಲಿ ಸೊನ್ನೆ.

* ಓ ಶಕ್ಕು (ಶಕುಂತಲ) ಟ್ಯುಶನ್ ರೂಂನಲ್ಲಿ ನೀನಕ್ಕು
ಕೇಳಲಾರಂಬಿಸಿದೆ ನಿನ್ನ ಪ್ರೀತಿಯ ಹಕ್ಕು
ಅದಕೆ ನಾಕೊಟ್ಟೆ ನನ್ನ ಹೃದಯದ ಹಕ್ಕು.

* ಓ ಹೆಣ್ಣೆ ಹಾಕಿದೆ ತಲೆಗೆ ಕೊಬರಿ ಎಣ್ಣೆ.
ಆ ಎಣ್ಣೆಗೆ ಹೊಳೆಯುತ್ತಿತ್ತು ನಿನ್ನ ಕೆನ್ನೆ
ಆ ಕೆನ್ನೆಗೆ ಮುತ್ತುಕೊಡಲೆಂದು ನಾ ಬಂದಾಗ
ನಿನ್ನ ಮೂಗಿನಲ್ಲಿ ಸುರಿಯುತ್ತಿತ್ತು ಗೊಣ್ಣೆ.

* ಎಲೆ ಇಲ್ಲದ ಮರದ ಕೆಳಗೆ
ಮಲೆಯಿಲ್ಲದ ಹುಡಗಿಯನು ಕೈಯ್ದರೆ
ತಲೆ ಇಲ್ಲದ ಹುಡಗ ಹುಟ್ಟುವನು ಸರ್ವಜ್ಞ.

ಈ ರೀತಿಯ ಬರಹಗಳನ್ನು ಹದಿಹರೆಯವರಲ್ಲಿ ಹೆಚ್ಚು ಕಾಣಬಹುದು.

ಕೊನೆ ಟಿಪ್ಪಣಿಗಳು :

೧. ಡಾ।। ಶಿವರಾಮಶೆಟ್ಟಿ, 'ಸಸ್ಯ ಜಾನಪದ', ಪುಟ ೨.
೨. ವೀರಣ್ಣ ದಂಡೆ, 'ಜಾನಪದ ಶಾಸ್ತ್ರ ಸಿದ್ಧಾಂತಗಳು', ಪುಟ ೨೯.
೩. ರಂಗಾರೆಡ್ಡಿ ಕೋಡಿರಾಂಪುರ - 'ಲಿಖಿತ ಜಾನಪದ', ಪುಟ ೮.

ಅಧ್ಯಾಯ - ೭

ಪರಿಸರ ಜಾನಪದ

ಪರಿಸರ ಜಾನಪದ

ಪರಿಸರಕ್ಕೂ *(ಪರಿಸರ ಎಂಬ ಪದ ಕಾಡು, ಅರಣ್ಯ, ಸಸ್ಯ, ನಿಸರ್ಗ ಮತ್ತು ಮನುಷ್ಯ ಬದುಕುವ ಎಲ್ಲಾ ನೆಲೆಗಳು ಎಂದರ್ಥ)* ಮತ್ತು ಜನಪದರಿಗೂ ಅವಿನಾಭಾವ ಸಂಬಂಧ ಇದೆ. ಆದಿಮಾನವ ಹುಟ್ಟು ಮತ್ತು ವಿಕಾಸ ಕಂಡುಕೊಂಡಿದ್ದು ಪರಿಸರದ ಮಧ್ಯೆ. "ಮನುಷ್ಯರು ಮತ್ತು ಪ್ರಾಣಿಗಳು ಜೀವಧಾರಣೆಗಾಗಿ ಸಸ್ಯ ಜಗತ್ತನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಗಿದೆ ಎಂಬುದು ನಿರುತವೇ ಸರಿ, ಜೀವಸಂತಾನದ ಪ್ರಾರಂಭದಿಂದ ಈ ಪರಿಕ್ರಮ ನಡೆದೇ ಇದೆ. ಕಾಲಕ್ರಮೇಣ ಪರಿಸರದ ರಹಸ್ಯವನ್ನು ಅರಿತುಕೊಂಡು ಕೆಲವೊಮ್ಮೆ ಅದಕ್ಕೆ ವಿರುದ್ಧವಾಗಿ ವರ್ತಿಸಿದರೂ ಬಹುತೇಕವಾಗಿ ಅದಕ್ಕೆ ಹೊಂದಿಕೊಂಡೇ ಮುಂದುವರೆದಿದ್ದಾನೆ. ಹೀಗಾಗಿ ಪರಿಸರಕ್ಕೂ ಜನಪದರಿಗೂ ನಡುವೆ ಇರುವ ಸಂಬಂಧ ಸಹಜ, ನಿಕಟ, ಗಾಢ, ಸೂಕ್ಷ್ಮಾತೀಸೂಕ್ಷ್ಮ, ನಿರಂತರ. ಅಂದಮೇಲೆ ಪರಸ್ಪರ ಸಂಬಂಧದ ಪರಿಣಾಮಕಕ್ರಿಯೆ ಪ್ರತಿಕ್ರಿಯೆಗಳು ವಿವಿಧ ಜಾನಪದ ಪ್ರಕಾರಗಳಲ್ಲಿ ಹೊಳಲುಗೊಡುತ್ತವೆ. ಇಂಥ ಪ್ರಕ್ರಿಯೆಗಳನ್ನು ಪರಿಸರ ಜಾನಪದವೆಂದು ಕರೆಯಬಹುದಾಗಿದೆ." ೧

ಪರಿಸರದ ಜೈವಿಕ ವೈವಿಧ್ಯದ ಬಗ್ಗೆ ಬುದ್ಧಿಜೀವಿಗಳು, ಪರಿಸರವಾದಿಗಳು, ಸಾಹಿತಿಗಳು, ಯಾಕಾಗಿ ಮತ್ತು ಇಷ್ಟೊಂದು ತೀವ್ರತೆಯಿಂದ ಪರಿಸರದ ಉಳಿವಿಗಾಗಿ ಹೋರಾಡುತ್ತಾರೆ ಎಂಬುದು ಕೇಂದ್ರವವಾಗಿಟ್ಟುಕೊಂಡು ನೋಡಿದಾಗ ಈ ರೀತಿಯಾಗಿ ವಿಶ್ಲೇಷಿಸಿಕೊಳ್ಳಬಹುದು. ಇಡೀ ಪ್ರಪಂಚದಲ್ಲೇ ಕೇವಲ ೧೨ ರಾಷ್ಟ್ರಗಳಲ್ಲಿ ಮಾತ್ರ ಅಪರೂಪದ ಜೈವಿಕ ಸಂಪತ್ತನ್ನು ಕಾಣಬಹುದು. ಅವುಗಳೆಂದರೆ, ಭಾರತ, ಚೀನಾ, ಮಲೇಶಿಯಾ, ಇಡೋನೇಷಿಯಾ, ಜೈಲ್, ಪೆರು, ಬ್ರಿಜಿಲ್, ಮಡಗಾಸ್ಕರ್ ಈಕ್ವಡಾರ್, ಮೆಕ್ಸಿಕೊ, ಕೊಲಂಬಿಯಾ ಮತ್ತೆ ಆಸ್ಟ್ರೇಲಿಯಾ. ಭೂಮಿಯ ಮೇಲೆ ಇಂದು ಲಭ್ಯವಿರುವ ಜೀವರಾಶಿಯ ಶೇಕಡಾ ೭೦ ಭಾಗದಷ್ಟು ಈ ೧೨ ರಾಷ್ಟ್ರಗಳಲ್ಲಿವೆ. ಪರಿಸರದಲ್ಲಿ ಜೈವಿಕ ವೈವಿಧ್ಯವನ್ನು ಉಳಿಸಿಕೊಂಡು ಬರಬೇಕೆಂಬುದಕ್ಕೆ ಪ್ರಮುಖವಾಗಿ ಎರಡು ಕಾರಣಗಳನ್ನು ಕೊಡಬಹುದು. ಒಂದನೆಯದು, ಈ ಭೂಮಿಯ ಮೇಲೆ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಇದು ನೈತಿಕ ಕಾರಣ. ಎರಡನೆಯದು ಮನುಷ್ಯನನ್ನು ಒಳಗೊಂಡಂತೆ ಜೀವ ಸಂಕುಲದ ಉಳುವಿನ ಪ್ರಶ್ನೆ. ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಗಳು ಬದುಕುವ ಹಕ್ಕನ್ನು ಪಡೆದಿವೆಯಲ್ಲದೆ, ಪರಿಸರದಲ್ಲಿ ನಿರ್ದಿಷ್ಟವಾದ ಕಾರ್ಯವನ್ನು ನಿರ್ವಹಿಸುತ್ತವೆ. ಸಸ್ಯಗಳು ಅನೇಕ ಬಗೆಯ ಪಕ್ಷಿಗಳಿಗೆ, ಕ್ರಿಮಿಕೀಟಗಳಿಗೆ ಆಸರೆ ನೀಡುತ್ತವೆ. ಕಾಡುಗಳು ಭೂಮಿಯ ಮೇಲ್ಮಣ್ಣನ್ನು

[illegible]

[illegible]

[illegible]

[illegible]

ರಕ್ಷಿಸುತ್ತವೆ. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಶಾಖವಾಗಲಿ, ಶೀತವಾಗಲಿ ಅತಿಹೆಚ್ಚಾಗದಂತೆ ನಿಯಂತ್ರಣಮಾಡಿ ವಾಯುಗುಣವನ್ನು ಸಮತೋಲನದಲ್ಲಿಡುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜಕವನ್ನು ಉತ್ಪಾದನೆ ಮಾಡಿ ವಾಯುಮಾಲಿನ್ಯದಲ್ಲಿರುವ ಇಂಗಾಲದ ಡೈಆಕ್ಸೈಡ್‌ನ್ನು ಹೀರುತ್ತವೆ. ಗಾಳಿಯ ವೇಗವನ್ನು ತಗ್ಗಿಸುತ್ತವೆ. ಓಜೋನ್ ಪದರವು ನಾಶವಾಗದಂತೆ ಸಂರಕ್ಷಿಸುತ್ತವೆ. ಅನೇಕ ಬಗೆಯ ಪ್ರಾಣಿಸಂಕುಲಕ್ಕೆ ಆಶ್ರಯವಾಗಿವೆ. ಮರಗಳು ಧೂಳಿನ ಕಣಗಳಿಂದ ಶುದ್ಧಿಗೊಳಿಸುತ್ತವೆ. ಬಿಸಿಲಿನ ಶಾಖದಿಂದ ಪ್ರಾಣಿ ಪಕ್ಷಿಗಳಿಗೆ ರಕ್ಷಣೆ ನೀಡುತ್ತವೆ. ಶಬ್ಧವನ್ನು ಹೀರುಕೊಳ್ಳುತ್ತವೆ. ವೈವಿಧ್ಯಮಯ ಮರಗಿಡಬಳ್ಳಿಗಳಿಂದ ಕೂಡಿದ ಕಾಡುಗಳು ತುಂಬ ಸಂಕೀರ್ಣವಾದ ಪರಿಸರ ವ್ಯವಸ್ಥೆಗಳಾಗಿವೆ.

ಮಾನವ ಇಂದು ಸಹ ತನ್ನ ಗಳಿಕೆಯ ಎಪ್ಪತ್ತು ಭಾಗದಷ್ಟು ಪರಿಸರವನ್ನು ಅವಲಂಬಿಸಿದ್ದಾನೆ. ಇಂದು ಅನೇಕ ಬುಡಕಟ್ಟುಗಳು ಅರಣ್ಯಗಳನ್ನು ಬಿಟ್ಟು ಬಂದಿಲ್ಲ. ಬಲವಂತದಿಂದ ಬಂದರೂ ಜೀವನ ಸಾಗಿಸುವುದು ದುಸ್ತರವೆನಿಸಿದೆ. ಮನುಷ್ಯ ಏನೆಲ್ಲಾ ಸೌಲಭ್ಯಗಳನ್ನು ತಂತ್ರಜ್ಞಾನದಿಂದಲೇ ಪಡೆಯುತ್ತಿರುವದಾದರೂ ಮೂಲಭೂತ ಸಮಸ್ಯೆಗಳನ್ನು ನೀಗಿಸಿಕೊಳ್ಳುವಲ್ಲಿ ವಿಫಲನಾಗಿದ್ದಾನೆ. ಮನುಷ್ಯ ಒಂದಲ್ಲಾ ಒಂದು ಬಗೆಯಲ್ಲಿ ಪರಿಸರವನ್ನು ಅವಲಂಬಿಸಿರುವುದನ್ನು ಕಾಣಬಹುದು. ಉತ್ಪಾದನೆ, ಅನುಭೋಗಿ, ಮಾರುಕಟ್ಟೆ ಆರೋಗ್ಯ, ಜಾಗತೀಕರಣ, ಕಂಪ್ಯೂಟರೀಕರಣ ಹೀಗೆ ಸಮಸ್ತ ವಿಷಯುಗಳಿಗೂ ಜೀವಧಾತುವಾಗಿದೆ ಪರಿಸರ. " ಜೀವ ಜಗತ್ತೆಲ್ಲವೂ ಒಂದು ಅವಿಭಕ್ತಿ ಕುಟುಂಬವಾದ್ದರಿಂದ ಪ್ರಾಣಿ, ಸಸ್ಯವರ್ಗಗಳ ವೃದ್ಧಿ ಹ್ರಾಸಗಳು ಮಾನವ ಸಮುದಾಯದ ಮೇಲೆ ಅಪಾರ ಪ್ರಭಾವ ಬೀರುತ್ತವೆಂಬುದು ಸರ್ವಾನುಭವದ ಸಂಗತಿಯಾಗಿದೆ. ಸಹಸ್ರ ಸಹಸ್ರ ವರ್ಷಗಳಿಂದ ಸಾಲುವಳಿಯಾಗುತ್ತಿರುವ ಪರಿಸರಾತ್ಮಕ ಪ್ರಭಾವ ಪರಿಕ್ರಮಣ ಜಾನಪದರಲ್ಲಿ ಪ್ರತಿಫಲನಗೊಳ್ಳುತ್ತಿರುವುದುಂಟಷ್ಟೇ. ಈ ಪ್ರತಿಫಲನದ ಅಧ್ಯಾಯವನ್ನು ಪರಿಸರ ಜಾನಪದ ಹೆಸರಿನಲ್ಲಿ ನಡಸಬಹುದಾಗಿದೆ. ಭೌಗೋಳಿಕ, ಮಾನವಿಕ, ವೈಜ್ಞಾನಿಕ, ಪ್ರಾಣಾತ್ಮಕ, ಸಸ್ಯಾತ್ಮಕ, ಪಂಚತತ್ವಾತ್ಮವೇ ಮೊದಲಾದ ನೆಲೆಗಳಲ್ಲಿ ಪರಿಸರ ಜಾನಪದವನ್ನು ಅಧ್ಯಯನ ಮಾಡಬಹುದಾಗಿದೆ"[೨]. ಮಸಾಜ ವಿಜ್ಞಾನಿಯೊಬ್ಬ ಮನುಷ್ಯನ ನೆಲೆಯನ್ನು ಅಧ್ಯಯನ ಮಾಡುತ್ತಿದ್ದಾನೆ ಎಂದರೆ ಅದರಲ್ಲಿ ಪರಿಸರವೇ ಬಹಳಷ್ಟು ಪಾಲು ಪಡೆದಿರುತ್ತದೆ ದೇ. ಜ. ಗೌ. ರವರು ಪರಿಸರ ಖಾಳಜಿಗೆ ಸಂಬಂಧಪಟ್ಟಂತೆ ಅಭಿಪ್ರಾಯವನ್ನು ಈ ರೀತಿ ಅಭಿವ್ಯಕ್ತಿಸುತ್ತಾರೆ. "ಮಾನವ ಇಂದು ಸ್ವತಂತ್ರನಲ್ಲ ಸ್ವಾಲಂಬಿಯೂ ಅಲ್ಲ. ಅವನು ಸದಾಪರತಂತ್ರ ಹಾಗೂ ಪರಾವಲಂಬಿ ಅವನು ನಿಸರ್ಗವನ್ನೊಲಿಸಿಕೊಂಡು ಇದರ ಪ್ರಯೋಜನ ಪಡೆಯುವುದಾದರೆ ಸುಖವಾಗಿ ಬಾಳುತ್ತಾನೆ. ಅದರ ವಿರುದ್ಧವಾಗಿ ಸೆಣಸಿ ಹೋರಾಟ ನಡೆಸುವುದಾರೆ ಅವನು ನಿರ್ನಾಮ ನಾಗುತ್ತಾನೆ".[೩] ಮಾನವನ ಬದುಕಿನಲ್ಲಿ ರೂಢಿಸಿಕೊಂಡ ಆಚರಣೆ, ಸಂಪ್ರದಾಯ, ಆರಾಧನೆ, ನಂಬಿಕೆ, ಪುರಾಣವಲ್ಲದೆ ಔಷಧೀಯ ವಿಜ್ಞಾನಿಗಳ ವೈದ್ಯದಲ್ಲಿ ಪರಿಸರ ಯಾವ ರೀತಿ ಬಳಕೆಯಾಗುತ್ತಿದೆ ಎಂಬುವುದನು ಅಧ್ಯಯನಕ್ಕೆ ಒಳಪಡಿಸುವುದೇ ಪರಿಸರ ಜಾನಪದದ ಉದ್ದೇಶ.

ಈ ಬಗೆಯ ಆಲೋಚನಾಕ್ರಮವು ಅಮೇರಿಕದಲ್ಲಿ ರೂಪುಗೊಂಡಿದ್ದು, ವಿಷಯ ನಿಷ್ಠ (Thematic Folklore) ಜಾನಪದವಾಗಿ ಹೊರ ಹೊಮ್ಮಿತು. "ಮನುಷ್ಯ ಮತ್ತು ನಿರ್ಸದ ನಡುವಿನ ಸಂಬಂಧವನ್ನು ವಿಶ್ಲೇಷಿಸಿಕೊಳ್ಳುವಾಗ ಆಧುನಿಕ ಸನ್ನಿವೇಶದ ಉತ್ಪತ್ತಿಯಾದ ಪರಿಸರವಾದದ ಸಸ್ಯ ಜಾನಪದದ ತಿಳುವಳಿಕೆಯನ್ನು ಪ್ರಭಾವಿಸಿಬಿಡಬಹುದು. ಅಂದರೆ ಆಧುನಿಕ ಸಮಾಜದಲ್ಲಿ ಮನುಷ್ಯ ಮತ್ತು ನಿಸರ್ಗದ ಸಂಬಂಧವನ್ನು ದಮನಕಾರಿ ಅನ್ನುವ ಪೂರ್ವಗ್ರಹೀತದಿಂದ ಗ್ರಹಿಸಿಕೊಂಡು ಪಾರಂಪರಿಕ ಸಮಾಜದ ಮನುಷ್ಯ ಮತ್ತು ನಿಸರ್ಗದ ಸಂಬಂಧ ಆದರ್ಶವಾದೀ ನೆಲೆಯಲ್ಲಿ ವಿವರಿಸುವಂತೆ ಒತ್ತಾಯಿಸಿ ಬಿಡಬಹುದು. ಈ ಒಂದು ತಾತ್ವಿಕ ವಿಚಾರದ ನೆನಪಿನಲ್ಲಿ ಪಾರಂಪರಿಕ ಸಮಾಜದ ಮನುಷ್ಯ ಮತ್ತು ನಿಸರ್ಗದ ಸಂಬಂಧ ಸ್ವರೂಪವನ್ನು ಚಾರಿತ್ರಿಕ ನಿರ್ದಿಷ್ಟತೆಯಲ್ಲಿ ವಿಶ್ಲೇಷಿಸಲಾಗಿದೆ".[೬] ಈ ವಿಷಯದ ಅಧ್ಯಯನವು ಮನುಷ್ಯ ಮತ್ತು ಪರಿಸರ ನಡುವಿನ ಪಾರಂಪರಿಕ ಮತ್ತು ಆಧುನಿಕತೆಗಳ ಗ್ರಹಿಕೆಯಾಗಿದೆ.

ಜಗತ್ತಿನ ಎಲ್ಲಾ ಜನಾಂಗ ಸಂಸ್ಕೃತಿಗಳಲ್ಲಿ ಪ್ರಾಚೀನ ಕಾಲದಿಂದಲೂ ಒಂದೊಂದು ವೃಕ್ಷವೂ ಕುಲದೇವರ ಸಂಕೇತಗಳಾಗಿ ಬೆಳೆದು ಬಂದಿದೆ. ತುಳಸಿ, ಎಳ್ಳು,ಕೇದಿಗೆ ಗುಜರಾತಿನ ಆದಿವಾಸಿಗಳಿಗೆ ಅತ್ಯಂತ ಪ್ರಿಯವಾದುದು.'ಕಡಿದರೆ ಮಾವು ಸಂಬಂಧಿಯ ಸಾವು' ಎಂಬ ನಂಬಿಕೆ ಒರಿಸ್ಸಾ 'ದೇವರ' ಗಿರಿಜನರಲ್ಲಿದೆ. ಈ ಮರದ ಬಗ್ಗೆ ಅಪಾರವಾದ ಗೌರವ ಭಕ್ತಿ ಪೂಜ್ಯತೆ ರೂಢಿಯಲ್ಲಿದೆ. ಪಾರ್ಸಿ ಜನಾಂಗದಲ್ಲಿ ಮಗುವಿಗೆ ಜನಿವಾರ ತೊಡಿಸುವಾಗ ಕ್ಷುದ್ರ ಶಕ್ತಿಗಳ ಉಚ್ಚಾಟನೆಗಾಗಿ ದಾಳಿಂಬೆ ಬೀಜಗಳನ್ನು ಮಂತ್ರಾರಕ್ಷತೆಗಳನ್ನಾಗಿ ಬಳಸುತ್ತಾರೆ. ಮತ್ತು ಮರದಲ್ಲಿ ಹಿರಿಯರ ಆತ್ಮಗಳು ವಾಸಿಸುತ್ತವೆ ಎಂಬ ಬಂಗಾಳದ ಒಗ್ಲೀಸ್ ಮತ್ತು ಚಾರಿಸ್ ಜನಾಂಗವು ಈ ಕೊಂಬೆಗಳ ಮಂಟಪದಲ್ಲಿ ಮದುವೆ ಮಾಡುತ್ತಾರೆ. ಸಂತಾನ ಅಭಿವೃದ್ಧಿಗಾಗಿ ಪೂಜಿಸುತ್ತಾರೆ.

ಹೀಗೆ ನಿಸರ್ಗದ ಜೀವಭಯವು ಜನಪದರೊಂದಿಗೆ ಅವಿನಾಭಾವಸಂಬಂಧ ಹೊಂದಿದೆ. "ಪ್ರಾಚೀನ ಸಂದರ್ಭದಲ್ಲಿ ಮಾನವನ ಆಲೋಚನೆಯು ಸ್ವರೂಪ ಮತ್ತು ಅದರ ಬೆಳವಣಿಗೆಯ ಕ್ರಮವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಮಾರ್ಕ್ಸವಾದಿ ಮಾನವಶಾಸ್ತ್ರಜ್ಞ ಮೌರಿಸ್ ಗೊಡಲಿಯರ್ ನಿಸರ್ಗದ ಜೊತೆಗಿನ ಮಾನವ ಸಂಬಂಧ ಸ್ವರೂಪವನ್ನು ಉತ್ಪಾದನಾ ವಿಧಾನದ ಹಿನ್ನೆಲೆಯಲ್ಲಿ ಚಾರಿತ್ರಿಕವಾಗಿ ವಿಶ್ಲೇಷಿಸುತ್ತಾನೆ. 'ಬರೂಯಾ' ಆದಿವಾಸಿಗಳಲ್ಲಿ ಚಾಲ್ತಿಯಲ್ಲಿರುವ ಪುರಾಣವೊಂದನ್ನು ವಿಶ್ಲೇಷಿಸುವ ಮೂಲಕ ಪ್ರಕೃತಿ ಮತ್ತು ಸಂಸ್ಕೃತಿಯ ಅಂಶಗಳು ಹೇಗೆ ಮತ್ತು ಯಾಕಾಗಿ ವರ್ಗಾವಣೆಗೊಳ್ಳುತ್ತವೆ. ಅಲ್ಲದೆ ಮಾನವನ ಪ್ರಾಕೃತಿಕ ಹಾಗೂ ಸಾಮಜಿಕ. ವಾಸ್ತವಗಳು ಪುರಾಣದಲ್ಲಿ ಚಿತ್ರ ವಿಚಿತ್ರವಾದ ಆಕೃತಿಗಳಾಗಿ ಯಾಕಾಗಿ ಮತ್ತು ಯಾಕೆ ಅದೇ ರೀತಿಯಲ್ಲಿ ಕಾರ್ಯ ಪರಿವರ್ತನೆಯನ್ನು ಪಡೆದುಕೊಳ್ಳುತ್ತವೆ ಎನ್ನುವ ಪ್ರಶ್ನೆಯನ್ನು ಪ್ರಕೃತಿ ಹಾಗೂ ಸಂಸ್ಕೃತಿಯ ಸಂಬಂಧ ಸ್ವರೂಪಗಳನ್ನು ವಿಶ್ಲೇಷಿಸಿದ್ದಾನೆ".[೭] ಈ ವಿಶ್ಲೇಷಣಾ ಕ್ರಮವು ಜನಪದರ ಮತ್ತು ಪರಿಸರ ನಡುವಿನ

[illegible]

[illegible]

[illegible]

ತಾತ್ವಿಕ ಸಂಬಂಧ ಹಿನ್ನೆಲೆಯಲ್ಲಿ ನಿರ್ವಚಿಸುತ್ತದೆ. ಹೀಗೆ ಪ್ರಕೃತಿ ಹಾಗೂ ಸಂಸ್ಕೃತಿ ಹೇಗೆ ಒಂದರೊಳಗೊಂದು ಮಿಳಿತಗೊಂಡಿರುತ್ತವೆ ಎಂಬುದೇ ಅಧ್ಯಯನದ ವಸ್ತು.

ಪ್ರಾಚೀನ ಕಾಲದಿಂದಲೂ ವೃಕ್ಷಗಳನ್ನು ಕುಲದೇವತೆಗಳನ್ನಾಗಿ ಮಾಡಿಕೊಂಡ ಜನಾಂಗವೇ ಹೆಚ್ಚು. ಕದಂಬ ರಾಜಮನೆತನಕ್ಕೆ ಕದಂಬ ಈಚಲು ವೃಕ್ಷ ವಂಶಪಾರಂಪರ್ಯದ ಕುರುಹಾಗಿದೆ. ಅದೇ ರೀತಿ ಬೋಧಿ ವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದುದು. ಈ ಘಟನೆಗಳು ನಮ್ಮ ಸಂಸ್ಕೃತಿಯೊಂದಿಗೆ ಪ್ರಾಚೀನತೆಯಿಂದಲೂ ಸಂಬಂಧ ಹೊಂದಿದೆ. ಬಿ.ಜಿ.ಎಲ್. ಸ್ವಾಮಿ 'ಹಸಿರುಹೊನ್ನು' ವಿನಲ್ಲಿ ಸೂಚಿಸಿರುವಂತೆ ''ಉತ್ತರ ಭಾರತದ ಪುರಾಣಗಳ ಪ್ರಕಾರ ಕೃಷ್ಣನ ಬಾಲಲೀಲೆಗಳೊಡನೆ ನಿಕಟ ಸಂಬಂಧ ಪಡೆದಿದ್ದ ಮರ ಕದಂಬ. ತ್ರಿಪುರ ಸಂಹಾರದ ಬಳಿಕ ಆಯಾಸಗೊಂಡ ಶಿವನ ಹಣೆಯಿಂದ ಬೆವರ ಹನಿಯೊಂದು ಬಿದ್ದು ಮರವಾಗಿ ಮಾರ್ಪಟ್ಟು ಕದಂಬ ವೃಕ್ಷವಾಯಿತು. ಉಮೆ ಕದಂಬ ವನವಾಸಿನಿ ಕದಂಬ ಪುಷ್ಪಗಳಿಂದ ಶಿವನನ್ನು ಅರ್ಚಿಸಿದಳು, ಶಿವನಿಗೆ ಪ್ರಿಯವಾದ ಹೂ ಮಧುರೆಯ ಸೋಮಸುಂದರೇಶ್ವರನಿಗೆ ಸ್ಥಳ ವೃಕ್ಷ (ಈ ವೃಕ್ಷದ ಒಣಮರವನ್ನು ದೇವಾಲಯದ ಒಳ ಪ್ರಕಾರಗಳಲ್ಲಿ ಈಗಲೂ ಕಾಣಬಹುದು) ತಮಿಳರಿಗೆ ಕದಂಬ ಮರ ಸಂಗ್ರಾಮ ವಿಜಯದ ಸಂಕೇತ 'ಸಂಗಮ' ದೊರೆಗಳಿಗೆ ಇದು ರಾಜ್ಯವನ್ನು ಕಾಯುವ ಕಾವಲು ಮರ. ಇದನ್ನು ಕಡಿಯಕೂಡದೆಂಬ ಕಟ್ಟಳೆಯಿತ್ತು ಶತ್ರುಗಳಿಗೆ ಈ ಮರವೇ ಮೊದಲನೆಯ ಗುರಿ. ಮರವನ್ನು ಉರುಳಿಸಿದರೆ ರಾಜ್ಯಶ್ರೀ ವಶವಾದಂತೆಯೇ. ಹಾಗೆ ಕಡಿದ ಮರದಿಂದ ರಣಭೇರಿಗಳನ್ನು ತಯಾರಿಸುತ್ತಿದ್ದರು. ಎತ್ತಿನ ಕಾಳಗ ಆರಂಭವಾಗುವ ಮುನ್ನ ಎರಡು ಕಡೆಯ ಮುಂದಾಳುಗಳು ಕದಂಬ ಮರವನ್ನು ಪೂಜಿಸುತ್ತಿದ್ದರು''.[೬] ಬನ್ನಿಮರವು ಸಹ ರಾಮಾಯಣ ಮಹಾಭಾರತ ಕಾಲದಿಂದಲೂ ಪೂಜೆಗೆ ಅರ್ಹವಾಗಿರುವುದನ್ನು ಕಾಣಬಹುದು. ಪಾಂಡವರು ವನವಾಸಕ್ಕೆ ಹೋಗುವಾಗ ತಮ್ಮ ಆಯುಧಗಳನ್ನು ಬನ್ನಿಮರದಲ್ಲಿ ಇಟ್ಟು, ಇವು ಪಾಂಡವರಿಗೆ ಮಾತ್ರ ಕಾಣಬೇಕೆಂದು ಹೇಳಿ, ಹನ್ನೆರಡು ವರ್ಷ ವನವಾಸ ಹಾಗೂ ಒಂದು ವರ್ಷ ಅಜ್ಞಾತವಾಸ ಮುಗಿಸಿಬಂದ ಮೇಲೆಯೂ ಅದೇ ಮರದಲ್ಲಿ ಆಯುಧಗಳನ್ನು ಕಂಡು ಸಂತೋಷವಾಗಿ ಆ ಮರಕ್ಕೆ ಪೂಜೆಯನ್ನು ಸಲ್ಲಿಸಿ ಆಯುಧಗಳನ್ನು ಪಡೆದರೆಂದು ಜನಜನಿತವಾದ ಕಥೆ. ಮೌಖಿಕ ಮುಖಾಂತರವೂ ಹರಿದು ಬಂದಿದೆ. ಆದ್ದರಿಂದಲೇ ವಿಜಯದಶಮಿಯಲ್ಲಿ ಬನ್ನಿಮರಕ್ಕೆ ಪೂಜೆಯನ್ನು ಮಾಡುವುದುಂಟು. ಈಗಲೂ ಸಹ ಬನ್ನಿ ಮರವನ್ನು ಮದುವೆಯಾಗದ ಕನ್ಯೆಯರು ಮತ್ತು ಮುತ್ತೈದೆಯರು ಬೆಳಗಿನ ಹೊತ್ತಿನಲ್ಲಿ ಪೂಜೆಯನ್ನು ಸಲ್ಲಿಸಿ ಸೊಪ್ಪಿನ ತುದಿಯನ್ನು ಮುಡಿಯಲ್ಲಿ ಮುಡಿಯುತ್ತಾರೆ.

ಈ ಎಲ್ಲಾ ವಿಷಯಗಳ ತಾತ್ವಿಕ ಸಂಬಂಧವನ್ನು ಗ್ರಹಿಸಿದಾಗ ಮನುಷ್ಯ ಮತ್ತು ಪರಿಸರದ ಸಂಬಂಧವು ಪರಂಪರಾಗತವಾಗಿ ಹರಿಯುತ್ತಾ ಬಂದಿರುವುದನ್ನು ಕಾಣಬಹುದು. ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲೂ ವೃಕ್ಷವನ್ನು ಬಿಟ್ಟು ಮನುಷ್ಯನ ಬದುಕು ದುಸ್ತರವೆನಿಸುತ್ತದೆ. ಕಾಲಕ್ರಮೇಣ

ವೃಕ್ಷವು ನ್ಯಾಯದೇವತೆಯ ಸ್ಥಾನವನ್ನು ಪಡೆಯುತ್ತಾ ಬಂದಿತು. ಮರಗಳಡಿಯಲ್ಲಿ ಊರಿನ ಆಗು ಹೋಗುಗಳ ಬಗ್ಗೆ ಪಂಚಾಯಿತಿಗಳು, ಸಭೆಗಳು, ಅಲ್ಲದೆ ಮದುವೆಗಳು ನಡೆಯುವುದನ್ನು ಈಗಲೂ ಕಾಣಬಹುದು. ನಂತರ ಮರಗಳ ಸ್ಥಾನವನ್ನು ದೇವಾಲಯಗಳು ಆಕ್ರಮಿಸಿಕೊಂಡವು. ಸಾಮಾನ್ಯವಾಗಿ ದೇವಸ್ಥಾನಗಳು ಇರುವೆಡೆಯಲ್ಲಿ ಅರಳಿಮರ, ಬನ್ನಿಮರ, ಅಶ್ವತ್ಥಮರ, ಬಿಲ್ವಪತ್ರ, ಎಕ್ಕೆಗಿಡ, ತುಳಸಿ ಯಾವುದಾದರು ಇದೆ ಇರುತ್ತದೆ. ಈ ಎಲ್ಲಾ ಅಂಶಗಳು ಮನುಷ್ಯನ ಸಂಸ್ಕೃತಿ ಮತ್ತು ಪ್ರಕೃತಿಯ ನಡುವಿನ ಅಂತಃಸಂಬಂಧಗಳನ್ನು ಅರಿಯುವಲ್ಲಿ ಮಹತ್ವದ ಹೆಜ್ಜೆಗಳಾಗಿವೆ. ಇಂತಹ ಸಂಪ್ರದಾಯ ಕೇವಲ ಹಳ್ಳಿಯಲ್ಲೇ ಅಲ್ಲ ಮಹಾನಗರಗಳಲ್ಲಿಯೂ ಕಾಣಬಹುದಾಗಿದೆ. ಮನುಷ್ಯ ಎಷ್ಟೇ ಆಧುನಿಕತೆಗೆ ಒಳಪಟ್ಟಿದ್ದರೂ ತನ್ನ ಮೂಲದ ಕುರುಹುಗಳನ್ನು ಮರೆಯಲು ಸಾಧ್ಯವಿಲ್ಲ. ಜಾಗತಿಕ ಮಾನವನಲ್ಲಿಯೂ ಪ್ರಜ್ಞಾಪೂರ್ವಕವೋ ಅಪ್ರಜ್ಞಾಪೂರ್ವಕವೋ ಪೂರ್ವಜ್ಞತೆಯ ಬಗ್ಗೆ ಆಂತರ್ಯದಲ್ಲಿ ತಳಮಳಗಳಿರುತ್ತವೆ. ಅದು ಪ್ರಗತಿಯನ್ನು ಬಿಡಲಾರದ ಸಂಪ್ರದಾಯವನ್ನು ಮರೆಯಲಾರದ ಒಂದು ಬಗೆಯ ಸಂಕಟದೊಳಗೆ ಸಿಲುಕಿಕೊಂಡಿರುತ್ತಾನೆ. ಆದರೂ ಒಂದೊಂದು ಸಾರಿ ಸ್ಫೋಟಗೊಂಡು ಸಂಪ್ರದಾಯವನ್ನು ಮಂತ್ರ ತಂತ್ರಗಳಿಗೆ, ಮೂಢ ನಂಬಿಕೆಗಳಿಗೆ ಒಳಗಾಗುವುದು ಸಹಜ. ಹೊಸ ಯಂತ್ರಗಳ ಅವಿಷ್ಕಾರ ರಾಕೆಟ್ ಉಡಾವಣೆ ಸಮಯದಲ್ಲೂ ಯಜ್ಞ ಪೂಜೆಯ ನಂತರವೇ ಮುಂದಿನ ಕಾರ್ಯ. ಹೀಗೆ ಮಾನವ ಎಷ್ಟೇ ಕಂಪ್ಯೂಟರೀಕರಣಗೊಂಡರು ಅಂತರಾಳದಲ್ಲಿ ಪೂರ್ವಜ್ಞತೆಯ ಚೈತನ್ಯ ಸುಪ್ತವಾಗಿರುತ್ತವೆ. ಇದು ಆಧುನಿಕತೆಯನ್ನು ಗರ್ಭಿಸಿಕೊಂಡರೂ ಹಳೆಯದನ್ನು ಉಳಿಸಿಕೊಳ್ಳಬಲ್ಲದು. ಅಂತೆಯೇ ಹಳೆಯದನ್ನು ಹೊಸತು ಮಾಡಿ ಹೊಸತನ್ನು ಹಳೆಯದು ಮಾಡಿ ಒಂದರೊಳಗೊಂದು ಸಮಷ್ಟಿ ಸಂಯೋಗ ಸಂಶ್ಲೇಷಣೆಗೆ ಒಳಗಾಗಿಸಿ ಪರಂಪರೆಯನ್ನು ಕಟ್ಟಬಲ್ಲದು.

ದೇ. ಜ. ಗೌಡರು ಜಾನಪದ ಅಧ್ಯನದಲ್ಲಿ ಜನಪದರು ಮತ್ತು ಪರಿಸರಕ್ಕೆ ಸಂಬಂಧಪಟ್ಟಂತೆ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. ಜನಪದರು ಪರಿಸರದಲ್ಲಿ ಉಪಯುಕ್ತವಾದುದನ್ನು ಆಯ್ದು ತನ್ನ ಸಕಲ ಅಭಿವೃದ್ಧಿಗೂ ಬಳಸಿಕೊಂಡಿದ್ದಾರೆ. ಇಲ್ಲವಾದಲ್ಲಿ ಮನುಷ್ಯ ಎಂಬ ಪ್ರಾಣಿ ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿ ಇರಲು ಸಾಧ್ಯವಿರುತ್ತಿರಲಿಲ್ಲ. ಪ್ರಕೃತಿ ಕೊಡುವಂತಹ ವರಗಳನ್ನು ಬಳಸಿಕೊಂಡು ಮನುಷ್ಯ ಈ ಮಟ್ಟಕ್ಕೆ ಏರಲು ಸಾಧ್ಯವಾಯಿತು. ಅರಣ್ಯ ಸಂಪತ್ತಿನ ಮಹತ್ವವನ್ನು ಕಂಡುಕೊಂಡ ಜನಪದರು ಅದರೊಂದಿಗೆ ಪೂಜನೀಯ ಸಂಬಂಧ ಬೆಳಸಿಕೊಳ್ಳತೊಡಗಿದರು. ಪ್ರಕೃತಿಯು ಮಾನವ ಸಮಾಜಕ್ಕೆ ದೈವದತ್ತ ಅಪ್ರತಿಮ ಕೊಡುಗೆ ಪ್ರಕೃತಿಯೊಂದಿಗೆ ಮನುಕುಲದ ಸಂಬಂಧ ಅತ್ಯಂತ ಮೂಲಭೂತವಾದುದು. ಪೂರ್ವಿಕರು ಇದನ್ನು ಅರಿತೇ ಭೂಮಿಯನ್ನು ತಾಯಿಯಾಗಿ ಸ್ವೀಕರಿಸಿದ್ದರು."[2]

ನಾಗರೀಕ ಮಾನವ ಅಭಿವೃದ್ಧಿಯ ಹೆಸರಿನಲ್ಲಿ ಈ ಸಂಬಂಧವನ್ನೆ ಮರೆತಿದ್ದಾನೆ. ನಿಮಿಷ ನಿಮಿಷಕ್ಕೂ ಪ್ರಕೃತಿಯ ಮೇಲೆ ಅತ್ಯಾಚಾರ ನಡೆಯುತ್ತಿದೆ. ಪ್ರಕೃತಿಯ ಪ್ರಕೋಪಕ್ಕೆ ಭೂಮಿಯ

[illegible]

[illegible]

ಮೇಲಿನ ಜೀವ ರಾಶಿಯನ್ನೆಲ್ಲ ಹೇಳಹೆಸರಿಲ್ಲದಂತೆ ಮಾಡುವ ಶಕ್ತಿಯಿದೆ ಎಂಬುದನ್ನು ಅರಿತೂ ಅರಿಯದಂತೆ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿದ್ದಾನೆ. ಬರಬರುತ್ತಾ ಮಾನವನ ದುರಾಸೆ ಪ್ರಕೃತಿಯನ್ನು ಲಾಭ ನಷ್ಟದ ಸಂಕೇತವಾಗಿ ನೋಡುತ್ತಾ, ಈ ಅದ್ಭುತ ಸಂಪತ್ತನ್ನು ತನ್ನ ದುರಾಸೆಗೆ ಬಳಸಿಕೊಳ್ಳುತ್ತಾ, ಇಡೀ ಅರಣ್ಯವನ್ನು ನಾಶ ಮಾಡುತ್ತಿದ್ದಾನೆ. ಬೇವನ್ನು ಜನಪದರು ಖಾಯಿಲೆಗೆ ದಿವ್ಯ ಔಷಧಿಯಾಗಿ ಬಳಕೆ ಮಾಡುತ್ತಿದ್ದರು. ಆದರೆ ಇಂದು ವಿಶ್ವಮಾರುಕಟ್ಟೆಯಲ್ಲಿ ಅದರ ವಹಿವಾಟು ಹೆಚ್ಚು ಲಾಭದಾಯಕವಾಗಿದೆ. ಆದ್ದರಿಂದಲೇ ನಮ್ಮ ವ್ಯವಸ್ಥೆ ಪೇಟೆಂಟ್ ಮಾದರಿಯಲ್ಲಿ ಅನ್ಯದೇಶಿಯರಿಗೆ ಮಾರಿದ್ದೇವೆ. ರೈತರು ತಮ್ಮ ಜಮೀನಿನಲ್ಲಿರುವ ಬೇವಿನ ಸೊಪ್ಪನ್ನು ಕೀಳಬೇಕಾದರೆ ಪೇಟೆಂಟ್ ಪಡೆದ ದೇಶದ ಅನುಮತಿ ಕೇಳಬೇಕಾದ ಪರಿಸ್ಥಿತಿ ಬಂದಿದೆ. ಜನಪದರು ಗುರುತಿಸಿದಂತಹ ಹಲವಾರು ಮರಗಳು ಸಸ್ಯಕೋಟಿಗಳು ವಿಶ್ವವ್ಯಾಪಾರದಲ್ಲಿ ಜನಮನ್ನಣೆಯನ್ನು ಗಳಿಸುತ್ತವೆ. ಈ ಎಲ್ಲವನ್ನು ಗಮನಿಸಿದಾಗ ಜನಪದರ ಮನೋಜ್ಞತೆಯ ಹಿಂದೆ ಎಂತಹ ವೈಜ್ಞಾನಿಕತೆ ಇತ್ತೆಂಬುದು ಎಂದಿಗಿಂತ ಇಂದು ಹೆಚ್ಚು ಅರ್ಥವಾಗುತ್ತದೆ. ಆದಿಮಾನವನ ಅನೇಕಾನೇಕ ನಂಬಿಕೆಗಳು ಕಾಲ ಹಿಂದಕ್ಕೆ ಸರಿದಂತೆಲ್ಲ ಸಂಪೂರ್ಣವಾಗಿ ಮಣ್ಣುಗೂಡಿವೆ. ಅವನು ಕಲ್ಪಿಸಿಕೊಂಡಿದ್ದ ಮೌಲ್ಯಗಳು ಆಮೂಲಾಗ್ರವಾಗಿ ನಿರ್ಮೂಲನೆಗೊಂಡಿವೆ. ಆದರೆ ಅವನು ಸಸ್ಯ ವಿಶ್ವದ ಬಗ್ಗೆ ತಿಳಿದಿದ್ದ ಪವಿತ್ರ ಭಾವನೆಯಂತೂ ಇಂದಿಗೂ ಹುಸಿಯಾಗಿಲ್ಲ. ಆ ಭಾವನೆ ಕಾಲಾನುಗುಣವಾಗಿ ಸಂಸ್ಕಾರಗೊಂಡು ಹೊಸವೇಷ ಭೂಷಣಗಳನ್ನು ಪಡೆದಿರಬಹುದು. ಆದರೆ ಅವನ ಮೂಲಪ್ರಜ್ಞೆ ಮಾತ್ರ ಇಂದಿನ ಮಾನವನ ನರನಾಡಿಗಳಲ್ಲಿ ಸ್ವಸ್ವರೂಪದಲ್ಲಿ ಪ್ರವಹಿಸುತ್ತಿದೆ.

ಬೆಂಗಳೂರಿನ ಇಂದಿರಾನಗರದಲ್ಲಿರುವ 'ಅರ್ಥ್' ಎಂಬ ಆಯುರ್ವೇದ ಪ್ರಕೃತಿ ಚಿಕಿತ್ಸೆ ತುಂಬ ಪ್ರಸಿದ್ಧಿ ಪಡೆದಿದೆ. 'ಅರ್ಥ್' ಇರುವದೇ ಆಧುನಿಕ ಬದುಕಿನ ಅಗತ್ಯಗಳಿಗೆ ಆಯುರ್ವೇದದ ವೈದ್ಯ ತಂತ್ರಗಳನ್ನು ಯಶಸ್ವಿಯಾಗಿ ಬಳಸುವುದರಲ್ಲಿ. 'ಪಂಚಕರ್ಮ' ಚಿಕಿತ್ಸೆಯನ್ನು ಬಳಸಿ ಮನುಷ್ಯನನ್ನು ಮತ್ತೆ ಹರ್ಷಚಿತ್ತನನ್ನಾಗಿಸುತ್ತಾರೆ. ವೈದ್ಯರೆಲ್ಲ ಕೈ ಬಿಟ್ಟ ಲಕ್ವ (ಪಾರ್ಶ್ವವಾಯು) ಪೀಡಿತ ರೋಗಿಯನ್ನು ಗುಣಮುಖರನ್ನಾಗಿಸುತ್ತಾರೆ. 'ಅರ್ಥ'ನ ಸಂಸ್ಥೆಯ ನಿರ್ದೇಶಕರಾದ ಪ್ರಶಾಂತ್‌ರವರು ಯುಎಸ್‌ಎ, ಯುಕೆ, ಸಿಂಗಾಪುರ, ಹೀಗೆ ನಾನಾ ದೇಶ ಸುತ್ತಿದ್ದಾರೆ. ಅಲ್ಲಿನ ಅನೇಕ ಸಾಫ್ಟ್‌ವೇರ್ ಕಂಪನಿಗಳಿಗೆ ವೈದ್ಯಕೀಯ ಸಲಹೆಗಾರರಾಗಿದ್ದಾರೆ. ಆಯುರ್ವೇದ ಕುರಿತು ಉಪನ್ಯಾಸ ನೀಡಿದ್ದಾರೆ. ಜಾಗೃತಿ ಮೂಡಿಸಿದ್ದಾರೆ. ಆಧುನಿಕ ಬದುಕಿನಲ್ಲಿ ಆಯುರ್ವೇದದ ಆಯಾಮದ ಬಗೆಗೆ ಗಂಭೀರವಾಗಿ ಯೋಚಿಸುತ್ತಾರೆ. ಸಿಂಗಪುರದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಆಯುರ್ವೇದದ ವೈದ್ಯ ಕುರಿತು ಮಾತಾಡಿದ್ದಾರೆ. ಇಂತಹ ಸಮಯದಲ್ಲಿ ಜನರ ಪ್ರತಿಕ್ರಿಯೆ ತುಂಬ ಅದ್ಭುತವಾಗಿತ್ತು ಎನ್ನುತ್ತಾರೆ. ಸಿಹಿಮೂತ್ರ ರೋಗ, ರಕ್ತದೊತ್ತಡ, ಚರ್ಮ ಮತ್ತು ಕೂದಲಿನ ರಕ್ಷಣೆ, ಲೈಂಗಿಕ ಸಮಸ್ಯೆ, ನರಸಂಬಂಧಿ ತೊಂದರೆ, ಉಸಿರಾಟ ಅಡಚಣೆ, ಮಾನಸಿಕ ಒತ್ತಡ ಸಂಬಂಧಿ ತೊಂದರೆ, ಬೆರಳು ಗಂಟಿನ ನೋವು, ಮೂಳೆ ಮತ್ತು ಗಂಟಿನ ತೊಂದರೆ ಮುಂತಾದ

ಕಾಯಿಲೆಗೆ ಆ 'ಅರ್ಥ್' ಆರ್ಯುವೇದ ಸೆಂಟರ್‌ನಲ್ಲಿ ಪ್ರಕೃತಿ ಚಿಕಿತ್ಸೆಯುಂಟು.

ಸಾಫ್ಟ್‌ವೇರ್ ಉದ್ಯಮದಲ್ಲಿ ದುಡಿಯುತ್ತಿರುವ ಮಂದಿಯಲ್ಲಿ ಪ್ರತ್ಯುತ್ಪಾದನಾ ಶಕ್ತಿ ಕುಂಠಿತಗೊಳ್ಳುತ್ತಿದೆ ಎನ್ನುವ ಆಂತಕಕ್ಕೆ 'ಅರ್ಥ್'ನಲ್ಲಿ ಚಿಕಿತ್ಸೆ ಇದೆ. ವಿಪರೀತ ಒತ್ತಡದ ಕೆಲಸ ಇದಕ್ಕೆ ಕಾರಣ. ಇಂಥ ಪ್ರಕರಣಗಳಿಗೆ ಯಶಸ್ವಿ ಚಿಕಿತ್ಸೆ ನೀಡಿದ್ದಾರೆ. ಗರ್ಭಿಣಿಯರಿಗೆ ಇಲ್ಲಿ ಆರ್ಯುವೇದದ ಚಿಕಿತ್ಸೆ ಪಡೆದರೆ ಸೀಸಿರಿಯನ್ ಇಲ್ಲದೆ ನಾರ್ಮಲ್ ಹೆರಿಗೆ ಸಾಧ್ಯ ಎನ್ನುತ್ತಾರೆ ಇಲ್ಲಿನ ವೈದ್ಯರು.

ಆರ್ಯುವೇದ ಚಿಕಿತ್ಸೆ ಬಗ್ಗೆ ಇತ್ತೀಚೆಗೆ ದೂರದರ್ಶನದಲ್ಲಿ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಬಹು ಚರ್ಚಿತವಾಯಿತು. "ಜಾಗತೀಕರಣದ ಮತ್ತೊಂದು ಮುಖವನ್ನು ತೋರಿದ ಕಾರ್ಯಕ್ರಮ ಆಯುರ್ವೇದದ ಬಗ್ಗೆ 'ಡಿಸ್ಕವರಿ ಇಂಡಿಯಾ'ದಲ್ಲಿ ಪ್ರಸಾರವಾದ ಒಂದು ಗಂಟೆಯ ಅವಧಿಯ ವಿಶೇಷ ವರದಿ. ಜಾಗತೀಕರಣ ಜಂಜಾಟದಿಂದಾಗಿ ಮನುಷ್ಯನ ನೆಮ್ಮದಿ ಹಾಳಾಗಿದೆ. ಬದುಕುವ 'ರೇಸ್'ನಲ್ಲಿ ಆತ ಮಾನಸಿಕ, ದೈಹಿಕ ಒತ್ತಡಗಳಿಗೆ ಬಲಿಯಾಗುತ್ತಿದ್ದಾನೆ. ಹೊಸ ರೋಗಗಳ ಲಕ್ಷಣಗಳು ಗೋಚರಿಸಲಾರಂಭಿಸಿವೆ. ಆಲೋಪಥಿಯಿಂದ ಗುಣಪಡಿಸಲಾಗದ ಕಾಯಿಲೆಗಳಿಗೆ ಈ ಪರ್ಯಾಯ ಮಾರ್ಗಗಳನ್ನು ಹುಡುಕಲಾರಂಭಿಸಿದ್ದಾನೆ. ಅವುಗಳಲ್ಲೀಗ ಹೆಚ್ಚು ಜನಪ್ರಿಯವಾಗುತ್ತಿರುವುದು ಆಯರ್ವೇದ. ಅಮೇರಿಕದಲ್ಲಿ ಅಲೋಪಥಿ ವೈದ್ಯೆಯಾಗಿರುವ ಸ್ವಲಿ ಭಟ್ಟಾಚಾರ್ಯ ಆಯುರ್ವೇದ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಭಾರತ ಪ್ರವಾಸ ಮಾಡುತ್ತಾಳೆ. ಆಯುರ್ವೇದದ ಆಚರಣೆ ಅಧಿಕವಾಗಿರುವ ಕೇರಳದಲ್ಲಿ ಆಕೆ ಪರ್ಯಾಯ ಶುಶ್ರೂಷೆಯ ಬಗ್ಗೆ ನಡೆಸುವ ಯಾತ್ರೆ, ಭೇಟಿಯಾಗುವ ಆಯುರ್ವೇದ ಪಂಡಿತರುಗಳು ಅವರು ಗುಣಪಡಿಸಿರುವ ರೋಗಿಗಳನ್ನು ನೋಡುತ್ತಾ ಹೋದಂತೆ ಆಯುರ್ವೇದದ ಉತ್ತಮ ಗುಣಗಳು ಪ್ರೇಕ್ಷಕರ ಮುಂದೆ ತೆರೆದುಕೊಳ್ಳುತ್ತದೆ. ಮನುಷ್ಯ ಹುಟ್ಟಿನೊಂದಿಗೆ ವಾತ, ಪಿತ್ತ ಮತ್ತು ಕಫ ದೋಷಗಳಲ್ಲಿ ಒಂದನ್ನು ತನ್ನೊಳಗೆ ಇರಿಸಿಕೊಂಡೇ ಹುಟ್ಟುತ್ತಾನೆ. ಆಯುರ್ವೇದದ ಮುಖ್ಯ ಉದ್ದೇಶವೆಂದರೆ ಅವುಗಳನ್ನು ತಹಬದಿಯಲ್ಲಿ ಇಡುವುದು. ಗಿಡ ಮೂಲಿಕೆಗಳೇ ಆಯುರ್ವೇದದಲ್ಲಿ ಬಳಸುವ ಔಷಧಿಗೆ ಮೂಲ. ತ್ರಿಶೂರ್, ಕೋಟೆಕ್ಕಲ್ ಮತ್ತು ತಿರುವನಂತಪುರಗಳಲ್ಲಿ ವಂಶಪಾರಂಪರ್ಯವಾಗಿ ಆಯುರ್ವೇದ ಚಿಕಿತ್ಸೆ ನೀಡುತ್ತಾ ಬಂದ ಕುಟುಂಬಗಳಿವೆ. ಅಂತಹ ಒಂದು ಕುಟುಂಬಕ್ಕೆ ಸೇರಿದ ಡಾ. ವಾರಿಯರ್ ಬಳಿ ಅತ್ಯಂತ ಪುರಾತನ ಮತ್ತು ಶ್ರೀಮಂತ ಸಾಹಿತ್ಯದ ಗಣಿಯೇ ಇದೆ. ಆನೆಗಳಿಗೆ ಯಾವ ರೀತಿಯ ಶುಶ್ರೂಷೆ ನೀಡಬೇಕು ಎನ್ನುವ ಪುಸ್ತಕವಿದೆ. ಹಾಗೆಯೇ ಕ್ಯಾನ್ಸರ್ ಮತ್ತಿತರ ಕಾಯಿಲೆಗಳಿಗೆ ಮದ್ದನ್ನು ಸಿದ್ಧಪಡಿಸಲು ಬೇಕಾದ ವಿಷಯಗಳೂ ಈ ಹಳೆಯ ಕಾಲದ ಓಲೆಗರಿಗಳಲ್ಲಿದೆ ಎನ್ನುತ್ತಾರೆ ಕೇರಳದ ಆಯುರ್ವೇದ ಪಂಡಿತರು.

ಅಮೇರಿಕ ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ಆಯುರ್ವೇದ ವ್ಯಾಪಕ ಬಳಕೆ ಮತ್ತು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ಬಗ್ಗೆ ಸಂಶೋಧನೆ ನಡೆದಿದೆ. ೨೧ನೆಯ ಶತಮಾನದಲ್ಲಿ ಆಯುರ್ವೇದ ತಾನು ಕಳೆದುಕೊಂಡ ಪ್ರಾಶಸ್ತ್ಯವನ್ನು ಮತ್ತೆ ಪಡೆಯಲಿದೆ ಎನ್ನುವುದು ಸ್ವಲಿಭಟ್ಟಾಚಾರ್ಯ ಅವರ ನಂಬಿಕೆ.

ಈಗ ಇಂಗ್ಲೀಷ್ ಪದ್ಧತಿಯ ಔಷಧಕ್ಕಿಂತಲೂ ಆ ಗಿಡಮೂಲಿಕೆಯಿಂದ ತಯಾರಾದ ಆಯುರ್ವೇದಕ್ಕೆ ಹೆಚ್ಚು ಪ್ರಾಶಸ್ತ್ಯ. ಚೀನಾ, ಥಾಯ್ಲಂಡ್ ಗಿಡ ಮೂಲಿಕೆ ಔಷಧ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳಾಗಿವೆ. ಇವು ತನ್ನ ಭೂಪ್ರದೇಶದಲ್ಲಿ ದೊರೆಯುವಂಥ ಔಷಧೀಯ ಸಸ್ಯ ಸಂಪತ್ತನ್ನು ಸಂಪೂರ್ಣವಾಗಿ ಬಳಸಿಕೊಂಡು ವಿಶ್ವವ್ಯಾಪಾರದಲ್ಲಿ ಗಣನೀಯವಾಗಿ ಅಭಿವೃದ್ಧಿ ಹೊಂದಿದೆ. ಭಾರತ ಸರ್ಕಾರವೂ ಸಹ ಯೋಜನಾ ಆಯೋಗದ ಸಲಹೆಯಂತೆ "ರಾಷ್ಟ್ರೀಯ ಔಷಧ ಸಸ್ಯ ಮಂಡಲಿ" ಎಂಬ ಸರ್ಕಾರಿ ಸಂಸ್ಥೆಯನ್ನು ತೆರೆದು ಭಾರತದಲ್ಲಿ ವಿವಿಧ ಭೂಪ್ರದೇಶದಲ್ಲಿ ದೊರೆಯುವಂಥ ಗಿಡ ಮೂಲಿಕೆ ಸಸ್ಯಗಳ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾ ಅಂಥಹುಗಳನ್ನು ಗುರುತಿಸಿ ವ್ಯವಸ್ಥಿತವಾಗಿ ಬೆಳಸಿ ಆಯುರ್ವೇದ ಔಷಧೀಯವಾಗಿ ಬಳಸಿಕೊಂಡು ಕ್ಷೇತ್ರವನ್ನು ಲಾಭದಾಯಕ ಉದ್ಯಮಶೀಲ ಕ್ಷೇತ್ರವನ್ನಾಗಿ ಪರಿವರ್ತಿಸುತ್ತಿದೆ. ಜನ ಸಾಮನ್ಯರು ಅಂದು ಸಾಮಾನ್ಯ ಕಾಯಿಲೆಗೆ ಕಂಡುಕೊಂಡ ಔಷಧಿ ಸಸ್ಯಗಳು ಇಂದು ವಿಶ್ವವ್ಯಾಪಾರದಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತಿರುವುದು ನೋಡಿದರೆ ಜನಪದರ ಮನೋಧರ್ಮದ ಹಿಂದೆ ಎಂತಹ ಅದ್ಭುತವಾದ ಶೋಧನೆಯಿತ್ತೆಂದು ಆಶ್ಚರ್ಯಪಡಬೇಕಾಗುತ್ತದೆ.

ಜಾನಪದ ಪರಿಸರದ ಮಾನವ ಸಂಬಂಧದ ಛಾಯೆ ಇತ್ತೀಚೆಗೆ ಇನ್ನು ಹೆಚ್ಚು ನಿಕಟಗೊಳ್ಳುತ್ತಾ, ಅದಕ್ಕೊಂದು ಆರ್ಥಿಕ ತಳಹದಿ ಗಟ್ಟಿಗೊಳ್ಳಲಿದೆ. "ಪರಿಸರ ಜಾನಪದವನ್ನು ಸಂಪೂರ್ಣವಾಗಿ ಅರಿಯಬೇಕಾದರೆ 'ಸಸ್ಯ ವಿಜ್ಞಾನಿಯನ್ನು ಕೂಡಿಕೊಂಡು ಭಾಷಾವಿಜ್ಞಾನಿ ವೃಕ್ಷನಾಮಗಳನ್ನು ವೈದ್ಯವಿಜ್ಞಾನಿ ಜಾನಪದ ವೈದ್ಯವನ್ನು ಸಮಾಜ ವಿಜ್ಞಾನಿ ಸಸ್ಯ ಸಮಾಜವನ್ನು ಕುರಿತ ನಂಬಿಕೆಗಳನ್ನು ಕುರಿತು ಅಧ್ಯಯನ ನಡೆಸುವುದಾದರೆ, ಅನೇಕ ನೂತನ ಸತ್ಯಾಂಶಗಳು ಹೊರ ಬೀಳುವ ಸಂಭವವಿದೆ. ಜಾನಪದವೆಲ್ಲಿ ಅನಾಗರಿಕವಾದದು. ಮೌಢ್ಯ ಮೂಲವಾದದು ಎನ್ನುವ ತಿಳುವಳಿಕೆಯೇ ಅನಾಗರಿಕವಾಗುತ್ತದೆ; ಮೌಢ್ಯವಾಗುತ್ತದೆ".[೮]

ಜನಪದ ಮತ್ತು ಪರಿಸರ ಇವುಗಳೆರಡರ ನಡುವಲ್ಲಿ ಎಷ್ಟರ ಮಟ್ಟಿನ ಕೊಳುಕೊಡುಗೆಗಳಾದವು, ಮಾನವ ಅದರ ಹಿತಕ್ಕೆ ದಕ್ಕೆ ಭಾರದ ರೀತಿಯಲ್ಲಿ ಯಾವರೀತಿ ಬಳಸುತ್ತಿದ್ದ, ನಂತರ ಅವುಗಳೆರಡರ ಸ್ವರೂಪ ಎಂತದ್ದು, ಅದರ ಅಭಿವೃದ್ಧಿ ಮತ್ತು ನಶಿಸುವಿಕೆ ಮತ್ತು ಪ್ರಸ್ತುತತೆಯಲ್ಲಿ ಪರಿಸರ ಜಾನಪದದ ಪಾತ್ರವನ್ನು ಸಮಗ್ರವಾಗಿ ಅಧ್ಯಯನ ಮಾಡಲು ಕೆಳಗಿನಂತೆ ವಿಭಾಗಿಸಿಕೊಂಡಿದ್ದೇನೆ.

೭.೧. ಜನಪದರ ಸಾಂಸ್ಕೃತಿಕ ಜೀವನದಲ್ಲಿ ಪರಿಸರ.

೭.೨. ಜನಪದ ಆರ್ಥಿಕ ನೀತಿಯಲ್ಲಿ ಪರಿಸರದ ಪಾತ್ರ.

೭.೩. ಜನಪದ ಸಾಮಾಜಿಕ ಸಂಬಂಧಗಳಲ್ಲಿ ಪರಿಸರ

೭.೪. ಜನಪದ ಆರೋಗ್ಯದಲ್ಲಿ ಪರಿಸರದ ಮಹತ್ವ.

೭.೧. ಜನಪದರ ಸಾಂಸ್ಕೃತಿಕ ಜೀವನದಲ್ಲಿ ಪರಿಸರ

"ನಿಸರ್ಗದ ಜೊತೆಗಿನ ಮನುಷ್ಯ ಸಂಬಂಧಗಳು ದೈವಿಪೂರ್ವಕವಾದುದು. ಮಾನವನ ಸಂಸ್ಕೃತಿ ರೂಪುಗೊಂಡಿದ್ದೇ ಪ್ರಕೃತಿಯೊಳಗೆ, ನಮ್ಮ ಜಾನಪದಗಳು ಸಂಸ್ಕೃತಿಯೊಳಗಿನಿಂದ ಹುಟ್ಟುತ್ತದೆ. ಸಂಸ್ಕೃತಿ ಪ್ರಕೃತಿಯ ಗರ್ಭದಿಂದ ಹೊರಬರುತ್ತದೆ. ಹಾಗೂ ಪ್ರಕೃತಿಯಲ್ಲಿ ವಾಸ್ತವ್ಯ ಹೂಡುತ್ತದೆ. ಪ್ರಕೃತಿಯನ್ನು ವ್ಯವಸ್ಥೆ ಮಾಡಿಕೊಳ್ಳುವುದೇ ಸಂಸ್ಕೃತಿ".[೯] ಸಂಸ್ಕೃತಿ ನಾಗರೀಕತೆ ಹಾಗೂ ಜಾನಪದ ಪರಂಪರೆಗಳನ್ನು ಪ್ರತ್ಯೇಕ ಮಾಡಿ ವಿವರಿಸಿದಾಗಲೆಲ್ಲ ಗೊಂದಲಗಳೇಳುತ್ತವೆ. ಸಂಸ್ಕೃತಿಯ ಅಂತರ್ಗತ ಭಾವದಂತೆಯೇ ಕಾಲಾಂತರಗಳ ಪರಂಪರೆಯನ್ನು ಜಾನಪದವು ರಕ್ಷಿಸಿಕೊಂಡು ಬರುತ್ತಿರುತ್ತದೆ ಸಂಸ್ಕೃತಿ ಮತ್ತು ಪಕೃತಿಗಳು ಒಂದಕ್ಕೊಂದು ಪೂರಕವಾಗಿ ತನ್ನ ನೆಲೆಗಳನ್ನು ಕಂಡುಕೊಳ್ಳುತ್ತಾ ಹೋಗುತ್ತವೆ. ಪ್ರಕೃತಿಯು ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ನೆರವಾದರೆ ಸಂಸ್ಕೃತಿಯ ಪ್ರಕೃತಿಯನ್ನು ಉಳಿಸಲು ಕ್ರಮಿಸುತ್ತದೆ. ಪ್ರಕೃತಿ ಮತ್ತು ಸಂಸ್ಕೃತಿಗಳ ಅಂತರ್ ಕ್ರಿಯೆಗಳು ಮಾನವನ ಅಭಿವೃದ್ಧಿಯನ್ನು ನಿರ್ಧರಿಸುತ್ತವೆ. "ಪುರಾತನ ಸಂಸ್ಕೃತಿ ನಮ್ಮ ಪೂರ್ವಿಕರಿಗೆ ತೊಡಕಾಗಿತ್ತು. ಅದನ್ನು ಪಳಗಿಸಿ ತಮ್ಮ ಸಂಸ್ಕೃತಿಯನ್ನು ನಿರ್ಮಿಸಿ ಕೊಳ್ಳಬೇಕಿತ್ತು. ಆಗ ಪ್ರಕೃತಿಯಿಂದ ಬಿಡಿಸಿಕೊಳ್ಳಲು ಅವರು ಒದರಿಕೊಂಡು ಎದ್ದರು. ಒಂದು ಮಿತಿಯಲ್ಲಿ ಪ್ರಕೃತಿ ವಿರುದ್ಧವಾಗಿಯೇ ಸಂಸ್ಕೃತಿಯನ್ನು ಕಟ್ಟಿಕೊಂಡರು. ಆಗ ಸಂಸ್ಕೃತಿಗೆ ವಿರುದ್ಧವಾಗಿ ಪ್ರಕೃತಿ ಕೂಡ ಒಂದು ಸಂಸ್ಕೃತಿ ಎಂಬುದು ಅವರಿಗೆ ಅರ್ಥವಾಗಿರಲಿಲ್ಲ. ಈಗ ಪ್ರಕೃತಿ ಇಲ್ಲದೆ ಸಂಸ್ಕೃತಿ ಉಳಿಯುವುದಿಲ್ಲ ಎಂಬುದು ದೃಢಪಟ್ಟಿದೆ. ಬದುಕುಳಿಯವುದಕ್ಕಾಗಿ ನಾವಿಂದು ಪ್ರಕೃತಿ ಸಂಸ್ಕೃತಿಯನ್ನು ಕಟ್ಟಿಕೊಳ್ಳಬೇಕಾಗಿದೆ."[೧೦]

ಪರಿಸರ ಮತ್ತು ಮನುಷ್ಯನ ಸಾಂಸ್ಕೃತಿಕ, ಪಾರಂಪರಿಕ ಸಂಬಂಧವನ್ನು ಗುರುತಿಸಬೇಕಾದರೆ ಸಂಪ್ರದಾಯ ಆಚರಣೆಯನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. ಮನುಷ್ಯನ ಸಾಂಸ್ಕೃತಿಕ ಜೀವನದ ಪದರುಗಳಲ್ಲಿ ಪರಿಸರವೂ ಹಾಸುಹೊಕ್ಕಾಗಿದೆ. ಜಗತ್ತಿನ ಯಾವುದೇ ಜನಾಂಗವಿರಲಿ ಸಂಸ್ಕೃತಿ ಎಲ್ಲೇ ಉದ್ಭವಿಸಲಿ ಅವರ ಜೀವನಕ್ರಮ ಭೌಗೋಳಿಕ ಪರಿಸರದ ಒತ್ತಡದಿಂದ ಪ್ರಭಾವಿತವಾಗಿರುತ್ತದೆ. ಮನುಷ್ಯನ ಹುಟ್ಟು ಸಾವು, ವಿವಾಹ, ಮುಂತಾದ ಸಮಯಗಳಲ್ಲಿ ಸಸ್ಯಗಳಿಲ್ಲದೆ ಆ ಕಾರ್ಯಗಳು ನಡೆಯುವುದಿಲ್ಲವೇನೋ ಎನ್ನುವ ಮಟ್ಟಿಗೆ ಅಂತರ್ ಸಂಬಂಧಗಳು ಏರ್ಪಟ್ಟಿವೆ. "ಪಾಲೆಮರ ಸಮೃದ್ಧಿಯ ಸಂಕೇತವಾಗಿ ತೌಳವ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಬಂಟ ಹಾಗೂ ಮುಗೇರ ಎನ್ನುವ ಕೆಳವರ್ಗದ ಜಾತಿಯಲ್ಲಿ ಮದುವೆ ನಡೆಯುವಾಗ ಗಂಡಿನ ಮನೆಯಲ್ಲಿ ಮೂಹೂರ್ತ ಕಂಬ ಅಥವಾ 'ಕನ್ಯಾಕಂಬ'ವನ್ನು ಮನೆಯ ಅಂಗಳದಲ್ಲಿ ನೆಟ್ಟಿರುತ್ತಾರೆ. ಹೆಚ್ಚಾಗಿ ಈ ಕಾರ್ಯಕ್ಕೆ ಹಾಲೆಮರವನ್ನೇ ಅವಲಂಬಿಸಿರುತ್ತಾರೆ. ಧಾರೆಯಾಗುವಾಗ ಮೊದಲು ಕನ್ಯಾಕಂಬಕ್ಕೆ ಗಂಡು, ತಾಳಿಯನ್ನು ಕಟ್ಟುತ್ತಾನೆ. ಆನಂತರ ಮದುವೆಯ ಎಲ್ಲಾ ಕ್ರಿಯಾವಿಧಿಗಳು ನಡೆಯುತ್ತವೆ. ದೀಪಾವಳಿ ಹಬ್ಬದ ಸಮಯದಲ್ಲಿ ಬಲಿಪಾಡ್ಯಮಿಯಂದು ಭೂಮಿ ಪುತ್ರ ಬಲಿಯೇಂದ್ರನನ್ನು ಭೂಮಿಗೆ

[illegible]

[illegible]

ಬರಮಾಡಿಕೊಳ್ಳುವ ಕ್ರಿಯಾಚರಣೆ ಇದೆ. ಅಂದು ರಾತ್ರಿ ಗದ್ದೆಯಲ್ಲಿ ದೀಪವನ್ನು ಇಟ್ಟು ಬಲಿಯೇಂದ್ರರನನ್ನು ಕುರಿತ ಪಾಡ್ದನ ಹೇಳಿ ಬಲಿಯೋ ಕೋ .... ಎಂದು ಕೂಗುತ್ತಾ ಬಲಿಯೇಂದ್ರನನ್ನು ಕರೆಯುತ್ತಾರೆ. ಅಂಗಳದಲ್ಲಿ ಹಾಲೆ ಮರವನ್ನು 'ಬಲಯೇಂದ್ರರ ಪಾಲೆ' ಎಂದು ಕರೆಯುತ್ತಾರೆ. ಸುಗ್ಗಿ ಬೆಳೆಯ ಹೊತ್ತಿಗೆ ನಡೆಯುವ ಈ ಕ್ರಿಯಾಚರಣೆಯಲ್ಲಿ 'ಹಾಲಿನ ಮರ' ಎಂದು ಗುರುತಿಸುವ 'ಹಾಲೆಮರ' ಸಮೃದ್ಧಿಯ ಸಂಕೇತವಾಗುತ್ತದೆ. ಹಾಲುಸುರಿಸುವ ಕಾರಣದಿಂದ ಸಮೃದ್ಧಿಯ ಅರ್ಥದಲ್ಲಿ ಸಂಸ್ಕೃತಿಯ ಗ್ರಹಿಕೆಯಲ್ಲಿ ಈ ಮರ ವಿಶಿಷ್ಟವಾದುದು, ಮಾತ್ರವಲ್ಲ ಆರೋಗ್ಯ ಸಂರಕ್ಷಣೆಯ 'ಮಧು' ಕುಡಿಯುವ ಕ್ರಿಯಾಚರಣೆಯಲ್ಲಿ ಆಟಿ ಅಮವಾಸೆಯ ಕತ್ತಲೆ ಬೆಳಕು ಮೂಡುವ ಸಂಧಿಕಾಲದಲ್ಲಿ ಈ ಮರ ಅಸಾಮಾನ್ಯವಾಗುತ್ತದೆ, ಮಾಂತ್ರಿಕ ಶಕ್ತಿಯನ್ನು ಒದಗಿಸುತ್ತದೆ".[೧೧] ಈ ರೀತಿ ತೌಳವ ಸಂಸ್ಕೃತಿಯಲ್ಲಿ ಮದುವೆ ಮತ್ತು ಹಬ್ಬಗಳ ಸಂದರ್ಭದಲ್ಲಿ ಮರಗಳನ್ನು ವಿಶಿಷ್ಟಸಂಪ್ರದಾಯಗಳ ಕುರುಹುಗಳಾಗಿ ಬಳಸುತ್ತಾರೆ. ಈಗ ಸ್ವಲ್ಪ ಮಟ್ಟಿನ ಬದಲಾವಣೆ ಕಾಣಬಹುದಾದರೂ ಅದರ ಮೂಲ ಪ್ರಜ್ಞೆ ಮಾಸಿಲ್ಲ.

"ಇಬ್ಬರ ಹೆಂಡಿರನ್ನು ಕಳೆದುಕೊಂಡ ಒರಿಸ್ಸಾದ ವಿಧುರ ಮೂರನೆಯ ಹೆಂಡತಿಗೆ ಅನಿಷ್ಟ ಬಡಿಯಬಾರದೆಂದು ಮದುವೆಗೆ ಮುಂಚೆ ಹಿಪ್ಪುನೇರಳೆ ಮರವನ್ನು ಮದುವೆಯಾಗುತ್ತಿದ್ದನು. ಕರ್ನಾಟಕದಲ್ಲಿ ಅಂಥ ಮದುವೆ'ಎಕ್ಕೆ'ಯ ಗಿಡದೊಡನೆ ಆಗುತ್ತಿತ್ತು. ಮದುವೆಯಾದ ನಂತರ ಆ ಗಿಡವನ್ನು ಸುಡುತ್ತಿದ್ದರು. ಅಂತೆಯೇ ವಿದವೆಯನ್ನು ಮದುವೆಯಾಗಲಿರುವ ಮುಂಬಯಿ ಪ್ರಾಂತ್ಯದ ಆದಿವಾಸಿ ಜನಾಂಗದ ಬ್ರಹ್ಮಚಾರಿ ಮೊದಲು 'ಶಮಿ' ಅಥವಾ 'ರೂಯಿ' ಮರವನ್ನು ಮದುವೆಯಾಗಬೇಕು. ನಿಜವಾದ ಮದುವೆಗೆ ಮುಂಚೆ 'ಮುಂಡೆ' ಹೆಣ್ಣನ್ನು 'ಮಹುವಾ' ಮರಕ್ಕೆ, ಗಂಡನ್ನು ಮಾವಿನಮರಕ್ಕೊ ಮದುವೆ ಮಾಡಿಸಬೇಕು ಇದೊಂದು ವಿವಾಹಶಾಸ್ತ್ರ".[೧೨] "ಮರಕ್ಕೂ ಒಂದು ಜೀವವಿದೆ, ಆತ್ಮವಿದೆ ಎಂದು ಭಾವಿಸಿದ ಮನುಷ್ಯ ಮರವನ್ನು ಮನುಷ್ಯನೊಂದಿಗೆ ತೂಗಿ ನೋಡಿದ ಸಂತಾನಾಭಿವೃದ್ಧಿಗೆ ಮನುಷ್ಯರಲ್ಲಿ ಮದುವೆ ಹೇಗೆ ಅನಿವಾರ್ಯವೋ ಅದೇ ರೀತಿ ಮರಗಳು ಫಲ ನೀಡಬೇಕಾದರೆ ಅವುಗಳಿಗೂ ಮದುವೆ ಮಾಡಿಸಬೇಕು ಎಂದು ಭಾವಿಸಿದ. ಈ ಹಿನ್ನೆಲೆಯಲ್ಲಿ ನೋಡಿದಾಗ ಮಾವಿನ ಮರವನ್ನು ನಾಟಿ ಮಾಡಿದರೆ ಅದನ್ನು ಮತ್ತೊಂದು ಮರದೊಂದಿಗೆ ಮದುವೆ ಮಾಡಿಸುವವರೆಗೆ ಅದರ ಹಣ್ಣನ್ನು ತಿನ್ನಬಾರದೆಂದು ಹೇಳುವುದುಂಟು. ಹುಣಸೇಮರ ಅಥವಾ ಮಲ್ಲಿಗೆ ಬಳ್ಳಿಯೊಂದಿಗೆ ಮದುವೆ ಮಾಡಿಸುತ್ತಾರೆ. ಒರಿಸ್ಸಾ ಪ್ರಾಂತ್ಯದಲ್ಲಿ ಆಲ ಮತ್ತು ಅರಳಿಗೆ ಮದುವೆ ಮಾಡಿಸುವ ಪದ್ಧತಿ ಇದೆ. ಮದುವೆಯಾಗದ ಮರಗಳು ಬಿಟ್ಟ ಹಣ್ಣಿನಲ್ಲಿ ಹುಳುತುಂಬಿರುತ್ತವೆಂದೂ ತಿನ್ನಲು ಯೋಗ್ಯವಲ್ಲ ಎಂಬ ನಂಬಿಕೆ ಬರಿಯನ್‌ರಲ್ಲಿದೆ."[೧೩]

ಮಕ್ಕಳಿಗೆ ಗಳಗಂಡರೋಗ ಬಂದಾಗ ಈಗಲೂ ಎಕ್ಕೆ ಹೂವಿನ ಮೊಗ್ಗುಗಳ ಹಾರವನ್ನು ಕೊರಳಿಗೆ ಹಾಕುತ್ತಾರೆ. ಇದು ಕುರುಡು ನಂಬಿಕೆಯೆಂದು ತಿರಸ್ಕರಿಸಿದರೂ ಇದರಲ್ಲಿ ವೈಜ್ಞಾನಿಕತೆ ಇದೆ. ಎಕ್ಕೆ

ಗಿಡದ ಮೊಗ್ಗು ಆಯುರ್ವೇದದ ಔಷಧೀಯವನ್ನಾಗಿ ಬಳಸುತ್ತಾರೆ. ಇಂತಹ ಮೊಗ್ಗಿನ ಹಾರವನ್ನು ಕೊರಳಿಗೆ ಹಾಕಿಕೊಳ್ಳುವುದರಿಂದ ನಾವು ತೆಗೆದುಕೊಳ್ಳುವ ಉಸಿರಾಟದಲ್ಲಿ ಅದರ ವಾಸನೆಯನ್ನು ಸೇವಿಸಿದಾಗ ಕಾಯಿಲೆ ಗುಣವಾಗಬಹುದು ಎಂಬ ನಂಬಿಕೆ ಆಧುನಿಕರಲ್ಲಿಯೂ ಇದೆ. ಈಗಲೂ ಮಕ್ಕಳಿಲ್ಲದ ಮುತ್ತೈದೆಯರು ಎಕ್ಕೆ ಗಿಡವನ್ನು ಪೂಜಿಸಿದರೆ ಮಕ್ಕಳು ಆಗುತ್ತವೆ ಎಂಬ ನಂಬಿಕೆ ಇದೆ. ಎಕ್ಕೆಗಿಡದಲ್ಲಿ ೨ ವಿಧಗಳಿದ್ದು ಬಿಳಿ ಎಕ್ಕೆಗಿಡದಲ್ಲಿ ಶಿವನು ವಾಸಿಸುತ್ತಾನೆ. ಎಂಬ ನಂಬಿಕೆ ಇದೆ. ಊರಿನಲ್ಲಿ ಯಾರಾದರೂ ಸತ್ತಾಗ ಅವರನ್ನು ಮಣ್ಣುಮಾಡಿ ಮನೆಗೆ ಬರುವಾಗ ಮನೆಯಮುಂದೆ ಸ್ವಲ್ಪ ದೂರದಲ್ಲಿ ಸಗಣಿಯ ಮೇಲೆ ಎಕ್ಕೆಯ ಕೊನೆಗಳನ್ನು ಪ್ರತಿಯೊಬ್ಬರು, ಅದರೊಳಗೆ ಇಟ್ಟು ಬರುತ್ತಾರೆ. ಈ ನಂಬಿಕೆಯು ಈಗಲೂ ಹಳ್ಳಿಯ ಕಡೆಯಲ್ಲಿದೆ. ಹೀಗೆ ಅನೇಕಾನೇಕ ನಂಬಿಕೆಗಳು ಆದಿವಾಸಿ ಜನಾಂಗಗಳಲ್ಲಿದ್ದವು. ಅವುಗಳೆಲ್ಲ ಮೌಢ್ಯವು, ಅನಾಗರಿಕವಾದವುಗಳಾದರೆ ಮತ್ತೆ ಕೆಲವು ವೈಜ್ಞಾನಿಕತೆಯಿಂದ ಕೂಡಿವೆ.

ಒಟ್ಟಿನಲ್ಲಿ ಪ್ರಪಂಚದ ಆದಿವಾಸಿ ಜನಾಂಗಗಳು ಪರಿಸರವನ್ನು ಮೊದಲ ಆರಾಧನೆಯಾಗಿ ಮಾಡಿಕೊಂಡು ಪ್ರಕೃತಿಯೊಳಗೆ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಾ ನಾಗರಿಕತೆಯೆಡೆಗೆ ಮುನ್ನಡೆದಿದ್ದಾನೆ. ಈ ನಾಗರಿಕತೆಯು ಹಲವು ಸಂಸ್ಕೃತಿಗಳನ್ನು ಮಥನಗೊಳಿಸಿಕೊಂಡು ಜಾಗತೀಕರಣಗೊಂಡಿದೆ. ಇಂದು ವಿಶ್ವವೇ ಒಂದು ಹಳ್ಳಿಯಾಗಿದೆ. (Globel village) ಮನುಷ್ಯ ಮನುಷ್ಯನ ನಡುವೆ ಅಂತರ ಕಡಮೆಯಾಗಿದೆ. ಇಂತಹ ಸಂದರ್ಭದಲ್ಲಿ ಹಲವು ಸಮುದಾಯಗಳ ಸಂಸ್ಕೃತಿಗಳು ಬದಲಾವಣೆಗೆ ಒಳಪಡುತ್ತಾ ಬೇರೊಂದು ಸಂಸ್ಕೃತಿಗಳ ಜೊತೆಗೆ ಮುಖಾಮುಖಿಯಾಗಿಸಿಕೊಳ್ಳುವಾಗ ತಮ್ಮತನವನ್ನು ಉಳಿಸಿಕೊಳ್ಳಲು ಹೋರಾಡುತ್ತವೆ. ಹೀಗೆ ಬದಲಾವಣೆಗೆ ಒಳಪಡುತ್ತದ ಸಂಸ್ಕೃತಿಗಳು ಸ್ಥಗಿತಗೊಂಡು ಜೀವಂತಿಕೆಯನ್ನು ಕಳೆದುಕೊಳ್ಳುತ್ತವೆ. ಅಂದರೆ ಅಪ್ರಸ್ತುತವಾಗುತ್ತವೆ. ಇಂಥ ಸಂಸ್ಕೃತಿಗಳು ಜಾಗತೀಕರಣದ ನೆಲೆಯಲ್ಲಿ ಲೆಕ್ಕಕ್ಕೆ ತಪ್ಪಿ ಅವನತಿಯ ಕಡೆ ಮುಖಮಾಡುತ್ತಾ ಆಧುನಿಕತೆಗೆ ವಿಮುಖವಾಗತ್ತವೆ. ಕೆಲವು ಪ್ರಬಲವಾದ ಸಂಸ್ಕತಿಯೊಂದನ್ನು ಹಿಡಿಯುವಿಕೆಯಿಂದ ಜೀವಂತದ ಕಡೆಗೆ ಧಾವಿಸುತ್ತವೆ. ಆದರೂ ತನ್ನ ಗತಕಾಲದ ಸಾಂಸ್ಕೃತಿಕ ಸಂವೇದನೆಯ ಅನನ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ. ಕಾಲಕ್ರಮದಲ್ಲಿ ಜಾನಪದ ಬದಲಾಗುತ್ತಿರುತ್ತದೆ. ಅದು ಬದಲಾಗಲೇಬೇಕು ಅದು ಪ್ರಾಚ್ಯವಾಗಿಯೇ ಇರಲು ಸಾಧ್ಯವಿಲ್ಲ. ಬದಲಾವಣೆಗಳು ಸಹಜ. ಹಳತಕ್ಕೆ ಹಂಬಲಿಸಬಾರದು. ಹೊಸದನ್ನು ವಿರೋಧಿಸಬಾರದು. ಹೀಗೆ ಆಧುನೀಕರಣದ ಅಬ್ಬರದಲ್ಲಿ ಕೆಲವೊಂದು ಆದಿವಾಸಿ ಕುಟುಂಬಗಳು ಕರಗಿ ಹೋಗುತ್ತವೆ. ಈ ಸ್ಥಿತಿಯು ಎರಡು ಮುಖಗಳನ್ನು ಒಳಗೊಂಡಿರುತ್ತದೆ. ಒಂದು ಅಪರೂಪದ ಸಂಸ್ಕೃತಿಗಳು ಇನ್ನಿಲ್ಲವಾಗುವಿಕೆಯ ನೋವು ಮತ್ತೊಂದು ಕತ್ತಲಲ್ಲಿ ಇರುವ ಎಷ್ಟೋ ಆದಿವಾಸಿ ಸಮೂಹಗಳು ಸಮಾಜದ ಮುಖ್ಯವಾಹಿನಿಗೆ ಧಾವಿಸುತ್ತವೆ ಎಂಬ ಸಂತೋಷ.

[illegible]

[illegible]

ಆಧುನೀಕರಣಕ್ಕೆ ಆದಿವಾಸಿ ಬುಡಕಟ್ಟುಗಳು ಅಷ್ಟುಬೇಗ ಹೊಂದಿಕೊಳ್ಳುವುದಿಲ್ಲ. ಇವರ ಆಚಾರ ವಿಚಾರಗಳು ನಂಬಿಕೆ, ಸಂಪ್ರದಾಯ, ಸಂಸ್ಕೃತಿಗಳು ನಾಡಿನವರಿಗಿಂತ ಭಿನ್ನ. ಈ ಅಂಶವನ್ನು ನಮ್ಮ ಯೋಜನಾಗಾರರು ಅರ್ಥ ಮಾಡಿಕೊಳ್ಳವಲ್ಲಿ ವಿಫಲರಾಗಿದ್ದಾರೆ. ಅಭಿವೃದ್ಧಿಯ ನೆಪದಲ್ಲಿ ಎಷ್ಟೊ ಸಂಸ್ಕೃತಿಗಳನ್ನು ನಾಶಮಾಡಬಲ್ಲ ಆಧುನೀಕರಣದ ಪಥ ಸಾಗುತ್ತಿದೆ. ಕಾಡಿನಿಂದ ಹೊರಬಿದ್ದ ಬುಡಕಟ್ಟುಗಳು ಕೆಲವು ಜಾತಿಗಳಾಗಿ ಮಾರ್ಪಟ್ಟಿವೆ. ಇನ್ನು ಕೆಲವು ಬುಡಕಟ್ಟುಗಳು ಯಾವ ಪರದಿಗೂ ನಿಲುಕದೆ ಅಲೆಮಾರಿಗಳಾಗಿ ಜೀವಿಸುತ್ತಾ ತ್ರಿಶಂಕುಸ್ಥಿತಿಯಲ್ಲಿವೆ. ಈ ರೀತಿ ತಿರಸ್ಕೃತ ಪರಿಸ್ಥಿತಿಗೆ ಒಳಪಟ್ಟ ಬುಡಕಟ್ಟುಗಳು ತನ್ನದೇ ಆದ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಮತ್ತು ಕಟ್ಟಿಕೊಳ್ಳುವಲ್ಲಿ ವಿಫಲವಾಗಿ ಅನ್ಯಸಂಸ್ಕೃತಿಯ ಜಾಡನ್ನು ಹಿಡಿಯುತ್ತಿವೆ. ಈ ಸಂದಿಗ್ಧತೆ ಭಾರತದಂಥ ತೃತೀಯ ರಾಷ್ಟ್ರಗಳಲ್ಲಿ ಅದೆಷ್ಟೋ ಬುಡಕಟ್ಟುಗಳಿಗೆ ಶಾಪಗಳಾಗಿ ಪರಿಣಮಿಸಿವೆ. ಇವರ ಪರಂಪರಾಗತವಾದ ನಂಬಿಕೆ ಆಚಾರ ವಿಚಾರಗಳು ಬದುಕಿನ ಒತ್ತಡದಿಂದ ಕಣ್ಮರೆಯಾಗುತ್ತಿವೆ. ಇವರ ಸಾಂಸ್ಕೃತಿಕ ತಾತ್ವಿಕ ತಳಹದಿ ಗುರುತಿಸಲಾಗದಷ್ಟು ಬದಲಾವಣೆಗೆ ಒಳಪಟ್ಟಿದೆ. ಇವರ ಬದುಕಿನ ಉಪಉತ್ಪನ್ನವಾದ ಜಾನಪದವೂ ಸಹ ಬದಲಾವಣೆಯ ತಿರುಗಣೆಯಲ್ಲಿ ನಿಂತಿದೆ. ಪೂರ್ವಿಕವಾದ ಜಾನಪದ ಉತ್ಪನ್ನವನ್ನು ಇವರಿಂದ ನಿರೀಕ್ಷಿಸುವುದು ಸಾಧ್ಯವಿಲ್ಲ. ನಾಗರಿಕತೆಯ ಕೆಲವು ಆಯಾಮಗಳನ್ನು ಸ್ವೀಕರಿಸಬಲ್ಲಂತಹ ಶಕ್ತಿ ಈ ಜಾನಪದಕ್ಕಿದೆ. ಇದು ತನ್ನ ಪಾರಂಪರಿಕ ಸಂಪತ್ತನ್ನು ಸೂಕ್ಷ್ಮಜ್ಞಾನ ಸಿದ್ದಿಯನ್ನು ಆಧುನಿಕತೆಯಲ್ಲಿ ಸ್ವೀಕರಿಸಿ, ಮಥನಗೊಳಿಸಿಕೊಂಡಾಗ ಜಾಗತೀಕರಣದ ಪ್ರವಾಹದಲ್ಲಿ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯ. ಈ ಪ್ರಕ್ರಿಯೆ ಭಾರತದಂತಹ ವಿಭಿನ್ನ ಸಂಸ್ಕೃತಿಯುಳ್ಳ ದೇಶದಲ್ಲಿ ಮಂದಗತಿಯಲ್ಲಿ ಸಾಗುತ್ತಿರುತ್ತದೆ.

ಜಾನಪದವು ಹಳೆಯದನ್ನು ಕಳೆದುಕೊಳ್ಳತ್ತಿದೆ ಎಂದರೆ ಅದು ಹೊಸತನದ ಮೊಳಕೆ ಎಂದೇ ಪರಿಗಣಿತವಾಗುತ್ತದೆ. ಕೇವಲ ಕರ್ನಾಟಕಕಷ್ಟೇ ಮೀಸಲಾದ ಯಕ್ಷಗಾನ ಹಲವು ಬದಲಾವಣೆಗಳೊಂದಿಗೆ ದೇಶವಿದೇಶ ಮಟ್ಟದಲ್ಲಿ ಪ್ರದರ್ಶನಗಳನ್ನು ಕಾಣುತ್ತಿದೆ. ಆದ್ದರಿಂದ ಜಾನಪದ ಅನನ್ಯತೆ ಒಂದು ಮಿತಿಯೊಳಗೆ ಲೆಕ್ಕಾಚಾರಕ್ಕೆ ಸಿಗುವ ಸಂಗತಿಯಲ್ಲ. ಯಾಕೆಂದರೆ ಇದಕ್ಕೆ ತನ್ನದೇ ಅದ ಸಾಂಸ್ಕೃತಿಕ ಕೌಶಲ್ಯವನ್ನು ಕಟ್ಟಿಕೊಳ್ಳುವ ಸ್ವಾವಲಂಬನೆ ಸದಾ ತನ್ನ ಗರ್ಭದಲ್ಲಿ ಗರ್ಭೀಕರಿಸಿಕೊಂಡಿರುತ್ತದೆ. ಇದನ್ನು ಕಂಡುಕೊಳ್ಳವ ಸೂಕ್ಷ್ಮದೃಷ್ಟಿ ಆಧುನಿಕ ವಿದ್ವಾಂಸರಲ್ಲಿ ಇರಬೇಕಷ್ಟೆ.

ಜಾನಪದ ಇಂದು ಮಾನವನ ಬದುಕನ್ನು ತಬ್ಬಿ ಹಿಡಿದಿದೆ. ಅಕ್ಷರಸ್ಥ - ಅನಕ್ಷರಸ್ಥ ಬಡವ, ಬಲ್ಲಿದ, ಹಳ್ಳಿ-ನಗರ, ದೇಶ-ವಿದೇಶ ಎಂಬ ಯಾವ ಪರದಿಗೂ ಬಳಪಡದೆ ಎಲ್ಲಡೆಯಲ್ಲಿ ವ್ಯಾಪಿಸಿದೆ. ಆಧುನೀಕರಣ, ಜಾಗತೀಕರಣ, ಕಂಪ್ಯೂಟರೀಕರಣ, ಹೀಗೆ ಮಾನವನ ಸಂಸ್ಕೃತಿಯ ವಿಕಾಸದ ಒಂದೊಂದು ಘಟ್ಟದಲ್ಲೂ ಜಾನಪದವೆಂಬುದು ತನ್ನದೇ ಆದ ನೆಲೆಯನ್ನು ಕಂಡುಕೊಳ್ಳುತ್ತಲಿದೆ. ಪರಿಸರ ಜಾನಪದವು ಜನಜೀವನದಲ್ಲಿ ಇಂದಿಗೂ ಸಹ ಮಹತ್ತರವಾದ ವಿಷಯಗಳಿಗೆ

ಬಳಕೆಯಾಗುತ್ತಿವೆ. ಬಾಳೆ, ಅಡಿಕೆ, ತೆಂಗಿನಕಾಯಿ, ಎಲೆ, ಎಕ್ಕೆಹೂ, ತಾಳೆ, ಬಿದಿರು, ಅರಿಶಿನ ಇಂತಹ ಸಸ್ಯಕೋಟಿಯು ನೇರವಾಗಿಯೋ ಇಲ್ಲವೇ ಪರೋಕ್ಷವಾಗಿಯೋ ನಮ್ಮ ಸಂಸ್ಕೃತಿಯ ಜೀವನದಲ್ಲಿ ಹಾಸು ಹೊಕ್ಕಾಗಿವೆ. ತೆಂಗುವಿಗೆ ಭಾರತೀಯ ಸಂಸ್ಕೃತಿಗಳಲ್ಲಿ ಪವಿತ್ರವಾದ ಸ್ಥಾನವಿದೆ. ಭಾರತದ ಪ್ರತಿಯೊಂದು ಧಾರ್ಮಿಕ ಆಚರಣಾ ವಿಧಾನಗಳಲ್ಲಿ ತೆಂಗು ವಿಶಿಷ್ಟವಾಗಿ ಬಳಕೆಯಾಗುತ್ತಿದೆ. ಮದುವೆಯ ಸಂದರ್ಭದಲ್ಲಿ ಕಳಸಕಟ್ಟುವ ಚೆಂಬುವಿನ ಮೇಲೆ ಇಡಲು, ಮನೆಯಲ್ಲಿ ಯಾರಾದಾರೂ ಸತ್ತಾಗ ಅವರ ಕ್ರಿಯಾವಿಧಿಗಳಲ್ಲಿ ಬಳಸುತ್ತಾರೆ. ದೇವರಿಗೆ ಪೂಜೆಯನ್ನು ಸಲ್ಲಿಸುವಾಗಲೂ ಬಳಸುತ್ತಾರೆ. ಈ ಆಚರಣೆ ನಗರಗಳಲ್ಲಿಯೂ ಕಾಣಬಹುದು.

ಬಿದಿರು ಇಂದು ಹೆಚ್ಚು ಲಾಭದಾಯಕ ಸರಕಾಗಿದೆ. ಮನೆಗಳಲ್ಲಿ, ಕಛೇರಿಗಳಲ್ಲಿ, ಗೃಹಾಲಂಕಾರಕ್ಕೆ ಬಳಸುವ ಚಿತ್ತಾರದ ಆಕರ್ಷಕ ಬಗೆಬಗೆ ವಿನ್ಯಾಸವುಳ್ಳ ಅಲಂಕಾರಿಕ ವಸ್ತುಗಳಿಗೆ ಹೆಚ್ಚು ಬಳಕೆಯಾಗುತ್ತಿದೆ. ಇದು ಕರಕುಶಲ ವಸ್ತುಗಳಿಗೆ ಬಳಕೆಯಾಗುವುದರಿಂದ ಸರ್ಕಾರಗಳು ಸಂಘ ಸಂಸ್ಥೆಗಳು, ಮಹಿಳಾ ಅಭಿವೃದ್ಧಿ ಸಂಘಗಳು ಲಾಭದಾಯಕ ಮಾರುಕಟ್ಟೆಯನ್ನಾಗಿಸಲು ಪ್ರಯತ್ನಿಸುತ್ತಿವೆ. ತೆಂಗಿನ ನಾರಿನಿಂದ ತಯಾರಿಸಿದ ವಿವಿಧ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆಯಿದೆ. ದೇಶದಲ್ಲಿ ೧.೨ ಕೋಟಿಯಷ್ಟು ಜನರಿಗೆ ಉದ್ಯೋಗವನ್ನು ಒದಗಿಸಿದೆ. ಸರ್ಕಾರಗಳು ಸಂಘ ಸಂಸ್ಥೆಗಳು ಮಹತ್ತರ ಯೋಜನೆಗಳನ್ನು ಹಾಕಿಕೊಂಡು ಪಾರಂಪರಿಕ ಕಸುಬಿಗೆ ಉನ್ನತ ಮಟ್ಟದ ಆರ್ಥಿಕ ತಳಹದಿ ಹಾಕುತ್ತಿದೆ. ಗೃಹ ಕೈಗಾರಿಕೆಗಳು ಉಳಿಯಬೇಕಾದರೆ ಅವುಗಳಿಗೆ ಆರ್ಥಿಕ ಸ್ವಾವಲಂಬನೆ ಬಹು ಮುಖ್ಯವಾಗುತ್ತದೆ. ಈ ಭದ್ರತೆಯನ್ನು ಬದಗಿಸಿಕೊಟ್ಟರೆ ಯಾವುದೇ ದೇಶ ಪ್ರಗತಿ ಪಥದಲ್ಲಿ ನಡೆಯಲು ಸಾಧ್ಯ.

ಅಶ್ವತ್ಥ ಮರವು ಹಿಂದೂ ಸಮಾಜಕ್ಕೆ ಪವಿತ್ರವಾದುದಾಗಿದೆ. ಇದರಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬಂದು ಹಿಂದುಗಳ ನಂಬಿಕೆ "ಅಶ್ವತ್ಥಃ ಸರ್ವವೃಕ್ಷನಾಂ" ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ವೈಶಾಖ ಮಾಸದ ಕೊನೆಯ ದಿನಗಳಲ್ಲಿ ಅದರ ವ್ರತ ಆಚರಣೆ ಈಗಲೂ ಇದೆ. ಇದು ವಿದ್ಯಾವಂತ ಸಮುದಾಯದ ನೌಕರಸ್ಥ ಮಹಿಳೆಯಲ್ಲಿ ಈ ನಂಬಿಕೆ ಹೆಚ್ಚು ಇದೆ. ಬೆಳಗಿನ ಜಾವದ ಸಮಯದಲ್ಲಿ ದಾರದ (ನೂಲು) ಉಂಡೆಯನ್ನು ಹಿಡಿದು ಅಶ್ವತ್ಥ ಮರವನ್ನು ನೂರೊಂದು ಸಾರಿ ತಿರುಗುವುದುಂಟು. ಸಾಮಾನ್ಯವಾಗಿ ಶಿವಾಲಯ ಇರುವೆಡೆಯಲ್ಲಿ ಬಿಲ್ವಪತ್ರೆ ಮರ ನೆಟ್ಟಿರುವುದನ್ನು ಕಾಣಬಹುದು. ಇದರ ಕಾಯಿ ಶಿವನ ತಲೆ ಇದ್ದಂತೆ ಎಂಬ ನಂಬಿಕೆ. ಅದನ್ನು ಒಡೆಯಬಾರದು ಎನ್ನುವವರು ಇದ್ದಾರೆ. ಈಗಲೂ ಮಹಿಳೆಯರು ಪೂಜ್ಯ ಭಾವನೆಯಿಂದ ತಲೆಯಲ್ಲಿ (ಬಿಲ್ವ) ಪತ್ರೆಯನ್ನು ಮುಡಿಯುತ್ತಾರೆ. ಶ್ರೀಗಂಧಮರಕ್ಕೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪೂಜನೀಯ ಸ್ಥಾನವಿದೆ. ಪುರೋಹಿತರು ದೇವರಿಗೆ ಪೂಜೆ ಸಲ್ಲಿಸುವಾಗ ಶ್ರೀ ಗಂಧವನ್ನು ಮೈ ಕೈಗಳಿಗೆ ಹೊಟ್ಟೆಗೆ ಬಳಿದುಕೊಳ್ಳುತ್ತಾರೆ. ಶ್ರೀಗಂಧದ ಮರದಿಂದ ಚಂದದ ಗೊಂಬೆಗಳನ್ನು ಮಾಡುತ್ತಾರೆ. ಚಂದನದ ಗೊಂಬೆಗಳಿಗೆ ಮಾರುಕಟ್ಟೆಯಲ್ಲಿ ಬೆಲೆಯೂ ಹೆಚ್ಚು. ಇವುಗಳನ್ನು ಮನೆಯಲ್ಲಿ ಅಂದವಾಗಿ ಇಡಲು

ಕೊಳ್ಳುತ್ತಾರೆ. ಇತ್ತೀಚೆಗೆ ಶ್ರೀಗಂಧದಲ್ಲಿ ಹಾರಗಳನ್ನು ಮಾಡಿ ಸಭೆ ಸಮಾರಂಭಗಳಲ್ಲಿ ಗಣ್ಯ ವ್ಯಕ್ತಿಗಳ ಕೊರಳಿಗೆ ಹಾಕುವುದನ್ನು ಕಾಣಬಹುದು.

ಬೇವು ಜನಪದರ ಜೀವನಾಡಿಯಲ್ಲೇ ಪ್ರವಹಿಸುತ್ತದೆ. ಸಿಡುಬು, ದಡಾರ, ಅಮ್ಮ ಬಂದಾಗ ಬೇವಿನ ಸೊಪ್ಪನ್ನು ಅನಿವಾರ್ಯವಾಗಿ ಬಳಸುತ್ತಾರೆ. ದಕ್ಷಿಣ ಭಾರತದ ಸಂಭ್ರಮದ ಹಬ್ಬವಾದ ಯುಗಾದಿಯಲ್ಲಿ ಬೇವು ಬೆಲ್ಲವನ್ನು ಸಾಂಸ್ಕೃತಿಕ ದ್ಯೋತಕವಾಗಿ ಸ್ವೀಕರಿಸುತ್ತಾರೆ. ಬೇವಿನಲ್ಲಿ ಔಷಧಿಕಾರಕ ಗುಣವಿರುವುದರಿಂದ ಅಂತರಾಷ್ಟ್ರೀಯ ಮರುಕಟ್ಟೆಯಲ್ಲೂ ಬಹಳ ಬೇಡಿಕೆಯಿದೆ. ಅಮೇರಿಕಾದಂತಹ ರಾಷ್ಟ್ರಗಳು ಪೇಟೆಂಟು ಮಾದರಿಯಲ್ಲಿ ಕೊಳ್ಳಲು ಮುಂದೆ ಬಂದಿವೆ, ದುರದೃಷ್ಟವೆಂದರೆ ನಮ್ಮ ಇಂಡಿಯಾ ಸರ್ಕಾರವೂ ಇದನ್ನು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವಲ್ಲಿ ವಿಫಲವಾಗಿದೆ. ಬೇವು ಮತ್ತು ಅರಳೀ ಮರವನ್ನು ಒಂದೇ ಕಡೆ ನೆಟ್ಟು ಮದುವೆ ಮಾಡಿಸುವುದುಂಟು. ಅವುಗಳಿಗೆ ಪ್ರತ್ಯೇಕವಾಗಿ ಕಟ್ಟೆಯನ್ನು ಕಟ್ಟಿಸುತ್ತಾರೆ. ಹೀಗೆ ಮಾಡುವುದರಿಂದ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. ಈಗಲೂ ಸಹ ಎಲ್ಲಾ ಜನ ಸಮುದಾಯದಲ್ಲಿ ಇದೆ. "ಸಂಸ್ಕೃತಿಯ ನಡಿಗೆಯೊಂದಿಗೆ ಧರ್ಮಕರ್ಮಗಳಿಗೆಲ್ಲ ಮರ ಕೇಂದ್ರ ಶಕ್ತಿಯಾಯಿತು. ಅವನ ಜೀವನ ವೃದ್ಧಿಯಲ್ಲಿ ಮನೋಧರ್ಮವಿಕಾಸದಲ್ಲಿ ಕಲೆಗಳ ಬೆಳೆವಣಿಗೆಯಲ್ಲಿ ತತ್ವ ದರ್ಶನ ಮತ್ತು ಸೌಂದರ್ಯಮೀಮಾಂಸೆಗಳ ಉಗಮದಲ್ಲಿ ಮರದ ಪಾತ್ರ ಮಹತ್ಪೂರ್ಣವಾಯಿತು. ಮರದ ಸುತ್ತ ಮನೆಗಳೆದ್ದು ಊರಾಯಿತು. ಊರಿನ ನಡುವೆ ಮರ ಅನಿವಾರ್ಯವಾಯಿತು. ಅದರ ಕ್ಷೇಮಪಾಲನೆ ಮರದ ಹೊಣೆಗಾರಿಕೆಯಾಯಿತು. ಅದು ಊರಿನ ನ್ಯಾಯ ದೇವತೆಯೂ ಆಯಿತು" [೧೪] ಈಗಲೂ ಹಳ್ಳಿಯಾಕಡೆ ನ್ಯಾಯ ಪಂಚಾಯಿತಿಗಳು ಊರಿನ ಮಧ್ಯೆ ಇರುವ ಮರದ ಕೆಳಗೆ ನಡೆಯುವುದನ್ನು ಕಾಣಬಹುದು.

ಅಡಿಕೆ, ವೀಳ್ಯದೆಲೆ ಭಾರತೀಯ ಸಂಸ್ಕೃತಿಗಳಲ್ಲಿ ಹೆಚ್ಚು ಪ್ರಾಶಸ್ತ್ಯ ಮದುವೆಯಂತಹ ಸಾಮಾಜಿಕ ವಿಧಿಗಳಲ್ಲಿ ಹೆಣ್ಣು ಮತ್ತು ಗಂಡಿನ ಕೈಯಲ್ಲಿ ಅಡಿಕೆ ಮತ್ತು ವೀಳ್ಯದೆಲೆಯನ್ನು ಕೊಡುವ ವಿಧಿಯಿದೆ. ಮದುವೆಯ ಎಲ್ಲಾ ಕ್ರಿಯೆಗಳು ನಡೆಯುವ ಮೊದಲು ಇದನ್ನು ಕೊಡಲಾಗುತ್ತದೆ. ಹಾಗೆಯೇ ಮದುವೆಯ ಎಲ್ಲಾ ವಿಧಿಕ್ರಿಯೆಗಳು ಮುಗಿದ ಬಳಿಕ ವೀಳ್ಯೆವನ್ನು ಕೈಯಿಂದ ಬಿಡಲಾಗುತ್ತದೆ. ವೀಳ್ಯೆ ಹಿಡಿಯುವ ಈ ಕ್ರಿಯೆ ಮದುವೆಯ ಆರಂಭವನ್ನು ಸೂಚಿಸುವುದು ಮಾತ್ರವಲ್ಲದೆ, ಮದುವಣಗಿತ್ತಿ ಮತ್ತು ಮದುಮಗನನ್ನು ಸಾಮಾಜಿಕವಾದ ಸಾಮಾನ್ಯ ಸ್ಥಿತಿಯಿಂದ ಬೇರ್ಪಡಿಸಿ ಸಮಾಜಿಕ ವಿಶಿಷ್ಟ ಸ್ಥಿತಿಗೆ ವರ್ಗಾಯಿಸುತ್ತದೆ. ಈ ಅರ್ಥದಲ್ಲಿ ಅಡಿಕೆ ವೀಳ್ಯೆ ಸಾಂಸ್ಕೃತಿಕ ಮಧ್ಯವರ್ತಿಯಾಗಿ ಬಳಕೆಯಾಗುತ್ತಿದೆ. ಪ್ರಕೃತಿ ಮನುಷ್ಯನಿಗೆ ಏನೆಲ್ಲಾ ಕೊಡಗೆಯಾಗಿ ಕೊಟ್ಟರೂ ಸಹ ಅದರ ಮೇಲೆ ಸದಾ ದೌರ್ಜನ್ಯ ಮಾಡುತ್ತಾನೆ.

ಮನುಷ್ಯನ ಸಂಸ್ಕೃತಿಯ ವಿಕಾಸ ಘಟ್ಟದಲ್ಲಿ ಕೈಗಾರಿಕಾ ಕ್ರಾಂತಿಯವರೆಗೆ ಪರಿಸರಕ್ಕೆ ಹಾಗೂ

[illegible]

ಜೀವಸಂಕುಲಕ್ಕೆ ದಕ್ಕೆಯಾಗಿರಲಿಲ್ಲ. ಪ್ರಕೃತಿಯ ಜೀವ ಸಂಕುಲದಲ್ಲಿ ತಾನೂ ಒಂದು ಭಾಗ ಮಾತ್ರ ಎಂದು ತಿಳಿದಿದ್ದ. ಉಳಿದ ಜೀವ ಸಂಕುಲಗಳು ಉಳಿದರೆ ಮಾತ್ರ ತಾನೂ ಉಳಿಯುತ್ತೇನೆಂಬ ಪ್ರಜ್ಞೆ ಇದ್ದುದರಿಂದ ಪ್ರಕೃತಿಯ ಸಂಪನ್ಮೂಲಗಳನ್ನು ಮಿತವಾಗಿ ಬಳಸಿಕೊಳ್ಳುತ್ತಿದ್ದ ಹಾಗೂ ಪರಿಸರವನ್ನು ಮಲೀನಗೊಳಿಸದೆ ಇದ್ದದ್ದು ಇದೇ ಕಾರಣ ಜಗತ್ತಿನ ಎಲ್ಲಾ ಧರ್ಮಗಳಲ್ಲಿಯೂ ಪ್ರಕೃತಿಯನ್ನು ಭಕ್ತಿ ಗೌರವಗಳಿಂದ ಕಾಣಲಾಗಿದೆ. 'ವೇದ ವಾಙ್ಮಯದಲ್ಲಿ ಪರಿಸರ'ವನ್ನು ಕುರಿತು ಬರೆದಿರುವ ಸಾ.ಕೃ. ರಾಮಚಂದ್ರರಾವ್ ಅವರು ಭೂಮಿ, ಕಾಡು, ಗಿಡಮರಗಳು, ಪಶುಪಕ್ಷಿಗಳು ಇವೆಲ್ಲವನ್ನು ಹಿಂದೆ ಎಷ್ಟು ಭಕ್ತಿಗೌರವಗಳಿಂದ ಕಾಣುತ್ತಿದ್ದರು ಎಂಬುದನ್ನು ವಿವರಿಸಿ ಹೀಗೆ ಹೇಳುತ್ತಾರೆ. ''ಪರಿಸರವನ್ನು ಅಸಡ್ಡೆಯಿಂದ ಕಾಣುವುದಾಗಲಿ ಪರಿಸರದೊಂದಿಗೆ ಹೋರಾಟದಲ್ಲಿ ತೊಡಗುವುದಾಗಲೀ, ಪರಿಸರದ ಮೇಲೆ ಮನುಷ್ಯ ತನ್ನ ಒಡೆತನವನ್ನು ಸ್ಥಾಪಿಸಿಕೊಳ್ಳಬೇಕೆಂಬ ಬಯಕೆಯಾಗಲಿ, ನಮ್ಮ ಸಂಸ್ಕೃತಿಗೆ ಸಹಜವಾದುದು. ಪರಿಸರದ ಹಂಗಿಲ್ಲದೆ ಮನುಷ್ಯ ಬಾಲಬಲ್ಲನೆಂದು ನಮ್ಮ ಸಂಸ್ಕೃತಿ ಎಂದಾದರೂ ನಂಬಿದ್ದರೆನ್ನಲು ಪುರಾವೆಯಿಲ್ಲವೆ ಎನ್ನುತ್ತಾರೆ - ಡಾ. ತೀ.ನಂ. ಶಂಕರನಾರಾಯಣ.

ಮನುಷ್ಯನ ಬದುಕಿನ ಉಪ ಉತ್ಪನ್ನವಾದ ಜಾನಪದವು ಪರಿಸರದೊಂದಿಗೆ ಬಿಡಿಸಲಾಗದ ನಂಟನ್ನು ಬೆಸೆದುಕೊಂಡಿದ್ದು, ಅದು ಎಂದೆಂದೂ ಕಡಿದುಕೊಳ್ಳುವ ವ್ಯವಸ್ಥೆ ತಲಪದು. ಬೆಂಗಳೂರಿನಂಥ ಮಹಾನಗರಗಳಲ್ಲಿಯೂ ವಿವಾಹ ಮುಂತಾದ ಶುಭಕಾರ್ಯಗಳು, ಕಲ್ಯಾಣ ಮಂಟಪದಲ್ಲಿ ನೆಡೆದರೂ ಸಂಪ್ರದಾಯದಂತೆ ಮನೆಯ ಮುಂದೆ ಹಸಿರು ಚಪ್ಪರ ಹಾಕುತ್ತಾರೆ. ಮನೆಯ ಮುಂದೆ ಹತ್ತಿಗೊನೆ ನೆಟ್ಟು ಅದಕ್ಕೆ ಅರಿಶಿನ ದಾರವನ್ನು ಕಟ್ಟಿರುತ್ತಾರೆ. ಮೂಹೂರ್ತ ಮಂಟಪಕ್ಕೆ ಹಸಿರು ಚಪ್ಪರ ಇರಲೇಬೇಕು ಎಂಬ ನಂಬಿಕೆ. ಕಲ್ಯಾಣ ಮಂಟಪದ ಮುಂದೆ ಹೂವಿನಿಂದ ಮಾಡಿದ ಆಕರ್ಷಕ ಚಿತ್ತಾರ ರೀತಿಯಲ್ಲಿ ತಯಾರಿಸಿ ನಾಮಪಲಕ ಸಹ ಪ್ರಾಚೀನ ಜಾನಪದದ ಮಾವಿನ ತೋರಣದ ಆವಿಷ್ಕಾರವೇ ಹೀಗೆ. ಮನುಷ್ಯನ ಸಾಂಸ್ಕೃತಿಕ ಜೀವನ ಕ್ರಮದಲ್ಲಿ ಪರಿಸರವು ಜೀವನಾಡಿಯಾಗಿ ಹೊಂದಿಕೊಳ್ಳುತ್ತಾ ಬಂದಿದೆ. ಮಾನವನ ಬದುಕೆಂದರೆ ಪರಿಸರ ಎನ್ನುವ ಅತಿರೇಕತೆಯುಂಟು. ಒಟ್ಟಿನಲ್ಲಿ ಜೀನಪದರ ಸಾಂಸ್ಕೃತಿಕ ಜಿವನದಲ್ಲಿ ಪರಿಸರವು ಹಾಸು ಹೊಕ್ಕಾಗಿ ಜೀವನ ವಿಧಾನವೂ ಆಗಿದೆ.

೭.೨. ಜನಪದರ ಆರ್ಥಿಕ ನೀತಿಯಲ್ಲಿ ಪರಿಸರದ ಪಾತ್ರ

ಇಡೀ ವಿಶ್ವವೇ ಸಕಲ ಜೀವ ಸಂಕುಲಕ್ಕೆ ಪ್ರಕೃತಿ ನೀಡಿದ ಕೊಡುಗೆಯಾಗಿದೆ. ಮಾನವ ಪರಿಸರ ಅವಲಂಬಿ. ಪರಿಸರವಿಲ್ಲದೆ ಅವನು ಬದಕುವುದು ಕಷ್ಟ. ಪರಿಸರದಲ್ಲಿ ಪ್ರಮುಖವಾಗಿ ಭೂಮಿ ಅರಣ್ಯಗಳು, ಜಲಸಂಪತ್ತು. ಮತ್ಸ್ಯ ಸಂಪತ್ತು, ಗಾಳಿ, ವಾತಾವರಣ, ಹವಾಮಾನ, ಅಸಂಖ್ಯಾ ಕೀಟಗಳು, ಪ್ರಾಣಿಗಳು, ಪಕ್ಷಿಗಳು ಮುಂತಾದುವುಗಳಿವೆ. ಮಾನವ ಅಸಂಖ್ಯಾ ಜೀವಜಾಲ ಮತ್ತು ನೈಸರ್ಗಿಕ ಸಂಪನ್ಮೂಲಗಳೊಂದಿಗೆ ಹೇಗೆ ಬದುಕುತ್ತಾನೆ ಎಂಬುದು ತಿಳಿಯುವುದೇ ಪರಿಸರ

ವಿಜ್ಞಾನವಾಗಿದೆ. ಮಾನವ ಮತ್ತು ಪರಿಸರದೊಂದಿಗಿನ ಆತನ ಸಂಬಂಧವೇ ಪರಿಸರ ಜಾನಪದ ಅಭ್ಯಾಸ ವಸ್ತು. ಆರ್ಥಿಕಾಭಿವೃದ್ಧಿ ಸಾಧಿಸುವದು ಪ್ರಕ್ರಿಯೆಯಲ್ಲಿ ಪರಿಸರವನ್ನು ಅಲಕ್ಷಿಸುವುದು ಸಲ್ಲದು. ನೈಸರ್ಗಿಕ ಸಂಪತ್ಸಾಧನೆಗಳನ್ನು ಬಳಸಿ ಅಧಿಕಾಭಿವೃದ್ಧಿಯನ್ನು ಸಾದಿಸುವಾಗ ಎಚ್ಚರಿಕೆ ಅತ್ಯಗತ್ಯ. ಏಕೆಂದರೆ ನಿಸರ್ಗಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳಲ್ಲಿ ಎರಡು ರೀತಿಯಿವೆ. ಕೆಲವು ಸಂಪನ್ಮೂಲಗಳನ್ನು ನವೀಕರಿಸಿ ಮತ್ತೆ ಮತ್ತೆ ಬಳಸುವುದು ಸಾಧ್ಯವಿದೆ. ಮತ್ತೆ ಕೆಲವು ಮುಗಿದುಹೊಗುವ ಸಂಪನ್ಮೂಲಗಳು.

ಪರಿಸರದಲ್ಲಿ ಮಾನವ ಜೀವಿಸುವ ವಾತಾವರಣ, ಹುಟ್ಟಿನಿಂದ ಹಿಡಿದು ಮರಣದವರೆಗೆ 'ಶೈಶವಾವಸ್ಥೆಯಿಂದ ವೃದ್ದಾಪ್ಯದವರೆಗೆ' ಪರಿಸರದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುತ್ತಾನೆ. ವಾತಾವರಣ ಅಥವಾ ಸ್ಥಿತಿಗಳು ಮಾನವನ ಜೀವನ ಮತ್ತು ಚಟುವಟಿಕೆಗಳ ಮೇಲೆ ಗಾಢಪ್ರಭಾವ ಬೀರುತ್ತವೆ. ಆದರೆ ಈ ಸ್ಥಿತಿಗಳು ಎಲ್ಲಾ ದೇಶಗಳಲ್ಲೂ ಒಂದೇ ತೆರನಾಗಿರದೇ ಅವುಗಳು ದೇಶದಿಂದ ದೇಶಕ್ಕೆ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳುತ್ತವೆ. ಜನರ ಜೀವನ ಮಟ್ಟ ಅಭ್ಯಾಸಗಳು, ಆಹಾರ ಪದ್ಧತಿ, ಉಡುಪುಗಳು ಸಂಸ್ಕತಿ ವಿಧಾನ, ಮಾನಸಿಕ ಬೆಳವಣಿಗೆ ನಡವಳಿಕೆಗಳ ವಿಚಾರದಲ್ಲಿ ವಿವಿಧ ಪ್ರದೇಶಗಳ ಜನರ ನಡುವೆ ವ್ಯತ್ಯಾಸಗಳಿರುತ್ತವೆ. ಮಾನವ ಪರಿಸರದ ಶಿಶು. ಆದ್ದರಿಂದ ಅವನ ಜೀವನಕ್ರಮವು ಪರಿಸರದಿಂದ ನಿರ್ಧರಿಸಲ್ಪಡುತ್ತದೆ. ಮಾನವನ ಮೇಲೆ ಪರಿಸರದ ಪ್ರಭಾವ ಬೇರೆಲ್ಲಾ ಪ್ರಭಾವಗಳಿಗಿಂತಲೂ ಹೆಚ್ಚಿರುತ್ತದೆ. ಅವನು ಪರಿಸರದ ಹಿಡಿತದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಒಂದು ಪ್ರದೇಶದ ಸ್ಥಾನೀಕರಣ, ಹವಾಮಾನ, ಭೂಮಿ, ಮಣ್ಣು, ಅರಣ್ಯಗಳು, ಅಂಶಗಳು ನದಿಗಳು, ಪರ್ವತಗಳು, ಪ್ರಾಣಿಗಳು, ಖನಿಜ ಮತ್ತು ತೈಲ, ಮುಂತಾದ ಭೌಗೋಳಿಕ ಅಂಶಗಳು ಆ ಪ್ರದೇಶದ ಜನರ ಜೀವನಕ್ರಮವನ್ನು ನಿರ್ಧರಿಸುತ್ತವೆ. ಮಾನವ ಪರಿಸರದ ಪ್ರಭಾವದಿಂದ ನಿರೂಪಿತನಾಗಿರುತ್ತಾನೆ. ಇದರಿಂದ ನಮಗೆ ಗೊತ್ತಾಗುವುದೆಂದರೆ ಪರಿಸರವಿಲ್ಲದೆ ಮಾನವನಿಲ್ಲ ಹಾಗೂ ಉತ್ತಮ ಬೌದ್ಧಿಕ ಮತ್ತು ಭೌತಿಕ ಪರಿಸರ ಉತ್ತಮ ಮಾನವನನ್ನು ನಿರೂಪಿಸುತ್ತವೆ.

ಮಾನವ ಇಂದು ಪರಿಸರದಿಂದ ಬಹಳ ಉಪಯೋಗ ಪಡೆಯುತ್ತಿದ್ದಾನೆ. ಇದನ್ನು ಮನಗಂಡು ಗಾಂಧೀಜಿಯವರು ಹೀಗೆ ಹೇಳಿದ್ದಾರೆ. "ಅರಣ್ಯ ನಮ್ಮ ಆಸೆಗಳನ್ನು ಈಡೇರಿಸುತ್ತದೆಯೇ ಹೊರತು ನಮ್ಮ ದುರಾಸೆಗಳನಲ್ಲ" ನಮ್ಮ ಪೂರ್ವಿಕರು ಪರಿಸರದಲ್ಲಿ ದೊರೆಯುವಂತಹ ಉಪಯುಕ್ತವಾದುದನ್ನು ವೈಜ್ಞಾನಿಕವಾಗಿ ಗುರುತಿಸಿ ಕಾಡನ್ನು ನಾಶದ ಸ್ಥಿತಿಗೆ ತಳ್ಳದೇ ಅದರೊಂದಿಗೆ ಉತ್ತಮ ಸಂಬಂಧ ಬೆಳಸಿಕೊಳ್ಳುತ್ತ ಉಪಯೋಗವಾದುದನ್ನು ತನ್ನ ಶ್ರೇಯೋಭಿವೃದ್ಧಿಗೆ ಬೇಕಾದುದನ್ನು ಬಳಸಿಕೊಂಡಿದ್ದಾರೆ. ಅದರಲ್ಲಿ ಆಯುರ್ವೇದ ಗಿಡಮೂಲಿಕೆಯು ಔಷಧೀಯ ಸಸ್ಯಗಳೂ ಸೇರಿವೆ. ಸಾಮಾನ್ಯವಾಗಿ ಮನುಷ್ಯ ಜೀವಿ ಓಡಾಡಬಲ್ಲ ಸ್ಥಳಗಳಲ್ಲಿ, ಹೊಲಗಳಲ್ಲಿ, ಬೆಟ್ಟಗುಡ್ಡಗಳಲ್ಲಿ, ಗಿಡ ಮೂಲಿಕೆ ಇರುವ ಸಸ್ಯಗಳನ್ನು ಕಂಡುಕೊಂಡು, ಅರೆದು ಸಾಮಾನ್ಯ ರೋಗಗಳಿಗೆ ದಿವ್ಯ ಔಷಧಗಳಾಗಿ ಬಳಸಲ್ಪಡುತ್ತಿದ್ದವು. ಆದರೆ

ಇಂದು ಅವುಗಳ ವಹಿವಾಟು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚು ಮನ್ನಣೆಗಳಿಸಿಕೊಳ್ಳುತ್ತಿರುವುದು ಒಂದು ಸೋಜಿಗವೇ ಸರಿ.

ಹದಿನಾರು ಹದಿನೇಳನೆ ಶತಮಾನಗಳಲ್ಲಿ ಬಹು ಸಂಖ್ಯಾತ ಜನಸಮುದಾಯ ತಮ್ಮ ಖಾಯಿಲೆಗಳಿಗೆ ದೇಶಿ ನೆಲೆಯಲ್ಲೇ ಚಿಕಿತ್ಸೆಯನ್ನು ಪಡೆಯುತ್ತಿತ್ತು. ಆದರೆ ಇಂಗ್ಲೀಷರ ಆಗಮನದ ನಂತರ ಅವರ ಸಂಸ್ಕೃತಿ ಮತ್ತು ಜೀವನ ಶೈಲಿ ಭಾರತೀಯರ ಮೇಲೆ ಅಗಾಧ ಪರಿಣಾಮ ಬೀರಿತು. ಭಾರತೀಯರ ಉಡುಗೆ ತೊಡುಗೆ, ಆಹಾರ ಪದ್ದತಿ, ಜೀವನ ವಿಧಾನ, ಸಾಮಾಜಿಕ ಸಂಬಂಧಗಳ ಮೇಲೆ ಪಾಶ್ಚಾತ್ಯ ಸಂಸ್ಕೃತಿಯೇ ಹೆಚ್ಚು ನಾಗರಿಕವಾದುದು ಎಂಬ ಭ್ರಮೆಯನ್ನು ತೊಡಿಸಿ ನಮ್ಮ ದೇಶದ ಸಾಮಾನ್ಯರ ಜನ ಜೀವನದ ಮೇಲೆ ಅಗಾಧವಾದ ಬದಲಾವಣೆಯನ್ನು ತಂದಿತು. ಈ ಮುಖ್ಯವಾಹಿನಿಗೆ ಸೇರದವರು ಅನಾಗರಿಕರು ಎಂಬಂತೆ ಗುರುತಿಸಲ್ಪಟ್ಟರು. ಆ ದಿನಗಳಲ್ಲಿ ಅಲೋಪತಿ ವೈದ್ಯವನ್ನು ಪಡೆಯುವುದು ಸಮಾಜದಲ್ಲಿ ಗೌರವದ ಪ್ರಶ್ನೆಯಾಗಿತ್ತು. ಆಗ ನಾಟಿ ವೈದ್ಯ, ಜನರ ಮನದಾಳದಿಂದ ಕ್ರಮೇಣವಾಗಿ ಮರೆಯುವ ಕಾಲ ಸೃಷ್ಟಿಯಾಯಿತು. ಆದರೆ ಈಗ ಕಾಲ ಬದಲಾಗಿದೆ. ಆಂಗ್ಲ ವೈದ್ಯಪದ್ಧತಿಯಿಂದ ಒಂದು ಖಾಯಿಲೆ ವಾಸಿಯಾಗುವುದರೊಂದಿಗೆ ಮತ್ತೆರಡು ಖಾಯಿಲೆಗಳು ದೇಹದಲ್ಲಿ ಮನೆಮಾಡುತ್ತವೆ. ಆಂಗ್ಲ ವೈದ್ಯ ಪದ್ದತಿಯ ರೋಗ ಉಲ್ಬಣಗೊಂಡ ನಂತರ ಚಿಕಿತ್ಸೆಗೆ ಉಪಯುಕ್ತವೆನಿಸಿದರೆ ಗಿಡಮೂಲಿಕೆ ಔಷಧಿಯು ಮೊದಲೇ ರೋಗ ನಿರೋಧವಾಗಿ ಕೆಲಸಮಾಡುತ್ತದೆ. ಇದರ ಮೂಲ ಮಹತ್ವವನ್ನು ಅರಿತ ಚೀನಾ, ಥಾಯ್ಲೆಂಡ್ ರಾಷ್ಟ್ರಗಳು ಅಲ್ಲಿ ದೊರೆಯುವ ಔಷಧೀಯ ಗಿಡ ಮೂಲಿಕೆಗಳನ್ನು ಬಳಸಿಕೊಂಡು ವಿಶ್ವವ್ಯಾಪಾರ ಮಾರುಕಟ್ಟೆಯಲ್ಲಿ ಬಹಳಷ್ಟು ಲಾಭ ಪಡೆದು. ಖ್ಯಾತಿಗಳಿಸಿವೆ. ತನ್ನಲ್ಲಿ ದೊರೆಯುವ ಔಷದೀಯ ಸಸ್ಯ ಸಂಪತ್ತನ್ನು ಸಂಸ್ಕರಿಸಿ ವೈಜ್ಞಾನಿಕ ರೀತಿಯಲ್ಲಿ ಸಂಶೋಧಿಸಿ ಮಾರುಕಟ್ಟೆಗೆ ತಂದು ಗಣನೀಯವಾದ ಲಾಭ ಗಳಿಸುತ್ತಿವೆ. ವಿಶ್ವಮಾರುಕಟ್ಟೆಯಲ್ಲಿ ಈ ಪರಿಯ ಗಿಡಮೂಲಿಕೆ ದೊರೆಯುವಂತಹ ಬೇಡಿಕೆಯನ್ನು ಕಂಡು ಭಾರತ ಸರ್ಕಾರವು ಸಹ ಯೋಜನಾ ಆಯೋಗದ ಸಲಹೆಯಂತೆ "ರಾಷ್ಟ್ರೀಯ ಔಷಧ ಸಸ್ಯ ಮಂಡಳಿ" ಸ್ಥಾಪನೆ ಮಾಡಿಕೊಂಡು ಅದರಡಿಯಲ್ಲಿ ಯಾವ ರಾಜ್ಯದಲ್ಲಿ ಯಾವ ಗಿಡ ಮೂಲಿಕೆ ಸಸ್ಯಗಳು ದೊರೆಯುತ್ತವೆ ಮತ್ತು ಅವುಗಳಿಂದ ಎಷ್ಟೆಷ್ಟು ಉಪಯೋಗ ಎಂಬ ಮಾಹಿತಿಯನ್ನು ಪಡೆದು ಆಯಾ ರಾಜ್ಯಗಳಲ್ಲಿ ಉಪಮಂಡಲಗಳನ್ನು ತೆರೆದು ಗಿಡಮೂಲಿಕೆ ಸಸ್ಯಗಳನ್ನು ಜನ ಸಾಮಾನ್ಯರಿಂದ ಅರಿತು ಹುಡುಕಿ ಅವುಗಳ ಸಂತತಿ ನಾಶವಾಗದ ರೀತಿಯಲ್ಲಿ ಅಭಿವೃದ್ದಿ ಪಡಿಸುತ್ತಿದೆ. ಅಂತಹ ಸಸ್ಯಗಳನ್ನು ಬೆಳೆಯಲು ಪ್ರತ್ಯೇಕ ವ್ಯವಸ್ಥೆ ಮಾಡಿ ಅವುಗಳ ತಳಿಯನ್ನು ಅಭಿವೃದ್ಧಿಪಡಿಸಿ ಸಂಸ್ಕರಿಸಿ, ಮಾರುಕಟ್ಟೆಗೆ ಸಜ್ಜುಮಾಡಿ ಅವುಗಳಿಂದ ಲಾಭಗಳಿಸಲು ಸರ್ಕಾರವು ಮುಂದೆ ಬಂದಿದೆ. ಇಂತಹ ಸ್ಥಳೀಯವಾದ ಸಂಪನ್ಮೂಲಗಳನ್ನು ವೈಜ್ಞಾನಿಕ ರೀತಿಯಲ್ಲಿ ವ್ಯವಸ್ಥಿತವಾಗಿ ಬೆಳೆಸಿಕೊಂಡಿದ್ದಾದರೆ ಭಾರತವು ಸಹ ಚೈನಾ ದೇಶಂತೆ ಔಷಧಿ ವಹಿವಾಟುವಿನಲ್ಲಿ ಜಗತ್ತಿಗೆ ಪ್ರಥಮ ದೇಶವಾಗುವುದರಲ್ಲಿ ಸಂದೇಹವಿಲ್ಲ.

ವಿಶ್ವದಲ್ಲಿ ಗಿಡ ಮೂಲಿಕೆಯ ಔಷಧದ ವಹಿವಾಟು ವಾರ್ಷಿಕ ಎಪ್ಪತ್ತು ಕೋಟಿ ಡಾಲರ್. ಈ ಕ್ಷೇತ್ರದಲ್ಲಿ ಚೀನಾ, ಥಾಯ್ಲೆಂಡ್ ಅಗ್ರಮಾನ್ಯ ರಾಷ್ಟ್ರಗಳಾಗಿವೆ. ಇಂತಹ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಮೂಲಕ ರಫ್ತು ವ್ಯಾಪಾರ ಹೆಚ್ಚಿಸಲು ಸಾಧ್ಯವಿದೆಯೆಂದು. ಯೋಜನಾ ಆಯೋಗದ ವರದಿಗಳು ತಿಳಿಸುತ್ತವೆ. ಸಾಮಾನ್ಯ ಜನರು ಅಂದು ಸಾಮಾನ್ಯ ಖಾಯಿಲೆಗಳಿಗೆ ಕಂಡುಕೊಂಡ ಔಷಧಿ ಸಸ್ಯಗಳು, ಇಂದು ವಿಶ್ವವ್ಯಾಪಾರದಲ್ಲಿ ಅತಿ ಹೆಚ್ಚಿನ ಮಹತ್ವದ ಸ್ಥಾನವನ್ನು ಪಡೆಯುತ್ತಿರುವುದು ನೋಡಿದರೆ ಜನಪದರ ಮನೋಧರ್ಮದಲ್ಲಿ ಎಂತಹ ಅದ್ಭುತವಾದ ಸಂಶೋಧನಾದೃಷ್ಟಿ ಇತ್ತೆಂಬುದು ಅರಿವಾಗುತ್ತದೆ. ಆದರೂ ಸಹ ನಮ್ಮ ದೇಶದಲ್ಲಿ ವನ್ಯಸಂಪತ್ತನ್ನು ಯಶಸ್ವಿಯಾಗಿ ಬಳಸಿಕೊಂಡಿಲ್ಲ. ಕೇವಲ ಮನೆಗಳನ್ನು ಕಟ್ಟುವುದಕ್ಕೊ, ಲಾರಿ, ಹಡಗು ಕಟ್ಟುವುದಕ್ಕೊ ಮಾತ್ರ ಬಳಕೆಯಾಗುತ್ತಿದೆ. ಅರಣ್ಯದಲ್ಲಿ ಸಿಗುವಂತಹ ಇಂತಹ ಅದ್ಭುತ ಸಂಪತ್ತನ್ನು ಕಳ್ಳಕಾರರು ದುರುಪಯೋಗಪಡಿಸಿಕೊಳ್ಳುವುದೇ ಹೆಚ್ಚು.

ಶ್ರೀಗಂಧ ಮರದಲ್ಲಿ ಸುಂದರವಾದ ದೇವರ ವಿಗ್ರಹ ಅಥವಾ ಮೂರ್ತಿಗಳನ್ನು ಮಾಡುತ್ತಾರೆ. ಶ್ರೀಗಂಧದಿಂದ ಮಾಡಿದ ವಸ್ತುಗಳು ಶ್ರೇಷ್ಠ ಎಂಬ ಮನೋಭಾವ ಬೆಳೆದು ಬಂದಿದೆ. ಇದನ್ನೇ ಬಂಡವಾಳಗಿಟ್ಟುಕೊಂಡು ಕುಶಲ ಕರ್ಮಿಗಳು ಈ ಮರದಲ್ಲಿ ವಿವಿಧ ಚಿತ್ತಾರ ಕುಸರಿ ಕೆಲಸಗಳನ್ನು ಮಾಡಿ ಆಕರ್ಷಕ ಗೊಂಬೆಗಳು, ಕರಕುಶಲ ವಸ್ತುಗಳು, ಸಮಾರಂಭಕ್ಕೆ ಬೇಕಾದ ಹೂವಿನ ಹಾರಗಳು, ಮನೆಯಲ್ಲಿ ಅಂದಕ್ಕಾಗಿ ಇಡುವ ವಸ್ತುಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಮಾರುವುದನ್ನು ಕಾಣಬಹುದು. ಚನ್ನಪಟ್ಟಣದ ಚಂದನದ ಗೊಂಬೆ ಹೆಚ್ಚು ಖ್ಯಾತಿ ಪಡೆದಿದೆ. ಶ್ರೀಗಂಧದ ಮರವನ್ನು ದೇವರ ಸಮಾನ ಎಂಬ ನಂಲಿತೊ ಇದೆ. ಈ ಮರವು ಸುವಾಸನೆಯನ್ನು ಬೀರುವುದರಿಂದ ಎಂತಹವರನ್ನು ಆಕರ್ಷಿಸುವಶಕ್ತಿ ಇದಕ್ಕಿದೆ.

ಅಡಿಕೆ ಮಲೆನಾಡಿನಲ್ಲಿ ಬೆಳೆಯುವ ಬೆಳೆ ಇದು ರೈತರಿಗೆ ಹೆಚ್ಚು ಲಾಭತರುವ ಬೆಳೆಯಾಗಿರುವುದರಿಂದ ನೀರಾವರಿ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಇದು ಗೋಳಾಕಾರವಾಗಿದ್ದು ಜನಪದರು ಊಟವಾದನಂತರ ಅಲ್ಲದೆ ಬೇಜಾರು ಆದಾಗಲೆಲ್ಲಾ ವೀಳ್ಯದೊಂದಿಗೆ ಸೇರಿಸಿ ಬಾಯಿಗೆ ಹಾಕಿಕೊಳ್ಳುತ್ತಾರೆ. ಇದು ನಿರಂತರವಾಗಿ ಒಂದು ಚಟವಾಗಿ ಮಾರ್ಪಟ್ಟಿದೆ. ಇದರಲ್ಲಿ ಜೀರ್ಣಶಕ್ತಿ ಗುಣ ಇರುವುದರಿಂದ ಊಟವಾದ ಬಳಿಕ ಎಲ್ಲರೂ ಬಳಸುವ ವಾಡಿಕೆಯಾಗಿದೆ. ಅಡಿಕೆ ಇಂದು ವ್ಯಾಪಾರದ ಮಾರುಕಟ್ಟೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಗುಟ್ಕಾದಲ್ಲಿ ಮುಕ್ಕಾಲು ಪಾಲು ಅಡಿಕೆಯನ್ನೇ ಉಪಯೋಗಿಸುತ್ತಾರೆ. "ಅಡಿಕೆಯಲ್ಲಿರುವ ಒಗರನ್ನು ಚರ್ಮ ಹದಮಾಡಲು ಉಪಯೋಗಿಸುತ್ತಾರೆ. ಇದರಿಂದ ಬರೆಯುವ ಮಸಿ ತಯಾರಿಸುತ್ತಾರೆ. ಇದರ ಸಿಪ್ಪೆಯಿಂದ ಕಾಗದ ರಟ್ಟು ಮೊದಲಾದವುಗಳನ್ನು ಮಾಡುವುದಲ್ಲದೇ, ಸಾಮಾನುಗಳನ್ನು ಸುತ್ತಲು ಬೇಕಾಗುವ ಹಗ್ಗಗಳನ್ನು ತಯಾರಿಸುತ್ತಾರೆ. ಅಡಿಕೆ ಮರದಿಂದ ಮನೆಕಟ್ಟಲು ಬೇಕಾಗುವ ದಬ್ಬೆ ತೊಲೆ. ರೀಪು, ಪಕ್ಕಾಸು

ಮುಂತಾದುವುಗಳನ್ನು ಉಪಯೋಗಿಸುತ್ತಾರೆ. ಮರಗಳ ಒಳಗಿರುವ ತಿರುಳನ್ನು ತೆಗೆದು ನೀರು ಕಾಯಿಸಲು ಬಳಸುತ್ತಾರೆ. ಜೊತೆಗೆ ಬಟ್ಟೆ ಉದ್ಯಮದಲ್ಲಿ ಬಣ್ಣ ಹಾಕಲು ಉಪಯೋಗಿಸುವುದರಿಂದ ಇದಕ್ಕೆ ವಿಶೇಷ ಬೇಡಿಕೆ ಇದೆ." ೧೬

ಅಡಿಕೆ ಮರದೊಂದಿಗೆ ಇಲ್ಲವೇ ತಬಸೆ ಮರಕ್ಕೆ ಅಂಟಿಸಿ ಬೆಳೆಯುವ ಫಸಲು ವೀಳ್ಯೆದೆಲೆ. ಇದರಲ್ಲಿ ಎರಡು ವಿಧ. ಅಂಬಾಡಿ ಮತ್ತೊಂದು ಕರಿಎಲೆ. ಕರಿಎಲೆ ಎಂದರೆ ದೊಡ್ಡಎಲೆ ಅಂಗೈನ ಎರಡರಷ್ಟಿರುವ ಎಲೆಗೆ ಕರಾಚಿಯಲ್ಲಿ ಬಾರಿ ಬೇಡಿಕೆ ಇದೆಯಂತೆ. ಇದು ಆರೋಗ್ಯವರ್ಧಕ ತಾಂಬೂಲ ಜೀರ್ಣಕಾರಿಯೂ ಹೌದು. ಶುಭಸಂದರ್ಭದಲ್ಲಿ ಮಂಗಳ ಕಾರ್ಯದಲ್ಲಿ ಎಲೆ ಪೆಟ್ಟಿಗೆ ವಿಶೇಷ ಪ್ರಾಶಸ್ತ್ಯ. ಪ್ರಾಚೀನಕಾಲದಿಂದಲೂ ತಾಂಬೂಲ ಸೇವನೆಗೆ ಆದ್ಯತೆ ಇದೆ. ರೂಢಿಯಲ್ಲಿಯೂ ಇದೆ. ಎಲೆ ಅಡಕೆ ಎಂದಿನಂತೆ ಅಧುನಿಕತೆಯುಲ್ಲೂ ಅದನ್ನು ಬಳಸುವುದಂಟು ಹಿಂದೂಗಳಂತೆ ಮುಸ್ಲಿಂ ಸಮುದಾಯದವರು 'ಪಾನ್' ಪ್ರಿಯರು. 'ತಿನ್ನುವವರು ಇರುವತನಕ ವೀಳ್ಯದೆಲೆ ಬೆಳೆಯುವರು' ಎಂಬ ನಾಣ್ನಾಡಿ ಚಾಲ್ತಿಯಲ್ಲಿದೆ.

ಜಗತ್ತಿನಾದ್ಯಾಂತ 'ಲೀವ್ ೫೨ ಆಯುರ್ವೇದಿಕ್' ವೈದ್ಯ ಮೂಲಕ ಮನೆ ಮಾತಾಗಿರುವ ಭಾರತದ 'ಹಿಮಾಲಯ ಡ್ರಗ್ ಕಂಪನಿ'ಯು ತನ್ನ ಉತ್ಪಾದನೆಗಳನ್ನು ಹಿಮಾಲಯ ಎಂಬ ಹೆಸರಿನಲ್ಲಿ ಮಾರಾಟ ಮಾಡುತ್ತಿದೆ. ಬಳಕೆದಾರರ ಸಾಧನಗಳು ಮತ್ತು ಗಿಡಮೂಲಿಕೆ ಔಷಧಿಗಳ ಮೂಲಕ ಐವತ್ತಕ್ಕೂ ಹೆಚ್ಚಿನ ರಾಷ್ಟ್ರಗಳಲ್ಲಿ ಹೆಸರು ಗಳಿಸಿರುವ ಈ ಕಂಪನಿಯು ಹಿಮಾಲಯ ಹೆಸರಿನಲ್ಲಿ ವಿಶ್ವಾದ್ಯಾಂತ ತನ್ನ ಚಟುವಟಿಕೆ ವಿಸ್ತರಿಸಿದೆ. ಇದು ಸ್ವಿಸ್ ಆರೋಗ್ಯ ಇಲಾಖೆಯಿಂದ ಅಂಗೀಕರಿಸಲ್ಪಟ್ಟು ಆಯುರ್ವೇದಿಕ್ ಹಾಗೂ ಗಿಡಮೂಲಿಕೆ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟವಾಗಿ ದಾಖಲೆ ಸ್ಥಾಪಿಸಿವೆ. ಹಿಮಾಲಯ ಡ್ರಗ್ ಕಂಪನಿಯ ಅಧ್ಯಕ್ಷ ರವಿಪ್ರಸಾದ್‌ರವರು ಹೇಳುವಂತೆ 'ಗಿಡಮೂಲಿಕೆ ಸಾಧನೆಗಳಿಗೆ ಸುಮಾರು ಐವತ್ತು ಬಿಲಿಯನ್ ಮೌಲ್ಯದ ಮಾರುಕಟ್ಟೆಯಿದೆ. ನಮ್ಮ ಉತ್ಪಾದನೆಗಳು ಒಂದೇ ಬ್ರಾಂಡಿನ ಮೂಲಕ ಮಾರುಕಟ್ಟೆಗೆ ಬರುತ್ತಿವೆ. ಆದ್ದರಿಂದ ನಮ್ಮೆಲ್ಲಾ ಉತ್ಪಾದನೆಗಳನ್ನು ಒಂದೇ ಬ್ರಾಂಡಿನ ಮೂಲಕ ಮಾರುಕಟ್ಟೆಗೆ ತರುವುದೇ ನಮ್ಮ ಉದ್ದೇಶ. ಜಾಗತೀಕರಣಕ್ಕೆ ಅಣಿಗೊಳಿಸುವ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆ. ಎಂದು ತಮ್ಮ ಆಲೋಚನೆಗಳನ್ನು ವಿವರಿಸುತ್ತಾರೆ.

ಹಿಮಾಲಯ ಕಂಪನಿಯು ಈಗಾಗಲೇ ಅಮೇರಿಕಾ (ಯು.ಎಸ್.ಎ). ಮುಂತಾದ ದೇಶಗಳಲ್ಲಿ ತನ್ನ ಮಾರಾಟ ಮಳಿಗೆಗಳನ್ನು ತೆರೆದಿದೆ. ಆಫ್ರಿಕ, ಯುರೋಪ್ ಮತ್ತು ದಕ್ಷಿಣ ಅಮೇರಿಕೆಯಲ್ಲಿ ಪ್ರಮುಖ ಆರೋಗ್ಯಸಾಧನ ಮಾಡುವ ಕಂಪನಿಗಳ ಜೊತೆ ಮಾರಾಟದ ಸಹಭಾಗಿತ್ವ ಸಾಧಿಸಲಾಗಿದೆ. ೧೯೩೦ರಲ್ಲಿ ಆರಂಭವಾದ ಈ ಕಂಪನಿಯು ನವೀನ ಸಂಶೋಧನಾ ವಿಧಾನಗಳಿಂದ ಸ್ಥಳೀಯವಾಗಿ

ದೊರೆಯುವಂತಹ ಗಿಡ ಮೂಲಿಕೆಗಳನ್ನು ಬಳಸಿಕೊಂಡು ಮನುಷ್ಯರ ಆರೋಗ್ಯ ಮತ್ತು ಸೌಂದರ್ಯ ವರ್ಧಕ, ಪಶುವೈದ್ಯ ಔಷಧಿಗಳನ್ನೇ ಹೆಚ್ಚಾಗಿ ಉತ್ಪಾದಿಸಿ, ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ನೆಲೆಯನ್ನು ಕಂಡುಕೊಳ್ಳಲು ಹವಣಿಸುತ್ತದೆ. ಇದರಲ್ಲಿ ಲೀವ್‌೫, ಬೊನ್ನಿಸಾನ್ ಮತ್ತು ಚೆಂಪೊರ್ಟ್ ತಯಾರಾಗುವ ಪ್ರಮುಖ ಔಷಧಿಗಳು.

ಹೀಗೆ ಒಂದು ದೇಶ ಪರಿಸರದಲ್ಲಿ ದೊರೆಯುವ ಸಂಪತ್ತನ್ನು ಸದ್ಬಳಕೆ ಮಾಡಿಕೊಂಡು ರಾಷ್ಟ್ರೀಯ ಮಟ್ಟದಲ್ಲಿ ತಲಾದಾಯವನ್ನು ಹೆಚ್ಚಿಸಿಕೊಂಡು ಯಾವುದೇ ದೇಶ ಶಕ್ತಿ ರಾಷ್ಟ್ರವಾಗಿ ಬೆಳೆಯಬಹುದು. ಭಾರತದಲ್ಲಿ ದೊರೆಯುವಂತಹ ಔಷಧೀಯ ಗಿಡಮೂಲಿಕೆ ಸಸ್ಯಗಳನ್ನು ಕಂಡುಕೊಂಡು ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ವಿಶ್ವವ್ಯಾಪಾರ ಮಾರುಕಟ್ಟೆಯಲ್ಲಿ ತನ್ನ ಪ್ರಚಾರ ಹೆಚ್ಚಿಸಿಕೊಂಡು ನೆಲೆಯೂರಲು ಪ್ರಯತ್ನಿಸಬೇಕು. ಅಲ್ಲದೆ ಸ್ಥಳೀಯವಾದ ಇಂತಹ ಅಮೂಲ್ಯವಾದುದನ್ನು ಬಿಟ್ಟು ವಿದೇಶಿ ವಿದೇಶಿ ಎಂದು ಎಲ್ಲದಕ್ಕೂ ಪರದೇಶಗಳನ್ನು ಅವಲಂಬಿಸುತ್ತಾ ಹೋದಲ್ಲಿ ರಾಷ್ಟ್ರವೊಂದು ದಿವಾಳಿಯಾಗುವುದರಲ್ಲಿ ಸಂಶಯವೇ ಇಲ್ಲ. ರಾಷ್ಟ್ರವೊಂದರಲ್ಲಿ ಸಿಗುವ ಸಂಪತ್ತುಗಳನ್ನು ಆಯಾ ಭಾಗದ ಜನಪದರಿಂದ ಸಲಹೆ ಪಡೆದು, ಅದನ್ನು ಯಾವ ರೀತಿ ಜಾಗತೀಕರಣಕ್ಕೆ ಅಣಿಗೊಳಿಸಬೇಕು ಎಂಬ ಚಿಂತನೆ. ಅಧಿಕಾರದ ಚುಕ್ಕಾಣಿ ಹಿಡಿದವರಲ್ಲಿ ಹುಟ್ಟಬೇಕು. ಆಗ ಒಂದು ದೇಶ ಸ್ವಾವಲಂಬಿಯಾಗಲು ಸಾಧ್ಯ.

೭.೩. ಜನಪದ ಸಾಮಾಜಿಕ ಸಂಬಂಧಗಳಲ್ಲಿ ಪರಿಸರದ ಪಾತ್ರ

ಮಾನವನ ಸಾಮಾಜಿಕ ಸಂಬಂಧಗಳು ಪರಿಸರದಿಂದ ಪ್ರಭಾವಿತವಾಗಿರುತ್ತದೆ. ಮನುಷ್ಯನ ಜೀವಿತಾಭಿವೃದ್ಧಿಯಲ್ಲಿ ಪರಿಸರದ ಪಾತ್ರವನ್ನು ಎಂದೆಂದೂ ಕಡೆಗಣಿಸಲಾಗದು. ಕೇವಲ ಆರ್ಥಿಕಾಭಿವೃದ್ಧಿಯಲ್ಲದೆ, ಅವನ ಸಾಮಾಜಿಕ ಸಂಬಂಧಗಳ ನಂಟು ಪ್ರಾಚೀನವಾದುದು. ಸಂಪ್ರದಾಯ ಆಚರಣೆ ಉಡಿಗೆ ತೊಡಿಗೆ, ಆಹಾರ ಪದ್ದತಿ, ಉತ್ಪಾದನೆ ಹೀಗೆ ಸಮಸ್ತ ವಿಷಯಗಳಲ್ಲಿ ತನ್ನ ಪ್ರತಿಬಿಂಬದ ಛಾಯೆ ಇದ್ದೇ ಇದೆ. “ಜಗದೀಶ್ ಚಂದ್ರಬೋಸ್‌ರಂತ ಸಸ್ಯ ವಿಜ್ಞಾನಿಗಳು ತಮ್ಮ ಆವಿಷ್ಕಾರವನ್ನು ಪ್ರಕಟಿಸುವ ಮೊದಲು ಶತಶತಮಾನಗಳ ಹಿಂದೆಯೇ ಸಸ್ಯಗಳ ಭಾವಸಂವೇದನೆಯು ಅರ್ಥವಾಗಿತ್ತೆಂದು ಹೇಳಿದರೆ ಸುಳ್ಳಾಗಿರಲಾರದು. ಹೂವು ಕಿತ್ತರೆ ಕೊಂಬೆ ಕಡಿದರೆ ಮಳೆ ಬಡಿದರೆ ಅವುಗಳಿಗೆ ನೋವಾಗುತ್ತದೆ ಎಂಬ ಅರಿವು ಅವರಿಗಿತ್ತು. ಪ್ರಾಣ ಹರಣದಷ್ಟೆ ಸಸ್ಯ ಹರಣ ಕ್ರೂರವೆಂಬ ಭಾವನೆಯು ಅವರಿಗಿತ್ತು”[೧೭] ಮಾನವನಿಗೆ ನಿಸರ್ಗದ ಬಗ್ಗೆ ಇದ್ದ ಭಾವನೆ ಪೂಜನೀಯ ಆದ್ದರಿಂದಲೇ ಅದನ್ನು ಆರಾಧಿಸುತ್ತಾ ಬಂದ. ಎಲ್ಲಾ ದೇಶಗಳಲ್ಲೂ ಪ್ರಾಚೀನ ಕಾಲದಿಂದಲೂ ಪೂಜೆಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ. ಮನುಷ್ಯ ಬದುಕು, ಕಾರ್ಯಚಟುವಟಿಕೆ, ಜೀವನದ ಹಾಗೂ, ಹೋಗು ಹುಟ್ಟು ಬೆಳವಣಿಗೆ ಸಾವು ಮುಂತಾದ ಕರ್ಮಗಳಲ್ಲಿ ಸಂಪೂರ್ಣವಾಗಿ ನಿಸರ್ಗವನ್ನು ಅವಲಂಬಿಸಿದ್ದಾನೆ.

ಊರಿನ ಪಂಚಾಯಿತಿಗಳು ಮರದ ಕೆಳಗೆ ನಡೆಯುತ್ತಿದ್ದು ಮರವನ್ನು ನ್ಯಾಯ ದೇವತೆಯ ತಾಣವೆಂದು ಅರಿತಿದ್ದರು. ಮದುವೆ ಸಹ ಮರದ ಕೆಳಗೆ ನಡೆಯುತ್ತಿದ್ದವು ಈ ಒಂದು ಪದ್ದತಿ ಈ ಯುಗದಲ್ಲಿಯೂ ಇದೆ. ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ವಿಧುರಾಶ್ವತ್ಥ ಊರಲ್ಲಿ ದೊಡ್ಡ ಅಶ್ವತ್ಥ ಮರವಿದೆ. ಇಲ್ಲಿ ಮದುವೆಯಾದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿಂದ ಕರ್ನಾಟಕ ಆಂಧ್ರದವರು ಬಹುದೂರದಿಂದ ಪುರಾಣಕಲ್ಪನೆಯನ್ನು ಕಟ್ಟಿ ಅದೊಂದು ಯತ್ರಾಸ್ಥಳವನ್ನಾಗಿ ಮಾಡಿದ್ದಾರೆ.

"ಬಿಳಿಮಲೆಯವರು ಒಂದು ಕಡೆಯಲ್ಲಿ ಹೇಳುವಂತೆ ಮನುಷ್ಯನ ನಾಲ್ಕು ಸಂಸ್ಕಾರಗಳಲ್ಲಿ ವಿವಾಹವೂ ಬಹಳ ಪ್ರಮುಖವಾದುದು. ಮನುಷ್ಯನ ಬದುಕಿನ ಪ್ರಮುಖ ಘಟ್ಟ ಇದಾಗಿರುವುದರಿಂದ ವಿವಾಹಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ವಿವಾಹ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಮನುಷ್ಯ ಸಂಪೂರ್ಣವಾಗಿ ನಿಸರ್ಗವನ್ನು ಅವಲಂಬಿಸಿದ್ದಾನೆ. ನಿಸರ್ಗದಲ್ಲಿ ಪ್ರತಿಯೊಂದು ಅಂಶಕ್ಕೂ ತನ್ನದೇ ಆದ ಶಕ್ತಿಯಿದೆ ಎಂಬ ನಂಬಿಕೆ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಮೂಹೂರ್ತದ ಹಿಂದಿನ ದಿನ ಹೆಣ್ಣು ಗಂಡನ್ನು ಸ್ನಾನಮಾಡಿಸಿ ತೆಂಗಿನ ಹಾಲು ಮತ್ತು ಅರಿಶಿನ ಹಚ್ಚುವುದು ಫಲವಂತಿಕೆ ಸಂಕೇತ ಎಂಬುದೀಗ ಜಾನಪದ ಅಧ್ಯಯನದಲ್ಲಿ ಅಸಮಸ್ಯಾತ್ಮಕವಾಗಿ ತೀರ್ಮಾನಿಸಲಾಗಿದೆ." ೧೮ ವಧುವರರನ್ನು ಮುಹೂರ್ತದ ಹಿಂದಿನ ದಿನ ಅರಿಶಿನ ಹಚ್ಚುವುದು ವೈಜ್ಞಾನಿಕತೆಯಿಂದ ಕೂಡಿದೆ. ಅರಿಶಿನದಲ್ಲಿ ಲೈಂಗಿಕತೆಯನ್ನು ಪ್ರಚೋದಿಸುವ ಗುಣವಿರುತ್ತದೆ. ಬಿಡುವಿನ ದಿನದಲ್ಲೂ ಮುಖಕ್ಕೆ ಅರಿಶಿನವನ್ನು ಹಚ್ಚಿಕೊಳ್ಳುತ್ತಾರೆ. ಮದುವೆಯ ಸಂದರ್ಭದಲ್ಲಿ 'ವೀಳ್ಯಾದೆಲೆ' ಶಾಸ್ತ್ರ ಎಂಬ ಪದ್ಧತಿ ರೂಢಿಯಲ್ಲಿದೆ. ಹೆಣ್ಣುಗಂಡು ಮದುವೆಯ ಮಂಟಪದ ಬಳಿ ಹೋಗುವಾಗ ಬೀಗರು ಅಕ್ಕಿಯನ್ನು (ಅರಿಶಿನ ಹಚ್ಚಿದ) ಒಬ್ಬರ ಮೇಲೊಬ್ಬರು ಎರಚುವಾಟ ಮದುವೆಯನಂತರ ಮೆರವಣಿಗೆ ಹೋಗುವಾಗ ಮದುಮಗ ಮತ್ತು ಮದುಮಗಳಿಗೆ 'ದೃಷ್ಟಿ' ಯಾಗುತ್ತದೆಯೆಂದು ತೆಂಗಿನಕಾಯಿಯನ್ನು ನೀವಾಳಿಸಿ ಈಡುಗಾಯಿ ಹೊಡೆಯುತ್ತಾರೆ. ಮದುಮಗನಿಗೆ ನಿಂಬೆ ಹಣ್ಣಿನ ವಾಸನೆಯನ್ನು ಸವಿಯುವಂತೆ ಮೂಗಿನ ಬಳಿ ಹಿಡಿದಿರುತ್ತಾರೆ. ಮದುವೆ ಗಂಡನ್ನು ಯಾವುದೇ ಕಾರಣಕ್ಕೆ ಒಬ್ಬಂಟಿಯಾಗಿ ದೂರ ಹೊರಗಡೆ ಹೋದರೆ ದುಷ್ಟಶಕ್ತಿ ಮಯ್ಯಲ್ಲಿ ಸೇರಿಕೊಳ್ಳುತ್ತವೆ ಎಂಬ ನಂಬಿಕೆ. ಮದುವೆ ಸಂದರ್ಭದಲ್ಲಿ 'ಕಳಸ' ಮಹತ್ವವಾದ ಸ್ಥಾನವಿದೆ. ಕಳಸದಲ್ಲಿ ಸ್ವಲ್ಪಭಾಗ ನೀರುಹಾಕಿ ಸುತ್ತಾ ಎಲೆಯನ್ನು ಪೋಣಿಸಿ ಅದರೊಳಗೆ ಅರಿಶಿನ ಓಕಳಿ ಕಲಕುತ್ತಾರೆ. ಅದರ ಮೇಲೆ ಹೊಂಬಾಳೆ ಇಟ್ಟು ಕಳಸದ ಸುತ್ತಾ ಅಂಗ್ದಾರ (ಅರಿಸಿನ ಬಳಿದ ದಾರ) ವೊಂದು ಕಟ್ಟುತ್ತಾರೆ. ಈ ಪದ್ಧತಿ ಎಲ್ಲಾ ಕಡೆಯಲ್ಲೂ ಇದೆ.

ನಿಸರ್ಗಕ್ಕೂ ಹೆಣ್ಣಿಗೂ ಬಿಡಸಲಾರದಂತಹ ನಂಟು. ತನ್ನ ದುಃಖವನೆಲ್ಲ ನಿಸರ್ಗದಲ್ಲಿ ತೋಡಿಕೊಳ್ಳುತ್ತಾಳೆ. "ಮದುಮಗಳ ಮದುವೆ ಆಚರಣೆಯನ್ನು ಸಸ್ಯವರ್ಗದ ಹಿನ್ನೆಲೆಯಲ್ಲಿ ಸ್ಥೂಲವಾಗಿ ಇದೀಗ ವಿವರಿಸಲಾಗಿದೆ. ಮುಟ್ಟಾದ ಹೆಣ್ಣನ್ನು ಗೊನೆ ಬಿಡುತ್ತಿರುವ ಬಾಳೆಯಗಿಡ, ತೆಂಗಿನಮರ, ಹಾಲು ಒಸರುವ ಹಲಸಿನ ಮರ ಇವುಗಳ ಬುಡದಲ್ಲಿ ನಿಲ್ಲಿಸುವುದು. ತೆಂಗಿನಕಾಯಿಗಳ ಮೇಲೆ

[illegible]

ಕುಳ್ಳಿರಿಸುವುದು. ತಂಬಿಗೆಗಳಲ್ಲಿ ವೀಳ್ಯ ಅಡಿಕೆಯನ್ನು ಇಟ್ಟು ನೀರು ತುಂಬಿ ಎರೆಯುವುದು. ತಲೆಗೆ ಹಚ್ಚುವುದಕ್ಕೆ ಎಣ್ಣೆ ಎರೆಯುವುದು. ಸ್ನಾನ ಮಾಡಿಸಿ ಆರತಿ ಬೆಳಗುವುದು ತೆಂಗಿನ ಮರದ 'ಹೂವು' ಬಿಡುತ್ತಿರುವ ಕೊಂಬೆಯನ್ನು ತಂದು ಅವಳು ಕುಳಿತುಕೊಳ್ಳುವ ಕೋಣೆಯ ಮೂಲೆಯಲ್ಲಿ ಇಡುವುದು. ಅರಿಶಿನದ ನೀರಿನಲ್ಲಿ ಕೈಗಳನ್ನು ಮುಳಗಿಸಿ ಅಂಗೈ ಅಚ್ಚುಗಳನ್ನು ಗೋಡೆಯ ಮೇಲೆ ತ್ರಿಕೋನಾಕೃತಿಯಲ್ಲಿರುವಂತೆ ಒತ್ತುವುದು. ತಂಪು ಪದಾರ್ಥಗಳನ್ನು ತಿನ್ನಲು ಕೊಡುವುದು, ಸ್ನಾನ ಮಾಡಿಸುವಾಗ ನೀರಿಗೆ ಐದು ಹಲಸಿನ ಎಲೆ, ಐದು ಮಾವಿನ ಎಲೆ ಸೀಗೆ ಪುಡಿ ಅರಿಶಿನ ಪುಡಿ ಇವುಗಳನ್ನು ಹಾಕುವುದು. ಹೊಸಸೀರೆ ತೊಡಸಿ ಹೂಮುಡಿಸಿ ಅರಿಶಿನ ಹಚ್ಚಿ ಕುಂಕುಮ ಇಟ್ಟು ಶೃಂಗಾರ ಮಾಡುವುದು. ಮಂಡಲ ಬರೆದು ಕಲಶಗಳನ್ನಿಟ್ಟು ಐದು ಹಲಸಿನ ಎಲೆ ಐದು ವೀಳ್ಯ ಒಂದು ಅಡಿಕೆಯಿಟ್ಟು, ಬಾಳೆ ಎಲೆಯಲ್ಲಿ ಸ್ವಸ್ತಿಕ ಬಿಡಿಸಿ ಮಂಡಲ ಮಧ್ಯದ ಮೂರು ತೆಂಗಿನ ಕಾಯಿ ಅಥವಾ ಅಕ್ಕಿ ಮುಡಿಯ ಮೇಲೆ ಕುಳಿತುಕೊಳ್ಳುವುದು ವೀಳ್ಯ ತಿನ್ನಿಸಿ ಉಗಿಸುವುದು. ಬಾಳೆ ಎಲೆಯಲ್ಲಿ ತೆಂಗಿನ ಕಾಯಿ ಒಡೆದಿಟ್ಟು ದೀಪಹಚ್ಚಿ ತೆಂಗಿನ ಮರಕ್ಕೆ ವಂದಿಸುವುದು. ಮಂಡಲ ನಡುವೆ ಕುಳಿತ ಹುಡಗಿಯ ಬಲಗಾಲಿನ ಹೆಬ್ಬೆರಳಿಗೆ ನೂಲನ್ನು ಸುತ್ತಿ ಅದನ್ನು ತಲೆಹಿಂದಿನಿಂದ ಎಡಬದಿಗೆ ಕೊಂಡೊಯ್ದು ಎಡಗಾಲಿನ ಹೆಬ್ಬೆರಳಿಗೆ ಆ ನೂಲಿನ ಇನ್ನೊಂದು ತುದಿಯನ್ನು ಸುತ್ತಿ ಚಿನ್ನದ ಅಥವಾ ಬೆಳ್ಳಿಯ ಕಡಗವನ್ನು ನೂಲಿನಿಂದ ಬಲವಾಗಿ ಹೊರತೆಗೆದು ಕೈಗೆ ತೊಡಿಸುವುದು ಆ ನೂಲನ್ನು ಬಾಳೆ ಎಲೆಯ ಮೇಲೆ ಹಾಕಿ ಅದರ ಮೇಲೆ ಎಲೆ ಅಡಿಕೆ ಕೆಂಪು ಎಂಜಲನ್ನು ಉಗುಳುವುದು. ಕೈಯಿಂದ ಮಡಿಕೆ ಸೌಟು ಹಿಡಿಸೂಡಿ ಕತ್ತಿಹಿಡಿಸುವುದು, ಒನಕೆದಾಟಿಸುವುದು, ಇಂತಹ ಆಚರಣೆಗಳಲ್ಲಿ ಫಲವಂತಿಕೆಯನ್ನು ಸಾಂಕೇತಿಕವಾಗಿ ಘೋಷಿಸಲಾಗುತ್ತದೆ. ಲೈಂಗಿಕತೆಯ ಅರ್ಹತೆಯನ್ನು ಸಂಭ್ರಮದಿಂದ ಪರಿಗಣಿಸಿರುವುದು ಕಂಡುಬರುತ್ತದೆ."[೧೯]

ಮನುಷ್ಯ ಮತ್ತು ಪರಿಸರದ ನಡುವಿನ ಸಂಬಂಧದ ಛಾಪು 'ಇದಮಿತ್ಥಂ' ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇಂದಿಗೂ ಸಹ ಮಹಾನಗರಗಳಲ್ಲಿಯೂ ಮನೆಗಳ ಅಲಂಕಾರಕ್ಕಾಗಿ ಮನೆ ಮುಂದೆ ಶೋಗಿಡಗಳನ್ನು ಬೆಳಸುತ್ತಾರೆ. ಪೂಜನೀಯವಾಗಿ ತುಳಸಿಯನ್ನು ನೆಡುಸುತ್ತಾರೆ. ಮನುಷ್ಯನ ವೈವಿಧ್ಯಮಯ ಬದುಕಿನ ನಡುವೆ ಪರಿಸರ ಎಂಬುದು ನಿಕಟವಾದ ಅಳಿಸಲಾಗದ ಸಂಬಂಧವನ್ನು ಸದಾ ಮುಂದುವರೆಸಿಕೊಂಡು ಹೋಗುತ್ತಿರುತ್ತದೆ.

೭.೪. ಜನಪದರ ಆರೋಗ್ಯದಲ್ಲಿ ಪರಿಸರದ ಮಹತ್ವ:

ಒಂದೆ ಮನುಷ್ಯ ದೃಢಕಾಯವಾಗಿ ಇದ್ದುದ್ದರ ಹಿಂದೆ ಅವನು ಉಪಯೋಗಿಸುತ್ತಿದ್ದ ಪೌಷ್ಠಿಕ ಆಹಾರವೇ ಪ್ರಮುಖ ಕಾರಣ. ಎತ್ತಿನ ಗಾಡಿಗೆ ಒಬ್ಬನೇ ಕೀಲೆಣ್ಣೆ ಹಾಕುತ್ತಿದ್ದ ಎಂದರೆ ಆಗಿನ ಮನುಷ್ಯ ಎಷ್ಟೊಂದು ಶಕ್ತಿಯುತ, ಆರೋಗ್ಯದಾಯಕವಾದ ಆಹಾರವನ್ನು ತೆಗೆದುಕೊಳ್ಳುತ್ತಿದ್ದ ಎಂಬುದು

ಗಮನಾರ್ಹ. ಅವನು ಸೇವಿಸುವ ಆಹಾರದಲ್ಲಿ ಯಾವುದೇ ರೀತಿಯ ರಸಾಯನಿಕಯುಕ್ತ ಗೊಬ್ಬರದಿಂದ ಬೆಳೆದ ಧಾನ್ಯವನ್ನು ಅವನು ಸೇವಿಸುತ್ತಿರಲಿಲ್ಲ ಕೊಟ್ಟಿಗೆ ಗೊಬ್ಬರದಲ್ಲೆ ಅವನು ಸಾಕಾಗುವಷ್ಟು ಧಾನ್ಯವನ್ನು ಬೆಳೆದು ತನಗೆ ಬೇಕಾದಷ್ಟನ್ನು ದಾಸ್ತಾನು ಮಾಡುತ್ತಿದ್ದ. ಆಧುನಿಕತೆಯ ಕೊಡುಗೆಗಳಾದ ಕಾರ್ಖಾನೆಗಳು ಮತ್ತು ಯಂತ್ರಗಳಿಂದ ತಯಾರಾಗುವ ವಿಷಾನಿಲ ಮನುಷ್ಯನ ಆರೋಗ್ಯದ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಮನುಷ್ಯ ದಿನೇ ದಿನೇ ತನ್ನ ದೈಹಿಕ ಆಕಾರದಲ್ಲಿ ಕುಬ್ಜನಾಗುತ್ತಿದ್ದಾನೆ. ಇದಕ್ಕೆ ಹಲವಾರು ಕಾರಣಗಳಿವೆಯಾದರೂ ಅದರಲ್ಲಿ ಪರಿಸರದ ಪಾತ್ರವನ್ನು ಕಡೆಗಣಿಸಲಾಗದು. ಮನುಷ್ಯ ತನ್ನ ದುರಾಸೆಗೆ ಪರಿಸರವನ್ನು ಹದಗೆಡಿಸಿದ್ದಾನೆ. ಮಿತಿಮೀರಿದ ಕಾರ್ಖಾನೆಗಳು, ಇವುಗಳಿಂದ ಹೊರಬೀಳುವ ವಿಷಾನಿಲ, ಕೆಮಿಕಲ್‌ಯುಕ್ತವಾದ ತ್ಯಾಜ್ಯ ವಸ್ತು ಕೆರೆನದಿಗಳನ್ನು ಸೇರಿ ನೀರೆಲ್ಲಾ ಉಪಯೋಗಕ್ಕೆ ಬಾರದಂತೆ ಕಲುಷಿತಗೊಳ್ಳುತ್ತಿವೆ. ಆದಕ್ಕೆ ಪೂರಕವೆಂಬಂತೆ ದೊಡ್ಡದೊಡ್ಡ ನಗರಗಳ ಕೊಳಚೆನೀರು ನದಿಗೆ ಸೇರಿ ಆ ನೀರಿನಿಂದ ಬೆಳೆದ ಬೆಳೆಯೆಲ್ಲಾ ವಿಷಯುಕ್ತ. ಅದರ ಬಳಕೆ ದೇಹದ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ ಎಂದೂ ಕಂಡರಿಯದಂತ ವೈದ್ಯಕೀಯ ಲೋಕಕ್ಕೆ ಸವಾಲಾಗುವಂತ ಕಾಯಿಲೆಗಳು ಉದ್ಭವಿಸುತ್ತವೆ.

ಪ್ರಾಚೀನ ಕಾಲದಲ್ಲಿ ಆಧುನಿಕವಾದ ವೈದ್ಯಕೀಯ ಸೌಲಭ್ಯವಿಲ್ಲದೆ ಮನುಷ್ಯ ಹೇಗೆ ಬದುಕಿತಿದ್ದ ಎನ್ನುವುದು ಆಶ್ಚರ್ಯವಾಗಿ ಕಾಡಬಹುದು. ಆದರೆ ಅಂದಿನ ರೋಗಗಳಿಗೆ ಪ್ರಕೃತಿದತ್ತವಾದ ಚಿಕಿತ್ಸೆ ಇತ್ತು. ದೇಹದಲ್ಲಿ ರೋಗ ನಿರೋಧ ಶಕ್ತಿ ಹೆಚ್ಚು ಇದ್ದುದರಿಂದ ಖಾಯಿಲೆಯ ಸೋಂಕು ಕಡಿಮೆಯಿತ್ತು. ಒಂದು ವೇಳೆ ಖಾಯಿಲೆ ಬಂದರೂ ಪ್ರಕೃತಿಯಲ್ಲಿ ನೈಸರ್ಗಿಕದತ್ತವಾಗಿ ದೊರೆಯುವಂಥ ಗಿಡ ಮೂಲಿಕೆಗಳನ್ನು ದಿವ್ಯ ಔಷಧಿಯನ್ನಾಗಿ ಬಳಸುತ್ತಿದ್ದರು. ಇಂತಹ ಅಪೂರ್ವ ಜ್ಞಾನವನ್ನು ಅನುಭವ ಗ್ರಾಹ್ಯದಿಂದ ತಿಳಿದಿದ್ದು ನಮ್ಮ ಜನಪದರು. ಆರೋಗ್ಯದಾಯಕ ಸಂತೃಪ್ತಿ ಜೀವನ ನಡೆಸಲು ನಿಸರ್ಗ ಕರುಣಿಸುವ ವನಸ್ಪತಿಗಳ ಉಪಚಾರ ಮಾಡುತ್ತಿದ್ದರು. ಪ್ರತಿಯೊಂದು ಊರಿನಲ್ಲೂ ನಾಟಿ ವೈದ್ಯರು ಇರುತ್ತಿದ್ದರು. ಪ್ರಾಣ ಹಾನಿಕಾರಕ ರೋಗಗಳಿಗೆಲ್ಲಾ ತಮ್ಮ ತಮ್ಮ ಊರುಗಳಲ್ಲೆ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಆಯುರ್ವೇದಿಕ್ ವೈದ್ಯದಲ್ಲಿ ಪ್ರಮುಖವಾಗಿ ಗಿಡ ಮೂಲಿಕೆಗಳನ್ನು ಬಳಸುತ್ತಿದ್ದರು. ಜನಪದರ ಬದುಕಿನಲ್ಲಿ ಸಸ್ಯಗಳು ಮತ್ತು ಇವುಗಳನ್ನು ಕುರಿತ ಗಾದೆ, ನಂಬಿಕೆ, ಪುರಾಣಗಳು ಹುಟ್ಟಿಕೊಂಡವು.

ಜನಪದ ವೈದ್ಯಕ್ಕೆ ಸಂಬಂಧಪಟ್ಟಂತೆ ದಕ್ಷಿಣ ಕರ್ನಾಟಕದಲ್ಲಿ ಒಂದು ಪ್ರತೀತಿ ಇದೆ. ಬೇಟೆಯಾಡಿಕೊಂಡು ಮೊಲವನ್ನು ಕೊಂದು ತರುವಾಗ ಆ ಸತ್ತ ಮೊಲಗಳನ್ನೆಲ್ಲ ಸೊಪ್ಪು ಇರುವ ಬಳ್ಳಿಯೊಂದರಲ್ಲಿ ಸುತ್ತಿಕೊಂಡು ಮನೆ ಬಳಿಗೆ ಬಂದು ಬಿಚ್ಚಿ ನೋಡುವಾಗ ಮೊಲಗಳೆಲ್ಲಾ ಓಡಿ ಹೋದವಂತೆ. ಜನಸಾಮಾನ್ಯರಲ್ಲಿ ಈಗಲೂ ಈ ನಂಬಿಕೆಯಿದೆ. ಅಂದಿನಿಂದ ಸೊಪ್ಪು ಇರುವ ಆ ಬಳ್ಳಿಯನ್ನು ಗುರುತು ಇಟ್ಟುಕೊಂಡು ಆ ಔಷಧಿಯನ್ನು ಮನುಷ್ಯನ ಮುರಿದ ಮೂಳೆಗಳನ್ನು ಕಟ್ಟಲು

ಬಳಸಿಕೊಳ್ಳುತ್ತಾರೆಂದು ಈಗಲೂ ಹೇಳುತ್ತಾರೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ನಲ್ಲೆಕಾಮನಹಳ್ಳಿ ಎಂಬಲ್ಲಿ ಇಂದಿಗೂ ಈ ನಾಟಿ ಔಷಧ ಕೊಡುತ್ತಾರೆ. ಮೇಲೆ ಹೇಳಿದ ಕಥೆಯೇ ಈ ಭಾಗದಲ್ಲಿ ಹೆಚ್ಚು ಪ್ರಚಾರವಿದೆ. ಇಂತಹ ನಾಟಿ ವೈದ್ಯಕ್ಕೆ ಶತಶತಮಾನಗಳ ಇತಿಹಾಸವಿದೆ. ಇದೊಂದು ಅನುಭವ ಲೋಕದ ಅದ್ಭುತ. ಇತಿಹಾಸದ ಶಾಸನಗಳಲ್ಲೂ ಜಾನಪದ ವೈದ್ಯರಿದ್ದ ಬಗ್ಗೆ ದಾಖಲೆಯಿದೆ." "ಕ್ರಿ. ಪೂ. ಮೂರನೇ ಶತಮಾನ ಅಶೋಕನ ಶಾಸನದಲ್ಲಿ ಜನರಿಗೆ, ಪಶುಗಳಿಗೆ ಖಾಯಿಲೆಗೆ ಬೇಕಾಗುವ ಔಷಧಿ ಗಿಡಗಳನ್ನು ಬೇರೆ ಕಡೆಯಿಂದ ತಂದು ನೆಡುಸುತ್ತಿದ್ದರು, ಕ್ರಿ.ಪೂ ೪೦೦ರಲ್ಲಿ ಸುಮಂತ ಭದ್ರನು ಪದ್ಮಾವತಿ ಭಸ್ಮಕ ರೋಗ ಗುಣಪಡಿಸಿದ ಎಂಬ ಉಲ್ಲೇಖ ಕವಿರಾಜಮಾರ್ಗದಲ್ಲಿದೆ. 'ನಾಗಾರ್ಜುನ ಪುಟ' ವೆಂಬವೈದ್ಯಗ್ರಂಥ ಮುಖ್ಯವಾದುದು. ಇದು ವೈದ್ಯಕ್ಕೆ ಸಂಬಂಧಿಸಿದ ಮೊದಲ ಗ್ರಂಥ. ೧೧೦೦ರ ಕೀರ್ತಿವರ್ಮನ'ಗೋವೈದ್ಯ' ೧೧೭೫ರ ಜಗದಳ ಸೋಮನಾಥನ 'ಕರ್ನಾಟಕ ಕಲ್ಯಾಣಕಾರಕ', ೧೩೦೦ರ ದೇವೇಂದ್ರ ಮುನಿಯ 'ಬಾಲಗ್ರಹ ಚಿಕಿತ್ಸೆ', ೧೫೦೦ರ ಬಾಚರಸನ 'ಅಶ್ವವೈದ್ಯ', ಶೀಧರದೇವನ 'ವೈದ್ಯಾಮೃತ' ೧೩೬೦ರ ಮಂಗರಾಜನ 'ಖಗೇಂದ್ರಮಣಿ ದರ್ಪಣ' ಮುಂತಾದವು."[೨೦] ಜನಪದ ವೈದ್ಯದ ಬಗ್ಗೆ ಸ್ಪಷ್ಟ ಮಾಹಿತಿ ಕೊಡುತ್ತವೆ. ದೇವಸ್ಥಾನ ಮಠಮಾನ್ಯಗಳಲ್ಲಿ ಹಿಂದೆ ಖಾಯಿಲೆಗಳಿಗೆ ಚಿಕಿತ್ಸೆ ನಿಡಲಾಗುತ್ತಿತ್ತು. ಅನೇಕ ಕಾವ್ಯಗಳು ಈ ವೈದ್ಯದ ಬಗೆಗೆ ಉಲ್ಲೇಖ ಮಾಡಿದೆ.

ಜನಪದ ವೈದ್ಯ ಎಂಬುದು ತುಂಬ ವಿಸ್ತಾರವಾದ ಅದ್ಭುತವಾದ ಒಂದು ಜ್ಞಾನ. ಈ ಜ್ಞಾನವನ್ನು ಆಧುನಿಕತೆಯಲ್ಲಿ ಸೂಕ್ತವಾಗಿ, ಸಮರ್ಪಕವಾಗಿ ಬಳಸಿಕೊಂಡಾಗ ಮಾತ್ರ ವಿಜ್ಞಾನವಾಗುತ್ತದೆ. ಜಾನಪದ ವೈದ್ಯವು ಗಿಡಮೂಲಿಕೆಗಳನ್ನು ಅವಲಂಬಿಸಿದೆ. ಆಯಾ ಖಾಯಿಲೆಗೆ ಆಯಾ ಪ್ರದೇಶದ ಸಸ್ಯಗಳೇ ಔಷಧಿಗಳಾಗಿರುತ್ತವೆ. ಒಂದು ಪ್ರದೇಶದ ಖಾಯಿಲೆಗೆ ಮತ್ತೊಂದು ಪ್ರದೇಶದ ಔಷಧ ಪರಿಣಾಮಕಾರಿಯಾಗಿ ಕೆಲಸಮಾಡುವುದು ಕಡಿಮೆ. ಜಾನಪದ ವೈದ್ಯವನ್ನು ಸಂಕ್ಷಿಪ್ತ ಅಧ್ಯಯನಕ್ಕೋಸ್ಕರ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಮಾನವ ವೈದ್ಯ[೨೧]

೨. ಪಶು ವೈದ್ಯ

೩. ಸಸ್ಯ ವೈದ್ಯ

೧. ಮಾನವ ವೈದ್ಯ : ಮಾನವ ವೈದ್ಯದಲ್ಲಿ ಹೆಂಗಸರ ವೈದ್ಯ, ಗಂಡಸರ ವೈದ್ಯ, ಮಕ್ಕಳ ವೈದ್ಯ ಮುಖ್ಯವಾದರೂ ಹೆಂಗಸರ ಖಾಯಿಲೆಗಳಿಗೆ ಸಂಬಂಧಪಟ್ಟಂತೆ ಬಾಣಂತಿಯರ ಖಾಯಿಲೆಗಳಿಗೆ ಚಿಕಿತ್ಸೆ ವಿಧಾನವನ್ನು ಮತ್ತೊಂದು ಬಗೆಯಾಗಿ ಮಾಡಬಹುದು. ಇದರಲ್ಲಿ ಎಲ್ಲರಿಗೂ ಸಮನಾದ

ಖಾಯಿಲೆಗಳಿದ್ದರೂ ವೈದ್ಯವಿಧಾನ, ಪ್ರಮಾಣ, ಬೆರಸುವ ವಸ್ತುಗಳು ಬೇರೆ ಬೇರೆಯಾಗಿರುವುದರಿಂದ ಹಾಗೆ ವಿಭಾಗಮಾಡಿಕೊಳ್ಳಬೇಕಾಗುತ್ತದೆ.

೨. **ಪಶು ವೈದ್ಯ** : ಮಾನವ ತನ್ನ ಆರೋಗ್ಯ ಜೊತೆಗೆ ಸಾಕುಪ್ರಾಣಿಗಳ ಆರೋಗ್ಯವೂ ಮುಖ್ಯವೆಂಬುದನ್ನು ಗಮನದಲ್ಲಿ ಇಟ್ಟುಕೊಂಡಿರುವುದರಿಂದ ಪಶುವೈದ್ಯ ಅತ್ಯಂತ್ರ ಪ್ರಾಮುಖ್ಯತೆ ಪಡೆದಿದೆ. ಭಾರತದಲ್ಲಿ ಶೇ. ೭೫ ಭಾಗ ಹಳ್ಳಿಗಳದ್ದು. ರೈತಕುಟುಂಬಗಳೇ ಹೆಚ್ಚಾಗಿರುವುದರಿಂದ ಬೇಸಾಯವೇ ಅವರ ಮುಖ್ಯ ಕಸುಬಾಗಿದೆ. ಬೇಸಾಯಕ್ಕೆ ಬೆನ್ನುಲುಬಾದ ಜಾನುವಾರುಗಳ ಉಪಚಾರವೇ ಪಶುವೈದ್ಯದ ಪ್ರಮುಖ ಭಾಗವಾಗಿದೆ. ಇದಕಂದೇ ಪಶುವೈದ್ಯ ಚಿಕಿತ್ಸೆಗಳಿದ್ದರೂ ಜಾನುವಾರುಗಳಿಗೆ ಮಾತ್ರ ನಾಟಿ ವೈದ್ಯೇದ ಚಿಕಿತ್ಸೆಯ ವಿಧಾನವೇ ಹೆಚ್ಚು ಬಳಕೆಯಲ್ಲಿದೆ. ಇದಕ್ಕೆ ಕಾರಣ ಕೇವಲ ಜಾನಪದ ವೈದ್ಯ ಪರಿಣಾಮಕಾರಿಯಾದುದು ಮಾತ್ರವಲ್ಲದೆ ಗೋಮಾತೆಗೆ ಪರಂಗಿ ಔಷಧ ತಾಕಿಸಬಾರದೆಂಬ ನಂಬಿಕೆಯು ಅಡಗಿದೆ. ಜನಪದರ ಭಾವನೆಯಲ್ಲಿ ಆಸ್ಪತ್ರೆಯ ಚಿಕಿತ್ಸೆ ವಿಧಾನ ನಿಧಾನವಾದುದು. ಇದಕ್ಕೆ ಕಾರಣವಿಲ್ಲದಿಲ್ಲ ಹಸುವಿಗೆ ಕಾಲು ಮುರಿದುದನ್ನು ಯಾವ ಶಸ್ತ್ರಚಿಕಿತ್ಸೆ ಸಹಾಯವಿಲ್ಲದೆ ನಾಲ್ಕು ದಬ್ಬೆಗಳನ್ನು ಕಟ್ಟಿ ಗಿಡಮೂಲಿಕೆ ಸೊಪ್ಪಿನ ರಸಹಾಕಿ ಕೇವಲ ಹದಿನೈದು ಇಪತ್ತು ದಿನಗಳಲ್ಲಿ ಗುಣಮಾಡುವ ಹಳ್ಳಿಗರು ಮಾಡುವ ವಿಧಾನ ಆಸ್ಪತ್ರೆಯ ಚಿಕಿತ್ಸೆಯು ಒಂದೂವರೆ ತಿಂಗಳು ಸಮಯವನ್ನು ಮುಗಿಸುವುದೆಂದರೆ ರೈತನಿಗೆ ಸಹಾಯಕವಲ್ಲವೇ? ಈ ಭಾವನೆಯಿಂದಾಗಿ ಹಳ್ಳಿಗಳಲ್ಲಿ ಪಶುಗಳಿಗೆ ಮಾತ್ರ ನಾಟಿ ವೈದ್ಯವೇ ಹೆಚ್ಚು ಬಳಕೆಯಿದೆ. ಕುರಿ, ಕೋಳಿ ನಾಯಿ, ಮೊಲ, ಆನೆ, ಕುದುರೆ, ಪಾರಿವಾಳ ಹೀಗೆ ಎಲ್ಲಾ ಪ್ರಾಣಿಗಳಿಗೂ ಈ ವೈದ್ಯರು ಉಪಚರಿಸುತ್ತಾರೆ. ಈ ಪ್ರಾಣಿಗಳನ್ನು ಸಾಕಿದ ಪ್ರತಿ ಮನೆಯವರು ಸ್ವಯಂವೈದ್ಯರಾಗಿರುವುದು ಹಳ್ಳಿಗಳಲ್ಲಿ ಸಾಮಾನ್ಯ ಸಂಗತಿ.

೩. **ಸಸ್ಯವೈದ್ಯ** : ನಮ್ಮ ಹಳ್ಳಿಗರು ತಮ್ಮಂತೆ ಪ್ರಾಣಿಗಳಂತೆ ತಮ್ಮ ಸುತ್ತಮುತ್ತಲು ತಾವೇ ಬೆಳೆಸಿದ ಪೈರು ಪಚ್ಚೆ ಗಿಡಮರಗಳನ್ನು ಉಪಚರಿಸುತ್ತಾರೆ. ಅವುಗಳಿಗೂ ರೋಗ ಬರುವುದುಂಟು. ಗೆದ್ದಲು ಬರುವುದರಿಂದಲೋ, ಹುಳುಹತ್ತುವುದರಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಗಿಡಗಳು ನಶಿಸುತ್ತಾ ಬಂದರೆ, ಪೈರು ಪಚ್ಚೆಯನ್ನು ನಂಬಿದ ರೈತ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳಬೇಕಾಗುತ್ತದೆ. ಅದರ ನಿವಾರಣೋಪಾಯಕ್ಕಾಗಿ ಹಳ್ಳಿಯಜನ ತಮ್ಮದೇ ಆದ ಔಷಧಿಗಳನ್ನು ಕೊಡುತ್ತಾರೆ. ನಮ್ಮಲ್ಲಿ ಕರಿಬೇವಿನ ಗಿಡಕ್ಕೆ ಹುಳು ಬಿದ್ದರೆ ಹಳಸಿದ ಸಾಂಬಾರಿಗೆ ಇಂಗು ಬೆರೆಸಿ ಗಿಡಕ್ಕೆ ಸಿಂಪಡಿಸುತ್ತಾರೆ. ವಾಸನೆಗೆ ಹುಳು ಸಾಯುತ್ತವೆ. ತೆಂಗಿನ ಬುಡದ ಸುತ್ತಲೂ ಉಪ್ಪು ಹಾಕುವುದರಿಂದ ನೆಲದಲ್ಲಿನ ಗೆದ್ದಲಹುಳು ಗಿಡಕ್ಕೆ ಹಾನಿ ಮಾಡುವುದಿಲ್ಲ. ಬಿಸಿಬೂದಿಯೊಂದಿಗೆ ಉಪ್ಪು ಬೆರಸಿ ಪೈರಿಗೆ ಉಗ್ಗುವುದರಿಂದ ಪೈರಿಗೆ ಹತ್ತಿದ ಹುಳಗಳು ನಾಶವಾಗಿ ಗಿಡದ ಬುಡಕ್ಕೆ ಬಿದ್ದು ಅದೆ ಗೊಬ್ಬರವಾಗುತ್ತದೆ. ಫಸಲು ಚೆನ್ನಾಗಿ ಬರುತ್ತದೆ, ಎಂದು ಮರಗಳ ಬುಡಕ್ಕೆ ಹುಳುಹತ್ತಬಾರದೆಂದು ಔರೆಣ್ಣೆ ಬಳಿಯುತ್ತಾರೆ. ಈ ಎಲ್ಲಾ ವಿಧಾನಗಳು ಕೆಲವು ಭಾಗಗಳಲ್ಲಿ

ಬಳಕೆಯಾಗುತ್ತವೆ. ರಾಜಕೀಯ ಮುಖಂಡರು, ಪ್ರಧಾನಿಗಳು, ಮುಖ್ಯ ಮಂತ್ರಿಗಳು, ರಾಷ್ಟ್ರಪತಿಗಳು ಸಮಾರಂಭಕ್ಕೆ ಬರುವ ರಸ್ತೆಯಲ್ಲಿ ಸಾಲುಮರಗಳಿಗೆ ಬಿಳಿ, ಕೆಂಪು, ಬಿಳಿ ಮೂರು ಮೂರು ಪಟ್ಟಿಗಳನ್ನು ಹಾಕಿರುತ್ತಾರೆ.

ಜಾನಪದ ವೈದ್ಯನು ಪುಸ್ತಕ ಪಂಡಿತನಲ್ಲ. ಆತ ಔಷಧಿ ತಯಾರಿಸಲು ತನ್ನ ಹಾಗೂ ಇತರರ ಅನುಭವಗಳನ್ನು ಉಪಯೋಗಿಸಿಕೊಳ್ಳುತ್ತಾನೆ ಅಷ್ಟೆ. ಅಲ್ಲಿ ಸಮಯ ಬಿದ್ದರೆ ಪ್ರಾಣಿಗಳನ್ನು ಸಸ್ಯಗಳನ್ನು ನಂಬಿಕೆಗಳನ್ನು ದೈವವನ್ನು ತನ್ನ ಸಹಾಯಕ್ಕೆ ಕರೆದುಕೊಂಡು ಅವುಗಳನ್ನು ಉಪಯೋಗಿಸಿಕೊಂಡು ರೋಗಗಳಿಗೆ ಔಷಧಿ ತಯಾರಿಮಾಡುತ್ತಾನೆ. ಜನಪದ ಔಷಧಗಳ ತಯಾರಿಕೆಯಲ್ಲಿ ಇವುಗಳ ಪಾತ್ರಗಳನ್ನು ಗಮನದಲ್ಲಿಟ್ಟುಕೊಂಡು ವೈದ್ಯಮೂಲವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

೧. ಪ್ರಾಣಿ ಮೂಲ ಔಷಧಿ

೨. ಸಸ್ಯಮೂಲ ಔಷಧಿ

೩. ಮನುಷ್ಯ ಮೂಲ ಔಷಧಿ

೪. ನಂಬಿಕೆ ಮೂಲ ಔಷಧಿ

೧. ಪ್ರಾಣಿ ಮೂಲ ಔಷಧಿ : ಪ್ರಾಣಿ ಮೂಲ ಔಷಧಿಗಳಲ್ಲಿ ಅನೇಕ ಪ್ರಾಣಿಗಳ ಲದ್ದಿ ಮೂತ್ರದಿಂದ ಹಿಡಿದು ಪ್ರಾಣಿಗಳ ಎಲ್ಲ ಭಾಗಗಳು ಜನಪದ ವೈದ್ಯದಲ್ಲಿ ಬಳಕೆಯಾಗುತ್ತದೆ. ಕೆಲವು ಬಾರಿ ಹಾಗೆಯೇ (ಮೂಲ ರೂಪದಲ್ಲಿ) ಕೊಡುವುದುಂಟು ಮತ್ತೆ ಕೆಲವು ಬಾರಿ ಅವುಗಳಿಂದ ಔಷಧಿ ತಯಾರಿಸಿ ಕೊಡುವುದುಂಟು. ಹೋಪಿ ಜನಾಂಗದವರು, ಮುಂಗಸಿಯ ಕೊಬ್ಬು ಅಥವಾ ಮಾಂಸವನ್ನು ಶಕ್ತಿಯುತವಾದ ಹೆರಿಗೆ ಔಷಧಗಳಾಗಿ ಉಪಯೋಗಿಸುತ್ತಾರೆ. ಮಂಡ್ಯದ ಕಡೆಗೆ ಕೋಳಿಯ ಸಾರು ಔಷಧೀಯ ಒಂದು ಭಾಗವಾಗಿದೆ. ಕುರಿಗಳ ಕಾಲಿನಿಂದ ತಯಾರಾಗುವ 'ಸೂಪು' ಶಕ್ತಿವರ್ಧಕ ಟಾನಿಕ್ ಸಾಸಲು ಮೀನನ್ನು ಎತ್ತಿನ ಬಾಯಲ್ಲಿ ಇಡಿಯಾಗಿ ನುಂಗಿಸಿ ಹೊಟ್ಟೆಯಲ್ಲಿನ ಹುಳುಗಳನ್ನು ತೆಗೆಯುತ್ತಾರೆ. ಕಪ್ಪೆಯನ್ನು ತುಂಡು ಮಾಡಿ ಅಥವಾ ಇಡಿಯಾಗಿ ಜಗಿಸಿ ನುಂಗಿಸುವುದು. ಪಶುವೈದ್ಯ ಉಡದ ಕೊಬ್ಬು ತುಪ್ಪವಾಗಿ ಪೆರಾಲಿಸಿಸ್‌ಗೆ ಬಳಕೆಯಾಗುತ್ತದೆ. ಅಸ್ತಮ ರೋಗಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ಕೈ ತುಂಬುವಷ್ಟು ಜೇಡನ ಬಲೆಯನ್ನು ಚೆಂಡಿನಂತೆ ಮಾಡಿ ನುಂಗಿಸುತ್ತಿದ್ದರು. ೧೮೮೨ರಲ್ಲಿ 'ಅರಾಕ್ನಿಜ್' ಎಂಬ ಪದಾರ್ಥ ಈ ಜೇಡನ ಬಲೆಯಲ್ಲಿದ್ದುದನ್ನು ವೈಜ್ಞಾನಿಕವಾಗಿ ಕಂಡುಕೊಂಡಿದ್ದರಿಂದ ಈಗ ಅಸ್ತಮಕ್ಕೆ ಇದೇ ಔಷಧಿ. ಮಕ್ಕಳಿಗೆ ಶಕ್ತಿಬರಲು ಹುತ್ತದ ಹುಳುಗಳನ್ನು ತುಪ್ಪದಲ್ಲಿ ಹುರಿದು ಕೊಡುತ್ತಾರೆ ಮತ್ತು ಈಚಲು ಹುಳಗಳನ್ನು ಬಾಳೆ ಹಣ್ಣಿನಲ್ಲಿಟ್ಟು ನುಂಗಿಸುತ್ತಾರೆ. ಸಕ್ಕರೆ ರೋಗಕ್ಕೆ ಪಾರಿವಾಳದ ರಕ್ತ ಅಥವಾ ಮಾಂಸ ಈಗಲೂ ಕೊಡುತ್ತಾರೆ. ಹಾವು ಕಡಿದ ವಿಷ ತೆಗೆಯಲು ಕೋಳಿಯ ಗುದದ್ವಾರವನ್ನು ಕಡಿದ ಭಾಗಕ್ಕೆ ಒತ್ತಿ ಹಿಡಿದು ವಿಷ ಹೀರುವವರೆಗೂ ಒಂದರ ನಂತರ ಒಂದು ಕೋಳಿಯನ್ನು ಹಿಡಿದು ತೆಗೆಯುತ್ತಾರೆ.

[illegible]

[illegible]

[illegible]

[illegible]

೩. ಸಸ್ಯ ಮೂಲ ಔಷಧಿ : ಜನಪದ ವೈದ್ಯಕ್ಕೆ ಸಸ್ಯವೇ ಮೂಲ. ಶ್ರೀಗಂಧ, ತುಳಸಿ, ತುಂಬೆ, ಅಂಕೋಲೆ, ಅಮೃತ ಬಳ್ಳಿ, ಅಶ್ವಗಂಧ, ಅಳಲೆಕಾಯಿ, ಆಡುಮುಟ್ಟದ ಬಳ್ಳಿ, ಉತ್ತರಾಣಿ, ಕಾಮಕಸ್ತೂರಿ, ಗೋರಂಟಿ, ಎಕ್ಕೆ, ಕೇದಿಗೆ, ಕೋಳಿ ಜುಟ್ಟಿನ ಗಿಡ ಮುಂತಾದ ಸಸ್ಯಗಳು, ಔಷಧಿ ಸಸ್ಯಗಳಾಗಿ ಗುರುತಿಸಲ್ಪಟ್ಟಿವೆ. ಅಂಕೋಲೆ ಸೊಪ್ಪು ಕೈ ಮಸುಕಿನ ಪರಿಹಾರಕ್ಕೆ, ಅಫೀಮಿನ ವಿಷದ ನಿವಾರಣೆಗೆ, ಕ್ಷಯದ ನಿವಾರಣೆಗೆ ಗೂರಲಿನ ನಿವಾರಣೆಗೆ, ಸರ್ಪಕಚ್ಚಿದಲ್ಲಿ ಇದರ ಸೊಪ್ಪನ್ನು ನಿಂಬೆ ಹಣ್ಣಿನಲ್ಲಿ ತೇಯ್ದು ಗಂಧವನ್ನು ನೆಕ್ಕಿಸುವುದು ಮತ್ತು ಸರ್ಪಕಚ್ಚಿರುವ ಜಾಗದಲ್ಲಿ ಸಹ ಲೇಪಿಸುವುದು. ಅಮೃತ ಬಳ್ಳಿಯು ಜ್ಞಾಪಕ ಶಕ್ತಿ ಹೆಚ್ಚಿಸಲು ಬಳಕೆಯಾಗುತ್ತದೆ ಮತ್ತು ಮೂತ್ರನಾಳದಲ್ಲಿ ಕಲ್ಲಿ ಮಾತ್ರ ಕೃಚ್ಚಿ ನಿವಾರಣೆಗೆ, ಬುದ್ದಿಭ್ರಮಣೆ ನಿವಾರಣೆಗೆ ಈಗಲೂ ಉಪಯೋಗಿಸುತ್ತಾರೆ.

ಅಶ್ವಗಂಧವನ್ನು ಹಿರೆಮದ್ದಿನ ಗಿಡವೆಂತಲೂ ಕರೆಯುತ್ತಾರೆ. ಲೈಂಗಿಕ ಸಮಸ್ಯೆಗಳಿಗೆ ಸ್ತ್ರೀಯರ ಮುಟ್ಟಿನ ದೋಷಗಳ ನಿವಾರಣೆಗೆ ಗರ್ಭಧಾರಣೆಗೆ ಬೆನ್ನುನೋವಿನ ನಿವಾರಣೆಗೆ ಹೀಗೆ ಬಹು ಖಾಯಿಲೆಗೆ ಔಷಧಿಯಾಗಿ ಬಳಸುತ್ತಾರೆ. ಈ ಗಿಡವನ್ನು "ರಾಷ್ಟ್ರಿಯ ಸಸ್ಯ ಮಂಡಳಿ ಅಭಿವೃದ್ಧಿ" ನಿಗಮವು ಗುರುತಿಸಿದ್ದು ಇದರ ಸಂತತಿಯನ್ನು ರಕ್ಷಿಸಿ ಔಷಧಿಯಾಗಿ ಮಾರ್ಪಡಿಸುತ್ತಾರೆ. ಆಡುಮುಟ್ಟದ ಬಳ್ಳಿ ಹೊಟ್ಟೆ ನೋವಿಗೆ, ಅರೆತಲೆ ನೋವಿಗೆ ಪಿತ್ತ ಮತ್ತು ಕಫ ನಿವಾರಣೆಗೆ ಬಳಸುತ್ತಾರೆ. ಉತ್ತರಾಣಿ ಗಿಡವು ಪೊದೆಯಾಕಾರದಲ್ಲಿದ್ದು ಕಾಂಡವು ದಂಟುದಂಟಾಗಿರುವುದು. ಅರ್ಧದಿಂದ ಮುಕ್ಕಾಲು ಮೀಟರ್ ಎತ್ತರ ಬೆಳೆದು ಕವಲಾಗಿ ಒಡೆದಿರುತ್ತದೆ. ಎಲೆಗಳು ದುಂಡಾಗಿರುತ್ತವೆ. ಉದ್ದವಾದ ಜಡೆಯಂತೆ ಹೂ ಕಾಯಿ ಬಿಡುವುದು ಇವು ಒಣಗಿದ ಮೇಲೆ ಕೈ, ಮೈಗೆ, ಬಟ್ಟೆಗಳಿಗೆ ಅಂಟಿಕೊಳ್ಳುವವು. ಇದರಲ್ಲಿ ಕೆಂಪು ಮತ್ತು ಬಿಳಿ ಜಾತಿಗಳಿವೆ. ಬಿಳಿಯದು ಶ್ರೇಷ್ಠವಾದುದು. ಇದನ್ನು ತಾಯಂದರ ಎದೆ ಹಾಲು ಹೆಚ್ಚಿಸಲು, ಇಸಬಿನ ನಿವಾರಣೆಗೆ, ಬಂಜೆತನ ಹೋಗಲಾಡಿಸಲು, ಊದು ಮತ್ತು ಪಾಂಡು ರೋಗದ ನಿವಾರಣೆಗೆ ಬಳಸುತ್ತಾರೆ.

ಗೇರುಮರ ಬಾಬಬುಡನ್‌ಗಿರಿ ಸುತ್ತ ಮುತ್ತ ಮತ್ತು ಸಿದ್ದರ ಬೆಟ್ಟದಲ್ಲಿ ಬೆಳೆಯುತ್ತದೆ. ಈ ಕಾಯಿ ಮಾಗಿದ ಮೇಲೆ ಕಪ್ಪು ಬಣ್ಣ ಹೊಂದುವುವು. ಈ ಕಾಯಿಯಲ್ಲಿ ಅನಕಾರ್ತಿಕ್ ಆಮ್ಲ ಮತ್ತು ಕಾರ್ಡನಲ್, ಕೆಟಿಕಾಲ್ ಕೂಡ ಇರುತ್ತದೆ. ಇದನ್ನು ಚರ್ಮ ರೋಗಗಳಿಗೆ ಹೆಚ್ಚಾಗಿ ಬಳಸುತ್ತಾರೆ. ತೊನ್ನಿನ ನಿವಾರಣೆಗೆ, ದಮ್ಮುಕೆಮ್ಮು ನಿವಾರಣೆಗೆ ಮತ್ತು ಅಗಸರು ಬಟ್ಟೆಗಳ ಮೇಲೆ ವಿಶಿಷ್ಟ ಗುರುತು ಹಾಕಲು ಬಳಸುತ್ತಾರೆ. ಬೆಟ್ಟದ ನೆಲ್ಲಿ ಕಾಯಿ ಇದು ಮಿಟಮಿನ್ (ಸಿ) ಅನ್ನಸತ್ವದ ಭಂಡಾರವಾಗಿದೆ. ಇದನ್ನು ಮಧುಮೇಹದ ನಿವಾರಣೆಗೆ, ತಲೆಸುತ್ತು ಬೇಧಿಯ ತಡೆಗೆ, ಮೂತ್ರದಲ್ಲಿ ಉರಿ ಮತ್ತು ಮೂತ್ರದ ತಡೆಯನಿವಾರಣೆ ಮತ್ತು ಬಲವೃದ್ಧಿಗಾಗಿ ಬಳಸುತ್ತಾರೆ.

ಬೇವಿನ ಸೊಪ್ಪಿನಲ್ಲಿ ಕ್ರಿಮಿನಾಶಕ ಗುಣವಿದೆ. ಆದುದರಿಂದ ಹಲ್ಲುಜ್ಜಲು ಉಪಯುಕ್ತ. ಕಡ್ಡಿಯಲ್ಲಿ

ಹಲ್ಲುಜ್ಜುವುದರಿಂದ ಬಾಯಿಯ ದುರ್ಗಂಧ ಹೋಗುವುದು. ದಿನಾಲು ಬೆಳಿಗ್ಗೆ ಬೇವಿನ ಕುಡಿ ತಿನ್ನುವುದರಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿ ಖಾಯಿಲೆಗಳ ಸೋಂಕು ತಗಲದ ಹಾಗೆ ಪರಿಣಾಮಕಾರಿಯಾಗಿ ಕೆಲಸಮಾಡುತ್ತದೆ. ಹಿಂದೆ ಜ್ವರ ಬಂದಾಗ ಬೇವಿನ ಕಷಾಯಿಯವನ್ನು ಕೊಡುತ್ತಿದ್ದರು. ಇದನ್ನು ಕಾಮಲೆ ನಿವಾರಣೆಗೆ ಕುಷ್ಟರೋಗದ ನಿವಾರಣೆಗೆ, ಸಕ್ಕರೆ ಖಾಯಿಲೆಗೆ ಮುಂತಾದ ಖಾಯಿಲೆಗಳಿಗೆ ಔಷಧೀಯವಾಗಿ ಬಳಸುತ್ತಾರೆ. ಬಿಳಿಗಿರಿರಂಗನಬೆಟ್ಟದಲ್ಲಿ ಬೆಳೆಯುವ ಬೇವಿನಮರಗಳು ಹೆಚ್ಚು ಔಷಧೀಯ ಗುಣಗಳನ್ನು ಹೊಂದಿರುವುದರಿಂದ ಅಲ್ಲಿ ಯಥೇಚ್ಛವಾಗಿ ಸಸಿಗಳನ್ನು ನೆಟ್ಟು ಸರ್ಕಾರವೇ ಅದರ ಸಂಪೂರ್ಣ ಅಭಿವೃದ್ಧಿ ಕೈಗೆತ್ತಿಗೊಂಡಿದೆ. ಈ ಮರಕ್ಕೆ ಮತ್ತು ಸೊಪ್ಪಿಗೆ ಬಾರಿ ಬೇಡಿಕೆ ಇದೆಯಂತೆ. ಇದರಲ್ಲಿರುವ ವಿವಿಧ ರೀತಿಯ ರೋಗನಿರೋಧಕಗಳು ಇದಕ್ಕೆ ಬಹಳ ಬೇಡಿಕೆಯನ್ನು ಸೃಷ್ಟಿ ಮಾಡಿದೆ. ಇದು ಪೇಟೆಂಟ್ ರೀತಿಯಲ್ಲೂ ಅನ್ಯದೇಶಿಯರಿಗೆ ಮಾರಾಟ ಮಾಡಿದ್ದೇವೆ.

ಸರ್ಪಗಂಧ (Ravwolfia Serpentina) ಇದು ಅಂತರಾಷ್ಟ್ರೀಯ ಖ್ಯಾತಿ ಪಡೆದಿರುವ ವನಮೂಲಿಕೆ. ಇದು ದಟ್ಟವಾದ ಕಂಟಿಯುಳ್ಳ ಪೊದೆ ಸುಮಾರು ಒಂದು ಮೀಟರ್ ಉದ್ದ ಬೆಳೆಯುವುದು. ಎಲೆಗಳು ಕೆಂಪು ಮೆಣಸಿನ ಪತ್ರೆಗಳನ್ನು ಹೋಲುವವು. ಒಂದೊಂದು ತೊಟ್ಟಿನಲ್ಲಿ ಮೂರು ಮೂರು ಎಲೆಗಳಿರುವುವು. ಪ್ರತಿಯೊಂದು ಶಾಖೆಯಲ್ಲೂ ಗಾಢನೀಲಿ ಬಣ್ಣದ ಪುಷ್ಪಗುಚ್ಛ ಇರುವುದು. ಇದರ ಹೆಸರು ಕುತೂಹಲ ಕೆರಳಿಸುವಂತದು. ಹಾವು ಮುಂಗಸಿಯ ಉಳಿವು ಅಳಿವಿನ ಹೋರಾಟದಲ್ಲಿ ಮುಂಗಸಿಯ ಪಾತ್ರ ಮಹತ್ವದ್ದು. ಕೊನೆಗೆ ಮುಂಗಸಿ ಹಾವನ್ನು ತುಂಡರಿಸುತ್ತದೆ. ಆದರೂ ಹೋರಾಟದ ನಂತರ ಮುಂಗಸಿಯು ಕೆಲವು ಸಸ್ಯೌಷಧಿಗಳನ್ನು ಸೇವಿಸುತ್ತದೆ. ಅದೇ ಸರ್ಪಗಂಧ. ಅದರಿಂದಲೇ ಇದಕ್ಕೆ ಸರ್ಪಗಂಧ ಎಂಬ ಹೆಸರು ಬಂದಿದೆ. ಇದನ್ನು ಮನೋದೌರ್ಬಲ್ಯತೆಯಿರುವ ಯೌವಾನಾವಸ್ಥೆಯ ಹಾಗೂ ಅವಿವಾಹಿತ ಸ್ತ್ರೀಯರಲ್ಲಿ ಕಂಡು ಬರುವ ವ್ಯಾಧಿ. ಈ ಅವಸ್ಥೆಯಲ್ಲಿ ಮೂರ್ಛೆ ಬರಬಹುದು ಮತ್ತು ಆಗಾಗ ರೋಗಿ ಕಾರಣವಿಲ್ಲದೆ ಜೋರಾಗಿ ನಗಬಹುದು ಅಥವಾ ಅಳಬಹುದು, ಮಾತಾನಾಡಲು ಸಾಧ್ಯವಾಗದೇ ಇರಬಹುದು. ಇಂತಹ ಸಮಯದಲ್ಲಿ ಸರ್ಪಗಂಧ ಬೇರು ಮತ್ತು ದನಿಯವನ್ನು ಸೇರಿಸಿ ನುಣ್ಣಗೆ ಅರೆದು ನೀರಿನಲ್ಲಿ ಕದಡಿ ಕುಡಿಯಬೇಕು.

'ಕಲ್ಲೆಂಬುದೆಲ್ಲಾ ದೇವರು ಗಿಡ ಅಂಬೋದೆಲ್ಲ ವೈದ್ಯವೇ' ಎಂಬ ವೈದ್ಯನೊಬ್ಬನ ಮಾತಿನಂತೆ ಜನಪದರ ಆರೋಗ್ಯದಲ್ಲಿ ಪರಿಸರ ಶೇಕಡ ೮೦ ಭಾಗ ಆವರಿಸಿಕೊಂಡಿದೆ. ಈಗಲೂ ಸಸ್ಯಗಳನ್ನು ಪೂಜ್ಯನೀಯ ಭಾವನೆಯಿಂದಲೇ ಕಾಣುತ್ತಾರೆ. ಸಸ್ಯದ ಪ್ರತಿಯೊಂದು ಭಾಗವೂ ಮನುಷ್ಯನಿಗೆ ಉಪಯೋಗವಾಗುವುದರಿಂದ ಸಸ್ಯ ಪ್ರಪಂಚ ಜನಪದರಿಗೆ ಸಂಜೀವಿನಿ ಪರ್ವತವಿದ್ದಂತೆ.

೩. **ಮನುಷ್ಯ ಮೂಲ ಔಷಧಿ :** ಮಾನವ ಪ್ರಾಣಿಗಳಂತೆ ಸಸ್ಯಗಳಂತೆ ಇಡಿಯಾಗಿ ಉಪಯೋಗಕ್ಕೆ ಬರುವವನಲ್ಲ ಎಲ್ಲೊ ಒಮ್ಮೊಮ್ಮೆ ಉಪಯೋಗಕ್ಕೆ ಬರುತ್ತಾನೆ. ಜನಪದ ವೈದ್ಯದಲ್ಲಿ ಸ್ವಮೂತ್ರ ಚಿಕಿತ್ಸೆಯೊಂದು ಅತ್ಯುತ್ತಮ ವೈದ್ಯ . ಯಾವ ಖಾಯಿಲೆಗೂ ಸಿದ್ಧ ಹಸ್ತವಾದುದು. ಹಾವು ಕಚ್ಚಿದಾಗ ಮನುಷ್ಯನ ಪಾಯಿಖಾನೆಯನ್ನು ಕದಡಿ ಕುಡಿಯಲು ಕೊಡುತ್ತಾರೆ. ಅನೇಕ ಕಣ್ಣಿನ ರೋಗಗಳಿಗೆ ತಾಯಿಯ ಎದೆಹಾಲನ್ನು ಬಿಡುತ್ತಾರೆ. ಹೀಗೆ ಅನೇಕ ಚಿಕಿತ್ಸೆಗಳಿರಬಹುದು. ಇವೆಲ್ಲವೂ ಮನುಷ್ಯನ ಮೂಲದಿಂದ ಬರುವುದರಿಂದ ಇವುಗಳನ್ನು ಮನುಷ್ಯ ಮೂಲ ಔಷಧಿಯೆಂದು ಕರೆಯಬಹುದು.

೪. **ನಂಬಿಕೆಯ ಮೂಲ ಔಷಧಿ :** ಜನಪದ ವೈದ್ಯಕ್ಕೂ ನಂಬಿಕೆಗಳಿಗೂ ಅವಿನಾಭಾವ ಸಂಬಂಧ ಇದೆ. ಪಾಶ್ಚಾತ್ಯ ವಿದ್ವಾಂಸರಾದ ಬಾಗ್ಸ್, ವೇಲ್ಯಾಂಡ್.ಡಿ ಹಾಂಡ್ ಮುಂತಾದವರು ನಂಬಿಕೆಗಳನ್ನು ವರ್ಗೀಕರಿಸುವಾಗ ಜನಪದ ವೈದ್ಯವನ್ನು ಒಂದು ಅಂಗವಾಗಿ ಮಾಡಿಕೊಂಡಿದ್ದಾರೆ. ಕೆಲವುಬಾರಿ ವೈದ್ಯನ ಬಗೆಗಿರುವ ನಂಬಿಕೆಯಿಂದಾಗಿ ಬೇರಾರು ವಾಸಿಮಾಡದಿದ್ದ ಖಾಯಿಲೆ ಈತ ಮುಟ್ಟಿದರೆ ಸಾಕು ವಾಸಿಯಾಗುತ್ತವೆ. ಕಾಕತಾಳಿಯವೆಂಬಂತೆ ಇಂತಹ ಘಟನೆಗಳಿಂದ ಖಾಯಿಲೆಗಳು ವಾಸಿಯಾದರೂ ವ್ಯಕ್ತಿಯೊಬ್ಬನ ನಂಬಿಕೆ ಸಮಷ್ಟಿಗೆ ತಿಳಿದು ಅವನು ಕೊಟ್ಟ ನೀರೇ ಔಷಧಿಯಾಗಿ ಚಲಾವಣೆಗೆ ಬರುವುದುಂಟು. ಉದಾಹರಣೆಗೆ ಜರಿ ಕಡಿದಾಗ ಲಿಂಗಾಯಿತರ ಮನೆಯಲ್ಲಿ ನೀರು ಕುಡಿದರೆ ವಿಷ ಏರುವುದಿಲ್ಲ ಎಂಬ ನಂಬಿಕೆ ಇದೆ.

ಮೇಲಿನ ಎಲ್ಲಾ ವಿಷಯಗಳನ್ನು ಗಮನಿಸುವಾಗ ಜನಪದ ಬದುಕಿನಲ್ಲಿ ಪರಿಸರದ ಮಹತ್ವ ಅರ್ಥವಾಗುತ್ತದೆ. ಆದರೆ ಆಧುನಿಕತೆಯಲ್ಲಿ ಈ ವೈದ್ಯ ಪದ್ದತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವೇ? ಎಂಬ ವಿಚಾರ ಪ್ರಮುಖವಾದುದು. ಆದರೂ ಸಹ ಈ ನಾಟಿ ವೈದ್ಯದಿಂದ ಕೆಲವೊಂದು ಉಪಯುಕ್ತ ಮಾಹಿತಿಯನ್ನು ತೆಗೆದುಕೊಂಡು ಆಧುನಿಕತೆಯಲ್ಲಿ ಅದರ ತಳಕು ಹಾಕುವುದರಿಂದ ಅದರ ಅಳಿವು ಉಳಿವು ನಿರ್ಧಾರವಾಗುತ್ತದೆ. ನಾಟಿ ವೈದ್ಯದಲ್ಲಿ ಕುಷ್ಠರೋಗಕ್ಕಾಗಿ ಬಳಸುತ್ತಿದ್ದ ಗರುಡ ಫಲದಿಂದ ೧೮೫೪ರಲ್ಲಿ "ಈಸ್ಟರ್ ಆಫೈಲ" ವನ್ನು ವಿಶ್ಲೇಷಿಸಿದ್ದರಿಂದ ಕುಷ್ಠರೋಗ ನಿವಾರಣೆಗೆ ಈಗಿರುವುದು ಇದೊಂದೇ ಔಷಧ. ಅದರಂತೆ ಕ್ವಿನೈನ್, ಸರ್ಪಗಂಧಿ ಬೇರನ್ನು ೧೯೪೯ರಲ್ಲಿ ವಕೀಲ ಎಂಬ ವಿಜ್ಞಾನಿ ಇದರಲ್ಲಿರುವ "ರಿಸಮಾನ್" ದ್ರವ್ಯವೇ ರಕ್ತದ ಅಧಿಕ ಒತ್ತಡಕ್ಕೆ ಉಪಶಮನಕಾರಿ ಎಂಬ ಅಂಶ ಪತ್ತೆ ಹಚ್ಚಿದನು. ಅಲೋಪತಿಯಲ್ಲಿ ಈಗ ರಕ್ತ ಒತ್ತಡಕ್ಕೆ ಔಷಧಿಯಾಗಿ ಬಳಸಲಾಗುತ್ತಿದೆ. ಜಾಗತೀಕರಣ ಫಲವಾಗಿ ಅನೇಕ ತಲೆಮಾರುಗಳಿಂದ ಬಂದ ಪದ್ಧತಿಗಳೆಲ್ಲ ಬದಲಾವಣೆಗೆ ಒಳಪಡುತ್ತಿವೆ. ಅದರಲ್ಲಿ ಸಸ್ಯಸಂಪತ್ತು ಬಹಳ ಮುಖ್ಯವಾದುದು. ಬೇವು, ಅರಿಶಿನ, ಅರಕೋಲ, ಸರ್ಪಗಂಧಿ, ಬೇವು ಮುಂತಾದ ಮರಗಿಡಗಳಲ್ಲಿರುವ ಔಷಧೀಯ ಗುಣಗಳು ವೈಜ್ಞಾನಿಕ ಪರೀಕ್ಷೆಗೆ ಗುರಿಯಾಗಿವೆ. ಇವುಗಳಲ್ಲಿರುವ ಮೆಡಿಸನ್‌ಯುಕ್ತವಾದ ಅಂಶವನ್ನು ನೋಡಿ ಮುಂದುವರೆದ ರಾಷ್ಟ್ರಗಳು ಭಾರತದಂತಹ ಸಂಪತ್ತು ಭರಿತ ರಾಷ್ಟ್ರಗಳಿಗೆ ವಿಶ್ವಮಾರುಕಟ್ಟೆ ನೆಪದಲ್ಲಿ ಲಗ್ಗೆಯಿಡುತ್ತವೆ. ಕೇವಲ

ಯಾವುದೋ ಹಳ್ಳಿಯ ಮೂಲೆಯೊಂದರಲ್ಲಿ ಸಮಸ್ತ ಖಾಯಿಲೆಗಳಿಗೆ ಬಳಕೆಯಾಗುತ್ತಿದ್ದ ಬೇವಿನ ಮರ ಇಂದು ಅಮೇರಿಕಾದಂಥ ಶಕ್ತಿಯುತ ರಾಷ್ಟ್ರಗಳು ಕೊಳ್ಳಲು ಮುಂದೆ ಬಂದಿದೆಯೆಂದರೆ ಅದರಲ್ಲಿರುವ ವಿಶೇಷತೆಯಾದರೂ ಏನು? ಇದನ್ನು ಇಂಡಿಯಾದಂತಹ ಸರ್ಕಾರಗಳು ಗಮನಕ್ಕೆ ತೆಗೆದುಕೊಂಡು ಇಂತಹ ಔಷಧೀಯ ಸಸ್ಯಗಳು ಒಳಮರ್ಮವನ್ನು ಕಂಡು ಹಿಡಿಯಲು 'ರಾಷ್ಟ್ರೀಯ ಸಸ್ಯ ಮಂಡಳಿ'ಯನ್ನು ನೇಮಿಸಿಕೊಂಡು ಅವುಗಳ ಸಂಶೋಧನೆಗೆ ತೊಡಗಿರುವುದು ಸ್ತುತ್ಯರ್ಹ. ಇಂತಹ ಜನಪದ ಜ್ಞಾನವನ್ನು ಜಾಗತೀಕರಣಕ್ಕೆ ಅಣಿಗೊಳಿಸುವುದು ನಮ್ಮ ವಿದ್ವಾಂಸರ ಬುದ್ಧಿವಂತಿಕೆಯಲ್ಲಿದೆ. ಈ ವಿಷಯವನ್ನು ಗಂಭೀರವಾದ ಅಧ್ಯಯನ ನೆಲೆಯಲ್ಲಿ ನೋಡುವುದು ಹೆಚ್ಚು ಪ್ರಸ್ತುತವೆನಿಸುತ್ತದೆ.

೭. ೫. ಧಾರ್ಮಿಕ ಜೀವನದಲ್ಲಿ ಪರಿಸರದ ಮಹತ್ವ

ಮನುಷ್ಯ ಸಂಸ್ಕೃತಿಯ ಒಂದು ಭಾಗವಾಗಿರುವ ಧಾರ್ಮಿಕತೆ, ಅವನ ಇಡೀ ಜೀವನವನ್ನೇ ಆಕ್ರಮಿಸಿಕೊಂಡಿದೆ. ಇಂಡಿಯದಂಥ ಸಂದರ್ಭಗಳಲ್ಲಿ ಹುಟ್ಟು ಬೆಳವಣಿಗೆ, ಸಾವು ಎಲ್ಲದಕ್ಕೂ ದೈವವೇ ಮೂಲಧಾತುವಾಗಿದೆ. ದೇವರು ಮತ್ತು ಧಾರ್ಮಿಕತೆ ಇವೆರಡನ್ನೇ ಈ ಸಂದರ್ಭದಲ್ಲಿ ನಿರ್ವಚಿಸುವ ಅಗತ್ಯವಿದೆ. ದೇವರು ಎನ್ನುವುದು ವ್ಯಕ್ತಿಯ ವೈಯಕ್ತಿಕ ನಂಬಿಕೆಗೆ ಸಂಬಂಧಿಸಿದ್ದು ಧಾರ್ಮಿಕತೆಯು ಸಮಾಜದ ಜೀವನಕ್ಕೆ ಸಂಬಂಧಪಟ್ಟಿದ್ದು. ಆದ್ದರಿಂದಲೇ ಪೂರ್ವಿಕರು, ಆದಿವಾಸಿಗಳು, ದೇವರ ಅಂಶವನ್ನು ಪ್ರಕೃತಿ ಇಲ್ಲವೇ ಪ್ರಾಣಿಗಳಲ್ಲಿ ಗುರುತಿಸಿಕೊಂಡರು. ಆದರೆ ಮಧ್ಯಕಾಲೀನ ಯುಗದಲ್ಲಿ ಆರ್ಯರ ಆಗಮನದ ನಂತರ ದೇವರು ಎಂಬ ಕಲ್ಪನೆಗೆ ಮನುಷ್ಯ ರೂಪ ಬರತೊಡಗಿತು.

ಮನುಷ್ಯನ ಹುಟ್ಟು ಪ್ರಕೃತಿಯಲ್ಲಾದ್ದರಿಂದ ತನ್ನ ಸುತ್ತಮುತ್ತಲಿನ ಪರಿಸರವೇ ದೈವ ಸಂಭೂತವಾಗಿ ಕಂಡಿದೆ. ಆದ್ದರಿಂದಲೇ ಸಾಮಾನ್ಯ ಅನಾಗರೀಕರಿಂದ ರಾಜಮಹಾರಾಜರವರೆಗಿನ ಎಲ್ಲಾ ಜನಾಂಗವು ಪ್ರಕೃತಿಯನ್ನೆ ಮೂಲ ದೈವವನ್ನಾಗಿ ಸ್ವೀಕರಿಸಿದ್ದರು. ಒಂದೊಂದು ವೃಕ್ಷಗಳು ಕುಲದೇವತೆಗಳಾಗಿ ಮಾರ್ಪಟ್ಟವು ಇಂದು ಸಹ ಒಂದೊಂದು ಜಾತಿ, ಒಳಪಂಗಡ (ಕುಲ)ಗಳಲ್ಲಿಯೂ ಕೆಲವೊಂದು ಮರಗಳನ್ನು ಬಳಸುವುದರಲ್ಲಿ ನಿಷೇಧವಿದೆ. ಕೆಲವು ಜಾತಿಗಳು ಬೇವು ಮತ್ತು ಎಕ್ಕ ಸೌದೆಗಳನ್ನು ಉರುವಲುವಿಗೆ ಬಳಸುವುದಿಲ್ಲ. ಇದರಲ್ಲಿ ಅವರ ಮನೆದೇವರು ವಾಸಿಸಿರುತ್ತಾನೆ ಎಂಬ ಸಕಾರಣವನ್ನು ಕೊಡುತ್ತಾರೆ. ಇಂದು ಸಹ ದೇವಸ್ಥಾನ ಬಳಿಯಲ್ಲಿ ಇರುವ ಯಾವುದೇ ಮರದ ಸೌದೆಗಾಗಿ ಉರಿವಿಗೆ ಬಳಸುವುದಿಲ್ಲ. ಹಿಂದುಗಳು ಆಲದ ಮರವನ್ನು ಕಡಿಯುವುದಿಲ್ಲ. ಲಿಂಗಾಯಿತರು ಸಾಮಾನ್ಯವಾಗಿ ಬಿಲ್ವಪತ್ರೆಯ ಸೌದೆಯನ್ನು ಬಳಸುವುದಿಲ್ಲ. ಕಾರಣ ಅದರಲ್ಲಿ ಶಿವನು ವಾಸಿವಾಗಿರುತ್ತಾನೆ ಎಂದು ನಂಬುತ್ತಾರೆ. "ಭರತ ಖಂಡದಲ್ಲಿ ಪವಿತ್ರವೆಂದೂ ಪರಿಗಣನೆಗೊಂಡಿರುವ ವೃಕ್ಷಗಳು ಹತ್ತಾರಿವೆ. ವೇದ, ಪುರಾಣ, ಇತಿಹಾಸ, ಕಾವ್ಯಗಳಲ್ಲಿ ಪವಿತ್ರವೃಕ್ಷಗಳ ಉಲ್ಲೇಖ ಅನೇಕ ಕಡೆ ಬರುತ್ತದೆ. ಬಹು ಪೂಜೆಗೆ ಪಾತ್ರವಾಗಿರುವ ವೃಕ್ಷವೆಂದರೆ ಬುದ್ಧಗಯೆಯಲ್ಲಿರುವ ಬೋಧಿ ವೃಕ್ಷ. ಬುದ್ಧನ

ಅನುಯಾಯಿಗಳಿಂದ ಪೂಜೆ ಪುರಸ್ಕಾರ ನಡೆಯುತ್ತಿರುವುದು ಚಾರಿತ್ರಿಕ ಸಂಗತಿಯಾಗಿದೆ. ಅರಳಿಯಂತೆಯೇ ಪವಿತ್ರವಾದ ವೃಕ್ಷ 'ವಟ' ಅದು ಅಮರವಾದ ಮರ. ಶ್ರೀಕೃಷ್ಣ ವರ್ಣಪತ್ರ ಶಾಯಿಯಂತೆ ಜಲ ಪ್ರಳಯ ಸಮಯದಲ್ಲಿ ಇಡೀ ಭೂಮಂಡಲವೇ ಮುಳುಗಿಹೋದಾಗ ಅದು ಮಾತ್ರ ಭದ್ರವಾಗಿ ನಿಂತಿತಂತೆ. ಶಿಶು ರೂಪಿಯಾದ ಕೃಷ್ಣ ಅದರ ಮೇಲೆ ನಿರಾಂತಕವಾಗಿ ಪವಡಿಸಿದನಂತೆ. ಅದರಿಂದ ವಟ ವೃಕ್ಷವು ಕೃಷ್ಣನಂತೆ ಪೂಜೆಗೆ ಅರ್ಹವಾದುದು. ಶಿವಭಕ್ತಯರಿಗೆ ಬಿಲ್ವ ಪತ್ರೆ ಬಹುಪ್ರಿಯ. ಶಿವದೇವಾಲಯವಿದ್ದ ಕಡೆ ಈ ಮರ ಇರಲೇಬೇಕು. ತುಲಸಿ ಎಲೆಯಿರುವ ಗಂಗಾಜಲವನ್ನು ಸಾಯುವವನ ಬಾಯಿಗೆ ಹಾಕಿದರೆ ಅವನಿಗೆ ಮೋಕ್ಷ ಸಿಗುತ್ತದಂತೆ ಹರಿಪ್ರಿಯ ಭೂತಾಪಿ ಎಂಬ ಹೆಸರುಗಳು ಅದಕ್ಕಿವೆ. ಅದಿರುವ ಕಡೆ ಭೂತ ಪ್ರೇತಾದಿ ದುಷ್ಟ ಶಕ್ತಿಗಳು ಸುಳಿಯುವುದಿಲ್ಲ."[೨೨]

"ಅಹಮದ್ ನಗರದಲ್ಲಿ ಹಾವುಕಚ್ಚಿದ ಮನುಷ್ಯನನ್ನು ಭೈರವ ದೇವಾಲಯಕ್ಕೆ ಕರೆದುಕೊಂಡು ಹೋಗಿ ಬೇವಿನೆಲೆ ಮತ್ತು ಮೆಣಸುಗಳನ್ನು ತಿನ್ನಿಸುತ್ತಾರೆ. ಜ್ಯೋತಿಷ್ಯಶಾಸ್ತ್ರದಲ್ಲಿಯೂ ವೃಕ್ಷಗಳು ಬಳಕೆಯಾಗುವುದುಂಟು ಮಾಟ, ಮಂತ್ರ ಮತ್ತು ವಶೀಕರಣಕ್ಕೆ ಕೆಲವು ಬೀಜಗಳನ್ನು ಬಳಸುತ್ತಾರೆ. ಈಗಲೂ ಹಳ್ಳಿಯ ಕಡೆ ದೃಷ್ಟಿ ತೆಗೆಯಲೆಂದು ಪೊರಕೆಯಿಂದ ಇಲ್ಲವೆ ಸೆರಗಿನಿಂದ ಮೂರು ಬಾರಿ ಮುಖದ ಮೇಲೆ ನಿವಾಳಿಸುತ್ತಾರೆ. ಇದರಿಂದ ವ್ಯಕ್ತಿಯ ಮೇಲೆ ಬಿದ್ದಿರುವ ಕೆಟ್ಟ ಕಣ್ಣಿನ ದೃಷ್ಟಿಯೆಲ್ಲಾ ನಿವಾರಣೆಯಾಗಲೆಂಬ ನಂಬಿಕೆ. ಇದಕ್ಕೆ ಅಂಚಿ ಕಡ್ಡಿಯನ್ನು ಸುಟ್ಟು ಅದರ 'ಕಪ್ಪ'ನ್ನು ಹಣೆಯ ಮೇಲೆ ಇಡುತ್ತಾರೆ. ಪ್ರಧಾನವಾಗಿ ಹಿಂಗಾರವು ಬಳಕೆಯಾಗುವ ಧಾರ್ಮಿಕ ಆರಾಧನಾ ಸಂಪ್ರದಾಯಗಳಲ್ಲಿ ಮುಖ್ಯವಾಗಿ ಸಿರಿ ಹಾಗೂ ನಾಗಾರಾಧನೆಗಳಲ್ಲಿ ದೈವೀಶಕ್ತಿಯನ್ನು ವರ್ಗಾವಣೆಗೊಳಿಸುವ ಶಕ್ತಿ ಮಾಧ್ಯಮವಾಗಿ ಹಿಂಗಾರ ಬಳಕೆಯಾಗುತ್ತದೆ. ಸಿರಿ ಆರಾಧನೆಯಲ್ಲಿ ಸಿರಿಯ ಆವೇಶವು ಕುಮಾರನಿಂದ ಸಿರಿಗೆ ಹಿಂಗಾರದ ಮೂಲಕ ವರ್ಗಾವಣೆಗೊಳ್ಳುತ್ತವೆ. ಹಾಗೆಯೇ ನಾಗಾರಾಧನೆಯಲ್ಲಿ ಅರ್ಧನಾರೀಶ್ವರ ಪಾತ್ರಧಾರಿಯಿಂದ ನಾಗನ ಆದೇಶ ನಾಗಪತ್ರಿಗೆ ಹಿಂಗಾರದ ಮೂಲಕ ವರ್ಗಾವಣೆಗೊಳ್ಳುತ್ತದೆ. ಹಿಂಗಾರದಲ್ಲಿ ಸಿರಿಹುಟ್ಟಿರುವ ಪೌರಾಣಿಕ ಕಲ್ಪನೆಯಿಂದಾಗಿ ಹಿಂಗಾರದ ಮೂಲಕವೇ ಸಿರಿಯ ಆದೇಶ ವರ್ಗಾವಣೆಯಾದರೆ ಲೈಂಗಿಕತೆ ಮತ್ತು ಫಲವಂತಿಕೆ ಸಂಕೇತವಾಗಿರುವ ಹಿಂಗಾರ ಮತ್ತು ನಾಗ ಸಮಾನಂತರ ಶಕ್ತಿಗಳಾಗಿ ಹಿಂಗಾರದ ಮೂಲಕ ನಾಗನ ಆದೇಶ ವರ್ಗಾವಣೆಯಾಗುತ್ತದೆ."[೨೩]

ಹಿಂಗಾರ, ಅಶ್ವತ್ಥ, ಅರಳಿ, ಬಿಲ್ವಪತ್ರೆ, ತೆಂಗು, ಅಡಿಕೆ, ಕಾಕರಸನಮರ, ಹುಣಸೆ, ತಾಳೆ, ಬಿದಿರು, ಅರಿಶಿಸಿನ ಇವೆಲ್ಲಾ ನಮ್ಮ ಸಂಸ್ಕೃತಿಗಳಲ್ಲಿ ಪೂಜೆಗೆ ಅರ್ಹವಾದವುಗಳೇ. ಹಾಗೆಯೇ ಬೌದ್ಧ ಜೈನ, ಸಿಖ್, ಇಸ್ಲಾಂ, ಧರ್ಮಗಳಲ್ಲಿಯೂ ಮನುಷ್ಯ ಪ್ರಕೃತಿಯ ಪರಿಸರವನ್ನು ಗೌರವದಿಂದ ಕಾಣಲೇಬೇಕೆಂದು ಹೇಳುತ್ತವೆ. ಹೀಗೆ ಭಿನ್ನ ಭಿನ್ನ ಧರ್ಮಗಳಲ್ಲಿ ಜನಾಂಗ ಸಂಸ್ಕೃತಿಗಳಲ್ಲಿ ವೃಕ್ಷ ಮತ್ತು ಸಸ್ಯಗಳು ಪೂಜೆಗೆ ಒಳಪಡುತ್ತವೆ. ಈಗಲೂ ನಗರಗಳಲ್ಲಿ ಮನೆ ಮುಂದೆ ತುಳಸಿ ಇರುತ್ತದೆ.

ದಿನಾಲು ಬೆಳಿಗ್ಗೆ ಹೆಣ್ಣು ಮಕ್ಕಳು ಪೂಜೆ ಮಾಡುತ್ತಾರೆ. ಹಾಗೆ ಮನೆಯ ಮುಂದೆ ವಿವಿಧ ರೀತಿಯ ಸಸ್ಯಗಳನ್ನು ಶೋಗಿಡಗಳನ್ನಾಗಿ ಬೆಳೆಸುತ್ತಾರೆ. ಇವುಗಳನ್ನು ಬಾಗಿಲಲ್ಲಿ, ಮನೆಯ ಮುಂಬಾಗಲಲ್ಲಿ ಇಡುತ್ತಾರೆ. ತುಳಸಿ ಕಟ್ಟೆಯನ್ನು ಪೂಜೆ ಮಾಡಿದರೆ ಒಳ್ಳೆಯದಾಗುತ್ತೆ ಎಂದು ವಿದ್ಯಾವಂತರು ನಂಬುತ್ತಾರೆ.

ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಮಾಡುವಾಗ ಹನ್ನೆರಡು ಬಗೆಯ ವೃಕ್ಷಗಳ ಕಟ್ಟಿಗೆಯನ್ನು ಅಗ್ನಿಗೆ ಆಹುತಿಕೊಡುತ್ತಾರೆ. ಹಳ್ಳಿಯಲ್ಲಿ ದೇವಸ್ಥಾನದ ಸುತ್ತ ಮುತ್ತ ಯಾವುದಾದರೂ ಮರವಿದ್ದರೆ ಇಲ್ಲವೇ ಹುತ್ತವಿದ್ದರೆ ಪೂಜೆಗೆ ಅರ್ಹವಾಗಿರುತ್ತದೆ. ನಗರ ಪಟ್ಟಣಗಳ ಬಡಾವಣೆಗಳಲ್ಲಿ ಇರುವಂಥ ನಾಗರ ಕಲ್ಲುಗಳೋ ಇಲ್ಲವೇ ಬನ್ನಿಮರ, ಹುತ್ತವೊ, ಬೇವು, ಆಲ, ಅಶ್ವತ್ಥ ಯಾವುದಾದರೂ ಸರಿಯೋ ಮುತ್ತೈದೆಯರು ಮದುವೆಯಾಗದ ಕನ್ಯೆಯರು ಮುಂಜಾನೆಯಲ್ಲಿ ಪೂಜೆ ಮಾಡುತ್ತಾರೆ. ಇದನ್ನು ವ್ರತವೆಂದು ೯ ದಿನವೊ ೧೬ ದಿನವೊ ಇಲ್ಲವೇ ಮೂರು ತಿಂಗಳು ಒಟ್ಟಿನಲ್ಲಿ ಬಿಡದೆ ಪೂಜೆ ಮಾಡಿದರೆ. ಅವರ ಕೋರಿಕೆ ಈಡೇರುತ್ತದೆ ಎಂದು ಬಲವಾಗಿ ವಿದ್ಯಾವಂತ ಸ್ತ್ರೀಯರೂ ನಂಬುತ್ತಾರೆ. ಶಿವಾಜಿನಗರದಲ್ಲಿರುವ 'ದಂಡಿನಮಾರಮ್ಮ' ದೇವಸ್ಥಾನದ ಬಳಿ ಇರುವ ಬೇವಿನ ಮರಕ್ಕೆ ಸಾಲುಗಟ್ಟಿನಿಂತು ಪೂಜೆಯನ್ನು ಮಾಡಿಸಿಕೊಂಡು ಹೋಗುತ್ತಾರೆ.

ಒಟ್ಟಿನಲ್ಲಿ ಸಸ್ಯಗಳು ಆಧುನಿಕರಣದಲ್ಲಿಯೂ ಅವುಗಳ ಭೌತಿಕ ಲಕ್ಷಣಗಳನ್ನು ಅರಿತು ಧಾರ್ಮಿಕ ಸಂಪ್ರದಾಯ ಆಚರಣೆಗಳಿಗೆ ಬಳಸುವುದುಂಟು. ಇಂತಹ ಸ್ಥಿತಿ ಒಂದು ಹಳ್ಳಿ, ನಗರ, ವಿದ್ಯಾವಂತ ಅವಿದ್ಯಾವಂತ ನಾಗರಿಕ ಅನಾಗರಿಕ ಈ ರೀತಿ ಭೇದಭಾವವಿಲ್ಲದೆ ಎಲ್ಲೂ ಸರ್ವಸಾಮಾನ್ಯವಾಗಿದೆ.

<u>ಕೊನೆ ಟಿಪ್ಪಣಿ</u>

೧. ನಲ್ಲೂರು ಪ್ರಸಾದ್, ಜಾನಪದ ಭಾರತಿ, ೪೧.
೨. .... ಅದೇ................ ೪೮.
೩. ದೇ.ಜ.ಗೌ, ಜಾನಪದ ಅಧ್ಯಯನ, ೪೦೨.
೪. ಡಾ. ಶಿವರಾಮಶೆಟ್ಟಿ, ಸಸ್ಯ ಜಾನಪದ, ೫.
೫. ಅದೇ...... ೫.
೬. ಜಿ. ಆರ್. ತಿಪ್ಪೇಸ್ವಾಮಿ, ಜಾನಪದ ಪರಿಭಾವನೆ, ೧೯.
೭. ದೇ.ಜ.ಗೌ, ಜಾನಪದ ಅಧ್ಯಯನ, ೪೨೦.
೮. ಅದೇ.......... ೪೨೧.
೯. ಸಂ. ಬಸವರಾಜ ನೆಲ್ಲಿಸರ, ಜಾನಪದ ೧೯೯೯, ೩.
೧೦. ಅದೇ........... ೬.
೧೧. ಡಾ. ಬಿ. ಶಿವರಾಮ ಶೆಟ್ಟಿ, ಸಸ್ಯ ಜಾನಪದ, ೧೯.
೧೨. ದೇ.ಜ.ಗೌ, ಜಾನಪದ ಅಧ್ಯಯನ, ೪೦೬.
೧೩. ಜಿ. ಆರ್. ತಿಪ್ಪೇಸ್ವಾಮಿ, ಜಾನಪದ ಪರಿಭಾವನೆ, ೧೦.

[illegible]

[illegible]

[illegible]

[illegible]

೧೪. ದೇ.ಜ.ಗೌ, ಜಾನಪದ ಅಧ್ಯಯನ, ೪೦೯.

೧೫. ತೀ.ನಂ.ಶಂಕರನಾರಾಯಣ, ಜಾನಪದ ಸಮೀಕ್ಷೆ ವಿಶ್ಲೇಷಣೆ, ೨೦೦.

೧೬. ಡಾ. ಬಿ. ಶಿವರಾಮಶೆಟ್ಟಿ, ಸಸ್ಯ ಜಾನಪದ, ೨೮.

೧೭. ನಲ್ಲೂರ ಪ್ರಸಾದ್, ಜಾನಪದ ಭಾರತಿ, ೪೩.

೧೮. ಪುರುಶೋತ್ತಮ ಬಿಳಿಮಲೆ, ೧೯೯೦, ೪೬.

೧೯. ಲಕ್ಷಣ ತೆಲಗಾವಿ, ಸಂಶೋಧನಾ, ೩೩೮.

೨೦. ಡಾ. ಬಿ. ಎಸ್. ಸ್ವಾಮಿ, ಜಾನಪದ ಸೌರಭ, ೩೬೮.

೨೧. ಸಂ. ಎಚ್. ಜೆ. ಲಕ್ಕಪ್ಪಗೌಡ, ಮಲೆನಾಡ ಜಾನಪದ.

೨೨. ದೇ. ಜವರೇಗೌಡ, ಜಾನಪದ ಅಧ್ಯಯನ, ೪೧೩.

೨೩. ಡಾ. ಶಿವರಾಮಶೆಟ್ಟಿ, ಸಸ್ಯ ಜಾನಪದ, ೩೧.

ಅಧ್ಯಾಯ - ೮

ಸಮಾರೋಪ

ಸಮಾರೋಪ

ಜಾಗತಿಕ ಬದಲಾವಣೆಗೆ ಶ್ರಮ ಸಮುದಾಯಗಳು ತೆರೆದುಕೊಳ್ಳುವಾಗ ಜಾನಪದದ ಚಿಂತನೆಗಳು ತನ್ನ ಮಡಿವಂತಿಕೆಯಿಂದ ಮುಕ್ತವಾಗಿ ಅಭಿವ್ಯಕ್ತಿಸುವ ಅವಕಾಶ ಪಡೆದುಕೊಂಡವು. ವಿದ್ವಾಂಸರ ಆಲೋಚನಾ ಕ್ರಮಗಳಲ್ಲಿ ಆದ ಬದಲಾವಣೆ ಜಾನಪದದಲ್ಲಿ ಬಹು ವ್ಯಾಪಕತೆಯನ್ನು ಸೃಷ್ಟಿಸಿತು. ಈ ಬಗೆಯ ಬದಲಾವಣೆಗೆ ಕಾರಣಗಳು ಬಹಳವಿದ್ದರೂ ಪರಿವರ್ತನೆಯನ್ನು ಒಟ್ಟೊಪ್ಪುವ ಸೈದ್ಧಾಂತಿಕ ನಿಲುವು ಹೆಚ್ಚು ಪ್ರಸ್ತುತವಾಗಿದೆ. ನಿಬಂಧದ ಮೊದಲ ಅಧ್ಯಾಯದಲ್ಲಿ ಸ್ಪಷ್ಟಪಡಿಸಿರುವಂತೆ ಜಾನಪದವನ್ನು ಅಂತರ್‌ಶಿಸ್ತಿಯ ಅಧ್ಯಯನ ಪ್ರಭಾವಿಸಿದೆ. ಹೊಸ ಹೊಸ ಸಿದ್ಧಾಂತಗಳಡಿಯಲ್ಲಿ ಆಧುನಿಕ ಜಾನಪದವನ್ನು ವಿವೇಚಿಸಿಲಾಗಿದೆ. ಬಹು ಚರ್ಚಿತ ಹೊಸ ಚಿಂತನಾಕ್ರಮಗಳ ಮೂಲಕ ಆದಿಜಾನಪದಿಂದ ಆಧುನಿಕ ಜಾನಪದವರೆಗೂ ತೂಗಿನೋಡಿ ಪ್ರಸ್ತುತದಲ್ಲಿ ಅದು ಪಡೆಯುತ್ತಿರುವ ಹೊಸ ತಿರುವುಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಜಾನಪದದ ಬಗ್ಗೆ ಕೈಗೊಳ್ಳಬಹುದಾದ ಯೋಜನೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಆರ್ಥಿಕ ಭದ್ರತೆಯನ್ನು, ಮತ್ತು ಜಗತ್ತಿನ ಜಾನಪದ ಪಡೆಯುತ್ತಿರುವ ಅಧ್ಯಯನ ಚಿಂತನೆಗಳನ್ನು ಕುರಿತು ಚರ್ಚಿಸಲಾಗಿದೆ.

ಜಗತ್ತಿನ ಜಾನಪದ ಬದಲಾದ ಪರಿಸ್ಥಿತಿಯಲ್ಲಿ ಅದು ಪಡೆಯುತ್ತಿರುವ ಸ್ವರೂಪ ಮತ್ತು ಆದಿಯಿಂದ ಬೆಳೆದ ಬಂದ ಬಗೆ ವಿವರಿಸುತ್ತಾ, ಅರವತ್ತರ ದಶಕದಲ್ಲಿ ವೈಜ್ಞಾನಿಕ ಸ್ವರೂಪ ಪಡೆದಿದ್ದನ್ನು ಗಂಭೀರವಾಗಿ ನೋಡಲಾಗಿದೆ. ವಿಶ್ವವಿದ್ಯಾಲಯಗಳ ಪ್ರತ್ಯೇಕ ವಿಭಾಗಗಳಲ್ಲಿ ಬೋಧಿಸುವ ವಿಷಯವಾಗಿ ಜಾನಪದವು ಇಂದು ಬಳಕೆಯಾಗುತ್ತಿದೆ. ಅಂದರೆ ಹಳ್ಳಿಗಳ ಅನಕ್ಷರತೆಯ ಕಕ್ಷೆಯಿಂದ ವಿಶ್ವವಿದ್ಯಾಲಯದ ಸಂಶೋಧನೆಯ ಮಟ್ಟಕ್ಕೆ ಏರಿರುವುದು ಜಾನಪದ ಉಳಿಯುವಿಕೆ ಆಗಲಿ, ಅಳಿಯುವಿಕೆಯಲ್ಲ ಎನ್ನುವುದು ಈ ನಿಬಂಧದ ಅಧ್ಯಯನ ಮೂಲಕ ಸ್ಪಷ್ಟಪಡಿಸಲಾಗಿದೆ.

ಬದಲಾದಂತಹ ಪರಿಸ್ಥಿತಿಯಲ್ಲಿ ಜಾನಪದವು ಭಿನ್ನರೂಪಗಳನ್ನು ಪಡೆಯುತ್ತಿದ್ದರೂ ಅಧ್ಯಯನದ ಪರಿಮಿತಿಯಲ್ಲಿ ಕೆಲವೇ ವಿಷಯಗಳನ್ನು ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಹಳ್ಳಿಗಳಲ್ಲಿ ಇರುವಂತೆ ನಗರಗಳಲ್ಲಿಯೂ ಆಚಾರ ವಿಚಾರ, ನಂಬಿಕೆ ನಡಾವಳಿಕೆಗಳು ಇದ್ದು ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ವ್ಯಕ್ತಿಗತ ಅಭಿರುಚಿಗಳಿಗೆ ಭಿನ್ನ ಸಂಸ್ಕೃತಿಗಳಿಗೆ ಅನುಗುಣವಾಗಿ ಹೇಗೆ ಜಾನಪದ ಉತ್ಪತ್ತಿಯಾಗುತ್ತಿರುತ್ತದೆ ಎಂಬುದನ್ನು ನಿಬಂಧದಲ್ಲಿ ನೋಡಲಾಗಿದೆ.

ಈ ಪ್ರಬಂಧದ ಎರಡನೇ ಅಧ್ಯಾಯದಲ್ಲಿ ನಗರದಲ್ಲಿರುವ ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳು, ನಗರ ಜನಪದ ಕಲೆಗಳು, ಐತಿಹ್ಯಗಳು, ಹಬ್ಬ ಜಾತ್ರೆಗಳು, ಮೇಳಗಳು ಮತ್ತು ನಗರ ದೇವತೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲಾ ಅಧ್ಯಯನಗಳ ಹಿನ್ನಲೆಯಲ್ಲಿ ಜಾನಪದ ಎನ್ನುವುದು ಕೇವಲ ಹಳ್ಳಿಗೆ ಮಾತ್ರ ಇರದೇ, ಹಳೆಯದೇ ಜಾನಪದ ಎನ್ನುವ ಭ್ರಮ ಮೂಲದಿಂದ ಬಿಡಿಸಿಕೊಂಡು ನಗರಗಳಲ್ಲಿಯೂ ಜಾನಪದ ಹೇಗೆ ಮೂಡುತ್ತಿದೆ ಎಂಬುದು ಚರ್ಚಿಸಲಾಗಿದೆ. ಜನಪದರು ನಗರಗಳಲ್ಲಿ ವಾಸಿಸುವಾಗ ಸಂಪೂರ್ಣವಾಗಿ ಅವರ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳು ನಿಲ್ಲುವುದಿಲ್ಲ. ಹಲವು ಬದಲಾಣೆಗಳೊಂದಿಗೆ ಮರು ಸೃಷ್ಟಿಯಾಗುತ್ತಿರುತ್ತವೆ. ನಗರಗಳು ಮೇಲ್ನೋಟಕ್ಕೆ ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದರೂ ಜನಪದರ ಜೀವನ ವಿಧಾನಗಳಲ್ಲಿ, ಆಚಾರ ವಿಚಾರಗಳಲ್ಲಿ, ಅಂತರ್‌ಮುಖಿಯಾಗಿ ಹಲವು ಬದಲಾವಣೆಗಳೊಂದಿಗೆ ಜಾನಪದ ಪರಂಪರೆ ಮುಂದುವರೆಯುತ್ತಲೇ ಇರುತ್ತವೆ. ಹೀಗೆ ನಗರಗಲ್ಲಿ ಹುಟ್ಟುವ ಜಾನಪದವು ಪರಂಪರೆಯಿಂದಲೇ ಸ್ಫೂರ್ತಿ ಪಡೆದಿರುತ್ತದೆ ಎಂಬುದನ್ನು ಈ ನಿಬಂಧದಲ್ಲಿ ಕಂಡುಕೊಂಡ ಫಲಿತವಾಗಿದೆ.

ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಬರುವಂತಹ ಕೆಲವು ಸಂಗತಿಗಳು ಗುಪ್ತ ವಿಷಯಗಳು ಗಾಸಿಫ್‌ಗಳಾಗಿ ತಲೆಮಾರಿನಿಂದ ತಲೆಮಾರಿಗೆ ಹರಿಯುತ್ತಿರುತ್ತವೆ. ಇವು ಪ್ರಾದೇಶಿಕವಾಗಿ ಭಿನ್ನವಾಗಿದ್ದರೂ ಆಶಯ ಒಂದೇ ಆಗಿರುತ್ತೆ. ಇಂತಹ ಪ್ರಕಾರವೊಂದನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

ಈ ನಿಬಂಧದ ನಾಲ್ಕನೇ ಅಧ್ಯಾಯದಲ್ಲಿ ಚರ್ಚಿಸಿರುವಂತೆ ಪ್ರಸ್ತುತ ಸಂದರ್ಭದಲ್ಲಿ ಸಮೂಹ ಮಾಧ್ಯಮಗಳಲ್ಲಿ ಜಾನಪದವನ್ನು ಗುರುತಿಸಲಾಗಿದೆ. ನಿಯತಕಾಲಿಕ, ಬಾನುಲಿ, ಸಿನಿಮಾ, ಮತ್ತು ಪತ್ರಿಕೋದ್ಯಮಗಳಲ್ಲಿರುವ ಜಾನಪದವನ್ನು ಗುರುತಿಸಿ ಅಧ್ಯಯನಕ್ಕೆ ತೊಡಲಾಗಿದೆ. ಹಿಂದೆ ಜಾನಪದ ಪ್ರಕಾರಗಳು ಜನರಿಂದ ಜನರಿಗೆ ತಲೆಮಾರಿನಿಂದ ತಲೆಮಾರಿಗೆ, ಒಬ್ಬರಿಂದ ಮತ್ತೊಬ್ಬರಿಗೆ ವಿಷಯಗಳನ್ನು ವರ್ಗಾಯಿಸುವ ಮಾಧ್ಯಮಗಳಾಗಿದ್ದವು. ಇಂದು ಜಾನಪದ ಅಭಿವ್ಯಕ್ತಿಗೊಳ್ಳುವ ಮಾರ್ಗ ತಾಂತ್ರಿಕವಾಗಿದೆ. ಕೇವಲ ಹಳೆಯದೇ ನಿಜವಾದ ಜಾನಪದ ಎಂಬ ಮಾಥ್ಯತೆ ಬಿಡಬೇಕಾಗಿದೆ. ಬದಲಾದ ಪರಿಸರದ ಹಿನ್ನಲೆಯಲ್ಲಿ ಜಾನಪದ ಬಹುವ್ಯಾಪಕತೆಯನ್ನು ಪಡೆದಿದ್ದು ಅದರ ನೆಲೆಗಳನ್ನು ಹುಡುಕಿ ತೆಗೆಯುವ ಜವಬ್ದಾರಿ ವಿದ್ವಾಂಸರ ಮೇಲಿದೆ. ಜಾನಪದಕ್ಕೆ ಜಾಗತೀಕರಣವನ್ನು ನಿಭಾಯಿಸುವ ಶಕ್ತಿ ಇರುವದರಿಂದ ಆಧುನಿಕ ಫಲಗಳಾದ ಸಮೂಹ ಮಾಧ್ಯಮಗಳಲ್ಲೂ ಜಾನಪದವನ್ನು ಗುರುತಿಸಬಹುದು. ಇದರ ವ್ಯಾಪಕವಾದ ಅಧ್ಯಾಯನ ಈ ಅಧ್ಯಯದಲ್ಲಿ ಚರ್ಚೆ ಮಾಡಲಾಗಿದೆ. ಸಮೂಹ ಮಾಧ್ಯಮಗಳಲ್ಲಿ ಜಾನಪದವು ಹೇಗೆ ಮರು ಹುಟ್ಟು ಪಡೆಯುತ್ತಿದೆ ಎನ್ನುವುದನ್ನು ಈ ನಿಬಂಧದಲ್ಲಿ ಸ್ಪಷ್ಟಿಕರಿಸಿಕೊಳ್ಳಲಾಗಿದೆ.

ಮನುಷ್ಯ ಮತ್ತು ಸಾಕು ಪ್ರಾಣಿಗಳ ಸಬಂಧದಂತೆಯೇ ವಾಹನ ಮತ್ತು ಮನುಷ್ಯನ ನಡುವಿನ ಸಂಬಂಧ ಭಾವಪ್ರದಾನವಾದುದು. ಮನುಷ್ಯ ವಾಹನಗಳನ್ನು ವೈಭವ ಜೀವನಕ್ಕೆ ಬಳಸಿಕೊಂಡಂತೆ

ತನ್ನ ಆದಾಯದ ಗಳಿಕೆಯ ಮೂಲವನ್ನಾಗಿಯೂ ಉಪಯೋಗಿಸುತ್ತಿದ್ದಾನೆ. ಯಂತ್ರ ಮತ್ತು ಮನುಷ್ಯ ನಡುವಿನ ಸಂಬಂಧ ಯಾಂತ್ರಿಕವಾಗಿರುತ್ತದೆ ನಿಜ. ಆದರೆ ಅದನ್ನು ಮೀರಿಯೂ ಭಾವನಾತ್ಮಕವಾಗಿಯೂ ಬೆಸೆದುಕೊಂಡಿರುತ್ತದೆ. ಇಂತಹ ಸಂಬಂಧಗಳೆರಡರ ನಡುವೆ ಅನೇಕ ನಂಬಿಕೆ, ಆಚಾರ, ವಿಚಾರ, ಹಾಸ್ಯಗಳು ಹುಟ್ಟಿಕೊಂಡುಬಿಡುತ್ತವೆ. ವಾಹನಗಳನ್ನು ಅಲಂಕಾರ ಮಾಡಿ ಪೂಜೆ ಮಾಡಲೆಂದೇ 'ಆಯುಧ ಪೂಜೆ' ಹಬ್ಬ ಇದೆ. ರೈತ ತಾನು ಬಳಸುತ್ತಿದ್ದ ವ್ಯವಸಾಯ ಮೂಲ ಸಲಕರಣೆಗಳನ್ನು ಪೂಜಿಸುತ್ತಿದ್ದ, ಆದರೆ ನಗರಗಳಲ್ಲಿ ಮತ್ತು ನೌಕರ ಸಮುದಾಯದಲ್ಲಿ ತಾವು ಬಳಸುವಂತಹ ವಾಹನಗಳನ್ನು ಅಲಂಕಾರ ಮಾಡಿ ಪೂಜಿಸುತ್ತಿದ್ದಾನೆ.

ಮಾನವನಲ್ಲಿ ಈ ತರಹದ ಪರಿವರ್ತನೆಯು ಬಹುಮುಖ್ಯವಾಗಿ ಆಧುನಿಕತೆಯ ಪರಿಣಾಮವಾಗಿ ಬಂದಿದೆ. ವಾಹನ ಮತ್ತು ಯಂತ್ರಗಳ ಬಗ್ಗೆ ಹುಟ್ಟಿಕೊಂಡಿರುವ ಹಾಸ್ಯ ಪ್ರಸಂಗಗಳು, ಚಾಲಕರಲ್ಲಿ ಬಳಕೆಯಾಗುವ ಸಂಜ್ಞೆ ಮತ್ತು ಸಂಕೇತಗಳು, ವಾಹನದ ಮೇಲಿನ ಬರಹಗಳು ಮತ್ತು ಅವುಗಳಿಗೆ ಮಾಡುವ ಅಲಂಕಾರಗಳು, ಮತ್ತು ಧಾರ್ಮಿಕ ನಂಬಿಕೆಗಳನ್ನು ನೋಡಲಾಗಿದೆ.

ಒಟ್ಟಾರೆ ಮನುಷ್ಯ ಮತ್ತು ವಾಹನ ಬಗ್ಗೆ ಇರುವಂತಹ ಎಲ್ಲಾ ಬಗೆಯ ಸಂಬಂಧಗಳಲ್ಲಿ ಅದು ಭಾಷಿಕವಾಗಿರಬಹುದು, ಆಚಾರಣಾತ್ಮಕವಾಗಿರಬಹುದು, ಮಾಹಿತಿ ಎನ್ನುವ ವಿವರಗಳನ್ನು ವಾಹನ ಜಾನಪದ ತೆಕ್ಕೆಯಲ್ಲಿ ನೋಡಲಾಗಿದೆ.

ಜಾನಪದಕ್ಕೆ ಪ್ರಾರಂಭದಲ್ಲಿ ಮೌಖಿಕತೆಯೇ ಪ್ರಧಾನ ಲಕ್ಷಣ ಎನ್ನುವಂತೆ ಪ್ರತಿಬಿಂಬಸಲಾಗಿತ್ತು. ಆದರೆ ಪಾಶ್ಚಿಮಾತ್ಯ ಚಿಂತನಕ್ರಮಗಳು ಮತ್ತು ದೇಶಿಯ ಸಿದ್ಧಾಂತಗಳಡಿಯಲ್ಲಿ ಜಾನಪದವನ್ನು ನೋಡುವ ಕ್ರಮ ಬದಲಾಗಿದೆ. ಲಿಖಿತತೆ ಜಾನಪದದ ಜೀವನಾಂಶದಲ್ಲಿ ಒಂದಾಗುತ್ತಿದೆ. ಕಾಲೇಜ್ ಡೆಸ್ಕ್ ಕಕ್ಕಸ್ ರೂಂ ಗೋಡೆಗಳ ಮೇಲೆ, ದೈವಾಲಯಗಳಲ್ಲಿ ರಸ್ತೆ ತಿರುವಿನ ಸ್ಥಳನಾಮ ಫಲಕಗಳ ಮೇಲೆ ಬರಹಗಳಿರುವುದನ್ನು ಕಾಣಬಹುದು, ಕಾಲೇಜ್ ಕ್ಯಾಂಪಸ್‌ಗಳ ವಿದ್ಯಾರ್ಥಿ ಸಮುದಾಯಗಳ ಮಧ್ಯೆ ಜೋಕ್ಸ್ ಸಿನಿಮಾ ಹಾಡುಗಳನ್ನು ಅಶ್ಲೀಲಗೊಳಿಸಿ ಹಾಡುವುದು ಮುಂತಾದವುಗಳನ್ನು ಲಿಖಿತ ಜಾನಪದ ಅಧ್ಯಯನದಲ್ಲಿ ವ್ಯಾಪಕವಾಗಿ ನೋಡಲಾಗಿದೆ.

ಪರಿಸರ ಜನಪದರ ಜೀವನದಲ್ಲಿ ಆಚಾರಣಾತ್ಮಕವಾಗಿ, ಸಂಪ್ರದಾಯಿಕವಾಗಿ, ಆರ್ಥಿಕ ಅಭಿವೃದ್ಧಿಗೆ ಬಳಕೆಯಾಗಿ, ಆರೋಗ್ಯದಾಯಕವಾಗಿ ಹೇಗೆ ಉಪಯೋಗವಾಗುತ್ತಿದೆ ಎನ್ನುವುದನ್ನು ಚರ್ಚಿಸಲಾಗಿದೆ. ಪರಿಸರದಲ್ಲಿ ಸಿಗುವ ಗಿಡಮೂಲಿಕೆಗಳು ಇಂದು ಹೆಚ್ಚು ವೈಜ್ಞಾನಿಕ ಸಂಶೋಧನೆಗೆ ಒಳಗಾಗುತ್ತಿವೆ. ಈ ಗಿಡಮೂಲಿಕೆಗಳಲ್ಲಿ ಸಿಗುವ ಔಷಧಿಯ ಅಂಶಗಳನ್ನು ಸಂಶೋಧನೆ ಮೂಲಕ ಖಚಿತ ಪಡಿಸಿಕೊಂಡ ನಂತರ ರೋಗ ನಿವಾರಕ ಔಷಧಿಗಳಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಬಳಕೆಯಾಗುತ್ತಿವೆ. ಅಂದು ಸಾಮಾನ್ಯ ಖಾಯಿಲೆಗೆ ಜನಸಾಮಾನ್ಯರು ಗುರುತಿಸಿದ ಗಿಡಮೂಲಿಕೆಗಳು ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತಿವೆ.

ಒಟ್ಟಿನಲ್ಲಿ ಈ ಎಲ್ಲಾ ಅಧ್ಯಯನದ ಹಿನ್ನಲೆಯಲ್ಲಿ ನೋಡಿದಾಗ 'ಜಾನಪದ' ಎನ್ನುವುದು ಸಂಪೂರ್ಣವಾಗಿ ನಶಿಸದೆ ಬದಲಾವಣೆಗೆ ತೆರೆದುಕೊಳ್ಳುತ್ತಿದೆ. ಈ ಪರಿವರ್ತನೆಯ ಸಮಯದಲ್ಲಿ ಕಳೆದುಕೊಳ್ಳಬೇಕಾಗಿರುವುದು ಇರುತ್ತದೆ, ಪಡೆದುಕೊಳ್ಳಬೇಕಾಗಿರುವುದು ಇರುತ್ತದೆ. ಏನನ್ನು ಕಳೆದುಕೊಳ್ಳದೇ ಏನನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ ಭಿನ್ನ ಆಕೃತಿಗಳನ್ನು ಪಡೆಯುತ್ತಿದೆ ಎನ್ನುವುದನ್ನು, ಈ ಸಂಶೋಧನೆಯ ಮೂಲಕ ಅರಿತುಕೊಂಡ ಫಲಿತವಾಗಿದೆ.

●

ಅನುಬಂಧ



ನಗರ ಪ್ರದೇಶದಲ್ಲಿರುವ ನಂಬಿಕೆಗೆ ಸಾಕ್ಷಿ



ನಗರ ಪ್ರದೇಶದಲ್ಲಿರುವ ನಂಬಿಕೆಗೆ ಸಾಕ್ಷಿ



ಬೆಂಗಳೂರಿನ ಬಾಗಲಕುಂಟೆಯಲ್ಲಿ ಮಾರಮ್ಮ (ಮಹಾಲಕ್ಷ್ಮಿ)ನ
ಜಾತ್ರೆಯಲ್ಲಿ ಏರ್ಪಡಿಸಿರುವ ಕೊಂಡ.



ಬೆಂಗಳೂರಿನ ಬಾಗಲಕುಂಟೆಯಲ್ಲಿ ಮಾರಮ್ಮ (ಮಹಾಲಕ್ಷ್ಮಿ)ನ
ಜಾತ್ರೆಯಲ್ಲಿ ಏರ್ಪಡಿಸಿರುವ ಕೊಂಡದಲ್ಲಿ ಆರತಿ ಹಿಡಿದು
ಭಕ್ತರು ಕೆಂಡ ಹಾಯುತ್ತಿರುವುದು



ನಗರ ಪ್ರದೇಶದಲ್ಲಿರುವ ನಂಬಿಕೆಗೆ ಸಾಕ್ಷಿ



ಡೊಳ್ಳು ಕುಣಿತದ ವಿವಿಧ ಭಂಗಿಗಳು



'ಯಕ್ಷದೇಗುಲ' ಮಹಿಳಾ ಯಕ್ಷಗಾನ ಕಲಾಮಂಡಳಿ ಇವರಿಂದ
ಯಕ್ಷಗಾನ ಪ್ರದರ್ಶನ.



ಬೆಂಗಳೂರಿನ ರಾಜಾಜಿನಗರದಲ್ಲಿ ಅಣ್ಣಮ್ಮ ದೇವಿಯ
ಉತ್ಸವ ಮೂರ್ತಿಗೆ ಕೋಳಿಗಳ ಬಲಿ ಕೊಟ್ಟಿರುವುದು



ಪೂಜಾ ಕುಣಿತದಲ್ಲಿ ಸೊಂಟಕ್ಕೆ ಮಗುವನ್ನು ಸುತ್ತಿಕೊಂಡು ತಿರುಗುತ್ತಾ ತಲೆಯ ಮೇಲಿರುವ ಕಳಸವನ್ನು ಸುತ್ತಾ ತಿರುಗಿಸುವುದು.



ಪೂಜಾ ಕುಣಿತ ಮುಂದಿನ ಪೀಳಿಗೆಗೆ ವರ್ಗಾವಣೆ



ಸಾಂಪ್ರದಾಯಿಕ ಪೂಜಾ ಕುಣಿತದಲ್ಲಿ ಬದಲಾವಣೆ
ಮಕ್ಕಳನ್ನು ಮೈಮೇಲೆ ಏರಿಸಿಕೊಂಡು ಕುಣಿಯುತ್ತಿರುವುದು.



ಕಂಸಾಳೆಯ ಭಿನ್ನ ಭಂಗಿ.



ಬೆಂಗಳೂರಿನಲ್ಲಿ ಅಣ್ಣಮ್ಮ ತಿಬ್ಬಮ್ಮ ದೇವಿಯ ಹೊರಗಿನ ವಿಗ್ರಹಗಳಿಗೆ
ಮೊಸರಿನ ಅಭಿಷೇಕ ಮಾಡಿರುವುದು.



ಕಂಸಾಳೆಯಲ್ಲಿ ಇತ್ತೀಚಿನ ಬದಲಾವಣೆ.

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಅನ್ವಯಿಕ ಜಾನಪದ - ೧೯೯೫
ಡಾ. ವಿವೇಕ ರೈ ಬಿ. ಎ.
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨. ಒಂದು ಸೊಲ್ಲು ನೂರು ಸ್ವರ - ೧೯೯೯
ಪ್ರೊ. ನಾವಡ ಎ. ಬಿ.
ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ

೩. ಕನ್ನಡ ಜಾನಪದ ಕೆಲವು ಮುಖಗಳು - ೧೯೮೮
ಸತ್ಯನಾಥ್ ಟಿ. ಎಸ್.
ಶಾರದಾ ಪ್ರಕಾಶನ, ಬೆಂಗಳೂರು

೪. ಕನ್ನಡ ಜಾನಪದ ವಿಶ್ವಕೋಶ, ಸಂ.೧,೨ - ೧೯೮೫
ಡಾ. ಚಂದ್ರಶೇಖರ ಕಂಬಾರ
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೫. ಕರ್ನಾಟಕ ಜಾತ್ರೆಗಳು
ಸಂ. ಶಿವಕುಮಾರಸ್ವಾಮಿ ಸಿ. ಎಸ್.
ಬಿ.ಆರ್. ಪ್ರಾಜೆಕ್ಟ್.
ಮೈಸೂರು . ವಿ.ವಿ.

೬. ಕನ್ನಡ ಸಂಸ್ಕೃತಿ
ಜವರೇಗೌಡ ದೇ.
ಪ್ರಸಾರಾಂಗ, ಬೆಂಗಳೂರು.ವಿ.ವಿ

೭. ಕರ್ನಾಟಕ ಜಾನಪದ - ೧೯೮೦
ಶಿವರುದ್ರಪ್ಪ ಜಿ. ಎಸ್.
ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.

೮. ಕಾಡು ಕಾಕ್ರಂಟ್ ಮತ್ತು ಜಾನಪದ - ೧೯೯೫.
ಬೋರಲಿಂಗಯ್ಯ ಹಿ. ಚಿ.
ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

೯. ಕೂಡುಕಟ್ಟು - ೧೯೯೭
ಪುರುಷೋತ್ತಮ ಬಿಳಿಮಲೆ
ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ.

೧೦. ಕೈಗಾರಿಕಾ ಜಾನಪದ - ೧೯೯೭.
ಡಾ. ಸಂಧ್ಯಾರೆಡ್ಡಿ ಕೆ. ಆರ್.
ಆರ್.ಆರ್.ಸಿ. ಪ್ರಾದೇಶಿಕ ಜಾನಪದ ರಂಗ ಕಲೆಗಳ ಕೇಂದ್ರ ,ಉಡುಪಿ.

೧೧. ಗ್ರಾಮೀಣ - ೧೯೭೭
ಡಾ. ಚಿದಾನಂದ ಮೂರ್ತಿ ಎಂ.
ಬಾಪ್ಕೊ ಪ್ರಕಾಶನ, ಬೆಂಗಳೂರು

೧೨. ಗ್ರಾಮದೇವತೆಗಳು - ೧೯೯೭
ಡಾ. ಸಿದ್ದಲಿಂಗಯ್ಯ
ಮೂಲ ಭಾರತಿ ಪ್ರಕಾಶನ. ಬೆಂಗಳೂರು

೧೩. ಚಿತ್ರಕಲಾ ಚಿಂತನೆ - ೧೯೯೫.
ಶಂಕರ ಪಾಟೀಲ್
ಪ್ರಗತಿ ಪ್ರಕಾಶನ. ದಾವಣಗೆರೆ.

೧೪. ಜಾನಪದ ಕಸೂತಿ - ೨೦೦೦
ಡಾ. ಮಧು ವೆಂಕಾರೆಡ್ಡಿ
ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೧೫. ಜಾನಪದ ೧೯೯೩ - ೧೯೯೫
ಸಂ. ರಂಗಾರೆಡ್ಡಿ ಕೋಡಿರಾಂಪುರ.
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೬. ಜಾನಪದ ೧೯೯೪ - ೧೯೯೬
ನೀಲಗಿರಿ ತಳವಾರ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೭. ಜಾನಪದ ೧೯೯೫ - ೧೯೯೭.
ಡಾ. ರಾಮಚಂದ್ರಗೌಡ ಹಿ. ಶಿ.
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೮. ಜಾನಪದ ೧೯೯೬ - ೧೯೯೬
ಬಸವರಾಜ ನೆಲ್ಲೀಸರ
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೧೯. ಜಾನಪದ ಅಧ್ಯಯನ - ೧೯೯೧
ಜವರೇಗೌಡ ದೇ.
ಚೇತನ ಬುಕ್ ಹೌಸ್ ಮೈಸೂರು.

೨೦. ಜಾನಪದ ಕೈಪಿಡಿ - ೧೯೮೬
ಪ್ರೊ. ಜ್ಯೋತಿ ಹೊಸೂರ
ಕಾಲಗತಿ ಪ್ರಕಾಶನ ರಾಯಭಾಗ ಬೆಳಗಾವಿ.

೨೧. ಜಾನಪದ ಕೈಪಿಡಿ - ೧೯೯೭.
ಪ್ರ. ಸಂ. ಲಕ್ಕಪ್ಪಗೌಡ ಎಚ್. ಜೆ.
ಕನ್ನಡ ಪುಸ್ತಕ ಪ್ರಾದಿಕಾರ.

೨೨. ಜಾನಪದ ಗಂಗೋತ್ರಿ ಸಂ. ೭ - ೧೯೯೪
ಪ್ರ.ಸಂ. ಪರಮಶಿವಯ್ಯ ಜೀ. ಶಂ.
ಕರ್ನಾಟಕ ಜಾನಪದ ಅಕಾಡೆಮಿ.

೨೩. ಜಾನಪದ ಭಾರತಿ - ೧೯೯೮
ಡಾ. ನಲ್ಲೂರು ಪ್ರಸಾದ್
ಕ.ಜಾ.ಮತ್ತು ಯ.ಅ.

೨೪. ಜಾನಪದ ಮತ್ತು ಸಮೂಹ ಮಾಧ್ಯಮ - ೧೯೯೦
ಡಾ.ಸೋಮಶೇಖರ ಇಮ್ರಾಪುರ
ಕ.ಜಾ.ಯ.ಅ. ಬೆಂಗಳೂರು.

೨೫. ಜಾನಪದ ಸಾಹಿತ್ಯದಲ್ಲಿ ಮಹಿಳೆ - ೨೦೦೦
ಡಾ. ಸಂಧ್ಯಾರೆಡ್ಡಿ ಕೆ. ಆರ್.
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೬. ಜಾನಪದ ಮುನ್ನೋಟ - ೧೯೯೩
ಡಾ. ಖಂಡೋಬಾ ಪಿ. ಕೆ.
ಸಂಗೀತ ಪಬ್ಲಿಕೇಷನ್, ಗುಲಬರ್ಗ.

೨೭. ಜಾನಪದ ಲೋಚನ
ಅಂಬಳಿಕೆ ಹಿರಿಯಣ್ಣ
ಪ್ರಜ್ವಲ ಪ್ರಕಾಶನ, ಮೈಸೂರು.

೨೮. ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು - ೧೯೯೦
ಜಯದೇವ್ ಹು. ಕಾ, ಬರಗೂರು ರಾಮಚಂದ್ರಪ್ಪ
ಕ.ಜಾ.ಯ.ಅ.ಬೆಂಗಳೂರು.

೨೯. ಜಾನಪದ ಸಾಹಿತ್ಯದಲ್ಲಿ ಶೃಂಗಾರ ನಿರೂಪಣೆ - ೧೯೮೯
ಪ್ರೋ. ಕೋಟ್ಯಾಳ ಬಿ. ಎಸ್
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೦. ಜಾನಪದ ಸಾಂಸ್ಕೃತಿಕ ಆಯಾಮಗಳು - ೧೯೯೮
ರಾಮಚಂದ್ರೇಗೌಡ ಹಿ. ಶಿ.
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೧. ಜಾನಪದ ಸೈದ್ಧಾಂತಿಕ ಪ್ರಜ್ಞೆ ಮತ್ತು ದೇಶಿವಾದ - ೧೯೯೮
ಡಾ. ಅರವಿಂದ ಮಾಲಗತ್ತಿ
ಕ.ಜಾ.ಯ.ಅ. ಬೆಂಗಳೂರು.

೩೨. ಜಾನಪದ ಸೌರಭ - ೧೯೯೩
ಡಾ. ಸ್ವಾಮಿ ಬಿ. ಎಸ್.
ಗೋರಕ್ಷನಾಥ ಪ್ರಕಾಶನ, ಬೆಂಗಳೂರು

೩೩. ಜಾನಪದ ಸೌಂದರ್ಯ
ದೇ.ಜ.ಗೌ.
ಸಹ್ಯಾದ್ರಿ ಪ್ರಕಾಶನ, ಮೈಸೂರು.

೩೪. ಜಾನಪದ ಜಿಜ್ಞಾಸೆ - ೧೯೭೯
ಬಸವರಾಜ ನೆಲ್ಲೀಸರ
ಯಕ್ಷ ಪ್ರಕಾಶನ, ಮೈಸೂರು.

೩೫. ಜಾನಪದ ಸಾಮಾಜಿಕ ಕಥನಗಳಲ್ಲಿ ದುಖಾಂತ ನಿರೂಪಣೆ - ೧೯೮೫
ದೇವೇಂದ್ರ ಕುಮಾರ ಹಕಾರಿ.
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೩೬. ಜಾನಪದ: ಕೆಲವು ಮುಖಗಳು - ೧೯೯೬
ಡಾ. ಜಿ.ಶಂ.ಪ
ಚೇತನ ಬುಕ್ ಹೌಸ್ ಮೈಸೂರು.

೩೭. ಜಾನಪದ ವೈದ್ಯಕೋಶ
ಕನ್ನಡ ಸಾಹಿತ್ಯ ಪರಿಷತ್.

೩೮. ಜಾನಪದ ಶಾಸ್ತ್ರಸಿದ್ಧಾಂತಗಳು.
ಸಂ.ಡಾ।। ವೀರಣ್ಣ ದಂಡೆ
ನೆಲಮನೆ ಪ್ರಕಾಶನ, ರಂಗನಾಥನಗರ ಮಂಡ್ಯ ಜಿಲ್ಲೆ.

೩೯. ಜಾನಪದ ವಿವಿಧ ಮುಖಗಳು
ಪ್ರೊ. ಶ್ರೀಕಂಠ ಕೂಡಿಗೆ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ. ಬೆಂಗಳೂರು.

೪೦. ಜಾನಪದ ಕರ್ನಾಟಕ - ೨೦೦೨ ಜೂನ್
ಅರ್ಧವಾರ್ಷಿಕ ಪತ್ರಿಕೆ, ಜಾನಪದ ವಿಭಾಗ
ಪ್ರಸಾರಾಂಗ ಕನ್ನಡ. ವಿ.ವಿ. ಹಂಪಿ.

೪೧. ಜಾನಪದ ವಸ್ತುಸಂಗ್ರಹಾಲಯಗಳು
ಶಿವರಾಮು ವೆ. ನಂ.
ಪ್ರಸಾರಾಂಗ ಕನ್ನಡ. ವಿ.ವಿ. ಹಂಪಿ.

೪೨. ಜಾನಪದ ಸ್ವರೂಪ ಮತ್ತು ಸಾಹಿತ್ಯ
ಪ್ರೊ॥ ಲಿಂಗಯ್ಯ ಡಿ.
ಡಾ॥ ಸಂಧ್ಯಾರೆಡ್ಡಿ ಕೆ. ಆರ್.
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೪೩. ಜಾನಪದ ಸಾಹಿತ್ಯ ದರ್ಶನ - ೧೯೯೦
ಸಂ. ಡಾ. ಕೊಟ್ರಶೆಟ್ಟಿ ಎಂ. ಬಿ.
ಕನ್ನಡ ಅಧ್ಯಯನ ಪೀಠ, ಧಾರವಾಡ.

೪೪. ದ್ರಾವಿಡ ಜಾನಪದ
ಡಾ॥ ಶಂಕರನಾರಯಣ ತೀ. ನಂ.
ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬೆಂಗಳೂರು.

೪೫. ದಕ್ಷಿಣ ಕರ್ನಾಟಕ ಜಾನಪದ ರಂಗಭೂಮಿ - ೧೯೮೦
ರಾಜೇಂದ್ರ ಡಿ. ಕೆ.
ಪ್ರಸಾರಾಂಗ ಮೈಸೂರು ವಿ.ವಿ, ಮೈಸೂರು.

೪೬. ದ್ರಾವಿಡ ಜಾನಪದ
ಡಾ. ಶಂಕರನಾರಾಯಣ ತೀ. ನಂ.
ಬಿ.ಅರ್. ಪ್ರಾಜೆಕ್ಸ್, ಮೈಸೂರು.

೪೭. ನಗರ ಜಾನಪದ - ೧೯೭೮
ಚಂದ್ರು ಕಾಳೇನಹಳ್ಳಿ
ಭಾರತಿ ಪ್ರಕಾಶನ ಸರಸ್ವತಿಪುರಂ ಮೈಸೂರು.

೪೮. ನಮ್ಮ ಜಾನಪದ ನಂಬಿಕೆಗಳು - ೧೯೩೩.
ದಾಸೇಗೌಡ ಜಿ. ವಿ.
ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿ.ವಿ. ಮೈಸೂರು.

೪೯. ಪುರಾಣ ಜಾನಪದ ಮತ್ತು ದೇಶಿವಾದ
ಡಾ. ಅರವಿಂದ ಮಾಲಗತ್ತಿ
ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

೫೦. ಬುಡವೊಂದು ಕವಲೆಂಟು - ೧೯೮೮
ಶಿವರಾಮು ವಿ. ಎಸ್.
ಅಂಕಿ ಅಂಶಿ ಪ್ರಕಾಶನ, ಹಾಸನ ಜಿಲ್ಲೆ.

೫೧. ಬಂಡಾಯ ಜಾನಪದ
ಡಾ. ರಂಗಾರೆಡ್ಡಿ ಕೋಡಿರಾಂಪುರ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಾಮಿ

೫೨. ಬಂಡಾಯ ಕಾವ್ಯ ಮತ್ತು ಜಾನಪದ
ಡಾ. ಬಸವರಾಜ ಸಬರದ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ.

೫೩. ಭಾರತೀಯ ಪತ್ರಿಕೋದ್ಯಮ - ೧೯೯೯
ನಾಡಿಗ ಕೃಷ್ಣಮೂರ್ತಿ
ಪುಸಾರಾಂಗ ಮೈಸೂರು .ವಿ.ವಿ, ಮೈಸೂರು.

೫೪. ಬೆಂಗಳೂರಿನ ಇತಿಹಾಸ
ಸುಂದರರಾಯ ಬ. ನ.
ಜಯನಗರ, ಬೆಂಗಳೂರು.

೫೫. ಮಲೆನಾಡು ಜಾನಪದ
ಲಕ್ಕಪ್ಪಗೌಡ ಎಚ್. ಜೆ.
ಮೈಸೂರು.ವಿ.ವಿ, ಬಿ.ಆರ್.ಪ್ರಾಜೆಕ್ಟ್.

೫೬. ಲಿಖಿತ ಜಾನಪದ - ೧೯೭೯
ಡಾ. ರಂಗಾರೆಡ್ಡಿ ಕೋಡಿರಾಂಪುರ
ಶಂಬೂಕ ಪ್ರಕಾಶನ, ಗೌರಿಬಿದನೂರು.

೫೭. ವೈದ್ಯಕೀಯ ನಂಬಿಕೆಗಳ ವಿಶ್ಲೇಷಣೆ
ಡಾ॥ ರಾಮಲಿಂಗಯ್ಯ ಉಪ್ಪಿನಕೆರೆ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೮. ಸೈದ್ಧಾಂತಿಕ ಜಾನಪದ - ೧೯೮೪
ಅಂಬಳಿಕೆ ಹಿರಿಯಣ್ಣ
ಪ್ರಜ್ವಲ ಪ್ರಕಾಶನ, ಮೈಸೂರು.

೫೯. ಸಂಕ್ಷಿಪ್ತ ಕನ್ನಡ ನಿಘಂಟು
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೬೦. ಸಸ್ಯಲೋಕ - ೨೦೦೦
ಈಶ್ವರಲಾಲ್.ಬಿ. ಸೇರಿಡಕರ್
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೬೧. ಸಮಗ್ರ ಯಕ್ಷಗಾನ ಪರಂಪರೆ ಮತ್ತು ಪ್ರಯೋಗ - ೧೯೭೮.
ಹರಿದಾಸಬಟ್ಟ ಕು. ಶಿ.
ಗೀತಾ ಬುಕ್ ಹೌಸ್, ಮೈಸೂರು.

೬೨. ಯಕ್ಷಗಾನ ಬಯಲಾಟ - ೧೯೫೭
ಶಿವರಾಮಕಾರಂತ
ಹರ್ಷಪ್ರಕಟಣಾಲಯ ಪುತ್ತೂರು, ದ.ಕ.

ಪತ್ರಿಕೆಗಳು

ದಿನಪತ್ರಿಕೆಗಳು

೧. ಪ್ರಜಾವಾಣಿ
೨. ವಿಜಯ ಕರ್ನಾಟಕ
೩. ಕನ್ನಡ ಪ್ರಭ
೪. ಉದಯವಾಣಿ
೫. ದಿ. ಹಿಂದೂ
೬. ಡೆಕ್ಕನ್ ಹೆರಾಲ್ಡ್
೭. ಟೈಂಮ್ಸ್ ಆಫ್ ಇಂಡಿಯಾ

ವಾರ ಪತ್ರಿಕೆಗಳು

೧. ಸುಧಾ
೨. ಮಂಗಳ
೩. ತರಂಗ